ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ— ೩೧

ಶ್ರೀ ವ್ಯಾಸಮಹರ್ಷಿ ಪ್ರಣೀತಂ

ಶ್ರೀ

ವರಾಹಮಹಾಪುರಾಣಂ

(ಕನ್ನಡ ಅನುವಾದ ವಿವರಣೆಗಳೊಡನೆ)

ನಾಲ್ಕನೆಯ ಭಾಗ

(೧೪೫—೧೮೦ ಅಧ್ಯಾಯಗಳು)

ಅನುವಾದಕ:

ಆಸ್ಥಾನ ವಿದ್ವಾನ್, ಮ. ರ. ವರದಾಚಾರ್ಯ

ಕರ್ಣಾಟಾಧ್ಯಾಪಕ, ಮಹಾರಾಜರವರ ಕಾಲೇಜ್, ಮೈಸೂರು.

ಮೈಸೂರು :

ಶ್ರೀ ಹನುಮಾನ್ ಪವರ್ ಪ್ರೆಸ್,

೧೯೪೭

|| ಶ್ರೀರಸ್ತು ||

ಮು ನ್ನು ಡಿ

ಶ್ರೀವರಾಹಪುರಾಣದಲ್ಲಿ ನಾಲ್ಕನೆಯ ಭಾಗವಾದ ಈ ಸಂಪುಟವನ್ನು "ಪುಣ್ಯತೀರ್ಥಕ್ಷೇತ್ರಗಳ ಮಹಿಮೆ" ಎಂದು ಕರೆಯಬಹುದು. ಏಕೆಂದರೆ ಈ ಭಾಗದಲ್ಲಿ ಮೊದಲಿಂದ ಕಡೆಯವರೆಗೆ ಇರುವುದೆಲ್ಲವೂ ತೀರ್ಥಕ್ಷೇತ್ರಗಳ ವಿಚಾರವೇ ಆಗಿದೆ. ರುದ್ರದೇವನು ಬ್ರಹ್ಮಹತ್ಯಾಪಾತಕವನ್ನೂ ಬಲರಾಮನು ಗೋಹತ್ಯಾಪಾಪವನ್ನೂ ತೀರ್ಥಯಾತ್ರೆಯಿಂದ ಕಳೆದುಕೊಂಡರೆಂಬುದು ಪ್ರಸಿದ್ಧವಾಗಿದೆ. ಸಾಮಾನ್ಯತೀರ್ಥಕ್ಷೇತ್ರಯಾತ್ರೆ ಪಾಪಪರಿಹಾರಕವೂ ಸ್ವರ್ಗಪ್ರದವೂ ಆದುದಾದರೂ ಮಹಾ ತೀರ್ಥಕ್ಷೇತ್ರಗಳ ವಾಸ ಯಾತ್ರಾದಿಗಳು ಮುಕ್ತಿದಾಯಕಗಳೂ ಆದುವೆಂದು ಶ್ರೀವರಾಹಪುರಾಣದ ಈ ಭಾಗದಲ್ಲಿ ಉಕ್ತವಾಗಿದೆ.

ಲೋಕಮಾತೆಯಾದ ಭೂದೇವಿ ತನ್ನ ಪ್ರಜೆಗಳ ಸೌಕರ್ಯಕ್ಕಾಗಿ ಕುತೂಹಲದಿಂದ ಮುಂದೆಮುಂದೆ ಕೇಳಿದಂತೆ ಶ್ರೀವರಾಹದೇವನು ಸಾಲಗ್ರಾಮ, ರುರು, ಗೋನಿಷ್ಕಮಣ, ಸ್ತುತಸ್ವಾಮಿ, ಸಾನಂದೂರ, ಲೋಹರ್ಗಲ ಎಂಬ ಅನುಕ್ರಮವಾಗಿ ಮೇಲು ಮೇಲಾದ ಪುಣ್ಯತೀರ್ಥಕ್ಷೇತ್ರಗಳ ವಿಚಾರವನ್ನು ಆಯಾಕ್ಷೇತ್ರಗಳಿಂದ ಮಹಾ ಫಲವನ್ನು ಪಡೆದವರ ಚರಿತ್ರೆಯೊಡನೆ ಹೇಳುತ್ತ ಕಡೆಗೆ ತನ್ನ ಶ್ರೀಕೃಷ್ಣಾವತಾರದಿಂದ ಪವಿತ್ರವಾದ ಉತ್ತರಮಥುರೆ ಅಸದೃಶವೂ ಅತ್ಯುತ್ತಮವೂ ಆದ ತೀರ್ಥಕ್ಷೇತ್ರವೆಂದು ವಿಸ್ತಾರವಾಗಿ (ಇಪ್ಪತ್ತೊಂಬತ್ತು ಅಧ್ಯಾಯಗಳಲ್ಲಿ ಸುಮಾರು ೧೪೦೦ ಶ್ಲೋಕಗಳಿಂದ) ವರ್ಣಿಸಿರುವನು.

ಸಾಲಗ್ರಾಮಾದಿ ಇತರ ಕ್ಷೇತ್ರಗಳ ಮಹಿಮೆಯೂ ಅಧಿಕವಾಗಿಯೇ ಇದ್ದರೂ ಉತ್ತರ ಮಥುರಾ ಕ್ಷೇತ್ರಮಹಿಮೆ ಅತ್ಯದ್ಭುತವಾಗಿದೆ. "ಮಥುರಾಯಾಃ ಪರಂಕ್ಷೇತ್ರಂತ್ರೈಲೋಕ್ಯೇ ನಚವಿದ್ಯತೇ ॥" ಮಥುರೆಗಿಂತ ಉತ್ತಮಕ್ಷೇತ್ರವು ಮೂರುಲೋಕಗಳಲ್ಲೂ ಯಾವುದೂ ಇಲ್ಲ. ಸರ್ವತೀರ್ಥಗಳಲ್ಲೂ ಮಥುರೆಯೇ ಪರಮೋತ್ಕೃಷ್ಟವಾದುದು. ಅದು ಹೆಜ್ಜೆ ಹೆಜ್ಜೆಗೂ ಪವಿತ್ರವಾದುದು. ಮಥುರಾ ಮಂಡಲದಲ್ಲಿ ಯಮುನೆ, ಗಂಗೆಯ ನೂರರಷ್ಟು ಗುಣವುಳ್ಳವಳು. ಮಥುರಾ ಮಂಡಲದ ಆ ಯಮುನೆಯಲ್ಲೂ ಇತರ ತೀರ್ಥಗಳಲ್ಲೂ ಸ್ನಾನಮಾಡುವವರು ವೈಕುಂಠದಲ್ಲಿ ನೆಲಸುವರು. ಅವರು ಪಡೆಯುವ ಪುಣ್ಯವನ್ನು ಬೇರೆಯವರು

ಯಜ್ಞದಿಂದಾಗಲಿ, ತಪದಿಂದಾಗಲಿ, ಧ್ಯಾನದಿಂದಾಗಲಿ, ವ್ರತಗಳಿಂದಾಗಲಿ ಪಡೆಯುವುದಿಲ್ಲ. ಬೇರೆಡೆಯಲ್ಲಿ ಮಾಡಿದ ಪಾಪವು ಪುಣ್ಯತೀರ್ಥಗಳ ಯಾತ್ರೆಯಿಂದ ಹೋಗುವುದು. ಪುಣ್ಯತೀರ್ಥದಲ್ಲೇ ಮಾಡಿದ ಪಾಪವು ವಜ್ರಲೇಪವಾಗುವುದು. ಆದರೆ ಮಧುರೆಯಲ್ಲೇ ಮಾಡಿದ ಪಾಪವು ಅಲ್ಲೇ ನಾಶವಾಗುವುದು. ಮಧುರಾಪುರವು ಪಾಪರಹಿತವಾದುದು. ಎಂತಹ ಪಾಪಿಯೂ ಮಧುರೆಗೆ ಹೋಗಿ ಪಾಪವನ್ನು ಕಳೆದುಕೊಳ್ಳುವನು. ಬೇರೆಡೆಯಲ್ಲಿ ಸಾವಿರಯುಗಕಾಲ ಒಂದು ಕಾಲಿನಲ್ಲಿ ನಿಂತು ತಪಸ್ಸನ್ನು ಮಾಡಿ ಪಡೆಯುವ ಪುಣ್ಯಕ್ಕಿಂತಲೂ ಹೆಚ್ಚಾದ ಪುಣ್ಯವು ಮಧುರೆಯಲ್ಲಿ ಸುಮ್ಮನೇ ಇರುವವನಿಗೆ ಬರುವುದು. ಮಧುರೆಯುವರು ವಿಷ್ಣುರೂಪರು. ಅವರೆಲ್ಲರೂ ಮುಕ್ತಿಗೆ ಪಾತ್ರರು. ಮಧುರೆಯಲ್ಲಿ ಪ್ರಾಣಬಿಡುವ ತಿರ್ಯಗ್ಜಂತು ಪಕ್ಷಿಕ್ರಿಮಿಕೀಟಗಳೂ ಸಂದೇಹವಿಲ್ಲದೆ ಮೋಕ್ಷವನ್ನು ಪಡೆಯುವುವು. ಗತಿಯನ್ನು ಹುಡುಕುವವರಿಗೆ ಮಧುರೆಯೇ ಪರಮಗತಿ. ಅಲ್ಲಿ ಸಾಂಖ್ಯವಾಗಲಿ ಯೋಗವಾಗಲಿ ಇಲ್ಲದೆಯೇ ಮನುಷ್ಯನು ಮುಕ್ತಿಯನ್ನು ಪಡೆಯುವನು. ಮಧುರೆಯ ತೀರ್ಥಪ್ರಭಾವವನ್ನು ಕೇಳಿದುದರಿಂದಲೇ ಪಿಶಾಚಗಳಿಗೆ ಕೂಡ ಮೋಕ್ಷವು ಲಭಿಸಿತು. ನ ತೀರ್ಥಂ ಮಧುರಾಯಾಹಿ । ನ ದೇವಃ ಕೇಶವಾತ್ಪರಃ ॥ ಮಧುರೆಗಿಂತ ಉತ್ತಮತೀರ್ಥವಿಲ್ಲ. ಕೇಶವನಿಗಿಂತ ಶ್ರೇಷ್ಠನಾದ ದೇವನಿಲ್ಲ." ಎಂದು ಹೇಳಿದೆ.

ಇಂತಹ ಮಹಾಪುರಾಣರತ್ನಗಳನ್ನು ಪ್ರಕಾಶಪಡಿಸಿ ಸರ್ವರಿಗೂ ಅರಿವು ಬೆಳಕನ್ನುಂಟುಮಾಡುತ್ತಾ ಮಹೋಪಕಾರ ಮಾಡುತ್ತಲಿರುವ ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುಗಳವರಿಗೂ, ಅವರ ಕುಟುಂಬಕ್ಕೂ ಶ್ರೀ ಕೃಷ್ಣನು ಆಯುರಾರೋಗ್ಯಾದಿ ಸಕಲ ಸನ್ಮಂಗಳಗಳನ್ನೂ ದಯೆಪಾಲಿಸಿ ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಸರ್ವಜಿತುಸಂ॥ ಅ॥ ಶ್ರಾ॥
ಬಹುಳ ೧೪ ಶುಕ್ರವಾರ
15—8—1947

ಅನುವಾದಕ
ಮಡೇನೂರ ರಘುನಾಥಾಚಾರ್ಯರ ಮಗ ವರದಾಚಾರ್ಯ
ಆಸ್ಥಾನ ವಿದ್ವಾನ್.

॥ ಶ್ರೀರಸ್ತು ॥

ಶ್ರೀವರಾಹಪುರಾಣದಲ್ಲಿ ನಾಲ್ಕನೆಯ ಭಾಗದ ವಿಷಯಾನುಕ್ರಮಣಿಕೆ

ಪುಟಸಂಖ್ಯೆ

ನೂರ ನಲವತ್ತೈದನೆಯ ಅಧ್ಯಾಯ

ಸಾಲಗ್ರಾಮಕ್ಷೇತ್ರಮಹಿಮೆ—ಸಾಲಂಕಾಯನಮುನಿಯ ತಪಸ್ಸು, ವರಪ್ರಾಪ್ತಿ, ನಂದಿಕೇಶ್ವರನು ಆತನಿಗೆ ಪುತ್ರನಾದುದು, ಸಾಲಗ್ರಾಮ ಕ್ಷೇತ್ರವೆಂಬ ಹೆಸರಿಗೆ ಕಾರಣ			1–8
ಸಾಲಗ್ರಾಮಕ್ಷೇತ್ರದ	ಬಿಲ್ವಪ್ರಭ	ತೀರ್ಥವಿಚಾರ.	9
,,	ಚಕ್ರಸ್ವಾಮಿ	,,	9–10
,,	ವಿಷ್ಣುಪದ	,,	10–11
,,	ಕಾಲೀಹ್ರದ	,,	11
,,	ಶಂಖಪ್ರಭ	,,	11
,,	ಗದಾಕುಂಡ	,,	12
,,	ಅಗ್ನಿಪ್ರಭ	,,	12–13
,,	ಸರ್ವಾಯುಧ	,,	13
,,	ದೇವಪ್ರಭ	,,	14
,,	ವಿದ್ಯಾಧರ	,,	14–15
,,	ಪುಣ್ಯನದೀ	,,	15
,,	ಗಂಧರ್ವ	,,	15–16
,,	ದೇವಹ್ರದ	,,	16–17
,,	ದೇವನದೀಸಂಗಮ ತೀರ್ಥವಿಚಾರ		18–19
,,	ಶ್ವೇತ ಗಂಗಾತ್ರಿಶೂಲಗಂಗಾ ತೀರ್ಥವಿಚಾರ		18–19
,,	ಸಿದ್ಧಾಶ್ರಮ, ಗಂಡಕೀ ತೀರ್ಥವಿಚಾರ		19–25

ಪುಟಸಂಖ್ಯೆ

ನೂರ ನಲವತ್ತಾರನೆಯ ಅಧ್ಯಾಯ

ರುರುಕ್ಷೇತ್ರ ಹೃಷೀಕೇಶಮಹಿಮೆ-ದೇವದತ್ತ-ಮುನಿಯ ತಪಸ್ಸು, ಆತನು ಪ್ರಮ್ಲೋಚೆಯೆಂಬ ಅಪ್ಸರಸ್ತ್ರೀಯನ್ನು ಮೋಹಿಸಿದುದು. ದೇವದತ್ತ ಪ್ರಮ್ಲೋಚೆಯರ ಪುತ್ರಿರುರುವಿನ ಕಥೆ. 26–44

ನೂರ ನಲವತ್ತೇಳನೆಯ ಅಧ್ಯಾಯ

ಗೋಸಿಷ್ಕ್ರಮಣ ಕ್ಷೇತ್ರ ಮಹಿಮೆ—

ರುದ್ರನು ಔರ್ವಮುನಿಯ ಆಶ್ರಮವನ್ನು ದಹಿಸಿ, ಆತನ ಶಾಪದಿಂದ ಸಂತಪ್ತನಾದುದು. 45–50

ನಾರಾಯಣನು ಕಾಮಧೇನು ಪುತ್ರಿಯರಾದ ಗೋವುಗಳನ್ನು ಬರಮಾಡಿ, ಅವುಗಳ ಹಾಲಿನ ಅಭಿಷೇಕದಿಂದ ರುದ್ರಾದಿಗಳ ತಾಪವನ್ನು ಹೋಗಲಾಡಿಸಿದುದು. 50–51

ಗೋನಿಷ್ಕ್ರಮಣ ತೀರ್ಥವಿಚಾರ. 51–58

ಪಂಚಪದ ಬ್ರಹ್ಮಪದ ತೀರ್ಥಗಳು. ,,

ಕೋಚವಟ ವಿಷ್ಣುಸರೋವರಾದಿ ತೀರ್ಥಗಳು. ,,

ನೂರ ನಲವತ್ತೆಂಟನೆಯ ಅಧ್ಯಾಯ

ಸ್ತುತಸ್ವಾಮಿಯ ಮಹಿಮೆ, ವರಾಹಪುರಾಣದ ಮಹಿಮೆ, ಪಂಚಾರುಮ, ಭೃಗುಕುಂಡ, ಮಣಿಕುಂಡ ಧೂತಪಾಪ ಎಂಬ ಹೆಸರಿನ ತೀರ್ಥಗಳು. 59–76

ನೂರ ನಲವತ್ತೊಂಬತ್ತನೆಯ ಅಧ್ಯಾಯ

ದ್ವಾರಕೆಯ ಮಹಿಮೆ—ದ್ವಾರಕೆಯ ಪರಿಮಾಣ, ಯಾದವರಿಗೆ ದುರ್ವಾಸರಿಂದ ಸಾಂಬನ ಅಪರಾಧಕ್ಕಾಗಿ ಶಾಪಬಂದುದು. 77–82

ದ್ವಾರಕಾಮಂಡಲದಲ್ಲಿರುವ ಪಂಚಸರೋವರ, ಮಹಾಪ್ಲಕ್ಷವೃಕ್ಷ, ಪ್ರಭಾಸತೀರ್ಥ, (ಪಂಚ)ಪಿಂಡ ಕುಂಡತೀರ್ಥ, ಸಂಗಮನ ಕ್ಷೇತ್ರ, ಹಂಸಕುಂಡತೀರ್ಥ, ಕದಂಬತೀರ್ಥ, ಚಕ್ರತೀರ್ಥ, ರೈವತಕತೀರ್ಥ, ಮಹಾದ್ರುಮಕ್ಷೇತ್ರ, ವಿಷ್ಣುಸಂಕ್ರಮಣ ಕ್ಷೇತ್ರ ಮೊದಲಾದವುಗಳ ವಿಚಾರ. 83-99

ಪುಟಸಂಖ್ಯೆ

ನೂರ ಐವತ್ತನೆಯ ಅಧ್ಯಾಯ

ಸಾನಂದೂರ ಮಹಿಮೆ-ಸಾನಂದೂರಕ್ಷೇತ್ರ ದೇವಮೂರ್ತಿಗಳು. 100-102

ಆ ಕ್ಷೇತ್ರಮಂಡಲದಲ್ಲಿರುವ ರಾಮಗೃಹಕ್ಷೇತ್ರ, ರಾಮಸರಸ್ಸು, ಬ್ರಹ್ಮಸರಸ್ಸು, ಸಂಗಮನತೀರ್ಥ, ಶಕ್ರಸರೋವರ, ಸೂರ್ಪಾರಕಕ್ಷೇತ್ರ, ಜಟಾಕುಂಡತೀರ್ಥ ಮೊದಲಾದುವುಗಳ ವಿಚಾರ. 102-112

ನೂರ ಐವತ್ತೊಂದನೆಯ ಅಧ್ಯಾಯ

ಲೋಹಾರ್ಗಲಕ್ಷೇತ್ರ ಮಹಿಮೆ-ಲೋಹಾರ್ಗಲಕ್ಷೇತ್ರ ಸನ್ನಿವೇಶ, ಆ ಕ್ಷೇತ್ರದಲ್ಲಿರುವ ಪಂಚಸರಸ್ಸು, ನಾರದಕುಂಡ, 'ವಸಿಷ್ಠಕುಂಡ, ಪಂಚಕುಂಡ, ಸಪ್ತರ್ಷಿಕುಂಡ, ಶರಭಂಗಕುಂಡ, ಅಗ್ನಿಸರೋವರ, ಬೃಹಸ್ಪತಿಕುಂಡ. ಅಗ್ನಿಕುಂಡ, ಕಾರ್ತಿಕೇಯಕುಂಡ, ಉಮಾಕುಂಡ, ಮಹೇಶ್ವರಕುಂಡ, ಬ್ರಹ್ಮಕುಂಡ ಎಂಬುವುಗಳ ಪ್ರಭಾವ. 113-132

ನೂರ ಐವತ್ತೆರಡನೆಯ ಅಧ್ಯಾಯ

*ಮಧುರೆಯ ಮಹಿಮೆ— ಮಧುರಾಪುರಿ, ಯಮುನಾನದಿ. 133-140

ಮಧುರೆಯಲ್ಲಿರುವ ಅವಿಮುಕ್ತತೀರ್ಥ, ವಿಶ್ರಾಂತಿತೀರ್ಥ, ಪ್ರಯಾಗತೀರ್ಥ, ಕನಖಲತೀರ್ಥ, ಸೂರ್ಯತೀರ್ಥ, ಧ್ರುವತೀರ್ಥ, ಋಷಿತೀರ್ಥ, ಕೋಟಿತೀರ್ಥ, ವಾಯುತೀರ್ಥ, ಎಂಬುವುಗಳ ವಿಚಾರ. 141-149

ನೂರ ಐವತ್ತಮೂರನೆಯ ಅಧ್ಯಾಯ

ಮಧುರೆಯ ತೀರ್ಥವನಗಳ ಮಹಿಮೆ—ನವತೀರ್ಥ. 150

ಸಂಯಮನತೀರ್ಥ, ಆ ತೀರ್ಥದಲ್ಲಿ ಮೃತನಾಗಿ ಯಕ್ಷ್ಮಧನುವೆಂಬ ರಾಜನಾಗಿ ಜನಿಸಿದ ಬೇಡನ ಕಥೆ. 151-157

ಮಧುವನ ಕುಂದವನಗಳು. 157

ಕಾಮ್ಯಕವನ, ಬಕುಲವನ, ಭದ್ರವನ. 158

---

* ಇಲ್ಲೂ ಮುಂದಿನ ಅಧ್ಯಾಯಗಳಲ್ಲೂ ಮಧುರೆಯೆಂದರೆ ಶ್ರೀಕೃಷ್ಣಾವತಾರದ ಉತ್ತರಮಧುರೆಯೆಂದು ಗ್ರಹಿಸಬೇಕು.

ಪುಟಸಂಖ್ಯೆ

ಖಾದಿರವನ, ಮಹಾವನ, ಲೋಹಜಂಘವನ, ಬಿಲ್ವವನ, ಭಾಂಡೀರವನ, ಬೃಂದಾವನ. 159–160

ನೂರ ಐವತ್ತನಾಲ್ಕನೆಯ ಅಧ್ಯಾಯ

ಯಮುನಾತೀರ್ಥಮಹಿಮೆ — ಯಮುನೆಯ ಧಾರಾಪತನಕ ತೀರ್ಥದಲ್ಲಿ ಮೃತಳಾದುದರಿಂದ ಯಕ್ಷ್ಮಧನುರಾಜನ ಪತ್ನಿಯಾಗಿ ಜನಿಸಿದ ಪೀವರಿಯ ಕಥೆ. 161–164

ಯಮುನೆಯ ನಾಗತೀರ್ಥ, ಘಂಟಾಭರಣಕತೀರ್ಥ. 164

,, ಸೋಮತೀರ್ಥ 165

,, ಸರಸ್ವತೀಪತನ ದಶಾಶ್ವಮೇಧತೀರ್ಥಗಳು 166

,, ಮಾನಸತೀರ್ಥ, ವಿಘ್ನರಾಜತೀರ್ಥ 167

,, ಕೋಟಿವಟತೀರ್ಥ, ಶಿವಕ್ಷೇತ್ರ 168

ನೂರ ಐವತ್ತೈದನೆಯ ಅಧ್ಯಾಯ

ಮಧುರೆಯ ಅಕ್ರೂರತೀರ್ಥಪ್ರಭಾವ — ಅಕ್ರೂರತೀರ್ಥದಲ್ಲಿ ಸ್ನಾನಾದಿಗಳನ್ನು ಮಾಡಿದ ಪುಣ್ಯಬಲದಿಂದ ಅಗ್ನಿದತ್ತನೆಂಬ ಬ್ರಾಹ್ಮಣನ ಬ್ರಹ್ಮರಾಕ್ಷಸಜನ್ಮವನ್ನು ಪರಿಹರಿಸಿ ಮುಕ್ತಿಯಾಗುವಂತೆ ಮಾಡಿ, ತಾನೂ ಕುಟುಂಬದೊಡನೆ ಸಶರೀರನಾಗಿ ಮೋಕ್ಷವನ್ನು ಪಡೆದ ಸುಧನನೆಂಬ ವೈಶ್ಯನ ಕಥೆ. 169–185

ನೂರ ಐವತ್ತಾರನೆಯ ಅಧ್ಯಾಯ

ಮಧುರಾಮಂಡಲದಲ್ಲಿರುವ ವತ್ಸಕ್ರೀಡನಕ, ಭಾಂಡೀರ, ಬೃಂದಾವನ, ಕೇಶಿ, ಹರಿ, ಸೂರ್ಯ ಎಂಬ ಹೆಸರಿನ ತೀರ್ಥಗಳ ಪ್ರಾಶಸ್ತ್ಯ. 186–190

ನೂರ ಐವತ್ತೇಳನೆಯ ಅಧ್ಯಾಯ

ಮಧುರಾಮಂಡಲದ ಮಲಯಾರ್ಜುನ, ಭಾಂಡಹ್ರದ, ವೀರಸ್ಥಳ ಕುಶಸ್ಥಳ, ಪುಷ್ಪಸ್ಥಳ, ಸಪ್ತಸಾಮುದ್ರಿಕ ಗೋಪೀಶ್ವರ, ವಸುಪತ್ರ, ಫಾಲ್ಗುನಕ, ವೃಷಭಾಂಜನ, ಕಾಲವನ, ಸಂಪೀಠಕ ಎಂಬ ಹೆಸರಿನ ತೀರ್ಥಕ್ಷೇತ್ರಗಳ ಪ್ರಭಾವ. 191–201

ಪುಟಸಂಖ್ಯೆ

ನೂರ ಐವತ್ತೆಂಟನೆಯ ಅಧ್ಯಾಯ

ಮಧುರೆಯ ಪ್ರವೇಶತೀರ್ಥಸ್ನಾನಾದಿಗಳಿಂದ ಮನುಷ್ಯರಿಗೆ ಲಭಿಸುವ ಪುಣ್ಯಫಲ, ಮುಚುಕುಂದಕ್ಷೇತ್ರ ಮಹಿಮೆ. 202-211

ನೂರ ಐವತ್ತೊಂಬತ್ತನೆಯ ಅಧ್ಯಾಯ

ಮಧುರಾಪ್ರದಕ್ಷಿಣಾದಿವಿಧಿಫಲಗಳು. 212-217

ನೂರ ಅರವತ್ತನೆಯ ಅಧ್ಯಾಯ

ಮಧುರೆಯ ತೀರ್ಥಕ್ಷೇತ್ರ ಪ್ರಾಶಸ್ತ್ಯ, ಯಾತ್ರಾಕ್ರಮ ಮತ್ತು ಫಲ. 218-235

ನೂರ ಅರವತ್ತೊಂದನೆಯ ಅಧ್ಯಾಯ

ಮಧುರೆಯ ಮತ್ತು ಮಧುವನಾದಿದ್ವಾದಶವನಗಳ ಯಾತ್ರೆ ಅಜ್ಞಾನಿಗಳಾದ ಪಾಪಿಗಳಿಗೂ ಸ್ವರ್ಗೋಪಾಯವಾದುದೆಂಬ ವಿಚಾರ. 236-238

ನೂರ ಅರವತ್ತೆರಡನೆಯ ಅಧ್ಯಾಯ

ಮಧುರೆಯ ಚಕ್ರತೀರ್ಥಪ್ರಭಾವ, ಆ ತೀರ್ಥದಲ್ಲಿ ಸ್ನಾನಮಾಡಿ, ಬ್ರಹ್ಮಹತ್ಯೆಯ ಪಾಪವನ್ನು ಕಳೆದುಕೊಂಡ ಕನ್ಯಾಕುಬ್ಜದ ಬ್ರಾಹ್ಮಣನ ಕಥೆ. 239-254

ನೂರ ಅರವತ್ತಮೂರನೆಯ ಅಧ್ಯಾಯ

ಮಧುರೆಯ ವೈಕುಂಠತೀರ್ಥದ ಮಹಿಮೆ, ಆ ತೀರ್ಥಸ್ನಾನದಿಂದ ಬ್ರಹ್ಮಹತ್ಯೆಯ ಪಾಪವನ್ನು ಕಳೆದುಕೊಂಡವನ ಕಥೆ. 255-257

ಮಧುರೆಯ ಗಂಧರ್ವಕುಂಡ ಮಹಿಮೆ. 258

ಮಧುರಾಮಂಡಲಕಮಲಕರ್ಣಿಕೆಯಲ್ಲೂ ನಾಲ್ಕುದಿಕ್ಕಿನ ದಳಗಳಲ್ಲೂ ನೆಲೆಸಿರುವ ಮೂರ್ತಿಗಳ ವಿಚಾರ. 258-259

ರಾವಣನಿಂದ ಪೂಜಿತನಾಗಿದ್ದು, ಬಳಿಕ ಶತ್ರುಘ್ನನಿಂದ ಮಧುರೆಯಲ್ಲಿ ಪ್ರತಿಷ್ಠಿತನಾದ ಕಪಿಲ ವರಾಹಮೂರ್ತಿಯ ದಿವ್ಯಚರಿತ್ರೆ 259-270

ಪುಟಸಂಖ್ಯೆ

ನೂರ ಅರವತ್ತನಾಲ್ಕನೆಯ ಅಧ್ಯಾಯ

ಮಧುರೆಯ ಪಶ್ಚಿಮದಲ್ಲಿರುವ ಅನ್ನಕೂಟ ಅಥವಾ ಗೋವರ್ಧನ ಕ್ಷೇತ್ರದ ಪ್ರದಕ್ಷಿಣಕ್ರಮ, ಆದರ ನಾಲ್ಕುಕಡೆಗಳಲ್ಲೂ ನಡುವೆಯೂ ಇರುವ ಇಂದ್ರ ಯಮ ವರುಣ ಕುಬೇರ ಚಕ್ರ ತೀರ್ಥಗಳ ಪ್ರಾಶಸ್ತ್ಯ. 271-281

ನೂರ ಅರವತ್ತೈದನೆಯ ಅಧ್ಯಾಯ

ಮಧುರೆಯ ಚಾತುಸ್ಸಮುದ್ರಿಕತೀರ್ಥ ಮಹಿಮೆ. ಆ ತೀರ್ಥದಲ್ಲಿ ಪಿಂಡಪ್ರದಾನದಿಂದ ಪಿಶಾಚಜನ್ಮವನ್ನು ಕಳೆದುಕೊಂಡು ಸ್ವರ್ಗವನ್ನು ಸೇರಿದ ಪ್ರತಿಷ್ಠಾನಪುರದ ಸುಶೀಲನೆಂಬ ವೈಶ್ಯನ ಕಥೆ, ಮಧುರಾವಾಸಿಗಳ ಪ್ರಾಶಸ್ತ್ಯ. 282-296

ನೂರ ಅರವತ್ತಾರನೆಯ ಅಧ್ಯಾಯ

ಮಧುರೆಯ ಅಸಿಕುಂಡತೀರ್ಥ ಮಹಿಮೆ. 297-304

ನೂರ ಅರವತ್ತೇಳನೆಯ ಅಧ್ಯಾಯ

ಮಧುರೆಯ ವಿಶ್ರಾಂತಿ ತೀರ್ಥಕ್ಕೆ ಆ ಹೆಸರು ಬರಲು ಕಾರಣ, ಆ ತೀರ್ಥಸ್ನಾನಫಲದಿಂದ ರಾಕ್ಷಸಜನ್ಮವನ್ನು ಕಳೆದುಕೊಂಡು ಮುಕ್ತನಾದ ಉಜ್ಜಯಿನಿಯ ಬ್ರಾಹ್ಮಣನ ಕಥೆ. 305-312

ನೂರ ಅರವತ್ತೆಂಟನೆಯ ಅಧ್ಯಾಯ

ಮಧುರಾಕ್ಷೇತ್ರಪಾಲನಾದ ಈಶ್ವರನ ಸಂದರ್ಶನದಿಂದಾಗುವ ಪುಣ್ಯಫಲಾದಿಗಳು, ಈಶ್ವರನಿಗೆ ವಿಷ್ಣು ಕೊಟ್ಟ ವರ, ಮಧುರಾ ಮಂಡಲದಲ್ಲಿರುವ ತೀರ್ಥಗಳ ಸಂಖ್ಯೆಯಾತ್ರಾಫಲಾದಿ ವಿಚಾರ 313-318

ನೂರ ಅರವತ್ತೊಂಬತ್ತನೆಯ ಅಧ್ಯಾಯ

ಮಧುರೆಗಿಂತ ಉತ್ತಮಕ್ಷೇತ್ರವಿಲ್ಲವೆಂಬುದು, ಮಧುರೆಯ ಅರ್ಧಚಂದ್ರಕ್ಷೇತ್ರದ ಪ್ರಾಶಸ್ತ್ಯ, ಯಾತ್ರಾಕ್ರಮ, . ದೇವ ದೇವಿಯರ ಸಂದರ್ಶನ ವಿಧಾನಫಲಾದಿಗಳು. 319-328

ಪುಟಸಂಖ್ಯೆ

ನೂರ ಎಪ್ಪತ್ತನೆಯ ಅಧ್ಯಾಯ

ಗೋಕರ್ಣನೆಂಬ ದೇವಭಕ್ತನ ಮತ್ತು ಶುಕೋದರನೆಂಬ ಶುಕಮುನಿಯ ಶಿಷ್ಯನ ಚರಿತ್ರೆಯ ಮೂಲಕ ಮಧುರೆಯ ಯಮುನಾಸರಸ್ವತೀ ಸಂಗಮ ಗೋಕರ್ಣೇಶ್ವರಕ್ಷೇತ್ರಗಳ ಮಹಿಮೆ. 329–349

ನೂರ ಎಪ್ಪತ್ತೊಂದನೆಯ ಅಧ್ಯಾಯ

ಮಧುರೆಯ ಗೋಕರ್ಣನೆಂಬ ಭಕ್ತನ ಮತ್ತು ಶುಕೋದರನೆಂಬ ಗಿಳಿಯ ಕಥೆಯ ಮುನ್ನಡೆ. 350–364

ನೂರ ಎಪತ್ತೆರಡನೆಯ ಅಧ್ಯಾಯ

ಗೋಕರ್ಣನ ಮತ್ತು ಆತನಿಂದ ಜೀರ್ಣೋದ್ಧಾರವಾದ ಮಧುರೆಯ ಉಪವನದ ಕಥೆ, ಆರಾಮಾದಿಗಳ ನಿರ್ಮಾಣಫಲ 365–379

ನೂರ ಎಪ್ಪತ್ತಮೂರನೆಯ ಅಧ್ಯಾಯ

ಗೋಕರ್ಣನು ಮಧುರೆಯಲ್ಲಿ ಮಾಡಿದ ಉದ್ಯಾನಸತ್ರ ನಿರ್ಮಾಣಾದಿ ಧರ್ಮಕಾರ್ಯಗಳು. 380–383

ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ

ಮಧುರೆಯ ಯಮುನಾಸರಸ್ವತೀ ಸಂಗಮಪ್ರಭಾವ, ಮಧುರೆಯ ತೀರ್ಥಗಳಲ್ಲಿ ಸ್ನಾನಮಾಡಿ, ಪವಿತ್ರಾತ್ಮನಾಗಿದ್ದ ಮಹಾನಾಮನೆಂಬವನಿಂದ ಯಮುನಾಸಂಗಮ ಸ್ನಾನವಾಮನ ದೇವ ವ್ರತಾದಿಗಳ ವಿಚಾರಶ್ರವಣಮಾತ್ರದಿಂದಲೇ ತಮ್ಮ ಪಿಶಾಚಜನ್ಮವನ್ನು ಕಳೆದುಕೊಂಡು, ವಿಮಾನದಲ್ಲಿ ಸ್ವರ್ಗಕ್ಕೆ ಹೋದ, ಪರ್ಯುಷಿತ, ಸೂಚಿ, ಮುಖ ಶೀಘ್ರಗಥ ರೋಧಕ ಲೇಖಕ ಎಂಬ ಹೆಸರಿನ ಐವರು ಮಹಾಪಿಶಾಚರ ಕಥೆ, ಪಿಶಾಚಜನ್ಮವನ್ನು ಪಡೆಯುವವರು ಮತ್ತು ಪಡೆಯದವರು. ಯಮುನಾಸರಸ್ವತೀಸಂಗಮಸ್ನಾನ, ವಾಮನದೇವವ್ರತ ವಿಧಾನಫಲಗಳು. 384–408

ಪುಟಸಂಖ್ಯೆ

ನೂರ ಎಪ್ಪತ್ತೈದನೆಯ ಅಧ್ಯಾಯ

ಮಥುರೆಯ ಕೃಷ್ಣಗಂಗಾಕ್ಷೇತ್ರಮಹಿಮೆ—ಆ ಕ್ಷೇತ್ರದಲ್ಲಿ ವ್ಯಾಸಮಹರ್ಷಿಗಳು ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದುದು, ಆ ಕ್ಷೇತ್ರಕ್ಕೆ ಬಂದ ಪಾಂಚಾಲದೇಶದ ಸುಂದರಿಯಾದ ಬಾಲವಿತಂತು ವೇಶ್ಯೆಯರ ಸಹವಾಸದಿಂದ ದುರಾಚಾರೆಯಾದುದು. 409–414

ನೂರ ಎಪ್ಪತ್ತಾರನೆಯ ಅಧ್ಯಾಯ

ಕೃಷ್ಣಗಂಗಾತೀರ್ಥಮಹಿಮೆಯ ಮುನ್ನಡೆ — ಅರಿಯದೆ ಸಹೋದರಿಯ ಸಂಗಮಾಡಿದ ಅಗ್ನಿಪ್ರವೇಶಪ್ರಾಯಶ್ಚಿತ್ತಾರ್ಹವಾದ ಪಾಪವನ್ನು ಕೃಷ್ಣಗಂಗಾತೀರ್ಥಸ್ನಾನದಿಂದಲೇ ಕಳೆದುಕೊಂಡ ಪಾಂಚಾಲಬ್ರಾಹ್ಮಣಯುವಕನ ಕಥೆ, ಶ್ರೀವರಾಹ ಮಹಿಮೆ. 415–435

ನೂರ ಎಪ್ಪತ್ತೇಳನೆಯ ಅಧ್ಯಾಯ

ಮಥುರೆಯ ಮಹಿಮೆ—ದ್ವಾರಕಿಯಲ್ಲಿದ್ದ ಶ್ರೀಕೃಷ್ಣನು ತನ್ನ ಮಗನಾದ ಸಾಂಬನಿಗೆ ತನ್ನ ಪತ್ನಿಯರಲ್ಲಿ ಕೆಲವರನ್ನು ಎಂದರೆ ಸಾಂಬನ ಮಾತೃವರ್ಗದವರನ್ನು ಕಾಮಿಸಿದ ಅಪರಾಧಕ್ಕಾಗಿ ವಿರೂಪನಾಗುವಂತೆ ಶಪಿಸಿದುದು. 436–442

ಅದರಿಂದ ಕುಷ್ಠರೋಗವನ್ನು ಪಡೆದ ಸಾಂಬನು ಮಥುರೆಯಲ್ಲಿ ಸೂರ್ಯಾರಾಧನೆಯನ್ನು ಮಾಡಿ, ಸೂರ್ಯನ ಅನುಗ್ರಹದಿಂದ ವ್ಯಾಧಿರಹಿತನಾದುದು, ಸೂರ್ಯನಿಂದ ಭವಿಷ್ಯಪುರಾಣವನ್ನು ಕೇಳಿದುದು, ಮಥುರೆಯಲ್ಲಿ ಕಾಲಪ್ರಿಯನೆಂಬ ಸೂರ್ಯಮೂರ್ತಿಯನ್ನು ಪ್ರತಿಷ್ಠೆಮಾಡಿದುದಲ್ಲದೆ ಸಾಂಬಪುರವೆಂಬ ಒಂದು ಭಾಗವನ್ನು ಸ್ಥಾಪಿಸಿ ಅಲ್ಲಿ ಕುಲೇಶ್ವರನನ್ನು ಪ್ರತಿಷ್ಠೆಮಾಡಿದುದು, ರಥಸಪ್ತಮಿಯದಿನ ಸಾಂಬಪುರ ಯಾತ್ರೆಮಾಡುವುದರ ಫಲ. 443–449

ನೂರ ಎಪ್ಪತ್ತೆಂಟನೆಯ ಅಧ್ಯಾಯ

ಮಥುರೆಯ ಮಹಿಮೆ-ಶತ್ರುಘ್ನನು ಮಥುರೆಯಲ್ಲಿ ಮಾರ್ಗಶಿರ ಶುಕ್ಲ ಏಕಾದಶಿ ಮತ್ತು ದ್ವಾದಶಿಯಲ್ಲಿ ಮಾಡಿದ ವ್ರತವಿಚಾರ. 450–452

ಪುಟಸಂಖ್ಯೆ

ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ

ಮಧುರಾತೀರ್ಥಯಾತ್ರೆಯ ಮಹಿಮೆ—ಮನುಷ್ಯರು ದೇವ ಪೂಜೆಯ ಕಾಲದಲ್ಲೂ ಬೇರೆಯ ಕಾಲದಲ್ಲೂ ಮಾಡುವ ಮೂವತ್ತೆರಡು ಅಪರಾಧಗಳನ್ನು ಕಳೆದುಕೊಳ್ಳಲು ಮಾಡ ಬೇಕಾದ ಪ್ರಾಯಶ್ಚಿತ್ತಗಳಲ್ಲಿ ಮಧುರೆಯ ತೀರ್ಥಯಾತ್ರೆಯೇ ಅತಿ ಸುಲಭವಾದುದಾಗಿರುವುದಲ್ಲದೆ ಮೋಕ್ಷೋಪಾಯವೂ ಆಗಿರುವುದೆಂಬುದು. 453–462

ನೂರ ಎಂಬತ್ತನೆಯ ಅಧ್ಯಾಯ

ಮಧುರೆಯ ಧ್ರುವತೀರ್ಥಮಹಿಮೆ–ಧ್ರುವತೀರ್ಥದಲ್ಲಿ ತಪಸ್ಸನ್ನು ಮಾಡುತ್ತಿದ್ದ ತ್ರಿಕಾಲಜ್ಞನಾದ ಮುನಿ, ವಿರೂಪಕನಿಧಿಯೆಂಬ ದಾಸಿಯಿಂದ ಆ ತೀರ್ಥದಲ್ಲಿ ಶ್ರಾದ್ಧವನ್ನು ಮಾಡಿಸಿದುದರಿಂದ ಮೊದಲು ಬಹು ಸಂಕಟಪಡುತ್ತಿದ್ದ ಅವಳ ವಂಶೀಯರಾದ ನೂರಾರುಜನ ನಾರಕಿಗಳು ಆ ಜನ್ಮದುಃಖಗಳನ್ನು ಕಳೆದು ಕೊಂಡು ದಿವ್ಯರೂಪರಾಗಿ ವಿಮಾನಗಳನ್ನೇರಿ ಇಂದ್ರಲೋಕ ವನ್ನು ಸೇರಿದ ಕಥೆ. 463–494

ಶ್ರೀ ವರಾಹಪುರಾಣದಲ್ಲಿ ನಾಲ್ಕನೆಯ ಭಾಗದ ಮುಖ್ಯ ವಿಷಯಗಳ

ವರ್ಣಾನುಕ್ರಮವಾದ ಸೂಚಿಕೆ

ವಿಷಯ	ಅಧ್ಯಾಯ	ಆರಂಭದ ಪುಟ
ಔರ್ವಮುನಿ ಈಶ್ವರನನ್ನು ಶಪಿಸಿದುದು.	147	46
ಗೋನಿಷ್ಕ್ರಮಣ ಕ್ಷೇತ್ರಮಹಿಮೆ	,,	45
,, ,, ತೀರ್ಥಗಳು	,,	51
ದೇವದತ್ತ ಮುನಿಯ ತಪಸ್ಸು	146	27
ದೇವದತ್ತಮುನಿ ಪ್ರಮ್ಲೋಚೆಯನ್ನು ಮೋಹಿಸಿದುದು	146	29
ದೇವಪೂಜಾದಿಗಳಲ್ಲಿ ಮಾಡಬಾರದ ಅಪರಾಧಗಳು ಮತ್ತು ಪ್ರಾಯಶ್ಚಿತ್ತ	179	453
ದ್ವಾರಕಾಮಹಿಮೆ	149	78
ದ್ವಾರಕಾಮಂಡಲದ ತೀರ್ಥಗಳು	,,	83
ಮಥುರೆ (ಶ್ರೀಕೃಷ್ಣ ಜನ್ಮಭೂಮಿ) ಯ ಮಹಿಮೆ	152	135
*ಮಥುರೆಯ ಪ್ರದಕ್ಷಿಣ ಫಲ	159	216
,, ,, ವಿಧಿ	160	219
,, ಯಾತ್ರಾಕ್ರಮ	169	320
ಮಥುರಾಯಾತ್ರೆ ಸಕಲಪಾಪಪರಿಹಾರಕವೂ ಮುಕ್ತಿಪ್ರದವೂ ಆದುದು.	179	461
ಮಥುರಾಮಂಡಲದಲ್ಲಿರುವ ತೀರ್ಥಗಳ ಮಹಿಮೆ	152	140
,, ,, ಸ್ನಾನಫಲ	158	202
ಮಥುರೆಯ ಅಕ್ರೂರತೀರ್ಥ ಮಹಿಮೆ ಸುಧನನೆಂಬ ವೈಶ್ಯನ ಕಥೆಯೊಡನೆ	155	170

* ಯಮುನಾತೀರದ ಮಥುರೆಯೇ ಇಲ್ಲಿ ಪ್ರಸಕ್ತವಾದುದು.

ವಿಷಯ	ಅಧ್ಯಾಯ	ಆರಂಭದ ಪುಟ
ಮಧುರೆಯ ಅಸಿಕುಂಡತೀರ್ಥ	166	297
,, ಕಪಿಲವರಾಹಚರಿತ್ರೆ	153	259
ಮಧುರೆಯ ಕೃಷ್ಣಗಂಗಾತೀರ್ಥಪ್ರಭಾವ ಆ ತೀರ್ಥದಲ್ಲಿ ಸಹೋದರೀಸಂಗಮದ ಮಹಾ ಪಾಪವನ್ನೂ ಕಳೆದುಕೊಂಡ ಪಾಂಚಾಲನ ಕಥೆ	175	409
ಮಧುರೆಯ ಗೋಕರ್ಣನೆಂಬ ವೈಶ್ಯಭಕ್ತನ ಕಥೆ	170	329
,, ಗೋವರ್ಧನಕ್ಷೇತ್ರ	164	271
,, ಚಕ್ರತೀರ್ಥಸ್ನಾನದಿಂದ ಬ್ರಹ್ಮಹತ್ಯೆಯನ್ನು ಕಳೆದುಕೊಂಡ ಬ್ರಾಹ್ಮಣನ ಕಥೆ	162	239
ಮಧುರೆಯ ಚಾತುಸ್ಸಮುದ್ರಿಕತೀರ್ಥದಿಂದ ಪಿಶಾಚಜನ್ಮವನ್ನು ಕಳೆದುಕೊಂಡ ವೈಶ್ಯ	165	282
ಮಧುರೆಯ ಧ್ರುವತೀರ್ಥ ಶ್ರಾದ್ಧದಿಂದ ಸ್ವರ್ಗಕ್ಕೇರಿದ ನಾರಕಿಗಳ ಕಥೆ	180	463
ಮಧುರೆಯ ಮಧುವನಾದಿ ದ್ವಾದಶವನಗಳು	161	237
,, ಯಮುನಾ ಸ್ನಾನದಿಂದ ಮುಕ್ತನಾದ ನಾಪಿತನ ಕಥೆ	152	144
ಮಧುರೆಯ ಯಮುನೆಯ ಸಂಯಮನ ತೀರ್ಥ ಮಹಿಮೆಯಿಂದ ಬೇಡನು ಯಕ್ಷ್ಮಧನುವೆಂಬ ರಾಜನಾದುದು	153	151
ಮಧುರೆಯ ಯಮುನಾತೀರ್ಥ ಮಹಿಮೆಯಿಂದ ರಾಣಿಯಾದ ಪೀವರಿಯ ಕಥೆ	154	162
ಮಧುರೆಯ ಯಮುನಾ ಸರಸ್ವತೀ ಸಂಗಮಪ್ರಭಾವ	174	396
,, ವಿಶ್ರಾಂತಿತೀರ್ಥ ,,	167	305
,, ವೈಕುಂಠತೀರ್ಥದಿಂದ ಬ್ರಹ್ಮಹತ್ಯಾ ಪಾಪವಿಮೋಚನೆಯಾದುದು	163	255

ವಿಷಯ	ಅಧ್ಯಾಯ	ಆರಂಭದ ಪುಟ
ಮಥುರೆಯ ಮರಣದಿಂದ ಬ್ರಹ್ಮಲೋಕವನ್ನು ಪಡೆದ ಶುಕೋದರನ ಕಥೆ.	170	339
ಮಥುರೆಯಲ್ಲಿ ಸಾಂಬನು ಸೂರ್ಯೋಪಾಸನೆಯಿಂದ ಮಹಾವ್ಯಾಧಿಯನ್ನು ಕಳೆದುಕೊಂಡುದು	177	436
ಮಥುರೆಯಲ್ಲಿ ಶತ್ರುಘ್ನನು ಮಾಡಿದ ದ್ವಾದಶೀವ್ರತ	178	450
ಯಾದವರಿಗೆ ದುರ್ವಾಸರಿಂದ ಶಾಪ ಬಂದುದು	149	81
ರಾವಣನ ಕಪಿಲವರಾಹದೇವಭಕ್ತಿ	163	261
ರುರೂಪಾಖ್ಯಾನ	146	27
ರುರುಕ್ಷೇತ್ರ ಹೃಷೀಕೇಶ ಮಹಿಮೆ	146	40
ಲೋಹಾರ್ಗಲಕ್ಷೇತ್ರ ಮಹಿಮೆ	151	115
,, ,, ತೀರ್ಥಗಳು	,,	117
ವರಾಹ (ಪುರಾಣ) ಶಾಸ್ತ್ರಮಹಿಮೆ	148	63
ಸಾನಂದೂರ ಕ್ಷೇತ್ರ ಮಹಿಮೆ	150	101
,, ತೀರ್ಥಗಳು	,,	102
ಸಾಲಗ್ರಾಮ ಕ್ಷೇತ್ರ ಮಹಿಮೆ	145	1
,, ತೀರ್ಥಗಳು	,,	9
ಸಾಲಂಕಾಯನ ಮುನಿಯ ತಪಸ್ಸು ಪುತ್ರವರಪ್ರಾಪ್ತಿ	,,	1
ಸ್ತುತಸ್ವಾಮಿಯ ಮಹಿಮೆ	148	61
ಸ್ತುತಸ್ವಾಮಿಕ್ಷೇತ್ರದ ತೀರ್ಥಗಳು	,,	69

|| ಶ್ರೀರಸ್ತು ||

ಶ್ರೀವರಾಹಪುರಾಣಂ

ಪಂಚಚತ್ವಾರಿಂಶದಧಿಕಶತತಮೋಽಧ್ಯಾಯಃ

ಅಥ ಸಾಲಗ್ರಾಮಕ್ಷೇತ್ರ ಮಾಹಾತ್ಮ್ಯಂ

|| ಧರಣ್ಯುವಾಚ ||

ಭಗವನ್ದೇವದೇವೇಶ ಸಾಲಂಕಾಯನಕೋ ಮುನಿಃ |
ಕಿಂಚಕಾರ ತಪಃ ಕುರ್ವನ್ ತವ ಕ್ಷೇತ್ರೇ ವಿಮುಕ್ತಿದೇ || ೧ ||

|| ಶ್ರೀ ವರಾಹ ಉವಾಚ ||

ಅಥ ದೀರ್ಘೇಣ ಕಾಲೇನ ಸ ಋಷಿಃ ಸಂಶಿತವ್ರತಃ |
ತಪ್ಯಮಾನೋ ಯಥಾನ್ಯಾಯಂ ಪಶ್ಯನ್ವೈ ಸಾಲಮುತ್ತಮಂ || ೨ ||

ನೂರ ನಲವತ್ತೈದನೆಯ ಅಧ್ಯಾಯ

ಸಾಲಗ್ರಾಮಕ್ಷೇತ್ರ ಮಹಿಮೆ

೧. ಭೂದೇವಿ—ಭಗವಂತ, ದೇವದೇವೇಶ, ಸಾಲಂಕಾಯನಮುನಿ ಮುಕ್ತಿದಾಯಕವಾದ ಆ ನಿನ್ನ ಕ್ಷೇತ್ರದಲ್ಲಿ ತಪಸ್ಸನ್ನು ಆಚರಿಸುತ್ತ ಮತ್ತೇನು ಮಾಡಿದನು ?

೨-೪. ಶ್ರೀ ವರಾಹ—ಉಗ್ರವ್ರತಿಯಾದ ಆ ಸಾಲಂಕಾಯನನು ನಿಯಮಾನುಸಾರವಾಗಿ ಬಹುಕಾಲ ತಪಸ್ಸನ್ನು ಮಾಡುತ್ತಾ ಏಕತ್ರಜ್ಞಾನದಿಂದ

ಅಭಿನ್ನಮತುಲಚ್ಛಾಯಂ ವಿಶಾಲಂ ಪುಷ್ಪಿತಂತಥಾ ।
ಮನೋಜ್ಞಂ ಚ ಸುಗಂಧಂ ಚ ದೇವಾನಾಮಪಿ ದುರ್ಲಭಂ ॥ ೩ ॥

ಋಷಿರ್ಜ್ಞಾನಪರಿಶ್ರಾಂತಃ ಸಾಲಂಕಾಯನಕೋಽದ್ಭುತಂ
ದದರ್ಶ ಚ ಪುನಃ ಸಾಲಂ ಶುಭಾನಾಂ ಶುಭದರ್ಶನಂ ॥ ೪ ॥

ತತೋ ದೃಷ್ಟ್ವಾ ಮಹಾಸಾಲಂ ಪರಿಶ್ರಾಂತೋ ಮಹಾಮುನಿಃ ।
ವಿಶ್ರಾಮಂ ಕುರುತೇ ತತ್ರ ದ್ರಷ್ಟುಕಾಮೋಽಥ ಮಾಂ ಮುನಿಃ ॥ ೫ ॥

ಸಾಲಸ್ಯ ತಸ್ಯ ಪೂರ್ವೇಣ ಸ್ಥಿತಃ ಪಶ್ಚಾನ್ಮುಖೋ ಮುನಿಃ ।
ಮಾಯಯಾ ಮಮ ಮೂಢಾತ್ಮಾ ಶಕ್ತೋ ದ್ರಷ್ಟುಂ ನ ಮಾಮಭೂತ್ ॥

ತತಃ ಪೂರ್ವೇಣ ಪಾರ್ಶ್ವೇನ ತಸ್ಯ ಸಾಲಸ್ಯ ಸುಂದರಿ ।
ವೈಶಾಖಮಾಸದ್ವಾದಶ್ಯಾಂ ಮದ್ದರ್ಶನಮುಪಾಗತಃ ॥ ೭ ॥

ಬಳಲಿದವನಾಗಿ ಒತ್ತಾಗಿಯೂ ಅಸದೃಶವಾದ, ನೆಳಲುಳ್ಳುದಾಗಿಯೂ, ವಿಸ್ತಾರವಾಗಿಯೂ, ಹೂಬಿಟ್ಟಿರುವುದಾಗಿಯೂ, ಮನೋಹರವಾಗಿಯೂ, ಸುವಾಸನೆಯುಳ್ಳದ್ದಾಗಿಯೂ, ಉತ್ತಮವಾಗಿಯೂ, ದೇವತೆಗಳಿಗೂ ದುರ್ಲಭವಾದುದಾಗಿಯೂ, ಅದ್ಭುತವಾಗಿಯೂ ಇರುವ ಸಾಲವೃಕ್ಷವೊಂದನ್ನು ಕಂಡು, ಅತಿಶುಭದರ್ಶನವುಳ್ಳಅದನ್ನು ಮತ್ತೆ ಮತ್ತೆ ನೋಡಿದನು.

೫. ಆ ಮಹಾಸಾಲವೃಕ್ಷವನ್ನು ನೋಡಿಯೂ ಆಯಾಸಗೊಂಡ ಆ ಮಹರ್ಷಿಯು ಬಳಿಕ ನನ್ನನ್ನು ನೋಡಲು ಇಚ್ಛೆಯುಳ್ಳವನಾಗಿ ಅಲ್ಲಿ ವಿಶ್ರಾಂತಿಗೊಂಡನು.

೬. ಆ ಸಾಲವೃಕ್ಷದ ಪೂರ್ವಭಾಗದಲ್ಲಿ ಪಶ್ಚಿಮಾಭಿಮುಖವಾಗಿ ನಿಂತಿದ್ದ ಆ ಮುನಿಯು ನನ್ನ ಮಾಯೆಯಿಂದ ಮೂಢಾತ್ಮನಾದುದರಿಂದ ಒಡನೆಯೇ ನನ್ನನ್ನು ನೋಡಲು ಶಕ್ತನಾಗಲಿಲ್ಲ.

೭. ಸುಂದರೀ, ಬಳಿಕ ವೈಶಾಖಮಾಸದ ದ್ವಾದಶಿಯದಿನ ಆ ಸಾಲವೃಕ್ಷದ ಪೂರ್ವಭಾಗದಲ್ಲಿ ಅವನು ನನ್ನ ದರ್ಶನವನ್ನು ಪಡೆದನು.

ದೃಷ್ಟ್ವಾ ಮಾಂ ತತ್ರ ಸ ಮುನಿಸ್ತಪಸ್ವೀ ಸಂಶಿತವ್ರತಃ ।
ತುಷ್ಟಾವ ವೈದಿಕೈಃ ಸೂಕ್ತೈಃ ಪ್ರಣಮ್ಯ ಚ ಪುನಃ ಪುನಃ ॥ ೮ ॥

ಮತ್ತೇಜಸಾ ತಾಡಿತಾಕ್ಷಃ ಶನೈರುನ್ಮೀಲ್ಯ ಲೋಚನೇ ।
ಯಾವತ್ಪಶ್ಯತಿ ಮಾಂ ತತ್ರ ಸ್ತುವನ್ಸ ತಪಸಾನ್ವಿತಃ ॥ ೯ ॥

ವೃಕ್ಷಸ್ಯ ದಕ್ಷಿಣೇ ಪಾರ್ಶ್ವೇ ಗತಸ್ತಾವದಹಂಧರೇ ।
ಪೂರ್ವಸ್ಥಾನಂ ಪರಿತ್ಯಜ್ಯ ಸ ಋಷಿಃ ಸಂಶಿತವ್ರತಃ ॥ ೧೦ ॥

ಸ್ಥಿತ್ವಾ ಮತ್ಪ್ರಮುಖೇ ಚೈವ ಸ್ತುವನ್ನೇವಂ ಮಮ ಪ್ರಿಯಂ ।
ತತೋಽಹಂ ಸ್ತೂಯಮಾನೋ ವೈ ಋಗ್ವೇದಸ್ಯೈವ ಋಗ್ಗತೈಃ ॥ ೧೧ ॥

ಸ್ತೋತ್ರೈಃ ಸಂಪೂಜ್ಯಮಾನೋ ಹಿ ಗತೋಽಹಂ ಪಶ್ಚಿಮಾಂ ದಿಶಂ ।
ತತಃ ಪಶ್ಚಿಮಪಾರ್ಶ್ವೇ ತು ಸ್ಥಿತಸ್ತತ್ರೈವ ಮಾಧವಿ ॥ ೧೨ ॥

---

೮. ಉಗ್ರವತಿಯೂ ತಪಸ್ವಿಯೂ ಆದ ಆ ಮುನಿಯು ಅಲ್ಲಿ ನನ್ನನ್ನು ಕಂಡು ಮತ್ತೆ ಮತ್ತೆ ಹಲವುಬಾರಿ ಪ್ರಣಾಮಮಾಡಿ, ವೇದದ ಸೂಕ್ತಗಳಿಂದ ಸ್ತೋತ್ರಮಾಡಿದನು.

೯–೧೨. ತಪಸ್ವಿಯಾದ ಆತನು ಅಲ್ಲಿ ನನ್ನನ್ನು ಸ್ತುತಿಸುತ್ತ ನನ್ನ ತೇಜಸ್ಸಿನಿಂದ ಕಣ್ಣನ್ನು ಮುಚ್ಚಿ ಮತ್ತೆ ಮೆಲ್ಲಗೆ ಕಣ್ಣನ್ನು ಬಿಟ್ಟು ನೋಡು ವಷ್ಟರಲ್ಲಿ ನಾನು ಆ ಮರದ ದಕ್ಷಿಣಪಾರ್ಶ್ವಕ್ಕೆ ಹೋಗಿದ್ದೆನು. ಧರೇ, ತೀಕ್ಷ್ಣವ್ರತಿಯಾದ ಆ ಋಷಿ ಮೊದಲಿದ್ದೆಡೆಯನ್ನು ಬಿಟ್ಟು ನನ್ನೆದುರಿಗೇ ನಿಂತು ನನಗೆ ಪ್ರಿಯವಾಗಿ ಋಗ್ವೇದದಲ್ಲಿರುವ ಸ್ತೋತ್ರಗಳಿಂದ ಸ್ತುತಿಸಿ ಪೂಜಿಸಿದನು. ಮಾಧವಿ, ಬಳಿಕ ನಾನು ಆ ವೃಕ್ಷದ ಪಶ್ಚಿಮದ ಕಡೆಗೆ ಹೋಗಿ ಅಲ್ಲೇ ನಿಂತೆನು.

ಯಜುರ್ವೇದೋಕ್ತಮಂತ್ರೇಣ ಸಂಸ್ತುತಃ ಪಶ್ಚಿಮಾಂ ಗತಃ ।
ಸ್ತುವತೀತ್ಥಂ ಮುನೌ ದೇವಿ ಗತೋಽಹಂ ಚೋತ್ತರಾಂ ದಿಶಂ ॥ ೧೩ ॥

ತತ್ರಾಪಿ ಸಾಮವೇದೋಕ್ತೈಃ ಮಂತ್ರೈಸ್ತುಷ್ಟಾವ ಮಾಂ ಮುನಿಃ ।
ತತೋಽಹಂ ಸ್ತೂಯಮಾನೋ ವೈ ಋಷಿಮುಖ್ಯೇನ ಸುಂದರಿ ॥ ೧೪ ॥

ಪ್ರಾಪ್ತಶ್ಚ ಪರಮಾಂ ಪ್ರೀತಿಂ ತಮವೋಚಮೃಷಿಂ ತದಾ ।
ಸಾಧು ಬ್ರಹ್ಮನ್ಮಹಾಭಾಗ ಸಾಲಂಕಾಯನ ಸತ್ತಮ ॥ ೧೫ ॥

ತಪಸಾನೇನ ಸಂತುಷ್ಟಃ ಸ್ತುತ್ಯಾ ಚೈವಾನಯಾ ತವ ।
ವರಂ ವರಯ ಭದ್ರಂ ತೇ ಸಂಸಿದ್ಧಸ್ತಪಸಾ ಭವಾನ್ ॥ ೧೬ ॥

ಏವಮುಕ್ತಃ ಸ ತು ಮಯಾ ಸಾಲಂಗಾಯನಕೋ ಮುನಿಃ ।
ಸಾಲವೃಕ್ಷಂ ಸಮಾಶ್ರಿತ್ಯ ನಿಭೃತೇನಾಂತರಾತ್ಮನಾ ॥ ೧೭ ॥

---

೧೩. ದೇವಿ, ಪಶ್ಚಿಮಕ್ಕೆ ಹೋದ ನಾನು ಯಜುರ್ವೇದೋಕ್ತ ಮಂತ್ರದಿಂದ ಆ ಋಷಿಯು ನನ್ನನ್ನು ಸ್ತುತಿಸಲು ಬಳಿಕ ನಾನು ಆ ವೃಕ್ಷದ ಉತ್ತರದಿಕ್ಕಿಗೆ ಹೋದೆನು.

೧೪–೧೬. ಸುಂದರಿ, ಸಾಲಂಕಾಯನ ಮುನಿಯು ಅಲ್ಲೂ ಸಾಮವೇದೋಕ್ತ ಮಂತ್ರಗಳಿಂದ ನನ್ನನ್ನು ಸ್ತುತಿಸಿದನು. ಬಳಿಕ ನಾನು ಅದರಿಂದ ಪರಮ ಪ್ರೀತನಾಗಿ ಆ ಋಷಿಯನ್ನು ಕುರಿತು, “ಒಳ್ಳೆಯದಾಯಿತು, ಅತಿ ಪುಣ್ಯಶಾಲಿಯಾದ ಬ್ರಾಹ್ಮಣಾ, ಸತ್ಪುರುಷೋತ್ತಮನಾದ ಸಾಲಂಕಾಯನ, ಈ ನಿನ್ನ ತಪಸ್ಸಿನಿಂದಲೂ ಸ್ತುತಿಯಿಂದಲೂ ಸಂತುಷ್ಟನಾಗಿದ್ದೇನೆ. ನೀನು ತಪಸ್ಸಿನ ಸಿದ್ಧಿಯನ್ನು ಪಡೆದಿದ್ದೀಯೆ. ವರವನ್ನು ಬೇಡು. ನಿನಗೆ ಮಂಗಳವಾಗಲಿ.” ಎಂದು ಹೇಳಿದೆನು.

೧೭–೧೯. ನನ್ನಿಂದ ಹಾಗೆ ಹೇಳಿಸಿಕೊಂಡ ಆ ಸಾಲಂಕಾಯನ ಮುನಿ ಆ ಸಾಲವೃಕ್ಷವನ್ನೇ ಆಶ್ರಯಿಸಿ ಪೂರ್ಣಮನಸ್ಸಿನಿಂದ “ಹರೀ, ನಿನ್ನ

ತತೋ ಮಾಂ ಭಾಷತೇ ದೇವಿ ಸ ಋಷಿಃ ಸಂಶಿತವ್ರತಃ ।
ತವೈವಾರಾಧನಾರ್ಥಾಯ ತಪಸ್ತಪ್ತಂ ಮಯಾ ಹರೇ ॥ ೧೮ ॥

ಪರ್ಯಟಾಮಿ ಮಹೀಂ ಸರ್ವಾಂ ಸಶೈಲವನಕಾನನಾಂ ।
ಇದಾನೀಂ ಖಲು ದೃಷ್ಟೋಽಸಿ ಚಕ್ರಪಾಣೇ ಮಹಾಪ್ರಭೋ ॥ ೧೯ ॥

ಯದಿ ತುಷ್ಟೋಽಸಿ ಮೇ ದೇವ ಸರ್ವಶಾಂತಿಕರಃ ಪರಃ ।
ಯದಿ ದೇಯೋ ವರೋ ಮಹ್ಯಂ ತಪಸಾರಾಧಿತೇನ ಚ ॥ ೨೦ ॥

ತದಾ ದೇಹಿ ಜಗನ್ನಾಥ ಮಮೇಶ್ವರಸಮಂ ಸುತಂ ।
ಏಷ ಏವ ವರೋ ಮಹ್ಯಂ ದೀಯತಾಂ ಮಧುಸೂದನ ॥ ೨೧ ॥

ಏವಂ ವರಂ ಯಾಚಿತೋಽಸ್ಮಿ ಮುನಿನಾ ಭೀಮಕರ್ಮಣಾ ।
ಪುತ್ರಕಾಮೇನ ವಿಪ್ರೇಣ ದೀರ್ಘಕಾಲಂ ತಪಸ್ಯತಾ ॥ ೨೨ ॥

ಸಂತೋಷಕ್ಕಾಗಿಯೇ ನಾನು ತಪಸ್ಸನ್ನು ಮಾಡಿದೆನು. ಚಕ್ರಪಾಣೀ, ಮಹಾಪ್ರಭೂ, ನಿನ್ನನ್ನು ಅರಸುತ್ತ ಪರ್ವತ ವನ ಮಹಾರಣ್ಯಗಳಿಂದ ಕೂಡಿದ ಭೂಮಿಯನ್ನೆಲ್ಲಾ ಸುತ್ತಿದೆನು. ಈಗ ನಿನ್ನ ದರ್ಶನವಾಯಿತು.

೨೦–೨೧. ದೇವ, ಸರ್ವಶಾಂತಿಕರನೂ, ಪರಮಾತ್ಮನೂ ಆದ ನೀನು ನನ್ನ ತಪಸ್ಸಿನಿಂದ ಆರಾಧಿತನಾಗಿ ನನ್ನ ವಿಷಯದಲ್ಲಿ ಸಂತುಷ್ಟನಾಗಿ ಒಲಿದು, ನನಗೆ ವರವನ್ನು ಕೊಡಬೇಕಾಗಿದ್ದರೆ, ಜಗನ್ನಾಥ, ನನಗೆ ಈಶ್ವರನಿಗೆ ಸಮಾನನಾದ ಮಗನನ್ನು ಕೊಡು. ಮಧುಸೂದನ, ಈ ವರವನ್ನು ನನಗೆ ಕೊಡು" ಎಂದನು.

೨೨. ಬಹುಕಾಲ ತಪಸ್ಸನ್ನು ಮಾಡುತ್ತಿದ್ದ ಭೀಮಕರ್ಮನೂ ಪುತ್ರಕಾಮನೂ ಆದ ಆ ಬ್ರಾಹ್ಮಣನು ನನ್ನಲ್ಲಿ ಹೀಗೆ ವರವನ್ನು ಬೇಡಿದನು.

ಏವಂ ತಸ್ಯ ವಚಃ ಶ್ರುತ್ವಾ ಬ್ರಾಹ್ಮಣಸ್ಯ ತಪಸ್ವಿನಃ ।
ಮಧುರಾಂ ಗಿರಮಾದಾಯ ಪ್ರತ್ಯುವೋಚಮೃಷಿಂ ಪ್ರತಿ ॥ ೨೩ ॥

ಚಿರಕಾಲಂ ವ್ರತಸ್ಥೇನ ಯತ್ತ್ವಯಾ ಚಿಂತಿತಂ ಮುನೇ ।
ಸ ಕಾಮಸ್ತವ ಸಂಜಾತಃ ಸಿದ್ಧೋಽಸಿ ತಪಸಾ ಭವಾನ್ ॥ ೨೪ ॥

ಈಶ್ವರಸ್ಯ ಪರಾ ಮೂರ್ತಿರ್ನಾಮ್ನಾ ವೈ ನಂದಿಕೇಶ್ವರಃ ।
ತ್ವದ್ದಕ್ಷಿಣಾಂಗಾದುದ್ಭೂತಃ ಪುತ್ರಸ್ತವ ಮುನೀಶ್ವರ ॥ ೨೫ ॥

ಸಂಹರಸ್ವ ತಪೋಽಬ್ರಹ್ಮನ್ ಶಾಂತಿಂ ಗಚ್ಛ ಮಹಾಮುನೇ ।
ಅಥ ಚೈತಸ್ಯ ಜಾತಸ್ಯ ಕಲ್ಪಾ ವೈ ಸಪ್ತ ಸಪ್ತ ಚ ॥ ೨೬ ॥

ತ್ವಂ ನ ಜಾನಾಸಿ ವಿಪ್ರರ್ಷೇ ಸ ಜಾತೋ ನಂದಿಕೇಶ್ವರಃ ।
ಮಾಯಾ ಯೋಗಬಲೋಪೇತೋ ಗೋವ್ರಜಂ ಸ ಮಯಾ ಸ್ಥಿತಃ॥ ೨೭ ॥

೨೩–೨೫. ತಪಸ್ವಿಯಾದ ಆ ಬ್ರಾಹ್ಮಣನ ಆ ಬಗೆಯ ಮಾತನ್ನು ಕೇಳಿ, ನಾನು ಇಂಪಾದ ಮಾತಿನಿಂದ ಆತನಿಗೆ "ಮುನಿಯೇ, ಬಹು ಕಾಲದಿಂದ ವ್ರತದಲ್ಲಿದ್ದ ನೀನು ಯಾವುದನ್ನು ಬಯಸಿದೆಯೋ ಆ ನಿನ್ನ ಇಷ್ಟಾರ್ಥವು ನೆರವೇರಿದೆ. ನೀನು ತಪಸ್ಸಿನಿಂದ ಸಿದ್ಧಿಯನ್ನು ಪಡೆದಿದ್ದೀಯೆ. ಮುನೀಶ್ವರನೇ, ಈಶ್ವರನ ಉತ್ತಮಮೂರ್ತಿಯಾದ ನಂದಿಕೇಶ್ವರನು ನಿನ್ನ ಬಲಭಾಗದ ಅಂಗದಿಂದ ನಿನಗೆ ಪುತ್ರನಾಗಿ ಜನಿಸಿದ್ದಾನೆ.

೨೬–೨೮. ಮಹಾಮುನಿಯೇ, ಬ್ರಹ್ಮನೇ, ತಪಸ್ಸನ್ನು ನಿಲ್ಲಿಸು. ಶಾಂತಿಯನ್ನು ಪಡೆ. ನಿನ್ನ ಮಗನು ಜನಿಸಿ ಹದಿನಾಲ್ಕು ಕಲ್ಪಗಳಾದುವು. ಬ್ರಹ್ಮರ್ಷಿಯೇ, ನಿನಗೆ ತಿಳಿಯದು. ಮಾಯಾಯೋಗಬಲದಿಂದ ಕೂಡಿ ನಿನಗೆ ಮಗನಾಗಿ ಜನಿಸಿದ ಆ ನಂದಿಕೇಶ್ವರನು ಆಮುಷ್ಯಾಯಣನೆಂಬ ನಿನ್ನ

ಮಥುರಾಯಾಃ ಸಮಾಸೀಯ ಆಮುಷ್ಯಾಯಣಸಂಜ್ಞಿತಂ ।
ತವ ಶಿಷ್ಯಂ ಪುರಸ್ಕೃತ್ಯ ಶೂಲಪಾಣಿರವಸ್ಥಿತಃ ॥ ೨೮ ॥

ತತ್ರಾಶ್ರಮೇ ಮಹಾಭಾಗ ಸ್ಥಿತ್ವಾ ತ್ವಂ ತಪಸಾಂನಿಧೇ ।
ಪುತ್ರೇಣ ಪರಮಪ್ರೀತೋ ಮತ್ಕ್ಷೇತ್ರೇಸ್ಮತ್ಸಮೋಭವ ॥ ೨೯ ॥

ಅನ್ಯಚ್ಚ ಗುಹ್ಯಂ ವಕ್ಷ್ಯಾಮಿ ಸಾಲಂಕಾಯನ ತತ್ ಶೃಣು ।
ತವ ಪ್ರೀತ್ಯಾ ಪ್ರವಕ್ಷ್ಯಾಮಿ ಯೇನೈತತ್ ಕ್ಷೇತ್ರಮುತ್ತಮಂ ॥ ೩೦ ॥

ಸಾಲಗ್ರಾಮಮಿತಿ ಖ್ಯಾತಂ ತನ್ನಿಬೋಧ ಮುನೇ ಶುಭಂ ।
ಯೋಯಂ ವೃಕ್ಷಸ್ತ್ವಯಾ ದೃಷ್ಟಃ ಸೋಹಮೇವ ನ ಸಂಶಯಃ ॥ ೩೧ ॥

ಏತತ್ಕೋಪಿ ನ ಜಾನಾತಿ ವಿನಾ ದೇವಂ ಮಹೇಶ್ವರಂ ।
ಮಾಯಯಾಹಂ ನಿಗೂಢೋಸ್ಮಿ ತ್ವತ್ಪ್ರಸಾದಾತ್ಪ್ರಕಾಶಿತಃ ॥ ೩೨ ॥

ಶಿಷ್ಯನನ್ನು ಮುಂದೆ ಬಿಟ್ಟುಕೊಂಡು ಗೋವುಗಳ ಮಂದೆಯನ್ನು ಮಥುರೆಯಿಂದ ಇಲ್ಲಿಗೆ ತಂದು, ಶೂಲಪಾಣಿಯಾಗಿ ಆ ಗೋವುಗಳ ಸಮೀಪದಲ್ಲಿದ್ದಾನೆ.

೨೯. ತಪೋನಿಧೀ, ಮಹಾಭಾಗ್ಯನೇ, ನನ್ನ ಕ್ಷೇತ್ರವಾದ ನಿನ್ನ ಆಶ್ರಮದಲ್ಲಿ ನಿನ್ನ ಪುತ್ರನೊಡನೆ ಪರಮ ಸಂತೋಷದಿಂದ ಇದ್ದು ನನಗೆ ಸಮಾನನಾಗು.

೩೦-೩೨. ಸಾಲಂಕಾಯನ, ನಿನ್ನಲ್ಲಿ ಪ್ರೀತಿಯಿಂದ ಬೇರೊಂದು ರಹಸ್ಯವನ್ನು ಹೇಳುತ್ತೇನೆ. ಅದನ್ನು ಕೇಳು. ಮುನಿಯೇ, ಶುಭವಾದ ಈ ಉತ್ತಮ ಕ್ಷೇತ್ರವು ಸಾಲಗ್ರಾಮವೆಂದು ಏಕೆ ಪ್ರಸಿದ್ಧವಾಯಿತೋ ಅದನ್ನು ತಿಳಿದುಕೊ. ನೀನು ನೋಡಿದ ಆ ಮರವು ನಾನೇ. ಸಂಶಯವಿಲ್ಲ ಆದರೆ ಈ ವಿಚಾರವನ್ನು ದೇವನಾದ ಮಹೇಶ್ವರನು ಹೊರತು ಬೇರಾವನೂ ಅರಿಯನು. ಮಾಯೆಯಿಂದ ನಾನು ಬಹು ಗೂಢನಾಗಿದ್ದೇನೆ. ನಿನಗೆ ಅನುಗ್ರಹದಿಂದ ಕಾಣಿಸಿದೆನು" ಎಂದು ಹೇಳಿದೆನು.

ಏವಂ ತಸ್ಮೈ ವರಂ ದತ್ವಾ ಸಾಲಂಕಾಯನಕಾಯ ವೈ ।
ಪಶ್ಯತಸ್ತಸ್ಯ ವಸುಧೇ ತತ್ರೈವಾಂತರ್ಹಿತೋಽಭವಂ ॥ ೩೩ ॥

ವೃಕ್ಷಂ ದಕ್ಷಿಣತಃ ಕೃತ್ವಾ ಜಗಾಮ ಸ್ವಾ ಶ್ರಮಂ ಮುನಿಃ ॥ ೩೪ ॥

ಮಮ ತದ್ರೋಚತೇ ಸ್ಥಾನಂ ಗಿರಿಕೂಟಶಿಲೋಚ್ಚಯೇ ।
ಸಾಲಗ್ರಾಮ ಇತಿ ಖ್ಯಾತಂ ಭಕ್ತಸಂಸಾರಮೋಕ್ಷಣಂ ॥ ೩೫ ॥

ತತ್ರ ಗುಹ್ಯಾನಿ ಮೇ ಭೂಮೇ ವಕ್ಷ್ಯಮಾಣಾನಿ ಮೇ ಶೃಣು ।
ತರಂತಿ ಮನುಜಾ ಯೇಭ್ಯೋ ಘೋರಂ ಸಂಸಾರಸಾಗರಂ ॥ ೩೬ ॥

ಗುಹ್ಯಾನಿ ತತ್ರ ವಸುಧೇ ತೀರ್ಥಾನಿ ದಶ ಪಂಚ ಚ ।
ನಾದ್ಯಾಪಿ ಕಿಂಚಿಜ್ಜಾನಂತಿ ಮುಚ್ಯಂತೇ ಯೈರಿಹಸ್ಥಿತಾಃ ॥ ೩೭ ॥

೩೩-೩೪. ಭೂದೇವಿ, ಆ ಸಾಲಂಕಾಯನನಿಗೆ ಹಾಗೆ ವರವನ್ನು ಕೊಟ್ಟು ಅವನು ನೋಡುತ್ತಿದ್ದ ಹಾಗೆಯೇ ಅಲ್ಲೇ ಕಣ್ಮರೆಯಾದೆನು. ಆ ಸಾಲವೃಕ್ಷವನ್ನು ಪ್ರದಕ್ಷಿಣಮಾಡಿ, ಆ ಮುನಿಯು ತನ್ನ ಆಶ್ರಮಕ್ಕೆ ಹೊರಟುಹೋದನು.

೩೫. ಪರ್ವತದಲ್ಲಿ, ಸಾಲಗ್ರಾಮವೆಂದು ಪ್ರಸಿದ್ಧವಾಗಿ ಭಕ್ತಸಂಸಾರ ವಿಮೋಚಕವಾಗಿರುವ ಆ ಸ್ಥಾನವು ನನಗೆ ಇಷ್ಟವಾಗಿದೆ.

೩೬-೩೭. ಭೂಮಿ, ಮನುಷ್ಯರು ಯಾವುಗಳಿಂದ ಘೋರವಾದ ಸಂಸಾರ ಸಾಗರವನ್ನು ದಾಟುವರೋ, ಅಂತಹ ನಾನು ಹೇಳುವ ಅಲ್ಲಿರುವ ರಹಸ್ಯಗಳನ್ನು ಕೇಳು. ಇಹಲೋಕದಲ್ಲಿರುವವರನ್ನು ಮುಕ್ತರನ್ನಾಗಿ ಮಾಡುವ ರಹಸ್ಯವಾದ ತೀರ್ಥಗಳಲ್ಲಿ ಹದಿನೈದು ಆ ಕ್ಷೇತ್ರದಲ್ಲಿವೆ. ಇದುವರಿಗೂ ಒಂದನ್ನೂ ಯಾರೂ ಅರಿಯರು.

ತತ್ರ ಬಿಲ್ವಪ್ರಭಂ ನಾಮ ಗುಹ್ಯಂ ಕ್ಷೇತ್ರಂ ಮಮ ಪ್ರಿಯಂ ।
ಕುಂಜಾನಿ ತತ್ರ ಚತ್ವಾರಿ ಕ್ರೋಶಮಾತ್ರೇ ಯಶಸ್ವಿನಿ ॥ ೩೮ ॥

ಹೃದ್ಯಂ ತತ್ಪರಮಂ ಗುಹ್ಯಂ ಭಕ್ತಕರ್ಮಸುಖಾವಹಂ ।
ತತ್ರ ಸ್ನಾನಂ ತು ಕುರ್ವೀತ ಅಹೋರಾತ್ರೋಷಿತೋ ನರಃ ।
ಚತುರ್ಣಾಮಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ ॥ ೩೯ ॥

ಅಥಾತ್ರ ಮುಂಚತೇ ಪ್ರಾಣಾನ್ಮಮ ಕರ್ಮಸು ನಿಷ್ಠಿತಃ ।
ಅಶ್ವಮೇಧಫಲಂ ಭುಕ್ತ್ವಾ ಮಮ ಲೋಕೇ ಸ ಮೋದತೇ ॥ ೪೦ ॥

ಚಕ್ರಸ್ವಾಮೀತಿ ವಿಖ್ಯಾತಂ ತಸ್ಮಿನ್ ಕ್ಷೇತ್ರೇ ಪರಂ ಮಮ ।
ಚಕ್ರಾಂಕಿತಶಿಲಾಸ್ತತ್ರ ದೃಶ್ಯಂತೇ ಚ ಇತಸ್ತತಃ ॥ ೪೧ ॥

ಚಕ್ರಾಂಕಿತ ಶಿಲಾಯತ್ರ ತಿಷ್ಠಂತಿ ವರವರ್ಣಿನಿ ।
ತದೇತದ್ವಿದ್ಧಿ ವಸುಧೇ ಸಮಂತಾದ್ಯೋಜನತ್ರಯಂ ॥ ೪೨ ॥

೩೮–೩೯. ಕೀರ್ತಿವಂತೇ, ಅಲ್ಲಿರುವ ಬಿಲ್ವಪ್ರಭವೆಂಬ ರಹಸ್ಯಕ್ಷೇತ್ರವು ನನಗೆ ಪ್ರಿಯವಾದುದು. ಅಲ್ಲಿ ಒಂದು ಹರಿದಾರಿಯುಳತೆಯಲ್ಲಿ ನಾಲ್ಕು (ಲತಾಗೃಹ) ಬಳ್ಳಿಯ ಮನೆಗಳಿವೆ ಭಕ್ತಕರ್ಮಸುಖಾವಹವಾದ ಆ ರಹಸ್ಯ ಸ್ಥಾನವು ಅತಿ ಮನೋಹರವಾದುದು. ಅಲ್ಲಿ ಒಂದುದಿನವಿದ್ದು ತೀರ್ಥದಲ್ಲಿ ಸ್ನಾನಮಾಡುವವನು ಅಶ್ವಮೇಧಗಳ ಫಲವನ್ನು ಪಡೆಯುವನು.

೪೦. ಅಶ್ವಮೇಧಫಲವನ್ನು ಅನುಭವಿಸಿ ನನ್ನ ಕರ್ಮದಲ್ಲಿ ನಿಷ್ಠನಾಗಿದ್ದು ಬಳಿಕ ಆ ಬಿಲ್ವಪ್ರಭ ತೀರ್ಥದಲ್ಲಿ ಪ್ರಾಣಬಿಟ್ಟರೆ ಅವನು ನನ್ನಲೋಕದಲ್ಲಿ ಆನಂದಪಡುವನು.

೪೧–೪೨. ಆ ಕ್ಷೇತ್ರದಲ್ಲಿ ಚಕ್ರ ಸ್ವಾಮಿಯೆಂದು ಪ್ರಸಿದ್ಧವಾದ ನನ್ನ ಸ್ಥಾನವೊಂದಿದೆ. ಅಲ್ಲಿ ಅತ್ತಿತ್ತ ಚಕ್ರದ ಗುರುತುಗಳುಳ್ಳ ಕಲ್ಲುಗಳು ಕಾಣಿಸುತ್ತವೆ. ಉತ್ತಮೆ, ಅಲ್ಲಿರುವ ಚಕ್ರಚಿಹ್ನೆಯ ಕಲ್ಲುಗಳನ್ನು ನೋಡಿ ಅದೇ ಆ ಕ್ಷೇತ್ರವೆಂದರಿ. ಅದು ಸುತ್ತ ಮೂರುಯೋಜನ ಅಳತೆಯದಾಗಿದೆ.

ತತ್ರ ಸ್ನಾನಂ ತು ಕುರ್ವೀತ ತ್ರಿರಾತ್ರೋಪೋಷಿತೋ ನರಃ ।
ತ್ರಯಾಣಾಮಪಿ ಯಜ್ಞಾನಾಂ ಫಲಂ ಪ್ರಾಪ್ನೋತಿ ನಿಶ್ಚಿತಂ ॥ ೪೩ ॥

ಅಥಾತ್ರ ಮುಂಚತೇ ಪ್ರಾಣಾನ್ಮಮ ಕರ್ಮಪರಾಯಣಃ ।
ವಾಜಪೇಯಫಲಂ ಭುಕ್ತ್ವಾ ಮಮ ಲೋಕಂ ಚ ಗಚ್ಛತಿ ॥ ೪೪ ॥

ತತ್ರ ವಿಷ್ಣುಪದಂ ನಾಮ ಕ್ಷೇತ್ರಂ ಗುಹ್ಯಂ ಪರಂ ಮಮ ।
ತಿಸ್ರೋ ಧಾರಾಃ ಪತಂತ್ಯತ್ರ ಹಿಮಕೂಟಂ ಸಮಾಶ್ರಿತಾಃ ॥ ೪೫ ॥

ತತ್ರ ಸ್ನಾನಂ ತು ಕುರ್ವೀತ ತ್ರಿರಾತ್ರೋಪೋಷಿತೋ ನರಃ ।
ತ್ರಯಾಣಾಮಪಿ ರಾತ್ರೀಣಾಂ ಫಲಂ ಪ್ರಾಪ್ನೋತಿ ನಿಷ್ಕಲಂ ॥ ೪೬ ॥

ತಚ್ಛೈವ ಮುಂಚತೇ ಪ್ರಾಣಾನ್ಮುಕ್ತಸಂಗೋ ಗತಕ್ಲಮಃ ।
ಅತಿರಾತ್ರಫಲಂ ಭುಕ್ತ್ವಾ ಮಮ ಲೋಕೇ ಮಹೀಯತೇ ॥ ೪೭ ॥

ಅಲ್ಲಿ ಮೂರುರಾತ್ರಿ ಉಪವಾಸವಿದ್ದು ಆ ತೀರ್ಥದಲ್ಲಿ ಸ್ನಾನವನ್ನು ಮಾಡುವವನು ನಿಜವಾಗಿಯೂ ಮೂರು ಯಜ್ಞಗಳ ಫಲವನ್ನು ಪಡೆಯುವನು.

೪೪. ನನ್ನ ಕರ್ಮಗಳಲ್ಲಿ ನಿರತನಾಗಿದ್ದು ಬಳಿಕ ಅಲ್ಲಿ ಪ್ರಾಣಬಿಡುವವನು ವಾಜಪೇಯಯಜ್ಞದ ಫಲವನ್ನು ಅನುಭವಿಸಿ ನನ್ನ ಲೋಕವನ್ನು ಸೇರುವನು.

೪೫–೪೬. ಅಲ್ಲಿ ವಿಷ್ಣುಪದವೆಂಬ ರಹಸ್ಯವಾದ ನನ್ನ ಉತ್ತಮಕ್ಷೇತ್ರ ವೊಂದಿದೆ. ಹಿಮಶಿಖರದಿಂದ ಅಲ್ಲಿ ಮೂರು ಧಾರೆಗಳು ಬೀಳುತ್ತವೆ. ಅಲ್ಲಿ ಮೂರುರಾತ್ರೆ ಉಪವಾಸವಿದ್ದು ಸ್ನಾನಮಾಡುವವನು ಮೂರು ರಾತ್ರಿಗಳ ಫಲವನ್ನೂ ಪೂರ್ತಿಯಾಗಿ ಪಡೆಯುವನು.

೪೭. ಹಾಗೆಯೇ ಅಲ್ಲಿ ಪ್ರಾಣಬಿಡುವವನು ಅತಿರಾತ್ರಫಲವನ್ನು ಅನುಭವಿಸಿ ಮುಕ್ತಸಂಗನೂ ಗತಶ್ರಮನೂ ಆಗಿ, ನನ್ನ ಲೋಕದಲ್ಲಿ ನೆಲಸುವನು.

ತತ್ರ ಕಾಲೀಹ್ರದಂ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಅತ್ರ ಚೈವ ಹ್ರದಸ್ರೋತೋ ಬದರೀವೃಕ್ಷನಿಸ್ಸೃತಃ ॥ ೪೮ ॥

ತತ್ರ ಸ್ನಾನಂ ತು ಕುರ್ವೀತ ಷಷ್ಠಿಕಾಲೋಷಿತೋ ನರಃ ।
ನರಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೪೯ ॥

ಅಥಾತ್ರ ಮುಂಚತೇ ಪ್ರಾಣಾನ್ಮುಕ್ತರಾಗೋ ಗತಕ್ಲಮಃ ।
ನರಮೇಧಫಲಂ ಭುಕ್ತ್ವಾ ಮಮ ಲೋಕೇ ಚ ಮೋದತೇ ॥ ೫೦ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಮಹಾಶ್ಚರ್ಯಂ ವಸುಂಧರೇ ॥ ೫೧ ॥

ತತ್ರ ಶಂಖಪ್ರಭಂ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಶ್ರೂಯತೇ ಶಂಖಶಬ್ದಶ್ಚ ದ್ವಾದಶ್ಯಾಮರ್ಧರಾತ್ರಕೇ ॥ ೫೨ ॥

---

೪೮. ಅಲ್ಲೇ ಕಾಲೀಹ್ರದವೆಂಬ ನನ್ನ ಉತ್ತಮವಾದ ರಹಸ್ಯಕ್ಷೇತ್ರವೊಂದಿದೆ. ಅಲ್ಲಿ ಮಡುವಿಗೆ ಬರುವ ಪ್ರವಾಹವು ಬದರೀವೃಕ್ಷದಿಂದ ಉದ್ಭವಿಸುವುದು.

೪೯. ಅಲ್ಲಿ ಅರವತ್ತು ಘಳಿಗೆಕಾಲ ವಾಸಮಾಡಿ ಸ್ನಾನಮಾಡುವವನು ನರಮೇಧ ಯಜ್ಞದ ಫಲವನ್ನು ಪಡೆಯುವನು.

೫೦. ನರಮೇಧ ಫಲವನ್ನು ಅನುಭವಿಸಿ ಅಲ್ಲಿ ಪ್ರಾಣಬಿಡುವವನು ಈ ಲೋಕದ ಅನುರಾಗಶ್ರಮಗಳನ್ನು ಕಳೆದುಕೊಂಡು ನನ್ನ ಲೋಕದಲ್ಲಿ ಆನಂದ ಪಡುವನು.

೫೧–೫೨. ವಸುಂಧರೇ, ನಿನಗೆ ಬೇರೊಂದು ಆ ಆತ್ಯಾಶ್ಚರ್ಯವನ್ನು ಹೇಳುತ್ತೇನೆ. ಅಲ್ಲಿ ಶಂಖಪ್ರಭವೆಂಬ ರಹಸ್ಯವೂ ಉತ್ತಮವೂ ಆದ ನನ್ನ ಕ್ಷೇತ್ರವಿದೆ. ಆ ಕ್ಷೇತ್ರದಲ್ಲಿ ದ್ವಾದಶಿಯ ದಿನ ಅರ್ಧರಾತ್ರಿಯಲ್ಲಿ ಶಂಖದ ಧ್ವನಿ ಕೇಳಿಸುತ್ತದೆ.

ಗದಾಕುಂಡಮಿತಿ ಖ್ಯಾತಂ ತಸ್ಮಿನ್ ಕ್ಷೇತ್ರೇ ಪರಂ ಮಮ ।
ಯತ್ರ ವೈಕಂಪತೇ ಸ್ರೋತೋ ದಕ್ಷಿಣಾನ್ದಿಶಮಾಶ್ರಿತಂ ॥ ೫೩ ॥

ತತ್ರ ಸ್ನಾನಂ ತು ಕುರ್ವೀತ ತ್ರಿರಾತ್ರೋಪೋಷಿತೋನರಃ ।
ವೇದಾಂತಗಾನಾಂ ವಿಪ್ರಾಣಾಂ ಫಲಂ ಪ್ರಾಪ್ನೋತಿ ಮಾನವಃ ॥ ೫೪ ॥

ಅಥ ವೈ ಮುಂಚತೇ ಪ್ರಾಣಾನ್ ಕೃತಕೃತ್ಯೋ ಗುಣಾನ್ವಿತಃ ।
ಗದಾಪಾಣಿರ್ಮಹಾಕಾಯೋ ಮಮ ಲೋಕಂ ಪ್ರಪದ್ಯತೇ ॥ ೫೫ ॥

ಪುನಶ್ಚಾಗ್ನಿಪ್ರಭಂ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಧಾರಾ ಪತತಿ ತತ್ರೈಕಾ ಪೂರ್ವೋತ್ತರಸಮಾಶ್ರಿತಾ ॥ ೫೬ ॥

ಯಸ್ತತ್ರ ಕುರುತೇ ಸ್ನಾನಂ ಚತೂರಾತ್ರೋಷಿತೋ ನರಃ ।
ಅಗ್ನಿಷ್ಟೋಮಾತ್ಪಂಚಗುಣಂ ಫಲಂ ಪ್ರಾಪ್ನೋತಿ ಮಾನವಃ ॥ ೫೭ ॥

---

೫೩. ಆ ಕ್ಷೇತ್ರದಲ್ಲಿ ಗದಾಕುಂಡವೆಂದು ಪ್ರಸಿದ್ಧವೂ ಉತ್ತಮವೂ ಆದ ನನ್ನ ತೀರ್ಥವಿದೆ. ಅಲ್ಲಿ ದಕ್ಷಿಣದಿಕ್ಕಿಗೆ ಹರಿಯುವ ಪ್ರವಾಹವು ಕಂಪಿಸುತ್ತದೆ.

೫೪. ಮೂರುರಾತ್ರಿ ಉಪವಾಸವಿದ್ದು ಅಲ್ಲಿ ಸ್ನಾನಮಾಡುವವನು ವೇದಾಂತಜ್ಞರಾದ ಬ್ರಾಹ್ಮಣರು ಪಡೆಯುವ ಫಲವನ್ನು ಪಡೆಯುವನು.

೫೫. ಗುಣಾನ್ವಿತನೂ ಕೃತಕೃತ್ಯನೂ ಆಗಿ ಅಲ್ಲಿ ಪ್ರಾಣವನ್ನು ಬಿಟ್ಟವನು ಮಹಾದೇಹನೂ ಗದಾಪಾಣಿಯೂ ಆಗಿ ನನ್ನ ಲೋಕವನ್ನು ಸೇರುವನು.

೫೬. ಅಗ್ನಿಪ್ರಭವೆಂಬುದು ಉತ್ತಮವೂ ರಹಸ್ಯವೂ ಆದ ಮತ್ತೊಂದು ಕ್ಷೇತ್ರ. ಅಲ್ಲಿ ಈಶಾನ್ಯಕ್ಕೆ ಒಂದು ಧಾರೆಯು ಧುಮುಕುತ್ತದೆ.

೫೭. ಅಲ್ಲಿ ನಾಲ್ಕುರಾತ್ರಿ ವಾಸಮಾಡಿ ಸ್ನಾನಮಾಡುವವನು ಅಗ್ನಿಷ್ಟೋಮಯಜ್ಞದ ಐದರಷ್ಟು ಫಲವನ್ನು ಪಡೆಯುವನು.

ಅಥಾತ್ರ ಮುಂಚತೇ ಪ್ರಾಣಾನ್ ಮಮ ಕರ್ಮಸು ನಿಷ್ಠಿತಃ ।
ಅಗ್ನಿಷ್ಟೋಮಫಲಂ ಭುಕ್ತ್ವಾ ಮಮ ಲೋಕಂ ಪ್ರಪದ್ಯತೇ ॥ ೫೮ ॥

ತತ್ರಾಶ್ಚರ್ಯಂ ಮಹಾಭಾಗೇ ಕಥ್ಯಮಾನಂ ಮಯಾ ಶೃಣು ।
ಹೇಮಂತೇ ತೂಷ್ಣಮುದಕಂ ಗ್ರೀಷ್ಮೇ ಭವತಿ ಶೀತಲಂ ॥ ॥ ೫೯ ॥

ಗುಹ್ಯಂ ಸರ್ವಾಯುಧಂ ನಾಮ ತತ್ರ ಕ್ಷೇತ್ರೇ ಪರಂ ಮಮ ।
ಪತಂತಿ ಸಪ್ತ ಸ್ರೋತಾಂಸಿ ಹಿಮವನ್ನಿಸ್ಸೃತಾನಿ ವೈ ॥ ೬೦ ॥

ತತ್ರ ಸ್ನಾನಂ ಪ್ರಕುರ್ವೀತ ಸಪ್ತರಾತ್ರೋಷಿತೋನರಃ ।
ರಾಜಾ ಭವತಿ ಸ್ತ್ರಶ್ರೋಣಿ ಸರ್ವಾಯುಧಕಲಾನ್ವಿತಃ ॥ ೬೧ ॥

ಅಥ ವೈ ಮುಂಚತೇ ಪ್ರಾಣಾನ್ ಮಮ ಕರ್ಮವಿನಿಶ್ಚಿತಃ ।
ಸ ಭುಕ್ತ್ವಾ ರಾಜ್ಯಭೋಜ್ಯಾನಿ ಮಮ ಲೋಕಂ ಚ ಗಚ್ಛತಿ ॥ ೬೨ ॥

---

೫೮. ಅಲ್ಲದೆ ನನ್ನ ಕರ್ಮಗಳಲ್ಲಿ ನಿರತನಾಗಿದ್ದು ಅಲ್ಲಿ ಪ್ರಾಣ ಬಿಡುವವನು ಅಗ್ನಿಷ್ಟೋಮ ಫಲವನ್ನು ಅನುಭವಿಸಿ ಬಳಿಕ ನನ್ನ ಲೋಕವನ್ನು ಸೇರುವನು.

೫೯. ಮಹಾಭಾಗ್ಯೇ ನಾನು ಹೇಳುವ ಅಲ್ಲಿನ ಆಶ್ಚರ್ಯವನ್ನು ಕೇಳು. ಆ ಶೀರ್ಥೋದಕವು ಹಿಮಂತ ಋತುವಿನಲ್ಲಿ ಬಿಸಿಯಾಗಿಯೂ ಬೇಸಗೆಯಲ್ಲಿ ತಣ್ಣಗೂ ಇರುವುದು.

೬೦. ಆ ಕ್ಷೇತ್ರದಲ್ಲಿ ಸರ್ವಾಯುಧವೆಂಬುದು ರಹಸ್ಯವೂ ಉತ್ತಮವೂ ಆದ ಮತ್ತೊಂದು ತೀರ್ಥ, ಹಿಮವತ್ಪರ್ವತದಿಂದ ಹೊರಡುವ ಏಳು ಪ್ರವಾಹಗಳು ಅಲ್ಲಿ ಧುಮಿಕುತ್ತವೆ.

೬೧–೬೨. ಸುಂದರಿ, ಏಳುರಾತ್ರೆ ಅಲ್ಲಿ ವಾಸಮಾಡಿ ಸ್ನಾನಮಾಡುವವನು ಸರ್ವಾಯುಧ ಕಲೆಗಳನ್ನೂ ಅರಿತ ದೊರೆಯಾಗುವನು. ನನ್ನ ಕರ್ಮಗಳಲ್ಲಿ ದೃಢನಾಗಿದ್ದು ರಾಜ್ಯಭೋಗಗಳನ್ನು ಅನುಭವಿಸಿ, ಬಳಿಕ ಅಲ್ಲಿ ಪ್ರಾಣಬಿಟ್ಟು, ನನ್ನ ಲೋಕವನ್ನು ಸೇರುವನು.

ತತ್ರ ದೇವಪ್ರಭಂ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಧಾರಾಃ ಪಂಚಮುಖಾಸ್ತತ್ರ ಪತಂತಿ ಗಿರಿಸಂಶ್ರಿತಾಃ ॥ ೬೩ ॥

ತತ್ರ ಸ್ನಾನಂ ತು ಕುರ್ವೀತ ತ್ವಷ್ಟಕಾಲೋಷಿತೋ ನರಃ ।
ಚತುರ್ಣಾಮಪಿ ವೇದಾನಾಂ ಯಾತಿ ಪಾರಂ ನ ಸಂಶಯಃ ॥ ೬೪ ॥

ಅಥಾತ್ರ ಮುಂಚತೇ ಪ್ರಾಣಾನ್ ಲೋಭಮೋಹವಿವರ್ಜಿತಃ ।
ವೇದಕರ್ಮ ಸಮುತ್ಸೃಜ್ಯ ಮಮ ಲೋಕೇ ಮಹೀಯತೇ ॥ ೬೫ ॥

ಗುಹ್ಯಂ ವಿದ್ಯಾಧರಂ ನಾಮ ತತ್ರಕ್ಷೇತ್ರಂ ಪರಂ ಮಮ ।
ಪಂಚ ಧಾರಾಃ ಪತಂತ್ಯತ್ರ ಹಿಮಕೂಟವಿನಿಸ್ಸೃತಾಃ ॥ ೬೬ ॥

ಯಸ್ತತ್ರ ಕುರುತೇ ಸ್ನಾನಂ ಏಕರಾತ್ರೋಷಿತೋ ನರಃ ।
ಯಾತಿ ವೈದ್ಯಾಧರಂ ಲೋಕಂ ಕೃತಕೃತ್ಯೋ ನ ಸಂಶಯಃ ॥ ೬೭ ॥

---

೬೩. ಅಲ್ಲಿ ದೇವಪ್ರಭವೆಂಬುದು ಉತ್ತಮವೂ ರಹಸ್ಯವೂ ಆದ ನನ್ನ ಮತ್ತೊಂದು ಕ್ಷೇತ್ರ. ಅಲ್ಲಿ ಬೆಟ್ಟದಿಂದ ಧಾರೆಗಳು ಐದುಮುಖವಾಗಿ ಬೀಳುತ್ತವೆ.

೬೪–೬೫. ಅಲ್ಲಿ ಎಂಟು ದಿನ ವಾಸಮಾಡಿ ಸ್ನಾನಮಾಡುವವನು ನಾಲ್ಕು ವೇದಗಳಲ್ಲೂ ಪಾರಂಗತನಾಗುವನು. ಸಂದೇಹವಿಲ್ಲ. ಲೋಭಮೋಹಗಳನ್ನು ಬಿಟ್ಟು ಬಳಿಕ ಅಲ್ಲಿ ಪ್ರಾಣಗಳನ್ನು ಬಿಟ್ಟು ನನ್ನ ಲೋಕದಲ್ಲಿ ವಾಸಿಸುವನು.

೬೬. ಅಲ್ಲಿ ವಿದ್ಯಾಧರವೆಂಬ ಹೆಸರಿನದು ರಹಸ್ಯವಾದ ನನ್ನ ಮತ್ತೊಂದು ಕ್ಷೇತ್ರ. ಹಿಮಶಿಖರದಿಂದ ಹೊರಡುವ ಐದು ಧಾರೆಗಳು ಅಲ್ಲಿ ದುಮುಕುತ್ತವೆ.

೬೭–೬೮. ಒಂದು ರಾತ್ರೆ ಅಲ್ಲಿದ್ದು, ಅಲ್ಲಿ ಸ್ನಾನಮಾಡುವವನು ಕೃತಕೃತ್ಯನಾಗಿ ವಿದ್ಯಾಧರ ಲೋಕವನ್ನು ಸೇರುವುದರಲ್ಲಿ ಸಂದೇಹವಿಲ್ಲ. ಅಲ್ಲಿ

ಅಥಾತ್ರ ಮುಂಚತೇ ಪ್ರಾಣಾನ್ ವೀತರಾಗೋ ಗತಕ್ಲಮಃ ।
ಭುಕ್ತ್ವಾ ವೈದ್ಯಾಧರಾನ್ ಭೋಗಾನ್ ಮಮ ಲೋಕಂ ಸ ಗಚ್ಛತಿ॥ ೭೮ ॥

ತತ್ರ ಪುಣ್ಯನದೀ ನಾಮ ಗುಹ್ಯಕ್ಷೇತ್ರೇ ಪರೇ ಮಮ ।
ಶಿಲಾಕುಂಜಲತಾಕೀರ್ಣಾ ಗಂಧರ್ವಾಪ್ಸರಸೇವಿತಾ ॥ ೭೯ ॥

ತತ್ರ ಸ್ನಾನಂ ತು ಕುರ್ವೀತ ಅಷ್ಟರಾತ್ರೋಷಿತೋ ನರಃ ।
ಸಪ್ತ ದ್ವಿಪೇಷು ಭ್ರಮತಿ ಸ್ವಚ್ಛಂದಗಮನಾಲಯಃ ॥ ೭೦ ॥

ಅಥಾತ್ರ ಮುಂಚತೇ ಪ್ರಾಣಾನ್ ಮಮ ಕರ್ಮಾನುಸಾರಕಃ ।
ಸಪ್ತದ್ವೀಪಾನ್ ಸಮುತ್ಸೃಜ್ಯ ಮಮ ಲೋಕಂ ಸ ಗಚ್ಛತಿ ॥ ೭೧ ॥

ಗಂಧರ್ವೇತಿ ಚ ವಿಖ್ಯಾತಂ ತಸ್ಮಿನ್ ಕ್ಷೇತ್ರಂ ಪರಂ ಮಮ ।
ಏಕಧಾರಾ ಪತತ್ಯತ್ರ ಪಶ್ಚಿಮಾಂ ದಿಶಮಾಶ್ರಿತಾ ॥ ೭೨ ॥

ಭೋಗಗಳನ್ನು ಅನುಭವಿಸಿ. ಬಳಿಕ ಅಲ್ಲಿ ಪ್ರಾಣಗಳನ್ನು ತೊರೆದು ರಾಗಶ್ರಮ ಗಳನ್ನು ತಪ್ಪಿಸಿಕೊಂಡು ನನ್ನ ಲೋಕವನ್ನು ಸೇರುವನು.

೭೯. ಉತ್ತಮವಾದ ಆ ನನ್ನ ರಹಸ್ಯಕ್ಷೇತ್ರದಲ್ಲಿ ಕಲ್ಲುಗಳಿಂದಲೂ ಬಳ್ಳಿಗಳ ಮನೆಗಳಿಂದಲೂ ವ್ಯಾಪ್ತವಾಗಿ ಗಂಧರ್ವಾಪ್ಸರರಿಂದ ಸೇವಿತವಾದ ಪುಣ್ಯನದಿಯೆಂಬುದು ಒಂದು ತೀರ್ಥ.

೭೦. ಎಂಟುರಾತ್ರೆ ಅಲ್ಲಿ ವಾಸಮಾಡಿ ಸ್ನಾನಮಾಡುವವನು ಬೇಕಾ ದೆಡೆಯಲ್ಲಿರುವವನೂ ತಿರುಗುವನೂ ಆಗಿ ಸಪ್ತದ್ವೀಪಗಳಲ್ಲೂ ಸಂಚರಿಸುವನು.

೭೧. ನನ್ನ ಕರ್ಮಗಳನ್ನು ಅನುಸರಿಸುವನಾಗಿ ಅಲ್ಲಿ ಪ್ರಾಣಗಳನ್ನು ಬಿಟ್ಟವನು ಸಪ್ತದ್ವೀಪಗಳನ್ನು ಬಿಟ್ಟು ನನ್ನ ಲೋಕವನ್ನು ಸೇರುವನು.

೭೨–೭೩. ಅಲ್ಲಿ ಗಂಧರ್ವವೆಂದು ಪ್ರಸಿದ್ಧವಾದುದು ನನ್ನ ಮತ್ತೊಂದು ಕ್ಷೇತ್ರ. ಅಲ್ಲಿ ಪಶ್ಚಿಮದಿಕ್ಕಿಗೆ ಒಂದು ಧಾರೆ ಬೀಳುತ್ತದೆ. ಅಲ್ಲಿ ನಾಲ್ಕು

ತತ್ರ ಸ್ನಾನಂ ತು ಕುರ್ವೀತ ಚತುರಾತ್ರೋಷಿತೋ ನರಃ |
ಮೋದತೇ ಲೋಕಪಾಲೇಷು ಸ್ವಚ್ಛಂದಗಮನಾಲಯಃ || ೭೩ ||

ಅಥಾತ್ರ ಮುಂಚತೇ ಪ್ರಾಣಾನ್ ಮಮ ಕರ್ಮಪರಾಯಣಃ |
ಲೋಕಪಾಲಾನ್ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ || ೭೪ ||

ತತ್ರ ದೇವಹ್ರದಂ ನಾಮ ಮಮಕ್ಷೇತ್ರಂ ವಸುಂಧರೇ |
ಯತ್ರಕಾಂತಾಸಿ ಮೇ ಭೂಮೇ ಬಲೇರ್ಯಜ್ಞವಿನಾಶನಾತ್ || ೭೫ ||

ಸ ಹ್ರದೋ ವರದಃ ಶ್ರೇಷ್ಠಃ ಮನೋಜ್ಞಃ ಸುಖಶೀತಲಃ |
ಅಗಾಧಃ ಸೌಖ್ಯದಶ್ಚಾಪಿ ದೇವಾನಾಮಪಿ ದುರ್ಲಭಃ || ೭೬ ||

ತಸ್ಮಿನ್ ಹ್ರದೇ ಮಹಾಭಾಗೇ ಮಮ ವೈ ನಿಯಮೋದಕೇ |
ಮತ್ಸ್ಯಾಶ್ಚಕ್ರಾಂಕಿತಾಶ್ಚೈವ ಪರ್ಯಟಂತೇ ಇತಸ್ತತಃ || ೭೭ ||

ರಾತ್ರೆ ಇದ್ದು, ಸ್ನಾನಮಾಡುವವನು ಬೇಕಾದೆಡೆಯಲ್ಲಿ ವಾಸಮಾಡುವನೂ ಸಂಚರಿಸುವನೂ ಆಗಿ ಲೋಕಪಾಲರೊಡನೆ ಆನಂದ ಪಡುವನು.

೭೪. ನನ್ನ ಕರ್ಮಗಳಲ್ಲಿ ಆಸಕ್ತನಾಗಿದ್ದು, ಬಳಿಕ ಅಲ್ಲಿ ಪ್ರಾಣಗಳನ್ನು ಬಿಡುವವನು, ಲೋಕಪಾಲರನ್ನೂ ಅತಿಕ್ರಮಿಸಿ ನನ್ನ ಲೋಕವನ್ನು ಸೇರುವನು.

೭೫. ವಸುಂಧರೇ, ಅಲ್ಲಿ ದೇವಹ್ರದವೆಂಬ ನನ್ನ ಕ್ಷೇತ್ರವಿದೆ ಭೂಮೀ, ನಾನು ಬಲಿಯ ಯಜ್ಞವನ್ನು ನಾಶಮಾಡಿದ ಬಳಿಕ ಅಲ್ಲಿ ನೀನು ನನ್ನ ಕಾಂತೆಯಾದೆ.

೭೬. ಆ ಮಡು ಇಷ್ಟಾರ್ಥವನ್ನು ಕೊಡುವುದೂ ಮನೋಹರವಾದುದೂ ಸುಖಶೀತಲವೂ ಅಗಾಧವೂ ಸೌಖ್ಯಪ್ರದವೂ ದೇವತೆಗಳಿಗೂ ದುರ್ಲಭವೂ ಆದುದು.

೭೭-೭೯. ಮಹಾಭಾಗ್ಯೇ, ನನ್ನ ನಿಯಮತೀರ್ಥವಾದ ಆ ಮಡುವಿನಲ್ಲಿ ಚಕ್ರ ಚಿಹ್ನೆಯಿಂದ ಕೂಡಿದ ಮೀನುಗಳು ಅತ್ತಿತ್ತ ಸಂಚರಿಸುತ್ತವೆ. ವಸುಂಧರೇ,

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ |
ಮಹಾಶ್ಚರ್ಯಂ ವಿಶಾಲಾಕ್ಷಿ ಯತ್ರ ತತ್ಪರಿವರ್ತತೇ || ೭೮ ||

ಪ್ರಶ್ಯೇಚ್ಚ ಶ್ರದ್ಧಧಾನಸ್ತು ನ ಪಶ್ಯೇತ್ಪಾಪಪೂರುಷಃ || ೭೯ ||

ತಸ್ಮಿನ್ ದೇವಹ್ರದೇ ಪುಣ್ಯೇ ಚತುರ್ವಿಂಶತಿದ್ವಾದಶೀ |
ಸೌವರ್ಣಾನಿ ಚ ಪದ್ಮಾನಿ ದೃಶ್ಯಂತೇ ಭಾಸ್ಕರೋದಯೇ ||
ತಾವತ್ಪಶ್ಯಂತಿ ಭೂತಾನಿ ಯಾವನ್ಮಧ್ಯಂದಿನಂ ಭವೇತ್ || ೮೦ ||

ಯತ್ರ ಸ್ನಾತಾ ದಿವಂ ಯಾಂತಿ ಶುದ್ಧಾ ವಾಕ್ಕಾಯಜೈರ್ಮಲೈಃ |
ತತ್ರ ಸ್ನಾನಂ ಪ್ರಕುರ್ವೀತ ದಶರಾತ್ರೋಷಿತೋ ನರಃ || ೮೧ ||

ದಶಾನಾಮಶ್ವಮೇಧಾನಾಂ ಪ್ರಾಪ್ನೋತ್ಯವಿಕಲಂ ಫಲಂ || ೮೨ ||

ಅಥಾತ್ರ ಮುಂಚತಿ ಪ್ರಾಣಾನ್ ಮಮ ಚಿಂತಾವ್ಯವಸ್ಥಿತಃ ||
ಅಶ್ವಮೇಧಫಲಂ ಭುಕ್ತ್ವಾ ಭೂಮೇ ಮತ್ಸಮತಾಂ ವ್ರಜೇತ್ || ೮೩ ||

ಅಲ್ಲಿನ ಬೇರೊಂದು ಅತ್ಯಾಶ್ಚರ್ಯವನ್ನು ಹೇಳುತ್ತೇನೆ. ಕೇಳು. ವಿಶಾಲಾಕ್ಷೀ, ಆ ಮೀನು ಸಂಚರಿಸುವುದು ಆ ತೀರ್ಥದಲ್ಲಿ ನಂಬಿಕೆಯುಳ್ಳವನಿಗೆ ಮಾತ್ರ ಕಾಣಿಸುತ್ತದೆ. ಪಾಪಿಗೆ ಕಾಣಿಸುವುದಿಲ್ಲ.

೮೦. ಪವಿತ್ರವಾದ ಆ ದೇವಹ್ರದದಲ್ಲಿ ಇಪ್ಪತ್ತನಾಲ್ಕು ದ್ವಾದಶಿಯಲ್ಲೂ ಸೂರ್ಯೋದಯವಾಗುತ್ತಲೂ ಸುವರ್ಣದ ಕಮಲಗಳು ಕಾಣಿಸುತ್ತವೆ. ಮಧ್ಯಾಹ್ನವಾಗುವವರೆಗೂ ಪ್ರಾಣಿಗಳು ಅವುಗಳನ್ನು ನೋಡುತ್ತವೆ.

೮೧-೮೨. ಅಲ್ಲಿ ಸ್ನಾನಮಾಡುವವರು ಮನೋವಾಕ್ಕಾಯಗಳಿಂದುಂಟಾದ ಪಾಪದಿಂದ ಶುದ್ಧರಾಗಿ ಸ್ವರ್ಗವನ್ನು ಸೇರುವರು. ಹತ್ತುರಾತ್ರಿ ಅಲ್ಲಿ ವಾಸಮಾಡಿ ಸ್ನಾನಮಾಡುವವನು ಹತ್ತು ಅಶ್ವಮೇಧಗಳ ಪೂರ್ಣಫಲವನ್ನು ಪಡೆಯುವನು.

೮೩. ಭೂಮಿ, ಅಶ್ವಮೇಧ ಫಲವನ್ನು ಅನುಭವಿಸಿ, ಬಳಿಕ ನನ್ನನ್ನು ಧ್ಯಾನಿಸುತ್ತ ಅಲ್ಲಿ ಪ್ರಾಣಗಳನ್ನು ಬಿಟ್ಟು ನನಗೆ ಸಮಾನಾಗುವನು.

ಸಂಭೇದೋ ದೇವನದ್ಯೋಸ್ತು ಸಮಸ್ತ ಸುಖವಲ್ಲಭೇ |
ದಿವ್ಯೋವತೀರ್ಯ ತಿಷ್ಠಂತಿ ದೇವಾ ಯತ್ರ ಸಹಪ್ರಿಯಾಃ || ೮೪ ||

ಗಂಧರ್ವಾಪ್ಸರಸಶ್ಚೈವ ನಾಗಕನ್ಯಾಃ ಸಹೋರಗೈಃ |
ದೇವರ್ಷಯಶ್ಚ ಮುನಯಃ ಸಮಸ್ತ ಸುರನಾಯಕಾಃ || ೮೫ ||

ಸಿದ್ಧಾಶ್ಚ ಕಿನ್ನರಾಶ್ಚೈವ ಸ್ವರ್ಗಾದವತರಂತಿ ಹಿ |
ನೇಪಾಲೇ ಯಚ್ಚಿವಸ್ಥಾನಂ ಸಮಸ್ತ ಸುಖವಲ್ಲಭಂ || ೮೬ ||

ತೇಭ್ಯಸ್ತೇಭ್ಯಶ್ಚ ಸ್ಥಾನೇಭ್ಯಸ್ತೀರ್ಥೇಭ್ಯಶ್ಚ ವಿಶೇಷತಃ |
ಮಹಾದೇವ ಜಟಾಜೂಟಾನ್ನೀಲಕಂಠಾಚ್ಛಿವಾಲಯೇ || ೮೭ ||

ಶ್ವೇತಗಂಗೇತಿ ಯಾ ಪ್ರೋಕ್ತಾ ತಯಾ ಸಂಭೂಯ ಸಾದರಂ |
ನಾನಾನದ್ಯಃ ಸಮಾಯಾತಾ ದೃಶ್ಯಾದೃಶ್ಯತಯಾ ಸ್ಥಿತಾಃ || ೮೮ ||

ಗಂಡಕ್ಯಾಕೃಷ್ಣಯಾ ಚೈವ ಯಾ ಕೃಷ್ಣಸ್ಯ ತನೂದ್ಭವಾ |
ತಯಾ ಸಂಭೇದಮಾಪನ್ನಾ ಯಾ ಸಾ ಶಿವತನೂದ್ಭವಾ || ೮೯ ||

೮೪–೮೬. ನಿನಗೆ ರಹಸ್ಯವೂ ಉತ್ತಮವೂ ಆದ ನನ್ನ ಬೇರೊಂದು ಕ್ಷೇತ್ರವನ್ನು ಹೇಳುತ್ತೇನೆ. ದೇವತೆಗಳು ಪ್ರಿಯೆಯರೊಡನೆ ಸ್ವರ್ಗದಿಂದಿಳಿದು ಬಂದಿರುವೆಡೆಯಾದ ದೇವನದಿಗಳೆರಡರ ಸಂಗಮವು ಸಮಸ್ತ ಸುಖವನ್ನೂ ಕೊಡುವುದು. ನೇಪಾಳದಲ್ಲಿ ಸಮಸ್ತ ಸುಖಗಳನ್ನೂ ಕೊಡುವೆಡೆಯಾದ ಅಲ್ಲಿಗೆ ಗಂಧರ್ವರೂ, ಅಪ್ಸರಸರೂ, ಉರಗರೊಡನೆ ನಾಗಕನ್ನೆಯರೂ, ದೇವರ್ಷಿಗಳೂ, ಮುನಿಗಳೂ, ಸಮಸ್ತ ಸುರನಾಯಕರೂ ಬಂದಿಳಿಯುವರು.

೮೭–೯೦. ಬೇರೆ ಬೇರೆ ಸ್ಥಳಗಳಿಂದಲೂ ತೀರ್ಥಗಳಿಂದಲೂ ಎಂದರೆ ವಿಶೇಷವಾಗಿ ಈಶ್ವರನ ಜಟೆಯಿಂದಲೂ, ಈಶ್ವರನಿಂದಲೂ, ಕೈಲಾಸದಲ್ಲಿ ಶ್ವೇತಗಂಗೆಯೆಂದೆನಿಸಿಕೊಂಡಿರುವುದರಿಂದಲೂ ಉದಿಸಿ ಹಲವು ನದಿಗಳು ದೃಶ್ಯಾದೃಶ್ಯಗಳಾಗಿ ಪ್ರವಹಿಸಿ, ಕೃಷ್ಣನ ದೇಹದಿಂದುದಿಸಿದ ಕೃಷ್ಣೆ ಅಥವಾ

ತ್ರಿಶೂಲಗಂಗೇತ್ಯಾಖ್ಯಾತಾ ಸಾಪಿ ತತ್ರ ಮಹಾನದೀ ॥ ೯೦ ॥

ಏವಂ ನದೀಸಮುದ್ಭೇದಃ ಸರ್ವತೀರ್ಥಕದಂಬಕಂ ।
ಮಮ ಕ್ಷೇತ್ರೇ ಸಮಾಖ್ಯಾತಂ ಪುಣ್ಯಂ ಪರಮಪಾವನಂ ॥
ವಸುಧೇ ತ್ವಂ ವಿಜಾನೀಹಿ ದೇವಾನಾಮಪಿ ದುರ್ಲಭಂ ॥ ೯೧ ॥

ಯಶ್ಚ ಸಿದ್ಧಾಶ್ರಮ ಇತಿ ವಿಖ್ಯಾತಃ ಪುಣ್ಯವರ್ಧನಃ ।
ಶಂಭೋಸ್ತಪೋವನಂ ತತ್ರ ಸರ್ವಾಶ್ರಮ ವರಂಪ್ರತಿ ॥ ೯೨ ॥

ನಾನಾಪುಷ್ಪಫಲೋಪೇತಂ ಕದಲೀಷಂಡಮಂಡಿತಂ ।
ನಿಚುಲೈಶ್ಚೈವ ಪುನ್ನಾಗೈಃ ಕೇಸರೈಶ್ಚ ವಿರಾಜಿತಂ ॥ ೯೩ ॥

ಖರ್ಜೂರಾಶೋಕಬಕುಲೈಶ್ಚೂತೈಶ್ಚೈವ ಪ್ರಿಯಾಲಕೈಃ ।
ನಾರಿಕೇಲೈಶ್ಚ ಪೂಗೈಶ್ಚ ಚಂಪಕೈರ್ಜಂಬುಭಿರ್ಘನೈಃ ॥ ೯೪ ॥

ಗಂಡಕಿಯೊಡನೆ ಸಂಗಮವಾಗುವುವು. ಅವುಗಳಲ್ಲಿ ಶಿವದೇಹದಿಂದುದಿಸಿದ ತ್ರಿಶೂಲಗಂಗೆಯೆಂಬ ಪ್ರಸಿದ್ಧವಾದ ನದಿಯೇ ದೊಡ್ಡದು.

೯೧. ಹೀಗೆ ನನ್ನ ಕ್ಷೇತ್ರದಲ್ಲಿರುವ ನದೀಮೂಲಗಳನ್ನೂ ಪುಣ್ಯಕರಗಳೂ ಪರಮಪವಿತ್ರಗಳೂ ಆದ ತೀರ್ಥಗಳ ಸಮೂಹವನ್ನೂ ಹೇಳಿದುದಾಯಿತು. ಭೂದೇವಿ, ದೇವತೆಗಳಿಗೂ ಇದು ದುರ್ಲಭವೆಂದು ತಿಳಿ.

೯೨. ಅಲ್ಲಿ ಸಿದ್ಧಾಶ್ರಮವೆಂದು ಪ್ರಸಿದ್ಧವೂ, ಪುಣ್ಯವರ್ಧಕವೂ, ಆಶ್ರಮಗಳಲ್ಲೆಲ್ಲಾ ಮೇಲಾದುದೂ ಆದ ಈಶ್ವರನ ತಪೋವನವಿದೆ.

೯೩-೯೬. ಆ ಶಿವತಪೋವನವು ಬಗೆ ಬಗೆಯ ಹೂ ಹಣ್ಣು ಕಾಯಿಗಳಿಂದ ಕೂಡಿದುದು. ಬಾಳೆಗಳ ಗುಂಪಿನ ಸೊಂಪುಳ್ಳದು. ಬೇವುಕಣಿಗಲೆಗಳಿಂದಲೂ ಸುರಹೊನ್ನೆ ಸುರಗಿಗಳಿಂದಲೂ ಹೊಳೆಯುವುದು. ಖರ್ಜೂರ, ಅಶೋಕ ವಕುಳ, (ಹವಳದಗಿಡ,) ಮಾವು, ಪ್ರಿಯಾಲ(ಮೊರಟೀಗಿಡ), ತೆಂಗು, ಅಡಕೆ, ಸಂಪಗೆ,

ನಾರಂಗೈರ್ಬದರೀಭಿಶ್ಚ ಜಂಬೀರೈರ್ಮಾತುಲುಂಗಕೈಃ |
ಕೇತಕೀ ಮಲ್ಲಿಕಾಜಾತೀ ಯೂಥಿಕಾರಾಜಿರಾಜಿತಂ || ೯೫ ||

ಕುಂದೈಃ ಕುರವಕೈರ್ನಾಗೈಃ ಕುಟಜೈರ್ದಾಡಿಮೈರಪಿ |
ಆಗತ್ಯ ಯತ್ರ ಕ್ರೀಡಂತಿ ದೇವಾನಾಂ ಮಿಥುನಾನಿ ಚ || ೯೬ ||

ತಸ್ಮಿನ್ ಹ್ರದೇ ಮಹಾಪುಣ್ಯೇ ಪುಣ್ಯನದ್ಯೋಽಸ್ತು ಸಂಗಮೋ |
ಸ್ನಾನಾಚ್ಛತಾಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ || ೯೭ ||

ಸ್ನಾತ್ವಾ ತತ್ರ ತು ವೈಶಾಖೇ ಗೋಸಹಸ್ರಫಲಂ ಭವೇತ್ |
ಮಾಘಮಾಸೇ ಪುನಃ ಸ್ನಾತ್ವಾ ಪ್ರಯಾಗಸ್ನಾನಜಂ ಫಲಂ || ೯೮ ||

ಕಾರ್ತಿಕೇ ಮಾಸಿ ಯಃ ಸ್ನಾತಿ ತುಲಾಸಂಸ್ಥೇ ದಿವಾಕರೇ |
ವಿಧಿನಾ ನಿಯತಃ ಸೋಽಪಿ ಮುಕ್ತಿಭಾಗೀ ನ ಸಂಶಯಃ || ೯೯ ||

ನೆರಿಳೆ, ಕಗ್ಗಲಿ(ಧವ), ಕಿತ್ತಳೆ, ಎಲಚಿ, ನಿಂಬೆ, ಮಾದಳ, ಕೇದಗೆ, ಮಲ್ಲಿಗೆ, ಜಾಜಿ, ನಂದಿಬಟ್ಟಲು, ಮೊಲ್ಲೆ, ಗೋರಂಟಿ, ನಾಗಕೇಸರ, ಗಿರಿಮಲ್ಲಿಗೆ, ದಾಳಿಂಬೆ ಇವೇ ಮೊದಲಾದ ಮರಗಿಡಬಳ್ಳಿಗಳಿಂದೊಪ್ಪುವುದು. ದೇವ ದಂಪತಿಗಳು ಅಲ್ಲಿಗೆ ಬಂದು ಕ್ರೀಡಿಸುವರು.

೯೭. ಪುಣ್ಯನದಿಗಳ ಸಂಗಮವೂ ಅತಿ ಪವಿತ್ರವೂ ಆದ ಆ ತಪೋವನದ ಮಡುವಿನಲ್ಲಿ ಸ್ನಾನವನ್ನು ಮಾಡುವುದರಿಂದ ಮನುಷ್ಯನು ನೂರು ಅಶ್ವಮೇಧಗಳ ಫಲವನ್ನು ಪಡೆಯುವನು.

೯೮–೯೯. ಅಲ್ಲಿ ವೈಶಾಖಮಾಸದಲ್ಲಿ ಸ್ನಾನಮಾಡುವವನು ಸಾವಿರ ಗೋವುಗಳನ್ನು ದಾನಮಾಡುವುದರಿಂದಾಗುವ ಫಲವನ್ನು ಪಡೆಯುವನು. ಮಾಘಮಾಸದಲ್ಲಿ ಸ್ನಾನಮಾಡುವವನು ಪ್ರಯಾಗದಲ್ಲಿ ಸ್ನಾನಮಾಡುವುದರಿಂದ ಲಭಿಸುವ ಫಲವನ್ನು ಪಡೆಯುವನು. ಸೂರ್ಯನು ತುಲಾರಾಶಿಯಲ್ಲಿರುವಾಗ ಕಾರ್ತಿಕಮಾಸದಲ್ಲಿ ನಿಯಮದಿಂದ ಕೂಡಿ ವಿಧಿಪೂರ್ವಕವಾಗಿ ಸ್ನಾನ ಮಾಡುವವನೂ ಸಂದೇಹವಿಲ್ಲದೆ ಮುಕ್ತಿಗೆ ಪಾತ್ರನಾಗುವನು.

ಯಸ್ತ್ರಿರಾತ್ರಮುಷಿತ್ವಾ ತು ನಿಯತೇ ನಿಯತಾಶನಃ ।
ರಾಜಸೂಯಫಲಂ ಪ್ರಾಪ್ಯ ಮೋದತೇ ದೇವವದ್ದಿವಿ ॥ ೧೦೦ ॥

ಯಜ್ಞಸ್ತಪೋಥವಾ ದಾನಂ ಶ್ರಾದ್ಧಮಿಷ್ಟಸ್ಯ ಪೂಜನಂ ।
ಯತ್ಕಿಂಚಿತ್ಕ್ರಿಯತೇ ಕರ್ಮ ತದನಂತಫಲಂ ಭವೇತ್ ॥ ೧೦೧ ॥

ಭೂಮೇ ತಸ್ಯಾಪರಾಧಾಂಶ್ಚ ಸರ್ವಾನೇವ ಕ್ಷಮಾಮ್ಯಹಂ ॥ ೧೦೨ ॥

ಗಂಗಾಯಮುನಯೋರ್ಯದ್ವತ್ಸಂಗಮೋ ಮರ್ತ್ಯದುರ್ಲಭಃ ।
ತಥೈವಾಯಂ ದೇವನದ್ಯೋಃ ಸಂಗಮಃ ಸಮುದಾಹೃತಃ ॥ ೧೦೩ ॥

ಏತದ್ಗುಹ್ಯಂ ಪರಂ ದೇವಿ ಮಮ ಕ್ಷೇತ್ರೇ ವಸುಂಧರೇ ।
ಅಹಮಸ್ಮಿನ್ಮಹಾಕ್ಷೇತ್ರೇ ಧರೇ ಪೂರ್ವಮುಖಃ ಸ್ಥಿತಃ ॥
ಸಾಲಗ್ರಾಮೇ ಮಹಾಕ್ಷೇತ್ರೇ ಭೂಮೇ ಭಾಗವತಪ್ರಿಯಃ ॥ ೧೦೪ ॥

---

೧೦೦. ಅಲ್ಲಿ ನಿಯಮದಿಂದಲೂ ನಿಯತವಾದ ಆಹಾರದಿಂದಲೂ ಮೂರುರಾತ್ರೆ ವಾಸಮಾಡಿ, ಸ್ನಾನಮಾಡುವವನು ರಾಜಸೂಯವೆಂಬ ಯಜ್ಞದ ಫಲವನ್ನು ಪಡೆದು, ಸ್ವರ್ಗದಲ್ಲಿ ದೇವತೆಗಳಂತೆ ಸಂತೋಷಪಡುವನು.

೧೦೧-೧೦೨. ಅಲ್ಲಿ ಯಜ್ಞ, ತಪಸ್ಸು, ದಾನ ಶ್ರಾದ್ಧ, ಇಷ್ಟಪೂಜೆ ಇವೇ ಮೊದಲಾದ ಯಾವುದೊಂದು ಕರ್ಮವನ್ನು ಮಾಡಿದರೂ ಅದು ಅನಂತ ಫಲದಾಯಕವಾಗುವುದು. ಭೂಮೀ, ಅಲ್ಲಿ ಯಾವುದಾದರೊಂದು ಕರ್ಮ ಮಾಡುವವನ ಸರ್ವಾಪರಾಧಗಳನ್ನೂ ನಾನು ಕ್ಷಮಿಸುವೆನು.

೧೦೩. ಗಂಗಾ ಯಮುನಾದಿಗಳ ಸಂಗಮವು ಮನುಷ್ಯರಿಗೆ ದುರ್ಲಭವಾಗಿರುವಂತೆಯೇ ಆ ದೇವನದಿಗಳ ಸಂಗಮವೂ ದುರ್ಲಭವಾಗಿರುವುದು.

೧೦೪. ದೇವಿ, ವಸುಂಧರೇ, ನನ್ನ ಕ್ಷೇತ್ರದಲ್ಲಿ ಇದು ಮತ್ತೊಂದು ರಹಸ್ಯ. ಧರೇ, ಆ ಸಾಲಿಗ್ರಾಮ ಮಹಾಕ್ಷೇತ್ರದಲ್ಲಿ ಭಾಗವತ ಪ್ರಿಯನಾದ ನಾನು ಪೂರ್ವಾಭಿಮುಖನಾಗಿರುವೆನು.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ |
ಅಂತರ್ಗುಹ್ಯಂ ಪರಂ ಶ್ರೇಷ್ಠಂ ಯನ್ನ ಜಾನಂತಿ ಮೋಹಿತಾಃ || ೧೦೫ ||

ಶಿವೋ ಮೇ ದಕ್ಷಿಣಸ್ಥಾನೇ ತಿಷ್ಠತ್ಯೇ ವಿಗತಜ್ವರಃ |
ಲೋಕಾನಾಂ ಪ್ರವರಃ ಶ್ರೇಷ್ಠಃ ಸರ್ವಲೋಕವರೋ ಹರಃ || ೧೦೬ ||

ತಂ ಯೇ ವಿಂದಂತಿ ತೇ ದೇವಿ ನೂನಂ ಮಾಮೇವ ವಿಂದತಿ |
ಯೇ ಮಾಂ ವಿದಂತಿ ದೇವೇಶಿ ತೇ ವಿದಂತಿ ಶಿವಂಪರಂ || ೧೦೭ ||

ಅಹಂ ಯತ್ರ ಶಿವಸ್ತತ್ರ ಶಿವೋ ಯತ್ರ ವಸುಂಧರೇ |
ತತ್ರಾಹಮಪಿ ತಿಷ್ಠಾಮಿ ಆವಯೋರ್ನಾಂತರಂ ಕ್ವಚಿತ್ || ೧೦೮ ||

ಶಿವಂ ಯೋ ವಂದತೇ ಭೂಮೇ ಸ ಹಿ ಮಾಮೇವ ವಂದತೇ |
ಲಭತೇ ಪುಷ್ಕಲಾಂ ಸಿದ್ಧಿಮೇವಂ ಯೋ ವೇತ್ತಿ ತತ್ವತಃ || ೧೦೯ ||

೧೦೫–೧೦೬. ವಸುಂಧರೇ, ಮೋಹಿತರಾದವರು ಅರಿಯದಿರುವ ಅತಿಶ್ರೇಷ್ಠವೂ ರಹಸ್ಯವೂ ಆದ ಬೇರೊಂದು ವಿಚಾರವನ್ನು ಹೇಳುತ್ತೇನೆ. ಕೇಳು. ಲೋಕಗಳಿಗೆಲ್ಲಾ ಅತ್ಯುತ್ತಮನೂ, ಶ್ರೇಷ್ಠನೂ ಆದ ಹರನು ಅಲ್ಲಿ ನನ್ನ ಬಲಭಾಗದಲ್ಲಿ ನಿರ್ಭೀತನಾಗಿರುವನು.

೧೦೭. ದೇವಿ, ಆ ಹರನನ್ನು ತಿಳಿಯುವರು ನಿಜವಾಗಿ ನನ್ನನ್ನೇ ತಿಳಿಯುವರು. ದೇವೇಶಿ, ನನ್ನನ್ನು ತಿಳಿಯುವವರು ಪರಶಿವನನ್ನು ತಿಳಿಯುವರು.

೧೦೮. ವಸುಂಧರೇ, ನಾನೆಲ್ಲಿರುವೆನೋ ಶಿವನಲ್ಲಿರುವನು. ಶಿವನೆಲ್ಲಿರುವನೋ ಅಲ್ಲಿ ನಾನೂ ಇರುವೆನು. ನಮ್ಮಿಬ್ಬರಿಗೂ ಎಲ್ಲೂ ಅಂತರವಿರುವುದಿಲ್ಲ.

೧೦೯. ಭೂಮೀ, ಶಿವನಿಗೆ ನಮಸ್ಕರಿಸುವನು ನನಗೇ ನಮಸ್ಕರಿಸುವನು. ಇದನ್ನು ಹೀಗೆ ನಿಜವಾಗಿ ತಿಳಿಯುವವನು ಪುಷ್ಕಳವಾದ ಸಿದ್ಧಿಯನ್ನು ಪಡೆಯುವನು.

ಏವಮೇತನ್ಮಹಾಭಾಗೇ ಕ್ಷೇತ್ರಂ ಹರಿಹರಾತ್ಮಕಂ ।
ಮೃತಾ ಯೇತ್ರ ಗತಿಂ ಯಾಂತಿ ಮಮ ಕರ್ಮಾನುಸಾರಿಣಃ ॥ ೧೧೦ ॥

ಮುಕ್ತಿಕ್ಷೇತ್ರಂ ಪ್ರಥಮತೋ ರುರುಖಂಡಂ ತತಃ ಪರಂ ।
ಸಂಭೇದೋ ದೇವನದ್ಯೋಶ್ಚ ತ್ರಿವೇಣೀ ಚ ತತಃ ಪರಂ ॥ ೧೧೧ ॥

ಕ್ಷೇತ್ರಂ ಪ್ರಮಾಣಂ ವಿಜ್ಞೇಯಂ ಗಂಡಕೀಸಂಗತಂ ಪರಂ ।
ಏವಂ ಸಾ ಗಂಡಕೀ ದೇವಿ ನದೀನಾಮುತ್ತಮಾ ನದೀ ॥ ೧೧೨ ॥

ಗಂಗಯಾ ಮಿಲಿತಾ ಯತ್ರ ಭಾಗೀರಥ್ಯಾ ಮಹಾಫಲಾ ।
ಅಪರಂ ತನ್ಮಹತ್ ಕ್ಷೇತ್ರಂ ಹರಿಕ್ಷೇತ್ರಮಿತಿಸ್ಮೃತಂ ॥ ೧೧೩ ॥

ಆದೌ ಸಾ ಗಂಡಕೀ ಪುಣ್ಯಾ ಭಾಗೀರಥ್ಯಾ ಚ ಸಂಗತಾ ।
ತಸ್ಯ ತೀರ್ಥಸ್ಯ ಮಹಿಮಾ ಜ್ಞಾಯತೇ ನ ಸುರೈರಪಿ ॥ ೧೧೪ ॥

---

೧೧೦. ಮಹಾಭಾಗ್ಯೇ, ಹರಿಹರಾತ್ಮಕಕ್ಷೇತ್ರವು ಇಂತಹುದು ನನ್ನ ಕರ್ಮಗಳನ್ನು ಅನುಸರಿಸುವವರಾಗಿದ್ದು ಅಲ್ಲಿ ಮೃತರಾಗುವವರು ಉತ್ತಮವಾದ ಗತಿಯನ್ನು ಪಡೆಯುವರು.

೧೧೧-೧೧೨. ದೇವಿ,(ಹರಿಹರ)ಮುಕ್ತಿಕ್ಷೇತ್ರವು ಮೊದಲನೆಯದು, ರುರುಖಂಡವೆಂಬುದು ಎರಡನೆಯದು. ದೇವನದಿಗಳ ಸಂಗಮವಾದ ತ್ರಿವೇಣಿಯು ಮೂರನೆಯದು. ಗಂಡಕೀ ಸಂಗಮದ ಕ್ಷೇತ್ರವು ಪ್ರಮಾಣವಾದುದೆಂದು ಅರಿಯಬೇಕು. ಹೀಗೆ ಆ ಗಂಡಕಿಯು ನದಿಗಳಲ್ಲೆಲ್ಲಾ ಉತ್ತಮವಾದುದು.

೧೧೩. ಮಹಾಫಲಪ್ರದವಾದ ಆ ಗಂಡಕಿಯು ಭಾಗೀರಥಿಯಾದ ಗಂಗೆಯೊಡನೆ ಸೇರುವೆಡೆಯಾದ ಬೇರೆಯ ಮಹಾಕ್ಷೇತ್ರವು ಹರಿಕ್ಷೇತ್ರವೆನಿಸುವುದು.

೧೧೪. ಪವಿತ್ರವಾದ ಗಂಡಕಿಯು ಆದಿಯಲ್ಲೇ ಭಾಗೀರಥಿಯೊಡನೆ ಸೇರಿತು. ಆ ತೀರ್ಥದ ಮಹಿಮೆಯನ್ನು ದೇವತೆಗಳೂ ಅರಿಯರು.

ಏತತ್ತೇ ಕಥಿತಂ ಭದ್ರೇ ಸಾಲಗ್ರಾಮಸ್ಯ ಸುಂದರಿ ।
ಗಂಡಕ್ಯಾಶ್ಚೈವ ಮಾಹಾತ್ಮ್ಯಂ ಸರ್ವಕಲ್ಮಷನಾಶನಂ ॥ ೧೧೫ ॥

ಪೂರ್ವಪೃಷ್ಟಂ ತ್ವಯಾ ಯಚ್ಚ ಪುಣ್ಯಂ ಭಾಗವತಪ್ರಿಯಂ ॥ ೧೧೬ ॥

ಆಖ್ಯಾನಾನಾಂ ಮಹಾಖ್ಯಾನಂ ದ್ಯುತೀನಾಂ ಪರಮಾದ್ಯುತಿಃ ।
ಪುಣ್ಯಾನಾಂ ಪರಮಂ ಪುಣ್ಯಂ ತಪಸಾಂ ಚ ಮಹತ್ತಪಃ ॥
ಗುಹ್ಯಾನಾಂ ಪರಮಂ ಗುಹ್ಯಂ ಗತೀನಾಂ ಪರಮಾಗತಿಃ ॥ ೧೧೭ ॥

ಮಹಾಲಾಭಸ್ತು ಲಾಭಾನಾಂ ನಾಸ್ತ್ಯಸ್ಮಾದಪರಂ ಮಹತ್ ॥ ೧೧೮ ॥

ಪಿಶುನಾಯ ನ ದಾತವ್ಯಂ ನ ಶಠಾಯ ಗುರುದ್ರುಹೇ ।
ಯೇ ಚ ಪಾಪಾಃ ಕೃತಘ್ನಾಶ್ಚ ದ್ವಿಜದೇವಾಪರಾಧಿನಃ ॥
ಕುಶಿಷ್ಯಾಯ ನ ದಾತವ್ಯಂ ನ ದದ್ಯಾಚ್ಛಾಸ್ತ್ರದೂಷಕೇ ॥ ೧೧೯ ॥

ನೀಚಾಯ ನ ಚ ದಾತವ್ಯಂ ಯೇ ನ ಜಾನಂತಿ ಸೇವಿತುಂ ॥ ೧೨೦ ॥

೧೧೫-೧೧೬. ಮಂಗಳೇ, ಸುಂದರೀ, ಸರ್ವಪಾಪಗಳನ್ನೂ ನಾಶಮಾಡುವ ಶಾಲಗ್ರಾಮಕ್ಷೇತ್ರದ ಮತ್ತು ಗಂಡಕಿಯ ಈ ಮಹಿಮೆಯನ್ನು ನಿನಗೆ ಹೇಳಿದ್ದೇನೆ. ಭಾಗವತರಿಗೆ ಪ್ರಿಯವೂ ಪುಣ್ಯವೂ ಆದ ಇದನ್ನೇ ಮೊದಲು ನೀನು ತಿಳಿಯಲು ಬಯಸಿ ಕೇಳಿದೆ.

೧೧೭-೧೧೮. ಇದು ಚರಿತ್ರೆಗಳಲ್ಲಿ ಮಹಾಚರಿತ್ರೆ, ಕಾಂತಿಗಳಲ್ಲಿ ಪರಮ ಕಾಂತಿ, ಪುಣ್ಯಗಳಲ್ಲಿ ಪರಮ ಪುಣ್ಯ, ತಪಸ್ಸುಗಳಲ್ಲಿ ಮಹಾತಪಸ್ಸು, ರಹಸ್ಯ ಗಳಲ್ಲಿ ಪರಮರಹಸ್ಯ, ಗತಿಗಳಲ್ಲಿ ಪರಮಗತಿ, ಲಾಭಗಳ ಮಹಾಲಾಭ. ಇದಕ್ಕಿಂತ ಉತ್ತಮವಾದುದು ಬೇರೆ ಇಲ್ಲ.

೧೧೯-೧೨೦. ಈ ವಿಚಾರವನ್ನು ಪಿಶುನನಿಗೂ ದುಷ್ಟನಿಗೂ ಗುರು ದ್ರೋಹಿಗೂ ಪಾಪಿಗಳಿಗೂ ಕೃತಘ್ನರಿಗೂ, ದ್ವಿಜದೇವಾಪರಾಧಿಗೂ ಕುತ್ಸಿತನಾದ ಶಿಷ್ಯನಿಗೂ ಶಾಸ್ತ್ರದೂಷಕನಿಗೂ ನೀಚನಿಗೂ ದೇವಗುರುಸೇವೆಮಾಡಲರಿಯದ ವನಿಗೂ ಹೇಳಬಾರದು.

ಸುಶಿಷ್ಯಾಯ ಚ ದಾತವ್ಯಂ ಧೀರಾಯ ಶುಭಬುದ್ಧಯೇ |
ಲೋಭಮೋಹಮದಾದ್ಯೈರ್ಯೇ ವರ್ಜಿತಾಃ ಪುಣ್ಯಬುದ್ಧಯಃ ॥ ೧೨೧ ॥

ಯ ಏತತ್ಪಠತೇ ನಿತ್ಯಂ ಕಲ್ಯಮುತ್ಥಾಯ ಮಾನವಃ |
ಕುಲಾನಿ ತಾರಿತಾನ್ಯೇವಂ ಸಪ್ತ ಸಪ್ತ ಚ ಸಪ್ತ ಚ ॥ ೧೨೨ ॥

ಏವಂ ಮರಣಕಾಲೇ ತು ನ ಕದಾಚಿದ್ವಿಮುಹ್ಯತೇ |
ಯದೀಚ್ಛೇತ್ಪರಮಾಂ ಸಿದ್ಧಿಂ ಮಮ ಲೋಕಂ ಸ ಗಚ್ಛತಿ ॥ ೧೨೩ ॥

ಕ್ಷೇತ್ರಸ್ಯ ಸಾಲಗ್ರಾಮಸ್ಯ ಮಾಹಾತ್ಮ್ಯಂ ಪರಮಂ ಮಯಾ |
ಕಥಿತಂ ತೇ ಮಹಾದೇವಿ ಕಿಮನ್ಯಚ್ಛ್ರೋತುಮಿಚ್ಛಸಿ ॥ ೧೨೪ ॥

ಇತಿ ಶ್ರೀ ವರಾಹಪುರಾಣೇ ಭಗವಚ್ಛಾಸ್ತ್ರೇ ಸಾಲಗ್ರಾಮಕ್ಷೇತ್ರಮಾಹಾತ್ಮ್ಯಂ ನಾಮ ಪಂಚಚತ್ವಾರಿಂಶದಧಿಕಶತತಮೋಽಧ್ಯಾಯಃ

---

೧೨೧. ವಿದ್ವಾಂಸನೂ ಸುಬುದ್ಧಿಯುಳ್ಳವನೂ ಆದ ಸಚ್ಛಿಷ್ಯನಿಗೂ ಲೋಭಮೋಹಮದಗಳಿಲ್ಲದ ಪುಣ್ಯಬುದ್ಧಿಯುಳ್ಳವರಿಗೂ ಹೇಳಬೇಕು. ಪ್ರತಿದಿನವೂ ಬೆಳಗ್ಗೆ ಎದ್ದು, ಇದನ್ನು ಓದುವವನು ಅಥವಾ ಹೇಳುವವನು ತನ್ನ ಇಪ್ಪತ್ತೊಂದು ಕುಲಗಳನ್ನು ಉತ್ತಾರಣಮಾಡುವನು.

೧೨೩. ಪರಮಸಿದ್ಧಿಯನ್ನು ಬಯಸುವವನು ಮರಣಕಾಲದಲ್ಲೂ ಈ ವಿಚಾರವನ್ನು ಮರೆಯದಿದ್ದರೆ ಬಳಿಕ ನನ್ನ ಲೋಕವನ್ನು ಸೇರುವನು.

೧೨೪. ಮಹಾದೇವಿ, ಸಾಲಗ್ರಾಮಕ್ಷೇತ್ರದ ಪರಮ ಮಹಿಮೆಯನ್ನು ನಿನಗೆ ಹೇಳಿದೆನು. ಬೇರಾವುದನ್ನು ಕೇಳಲು ಬಯಸುವೆ?

ಅಧ್ಯಾಯದ ಸಾರಾಂಶ—

ಶ್ರೀ ವರಾಹನು ಭೂದೇವಿಗೆ ಸಾಲಗ್ರಾಮಕ್ಷೇತ್ರಮಹಿಮೆಯನ್ನು ವಿವರಿಸುತ್ತ ಅಲ್ಲಿ ತಪಸ್ಸನ್ನು ಮಾಡುತ್ತಿದ್ದ ಸಾಲಂಕಾಯನನೆಂಬ ಮುನಿಗೆ ಶಿವನು, ನಂದಿಕೇಶ್ವರನೆಂಬ ಹೆಸರಿನಿಂದ ಪುತ್ರನಾಗಿ ಜನಿಸಿದುದನ್ನೂ ವಿಷ್ಣುವಿನ ಅನುಗ್ರಹವನ್ನೂ, ಸಾಲಗ್ರಾಮ ಕ್ಷೇತ್ರದಲ್ಲಿರುವ, ಬಿಲ್ವಪ್ರಭ, ಚಕ್ರಸ್ವಾಮಿ, ವಿಷ್ಣುಪದ, ಹ್ರದಸ್ರೋತ, ಶಂಖಪ್ರಭ, ಗದಾಕುಂಡ, ಅಗ್ನಿಪ್ರಭ, ಸರ್ವಾಯುಧ, ದೇವಪ್ರಭ, ವಿದ್ಯಾಧರ, ಪುಣ್ಯನದಿ, ಗಂಧರ್ವ ದೇವಹ್ರದ, ದೇವನದಿಗಳ ಸಂಗಮ, ಇವೇ ಮೊದಲಾದ ಕ್ಷೇತ್ರತೀರ್ಥಗಳ ವಿಚಾರವನ್ನು ಸಾಲಗ್ರಾಮ ಕ್ಷೇತ್ರಮಹಿಮೆಯ ಶ್ರವಣಾದಿಗಳಿಂದಾಗುವ ಫಲವನ್ನೂ ಹೇಳುವನು.

ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರ ನಲವತ್ತೈದನೆಯ ಅಧ್ಯಾಯ.

|| ಶ್ರೀಃ ||

ಷಟ್‌ಚತ್ವಾರಿಂಶದಧಿಕಶತತಮೋಧ್ಯಾಯಃ

ಅಥ ರುರುಕ್ಷೇತ್ರ ಹೃಷಿಕೇಶೇ ಮಾಹಾತ್ಮ್ಯಂ

|| ಸೂತ ಉವಾಚ ||

ಸಾಲಗ್ರಾಮಸ್ಯ ಮಾಹಾತ್ಮ್ಯಂ ಶ್ರುತ್ವಾ ಗುಹ್ಯಂ ಮಹೌಜಸಂ ।
ವಿಸ್ಮಯಂ ಪರಮಂ ಗತ್ವಾ ಹೃಷ್ಟಾ ವಚನಬ್ರವೀತ್ || ೧ ||

|| ಧರಣ್ಯುವಾಚ ||

ಅಹೋ ಕ್ಷೇತ್ರಸ್ಯ ಮಾಹಾತ್ಮ್ಯಂ ಯತ್ತ್ವಯಾ ಭಾಷಿತಂ ಹರೇ ।
ಏತಚ್ಛ್ರುತ್ವಾ ಮಹಾಭಾಗ ಜಾತಾಸ್ಮಿ ವಿಗತಜ್ವರಾ || ೨ ||

ನೂರ ನಲವತ್ತಾರನೆಯ ಅಧ್ಯಾಯ

ರುರುಕ್ಷೇತ್ರ ಹೃಷೀಕೇಶಮಹಿಮೆ

೧. ಸೂತಮುನಿ—ಭೂದೇವಿಯು ಸಾಲಗ್ರಾಮಕ್ಷೇತ್ರದ ರಹಸ್ಯವೂ, ಅತಿಶಯವೂ ಆದ ಮಹಿಮೆಯನ್ನು ಕೇಳಿ, ಅತ್ಯಾಶ್ಚರ್ಯಗೊಂಡು ಸಂತೋಷದಿಂದ ಮುಂದಿನ ಮಾತನಾಡಿದಳು.

೨. ಭೂದೇವಿ—ಪೂಜ್ಯನೇ, ಹರೀ, ಆಶ್ಚರ್ಯ ! ನೀನು ಹೇಳಿದ ಈ ಸಾಲಗ್ರಾಮಕ್ಷೇತ್ರದ ಮಹಿಮೆಯನ್ನು ಕೇಳಿ ಸಂತಾಪರಹಿತಳಾದೆನು.

ರುರುಷಂಡಮಿತಿ ಪ್ರೋಕ್ತಂ ಯತ್ತ್ವಯಾ ಪರಮಾರ್ಚಿತಂ ।
ರುರುರ್ನಾಮ ಕಥಂ ಕೋವಾ ಆಸೀತ್ಪೂರ್ವಂ ಜನಾರ್ದನ ॥ ೩ ॥

ಯನ್ನಾಮ್ನಾ ಪರಮಂ ಕ್ಷೇತ್ರಂ ಹೃಷೀಕೇಶ ತ್ವಯಾಶ್ರಿತಂ ।
ಕಥಯಸ್ವ ಜಗನ್ನಾಥ ಯದ್ಯನುಗ್ರಾಹ್ಯತೇ ಮಯಿ ॥ ೪ ॥

॥ ಶ್ರೀವರಾಹ ಉವಾಚ ॥

ಆಸೀತ್ಪುರಾ ಮಹಾಭಾಗೋ ದೇವದತ್ತ ಇತಿ ದ್ವಿಜಃ ।
ಭೃಗುವಂಶೇ ಸಮುತ್ಪನ್ನೋ ವೇದವೇದಾಂಗಪಾರಗಃ ॥ ೫ ॥

ಯಜ್ಞವಿದ್ಯಾಸು ಕುಶಲೋ ವ್ರತನಿಷ್ಠೋತಿಥಿಪ್ರಿಯಃ ॥ ೬ ॥

ತತ್ರಾಶ್ರಮಪದಂ ಪುಣ್ಯಂ ಪುಣ್ಯದ್ರುಮಲತಾನ್ವಿತಂ ।
ಶಾಂತೈರ್ಮೃಗಗಣೈಃ ಕೀರ್ಣಂ ಕಂದಮೂಲಫಲಾನ್ವಿತಂ ॥
ತತ್ರತೀವ್ರಂ ತಪೋತಪ್ಯದ್ದೇವದತ್ತೋ ಮುನೀಶ್ವರಃ ॥ ೭ ॥

೩–೪. ಜನಾರ್ದನ, ರುರುಖಂಡ (ಷಂಡ)ವು ಪರಮಪೂಜ್ಯವಾದುದೆಂದು ನೀನು ಹೇಳಿದೆಯಷ್ಟೆ. ಆ ಪರಮಕ್ಷೇತ್ರವನ್ನು ಯಾರ ಹೆಸರಿನಿಂದ ಕರೆಯುತ್ತಾ ನೀನು ಅಲ್ಲಿ ನೆಲಸಿರುವೆಯೋ ಆ ರುರುವೆಂಬುವರು ಪೂರ್ವದಲ್ಲಿ ಯಾರು ? ಹೇಗಿದ್ದರು ? ಹೃಷೀಕೇಶ, ಜಗನ್ನಾಥ ನನ್ನಲ್ಲಿ ನಿನಗೆ ಕೃಪೆಯಾದರೆ ಹೇಳು.

೫–೬. ಶ್ರೀವರಾಹ—ದೇವಿ, ಪೂರ್ವದಲ್ಲಿ ಭೃಗುವಂಶದಲ್ಲುದಿಸಿದ ದೇವದತ್ತನೆಂಬ ಪೂಜ್ಯನಾದ ಬ್ರಾಹ್ಮಣನಿದ್ದನು. ಅವನು ವೇದವೇದಾಂಗ ಪಾರಂಗತನೂ, ಯಜ್ಞವಿದ್ಯೆಗಳಲ್ಲಿ ಚತುರನೂ, ವ್ರತನಿಷ್ಠನೂ, ಅತಿಥಿಪ್ರಿಯನೂ ಆಗಿದ್ದನು.

೭. ಆತನ ಆಶ್ರಮವು ಪವಿತ್ರವಾದುದು, ಪವಿತ್ರವಾದ ಮರಬಳ್ಳಿಗಳಿಂದಲೂ, ಶಾಂತವಾದ ಮೃಗಗಳ ಗುಂಪಿನಿಂದಲೂ, ಗೆಡ್ಡೆಗೆಣಸು ಹಣ್ಣುಕಾಯಿಗಳಿಂದಲೂ ಕೂಡಿದುದು. ದೇವದತ್ತಮುನೀಶ್ವರನು ಅಲ್ಲಿ ಉಗ್ರವಾದ ತಪಸ್ಸನ್ನು ಮಾಡುತ್ತಿದ್ದನು.

ವರ್ಷಾಣಾಮಯುತಂ ಸಾಗ್ರಂ ತತ ಇಂದ್ರೋ ವ್ಯಚಿಂತಯತ್ ।
ಕಾಮಂ ವಸಂತಸಹಿತಂ ಗಂಧರ್ವಾನ್ಸಸಖೀನ್ ಪುನಃ ॥ ೮ ॥

ಉವಾಚ ಮಧುರಂ ವಾಕ್ಯಂ ಕ್ಷುಬ್ಧೇಂದ್ರಿಯಮನಾಃ ಪ್ರಭುಃ ।
ಅಹೋ ಸಖಾಯಃ ಕಿಂಚಿನ್ಮೇ ಮಹತ್ಕಾರ್ಯಮುಪಸ್ಥಿತಂ ॥ ೯ ॥

ತಸ್ಯ ಮೇ ಚಿಂತಯಾನಸ್ಯ ಯೂಯಮೇವ ಪರಾ ಗತಿಃ ।
ಭವತ್ಪ್ರಸಾದಾತ್ಸ್ವಸ್ಥೋಽಹಂ ನಿರ್ಭಯಸ್ತದ್ವಿಚಿಂತ್ಯತಾಂ ॥ ೧೦ ॥

ತದಿಂದ್ರಸ್ಯ ವಚಃ ಶ್ರುತ್ವಾ ತೇ ಕಾಮಮಲಯಾನಿಲಾಃ ।
ಪ್ರತ್ಯೂಚುರ್ದೇವರಾಜಾನಂ ಆಜ್ಞಾಪಯ ನಿಜಂಪ್ರಿಯಂ ॥ ೧೧ ॥

ಜಿತೇಂದ್ರಿಯಸ್ಯಾಪಿ ಮನಃ ಕಸ್ಯ ಸಂಕ್ಷೋಭಯಾಮಹೇ ।
ಕಂ ವಾ ಸುತೀವ್ರಾತ್ತಪಸಃ ಭ್ರಂಶಯಾಮಃ ಸುಪೇಶಲಂ ॥ ೧೨ ॥

ಆಜ್ಞಾಪ್ರಸಾದಂ ತೇ ಲಬ್ಧ್ವಾ ವದ ಶೀಘ್ರಂ ಸುಖೀ ಭವ ॥ ೧೩ ॥

೮–೧೦. ದೇವದತ್ತಮುನಿಯು ಹತ್ತುಸಾವಿರ ವರ್ಷಗಳಕಾಲ ಪೂರ್ತಿಯಾಗಿ ತಪಸ್ಸನ್ನು ಮಾಡುತ್ತಿರಲು, ಬಳಿಕ ಪ್ರಭುವಾದ ಇಂದ್ರನು ಕದಡಿದ ಮನಸ್ಸೂ, ಇಂದ್ರಿಯಗಳೂ ಉಳ್ಳವನಾಗಿ, ವಸಂತನೊಡಗೂಡಿದ ಕಾಮನನ್ನೂ, ಸಖಿಯರೊಡಗೂಡಿರುವ ಗಂಧರ್ವರನ್ನೂ ಕುರಿತು ಇಂಪಾದ ಮಾತಿನಿಂದ "ಅಹೋ, ಮಿತ್ರರೇ, ನನಗೊಂದು ದೊಡ್ಡಕೆಲಸವೊದಗಿದೆ. ಆ ವಿಚಾರದಲ್ಲಿ ಯೋಚಿಸುತ್ತಿರುವ ನನಗೆ ನೀವೇ ಒಳ್ಳೆಯ ದಿಕ್ಕಾಗಿರುವಿರಿ. ನಿಮ್ಮ ಅನುಗ್ರಹದಿಂದ ನಾನು ಸ್ವಸ್ಥನೂ, ನಿರ್ಭಯನೂ ಆಗುವಂತೆ ತಕ್ಕುದನ್ನು ಯೋಚಿಸಿರಿ" ಎಂದು ಹೇಳಿದನು.

೧೧–೧೩. ಇಂದ್ರನ ಆ ಮಾತನ್ನು ಕೇಳಿ, ಆ ಕಾಮಮಲಯಾನಿಲಾದಿಗಳು ಆ ದೇವರಾಜನನ್ನು ಕುರಿತು "ನಿನಗೆ ಪ್ರಿಯವಾದುದನ್ನು ಆಜ್ಞಾಪಿಸು. ನಿನ್ನ ಅಪ್ಪಣೆಯೆಂಬ ಅನುಗ್ರಹದಿಂದ ಯಾವ ಜಿತೇಂದ್ರಿಯನ ಮನಸ್ಸನ್ನು ಚೆನ್ನಾಗಿ ಕಲಕೋಣ ? ಯಾವ ಅತಿಮನೋಹರನ ಅತ್ಯುಗ್ರವಾದ ತಪಸ್ಸನ್ನು ತಪ್ಪಿಸೋಣ? ಬೇಗ ಹೇಳು. ಸುಖಿಯಾಗು" ಎಂದು ಬಿನ್ನಯಿಸಿದರು.

ಇತ್ಯುಕ್ತಃ ಶತಮನ್ಯುರ್ವೈ ಪ್ರತ್ಯುವಾಚಾಥ ಮಾನಯನ್ ।
ತದೈವ ಮೇ ಗತಾ ಚಿಂತಾ ಭವತಾಂ ದರ್ಶನಂ ಯದಾ ॥
ಜಾತಮೇವಾಖಿಲಂ ಕಾರ್ಯಂ ಮಮ ತಚ್ಛೃಣುತಾಖಿಲಾಃ ॥ ೧೪ ॥

ಹಿಮಶ್ಶೈಲೇ ಮಹಾರಮ್ಯೇ ಹೃಷೀಕೇಶಾಶ್ರಿತೋ ಮುನಿಃ ।
ದೇವದತ್ತ ಇತಿ ಖ್ಯಾತಸ್ತಪಸ್ಯತಿ ಮಹತ್ತಪಃ ॥ ೧೫ ॥

ಜಿಘೃಕ್ಷುರ್ಮೇ ಪದಂ ನೂನಂ ತತ್ತಪೋ ವಿನಿವರ್ತ್ಯತಾಂ ॥ ೧೬ ॥

ಇತ್ಯುಕ್ತಾಸ್ತೇ ತದಾಜ್ಞಾಂ ವೈ ಗೃಹೀತ್ವಾ ಶಿರಸಾ ದ್ರುತಂ ।
ಪ್ರಸ್ಥಾನಾಯ ಮತಿಂ ಚಕ್ರುಃ ಕಾಮದೇವಪುರಸ್ಸರಾಃ ॥ ೧೭ ॥

ಪ್ರಸ್ಥಾಪ್ಯಾಗ್ರೇ ವಸಂತಂ ಚ ಮಲಯಾ ನಿಲಮೇವ ಚ ।
ತತಃ ಸುರಪತಿಃ ಶಕ್ರಃ ಪ್ರಮ್ಲೋಚಾನ್ನಾಮ ನಾಮತಃ ।
ಪ್ರಶಸ್ಯ ಪ್ರಣಯಾತ್ಪೂರ್ವಂ ಮಾನಯನ್ನಿದಮಬ್ರವೀತ್ ॥ ೧೮ ॥

೧೪–೧೬. ಹೀಗೆ ಹೇಳಿಸಿಕೊಂಡ ಇಂದ್ರನು ಅವರನ್ನು ಗೌರವಿಸುತ್ತ, "ನಿಮ್ಮನ್ನು ನೋಡಿದಾಗಲೇ ನನ್ನ ಚಿಂತೆಯು ಹೊರಟು ಹೋಯಿತು. ನನ್ನ ಕೆಲಸವೂ ಕೈಗೂಡಿದಂತೆಯೇ. ಅದೇನೆಂಬುದನ್ನು ಎಲ್ಲರೂ ಕೇಳಿ. ಅತಿ ಮನೋಹರವಾದ ಹಿಮಗಿರಿಯಲ್ಲಿ ವಿಷ್ಣುವನ್ನು ಆಶ್ರಯಿಸಿರುವ ದೇವದತ್ತನೆಂಬ ಪ್ರಸಿದ್ಧನಾದ ಋಷಿಯು ನಿಜವಾಗಿಯೂ ನನ್ನ ಪದವಿಯನ್ನಪಹರಿಸಬೇಕೆಂದು ಉಗ್ರವಾದ ತಪಸ್ಸನ್ನು ಮಾಡುತ್ತಿರುವನು. ಆ ತಪಸ್ಸನ್ನು ತಪ್ಪಿಸಿರಿ" ಎಂದನು.

೧೭. ಇಂದ್ರನಿಂದ ಹಾಗೆ ಹೇಳಿಸಿಕೊಂಡ ಮನ್ಮಥನೇ ಮೊದಲಾದ ಅವರು ಅವನ ಆಜ್ಞೆಯನ್ನು ಶಿರಸಾವಹಿಸಿ, ಬೇಗನೆ ಹೊರಡಲು ಮನಸ್ಸು ಮಾಡಿದರು.

೧೮. ದೇವೇಂದ್ರನು ವಸಂತನನ್ನೂ, ಮಲಯಾನಿಲನನ್ನೂ ಮೊದಲು ಕಳುಹಿಸಿ, ಬಳಿಕ ಪ್ರಮ್ಲೋಚೆಯೆಂಬ ಹೆಸರಿನ ಅಪ್ಸರಸಿಯನ್ನು ಪ್ರೀತಿಯಿಂದ ಮೊದಲು ಹೊಗಳಿ, ಗೌರವಿಸುತ್ತ ಮುಂದಿನಂತೆ ಆಕೆಗೆ ಹೇಳಿದನು.

ಗಚ್ಛ ಸ್ವಸ್ತಿಮತೀ ದೇವಿ ವಿಜಯಾಯ ಮುನೇರ್ಭುವಿ ।
ಯತ್ರಾಶ್ರಮಪದಂ ತಸ್ಯ ದೇವದತ್ತಸ್ಯ ವೈ ಮುನೇಃ ॥ ೧೯ ॥

ಲಲಿತೈಃ ಸ್ವೈರ್ವಿಲಾಸೈಸ್ತಂ ಮೋಹಯಿತ್ವಾ ವಶಂ ಕುರು ।
ಯಥಾ ಮತ್ಪ್ರೀತಿರತುಲಾ ತ್ವಂ ಮೇ ಕಾರ್ಯಕರೀ ಸದಾ ॥ ೨೦ ॥

ತಥಾ ಕುರುಷ್ವ ಭದ್ರಂ ತೇ ಹೃಷೀಕೇಶ ಸಮೀಪತಃ ।
ಇಂದ್ರಸ್ಯಾಜ್ಞಾಂ ಸಮಾದಾಯ ಯಯೌ ತಸ್ಯಾಶ್ರಮಂ ಪ್ರತಿ ॥ ೨೧ ॥

ಸಮೀಪೋಪವನೇ ರಮ್ಯೇ ನಾನಾದ್ರುಮಲತಾಕುಲೇ ।
ಮಧುರಾಲಾಪಬಹುಲೇ ಕೋಕಿಲಾನಾಂ ಕಲಾಕುಲೇ ॥ ೨೨ ॥

ರಸಾಲಮಂಜರೀ ವ್ಯಾಪ್ತರಸಾಮೋದಾಲಿ ಸಂಕುಲೇ ।
ಗುಂಜನ್ಮತ್ತಾಲಿ ಸನ್ನಾದ ಶ್ರುತಿಶ್ರುತಿಧರಾನ್ವಿತೇ ॥ ೨೩ ॥

---

೧೯. " ದೇವಿ, ಕಲ್ಯಾಣಿ, ದೇವದತ್ತನೆಂಬ ಮುನಿಯ ವಿಜಯಕ್ಕಾಗಿ ಆತನ ಆಶ್ರಮವು ಭೂಮಿಯಲ್ಲಿ ಎಲ್ಲಿದೆಯೋ ಅಲ್ಲಿಗೆ ಹೋಗು.

೨೦–೨೧. ಮನೋಹರವಾದ ನಿನ್ನ ವಿಲಾಸಗಳಿಂದ ಅವನನ್ನು ಮೋಹಗೊಳಿಸಿ ವಿಷ್ಣುವಿನ ಸಮೀಪದಿಂದ ಆತನನ್ನು ವಶಪಡಿಸಿಕೊ. ಯಾವಾಗಲೂ ನನ್ನ ಕಾರ್ಯಗಳನ್ನು ಮಾಡುವ ನೀನು ಇದರಿಂದ ನನಗೆ ಅತಿಶಯವಾದ ಪ್ರೀತಿಯುಂಟಾಗುವಂತೆ ಮಾಡು." ಇಂದ್ರನ ಅಪ್ಪಣೆಯನ್ನು ಪಡೆದು ಪ್ರಮ್ಲೋಚೆಯು ದೇವದತ್ತ ಮುನಿಯ ಆಶ್ರಮಕ್ಕೆ ಹೊರಟು ಹೋದಳು.

೨೨-೨೬. ಸುಂದರಿಯು ಬಗೆಬಗೆಯ ಮರಬಳ್ಳಿಗಳಿಂದಲೂ, ಕೋಗಿಲೆಗಳ ಮಧುರವಾದ ಆಲಾಪಗಳಿಂದಲೂ, ಮಾವಿನ ಹೂಗೊಂಚಲುಗಳಲ್ಲಿ ಮುತ್ತಿರುವ ಸಂತೋಷವುಳ್ಳ ದುಂಬಿಗಳ ಗುಂಪಿನಿಂದಲೂ, ಝೇಂಕರಿಸುತ್ತಿರುವ ಮದಿಸಿದ ದುಂಬಿಗಳ ಇನಿದಾದ ದನಿಯಿಂದಲೂ, ವೇದವಿದರಿಂದಲೂ ತುಂಬಿರುವುದೂ, ಗಂಧರ್ವರ ಸಂಗೀತವುಳ್ಳುದೂ, ಮಲಯಾನಿಲದಿಂದ (ಶೀತಲ)

ಗಂಧರ್ವಗೀತಸಂಮಿಶ್ರೇ ಮಲಯಾನಿಲಶೀತಲೇ ।
ಸಂಫುಲ್ಲಪಂಕಜವನೇ ಸುನಿರ್ಮಲಜಲಾಶಯೇ ॥ ೨೪ ॥

ಮುನಿಪ್ರಭಾವ ಸಂತ್ಯಕ್ತ ಕ್ರೌರ್ಯಸ್ಥಲಜಲಾಶ್ರಯೇ ।
ಮಧುರಾಮೋದಮಧುರೇ ಚಿತ್ತಕ್ಷೋಭ ವಿಧಾಯಿನೀ ॥ ೨೫ ॥

ಪ್ರವಿಶ್ಯ ಸಾ ವರಾರೋಹಾ ಗೀತಂ ಸುಮಧುರಂ ಜಗೌ ।
ಯದಾ ಧ್ಯಾನಾದುಪರತಃ ಸಮಾಧೇರ್ವಿರತಶ್ಚಿರಾತ್ ॥ ೨೬ ॥

ಗಾಂಧರ್ವಂ ಪ್ರಾರಭಂಸ್ತೇತು ಗಂಧರ್ವಾಃ ಸುರಸಮ್ಮತಾಃ ।
ತಸ್ಮಿನ್ನೇವ ಕ್ಷಣೇ ಲಬ್ಧ್ವಾಽವಸರಂ ಪಂಚಸಾಯಕಃ ॥ ೨೭ ॥

ವಿಚಕರ್ಷ ಧನುಃ ಪೌಷ್ಪಂ ಸಾಯಕಾನ್ಸಮಯೂಯುಜತ್ ।
ಸಂಲಕ್ಷ್ಯ ತಂ ಮುನಿಂ ಶಾಂತಂ ಭಾವಿದೈವಬಲಾತ್ಕೃತಂ ॥ ೨೮ ॥

ತಂಪಾದುದೂ, ಅರಳಿದ ಕಮಲಗಳ ಸರೋವರವುಳ್ಳದೂ, ಅತಿ ನಿರ್ಮಲವಾದ ಜಲಾಶಯಗಳುಳ್ಳದೂ, ಮುನಿಯ ಮಹಿಮೆಯಿಂದ ಕ್ರೂರತನವನ್ನು ಬಿಟ್ಟಿರುವ ಸ್ಥಲಜಲಚರಗಳುಳ್ಳದೂ, ಇಂಪಾದ ಸುವಾಸನೆಯಿಂದ ಮನೋಹರವಾದುದೂ, ಮನಸ್ಸನ್ನು ಚಂಚಲಗೊಳಿಸುವುದೂ ಆಗಿ ದೇವದತ್ತ ಋಷಿಯಿರುವ ರಮ್ಯವಾದ ಉಪವನದಲ್ಲಿ ಪ್ರವೇಶಿಸಿ, ಆ ಮುನಿಯು ಬಹುಕಾಲದಮೇಲೆ ಸಮಾಧಿಯೋಗ ದಿಂದ ಬಹಿರ್ಮುಖನಾಗಿ ಧ್ಯಾನವನ್ನು ನಿಲ್ಲಿಸಿದಾಗ ಅತಿ ಮಧುರವಾದ ಗೀತ ವನ್ನು ಹಾಡಿದಳು.

೨೭–೨೮. ಅದೇ ಕ್ಷಣದಲ್ಲಿಯೇ ದೇವ ಮಿತ್ರರಾದ ಗಂಧರ್ವರೂ ಗಾನಮಾಡಲಾರಂಭಿಸಿದರು. ಪಂಚಬಾಣನಾದ ಕಾಮನೂ ಸಮಯವನ್ನರಿತು ಆಗಲೇ ಬಿಲ್ಲನ್ನು ಸೆಳೆದು, ಶಾಂತನೂ, ಮುಂದಿನ ಅದೃಷ್ಟ (ದೈವ) ಬಲಕ್ಕೊಳ ಗಾದವನೂ ಆದ ಆ ಮುನಿಗೆ ಗುರಿಯಿಟ್ಟು ಪುಷ್ಪಬಾಣಗಳನ್ನು ಪ್ರಯೋ ಗಿಸಿದನು.

ಶ್ರುತ್ವಾ ತನ್ಮಧುರಂ ಗೀತಂ ಪಂಚಮಾಲಾಪಸುಂದರಂ ।
ಕ್ಷುಬ್ಧಚಿತ್ತಃ ಸಮಭವತ್ಸಮುನಿಃ ಸಂಶಿತವ್ರತಃ ॥ ೨೯ ॥

ಚಕರ್ಷ ಚ ಧನುಃ ಕಾಮಃ ಪುನಃ ಪುನರತಂದ್ರಿತಃ ॥ ೩೦ ॥

ದೇವವ್ರತೋಽಪಿ ಸ ಮುನಿಃ ಕ್ಷುಬ್ಧಾತ್ಮಾ ನಿಯತೋಽಪಿ ಸನ್ ।
ವಿಚಚಾರಾಶ್ರಮಪದಂ ಪಶ್ಯನ್ ಸಂತುಷ್ಟಮಾನಸಃ ।
ದೂರಾದ್ದದರ್ಶ ತನ್ವಂಗೀಂ ಕ್ರೀಡಂತೀಂ ಕಂದುಕೇನ ತಾಂ ॥ ೩೧ ॥

ದೃಷ್ಟ್ವೈವ ತಾಂ ತು ಚಾರ್ವಂಗೀಂ ವಿದ್ಧಃ ಕಾಮೇನ ಪತ್ರಿಣಾ ।
ತಸ್ಯಾಃ ಸಮೀಪಮಗಮತ್ ಸ್ಮಯಮಾನೋ ಮಹಾಮುನಿಃ ॥ ೩೨ ॥

ಸಾಪಿ ದೃಷ್ಟ್ವಾ ದೇವದತ್ತಂ ಸಜ್ಜಂತೀ ಹರಿಣೇಕ್ಷಣಾ ।
ಕಟಾಕ್ಷಯಂತೀ ಸಹಸಾ ಲಜ್ಜಮಾನಾ ವಿಗೂಹತೀ ॥ ೩೩ ॥

---

೨೯. ಅತಿ ತೀಕ್ಷ್ಣವ್ರತಿಯಾದ ಆ ಮುನಿಯು ಪಂಚಮಾಲಾಪಸುಂದರವಾದ ಆ ಇಂಪಾದ ಗಾನವನ್ನು ಕೇಳಿ ಕದಡಿದ ಮನಸುಳ್ಳವನಾದನು.

೩೦. ಮನ್ಮಥನು ಜಾಗರೂಕನಾಗಿ ಮತ್ತೆ ಮತ್ತೆ ಬಿಲ್ಲನ್ನು ಸೆಳೆದು ಬಾಣಗಳನ್ನು ಬಿಟ್ಟನು.

೩೧. ದೇವವ್ರತನೂ ಜಿತೇಂದ್ರಿಯನಾದರೂ ಕಲಕಿದ ಮನವುಳ್ಳವನಾಗಿ ಸಂತೋಷಗೊಂಡು ಗೀತವೆಲ್ಲಿಯದೆಂದು ಆಶ್ರಮದೆಡೆಯಲ್ಲಿ ನೋಡುತ್ತಾ ಸಂಚರಿಸಿದನು. ಚಂಡಾಡುತ್ತಿದ್ದ ಕೃಶಾಂಗಿಯಾದ ಆ ಪ್ರಮ್ಲೋಚೆಯನ್ನು ದೂರದಲ್ಲಿಯೇ ನೋಡಿದನು.

೩೨. ಆ ಸುಂದರಾಂಗಿಯನ್ನು ನೋಡಿದಮಾತ್ರದಲ್ಲಿಯೇ ಕಾಮಬಾಣದಿಂದ ಪೀಡಿತನಾಗಿ ಆ ಮಹಾಮುನಿಯು ನಗುತ್ತಾ ಅವಳ ಹತ್ತಿರಕ್ಕೆ ಹೋದನು.

೩೩–೩೪. ಹರಿಣನೇತ್ರೆಯಾದ ಆ ಪ್ರಮ್ಲೋಚೆಯೂ ದೇವದತ್ತನನ್ನು ನೋಡಿ ಸಿದ್ಧಳಾಗಿ, ಕಡೆಗಣ್ಣಿನಿಂದ ನೋಡುತ್ತಾ ತಟ್ಟನೆ ನಾಚಿಕೊಂಡು

ಕರೇಣ ಕಂದುಕಂ ಘ್ನಂತೀ ಚಂಚಲಾಕ್ಷೀ ಸುಪೇಶಲಾ ।
ಸ್ರಂಸತಾ ಕೇಶಪಾಶೇನ ಗಲತ್ಪುಷ್ಪೇಣ ರಾಜತಾ ॥ ೩೪ ॥

ಮನೋ ಹರನ್ತೀ ತಸ್ಯರ್ಷೇಃ ಲಲಿತೈರ್ವಿಭ್ರಮೋದ್ಭವೈಃ ॥ ೩೫ ॥

ಏತಸ್ಮಿನ್ನಂತರೇ ತಸ್ಯಾ ದಕ್ಷಿಣಃ ಪವನೋಽಹರತ್ ।
ವಾಸಃ ಸೂಕ್ಷ್ಮಂಗಲನ್ನೀವಿ ಕಾಂಚೀದಾಮಗುಣಾನ್ವಿತಂ ॥
ಪುಷ್ಪಬಾಣೋಽಪ್ಯವಿಧ್ಯತ್ತಂ ದೃಷ್ಟ್ವಾವಸರಮಂತಿಕೇ ॥ ೩೬ ॥

ಸಮ್ಮೋಹಿತಃ ಸ ತು ಮುನಿರ್ಗತ್ವಾಂತಿಕಮಥಾಬ್ರವೀತ್ ।
ಕಾ ತ್ವಂ ಕಸ್ಯಾಸಿ ಸುಭಗೇ ವನೇಽಸ್ಮಿನ್ ಕಿಂ ಚಿಕೀರ್ಷಸಿ ॥ ೩೭ ॥

ಮಾದೃಶಾನ್ ಕಿಂ ಮೃಗಯಸೇ ಬಾಹುಪಾಶೇನ ವಾ ಮೃಗಾನ್ ।
ಬಧ್ವಾ ಗೃಹೀತ್ವಾ ವಾಮೋರು ಕಿಂ ವಾಸ್ಮಾನ್ ಕರ್ತುಮಿಚ್ಛಸಿ ॥ ೩೮ ॥

ಮರೆಸಿಕೊಳ್ಳುತ್ತಲೂ, ಅತಿ ಮನೋಹರಳೂ, ಚಂಚಲಾಕ್ಷಿಯೂ ಆಗಿ ಚಂಡನ್ನು ಕೈಯ್ಯಿಂದ ಹೊಡೆಯುತ್ತಲೂ, ಉದುರುತ್ತಿರುವ ಹೂವುಳ್ಳುದಾಗಿ ಬಿಚ್ಚಿ ಹೋಗುತ್ತಿರುವ ಹೊಳೆಯುವ ಕೇಶಪಾಶದಿಂದಲೂ ಮನೋಹರವಾದ ವಿಭ್ರಮಗಳಿಂದುಂಟಾದ ವಿಲಾಸಗಳಿಂದಲೂ ಆ ಋಷಿಯ ಮನಸ್ಸನ್ನು ಸೆಳೆದು ವಶಪಡಿಸಿಕೊಂಡಳು.

೩೬. ಅಷ್ಟರಲ್ಲಿಯೇ ದಕ್ಷಿಣದಿಕ್ಕಿನ ಮಂದಮಾರುತವು, ಬಿಚ್ಚಿಹೋದ ಉಡಿಗಂಟುಳ್ಳ ವಡ್ಯಾಣದಿಂದಕೂಡಿದ ಅವಳ ನವಿರುಸೀರೆಯನ್ನು ಹಾರಿ- ಬಿಟ್ಟಿತು. ಪುಷ್ಪಬಾಣನೂ ಸಮಯವನ್ನರಿತು ಆತನನ್ನು ಸುಮಬಾಣದಿಂದ ಹೊಡೆದನು.

೩೭-೩೮. ಸಮ್ಮೋಹಿತನಾದ ಆ ಮುನಿಯಾದರೋ ಆಕೆಯ ಹತ್ತಿರ ಹೋಗಿ "ಸುಂದರೀ, ನೀನು ಯಾರು? ಯಾರವಳು? ಈ ವನದಲ್ಲಿ ಏನುಮಾಡಲು ಬಯಸುವೆ? ನಮ್ಮಂತಹ ಮೃಗಗಳನ್ನು ಅರಸುತ್ತೀಯೇನು? ಸುಂದರೋರು, ನಮ್ಮನ್ನು ನಿನ್ನ ಬಾಹುಪಾಶದಿಂದ ಕಟ್ಟಿಹಿಡಿದುಕೊಂಡು

ಸರ್ವಥಾಸ್ಮಾಂಸ್ತ್ವನಾಧೀನಾನ್ಯದ್ಯದ್ವಾ ಕಾರಯಿಷ್ಯಸಿ ।
ತತ್ತತ್ಕುರ್ಮೋ ವಯಂ ನಿತ್ಯಂ ತ್ವದಧೀನಾಃ ಸ್ಮ ಸರ್ವಥಾ ॥ ೩೯ ॥

ಅಥ ತಾಂ ಹಸಮಾನಾಂಚ ಗೃಹೀತ್ವಾ ದಕ್ಷಿಣೇ ಕರೇ ।
ಸಮಾಲಿಂಗ್ಯ ವಿಷಜ್ಜಂತೀಂ ರಮಯಾಮಾಸ ಮೋಹಿತಃ ॥ ೪೦ ॥

ರಮಮಾಣಸ್ತಯಾ ಸಾರ್ಧಂ ಭುಂಜನ್ಭೋಗಾನ್ ಮನೋರಮಾನ್ ।
ತಪಃ ಪ್ರಭಾವೋಪನತಾನ್ ದಿವಾರಾತ್ರಮತಂದ್ರಿತಃ ॥ ೪೧ ॥

ಬಹೂನಹರ್ಗಣಾನೇವಂ ರಮಮಾಣೋ ಯದೃಚ್ಛಯಾ ।
ಸುಪ್ತೋತ್ಥಿತ ಇವಾಕಸ್ಮಾದ್ವಿವೇಕೇನ ಸಮನ್ವಿತಃ ॥ ೪೨ ॥

ನಿರ್ವೇದಂ ಪ್ರಾಪ್ತವಾನ್ ಸದ್ಯಸ್ತದೋವಾಚ ಭೃಶಾತುರಃ ।
ಅಹೋ ಭಗವತೀ ಮಾಯಾ ಯಯಾಹಂ ಭೃಶಮೋಹಿತಃ ॥ ೪೩ ॥

ಜಾನನ್ನಪಿ ತಪೋಭ್ರಂಶಂ ಪ್ರಾಪ್ತೋ ದೈವಬಲಾತ್ಕೃತಃ ॥ ೪೪ ॥

ಏನುಮಾಡಬೇಕೆಂದಿರುವೆ ? ನಿಜವಾಗಿಯೂ ನಿನಗೆ ಅಧೀನರಾದ ನಮ್ಮಿಂದ ಏನೇನನ್ನು ಮಾಡಿಸುವೆಯೋ ಅದೆಲ್ಲವನ್ನೂ ನಾವು ಮಾಡುವೆವು. ಯಾವಾಗಲೂ ಖಂಡಿತವಾಗಿಯೂ ನಿನ್ನ ಅಧೀನರಾಗಿದ್ದೇವೆ" ಎಂದು ಹೇಳಿದನು.

೪೦. ಬಳಿಕ ನಗುತ್ತಿರುವ ಆಕೆಯನ್ನು ಬಲಗಯ್ಯಿಂದ ಹಿಡಿದುಕೊಂಡು ತನ್ನನ್ನು ಸೇರಿದ ಆಕೆಯನ್ನು ಬಿಗಿದಪ್ಪಿಕೊಂಡು, ಮೋಹದಿಂದ ರಮಿಸಿದನು.

೪೧. ಹೀಗೆ ಅವಳೊಡನೆ ರಮಿಸುತ್ತಾ, ತಪೋಮಹಿಮೆಯಿಂದೊದಗಿದ ಮನಸ್ಸಿಗೆ ಹಿತವಾದ ಭೋಗಗಳನ್ನು ಯಾವಾಗಲೂ ಉತ್ಸಾಹವುಳ್ಳವನಾಗಿ ಅನುಭವಿಸುತ್ತಿದ್ದನು.

೪೨. ಹಲವು ದಿನಗಳು ಹೀಗೆ ರಮಿಸುತ್ತಿರುವಲ್ಲಿ ಆ ಮುನಿಗೆ ಇದ್ದಕ್ಕಿದ್ದಂತೆಯೇ ನಿದ್ದೆಯಿಂದೆಚ್ಚತ್ತಂತೆ ಅಕಸ್ಮಾತ್ತಾಗಿ ವಿವೇಕವುಂಟಾಯಿತು.

೪೩-೪೪. ಒಡನೆಯೇ ನಿರ್ವೇದಗೊಂಡು ಹೆಚ್ಚಾದ ಮನೋರೋಗವುಳ್ಳವನಾಗಿ "ಅಯ್ಯೋ ! ತಿಳಿದಿದ್ದರೂ ಭಗವಂತನ ಮಾಯೆಯಿಂದ ನಾನು ಅತಿ ಮೋಹಿತನಾದೆನು ! ದೈವಬಲತ್ಕಾರದಿಂದ ತಪೋಭಂಗವನ್ನು ಪಡೆದೆನು.

ಅಗ್ನಿಕುಂಡಸಮಾ ನಾರೀ ಘೃತಕುಂಭಸಮಃ ಪುಮಾನ್ ।
ಇತಿ ಪ್ರವಾದೋ ಮೂರ್ಖಾಣಾಂ ವಿಚಾರಾನ್ಮಹದಂತರಂ ॥
ಘೃತಕುಂಭೋಗ್ನಿಯೋಗೇನ ದ್ರವತೇ ನತು ದರ್ಶನಾತ್ ॥ ೪೫ ॥

ಪುಮಾನ್ ಸ್ತ್ರೀದರ್ಶನಾದೇವ ದ್ರವತೇ ಯದ್ವಿಮೋಹಿತಃ ।
ನಾಪರಾಧಸ್ತ್ವತೋ ನಾರ್ಯಾಃ ಸ್ವಯಂ ಯದಜಿತೇಂದ್ರಿಯಃ ॥ ೪೬ ॥

ಇತ್ಯುಕ್ತ್ವಾಸೌ ನಿವೃತ್ತಾತ್ಮಾ ವಿಸಸರ್ಜ ಸುರಾಂಗನಾಂ ।
ಪ್ರಮ್ಲೋಚಾಂ ದೈವವಶಗೋ ಮನಸ್ಯೇತದಚಿಂತಯತ್ ॥ ೪೭ ॥

ಉಪಸರ್ಗೋ ಮಹಾನತ್ರ ತಪಸೋ ಭ್ರಂಶಕಾರಕಃ ।
ತ್ಯಕ್ತ್ವಾಶ್ರಮಮಿಮಂ ಚಾನ್ಯತ್ ಸ್ಥಾನಂ ಗತ್ವಾ ಸಮಾಹಿತಃ ।
ತಪಸ್ತೀವ್ರಂ ಸಮಾಸ್ಥಾಯ ಶೋಷಯಿಷ್ಯೇ ಕಲೇವರಂ ॥ ೪೮ ॥

೪೫–೪೭. 'ನಾರಿಯು ಅಗ್ನಿಕುಂಡಕ್ಕೆ ಸಮಾನಳು, ಪುರುಷನು ತುಪ್ಪದ ಗಡಿಗೆಗೆ ಸಮಾನನು' ಎಂಬ ಹೇಳಿಕೆಯು ಮೂರ್ಖರಮಾತಾಗಿ ಕಾಣುವುದು. ವಿಮರ್ಶಿಸಿದರೆ ಬಹು ವ್ಯತ್ಯಾಸವು ತೋರುವುದು. ತುಪ್ಪದ ಗಡಿಗೆಯು ಬೆಂಕಿ ತಾಕಿದರೆ ಅಥವಾ ಶಾಖವು ತಾಕುವಷ್ಟು ಸಮೀಪದಲ್ಲಿದ್ದರೆ ಮಾತ್ರ ತುಪ್ಪವು ಕರಗುವುದೇ ಹೊರತು ಅಗ್ನಿಯ ದರ್ಶನಮಾತ್ರದಿಂದ ಕರಗುವುದಿಲ್ಲ. ಪುರುಷನಾದರೋ ಸ್ತ್ರೀಯ ದರ್ಶನಮಾತ್ರದಿಂದಲೇ ವ್ಯಾಮೋಹಗೊಂಡು ಕರಗುವನು. ಪುರುಷನು ತಾನೇ ಜಿತೇಂದ್ರಿಯತೆಯಿಲ್ಲದವನಾಗಿರುವುದರಿಂದ ಈ ವಿಚಾರದಲ್ಲಿ ಸ್ತ್ರೀಯ ಅಪರಾಧವೇನೂ ಇರುವುದಿಲ್ಲ." ಎಂದುಕೊಂಡು ದೈವವಶನಾದ ಆತನು ಜಿತೇಂದ್ರಿಯನಾಗಿ ಅಪ್ಸರಸಿಯಾದ ಪ್ರಮ್ಲೋಚೆಯನ್ನು ಬಿಟ್ಟು ಮನಸ್ಸಿನಲ್ಲಿ ಮುಂದಿನಂತೆ ಆಲೋಚಿಸಿದನು.

೪೮. "ಇಲ್ಲಿ ತಪಸ್ಸಿಗೆ ಭಂಗವನ್ನುಂಟುಮಾಡುವ ತೊಂದರೆಗಳು ಹೆಚ್ಚು. ಆದುದರಿಂದ ಈ ಆಶ್ರಮವನ್ನು ಬಿಟ್ಟು ಬೇರೆಡೆಗೆ ಹೋಗಿ ಸಮಾಧಾನದಿಂದ ಉಗ್ರವಾದ ತಪಸ್ಸನ್ನು ಮಾಡಿ ದೇಹವನ್ನು ಕೃಶಮಾಡುತ್ತೇನೆ."

ಇತಿ ನಿಶ್ಚಿತ್ಯ ಮನಸಾ ಗತ್ವಾ ಭೃಗ್ವಾಶ್ರಮಂ ಪ್ರತಿ ॥ ೪೯ ॥

ಗಂಡಕೀಸಂಗಮೇ ಸ್ನಾತ್ವಾ ಸಂತರ್ಪ್ಯ ಪಿತೃದೇವತಾಃ ।
ವಿಷ್ಣುಂ ಶಿವಂ ಚ ಸಂಪೂಜ್ಯ ತಪಃಸ್ಥಾನಂ ವಿಚಿಂತಯನ್ ॥ ೫೦ ॥

ಪಶ್ಯನ್ ಭೃಗ್ವಾಶ್ರಮಂ ರಮ್ಯಂ ಉತ್ತರಂ ಗತವಾನ್ ಶನೈಃ ॥ ೫೧ ॥

ಗಂಡಕ್ಯಾಃ ಪೂರ್ವಭಾಗೇ ತು ವಿವಿಕ್ತಂ ವಿಜನಂ ಶುಭಂ ।
ದೃಷ್ಟ್ವಾ ತೀರೇಷು ವಿಶ್ರಾಂತಸ್ತಪೋ ಭೂಮಿಮಚಿಂತಯತ್ ।
ಭೃಗುತುಂಗಂ ಸಮಾಸಾದ್ಯ ಶಂಕರಾರಾಧನೇ ರತಃ ॥ ೫೨ ॥

ಅತಪ್ಯತ ತಪೋ ಘೋರಂ ಶಿವದರ್ಶನಲಾಲಸಃ ॥ ೫೩ ॥

ಅಥ ದೀರ್ಘೇಣ ಕಾಲೇನ ಸಂತುಷ್ಟಃ ಸ ಮಹೇಶ್ವರಃ ।
ಲಿಂಗರೂಪಧರಃ ಸಾಕ್ಷಾದುಪರ್ಯಪಿ ತಥಾ ಹ್ಯಧಃ ।
ತಿರ್ಯಕ್ಚ ಜಲಧಾರಾಭಿರ್ಯುಕ್ತಸ್ತತ್ತಾಪಶಾಂತಿಕೃತ್ ॥ ೫೪ ॥

೪೯–೫೧. ಹೀಗೆಂದು ಮನದಲ್ಲಿ ನಿಶ್ಚಯಿಸಿ, ಭೃಗ್ವಾಶ್ರಮಕ್ಕೆ ಹೊರಟು ಹೋಗಿ, ಗಂಡಕೀಸಂಗಮದಲ್ಲಿ ಸ್ನಾನಮಾಡಿ, ಪಿತೃದೇವತೆಗಳಿಗೆ ಸಂತೃಪ್ತಿಯನ್ನುಂಟುಮಾಡಿ, ವಿಷ್ಣುವನ್ನೂ, ಶಿವನನ್ನೂ ಚೆನ್ನಾಗಿ ಪೂಜಿಸಿ ತಪಸ್ಸಿಗೆ ಸ್ಥಳವನ್ನು ಆಲೋಚಿಸುತ್ತಾ, ರಮ್ಯವಾದ ಆ ಭೃಗ್ವಾಶ್ರಮವನ್ನು ನೋಡುತ್ತಾ ಮೆಲ್ಲಗೆ ಉತ್ತರಕ್ಕೆ ಹೊರಟನು.

೫೨–೫೩. ಅಲ್ಲಿ ಗಂಡಕಿಯ ಪೂರ್ವಭಾಗದಲ್ಲಿ ಪರಿಶುದ್ಧವೂ ಜನರಹಿತವೂ ಶುಭಕರವೂ ಆದ ತಪೋಭೂಮಿಯನ್ನು ನೋಡಿ, ಗಂಡಕೀತೀರದಲ್ಲಿ ವಿಶ್ರಾಂತನಾಗಿ, ಜಲಪಾತದ ಉನ್ನತಪ್ರದೇಶವನ್ನು ಸೇರಿ, ಶಂಕರಾರಾಧನೆಯಲ್ಲಿ ಆಸಕ್ತನಾಗಿ ಅತನ ದರ್ಶನದಲ್ಲಿ ಕುತೂಹಲವುಳ್ಳವನಾಗಿ ಘೋರವಾದ ತಪಸ್ಸನ್ನು ಮಾಡಿದನು.

೫೪–೫೫. ಬಳಿಕ ಬಹುಕಾಲದಮೇಲೆ ಸಂತುಷ್ಟನಾದ, ಲಿಂಗರೂಪಧರನಾದ ಆ ಮಹೇಶ್ವರನು ಪ್ರತ್ಯಕ್ಷನಾಗಿ ಮೇಲೂ, ಕೆಳಗೂ, ಪಕ್ಕದಲ್ಲೂ ಜಲಧಾರೆಗಳಿಂದ ಕೂಡಿದವನಾಗಿ ಆ ದೇವದತ್ತನ ತಪಸ್ಸಿನ ತಾಪವನ್ನು

ಉವಾಚ ಚ ಪ್ರಸನ್ನಾತ್ಮಾ ಮುನೇ ಪಶ್ಯ ಚ ಮಾಂ ಶಿವಂ ।
ಮಾಮೇವಾವೇಹಿ ವಿಷ್ಣುಂ ತ್ವಂ ಮಾ ಪಶ್ಯಸ್ವಾಂತರಂ ಮಮ ॥ ೫೫ ॥

ಪೂರ್ವಮಂತರಭಾವೇನ ದೃಷ್ಟವಾನಸಿ ಯನ್ಮಮ ।
ತೇನ ವಿಘ್ನೋಽಭವದ್ಯೇನ ಗಲಿತಂ ತ್ವತ್ತಪೋ ಮಹತ್ ॥ ೫೬ ॥

ಅಧುನೈಕೇನ ಭಾವೇನ ಪಶ್ಯಂ ಸ್ತ್ವಂ ಸಿದ್ಧಿಮಾಪ್ಸ್ಯಸಿ ॥ ೫೭ ॥

ತಪಃ ಪ್ರಭಾವಾಲ್ಲಿಂಗಾನಿ ಪ್ರಾದುರ್ಭೂತಾನಿ ಯತ್ರ ವೈ ।
ಸಲಿಂಗಮಿತಿ ವಿಖ್ಯಾತಮೇತತ್‌ಸ್ಥಾನಂ ಭವಿಷ್ಯತಿ ॥
ಸ್ನಾತ್ವಾತ್ರ ಗಂಡಕೀ ತೀರ್ಥೇ ಮಮ ಲಿಂಗಾನಿ ಯೋಽರ್ಚಯೇತ್ ॥ ೫೮ ॥

ತಸ್ಯ ಯೋಗಫಲಂ ಸಮ್ಯಗ್ಭವಿಷ್ಯತಿ ನ ಸಂಶಯಃ ।
ಇತಿ ದತ್ವಾವರಂ ಶಂಭುಸ್ತತ್ರೈವಾಂತರಧೀಯತ ॥ ೫೯ ॥

ಶಾಂತಿಗೊಳಿಸುತ್ತ ಪ್ರಸನ್ನಾತ್ಮನಾಗಿ ಹೀಗೆ ಹೇಳಿದನು. "ಮುನಿಯೇ, ಶಿವನಾದ ನನ್ನನ್ನು ನೋಡು; ನನ್ನನ್ನೇ ವಿಷ್ಣುವೆಂದು ತಿಳಿ. ನೀನು ನನ್ನಲ್ಲಿ ಭೇದವನ್ನೆಣಿಸಬೇಡ.

೫೬–೫೭. ನೀನು ಪೂರ್ವದಲ್ಲಿ ನನ್ನನ್ನು ಭೇದಭಾವನೆಯಿಂದ ನೋಡಿದೆಯಾದುದರಿಂದಲೇ ವಿಘ್ನವುಂಟಾಗಿ ನಿನ್ನ ತಪಸ್ಸು ಸಡಿಲಿತು. ನಮ್ಮಿಬ್ಬರನ್ನೂ ಏಕಭಾವದಿಂದ ನೋಡು ; ನೀನು ಸಿದ್ಧಿಯನ್ನು ಪಡೆಯುವೆ.

೫೮–೫೯. ತಪಃ ಪ್ರಭಾವದಿಂದ ಲಿಂಗಗಳುದಿಸಿದ ಈ ಸ್ಥಳವು 'ಸಲಿಂಗ' ವೆಂದು ಪ್ರಸಿದ್ಧವಾಗುವುದು. ಇಲ್ಲಿ ಗಂಡಕೀತೀರ್ಥದಲ್ಲಿ ಸ್ನಾನಮಾಡಿ ನನ್ನ ಲಿಂಗವನ್ನು ಪೂಜಿಸುವವನಿಗೆ ಯೋಗಫಲವು ಪೂರ್ತಿಯಾಗಿ ಆಗುವುದರಲ್ಲಿ ಸಂಶಯವಿಲ್ಲ." ಎಂದು ವರವನ್ನು ಕೊಟ್ಟು ಆ ಶಂಭುವು ಅಲ್ಲಿಯೇ ಕಣ್ಮರೆಯಾದನು.

ದೇವದತ್ತೋಽಪಿ ಸ ಮುನಿಃ ಸಂಪ್ರಾಪ್ಯ ಜ್ಞಾನಮುತ್ತಮಂ |
ಶಿವೋಪದಿಷ್ಟಮಾರ್ಗೇಣ ಸಾಯುಜ್ಯಂ ಪರಮಂ ಗತಃ || ೬೦ ||

ಪ್ರಮ್ಲೋಚಾಪಿ ಮುನೇರ್ಗರ್ಭಂ ಸಂಪ್ರಾಪ್ಯಾಶ್ರಮಮಂತಿಕಾತ್ |
ಪ್ರಸೂತಾ ಕನ್ಯಕಾಂ ತ್ಯಕ್ತ್ವಾ ಸ್ವರ್ಗಮೇವ ಜಗಾಮ ಹ || ೬೧ ||

ಪುನರ್ಜಾತಾಮಿವಾತ್ಮಾನಂ ಮನ್ಯಮಾನಾ ಶುಚಿಸ್ಮಿತಾ || ೬೨ ||

ಸಾಪಿ ಕನ್ಯಾ ಮೃಗೈಸ್ತತ್ರ ರುರುಭಿರ್ವರ್ಧಿತಾ ಸತೀ |
ರುರುರಿತ್ಯೇವ ವಿಖ್ಯಾತಾ ಪಿತುರೇವಾಶ್ರಮೇ ಸ್ಥಿತಾ || ೬೩ ||

ಯುವಭಿಃ ಪ್ರಾರ್ಥ್ಯಮಾನಾಪಿ ಚಿತ್ತೇ ಕಂಚನ ನಾಭ್ಯಗಾತ್ |
ತತಃ ಸುನಿಶ್ಚಯಂ ಕೃತ್ವಾ ತಪಸೇ ಧೃತಮಾನಸಾ || ೬೪ ||

---

೬೦. ಆ ದೇವದತ್ತಮುನಿಯೂ ಶಿವನು ಉಪದೇಶಿಸಿದ ಮಾರ್ಗದಿಂದ ಉತ್ತಮವಾದ ಜ್ಞಾನವನ್ನು ಪಡೆದು, ಪರಮಸಾಯುಜ್ಯವನ್ನು ಪಡೆದನು.

೬೧-೬೨. ಪ್ರಮ್ಲೋಚೆಯೂ, ದೇವದತ್ತ ಮುನಿಯಿಂದ ಗರ್ಭಿಣಿಯಾಗಿ ಆಶ್ರಮ ಸಮೀಪದಲ್ಲಿಯೇ ಒಂದು ಕನ್ಯೆಯನ್ನು ಹೆತ್ತು ಅದನ್ನು ಅಲ್ಲಿಯೇ ಬಿಟ್ಟು ತನ್ನನ್ನು ತಿರುಗಿ ಹುಟ್ಟಿದವಳಂತೆ ಭಾವಿಸಿಕೊಂಡು ಕಿರುನಗೆಯುಳ್ಳವಳಾಗಿ ಸ್ವರ್ಗಕ್ಕೆ ಹೊರಟು ಹೋದಳು.

೬೩. ಪ್ರಮ್ಲೋಚೆಯು ಬಿಟ್ಟುಹೋದ ಆ ಕನ್ನೆಯನ್ನು ಅಲ್ಲಿ ರುರು (ಕಪ್ಪುಮಚ್ಚೆಗಳುಳ್ಳ ಜಿಂಕೆ)ಗಳು ಬೆಳೆಸಿದುದರಿಂದ ರುರು ಎಂಬ ಹೆಸರಿನಿಂದಲೇ ಪ್ರಸಿದ್ಧಳಾಗಿ ಆಕೆ ತಂದೆಯ ಆಶ್ರಮದಲ್ಲಿಯೇ ಇದ್ದಳು.

೬೪-೬೭. ವಿವಾಹಕ್ಕೆ ತಕ್ಕವಳಾದ ಅವಳನ್ನು ಯುವಕರು ವರಿಸಲು ಪ್ರಾರ್ಥಿಸಿದರೂ ಮನಸ್ಸಿನಲ್ಲಿಯೂ ಯಾರನ್ನೂ ವರಿಸಲಿಲ್ಲ. ಬಳಿಕ ತಪಸ್ಸಿಗೆ ಮನಸ್ಸು ತಂದು, ದೃಢನಿಶ್ಚಯವನ್ನು ಮಾಡಿ, ಭಗವಂತನನ್ನೂ, ಲಕ್ಷ್ಮೀಪತಿಯೂ

ಚಿಂತಯಂತೀ ಜಗನ್ನಾಥಂ ಭಗವಂತಂ ರಮಾಪತಿಂ ।
ಮಾಸೇ ಸಾ ಪ್ರಥಮೇ ಬಾಲಾ ಫಲಾಹಾರಪರಾಯಣಾ ॥
ಏಕಾಂತರಂ ದಿನಂ ಪ್ರಾಶ್ಯ ದ್ವಿತೀಯೇ ತ್ರಿದಿನಾಂತರೇ ॥ ೬೫ ॥

ತೃತೀಯೇ ಪಂಚಮದಿನೇ ಚತುರ್ಥೇ ಸಪ್ತಮಾಂತರೇ ।
ಪಂಚಮೇ ನವರಾತ್ರೇಣ ಷಷ್ಠೇ ಪಂಚದಶಾಹಕೇ ॥ ೬೬ ॥

ಮಾಸೇನ ಸಪ್ತಮೇ ಚೈವ ಶೀರ್ಣಪರ್ಣಾಶನಾಷ್ಟಮೇ ।
ತ್ಯಕ್ತ್ವಾ ತಾನ್ಯಪಿ ಸಾ ಬಾಲಾ ವಾಯ್ವಾಹಾರಾ ಬಭೂವ ಹ ॥ ೬೭ ॥

ಸೈವಂ ವರ್ಷಶತಂ ಸ್ಥಿತ್ವಾ ಹರಾವೇಕಾಗ್ರಮಾನಸಾ ।
ಸಮಾಧಿನಾ ಸಮಾ ಭೂತ್ವಾ ಸ್ಥಾಣುವನ್ನಿಶ್ಚಲಾಭವತ್ ॥ ೬೮ ॥

ಆದ ಜಗನ್ನಾಥನನ್ನು ಧ್ಯಾನಿಸುತ್ತಾ, ಆ ಬಾಲೆ ಮೊದಲನೆಯ ತಿಂಗಳಲ್ಲಿ ದಿನಬಿಟ್ಟು ದಿನವೂ, ಎರಡನೆಯ ತಿಂಗಳಲ್ಲಿ ಮೂರುದಿನಗಳು ಬಿಟ್ಟು ನಾಲ್ಕನೆಯ ದಿನವೂ, ಮೂರನೆಯದರಲ್ಲಿ ಐದನೆಯ ದಿನವೂ, ನಾಲ್ಕನೆಯದರಲ್ಲಿ ಏಳುದಿನಗಳು ಬಿಟ್ಟು ಎಂಟನೆಯ ದಿನವೂ, ಐದನೆಯದರಲ್ಲಿ ಒಂಬತ್ತುದಿನಗಳು ಬಿಟ್ಟು ಹತ್ತನೆಯದಿನವೂ, ಆರನೆಯದರಲ್ಲಿ ಹದಿನೈದು ದಿನಗಳಿಗೊಂದುಸಾರಿಯೂ ಫಲಾಹಾರಮಾಡುತ್ತಾ, ಏಳನೆಯ ತಿಂಗಳಲ್ಲಿ ತಿಂಗಳಿಗೊಂದುಸಾರಿ ಸಣ್ಣ ಎಲೆಗಳನ್ನು ತಿನ್ನುತ್ತಾ, ಎಂಟನೆಯ ತಿಂಗಳಲ್ಲಿ ಅದನ್ನೂ ಬಿಟ್ಟು ವಾಯ್ವಾಹಾರಳು ಅಥವಾ ನಿರಾಹಾರಳಾದಳು.

೬೮. ಆ ರುರು ಹರಿಯಲ್ಲಿ ಏಕಾಗ್ರಚಿತ್ತಳಾಗಿ, ನೂರುವರ್ಷ ಹೀಗೆ ಸಮಾಧಿಯೋಗದಲ್ಲಿ ಸರಿಯಾಗಿದ್ದು, ಮೋಟುಮರದಂತೆ ನಿಶ್ಚಲಳಾಗಿದ್ದಳು.

ದ್ವಂದ್ವಾನಿ ನಾವಿದಚ್ಚಾಪಿ ಆತ್ಮಭೂತಾಂತರಂ ವಿನಾ |
ಪರಾಂಕಾಷ್ಠಾಂ ಸಮಾಪನ್ನಾ ಪ್ರಕಾಶಮಯಕಾಂತಿಧೃಕ್ || ೬೯ ||

ತತ್ತೇಜಸಾ ವೃತಂ ಸರ್ವಂ ತದಾ ದೃಷ್ಟ್ವಾ ವಸುಂಧರೇ |
ಅಹಂ ವಿಸ್ಮಯಮಾಪನ್ನಸ್ತಸ್ಯಾಃ ಪ್ರತ್ಯಕ್ಷತಾಂ ಗತಃ || ೭೦ ||

ಸನ್ನಿರುದ್ಧೇಂದ್ರಿಯಗ್ರಾಮಾ ನಾಚಕ್ಷತ ಬಹಿಃ ಸ್ಥಿತಂ |
ತದಾ ಹೃಷೀಕಾಣ್ಯಾವಿಶ್ಯ ಸಂಹೃತ್ಯ ಸ್ವಂ ಹೃದೋ ಬಹಿಃ || ೭೧ ||

ಸ್ಥಿತೋಽಹಂ ವಸುಧೇ ದೇವಿ ಅಕ್ಷ್ಣೋಃ ಪ್ರತ್ಯಕ್ಷತಾಂ ಗತಃ |
ಹೃಷೀಕೇಶ ಇತಿ ಖ್ಯಾತೋ ನಾಮ್ನಾ ತತ್ರೈವ ಸುಸ್ಥಿತಃ || ೭೨ ||

---

೬೯. ಆಕೆ ಆತ್ಮಭೂತಾಂತರವನ್ನು (ತನಗೂ ಪರಮಾತ್ಮನಿಗೂ ಇರುವ ಅಂತರವನ್ನು ಅಥವಾ ಪರಮಾತ್ಮನಿಗೂ, ಭೂತಗಳಿಗೂ ಇರುವ ಅಂತರವನ್ನು) ಹೊರತು, ಶೀತೋಷ್ಣಕಷ್ಟಸುಖಾದಿಗಳನ್ನು ಅರಿಯದವಳಾಗಿದ್ದಳು. ಪ್ರಕಾಶಮಯವಾದ ಕಾಂತಿಯನ್ನು ಪಡೆದ ಆಕೆ ತಪೋಯೋಗದ ಕೊನೆಯನ್ನು ಮುಟ್ಟಿದಳು.

೭೦. ವಸುಂಧರೇ ಸರ್ವವೂ ಅವಳ ತೇಜಸ್ಸಿನಿಂದ ಆವೃತವಾಯಿತು. ಆಗ ಅದನ್ನು ನೋಡಿ ವಿಸ್ಮಯಗೊಂಡ ನಾನು ಆಕೆಗೆ ಪ್ರತ್ಯಕ್ಷನಾದೆನು.

೭೧. ಇಂದ್ರಿಯಗಳ ಸಮೂಹವನ್ನು ಪೂರ್ತಿಯಾಗಿ ತಡೆದಿದ್ದ ಎಂದರೆ (ಜಗತ್ತಿನ) ಜ್ಞಾನವಿಲ್ಲದ ಆಕೆ ಹೊರಗೆನಿಂತಿದ್ದ ನನ್ನನ್ನು ನೋಡಲೂ ಇಲ್ಲ. ಮಾತನಾಡಲೂ ಇಲ್ಲ. ಭೂದೇವಿ, ಆಗ ಹೊರಗಿದ್ದ ನಾನು ನನ್ನ ಹೃದಯದಿಂದ ನನ್ನನ್ನು ಆಕರ್ಷಿಸಿ, ಆಕೆಯ ಇಂದ್ರಿಯಗಳಲ್ಲಿ ಹೊಕ್ಕು ಆಕೆಯ ಕಣ್ಣುಗಳಿಗೆ ಕಾಣಿಸಿಕೊಂಡೆನು.

೭೨. ಹೃಷೀಕ(ಇಂದ್ರಿಯ)ಗಳನ್ನು ವಶಪಡಿಸಿಕೊಂಡು, ಅಲ್ಲಿಯೇ ಇದ್ದು ಪ್ರತ್ಯಕ್ಷನಾದುದರಿಂದ ನಾನು ಹೃಷೀಕೇಶನೆಂಬ ಹೆಸರಿನಿಂದ ಪ್ರಸಿದ್ಧನಾದೆನು.

ಸಾ ಮಾಂ ಯದ್ವೈವ ನಾಪಶ್ಯದುನ್ಮೀಲ್ಯ ನಯನೇ ತತಃ ।
ಬಹಿಃ ಸ್ಥಿತಂ ಚ ಮಾಂ ದೃಷ್ಟ್ವಾ ಪ್ರಣನಾಮ ಕೃತಾಂಜಲಿಃ ॥ ೭೩ ॥

ಗದ್ಗದಸ್ವರಸಂಯುಕ್ತಾ ಅಶ್ರುಕ್ಲಿನ್ನವಿಲೋಚನಾ ।
ರೋಮಾಂಚಿತ ತನುಶ್ಚಾಸೀತ್ ಕದಂಬಮುಕುಲಾಕೃತಿಃ ॥ ೭೪ ॥

ತಥಾಭೂತಾಂ ತು ತಾಂ ದೃಷ್ಟ್ವಾ ಪ್ರಾವೋಚಮಹಮಂಗನಾಂ ॥ ೭೫ ॥

ಅಯಿ ಬಾಲೇ ವಿಶಾಲಾಕ್ಷಿ ತುಷ್ಟೋಽಹಂ ತಪಸಸ್ತವ ।
ವರಂ ಯಾಚಯ ಮತ್ತಸ್ತ್ವಂ ಯತ್ತೇ ಮನಸಿವರ್ತತೇ ॥ ೭೬ ॥

ಅದೇಯಮಪಿ ತೇ ದದ್ಮಿ ಯದನ್ಯೇಷಾಂ ಸುದುರ್ಲಭಂ ।
ಇತಿ ಶ್ರುತ್ವಾ ಪ್ರಭೋರ್ವಾಕ್ಯಂ ಪ್ರಣಮ್ಯ ಚ ಪುನಃ ಪುನಃ ॥ ೭೭

೭೩–೭೪. ಮತ್ತೆ ಆಕೆ ಅಂತರ್ನೇತ್ರದಿಂದ ನನ್ನನ್ನು ಕಾಣದೆ ಬಳಿಕ ಕಣ್ಣನ್ನು ತೆರೆದು ಹೊರಗೂ ಇದ್ದ ನನ್ನನ್ನು ನೋಡಿ, ಪ್ರಣಾಮಮಾಡಿದಳು. ಕೈಮುಗಿದುಕೊಂಡು ಗದ್ಗದ ಧ್ವನಿಯುಳ್ಳವಳೂ, ನೀರಿಂದ ತುಂಬಿದ ಕಣ್ಣುಳ್ಳವಳೂ, ರೋಮಾಂಚಿತಗಾತ್ರಳೂ ಆಗಿ ಕದಂಬದ ಮೊಗ್ಗಿನಂತಿದ್ದಳು.

೭೫–೭೬. ಹಾಗಾಗಿದ್ದ ಆ ಕನ್ನೆಯನ್ನು ನೋಡಿ, ನಾನು, "ಎಲೆ ಬಾಲೆ, ವಿಶಾಲಕ್ಷಿ, ನಿನ್ನ ತಪಸ್ಸಿನಿಂದ ನಾನು ಸಂತುಷ್ಟನಾಗಿದ್ದೇನೆ. ನಿನ್ನ ಮನಸ್ಸಿನಲ್ಲಿರುವ ವರವನ್ನು ನನ್ನಲ್ಲಿ ಬೇಡು. ಇತರರಿಗೆ ಬಹು ದುರ್ಲಭವೂ, ಕೊಡಬಾರದುದೂ ಆದರೂ ನಿನಗೆ ಕೊಡುವೆನು" ಎಂದು ಹೇಳಿದನು.

೭೭–೭೮. ಪ್ರಭುವಾದ ನನ್ನ ಆ ಮಾತನ್ನು ಕೇಳಿ, ಆ ರುರು ಮತ್ತೆ ಮತ್ತೆ ವಂದಿಸಿ, ಸ್ತುತಿಸಿ, ದೇವದೇವೇಶನಾದ ನನಗೆ ಕೈಜೋಡಿಸಿಕೊಂಡು

ಸ್ತುತ್ವಾ ತಂ ದೇವದೇವೇಶಂ ಪ್ರಬದ್ಧಕರಸಂಪುಟಾ ।
ದದಾಸಿ ಚೇದ್ವರಂ ಮಹ್ಯಂ ದೇವದೇವ ಜಗತ್ಪತೇ ॥ ೭೮ ॥

ಅನೇನೈವ ಸ್ವರೂಪೇಣ ಭಗವನ್ ಸ್ಥಾತುಮರ್ಹಸಿ ।
ಸ್ಥಿತೋಽಸ್ಮ್ಯತ್ರೈವ ಭದ್ರಂತೇ ಅಪರಂ ವರಯಾಶು ಮೇ ॥ ೭೯ ॥

ದುರ್ಲಭಂ ತೇ ವರಂ ದದ್ಮಿ ತಪಸಾಹಂ ಪ್ರತೋಷಿತಃ ।
ಇತ್ಯುಕ್ತಾ ಮಾಂ ಪ್ರಣಮ್ಯಾಹ ರುರುಃ ಸಾ ಸಂಶಿತವ್ರತಾ ॥ ೮೦ ॥

ಯದಿ ಪ್ರಸನ್ನೋ ದೇವೇಶ ತದಾ ಮಾಂ ಕುರು ಪಾವನೀಂ ।
ಮನ್ನಾಮ್ನಾ ಕ್ಷೇತ್ರಮೇತಚ್ಚ ಖ್ಯಾತಂ ಭವತು ನಾನ್ಯಥಾ ॥ ೮೧ ॥

"ದೇವದೇವ, ಜಗತ್ಪತೀ, ನನಗೆ ವರವನ್ನು ಕೊಡುವುದಾದರೆ, ಭಗವಂತ, ನೀನು ನಿನ್ನ ಇದೇ ರೂಪದಿಂದ ಇಲ್ಲಿರು" ಎಂದಳು.

೭೯. "ಇಲ್ಲಿಯೇ ಇರುತ್ತೇನೆ. ನಿನಗೆ ಮಂಗಳವಾಗಲಿ. ಬೇರೆ ವರವನ್ನು ಬೇಗನೆ ಬೇಡು. ನಿನ್ನ ತಪದಿಂದ ಸಂತೋಷವನ್ನು ಪಡೆದ ನಾನು ದುರ್ಲಭವಾದ ವರವನ್ನು ನಿನಗೆ ಕೊಡುತ್ತೇನೆ" ಎಂದೆನು.

೮೦–೮೧. ನಾನು ಹಾಗೆ ಹೇಳಲು ಉಗ್ರವ್ರತೆಯಾದ ಆ ರುರು ನನಗೆ ಪ್ರಣಾಮಮಾಡಿ, "ದೇವೇಶ, ನೀನು ಒಲಿದಿದ್ದರೆ ನನ್ನನ್ನು ಪಾವನಳನ್ನಾಗಿ ಮಾಡು. ಈ ಕ್ಷೇತ್ರವು ಬೇರಾವುದರಿಂದಲೂ ಅಲ್ಲದೆ ನನ್ನ ಹೆಸರಿನಿಂದಲೇ 'ಪ್ರಸಿದ್ಧವಾಗಲಿ" ಎಂದು ಬೇಡಿದಳು.

ತಾಮಹಂ ದೇವಿ ಸುಭಗೇ ಪ್ರಾವೋಚಂ ಪುನರೇವ ಹಿ ।
ತೀರ್ಥಾನಾಂ ಪರಮಂ ತೀರ್ಥಂ ತವ ದೇಹೋ ಭವತ್ವಯಂ ॥ ೮೨ ॥

ತವ ನಾಮ್ನಾ ಚ ವಿಖ್ಯಾತಮೇತತ್ ಕ್ಷೇತ್ರಂ ಭವಿಷ್ಯತಿ ।
ತವ ತೀರ್ಥೇ ಕೃತಸ್ನಾನಸ್ತ್ರಿರಾತ್ರೋಪೋಷಿತೋ ನರಃ ॥ ೮೩ ॥

ವಿಲೋಕ್ಯ ಮಾಂ ಭವೇತ್ಪೂತೋ ಮಮವಾಕ್ಯಾನ್ನಸಂಶಯಃ ।
ಬ್ರಹ್ಮಹತ್ಯಾದಿ ಪಾಪಾನಿ ಜ್ಞಾತ್ವಾಜ್ಞಾತ್ವಾ ಕೃತಾನ್ಯಪಿ ॥ ೮೪ ॥

ಯಾಸ್ಯಂತಿ ವಿಲಯಂ ಕ್ಷಿಪ್ರಮೇವಮೇತನ್ನಸಂಶಯಃ ।
ಇತಿ ದತ್ವಾ ವರಾಂಸ್ತಸ್ಯೈ ತತ್ರೈವಾಂತರ್ಹಿತಃ ಸ್ಥಿತಃ ॥ ೮೫ ॥

೮೨–೮೫. ದೇವಿ, (ಸುಭಗೇ)ಸುಂದರಿ, ನಾನು ಮತ್ತೆ ಅವಳನ್ನು ಕುರಿತು "ಈ ನಿನ್ನ ದೇಹವು ತೀರ್ಥಗಳಲ್ಲಿ ಪರಮತೀರ್ಥವಾಗಲಿ. ಈ ಕ್ಷೇತ್ರವು ನಿನ್ನ ಹೆಸರಿನಿಂದ ಪ್ರಸಿದ್ಧವಾಗುವುದು. ನಿನ್ನ ತೀರ್ಥದಲ್ಲಿ ಮೂರುರಾತ್ರಿ ಉಪವಾಸವಿದ್ದು ಸ್ನಾನಮಾಡಿ, ನನ್ನ ಸಂದರ್ಶನವನ್ನು ಮಾಡುವವನು ನಾನು ಈಗ ಹೇಳಿರುವಂತೆ ಪರಿಶುದ್ಧನಾಗುವುದರಲ್ಲಿ ಸಂಶಯವಿಲ್ಲ. ತಿಳಿದೋ ತಿಳಿಯದೆಯೋ ಮಾಡಿದ ಬ್ರಹ್ಮಹತ್ಯಾದಿ ಪಾಪಗಳು ಕೂಡ ನಿನ್ನಲ್ಲಿ ಸ್ನಾನವನ್ನು ಮಾಡಿ ನನ್ನನ್ನು ಸಂದರ್ಶಿಸುವುದರಿಂದ ಬೇಗನೆ ನಾಶವಾಗುವುವು. ಇದರಲ್ಲಿ ಸಂದೇಹವಿಲ್ಲ" ಎಂದು ಹೇಳಿ ವರವನ್ನು ಕೊಟ್ಟು, ಅಲ್ಲಿಯೇ ಕಣ್ಮರೆಯಾಗಿ ನಿಂತೆನು.

ಸಾಪಿ ಕಾಲೇನ ಸಂಜಾತಾ ತೀರ್ಥಭೂತಾ ತಥಾಭವತ್ ।
ಏತತ್ತೇ ಕಥಿತಂ ದೇವಿ ರುರುಮಾಹಾತ್ಮ್ಯಮುತ್ತಮಂ ॥ ೮೬ ॥

ರುರುಕ್ಷೇತ್ರಸ್ಯ ಪ್ರಭವ ಮೇತದ್ಗುಹ್ಯಂ ಪರಂ ಮಮ ॥ ೮೭ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ರುರುಕ್ಷೇತ್ರಹೃಷೀಕೇಶಯೋಃ ಮಾಹಾತ್ಮ್ಯಂ ನಾಮ ಷಟ್ಚತ್ವಾರಿಂಶದಧಿಕಶತತಮೋಽಧ್ಯಾಯಃ

---

೮೬. ಆ ರುರುದೇವಿಯೂ ಕಾಲಕ್ರಮದಲ್ಲಿ ನನ್ನ ವರದಂತೆ ತೀರ್ಥವಾಗಿ ಜನಿಸಿದಳು.

೮೭. ದೇವಿ, ಉತ್ತಮವಾದ ಈ ರುರುಮಹಿಮೆಯನ್ನೂ, ನನ್ನ ರುರುಕ್ಷೇತ್ರೋತ್ಪತ್ತಿಯ ಈ ಉತ್ತಮ ರಹಸ್ಯವನ್ನೂ ನಿನಗೆ ಹೇಳಿದುದಾಯಿತು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು "ದೇವದತ್ತನೆಂಬ ಮುನಿಯು ರುರುಕ್ಷೇತ್ರದಲ್ಲಿ ಉಗ್ರವಾದ ತಪಸ್ಸನ್ನು ಮಾಡುತ್ತಿದ್ದನು. ಇಂದ್ರನು ಪ್ರಮ್ಲೋಚೆಯೆಂಬ ಅಪ್ಸರಸ್ತ್ರೀಯನ್ನೂ, ಕಾಮಾದಿಗಳನ್ನು, ತಪಸ್ಸಿಗೆ ಭಂಗಮಾಡುವುದಕ್ಕಾಗಿ ಕಳುಹಿಸಿದನು. ಪ್ರಮ್ಲೋಚೆಯ ಗಾನರೂಪಾದಿಗಳಿಂದ ಮೋಹಿತನಾದ ದೇವದತ್ತನು, ಅವಳನ್ನು ವರಿಸಿ ಸುಖಿಸಿದನು. ಗರ್ಭವತಿಯಾದ ಪ್ರಮ್ಲೋಚೆ ಒಂದು ಹೆಣ್ಣುಮಗುವನ್ನು ಪ್ರಸವಿಸಿ ಆ ಆಶ್ರಮದಲ್ಲಿಯೇ ಬಿಟ್ಟು ಸ್ವರ್ಗಕ್ಕೆ ಹೊರಟು ಹೋದಳು. ಆ ಮಗುವನ್ನು ರುರುಗಳೆಂಬ ಹೆಸರಿನ ಜಿಂಕೆಗಳು ಬೆಳೆಸಿದುವು. ಆದುದರಿಂದ ಆ ಮಗುವಿಗೆ ರುರುವೆಂದೇ ಹೆಸರಾಯಿತು. ವಯಸ್ಸಾಗಲು ರುರು ತಪಸ್ಸನ್ನು ಕೈಗೊಂಡು ಯೋಗಸಿದ್ಧಳಾದಳು. ವಿಷ್ಣುವು ಪ್ರತ್ಯಕ್ಷನಾಗಿ ಅವಳು ತಪಸ್ಸನ್ನು ಮಾಡಿದ ಕ್ಷೇತ್ರಕ್ಕೆ ರುರುಕ್ಷೇತ್ರವೆಂದು ಹೆಸರಿಟ್ಟು ಅವಳು ಪುಣ್ಯತೀರ್ಥವಾಗುವಂತೆ ಅನುಗ್ರಹಿಸಿ, ಆ ಕ್ಷೇತ್ರದಲ್ಲಿ ಹೃಷೀಕೇಶನೆಂಬ ಹೆಸರಿನ ಮೂರ್ತಿಯಾಗಿ ನೆಲಸಿದನು" ಎಂದು ಭೂದೇವಿಗೆ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರನಲವತ್ತಾರನೆಯ ಅಧ್ಯಾಯ.

॥ ಶ್ರೀಃ ॥

ಸಪ್ತಚತ್ವಾರಿಂಶದಧಿಕಶತತಮೋಽಧ್ಯಾಯಃ

ಅಥ ಗೋನಿಷ್ಕ್ರಮಣಮಾಹಾತ್ಮ್ಯಂ

॥ ಧರಣ್ಯುವಾಚ ॥

ಆಶ್ಚರ್ಯಂ ಶ್ರುತಂ ಹ್ಯೇತದ್ರುರುಕ್ಷೇತ್ರಸಮುದ್ಭವಂ ।
ಹೃಷೀಕೇಶಸ್ಯ ಮಹಿಮಾ ತ್ವಯಾ ಯ ಉಪವರ್ಣಿತಃ ॥ ೧ ॥

ಅನ್ಯಚ್ಚ ಯತ್ಪರಂಗುಹ್ಯಂ ಕ್ಷೇತ್ರಂ ಪರಮಪಾವನಂ ।
ವಕ್ತುಮರ್ಹಸಿ ದೇವೇಶ ಪರಂ ಕೌತೂಹಲಂ ಮಮ ॥ ೨ ॥

॥ ಶ್ರೀವರಾಹ ಉವಾಚ ॥

ಶೃಣು ಭೂಮೇ ಪ್ರಯತ್ನೇನ ತಾರಣಂ ಪರಮಂ ಮಮ ।
ಗುಹ್ಯಮಸ್ತ್ಯಪರಂ ಚೈವ ಹಿಮಶೃಂಗಶಿಲೋಚ್ಚಯೇ ॥ ೩ ॥

ನೂರ ನಲವತ್ತೇಳನೆಯ ಅಧ್ಯಾಯ

ಗೋನಿಷ್ಕ್ರಮಣಕ್ಷೇತ್ರಮಹಿಮೆ

೧–೨. ಭೂದೇವಿ—ದೇವೇಶ, ನೀನು ವರ್ಣಿಸಿದ ಆಶ್ಚರ್ಯವಾದ ರುರುಕ್ಷೇತ್ರದ ಉತ್ಪತ್ತಿಯನ್ನೂ, ಮಹಿಮೆಯನ್ನೂ ಕೇಳಿದುದಾಯಿತು. ನನಗೆ ಬಹಳ ಕುತೂಹಲವಾಗಿದೆ. ಬೇರಾವುದಾದರೂ ಪರಮ ಪಾವನವಾದ ರಹಸ್ಯಕ್ಷೇತ್ರವನ್ನು ಹೇಳು.

೩–೪. ಶ್ರೀವರಾಹ—ಭೂಮಿ, ಗಮನಿಸಿ ಕೇಳು. ಹಿಮಶೃಂಗ ಪರ್ವತದಲ್ಲಿ ಉತ್ಕೃಷ್ಟವೂ ರಹಸ್ಯವೂ, ಸಂಸಾರತಾರಕವೂ ಆದ ಗೋನಿಷ್ಕ್ರ

ಗೋನಿಷ್ಕ್ರಮಣಕಂ ನಾಮ ಗಾನ್ತೋ *ಯತ್ರಾವತಾರಿತಾಃ ।
ಯಥಾನಿಷ್ಕ್ರಮಣಂ ಪ್ರಾಪ್ಯ ಸುರಭೀಣಾಂ ವಸುಂಧರೇ ॥ ೪ ॥

ಸಪ್ತತಿರ್ಯತ್ರ ಕಲ್ಪಾನಿ ಔರ್ವೋ ಯತ್ರ ಪ್ರಜಾಪತಿಃ ।
ತಪಶ್ಚಕಾರ ಪರಮಂ ಮಮ ಮಾಯಾಬಲಾನ್ವಿತಃ ॥ ೫ ॥

ತಸ್ಯೈವಂ ವರ್ತಮಾನಸ್ಯ ಯಾತಿ ಕಾಲೇ ಮಹತ್ತರೇ ।
ಏವಂ ಹಿ ತಪ್ಯಮಾನಸ್ಯ ಸರ್ವಲೋಕಸ್ಯ ಸಂಶಯಃ ॥ ೬ ॥

ನ ವರಂ ಪ್ರಾರ್ಥಯತ್ಯೇಷ ಲಾಭಾಲಾಭಸಮನ್ವಿತಃ ।
ಸೂಚಕೋಪಿ ನ ವಿದ್ಯೇತ ಬಲಿಕರ್ಮಸು ಸಂಯುತಃ ॥ ೭ ॥

ಅಥ ದೀರ್ಘಸ್ಯ ಕಾಲಸ್ಯ ಕಶ್ಚಿದ್ಬ್ರಹ್ಮಯತಿಸ್ತದಾ ।
ತಪಸ್ತಪಸ್ಯತಿ ಮುನೌ ತಸ್ಮಿನ್ ಶೈಲೋಚ್ಚಯೇ ಧರೇ ॥ ೮ ॥

ಮಣಕವೆಂಬ ಹೆಸರಿನ ಬೇರೊಂದು ಕ್ಷೇತ್ರವಿದೆ. ಕಾಮಧೇನುವಿನ ಹತ್ತಿರದಿಂದ ಹೊರಡಿಸಿ ಹಸುಗಳನ್ನು ಅಲ್ಲಿಳಿಸಿದ್ದೆನು.

೫. ಔರ್ವನೆಂಬ ಬ್ರಹ್ಮನು ಎಪ್ಪತ್ತು ಕಲ್ಪಗಳಕಾಲ ನನ್ನ ಮಾಯಾ ಬಲದಿಂದ ಕೂಡಿದವನಾಗಿ ಅಲ್ಲಿ ಉತ್ತಮವಾದ ತಪಸ್ಸನ್ನು ಮಾಡುತ್ತಿದ್ದನು.

೬-೭. ಬಹುಕಾಲ ಕಳೆಯಲು, ಅವನ ತಪೋಜ್ವಾಲೆಯಿಂದ ತಾಪಗೊಂಡ ಲೋಕಕ್ಕೆಲ್ಲಾ, "ಪೂಜಾಕರ್ಮಬದ್ಧನೂ, ಲಾಭಾಲಾಭಗಳಲ್ಲಿ ಸಮದೃಷ್ಟಿಯುಳ್ಳವನೂ ಆದ ಈತನು ಯಾವ ವರವನ್ನೂ ಪ್ರಾರ್ಥಿಸುವುದಿಲ್ಲ. ಏಕೆ ತಪಸ್ಸುಮಾಡುತ್ತಿರುವನೆಂಬುದರ ಸೂಚನೆಯೂ ಇಲ್ಲವಾಗಿದೆ" ಎಂಬ ಸಂದೇಹವುಂಟಾಯಿತು.

೮. ಭೂಮಿ, ಬಳಿಕ ಬಹುಕಾಲದಮೇಲೆ ಒಬ್ಬ ಬ್ರಹ್ಮರ್ಷಿಯು ಅದೇ ಹಿಮಗಿರಿಯಲ್ಲಿ ತಪಸ್ಸನ್ನು ಮಾಡುತ್ತಿರಲು ಈಶ್ವರನೂ ಆ ಋಷಿಯ ಪಕ್ಕಕ್ಕೆ ಬಂದನು.

---

* ಯತ್ರಪ್ರತಾರಿತಾಃ

ಈಶ್ವರೋಽಪಿ ಮಹಾಭಾಗೇ ತತ್ಪಾರ್ಶ್ವಂ ಸಮುಪಾಗತಃ ।
ಗೋನಿಷ್ಕ್ರಮೇತಿ ವಿಖ್ಯಾತೇ ತಸ್ಮಿಂಸ್ತೀರ್ಥೇ ಮಹೌಜಸಿ ॥ ೯॥

ತತ್ರ ತ್ವೌರ್ವೋ ಮಹಾಭಾಗೇ ತಪ್ಯತೇ ಸಮದರ್ಶನಃ ।
ಪದ್ಮಾನಾಂ ಕಾರಣಾದೌರ್ವೋ ಗಂಗಾದ್ವಾರಮುಪಾಗತಃ ॥ ೧೦ ॥

ತನ್ನಿರ್ಗತಂ ತತೋ ಜ್ಞಾತ್ವಾ ಔರ್ವಂ ಸರ್ವೇ ತಪಸ್ವಿನಃ ।
ಮಹೇಶ್ವರೋ ಮಹಾತೇಜಾಃ ಸಂಭ್ರಮಾತ್ಸಮುಪಾಗತಾಃ ॥ ೧೧ ॥

ಫಲಪುಷ್ಪಸಮಾಕೀರ್ಣಾ ಲಕ್ಷ್ಮೀಶ್ಚೈವೋಪಜಾಯತೇ ।
ಆಶ್ರಮಂ ರೂಪಸಂಪನ್ನಂ ಫಲಪುಷ್ಪೋಪಶೋಭಿತಂ ॥ ೧೨ ॥

ತಚ್ಚ ವೈ ಭಸ್ಮಸಾದ್ಭೂತಂ ಮಹಾರುದ್ರಸ್ಯ ತೇಜಸಾ ।
ದಗ್ಧ್ವಾ ತಂ ಚಾಶ್ರಮಂ ಪುಣ್ಯಂ ಔರ್ವಸ್ಯ ಸುಮಹತ್ಪ್ರಿಯಂ ॥ ೧೩ ॥

೯-೧೦. ಮಹಾಭಾಗ್ಯೇ, ಗೋನಿಷ್ಕ್ರಮವೆಂದು ಪ್ರಸಿದ್ಧವಾದುದೂ, ಅತಿಶ್ರೇಷ್ಠವೂ ಆದ ಆ ತೀರ್ಥದಲ್ಲಿ, ಸಮದೃಷ್ಟಿಯುಳ್ಳವನಾಗಿ ತಪಸ್ಸನ್ನು ಮಾಡುತ್ತಿದ್ದ ಆ ಔರ್ವಮುನಿ ದೇವಾರ್ಚನೆಗೆ ಕಮಲಗಳನ್ನು ತರಲು ಗಂಗಾದ್ವಾರಕ್ಕೆ ಹೋದನು.

೧೧. ಅವನು ಆಶ್ರಮದಿಂದ ಹೊರಟು ಹೋಗಿರುವುದನ್ನು ತಿಳಿದು ಎಲ್ಲಾ ತಪಸ್ವಿಗಳೂ, ಮಹಾತೇಜನಾದ ಈಶ್ವರನೂ ತ್ವರೆಯಿಂದ ಆತನ ಆಶ್ರಮಕ್ಕೆ ಬಂದರು.

೧೨. ಫಲಪುಷ್ಪಗಳಿಂದ ಸೊಗಸುತ್ತಾ, ಕಾಂತಿಯುತವಾಗಿರುವ ಸುಂದರವಾದ ಆ ಆಶ್ರಮವು ಮಹಾರುದ್ರನ ತೇಜಸ್ಸಿನಿಂದ ಸುಟ್ಟು ಬೂದಿಯಾಯಿತು.

೧೩. ರುದ್ರನೂ ಔರ್ವಮುನಿಗೆ ಅತಿಪ್ರಿಯವಾಗಿದ್ದ ಆ ಪುಣ್ಯಾಶ್ರಮವನ್ನು ಸುಟ್ಟು, ಬಳಿಕ, ಬೇಗನೆಯೇ ಹಿಮಾಲಯಕ್ಕೆ ಬಂದು ಬಿಟ್ಟನು.

ಈಶ್ವರೋಽಪಿ ತತಃ ಪ್ರಾಪ್ತಃ ಶೀಘ್ರಮೇವ ಹಿಮಾಲಯಂ ।
ಏತಸ್ಮಿನ್ನಂತರೇ ದೇವಿ ಗೃಹ್ಯ ಪುಷ್ಪಕರಂಡಕಂ ॥ ೧೪ ॥

ಆಶ್ರಮಂ ಸಮನುಪ್ರಾಪ್ತ ಔರ್ವೋಽಪಿ ಮುನಿಪುಂಗವಃ ।
ಶಾಂತೋ ದಾಂತಃ ಕ್ಷಮಾಶೀಲಃ ಸತ್ಯವ್ರತಪರಾಯಣಃ ॥ ೧೫ ॥

ದೃಷ್ಟ್ವಾ ಸ್ವಮಾಶ್ರಮಂ ದಗ್ಧಂ ಬಹುಪುಷ್ಪ ಫಲೋದಕಂ ।
ಮನ್ಯುನಾ ಪರಮಾವಿಷ್ಟೋ ದುಃಖನೇತ್ರಪರಿಪ್ಲುತಃ ॥ ೧೬ ॥

ಉವಾಚ ಕ್ರೋಧರಕ್ತಾಕ್ಷಃ ವಚನಂ ನಿರ್ದಹನ್ನಿವ ।
ಯೇನ್ನೈಷ ಚಾಶ್ರಮೋ ದಗ್ಧೋ ಬಹುಪುಷ್ಪಫಲೋದಕಃ ॥ ೧೭ ॥

ಸೋಽಪಿ ದುಃಖೇನ ಸಂತಪ್ತಃ ಸರ್ವಲೋಕಾನ್ ಭ್ರಮಿಷ್ಯತಿ ।
ಏವಮೌರ್ವೇಣ ದತ್ತೇ ತು ಶಾಪೇ ತಸ್ಮಿನ್ಮಹೌಜಸಿ ॥ ೧೮ ॥

---

೧೪. ದೇವಿ, ಅಷ್ಟರಲ್ಲೇ ಮುನಿವರ್ಯನಾದ ಔರ್ವನೂ ಹೂವಿನ ಪಾತ್ರೆಯನ್ನೂ ತೆಗೆದುಕೊಂಡು ಆಶ್ರಮಕ್ಕೆ ಬಂದನು.

೧೫-೧೭. ಶಾಂತನೂ, ಜಿತೇಂದ್ರಿಯನೂ, ಕ್ಷಮಾಶೀಲನೂ, ಸತ್ಯವ್ರತ ನಿರತನೂ ಆದ ಆ ಔರ್ವಮುನಿ, ಬಹಳವಾದ ಹೂಹಣ್ಣುಕಾಯಿ ನೀರುಗಳಿಂದ ಕೂಡಿದ್ದ ತನ್ನ ಆಶ್ರಮವು ಸುಟ್ಟುಹೋಗಿರುವುದನ್ನು ನೋಡಿ, ಬಹು ಕೋಪದುಃಖಗಳಿಂದ ಕೆಂಪಾದ ಕಣ್ಣುಳ್ಳವನೂ ಆಗಿ, ಸುಟ್ಟುರಿಸುವನಂತೆ "ಹೆಚ್ಚಾದ ಪುಷ್ಪಫಲೋದಕಗಳುಳ್ಳ ಈ ಆಶ್ರಮವನ್ನು ಯಾರು ಸುಟ್ಟರೋ ಅವನೂ ದುಃಖದಿಂದ ಸಂತಪ್ತನಾಗಿ ಲೋಕಗಳನ್ನೆಲ್ಲಾ ಅಲೆಯಲಿ" ಎಂದು ಶಪಿಸಿದನು.

೧೮-೧೯. ದೇವೇಶ, ಹಾಗೆ ಔರ್ವಮುನಿಯು ಅತಿ ಬಲವಾದ ಆ ಶಾಪವನ್ನು ಕೊಡಲು ಮಹಾಭಯದಿಂದ ಲೋಕಗಳೆಲ್ಲಾವನೊಬ್ಬನೂ

ಮಹಾಭಯೊತ್ತು ಲೋಕಾನಾಂ ನ ಕಶ್ಚಿತ್ಸ್ವರ್ಯವೀರಯತ್ ।
ತತ್ಕ್ಷಣಾದೇವ ದೇವೇಶಿ ಈಶೋಽಪಿ ಜಗತೋ ವಿಭುಃ
ಮಹಾದಾಹೇನ ಸಂತಪ್ತಃ ಶಂಭುರ್ದೇವೀಮುವಾಚಹ । ॥ ೧೯ ॥

ಔರ್ವಸ್ಯ ತು ತಪೋ ದೃಷ್ಟ್ವಾ ಭೀತೈರ್ದೇವೈರುದಾಹೃತಂ
ದಹ್ಯತೇ ಸ್ಮ ಜಗತ್ಸರ್ವಂ ಸ ತು ಕಿಂಚಿನ್ನಚೇಚ್ಛತಿ । ॥ ೨೦ ॥

ಕೋವಾ ಪ್ರತಿವಿಧಿಸ್ತತ್ರ ಯಥಾ ಸರ್ವಸ್ಯ ಸಂಭವೇತ್ ।
ಏವಮುಕ್ತೋ ಮಯಾ ಕ್ರೋಧಾದೀಕ್ಷಿತಸ್ತಸ್ಯ ಚಾಶ್ರಮಃ ॥ ೨೧ ॥

ದಗ್ಧೋಽಭವತ್ ಕ್ಷಣೇನೈವ ವಯಂ ತಸ್ಮಾದ್ವಿನಿರ್ಗತಾಃ ॥ ೨೨ ॥

ಏತದ್ದುಃಖೇನ ಸಂತಪ್ತೋ ಮನ್ಯುನಾ ಚ ಪರಿಪ್ಲುತಃ ।
ಔರ್ವಃ ಶಶಾಪ ರೋಷೇಣ ತೇನ ತಪ್ತಾ ವಯಂ ಶಿವೇ ॥ ೨೩ ॥

ವೀರನಾಗಿರಲಿಲ್ಲ. ಜಗತ್ತಿಗೆ ವಿಭುವಾದ ಈಶ್ವರನೂ ಕೂಡಲೇ ಅತಿದಾಹದಿಂದ ಸಂತಪ್ತನಾಗಿ ಪಾರ್ವತೀದೇವಿಯನ್ನು ಕುರಿತು ಹೀಗೆ ಹೇಳಿದನು.

೨೦-೨೧. "ಔರ್ವನ ತಪಸ್ಸನ್ನು ನೋಡಿ, ಹೆದರಿದ ದೇವತೆಗಳು 'ಜಗತ್ತೆಲ್ಲವೂ ಸುಟ್ಟುಹೋಯಿತು. ಅವನಾದರೋ ಏನನ್ನೂ ಬಯಸುವುದಿಲ್ಲ. ಅವಕ್ಕೆ ಎಲ್ಲರಿಗೂ ಸುಖ ಅಥವಾ ಶುಭವುಂಟಾಗುವಂತಹ ಪ್ರತೀಕಾರವಾವುದು?' ಎಂದು ನನ್ನನ್ನು ಕೇಳಲು ನಾನು ಕೋಪದಿಂದ ಔರ್ವನ ಆಶ್ರಮವನ್ನು ನೋಡಿದೆನು.

೨೨. ಆ ಆಶ್ರಮವು ಕ್ಷಣಮಾತ್ರದಲ್ಲಿ ಸುಟ್ಟುಹೋಯಿತು. ನಾವು ಅಲ್ಲಿಂದ ಹೊರಟು ಬಂದೆವು.

೨೩. ಆಶ್ರಮವು ಸುಟ್ಟುಹೋದ ದುಃಖದಿಂದ ಸಂತಪ್ತನಾಗಿ ಕೋಪಗೊಂಡ ಔರ್ವನು ಶಪಿಸಿದನು. ಶಿವೇ, ರೋಷದ ಆ ಶಾಪದಿಂದ ನಾವು ತಾಪಪಡುತ್ತಿದ್ದೇವೆ."

ತತೋಽಭ್ರಮದ್ವಿರೂಪಾಕ್ಷಃ ಶನ್ನ ಪ್ರಾಪ್ನೋತಿ ಕರ್ಹಿಚಿತ್ ।
ಅಹಂ ಚ ಪರಿತಪ್ತೋಽಸ್ಮಿ ಆತ್ಮತ್ವಾದೀಶರಸ್ಯ ಚ ॥ ೨೪ ॥

ತೇನ ದಾಹೇನ ಸಂತಪ್ತೋಽನ ಶಕ್ನೋಮಿ ವಿಚೇಷ್ಟಿತುಂ ।
ಪಾರ್ವತ್ಯಾ ಚ ತತಃ ಪ್ರೋಕ್ತಃ ಆವಾಂ ನಾರಾಯಣಂ ಪ್ರತಿ ॥ ೨೫ ॥

ಗಚ್ಛಾವಸ್ತಸ್ಯ ವಾಕ್ಯೇನ ಸುಖಂ ಯತ್ರ ಭವಿಷ್ಯತಿ ।
ತತೋ ನಾರಾಯಣಂ ಗತ್ವಾ ಸಹ ತೇನ ತಮೌರ್ವಕಂ ॥ ೨೬ ॥

ವಿಜ್ಞಾಪಯಾವೋ ರುದ್ರಸ್ಯ ಶಾಪೋಽಯಂ ವಿನಿವರ್ತತಾಂ ।
ಸಂತಪ್ತಾಃ ಸ್ಮ ವಯಂ ಸರ್ವೇ ತಸ್ಮಾಚ್ಛಾಪಂ ನಿವರ್ತಯ ॥ ೨೭ ॥

ಔರ್ವೋಽಪ್ಯುವಾಚ ನೋಕ್ತಂ ಮೇ ಅನೃತಂತು ಕದಾಚನ ।
ಸುರಭೀಗಣಮಾನೀಯ ಗತ್ವೈತಂ ಸ್ನಾಪಯಂತು ವೈ ॥ ೨೮ ॥

೨೪-೨೫. ಬಳಿಕ ಅಲೆಯುತ್ತಿದ್ದ ಆ ವಿರೂಪಾಕ್ಷನು ಎಲ್ಲೂ ಸೌಖ್ಯವನ್ನು ಪಡೆಯಲಿಲ್ಲ. ಈಶ್ವರನು ನನ್ನವನಾದುದರಿಂದ ನನಗೂ ಪರಿತಾಪವುಂಟಾಯಿತು. ಆ ತಾಪದಿಂದ ಸಂತಪ್ತನಾದ ನಾನು ಕೆಲಸಮಾಡಲಾರದವನಾಗಿದ್ದೆನು.

೨೬. ಆಗ ಪಾರ್ವತಿಯು "ನಾವು ನಾರಾಯಣನ ಹತ್ತಿರ ಹೋಗೋಣ, ಆತನ ಮಾತಿನಿಂದ ಇದರಲ್ಲಿ ನಮಗೆ ಸುಖವುಂಟಾಗುವುದು" ಎಂದು ಈಶ್ವರನಿಗೆ ಹೇಳಿದಳು.

೨೭. ಬಳಿಕ ಅವರು ನಾರಾಯಣನಾದ ನನ್ನ ಬಳಿಗೆ ಬರಲು, ನಾವೆಲ್ಲರೂ ಆ ಔರ್ವನ ಸಮೀಪಕ್ಕೆ ಹೋಗಿ "ರುದ್ರನ ಈ ತಾಪವನ್ನು ಹೋಗಲಾಡಿಸು. ನಾವೆಲ್ಲರೂ ಸಂತಾಪಗೊಂಡಿದ್ದೇವೆ. ಆದುದರಿಂದ ಶಾಪವನ್ನು ನಿವಾರಿಸು" ಎಂದು ಆತನಿಗೆ ವಿಜ್ಞಾಪಿಸಿದೆವು.

೨೮-೨೯. ಔರ್ವಮುನಿಯೂ, "ನಾನು ಎಂದೂ ಸುಳ್ಳುಹೇಳಿಲ್ಲ. ನೀವು ಹೋಗಿ ಕಾಮಧೇನುಸಂತಾನವನ್ನು ಕರೆದುಕೊಂಡು ಬಂದು, ಈ ರುದ್ರನಿಗೆ

ರುದ್ರಶಾಪೋ ನಿವೃತ್ತಃ ಸ್ಯಾತ್ತೇನೈವ ಕಿಲ ನಾನ್ಯಥಾ ॥ ೨೯ ॥

ಏತಸ್ಮಿನ್ನಂತರೇ ದೇವಿ ಮಯಾ ಗಾವೋಽವತಾರಿತಾಃ ।
ಸಪ್ತಸಪ್ತತಿ ಕಲ್ಯಾಣಿ ಸೌರಭೇಯಾ ಮಹೌಜಸಃ ॥
ತೇನಾಪ್ಲಾವಿತ ದೇಹಾಶ್ಚ ಪರಾಂ ನಿರ್ವೃತಿಮಾಗತಾಃ ॥ ೩೦ ॥

ತಚ್ಚ ಗೋನಿಷ್ಕ್ರಮಂ ನಾಮ ತೀರ್ಥ ಪರಮಪಾವನಂ ।
ತತ್ರ ಸ್ನಾನಂತು ಕುರ್ವೀತ ಏಕರಾತ್ರ್ಯೋಷಿತೋ ನರಃ ॥ ೩೧ ॥

ಗೋಲೋಕಂಚ ಸಮಾಸಾದ್ಯ ಮೋದತೇ ನಾತ್ರಸಂಶಯಃ ।
ಅಥಾತ್ರ ಮುಂಚತಿಪ್ರಾಣಾನ್ ಕೃತ್ವಾ ಕರ್ಮ ಸುದುಷ್ಕರಂ ॥ ೩೨ ॥

ಶಂಖಚಕ್ರಗದಾಯುಕ್ತೋ ಮಮ ಲೋಕೇ ಮಹೀಯತೇ ॥
ಪಂಚಧಾರಾಃ ಪತಂತ್ಯತ್ರ ಮೂಲೇ ಮೂಲವಟಸ್ಯ ಹಿ ॥ ೩೩ ॥

ಅವುಗಳ ಹಾಲಿನಿಂದ ಸ್ನಾನಮಾಡಿಸಿರಿ. ಅದರಿಂದಲೇ ರುದ್ರನಿಗೆ ಬಂದಿರುವ ಈ ಶಾಪವು ನಿವಾರಣೆಯಾಗುವುದು. ಬೇರೆಯ ವಿಧದಿಂದಾಗಲಾರದು'' ಎಂದನು.

೩೦. ದೇವಿ, ಕಲ್ಯಾಣಿ, ಅಷ್ಟರಲ್ಲಿಯೇ ನಾನು ಕಾಮಧೇನುವಿನ ಪುತ್ರಿಯರೂ, ಕಾಂತಿಬಲಶಾಲಿಗಳೂ ಆದ ಎಪ್ಪತ್ತೇಳು ಹಸುಗಳನ್ನು ಬರಮಾಡಿದೆನು. ಎಲ್ಲರೂ ಅವುಗಳ ಹಾಲಿನಿಂದ ಸ್ನಾನಮಾಡಿದವರಾಗಿ ಸಂತಾಪವನ್ನು ಕಳೆದುಕೊಂಡು ಪರಮಸುಖವನ್ನು ಪಡೆದೆವು.

೩೧. ಆ ಗೋವುಗಳ ಹಾಲಿನಿಂದುಸಿದ ಗೋನಿಷ್ಕ್ರಮವೆಂಬ ಹೆಸರಿನ ತೀರ್ಥವು ಪರಮಪಾವನವಾದುದು. ಅಲ್ಲಿ ಒಂದು ರಾತ್ರೆ ಇದ್ದು ಸ್ನಾನಮಾಡು ವವನು ಗೋಲೋಕವನ್ನು ಸೇರಿ, ಆನಂದಪಡುವುದರಲ್ಲಿ ಸಂದೇಹವಿಲ್ಲ.

೩೨. ಬಳಿಕ ದುಷ್ಕರವಾದ ಕರ್ಮಗಳನ್ನು ಮಾಡಿ, ಅಲ್ಲಿ ಪ್ರಾಣಬಿಟ್ಟ. ಶಂಖಚಕ್ರಗದಾಯುತನಾಗಿ ನನ್ನ ಲೋಕದಲ್ಲಿ ವಾಸಿಸುವನು.

೩೩–೩೫. ಅಲ್ಲಿ ಮೂಲವಟವೆಂಬ ಆಲದಮರದ ಬುಡದಲ್ಲಿ ಐದು ತೀರ್ಥ ಧಾರೆಗಳು ಬೀಳುತ್ತವೆ. ಅಲ್ಲಿ ಐದುರಾತ್ರೆ ವಾಸಮಾಡಿ, ಸ್ನಾನಮಾಡುವವನು

ತತ್ರ ಸ್ನಾನಂ ಪ್ರಕುರ್ವೀತ ಪಂಚರಾತ್ರೋಷಿತೋ ನರಃ ।
ಪಂಚಾನಾಮಪಿ ಯಜ್ಞಾನಾಂ ಫಲಮಾಪ್ನೋತಿ ಮಾನವಃ ॥ ೩೪ ॥

ಅಥಾತ್ರ ಮುಂಚತಿ ಪ್ರಾಣಾನ್ ಕೃತ್ವಾ ಕರ್ಮ ಸುದುಷ್ಕರಂ ।
ಪಂಚಯಜ್ಞಫಲಂ ಭುಕ್ತ್ವಾ ಮಮಲೋಕಂ ಪ್ರಪದ್ಯತೇ ॥ ೩೫ ॥

ಅಸ್ತಿ ಪಂಚಪದಂ ನಾಮ ತಸ್ಮಿನ್‌ಕ್ಷೇತ್ರೇ ಪರಂ ಮಮ ।
ಮಮ ಪೂರ್ವೇಣ ಪಾರ್ಶ್ವೇನ ದೃಢಾಃ ಪಂಚ ಮಹಾಶಿಲಾಃ ॥ ೩೬ ॥

ಮತ್ಪೂರ್ವಾಂ ದಿಶಮಾಶ್ರಿತ್ಯ ತತ್ರ ಬ್ರಹ್ಮಪದದ್ವಯಮ್ ।
ಮಧ್ಯೇತು ತಸ್ಯಕುಂಡಸ್ಯ ಶಿಲಾ ವಿಸ್ತೀರ್ಣಸಂಶ್ರಿತಾ ।
ಊರ್ಧ್ವಂ ನಾಲಪರೀಣಾಹಂ ತತ್ರ ವಿಷ್ಣುಪದಂ ಮಮ ॥ ೩೭ ॥

ತತ್ರ ಸ್ನಾನಂತು ಕುರ್ವೀತ ಪಂಚರಾತ್ರೋಷಿತೋನರಃ ।
ಯಾಂತಿ ಶುದ್ಧಾಂಸ್ತು ಲೋಕಾಂಸ್ತೇ ಯೇ ಚ ಭಾಗವತಪ್ರಿಯಾಃ॥ ೩೮ ॥

ಪಂಚಯಜ್ಞಗಳ ಫಲವನ್ನೂ ಪಡೆಯುವನು. ಬಳಿಕ ಕಠಿಣವಾದ ಕರ್ಮಗಳನ್ನು ಮಾಡುತ್ತಾ ಇದ್ದು ಆ ತೀರ್ಥದಲ್ಲಿ ಪ್ರಾಣವನ್ನು ಬಿಟ್ಟು ನನ್ನ ಲೋಕವನ್ನು ಸೇರುವನು.

೩೬–೩೭. ಆ ಕ್ಷೇತ್ರದಲ್ಲಿ ಪಂಚಪದವೆಂಬ ನನ್ನ ಉತ್ತಮ ಸ್ಥಾನವಿದೆ. ನನ್ನ ಪೂರ್ವಭಾಗದಲ್ಲಿ ದೃಢವಾದ ಐದು ಶಿಲೆಗಳಿವೆ. ನನ್ನ ಪೂರ್ವಭಾಗದಲ್ಲಿ ನನ್ನ ಪೂರ್ವದಿಕ್ಕಿನಲ್ಲಿ ಇರುವುವೆರಡು ಬ್ರಹ್ಮಪಾದಗಳು. ಕುಂಡದ ಮಧ್ಯದಲ್ಲಿ ವಿಸ್ತಾರವಾದುದೊಂದು ಶಿಲೆಯಿದೆ. ನಾಲದಂತಿರುವ ಅದರ ಮೇಲೆ ವಿಷ್ಣುವಾದ ನನ್ನ ಪಾದಯುಗ್ಮವಿದೆ.

೩೮. ಆ ತೀರ್ಥಕುಂಡದಲ್ಲಿ, ಐದುರಾತ್ರೆ ವಾಸವಾಗಿದ್ದು ಸ್ನಾನ ಮಾಡುವ ಭಾಗವತಪ್ರಿಯರು ಶುದ್ಧಲೋಕಗಳನ್ನು ಸೇರುವರು.

ಅಥಾತ್ರ ಮುಂಚತಿ ಪ್ರಾಣಾನ್ ಯುಕ್ತಃ ಪಂಚಪದೇನರಃ ।
ವಿಮುಕ್ತಃ ಸರ್ವಸಂಸಾರಾನ್ಮಮ ಲೋಕಂಚ ಗಚ್ಛತಿ ॥ ೩೯ ॥

ತತೋ ಬ್ರಹ್ಮಪದಂ ನಾಮ ಕ್ಷೇತ್ರಂ ಗುಹ್ಯಂ ಪರಂ ಮಮ ।
ಯತ್ರಧಾರಾ ಪತತ್ಯೇಕಾ ಪಶ್ಚಿಮಾಂ ದಿಶಮಾಶ್ರಿತಾ ॥ ೪೦ ॥

ತತ್ರ ಸ್ನಾನಂತು ಕುರ್ವೀತ ಏಕರಾತ್ರೋಷಿತೋನರಃ ।
ಬ್ರಹ್ಮಲೋಕಮವಾಪ್ನೋತಿ ಬ್ರಹ್ಮಣಾ ಸಹ ಮೋದತೇ ॥ ೪೧ ॥

ಕೌಮುದಸ್ಯ ತು ಮಾಸಸ್ಯ ಶುಕ್ಲಪಕ್ಷಸ್ಯ ದ್ವಾದಶೀ ।
ಯಜ್ಞಾನಾಂ ವಾಜಪೇಯಾನಾಂ ಫಲಂ ಪ್ರಾಪ್ನೋತಿ ಮಾನವಃ ॥ ೪೨ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮಸು ನಿಷ್ಠಿತಃ ।
ವಾಜಪೇಯಫಲಂ ಭುಕ್ತ್ವಾ ಮಮ ಲೋಕಂ ಪ್ರಪದ್ಯತೇ ॥ ೪೩ ॥

---

೩೯. ಬಳಿಕ ಆ ಪಂಚಪದದಲ್ಲಿ ಪ್ರಾಣಗಳನ್ನು ಬಿಟ್ಟು ಸರ್ವಸಂಸಾರ ವಿಮುಕ್ತನಾಗಿ ನನ್ನ ಲೋಕವನ್ನು ಸೇರುವರು.

೪೦. ಪಶ್ಚಿಮದಿಕ್ಕಿಗೆ ಒಂದು ಧಾರೆಯು ಧುಮುಕುವ ಬ್ರಹ್ಮಪದವೆಂಬ ಹೆಸರಿನ ರಹಸ್ಯವೂ, ಉತ್ತಮವೂ ಆದ ಕ್ಷೇತ್ರವೊಂದಿದೆ.

೪೧. ಅಲ್ಲಿ ಒಂದುರಾತ್ರಿ ಇದ್ದು ಸ್ನಾನಮಾಡುವವನು ಬ್ರಹ್ಮಲೋಕವನ್ನು ಸೇರಿ ಬ್ರಹ್ಮನೊಡನೆ ಆನಂದಿಸುವನು.

೪೨. ಕಾರ್ತಿಕಮಾಸದ ದ್ವಾದಶಿಯದಿನ ಅಲ್ಲಿ ಸ್ನಾನಮಾಡುವವನು ವಾಜಪೇಯ ಯಜ್ಞಗಳ ಫಲವನ್ನು ಪಡೆಯುವನು.

೪೩. ವಾಜಪೇಯ ಫಲವನ್ನನುಭವಿಸಿ, ನನ್ನ ಕರ್ಮನಿರತನಾಗಿದ್ದು ಬಳಿಕ ಅಲ್ಲಿ ಪ್ರಾಣಬಿಟ್ಟು ನನ್ನ ಲೋಕವನ್ನು ಸೇರುವನು.

ಅಸ್ತಿಕೋಟಿವಟಂನಾಮ ತಸ್ಮಿನ್‌ಕ್ಷೇತ್ರೇ ಪರಂ ಮಮ ।
ಪಂಚಕ್ರೋಶಂ ತತೋ ಗತ್ವಾವಾಯವ್ಯಾಂ ದಿಶಿಸಂಸ್ಥಿತಃ ॥ ೪೪ ॥

ತತ್ರ ಸ್ನಾನಂತು ಕುರ್ವೀತ ಷಷ್ಠಕಾಲೋಷಿತೋ ನರಃ ।
ಬಹು ಯಜ್ಞಸ್ಯಕೋಟೀನಾಂ ಫಲಂ ಪ್ರಾಪ್ನೋತಿ ನಿಷ್ಕಲಮ್ ॥ ೪೫ ॥

ಅಥಾತ್ರ ಮುಂಚತಿಪ್ರಾಣಾನ್ ಭೂಮೇ ಕೋಟಿವಟೇ ಶುಭೇ ।
ಯಜ್ಞಕೋಟಿಫಲಂ ಭುಕ್ತ್ವಾ ಮಮಲೋಕಂ ಪ್ರಪದ್ಯತೇ ॥ ೪೬ ॥

ಅಸ್ತಿ ವಿಷ್ಣುಸರೋ ನಾಮ ತಸ್ಮಿನ್‌ಕ್ಷೇತ್ರೇ ಪರಂ ಮಮ ।
ಪೂರ್ವೋತ್ತರೇಣ ಪಾರ್ಶ್ವೇನ ಪಂಚಕ್ರೋಶಂ ನ ಸಂಶಯಃ ॥ ೪೭ ॥

ಮತ್ಸರಃ ಪದ್ಮಪತ್ರಾಕ್ಷಿ ಅಗಾಧಂ ಪರಿಸಂಸ್ಥಿತಂ ।
ಪಂಚಕ್ರೋಶಶ್ಚ ವಿಸ್ತಾರಃ ಪರ್ವತಃ ಪರಿಮಂಡಲಃ ॥ ೪೮ ॥

---

೪೪. ಬ್ರಹ್ಮಪದಕ್ಷೇತ್ರಕ್ಕೆ ಐದು ಹರಿದಾರಿಯಲ್ಲಿ ವಾಯುವ್ಯದಿಕ್ಕಿನಲ್ಲಿ ಕೋಟಿವಟವೆಂಬ ಹೆಸರಿನ ನನ್ನ ಉತ್ತಮ ತೀರ್ಥವೊಂದಿದೆ.

೪೫. ಆರು (ಜಾವಗಳ) ಕಾಲ ಅಲ್ಲಿ ಇದ್ದು ಸ್ನಾನಮಾಡುವವನು ಕೋಟಿ ಯಜ್ಞಗಳ ಪೂರ್ಣಫಲವನ್ನು ಪಡೆಯುವನು.

೪೬. ಶುಭೇ, ಆ ಫಲವನ್ನು (ಕೋಟಿ ಯಜ್ಞಗಳ ಫಲವನ್ನು)ಅನುಭವಿಸಿ ಬಳಿಕ ಅಲ್ಲಿ ಪ್ರಾಣಬಿಡುವವನು ನನ್ನ ಲೋಕವನ್ನು ಸೇರುವನು.

೪೭. ಆ ಕ್ಷೇತ್ರದಲ್ಲಿ ವಿಷ್ಣುಸರೋವರವೆಂಬ ಮತ್ತೊಂದು ನನ್ನ ತೀರ್ಥವಿದೆ. ಅದು ಈಶಾನ್ಯದಲ್ಲಿ ಐದು ಹರಿದಾರಿಯಷ್ಟೆಂಬುದರಲ್ಲಿ ಸಂಶಯವಿಲ್ಲ.

೪೮. ಕಮಲದಳನೇತ್ರೇ, ಆ ನನ್ನ ಸರೋವರವು ಬಹಳ ಆಳವಾಗಿಯೂ ಐದುಹರಿದಾರಿಯಷ್ಟು ವಿಸ್ತಾರವಾಗಿಯೂ, ಸುತ್ತಲೂ ಪರ್ವತಗಳುಳ್ಳದಾಗಿಯೂ ಇದೆ.

ತತ್ರಭ್ರಮತಿ ಯೋ ಭದ್ರೇ ಕುರ್ಯಾಚ್ಚೈವ ಪ್ರದಕ್ಷಿಣಂ || ೪೯ ||

ಉಪವಾಸಂ ತ್ರಿರಾತ್ರಂತು ಕೃತ್ವಾಕರ್ಮ ಸುದುಷ್ಕರಮ್ |
ಯಾವಂತಿ ಭ್ರಮಮಾಣಸ್ಯ ಪದಾನಿ ನನು ಸುಂದರಿ |
ತಾವದ್ವರ್ಷಸಹಸ್ರಾಣಿ ಬ್ರಹ್ಮಲೋಕೇ ಮಹೀಯತೇ || ೫೦ ||

ಅಥಾತ್ರ ಮುಂಚತಿ ಪ್ರಾಣಾನ್ ಸ್ವಕರ್ಮಪರಿನಿಷ್ಠಿತಃ |
ಬ್ರಹ್ಮಲೋಕಂ ಸಮುತ್ಸೃಜ್ಯ ಮಮ ಲೋಕೇ ಮಹೀಯತೇ || ೫೧ ||

ತಸ್ಮಿನ್ ಕ್ಷೇತ್ರೇ ಮಹಾಭಾಗೇ ಆಶ್ಚರ್ಯಂ ಶೃಣು ಸುಂದರಿ |
ಗವಾಂ ವೈ ಶ್ರೂಯತೇ ಶಬ್ದೋ ಮಮ ಕರ್ಣಸುಖಾವಹಃ || ೫೨ ||

ಅಥಾತ್ರ ಜ್ಯೇಷ್ಠಮಾಸಸ್ಯ ಶುಕ್ಲಪಕ್ಷಸ್ಯ ದ್ವಾದಶೀ |
ಶ್ರೂಯತೇ ಸುಮಹಾನ್ ಶಬ್ದಃ ಸ್ವಯಮೇತನ್ನ ಸಂಶಯಃ || ೫೩ ||

೪೯–೫೦. ಭದ್ರೇ, ಅಲ್ಲಿ ಸಂಚರಿಸುವವನು ಪ್ರದಕ್ಷಿಣೆ ಮಾಡುವನಾಗುವನು. ಮೂರುರಾತ್ರಿ ಉಪವಾಸದ ಬಹುಕಷ್ಟಕರ್ಮವನ್ನು ಮಾಡಿ, ಆ ಸರೋವರವನ್ನು ಸುತ್ತುವವನು ಎಷ್ಟು ಹೆಜ್ಜೆಗಳನ್ನಿಡುವನೋ ಅಷ್ಟು ವರ್ಷಕಾಲ ಬ್ರಹ್ಮಲೋಕದಲ್ಲಿ ವಾಸಿಸುವನು.

೫೧. ಸ್ವಕರ್ಮನಿರತನಾಗಿದ್ದು ಬಳಿಕ ಬ್ರಹ್ಮಲೋಕವನ್ನು ಬಿಟ್ಟು, ಅಲ್ಲಿ ಸ್ನಾನಮಾಡಿ ನನ್ನ ಲೋಕವನ್ನು ಸೇರುವನು.

೫೨. ಸುಂದರಿ, ಮಹಾಭಾಗ್ಯೇ, ಆ ಕ್ಷೇತ್ರದ ಆಶ್ಚರ್ಯವನ್ನು ಕೇಳು. ಅಲ್ಲಿ ನನ್ನ ಕಿವಿಗಳಿಗೆ ಸುಖಕರವಾದ ಹಸುಗಳ ಕೂಗು ಕೇಳಿಸುತ್ತದೆ.

೫೩. ಅಲ್ಲದೆ ಜ್ಯೇಷ್ಠಮಾಸದ ಶುಕ್ಲಪಕ್ಷದ ದ್ವಾದಶಿಯದಿನ ತನ್ನಷ್ಟಕ್ಕೆ ತಾನೇ, ಇಂಪಾದ ಮಹಾಧ್ವನಿಯು ಕೇಳಿಸುವುದು. ಇದರಲ್ಲಿ ಸಂಶಯವಿಲ್ಲ.

ಏವಂ ಗೋಸ್ಥಲಕೇ ಪುಣ್ಯೇ ಮಹಾಭಾಗವತಃ ಶುಚಿಃ ।
ಕರೋತಿ ಶುಭಕರ್ಮಾಣಿ ಶೀಘ್ರಂ ಮುಚ್ಯೇತ ಕಿಲ್ಬಿಷಾತ್ ॥ ೫೪ ॥

ಏವಂ ತೇನ ಮಹಾಭಾಗೇ ಈಶ್ವರೇಣ ಯಶಸ್ವಿನಿ ।
ಶಾಪದಾಹೋ ವಿನಿರ್ಮುಕ್ತಃ ಸರ್ವೈಃ ಸಹ ಮರುದ್ಗಣೈಃ ॥ ೫೫ ॥

ಏತದ್ಗೋಸ್ಥಲಕಂ ನಾಮ ಸರ್ವಶಾಂತಿಕರಮ್ ಪರಮ್ ।
ಕಥಿತಂ ದೇವಿ ಕಾರ್ತ್ಸ್ನ್ಯೇನ ತವಾನುಗ್ರಹಕಾಮ್ಯಯಾ । ॥ ೫೬ ॥

ಏಷೋಧ್ಯಾಯೋ ಮಹಾಭಾಗೇ ಸರ್ವಮಂಗಲಕಾರಕಃ ।
ಮಮ ಮಾರ್ಗಾನುಸಾರಾಣಾಂ ಮಮ ಚ ಪ್ರೀತಿವರ್ಧನಃ ॥ ೫೭ ॥

ಶ್ರೇಷ್ಠಾನಾಂ ಪರಮಂ ಶ್ರೇಷ್ಠಂ ಮಂಗಲಾನಾಂ ಚ ಮಂಗಲಮ್ ।
ಲಾಭಾನಾಂ ಪರಮೋ ಲಾಭಃ ಧರ್ಮಾಣಾಂ ಧರ್ಮ ಉತ್ತಮಃ ॥ ೫೮ ॥

---

೫೪. ಆ ಬಗೆಯ ಪವಿತ್ರವಾದ ಗೋಸ್ಥಾನದಲ್ಲಿ ಶುದ್ಧನಾಗಿ ಶುಭಕರ್ಮಗಳನ್ನು ಮಾಡುವ ಮಹಾಭಾಗವತನು ಬೇಗನೆ ಪಾಪದಿಂದ ಮುಕ್ತನಾಗುವನು.

೫೫. ಮಹಾಭಾಗ್ಯಶಾಲಿನಿ, ಯಶಸ್ವಿನಿ, ದೇವಗಣಸಹಿತನಾದ ಈಶ್ವರನು ಹಾಗೆ ಗೋಕ್ಷೀರಾಭಿಷೇಕದಿಂದ ಶಾಪತಾಪವನ್ನು ಕಳೆದುಕೊಂಡನು.

೫೬. ದೇವಿ, ನಿನಗೆ ಅನುಗ್ರಹಿಸಬೇಕೆಂಬ ಇಷ್ಟದಿಂದ ಸರ್ವಶಾಂತಿಕರವೂ. ಉತ್ತಮವೂ ಆದ ಈ ಗೋಸ್ಥಲ ಅಥವಾ ಗೋನಿಷ್ಕ್ರಮಣವೆಂಬ ಕ್ಷೇತ್ರದ ವಿಚಾರವನ್ನು ಪೂರ್ಣವಾಗಿ ಹೇಳಿದುದಾಯಿತು.

೫೭. ಮಹಾಭಾಗ್ಯೇ, ಈ ಅಧ್ಯಾಯವು ಸರ್ವಮಂಗಳಗಳನ್ನೂ ಉಂಟು ಮಾಡುವುದು. ನನ್ನ ಮಾರ್ಗವನ್ನನುಸರಿಸುವವರಿಗೂ, ನನಗೂ ಸಂತೋಷವನ್ನು ಹೆಚ್ಚಿಸುವುದು.

೫೮. ಈ ಅಧ್ಯಾಯದ ವಿಚಾರವು ಶ್ರೇಷ್ಠವಾದುವುಗಳಲ್ಲಿ ಪರಮಶ್ರೇಷ್ಠವೂ, ಮಂಗಳಗಳಿಗೂ ಮಂಗಳವೂ, ಲಾಭಗಳಲ್ಲಿ ಪರಮಲಾಭವೂ, ಧರ್ಮಗಳಲ್ಲಿ ಉತ್ತಮ ಧರ್ಮವೂ ಆದುದು.

ಲಭಂತೇ ಪಠಮಾನಾ ವೈ ಮಮ ಮಾರ್ಗಾನುಸಾರಿಣಃ ।
ತೇಜಃ ಶ್ರಿಯಂಚ ಲಕ್ಷ್ಮೀಂ ಚ ಸರ್ವಕಾಮಾನ್ ಯಶಸ್ವಿನಿ ॥ ೫೯ ॥

ಯಾವಂತಿ ಚಾಕ್ಷರಾಣಿ ಸ್ಯುರತ್ರಾಧ್ಯಾಯೇ ಮನಸ್ವಿನಿ ।
ತಾವದ್ವರ್ಷ ಸಹಸ್ರಾಣಿ ಮಮ ಲೋಕೇ ಮಹೀಯತೇ ॥ ೬೦ ॥

ಪತನಂ ಚ ನ ವಿದ್ಯೇತ ಪಠಮಾನಾ ದಿನೇದಿನೇ ।
ತಾರಿತಾನಿ ಕುಲಾನ್ಯೇಭಿಃ ಸಪ್ತ ಸಪ್ತ ಚ ಸಪ್ತ ಚ ॥ ೬೧ ॥

ಪಿಶುನಾಯ ನದಾತವ್ಯಂ ನಮೂರ್ಖಾಯ ಶಠಾಯ ಚ ।
ದೇಯಂ ಪುತ್ರಾಯ ಶಿಷ್ಯಾಯ ಯಶ್ಚ ಜಾನಾತಿ ಸೇವಿತುಂ ॥ ೬೨ ॥

ಏತನ್ಮರಣಕಾಲೇ ತು ನ ಕದಾಚಿತ್ತು ವಿಸ್ಮರೇತ್ ।
ಶ್ಲೋಕಂ ವಾ ಯದಿ ವಾ ಪಾದಂ ಯದೀಚ್ಛೇತ್ಪರಮಾಂ ಗತಿಂ ॥ ೬೩ ॥

---

೫೯. ಕೀರ್ತಿವಂತೆ, ಇದನ್ನು ಓದುವ ಅಥವಾ ಹೇಳುವ ನನ್ನ ಮಾರ್ಗಾನುವರ್ತಿಗಳು ತೇಜಸ್ಸನ್ನೂ, ಶ್ರೀಯನ್ನೂ, ಲಕ್ಷ್ಮಿಯನ್ನೂ, ಸರ್ವೇಷ್ಟಗಳನ್ನೂ ಪಡೆಯುವರು.

೬೦–೬೧. ಒಳ್ಳೆಯ ಮನಸ್ಸುಳ್ಳವಳೇ, ದಿನವೂ ಇದನ್ನು ಹೇಳುವವನು ಈ ಅಧ್ಯಾಯದಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟುಸಾವಿರ ವರ್ಷಕಾಲ ನನ್ನ ಲೋಕದಲ್ಲಿ ವಾಸಿಸುವನು. ಅವನಿಗೆ ಪತನವಿಲ್ಲ. ಅವನು ಇಪ್ಪತ್ತೊಂದು ಕುಲವನ್ನು ಸಂಸಾರ ಸಾಗರದಿಂದ ದಾಟಿಸುವನು.

೬೨. ಇದನ್ನು ಪಿಶುನನಿಗೂ, ಮೂರ್ಖನಿಗೂ, ದುಷ್ಟನಿಗೂ ಹೇಳಬಾರದು. ದೇವಗುರುಸೇವೆಯನ್ನು ಮಾಡಬಲ್ಲ ಮಗನಿಗೂ, ಶಿಷ್ಯನಿಗೂ ಹೇಳಬೇಕು.

೬೩. ಮೋಕ್ಷವನ್ನು ಬಯಸುವುದಾದರೆ ಮರಣಕಾಲದಲ್ಲೂ ಎಂದಿಗೂ ಇದನ್ನು ಒಂದು ಶ್ಲೋಕವನ್ನಾಗಲೀ, ಪದವನ್ನಾಗಲೀ, ಮರೆಯಬಾರದು.

ತತ್ ಕ್ಷೇತ್ರಂ ತು ಮಹಾಭಾಗೇ ಪಂಚಯೋಜನಮಂಡಲಂ || ೬೪ ||

ತಿಷ್ಠಾಮಿ ಪರಯಾ ಪ್ರೀತ್ಯಾ ದಿಶಂ ಪೂರ್ವಾಮುಪಾಶ್ರಿತಃ ।
ಪಶ್ಚಿಮೇನ ವಹೇದ್ಗಂಗಾ ನಿಷ್ಕ್ರಾಮೇನ ವಸುಂಧರೇ || ೬೫ ||

ಏವಂ ರಹಸ್ಯಂ ಗುಹ್ಯಂ ಚ ಸರ್ವಕರ್ಮಸುಖಾವಹಂ ।
ಏತತ್ತೇ ಪರಮಂ ಭದ್ರೇ ಗುಹ್ಯಂ ಧರ್ಮಸಮನ್ವಿತಂ || ೬೬ ||

ಪಮ ಕ್ಷೇತ್ರಂ ಮಹಾಭಾಗೇ ಯತ್ವಯಾ ಪರಿಪೃಚ್ಛಿತಂ || ೬೭ ||

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಗೋನಿಷ್ಕ್ರಮಣ ಮಾಹಾತ್ಮ್ಯಂ ನಾಮ ಸಪ್ತಚತ್ವಾರಿಂಶದಧಿಕಶತತಮೋಽಧ್ಯಾಯಃ

೬೪–೬೫. ಮಹಾಭಾಗ್ಯೇ, ವಸುಂಧರೇ, ಆ ಗೋನಿಷ್ಕ್ರಮಣಕ್ಷೇತ್ರವು ಐದುಯೋಜನ ಸುತ್ತಳತೆಯುಳ್ಳದು. ಅಲ್ಲಿ ನಾನು ಪೂರ್ವಾಭಿಮುಖನಾಗಿ ಪರಮಪ್ರೀತಿಯಿಂದ ಇರುವೆನು. ನನ್ನ ಹಿಂಭಾಗದಲ್ಲಿ ಗಂಗೆ ಪ್ರವಹಿಸುವುದು.

೬೬-೬೭. ಮಂಗಳೇ, ಮಹಾಭಾಗ್ಯೇ, ನೀನು, ಮತ್ತಾವುದಾದರೂ ಉತ್ತಮಕ್ಷೇತ್ರವನ್ನು ಹೇಳೆಂದು ಕೇಳಿದೆಯಲ್ಲವೆ? ಈ ಗೋಸ್ಥಾನವೇ ಸರ್ವ ಕರ್ಮಗಳಲ್ಲೂ ಸುಖವನ್ನುಂಟುಮಾಡುವುದೂ, ರಹಸ್ಯವೂ, ಉತ್ತಮವೂ, ಧರ್ಮಯುತವೂ ಆದ ನನ್ನ ಕ್ಷೇತ್ರ.

ಅಧ್ಯಾಯದ ಸಾರಾಂಶ—

ಭೂದೇವಿಗೆ ಶ್ರೀವರಾಹನು, ಔರ್ವನೆಂಬ ಮುನಿಯ ಶಾಪಕ್ಕೀಡಾಗಿ ಬಹು ಸಂತಾಪಗೊಂಡಿದ್ದ ಈಶ್ವರನು ಗೋವುಗಳ ಕ್ಷೀರಾಭಿಷೇಕದಿಂದ ಶಾಪವನ್ನು ಕಳೆದುಕೊಂಡೆಡೆಯೂ, ಆ ಹಸುಗಳ ಹಾಲಿನಿಂದುದಿಸಿದ ಗೋನಿಷ್ಕ್ರಮಣ ವೆಂಬ ತೀರ್ಥವಿರುವೆಡೆಯೂ ಆದ ಗೋಸ್ಥಾನ ಅಥವಾ ಗೋನಿಷ್ಕ್ರಮಣಕ್ಷೇತ್ರದ ಮಹಿಮೆಯನ್ನು ವಿವರವಾಗಿ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ನಲವತ್ತೇಳನೆಯ ಅಧ್ಯಾಯ.

|| ಶ್ರೀಃ ||

ಅಷ್ಟಚತ್ವಾರಿಂಶದಧಿಕಶತತಮೋಧ್ಯಾಯಃ
ಅಥ ಸ್ತುತಸ್ವಾಮಿಮಾಹಾತ್ಮ್ಯಂ

|| ಸೂತ ಉವಾಚ ||

ಗೋನಿಷ್ಕ್ರಮಣಮಾಹಾತ್ಮ್ಯಂ ಶ್ರುತ್ವಾ ಗುಹ್ಯ ಮನುತ್ತಮಂ ।
ವಿಸ್ಮಯಂ ಪರಮಂ ಗತ್ವಾ ಸರ್ವರತ್ನವಿಭೂಷಿತಾ || ೧ ||

|| ಧರಣ್ಯುವಾಚ ||

ಅಹೋ ಗವಾಂ ಹಿ ಮಾಹಾತ್ಮ್ಯಂ ತವ ಚೈವಂ ಶ್ರುತಂ ಮಯಾ ।
ಯಚ್ಛ್ರುತ್ವಾಹಂ ಜಗನ್ನಾಥ ಜಾತಾಸ್ಮಿ ಪರಿನಿರ್ವೃತಾ || ೨ ||

ನೂರ ನಲವತ್ತೆಂಟನೆಯ ಅಧ್ಯಾಯ
ಸ್ತುತಸ್ವಾಮಿಮಹಿಮೆ.

೧. ಸೂತಮುನಿ—ಸರ್ವರತ್ನ ವಿಭೂಷಿತಳಾದ ಭೂದೇವಿ ಅತ್ಯುತ್ತಮವಾದ ಗೋನಿಷ್ಕ್ರಮಣತೀರ್ಥದ ಮಹಿಮೆಯನ್ನು ಕೇಳಿ, ಪರಮಾಶ್ಚರ್ಯಪಟ್ಟು, ಶ್ರೀವರಾಹನೊಡನೆ ಮುಂದಿನ ಮಾತನಾಡಿದಳು.

೨. ಭೂದೇವಿ—ಜಗನ್ನಾಥ, ನೀನು ಹೇಳಿದ ಆಶ್ಚರ್ಯಕರವಾದ ಗೋವುಗಳ ಮಹಿಮೆಯನ್ನು ಕೇಳಿ ನಾನು ಬಹು ಸಂತೋಷವುಳ್ಳವಳಾಗಿದ್ದೇನೆ.

ಏವಮೇವ ಪರಂ ಗುಹ್ಯಂ ಬ್ರೂಹಿ ನಾರಾಯಣ ಪ್ರಭೋ ।
ಅಸ್ಮಾತ್ ಕ್ಷೇತ್ರಾತ್ ಪರಂ ದೇವ ಯದಿ ಕ್ಷೇತ್ರಂ ವಿಶಿಷ್ಯತೇ ॥ ೩ ॥

॥ ಶ್ರೀವರಾಹ ಉವಾಚ ॥

ಅಹಂ ನಾರಾಯಣೋ ದೇವಃ ಸರ್ವಧರ್ಮವ್ಯಪಾಶ್ರಯಃ ।
ಮಾತ್ಸರ್ಯಂ ಚೈವ ಮೇ ನಾಸ್ತಿ ತೇನಾಹಂ ಪರಮಃ ಪ್ರಭುಃ ॥ ೪ ॥

ಏತಚ್ಛಾಸ್ತ್ರಂ ಮಹಾಭಾಗೇ ಪ್ರಯುಕ್ತಂ ಲೀಲಯಾ ಮಯಾ ।
ವರಾಹರೂಪಮಾದಾಯ ಸರ್ವಭಾಗವತಪ್ರಿಯಂ ॥ ೫ ॥

॥ ಧರಣ್ಯುವಾಚ ॥

ಯಥಾ ಯಥಾ ಭಾಷಸಿ ಧರ್ಮಕಾರಣಂ
ಇದಂ ವಚೋಧರ್ಮವಿನಿಶ್ಚಯಂ ಮಹತ್ ।
ತಥಾ ತಥಾ ದೇವ ವರಾಪ್ರ*ಮೇಯ
ಹೃದ್ಯಂಮನೋ ಭಾವಯಸೇ ಜನಾರ್ದನ ॥ ೬ ॥

---

೩. ಪ್ರಭುವೇ, ನಾರಾಯಣಾ, ಈ ಗೋನಿಷ್ಕ್ರಮಣ ಕ್ಷೇತ್ರಕ್ಕಿಂತಲೂ ಮೇಲಾದ ಅತಿ ರಹಸ್ಯವಾದ ಕ್ಷೇತ್ರವಿದ್ದರೆ ಹೀಗೆಯೇ ಅದನ್ನೂ ಹೇಳು.

೪. ಶ್ರೀ ವರಾಹ—ಮಹಾಭಾಗ್ಯೇ, ನಾನು ಸರ್ವಧರ್ಮಗಳಿಗೂ ಮೂಲಾಶ್ರಯನಾದ ನಾರಾಯಣದೇವನು. ನನಗೆ ಮಾತ್ಸರ್ಯವೆಂಬುದಿಲ್ಲವೇ ಇಲ್ಲ. ಆದುದರಿಂದಲೇ ನಾನು ಪರಮಪ್ರಭು.

೫. ನಾನು ಲೀಲೆಯಿಂದ ವರಾಹರೂಪವನ್ನು ಧರಿಸಿ ಸರ್ವಭಾಗವತರಿಗೂ ಪ್ರಿಯವಾದ ಈ ವರಾಹಶಾಸ್ತ್ರವನ್ನು ರಚಿಸಿದೆನು.

೬. ಭೂದೇವಿ—ದೇವವರ, ಅಪ್ರಮೇಯ, ಜನಾರ್ದನ, ಧರ್ಮಕಾರಣವೂ ಮಹಾಧರ್ಮನಿರ್ಣಯವೂ ಆದ ಈ ಮಾತನ್ನು ನೀನು ಹೇಳುತ್ತ ಮನಸ್ಸನ್ನು ಹೆಚ್ಚು ಹೆಚ್ಚಾಗಿ ಸಂತೋಷಗೊಳಿಸುತ್ತೀಯೆ.

---

* ಮೇಯಂ

ತತೋ ಮಹೀವಚಃ ಶ್ರುತ್ವಾ ಧರ್ಮಶ್ರೇಷ್ಠೋ ಮಹಾಮುನಾಃ ।
ವರಾಹರೂಪೀ ಭಗವಾನ್ ಪ್ರತ್ಯುವಾಚ ವಸುಂಧರಾಂ ॥ ೭ ॥

॥ ಶ್ರೀವರಾಹ ಉವಾಚ ॥

ಸಾಧು ಭೂಮೇ ಮಹಾಭಾಗೇ ಮಮ ಕರ್ಮವ್ಯವಸ್ಥಿತೇ ।
ಕಥಯಿಷ್ಯಾಮ್ಯಹಂ ಹ್ಯೇವಂ ಗುಹ್ಯಂ ಲೋಕಸುಖಾವಹಂ ॥ ೮ ॥

ಸ್ತುತಸ್ವಾಮಿನಾತಿ ವಿಖ್ಯಾತಂ ಗುಹ್ಯಂ ಕ್ಷೇತ್ರಂ ಪರಂ ಮಮ ।
ದ್ವಾಪರಂ ಯುಗಮಾಸಾದ್ಯ ತತ್ರ ಸ್ಥಾಸ್ಯಾಮಿ ಸುಂದರಿ ॥ ೯ ॥

ಪುತ್ರೋಽಹಂ ವಸುದೇವಸ್ಯ ದೇವಕ್ಯಾ ಗರ್ಭಸಂಭವಃ ।
ವಾಸುದೇವ ಇತಿ ಖ್ಯಾತಃ ಸರ್ವದಾನವಸೂದನಃ ॥ ೧೦ ॥

ಪಂಚ ತಸ್ಯ ಸುಶಿಷ್ಯಾಶ್ಚ ಭವಿಷ್ಯಂತಿ ವಿಚಕ್ಷಣಾಃ ।
ಋಷಯೋ ಧರ್ಮಸಂಯುಕ್ತಾ ಮತ್ಪ್ರಸಾದಾತ್ ಬಲಾಶ್ರಿತಾಃ ॥ ೧೧ ॥

---

೭. ಧರ್ಮಶ್ರೇಷ್ಠನೂ, ಮಹಾಮುನನೂ, ವರಾಹರೂಪಿಯೂ ಆದ ಭಗವಂತನು ಭೂದೇವಿಯ ಆ ಮಾತನ್ನು ಕೇಳಿ ಆಕೆಗೆ ಮತ್ತೆ ಹೇಳಿದನು.

೮. ಶ್ರೀ ವರಾಹ—ಒಳ್ಳೆಯದು, ಮಹಾಭಾಗ್ಯೇ. ನನ್ನ ಕರ್ಮಗಳಲ್ಲಿ ನಿರತಳೇ, ಭೂದೇವಿ, ಲೋಕಕ್ಕೆ ಸುಖವನ್ನುಂಟುಮಾಡುವ ರಹಸ್ಯ ವಿಚಾರವನ್ನು ನಾನು ಹೀಗೆಯೇ ಇನ್ನೂ ನಿನಗೆ ಹೇಳುತ್ತೇನೆ.

೯. ಸುಂದರಿ, 'ಸ್ತುತಸ್ವಾಮಿ' ಎಂದು ಪ್ರಸಿದ್ಧವೂ ಉತ್ತಮವೂ ಆದ ನನ್ನ ರಹಸ್ಯಕ್ಷೇತ್ರವೊಂದಿದೆ. ನಾನು ದ್ವಾಪರಯುಗದಲ್ಲಿ ಅಲ್ಲಿರುವೆನು.

೧೦. ನಾನು ಆಗ ದೇವಕಿಯ ಗರ್ಭದಲ್ಲಿ ವಸುದೇವನಿಗೆ ಪುತ್ರನಾಗಿ ಜನಿಸಿ ವಾಸುದೇವನೆಂದು ಪ್ರಸಿದ್ಧನಾಗಿ ಸರ್ವದಾನವರನ್ನೂ ಕೊಲ್ಲುವನಾಗುವೆನು.

೧೧. ವಾಸುದೇವನಾದ ನನಗೆ ವಿದ್ವಾಂಸರೂ, ಋಷಿಗಳೂ. ಧರ್ಮಯುತರೂ, ನನ್ನ ಅನುಗ್ರಹವನ್ನು ಪಡೆದವರೂ, ಆದ ಐದುಜನ ಉತ್ತಮ ಶಿಷ್ಯರಾಗುವರು.

ತೇ ಮಾಂ ಸಂಸ್ಥಾಪಯಿಷ್ಯಂತಿ ಧರ್ಮಮೂರ್ತಿಂ ಮಹೀಂ ಗತಂ ।
ಶಾಂಡಿಲ್ಯೋ ಜಾಜಲಿಶ್ಚೈವ ಕಪಿಲಶ್ಚೋಪಸಾಯಕಃ ।
ಭೃಗುಶ್ಚೈವ ಮಹಾಭಾಗೇ ಮಮ ಮಾರ್ಗಾನುಸಾರಿಣಃ ॥ ೧೨ ॥

ತೇ ಚ ಪ್ರಸನ್ನಮನಸ ಆತ್ಮದೃಷ್ಟಾಂತದರ್ಶಿನಃ ॥ ೧೩ ॥

ಸ್ವಯಂ ಜ್ಞಾನಪ್ರಭಾವೇಣ ಭಾಸಯಿಷ್ಯಂತಿ ಮಾಂ ಸದಾ ।
ಸಂಕರ್ಷಣೋ ವಾಸುದೇವಃ ಪ್ರದ್ಯುಮ್ನೋ ಹ್ಯನಿರುದ್ಧಕಃ ॥ ೧೪ ॥

ಗಚ್ಛತಾ ಬಹುಕಾಲೇನ ಮಮ ಕರ್ಮಪರಾಯಣಾಃ ।
ತತೋ ದೀರ್ಘೇಣ ಕಾಲೇನ ಇಜ್ಯಾಪೂರ್ವಸ್ಥಿತೇನ ಚ ॥ ೧೫ ॥

ವರಂ ತೇಷಾಂ ಪ್ರದಾಸ್ಯಾಮಿ ಯೋ ಯಸ್ಯ ಹೃದಿ ಸಂಸ್ಥಿತಃ ।
ತೇ ಪ್ರವಕ್ಷ್ಯಂತಿ ಮಾಂ ದೇವಿ ಆತ್ಮಶಾಸ್ತ್ರವ್ಯವಸ್ಥಿತಾಃ ॥ ೧೬ ॥

---

೧೨. ಶಾಂಡಿಲ್ಯ, ಜಾಜಲಿ, ಕಪಿಲ, ಉಪಸಾಯಕ, ಭೃಗು ಎಂಬ ನನ್ನ ಮಾರ್ಗಾನುವರ್ತಿಗಳಾದ ಆ ಐವರು ಋಷಿಗಳು ನನ್ನನ್ನು ಭೂಮಿಯಲ್ಲಿ ಅವತರಿಸಿದ ಧರ್ಮಮೂರ್ತಿಯೆಂದು ಸ್ಥಾಪಿಸುವರು.

೧೩-೧೪. ಅವರು ನಿರ್ಮಲಹೃದಯರು, ಆತ್ಮದೃಷ್ಟಾಂತವನ್ನು ನೋಡುವವರು. ಅವರು ತಾವೇ ಜ್ಞಾನಪ್ರಭಾವದಿಂದ ನನ್ನನ್ನು ಯಾವಾಗಲೂ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂದು ಪ್ರಕಾಶಗೊಳಿಸುವರು.

೧೫-೧೬. ನನ್ನ ಕರ್ಮದಲ್ಲಿ ನಿರತರಾದ ಅವರು ನನ್ನನ್ನು ಪೂಜಿಸುತ್ತ ಬಹುಕಾಲ ವಿರುತ್ತಿರಲಾಗಿ ಅವರಲ್ಲಿ ಯಾರಿಗೆ ಯಾವುದು ಇಷ್ಟವೋ ಆ ವರವನ್ನು ಕೊಡುತ್ತೇನೆ. ದೇವಿ, ಆತ್ಮಶಾಸ್ತ್ರನಿಷ್ಠರಾದ ಅವರು ನನಗೆ ಮುಂದಿನಂತೆ ಹೇಳುತ್ತಾರೆ.

ಆತ್ಮಶಾಸ್ತ್ರಂ ಪ್ರತಿಷ್ಠೇತ ಯತ್ರ ಧರ್ಮಃ ಸುನಿಷ್ಠಿತಃ ।
ಭವತ್ವೇತನ್ನಿಶ್ಚಯೇನ ನ ತು ಮಿಥ್ಯಾ ಕದಾಚನ ॥
ತವ ದೇವ ಪ್ರಸಾದೇನ ಇಹಲೋಕಃ ಪ್ರವರ್ತತಾಂ ॥ ೧೭ ॥

ತಾನಪ್ಯೇವಂ ವದಿಷ್ಯಾಮಿ *ಶಿಷ್ಯಾಣಾಂ ಭವತಾಂ ಪ್ರಿಯಂ ।
ಭವಿಷ್ಯತಿ ನ ಸಂದೇಹೋ ಯತೋ ಯೂಯಂ ಮಮಪ್ರಿಯಾಃ ॥ ೧೮ ॥

+ಸುಶಿಷ್ಯಾ ಬಾಢಮಿತ್ಯೇವಂ ಭವಿಷ್ಯಂತಿ ನ ಸಂಶಯಃ ॥ ೧೯ ॥

ತದೇತೇ ಪ್ರವದಿಷ್ಯಂತಿ ಸರ್ವಭಾಗವತಪ್ರಿಯಂ ।
ಯಥಾ ಚ ಮಥ್ಯಮಾನಾದ್ವೈ ದಧ್ನಶ್ಚೋದ್ಧ್ರಿಯತೇ ಘೃತಂ ॥
ಏವಂ ಸರ್ವೇಷು ಶಾಸ್ತ್ರೇಷು ವಾರಾಹಂ ಘೃತಸಮ್ಮಿತಂ ॥ ೨೦ ॥

ವಾರಾಹಂ ಜ್ಞಾನಮುತ್ಸೃಜ್ಯ ಮಹಾಭಾಗಂ ಮಹೌಜಸಂ ॥ ೨೧ ॥

---

೧೭. "ದೇವ ನಿನ್ನ ಅನುಗ್ರಹದಿಂದ ಧರ್ಮವು ನೆಲಸಿರುವ ಆತ್ಮಶಾಸ್ತ್ರವು ಸ್ಥಿರವಾಗಿರಲಿ. ಇದು ನಿಜವಾಗಿಯೂ ಆಗಬೇಕು. ಎಂದೂ ಸುಳ್ಳಾಗಬಾರದು. ಇಹಲೋಕವು ಆತ್ಮಶಾಸ್ತ್ರದಲ್ಲಿ ಪ್ರವರ್ತಿಸುವಂತಾಗಲಿ."

೧೮-೧೯. "ನೀವು ನನಗೆ ಪ್ರಿಯರಾಗಿರುವುದರಿಂದ ಶಿಷ್ಯರಾದ ನಿಮ್ಮ ಇಷ್ಟದಂತಾಗುವುದರಲ್ಲಿ ಸಂದೇಹವಿಲ್ಲ. ಸುಶಿಷ್ಯರೇ, ಅವಶ್ಯವಾಗಿಯೂ ಹೀಗೆ ಆಗುವುದು ಸಂದೇಹವಿಲ್ಲ," ಎಂದು ನಾನು ಅವರಿಗೆ ಹೇಳುತ್ತೇನೆ.

೨೦. ಅದಕ್ಕೆ ಅವರು "ಹೆಚ್ಚು ಮೊಸರನ್ನು ಕಡೆದು ತೆಗೆದ ಸಾರವಾದ ತುಪ್ಪದಂತೆ ಸರ್ವಶಾಸ್ತ್ರ(ಪುರಾಣ)ಗಳಲ್ಲಿ ವರಾಹಶಾಸ್ತ್ರ(ಪುರಾಣವು)ಅತಿ ಶ್ರೇಷ್ಠವಾದುದು. ಸರ್ವಭಾಗವತ ಪ್ರಿಯವಾದುದು." ಎಂದು ಹೇಳುವರು.

೨೧-೨೨. ನಾನೂ, ಮಹಾಭಾಗ್ಯವೂ, ಮಹೌಜಸ್ಸೂ ಆದ ವರಾಹ ಶಾಸ್ತ್ರಜ್ಞಾನವನ್ನು ಲೋಕಕ್ಕೆ ಅನುಗ್ರಹಿಸಿ, "ಇವರು ಇದನ್ನು ಪ್ರಮಾಣ

---

* ಶಿಷ್ಯಾಯ

\+ ಈ ಅರ್ಧ ಶ್ಲೋಕವನ್ನು ಶಿಷ್ಯರ ಮಾತಾಗಿಯೂ ಅನ್ವಯಿಸಬಹುದು.

ಏವಂ ಸಮಂ ಮಯಾಚೈವ ಹ್ಯಾತ್ಮನಾಪರಿಭಾಷಿತಂ ।
ತೇ ಪ್ರಮಾಣಂ ಕರಿಷ್ಯಂತಿ ಸಿದ್ಧಿಂ ಪ್ರಾಪ್ಸ್ಯಂತಿ ವೈ ಪರಾಂ ॥ ೨೨ ॥

ಮಹಾಜ್ಞಾನಮಿದಂ ಸೂಕ್ಷ್ಮಂ ಭೂಮೇ ಭಕ್ತೇಷು ದೃಶ್ಯತೇ ।
ಶಾಸ್ತ್ರಾಣಾಂ ಪರಮಂ ಶಾಸ್ತ್ರಂ ಸರ್ವಸಂಸಾರಮೋಕ್ಷಣಂ ॥ ೨೩ ॥

ಕಿಂಚಿದನ್ಯತ್ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಶಾಸ್ತ್ರಮೇತನ್ಮಹಾಭಾಗೇ ಸ್ಥೂಲಕರ್ಮ ಮಹೌಜಸಂ ॥ ೨೪ ॥

ಕೇ ಚಿತ್ತರಂತಿ ಜ್ಞಾನೇನ ಕೇಚಿತ್ ಕರ್ಮಣಿ ಸಿಷ್ಠಿತಾಃ ।
ಕೇಚಿದ್ಯಥೇಷ್ಟಂ ಸುಶ್ರೋಣಿ ಕೇ ಚಿದ್ದಾನೇನ ಕರ್ಮಣಾ ॥ ೨೫ ॥

ಕೇಚಿದ್ಯೋಗ ಬಲಂ ಭುಕ್ತ್ವಾ ಪಶ್ಯಂತಿ ಮಮ ಸುಸ್ಥಿತಂ ।
ವಿಧಿಪೂರ್ವಂ ತು ಮೇ ಕೇ ಚಿನ್ನರಾಃ ಪಶ್ಯಂತಿ ನಿಷ್ಠಿತಾಃ ॥ ೨೬ ॥

(ಆಧಾರ)ವಾಗಿ ಸ್ಥಾಪಿಸಿ, ಪರಮ ಸಿದ್ಧಿಯನ್ನು ಪಡೆಯುವರು" ಎಂದು ನನ್ನಲ್ಲಿ ನಾನೇ ಹೇಳಿಕೊಂಡೆನು.

೨೩. ಭೂಮೀ, ವರಾಹಶಾಸ್ತ್ರವು ಶಾಸ್ತ್ರಗಳಲ್ಲಿ ಪರಮಶಾಸ್ತ್ರ, ಸರ್ವ ಸಂಸಾರ ವಿಮೋಚಕ, ಇದು ಮಹಾಜ್ಞಾನ, ಆದರೂ ಭಕ್ತರಲ್ಲಿ ಸೂಕ್ಷ್ಮವಾಗಿ ಕಾಣುತ್ತದೆ.

೨೪. ವಸುಂಧರೇ, ಇನ್ನೂ ಸ್ವಲ್ಪ ಹೇಳುತ್ತೇನೆ. ಕೇಳು. ಮಹಾಭಾಗ್ಯೇ, ಈ ಶಾಸ್ತ್ರವು ಸ್ಥೂಲಕರ್ಮವೂ, ಮಹೌಜಸ್ಸೂ ಉಳ್ಳದು.

೨೫. ಸುಂದರಿ, ಇದನ್ನರಿಯುವ ಕೆಲವರು ಜ್ಞಾನಿಗಳಾಗಿಯೂ, ಕೆಲವರು ಕರ್ಮನಿಷ್ಠರಾಗಿಯೂ, ಮತ್ತೆ ಕೆಲವರು ಬೇಕಾದಹಾಗೆ ದಾನಮಾಡು ವರಾಗಿಯೂ ಸಂಸಾರಸಾಗರವನ್ನು ದಾಟುವರು.

೨೬. ಕೆಲವರು ಯೋಗಬಲವನ್ನವಲಂಬಿಸಿ ನನ್ನನ್ನು ನೋಡುವರು. ನಿಷ್ಠರಾದ ಕೆಲವರು ನನ್ನ ವಿಧಿಮೂಲಕವಾಗಿಯೇ ನನ್ನನ್ನು ನೋಡುವರು.

ಸರ್ವಧರ್ಮಕರಾಃ ಕೇಚಿತ್ ಸರ್ವಾಶಾಃ ಸರ್ವವಿಕ್ರಯಾಃ ।
ತೇ ಮಾಂ ಪಶ್ಯಂತಿ ವೈ ಭೂಮೇ ಏಕಚಿತ್ತವ್ಯವಸ್ಥಿತಾಃ ॥ ೨೭ ॥

ಏವಮೇತನ್ಮಹಾಶಾಸ್ತ್ರಂ ದೇವಿ ಸಂಸಾರಮೋಕ್ಷಣಂ ।
ಮಮ ಭಕ್ತವ್ಯವಸ್ಥಾಯೈ ಪ್ರಯುಕ್ತಂ ಪರಮಂ ಪ್ರಿಯಂ ॥ ೨೮ ॥

ತೇ ತಥಾ ಚ ಪ್ರವಕ್ಷ್ಯಂತಿ ಯಚ್ಚ ಯಸ್ಯಾಭಿರೋಚತೇ ।
ಅನ್ಯಥಾನ್ಯಸ್ಯ ದೃಷ್ಟಾನಾಮೃಷಿಭಿರ್ಯತ್ಪ್ರಯೋಜಿತಂ ॥ ೨೯ ॥

ತದ್ಯುಗಸ್ಯ ಪ್ರಭಾವೇಣ ಭೂಮೇ ಕುರ್ವಂತಿ ಮಾನವಾಃ ।
ತೈಃ ಸ್ವಶಿಷ್ಯೈಃ ಸಮಂ ದೇವಿ ಯೇ ಶಾಸ್ತ್ರವಿನಿಯೋಜಿತಾಃ ।
ಮತ್ಪ್ರಸಾದೇನ ತೇ ಸರ್ವೇ ಸಿದ್ಧಿಂ ಯಾಸ್ಯಂತಿ ಮತ್ಪರಾಂ ॥ ೩೦ ॥

---

೨೭. ಭೂಮೀ, ಕೆಲವರು ಸರ್ವಧರ್ಮಗಳನ್ನೂ ಆಚರಿಸುವವರೂ, ಎಲ್ಲವನ್ನೂ, ಆಶಿಸುವವರೂ, ಎಲ್ಲವನ್ನೂ ವಿಕ್ರಯಿಸುವವರೂ, ಆಗಿದ್ದರೂ ನನ್ನಲ್ಲಿ ಏಕಚಿತ್ತರಾಗಿದ್ದು ನನ್ನನ್ನು ಸಂದರ್ಶಿಸುವರು.

೨೮. ದೇವಿ, ನನ್ನ ಭಕ್ತರ ವ್ಯವಸ್ಥೆಗಾಗಿ, ಹೀಗೆ ಸಂಸಾರ ವಿಮೋಚಕವೂ ಪರಮಪ್ರಿಯವೂ ಆದ ಈ ಮಹಾಶಾಸ್ತ್ರವು ಪ್ರಕಟವಾಯಿತು.

೨೯. ಋಷಿಗಳು ಅನುಸರಿಸಿರುವ ಬೇರೆಬೇರೆಯಾದ ಮುಕ್ತಿಮಾರ್ಗಗಳಲ್ಲಿ ಯಾವುದು ಯಾರಿಗೆ ರುಚಿಸುವುದೋ ಅದನ್ನು ಆಯಾ ನನ್ನ ಆ ಶಿಷ್ಯರು ಪ್ರಶಂಸಿಸುವರು.

೩೦. ಭೂದೇವಿ, ಆ ನನ್ನ ಶಿಷ್ಯರೊಡನೆ ಶಾಸ್ತ್ರಪರಿಚಯವನ್ನು ಮಾಡಿಕೊಳ್ಳುವ ಮನುಷ್ಯರು ಆ ಯುಗಮಹಿಮೆಗನುಸಾರವಾಗಿ ವರ್ತಿಸುವರು. ನನ್ನ ಅನುಗ್ರಹದಿಂದ ಅವರೆಲ್ಲರೂ ನನ್ನಿಂದ ಪರಸಿದ್ಧಿಯನ್ನು ಪಡೆಯುವರು.

ಮಮ ಶಿಷ್ಯೇಷು ಯೇಷಾಂ ಚ ಮಾತ್ಸರ್ಯೋಪಹತಾತ್ಮನಾಂ ।
ಮಚ್ಛಾಸ್ತ್ರೇ ಚ ಭವೇದ್ದೋಷಸ್ತೇಷಾಮತ್ರ ಪುನರ್ಭವಃ ॥ ೩೦ ॥

ಮಾತ್ಸರ್ಯಂ ಯೇ ಚ ಕುರ್ವಂತಿ ಮದ್ಧರ್ಮಪರಮೇ ಜನೇ ।
ತೇಷಾಂ ನಾಯಂ ಪರೋ ಲೋಕೋ ಮಾತ್ಸರ್ಯೋಪಹತಾತ್ಮನಾಂ॥೩೧॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಮಮ ಮಾರ್ಗಾನುಸಾರೇಣ ಪರಂ ಗುಹ್ಯಂ ಮಮ ಪ್ರಿಯೇ ॥ ೩೩ ॥

ಶಾಸ್ತ್ರವಂತೋ ವಿನೀತಾಶ್ಚ ಬಹುದೋಷವಿವರ್ಜಿತಾಃ ।
ತೇ ತು ಮಾತ್ಸರ್ಯದೋಷೇಣ ನಷ್ಟಾಚಾರಾಃ ಪತಂತ್ಯಧಃ ॥ ೩೪ ॥

ಮಾತ್ಸರ್ಯಂ ಸರ್ವನಾಶಾಯ ಮಾತ್ಸರ್ಯಂ ಧರ್ಮನಾಶಕಂ ।
ಯಸ್ತು ಮಾತ್ಸರ್ಯಸಂಯುಕ್ತೋ ನ ಸ ಪಶ್ಯತಿ ಮಾಂ ಕ್ವಚಿತ್ ॥ ೩೫ ॥

---

೩೦. ಮಾತ್ಸರ್ಯಗ್ರಹಸ್ತರಾದ ಯಾರು ನನ್ನ ಶಿಷ್ಯರಲ್ಲೂ, ನನ್ನ ಶಾಸ್ತ್ರದಲ್ಲೂ ದೋಷವನ್ನಾರೋಪಿಸುವರೋ ಅವರು ಈ ಲೋಕದಲ್ಲಿ ಮತ್ತೆ ಜನ್ಮವನ್ನು ಪಡೆಯುವರು.

೩೧. ನನ್ನ ಧರ್ಮದಲ್ಲಿ ನಿರತರಾದ ಜನರ ಮೇಲೆ ಮಚ್ಚರಿಸುವ ಅಸೂಯಾಪರರಿಗೆ ಪರಲೋಕವು ದೊರೆಯದು.

೩೩. ವಸುಂಧರೇ, ನಿನಗೆ ಇನ್ನೂ ಹೇಳುತ್ತೇನೆ. ಕೇಳು. ನನ್ನ ಪ್ರಿಯೇ, ನನ್ನ ಮಾರ್ಗಾನುಸಾರವಾಗಿ ಈಗ ನಾನು ಹೇಳುವುದು ಅತಿ ರಹಸ್ಯವಾದುದು.

೩೪. ಶಾಸ್ತ್ರಗಳನ್ನರಿತವರೂ, ವಿನಯವುಳ್ಳವರೂ, ಬಹಳಮಟ್ಟಿಗೆ ದೋಷವಿಲ್ಲದವರೂ ಆಗಿದ್ದರೂ, ಮಾತ್ಸರ್ಯದೋಷವೊಂದಿದ್ದರೆ ನಷ್ಟಾಚಾರರಾಗಿ ಅಧೋಗತಿಯನ್ನು ಹೊಂದುವರು.

೩೫. ಮಾತ್ಸರ್ಯ(ಇತರರಿಗೆ ಒಳ್ಳೆಯದಾಗುವುದರಲ್ಲಿ ದ್ವೇಷ)ವು ಧರ್ಮನಾಶಕವಾದುದು. ಸರ್ವನಾಶಕ್ಕೂ ಕಾರಣವಾಗುವುದು. ಮಚ್ಚರವುಳ್ಳವನು ಎಂದಿಗೂ ನನ್ನನ್ನು ನೋಡಲಾರನು.

ಬಹುಕರ್ಮಸಮಾಯುಕ್ತಾ ದಾನಾಧ್ಯಯನನಿಷ್ಠಿತಾಃ ।
ತಪಸಾ ಜ್ಞಾನಯುಕ್ತಾ ವಾ ನಿತ್ಯಕರ್ಮಸು ಚೋದ್ಯತಾಃ ॥ ೩೬ ॥

ಅನೇನ ಹಿ ಸ್ವಭಾವೇನ ಮಾತ್ಸರ್ಯಂ ಚೈವ ಕುರ್ವತೇ ।
ನ ತೇ ಪಶ್ಯಂತಿ ಮಾಂ ಭೂಮೇ ಮಾಯಯಾಪರಿದೂಷಿತಾಃ ॥ ೩೭ ॥

ನ ಕರ್ತವ್ಯಂ ತತಃ ಸರ್ವೈರ್ಮಾತ್ಸರ್ಯಂ ಧರ್ಮಘಾತಕಂ ।
ಮಮ ಶಾಸ್ತ್ರಪರೇಣೇಹ ಯದೀಚ್ಛೇತ್ಪರಮಾಂ ಗತಿಂ ॥ ೩೮ ॥

ಏತದ್ಗುಹ್ಯಂ ಮಹಾಭಾಗೇ ನ ಜಾನಂತಿ ಮನೀಷಿಣಃ ।
ಮಾತ್ಸರ್ಯಸ್ಯ ತು ದೋಷೇಣ ಬಹವೋ ನಿಧನಂಗತಾಃ ॥ ೩೯ ॥

ಏತಚ್ಛಾಸ್ತ್ರಂ ಮಹಾಭಾಗೇ ಪ್ರಯುಕ್ತಂ ವಿಧಿನಾ ಮಯಾ ।
ವರಾಹರೂಪಮಾದಾಯ ಸರ್ವಭಾಗವತಪ್ರಿಯಂ ॥ ೪೦ ॥

೩೬–೩೭. ಭೂಮೀ, ನಿತ್ಯಕರ್ಮನಿಷ್ಠರೂ, ಬಹಳವಾಗಿ ನೈಮಿತ್ತಿಕ ಕರ್ಮಗಳನ್ನು ಮಾಡಿದವರೂ, ದಾನಾಧ್ಯಯನ ನಿರತರೂ, ತಪಸ್ವಿಗಳಾಗಿಯಾಗಲಿ, ಜ್ಞಾನಿಗಳಾಗಿಯಾಗಲಿ, ಇರುವವರೂ ಆದರೂ ಮಾಯಾದೂಷಿತರಾಗಿ ಮಾತ್ಸರ್ಯವನ್ನು ಮಾಡಿದರಾದರೆ ಅವರು ನನ್ನನ್ನು ಕಾಣುವುದಿಲ್ಲ.

೩೮. ಆದುದರಿಂದ ನನ್ನ ಶಾಸ್ತ್ರಪರರಾಗಿ, ಪರಮಗತಿಯನ್ನು ಬಯಸುವ ಯಾರೂ ಧರ್ಮವನ್ನು ನಾಶಮಾಡುವ ಮಾತ್ಸರ್ಯವನ್ನು ಮಾಡಬಾರದು.

೩೯. ಮಹಾಭಾಗ್ಯಶಾಲಿನಿ, ಈ ರಹಸ್ಯವನ್ನು ವಿದ್ವಾಂಸರು ಅರಿಯರು. ಮಾತ್ಸರ್ಯದೋಷದಿಂದ ಹಲವರು ನಾಶವಾಗಿರುವರು.

೪೦. ಮಹಾಭಾಗ್ಯೇ, ನಾನು ವರಾಹರೂಪವನ್ನು ಧರಿಸಿ, ಸರ್ವಭಾಗವತ ಪ್ರಿಯವಾದ ಈ ಶಾಸ್ತ್ರವನ್ನು ವಿಧಿಪೂರ್ವಕವಾಗಿ ಪ್ರಕಟಿಸಿದ್ದೇನೆ.

ತತ್ರಾಶ್ಚರ್ಯಂ ಮಹಾಭಾಗೇ ಶೃಣು ಭೂತಗಿರೌ ಮಮ ।
ಆಯಸೀ ಪ್ರತಿಮಾ ತತ್ರ ಹ್ಯಭೇದ್ಯಾ ಚೈವ ದೃಶ್ಯತೇ ॥ ೪೧ ॥

ಬ್ರುವಂತಿ ಕೇಚಿತ್ ಕಾಂಸ್ಯೇತಿ ಆಯಸೀತ್ಯಪರೇ ಬ್ರುವನ್ ।
ಪಾಷಾಣೇತ್ಯಪರೇ ಕೇಚಿದನ್ಯೇ ವಜ್ರಮಯೀತಿ ಚ ॥ ೪೨ ॥

ಊರ್ಧ್ವಂ ವಾ ಯದಿ ವಾಧೋ ವಾ ಯೇ ಕುರ್ವಂತಿ ಮಮಾರ್ಚನಂ ।
ತಥಾಪಿ ಮಾಂ ಸಂಸ್ಪೃಶಂತಿ ಶಿರೋಮಧ್ಯೇ ತು ಸುಂದರಿ ॥ ೪೩ ॥

ಯೇ ತು ಪಶ್ಯಂತಿ ಮಾಂ ಭೂಮೇ ಮಣಿಪೂರಗಿರೌ ಸ್ಥಿತಂ ।
ಸ್ತುವಂತ್ಯಾಚಾರ್ಯವಂತಶ್ಚ ಮತ್ಪ್ರಸಾದಾತ್ಸುಸಂಯುತಾಃ ॥ ೪೪ ॥

ಆಚಾರ್ಯಾಣಾಂ ಗುಣಾನ್ ಭುಕ್ತ್ವಾ ಮಮ ಕರ್ಮಪಥೇ ಸ್ಥಿತಾಃ ।
ಸರ್ವಕಿಲ್ಬಿಷಮುಕ್ತಾಶ್ಚ ಯಾಂತಿ ತೇ ಪರಮಾಂ ಗತಿಂ ॥ ೪೫ ॥

---

೪೧. ಮಹಾಭಾಗ್ಯೇ, ಈ ಭೂತಗಿರಿಯ ಆಶ್ಚರ್ಯವನ್ನು ಕೇಳು. ಅಲ್ಲಿ ನನ್ನ ಅಯೋಮಯವಾದ (ಕಬ್ಬಿಣದ) ಅಭೇದ್ಯವಾದ ಮೂರ್ತಿಯನ್ನು ನೋಡಬಹುದು.

೪೨. ಆ ಮೂರ್ತಿಯನ್ನು ಕೆಲವರು ಕಂಚಿನದೆಂದೂ, ಕೆಲವರು ಕಬ್ಬಿಣದ್ದೆಂದೂ, ಮತ್ತೆ ಕೆಲವರು ಕಲ್ಲಿನದೆಂದೂ, ಇನ್ನೂ ಕೆಲವರು ವಜ್ರಮಯವಾದುದೆಂದೂ ಹೇಳುವರು.

೪೩–೪೫. ಸುಂದರಿ, ಮಣಿಪೂರ ಅಥವಾ ಭೂತಗಿರಿಯಲ್ಲಿರುವ ನನ್ನನ್ನು ಗುರುಭಕ್ತರೂ, ಜಿತೇಂದ್ರಿಯರೂ, ನನ್ನ ಕರ್ಮಗಳಲ್ಲಿ ನಿರತರೂ ಆಗಿ, ಮೇಲಾಗಲಿ, ಕೆಳಗಾಗಲಿ ಪೂಜಿಸುವವರೂ, ನನ್ನ ಶಿರಸ್ಸಿನ ನಡುವೆ ಮುಟ್ಟುವವರೂ, ನನ್ನನ್ನು ಸಂದರ್ಶಿಸುವವರೂ, ತನ್ನ ಪ್ರಸಾದದಿಂದ ಆಚಾರ್ಯರ ಗುಣಗಳನ್ನು ಅನುಭವಿಸಿ, ಸರ್ವಪಾಪಗಳನ್ನೂ ಕಳೆದುಕೊಂಡು, ಪರಮಗತಿಯನ್ನು ಪಡೆಯುವರು.

ತಸ್ಮಿನ್ ಕ್ಷೇತ್ರೇ ಮಹಾಭಾಗೇ ಅಸ್ತಿಗುಹ್ಯಂ ಪರಂ ಮಮ ।
ಪಂಚಾರುಮೇತಿ ವಿಖ್ಯಾತಂ ಉತ್ತರಾಂ ದಿಶಮಾಶ್ರಿತಂ ॥ ೪೬ ॥

ತತ್ರ ಸ್ನಾನಂ ಪ್ರಕುರ್ವೀತ ಪಂಚಕಾಲೋಷಿತೋ ನರಃ ।
ಮೋದತೇ ನಂದನೇ ದಿವ್ಯೇ ಹ್ಯಪ್ಸರೋಭಿಃ ಸಮಾಕುಲೇ ॥ ೪೭ ॥

ಅಥಾತ್ರ ಮುಂಚತಿ ಪ್ರಾಣಾನ್ ಕೃತಕೃತ್ಯೋ ಭವೇನ್ನರಃ ।
ನಂದನಂ ವನಮುತ್ಸೃಜ್ಯ ಮಮ ಲೋಕಂ ಚ ಗಚ್ಛತಿ ॥ ೪೮ ॥

ಭೃಗುಕುಂಡೇತಿ ವಿಖ್ಯಾತಂ ಅತ್ರ ಗುಹ್ಯಂ ಪರಂ ಮಮ ।
ಮಮ ದಕ್ಷಿಣಪಾರ್ಶ್ವೇ ತು ಅದೂರಾದರ್ಧಯೋಜನಾತ್ ॥ ೪೯ ॥

ತತ್ರ ಸ್ನಾನಂ ತು ಕುರ್ವೀತ ಮಮ ಮಾರ್ಗಾನುಸಾರಕಃ ।
ಭೂಪೃಷ್ಠೇ ನ ತು ಜಾಯೇತ ಕಾಲೇನ ವಿಜಿತೇಂದ್ರಿಯಃ ॥ ೫೦ ॥

---

೪೬. ಸೌಭಾಗ್ಯವತಿ, ಸ್ತುತಸ್ವಾಮಿಕ್ಷೇತ್ರದಲ್ಲಿ ಉತ್ತರದಿಕ್ಕಿನಲ್ಲಿ ಪಂಚಾರುಮವೆಂಬ ಪ್ರಸಿದ್ಧವೂ, ರಹಸ್ಯವೂ, ಉತ್ತಮವೂ ಆದ ನನ್ನ ತೀರ್ಥವಿದೆ.

೪೭. ಅಲ್ಲಿ ಐದು ಜಾವಗಳಕಾಲವಿದ್ದು ತೀರ್ಥದಲ್ಲಿ ಸ್ನಾನಮಾಡುವವನು ಅಪ್ಸರರಿಂದ ತುಂಬಿದ ದಿವ್ಯನಂದನವನದಲ್ಲಿ ಆನಂದಪಡುವನು.

೪೮. ಬಳಿಕ ಕೃತಕೃತ್ಯನಾಗಿ ನಂದನವನವನ್ನು ತ್ಯಜಿಸಿ ಆ ತೀರ್ಥದಲ್ಲಿ ಪ್ರಾಣಬಿಟ್ಟು ನನ್ನ ಲೋಕವನ್ನು ಸೇರುವನು.

೪೯. ಅದೇ ಕ್ಷೇತ್ರದಲ್ಲಿ ನನ್ನ ಬಲ(ದಕ್ಷಿಣ)ಭಾಗದಲ್ಲಿ ಅರ್ಧಯೋಜನಕ್ಕಿಂತಲೂ ಹತ್ತಿರದಲ್ಲಿಯೇ ಭೃಗುಕುಂಡವೆಂದು ಪ್ರಸಿದ್ಧವೂ ಉತ್ತಮವೂ ಆದ ನನ್ನ ರಹಸ್ಯ ತೀರ್ಥವಿದೆ.

೫೦–೫೧. ನನ್ನ ಮಾರ್ಗವನ್ನು ಅನುಸರಿಸುವವನು ಆ ತೀರ್ಥದಲ್ಲಿ ಸ್ನಾನವನ್ನು ಮಾಡಿದನಾದರೆ ಅವನ ಕಾಲಾನಂತರ ಮತ್ತೆ ಭೂಮಿಯಮೇಲೆ

ಧ್ರುವೋ ಯತ್ರ ತು ತಿಷ್ಠೇತ ಮೇರುಶೃಂಗೇ ಶಿಲೋಚ್ಚಯೇ ।
ತತ್ರ ಮೋದತಿ ಸುಶ್ರೋಣಿ ಅಪ್ಸರೋಭಿರ್ಯಥಾಸುಖಂ ॥ ೫೧ ॥

ಅಥಾತ್ರಮುಂಚತಿ ಪ್ರಾಣಾನ್ ಮಮ ಕರ್ಮಪಥೇ ಸ್ಥಿತಃ ।
ಧ್ರುವಲೋಕಂ ಪರಿತ್ಯಜ್ಯ ಮಮ ಲೋಕೇ ಮಹೀಯತೇ ॥ ೫೨ ॥

ಮಣಿಕುಂಡೇತಿ ವಿಖ್ಯಾತಂ ತತ್ರ ಗುಹ್ಯ ಪರಂ ಮಮ ।
ಮಣಯೋ ಯತ್ರ ದೃಶ್ಯಂತೇ ಅನೇಕಾಲಯಸಂಸ್ಥಿತಾಃ ॥ ೫೩ ॥

ಅಗಾಧಂ ತಂ ಹ್ರದಂ ಭದ್ರೇ ದೇವಾನಾಮಪಿ ದುರ್ಲಭಂ ।
ವಿಸ್ಮಯಂ ಕಿಂ ಪುನಸ್ತತ್ರ ಮಲಯಶ್ಚಂಚಲಃ ಸ್ಥಿತಃ ॥ ೫೪ ॥

ತತ್ರ ಸ್ನಾನಂ ಪ್ರಕುರ್ವೀತ ಪಂಚಕಾಲೋಷಿತೋ ನರಃ ।
ರತ್ನಭಾಗೀ ಭವೇದ್ಧೀರೋ ರಾಜಲಕ್ಷಣಸಂಯುತಃ ॥ ೫೫ ॥

ಜನಿಸುವುದಿಲ್ಲ. ಸುಂದರಿ, ಅವನು ಜಿತೇಂದ್ರಿಯನಾಗಿ ಮೇರುಪರ್ವತದ ಶಿಖರದಲ್ಲಿ ಧ್ರುವನು ನೆಲಸಿರುವೆಡೆಯಲ್ಲಿ ಅಪ್ಸರರೊಡನೆ ಇಷ್ಟಾನುಸಾರವಾಗಿ ಸಂತೋಷಪಡುವನು.

೫೨. ಬಳಿಕ ನನ್ನ ಕರ್ಮಮಾರ್ಗದಲ್ಲಿದ್ದು, ಧ್ರುವಲೋಕವನ್ನು ಪರಿತ್ಯಜಿಸಿ, ಆ ತೀರ್ಥದಲ್ಲಿ ಪ್ರಾಣಗಳನ್ನು ಬಿಟ್ಟು ನನ್ನ ಲೋಕದಲ್ಲಿ ವಾಸಿಸುವನು.

೫೩. ಅಲ್ಲಿ ಮಣಿಕುಂಡವೆಂದು ಪ್ರಸಿದ್ಧವೂ, ಶ್ರೇಷ್ಠವೂ ಆದ ನನ್ನ ರಹಸ್ಯತೀರ್ಥವೊಂದಿದೆ. ಹಲವು ಮನೆಗಳಲ್ಲಿರುವ ರತ್ನ(ಮಣಿ)ಗಳನ್ನು ಅಲ್ಲಿ ನೋಡಬಹುದು.

೫೪. ಭದ್ರೇ, ಅಗಾಧವಾದ ಆ ಮಡುವು ದೇವತೆಗಳಿಗೂ ದುರ್ಲಭವಾದುದು. ಅಲ್ಲಿನ ಆಶ್ಚರ್ಯವೇನೆಂದರೆ ಮಲಯಪರ್ವತವು ಅಲ್ಲಿ (ನೀರಿನಲ್ಲಿರಬಹುದು)ಚಂಚಲವಾಗಿ ಕಾಣಿಸುತ್ತದೆ.

೫೫. ಅಲ್ಲಿ ಐದು(ಜಾವಗಳ)ಕಾಲ ಇದ್ದು ತೀರ್ಥಸ್ನಾನಮಾಡಿದನಾದರೆ ಆ ಮನುಷ್ಯನು ರಾಜಲಕ್ಷಣಯುಕ್ತನೂ, ಧೀರನೂ, ರತ್ನಲಾಭವನ್ನು ಪಡೆಯುವನೂ ಆಗುವನು.

ಅಥಾತ್ರ ಮುಂಚತಿ ಪ್ರಾಣಾನ್ ಮಮ ಕರ್ಮಪಥೇ ಸ್ಥಿತಃ ।
ಛಿತ್ವಾವೈ ಸರ್ವಸಂಸಾರಂ ಮಮ ಲೋಕಂ ಪ್ರಪದ್ಯತೇ ॥ ೫೬ ॥

ಸುಗುಹ್ಯಂ ಪೂರ್ವಪಾರ್ಶ್ವೇನ ಮಮ ಕ್ಷೇತ್ರಸ್ಯ ಸುಂದರಿ ।
ಅದೂರತಸ್ತ್ರಿಕ್ರೋಶೇನ ಪರಿಮಾಣಂ ವಿಧೀಯತೇ ॥ ೫೭ ॥

ತತ್ರ ಸ್ನಾನಂ ತು ಕುರ್ವೀತ ಮಮ ಲೋಕಂ ಸ ಗಚ್ಛತಿ ॥ ೫೮ ॥

ಧೂತಪಾಪೇತಿ ವಿಖ್ಯಾತಂ ತತ್ರ ಗುಹ್ಯಂ ಪರಂ ಮಮ ।
ಪಂಚಕ್ರೋಶಾದದೂರಾದ್ವೈ ಮಮ ಕ್ಷೇತ್ರಸ್ಯ ಪಶ್ಚಿಮೇ ॥ ೫೯ ॥

ತತ್ರ ಕುಂಡಂ ಮಹಾಭಾಗೇ ಮಮ ತದ್ರೋಚತೇ ಜಲಂ ।
ಮಾರಕತಂ ಸುವರ್ಣಾಭಮಗಾಧಂ ನಿರ್ಮಿತಂ ಮಯಾ ॥ ೬೦ ॥

---

೫೬. ಬಳಿಕ ನನ್ನ ಕರ್ಮಮಾರ್ಗದಲ್ಲಿದ್ದು ಅಲ್ಲಿ ಪ್ರಾಣಬಿಟ್ಟು, ಸರ್ವ ಸಂಸಾರವನ್ನೂ ಕಳೆದುಕೊಂಡು ನನ್ನ ಲೋಕವನ್ನು ಸೇರುವನು.

೫೭–೫೮. ವಸುಂಧರೇ, ನನ್ನ ಕ್ಷೇತ್ರದ ಪೂರ್ವಭಾಗದಲ್ಲಿ ಸಮೀಪದಲ್ಲಿಯೇ ಎಂದರೆ ಮೂರು ಹರಿದಾರಿಯಲ್ಲಿ ಸುಗುಹ್ಯವೆಂಬ ತೀರ್ಥವಿದೆ. ಅದರಲ್ಲಿ ಸ್ನಾನಮಾಡುವವನು ನನ್ನ ಲೋಕವನ್ನು ಸೇರುವನು.

೫೯. ನನ್ನ ಕ್ಷೇತ್ರಕ್ಕೆ ಪಶ್ಚಿಮದಲ್ಲಿ ಸಮೀಪದಲ್ಲಿಯೇ ಎಂದರೆ ಸುಮಾರು ಐದು ಹರಿದಾರಿಯಲ್ಲಿ ಧೂತಪಾಪವೆಂದು ಪ್ರಸಿದವೂ, ಶ್ರೇಷ್ಠವೂ ಆದ ನನ್ನ ರಹಸ್ಯತೀರ್ಥವೊಂದಿದೆ.

೬೦. ಮಹಾಭಾಗ್ಯೇ, ನಾನು ನಿರ್ಮಿಸಿದ ಬಹಳ ಆಳವಾದ ಸುವರ್ಣ ಕಾಂತಿಯ ಆ ಜಲಕುಂಡವೂ, ಆ ಪಚ್ಚೆಯ ಬಣ್ಣದ ನೀರೂ ನನಗೆ ಬಹಳ ಇಷ್ಟವಾದುದು.

ತತ್ರ ಸ್ನಾನಂ ಪ್ರಕುರ್ವೀತ ಪಂಚಭಕ್ತೋಷಿತೋ ನರಃ ।
ಧುನ್ವಾನೋ ದುಷ್ಕರಂ ಕರ್ಮ ಪಂಚಭೂತಾತ್ಮನಿಷ್ಠಿತಂ ॥ ೬೧ ॥

ಕೃತೋದಕಸ್ತತ್ರ ಭದ್ರೇ ಧೂತಪಾಪೇ ಯಶಸ್ವಿನಿ ।
ಗತ್ವೇಂದ್ರಲೋಕಂ ಸುಶ್ರೋಣಿ ದೇವೈಃ ಸಹ ಸ ಮೋದತೇ ॥ ೬೨ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮಪರಾಯಣಃ ।
ಇಂದ್ರಲೋಕಂ ಪರಿತ್ಯಜ್ಯ ಮಮ ಲೋಕಂ ಪ್ರಪದ್ಯತೇ ॥ ೬೩ ॥

ತತ್ರಾಶ್ಚರ್ಯಂ ಮಹಾಭಾಗೇ ಧೂತಪಾಪೇ ಶೃಣುಷ್ವ ಮೇ ।
ವರ್ತತೇ ಚ ವಿಶಾಲಾಕ್ಷಿ ಮಣಿಪೂರೇ ಗಿರೌ ಮಮ ॥ ೬೪ ॥

ತಾವನ್ನ ಪತತೇ ಧಾರಾ ಯಾವತ್ಪಾಪಂ ನ ಧೂಯತೇ ।
ಧೂತೇ ಪಾಪೇ ಚ ಸುಶ್ರೋಣಿ ಧಾರಾ ಚ ಪತತಿ ಕ್ಷಿತೌ ॥ ೬೫ ॥

೬೧–೬೨. ಭೂದೇವಿ, ಯಶಸ್ವಿನಿ, ಐದನೆಯ ಒಂದು ಭಾಗ ಆಹಾರವನ್ನು ಮಾತ್ರ ಸೇವಿಸಿ, ಅಲ್ಲಿದ್ದು ಆ ತೀರ್ಥದಲ್ಲಿ ಸ್ನಾನಮಾಡುವ ಮನುಷ್ಯನು ಪಂಚಭೂತಾತ್ಮಕವಾದ ದೇಹದಿಂದ ಮಾಡಿದ ದುಷ್ಕರ ಕರ್ಮಗಳನ್ನೂ, ಪಾಪಗಳನ್ನೂ ಕೊಡವಿ, ಕಳೆದುಕೊಂಡು, ಇಂದ್ರಲೋಕಕ್ಕೆ ಹೋಗಿ ದೇವತೆಗಳೊಡನೆ ಸಂತೋಷಪಡುವನು.

೬೩. ಬಳಿಕ ನನ್ನ ಕರ್ಮಪರಾಯಣನಾಗಿದ್ದು ಆ ಧೂತಪಾಪ ತೀರ್ಥದಲ್ಲಿ ಪ್ರಾಣಗಳನ್ನು ಬಿಡುವವನಾಗಿ ಇಂದ್ರಲೋಕವನ್ನು ಬಿಟ್ಟು, ನನ್ನ ಲೋಕವನ್ನು ಸೇರುವನು.

೬೪. ಸೌಭಾಗ್ಯಶಾಲಿನಿ, ವಿಶಾಲಾಕ್ಷಿ, ಆ ತೀರ್ಥವು ನನ್ನ ಮಣಿಪೂರ ಗಿರಿಯಲ್ಲಿದೆ. ನನ್ನ ಆ ಧೂತಪಾಪತೀರ್ಥದ ಆಶ್ಚರ್ಯವಿಚಾರವನ್ನು ಕೇಳು.

೬೫. ಸುಂದರಿ, ಗಿರಿಶಿಖರದಿಂದ ಅಲ್ಲಿ ಬೀಳುವ ಒಂದು ಜಲಧಾರೆಯು ಆ ತೀರ್ಥದಲ್ಲಿ ಸ್ನಾನಮಾಡುವವನ ಪಾಪವು ಪೂರ್ತಿಯಾಗಿ ಹೋಗುವವರೆಗೆ ಬೀಳುವುದೇ ಇಲ್ಲ. ಪಾಪವು ಬಿಟ್ಟುಹೋದ ಬಳಿಕ ಭೂಮಿಯ ಮೇಲೆ ಬೀಳುವುದು.

ಏವಂ ತತ್ರ ವಿಶಾಲಾಕ್ಷಿ ವೃಕ್ಷಮಶ್ವತ್ಥಮಿಶ್ರಿತಂ |
ಧೂತಪಾಪಂ ನ ಪ್ರವಿಶೇತ್ ಪ್ರವಿಶತ್ಯಮಲೇ ನರೇ || ೬೬ ||

ತಸ್ಮಿನ್‌ಕ್ಷೇತ್ರೇ ವರಾರೋಹೇ ಸಮಂತಾತ್ಪಂಚಯೋಜನೇ |
ಯತ್ರ ತಿಷ್ಠಾಮ್ಯಹಂ ದೇವಿ ಪಶ್ಚಿಮಾಂ ದಿಶಮಾಶ್ರಿತಃ || ೬೭ ||

ತತ್ರ ಚಾಮಲಕಂ ಭದ್ರೇ ಅದೂರಾದರ್ಧಯೋಜನಾತ್ |
ಮಮ ಚೈವ ಪ್ರಭಾವೇಣ ಸರ್ವಕಾಮಫಲೋದಯಂ || ೬೮ ||

ತತ್ರ ಕಶ್ಚಿನ್ನ ಜಾನಾತಿ ಪಾಪಕರ್ಮಾ ನರಾಧಮಃ |
ಭಕ್ತಂ ಭಾಗವತಂ ಶುದ್ಧಂ ಮಮಕರ್ಮವ್ಯವಸ್ಥಿತಂ || ೬೯ ||

ಉಪೋಷ್ಯ ಚ ತ್ರಿರಾತ್ರಾಣಿ ಶ್ರದ್ಧಧಾನೋ ಜಿತೇಂದ್ರಿಯಃ |
ತತ್ರ ಗತ್ವಾ ವರಾರೋಹೇ ಉದಿತೇ ಚ ದಿವಾಕರೇ || ೭೦ ||

---

೬೬. ವಿಶಾಲಾಕ್ಷಿ, ಹೀಗೆಯೇ ಅಲ್ಲಿರುವ ಅಶ್ವತ್ಥವೃಕ್ಷದೊಡನೆ ಸೇರಿದ ಧೂತಪಾಪವೃಕ್ಷವನ್ನು ಮನುಷ್ಯನು ಪಾಪವು ಹೋಗುವವರೆಗೂ, ಪ್ರವೇಶಿಸಲಾಗುವುದಿಲ್ಲ. ಪಾಪವು ಹೋಗಿ ಪರಿಶುದ್ಧನಾದರೆ ಹತ್ತಿರಹೋಗಬಹುದು.

೬೭–೬೮. ವರಾರೋಹೇ, ದೇವಿ, ಸುತ್ತ ಐದುಯೋಜನದಳತೆಯ ಆ ಕ್ಷೇತ್ರದಲ್ಲಿ ನಾನು ಪಶ್ಚಿಮದಿಕ್ಕಿಗೆ ಅಭಿಮುಖನಾಗಿ ನೆಲಸಿರುವೆಡೆಯಲ್ಲಿ ಅರ್ಧಯೋಜನಕ್ಕಿಂತಲೂ, ಹತ್ತಿರದಲ್ಲಿಯೇ ನನ್ನ ಪ್ರಭಾವದಿಂದ ಸರ್ವೇಷ್ಟಾರ್ಥಗಳನ್ನೂ ಕೊಡುವ ನೆಲ್ಲಿಯಮರವಿದೆ.

೬೯. ಅದು ಅಲ್ಲಿರುವುದನ್ನು ಅಥವಾ ಅಲ್ಲಿರುವ ಭಾಗವತನೂ, ಶುದ್ಧನೂ, ನನ್ನ ಕರ್ಮಗಳಲ್ಲಿ ನಿರತನೂ ಆದ ಭಕ್ತನನ್ನು ಪಾಪಕರ್ಮನಾದ ಹೀನಮನುಜನೊಬ್ಬನೂ ತಿಳಿಯನು.

೭೦–೭೧. ಸುಂದರಿ, ನಂಬಿಕೆಯುಳ್ಳವನೂ, ಜಿತೇಂದ್ರಿಯನೂ ಆದ ಮನುಷ್ಯನು ಮೂರುರಾತ್ರಿ ಉಪವಾಸವಿದ್ದು, ಆ ಕ್ಷೇತ್ರಕ್ಕೆ ಹೋಗಿ, ಸೂರ್ಯೋ

ಅಥ ಮಧ್ಯಾಹ್ನವೇಲಾಯಾಂ ಯದಿ ವಾಸ್ತಗತೇ ಪಿವಾ |
ಏಕ ಚಿತ್ತೇನ ಗಂತವ್ಯಂ ಧೃತಿಂ ಕೃತ್ವಾ ಸುಪುಷ್ಕಲಾಂ || ೭೦ ||

ಯಸ್ತತ್ರ ಲಭತೇ ಭದ್ರೇ ಫಲಮಾಮಲಕಂ ಶುಭಂ |
ಪಂಚರಾತ್ರೇಣ ಲಭತೇ ತಸ್ಮಿನ್ ಭೂತಗಿರೌ ಮಮ || ೭೨ ||

ತತೋ ಹರಿವಚಃ ಶ್ರುತ್ವಾ ಸಾ ಮಹೀ ಸಂಶಿತವ್ರತಾ |
ಪುನರ್ನಾರಾಯಣಂ ತತ್ರ ಪ್ರಾವೋಚದ್ವಿನಯಾನ್ವಿತಾ || ೭೩ ||

ಸ್ತುತಸ್ವಾಮಿಶ್ರುತೋಸಿತ್ವಂ ತತ್ರ ಸ್ಥಾನಾನಿ ಯಾನಿಚ |
ಏತನ್ನಾಮ ನಿರುಕ್ತಿಂ ತ್ವಂ ವಕ್ತುಮರ್ಹಸಿ ಸಾಂಪ್ರತಂ || ೭೪ ||

ದಯಕಾಲದಲ್ಲಾಗಲಿ, ಮಧ್ಯಾಹ್ನದಲ್ಲಾಗಲಿ, ಸೂರ್ಯಾಸ್ತಕಾಲದಲ್ಲಾಗಲಿ ಬಹುಧೈರ್ಯಮಾಡಿಕೊಂಡು ಒಂದೇ ಮನದಿಂದ ಆ ನೆಲ್ಲಿಯಮರದ ಹತ್ತಿರಕ್ಕೆ ಹೋಗಬೇಕು.

೭೨. ಭದ್ರೇ, ಆ ನನ್ನ ಭೂತಗಿರಿಯಲ್ಲಿ ಅವನು ಆ ನೆಲ್ಲಿಯ ಕಾಯನ್ನು ಪಡೆದರೆ, ಬಳಿಕ ಐದುರಾತ್ರಿಗಳೊಳಗೆ ಶುಭವನ್ನು ಪಡೆಯುವನು.

೭೩. ತೀಕ್ಷ್ಣವ್ರತೆಯಾದ ಆ ಭೂದೇವಿ ಹರಿಯ ಆ ಮಾತನ್ನು ಕೇಳಿ ವಿನಯದಿಂದ ಮತ್ತೆ ಆ ನಾರಾಯಣನೊಡನೆ ಮಾತನಾಡಿದಳು.

೭೪. ದೇವ ನೀನು ಸ್ತುತಸ್ವಾಮಿಯೆಂದೆನಿಸಿಕೊಂಡಿರುವೆಯಷ್ಟೆ. ಈ ಹೆಸರು ಬರಲು ಕಾರಣವನ್ನು ಎಂದರೆ ಸ್ತುತಸ್ವಾಮಿಯೆಂಬುದರ ಅವಯವಾರ್ಥವನ್ನೂ, ಅಲ್ಲಿರುವ ಪವಿತ್ರಸ್ಥಾನಗಳನ್ನೂ ಈಗ ನೀನು ಹೇಳಬೇಕು.

|| ಶ್ರೀವರಾಹ ಉವಾಚ ||

ಭೂಮೇ ಹತ್ವಾ ತು ಸಂಸಾರಾನ್ ಯೇ ಚಾನ್ಯೇ ದೇವಕಂಟಕಾಃ ।
ದ್ವಾಪರಂ ಯುಗಮಾಸಾದ್ಯ ತತ್ರ ಸ್ಥಾಸ್ಯಾಮಿ ಸುಂದರಿ || ೭೫ ||

ತತೋಽಮರೈಶ್ಚ ಬ್ರಹ್ಮಾದ್ಯೈರ್ಬಹುಭಿರ್ಮಂತ್ರ ವಾದಿಭಿಃ ।
ಸ್ತುತಿಂ ಕರ್ತುಂ ಸಮಾರಬ್ಧಂ ಮಣಿಪೂರಾಶ್ರಿತಸ್ಯಮೇ ||೭೬ ||

ತತೋ ಮಾಂ ನಾರದೋ ದೇವಿ ಅಸಿತೋ ದೇವಲಸ್ತಥಾ ।
ಪರ್ವತಶ್ಚ ಮಹಾಭಾಗೇ ಮಮ ಭಕ್ತ್ಯಾ ವ್ಯವಸ್ಥಿತಃ || ೭೭ ||

ನಾಮ ಕುರ್ವಂತಿ ಮೇ ತತ್ರ ಮಣಿಪೂರಗಿರೌ ತತಃ ।
ಸ್ತುತಸ್ವಾಮೀತಿ ವಿಖ್ಯಾತಂ ಮಮ ಕರ್ಮವ್ಯಪಾಶ್ರಿತಂ || ೭೮ ||

ಏತತ್ತೇ ಕಥಿತಂ ಭದ್ರೇ ನಿರುಕ್ತಿಕರಣಂ ಮಯಾ ।
ತ್ವಯಾ ಪೃಷ್ಟಂ ಹಿ ಯದ್ಭದ್ರೇ ಸರ್ವಭಾಗವತಪ್ರಿಯಂ || ೭೯ ||

---

೭೫. ಶ್ರೀವರಾಹ— ಭೂದೇವಿ, ಸುಂದರಿ, ದೇವತೆಗಳಿಗೆ ತೊಂದರೆ ಪಡಿಸುತ್ತಿದ್ದ ರಾಕ್ಷಸರ ಸಮೂಹವನ್ನು ಕೊಂದು, ದ್ವಾಪರಯುಗವು ಬರಲು ನಾನು ಆ ಮಣಿಪೂರಗಿರಿಯಲ್ಲಿರುವೆನು.

೭೬. ಬಳಿಕ ದೇವತೆಗಳೂ, ಬ್ರಹ್ಮನೇ ಮೊದಲಾದ ಹಲವರು ಮಂತ್ರವಾದಿಗಳೂ, ಮಣಿಪೂರಗಿರಿಯಲ್ಲಿರುವ ನನ್ನನ್ನು ಸ್ತೋತ್ರಮಾಡಲು ಆರಂಭಿಸುವರು.

೭೭–೭೮. ದೇವಿ, ಮಹಾಭಾಗ್ಯೇ, ಹಾಗೆ ಸ್ತುತಿಸಿದ ಬಳಿಕ ನನ್ನ ಭಕ್ತರಾದ ನಾರದ, ಅಸಿತ, ದೇವಲ, ಪರ್ವತರೆಂಬ ಋಷಿಗಳು ನನಗೆ ಅದೇ ಮಣಿಪೂರಗಿರಿಯಲ್ಲಿ ನನ್ನ ಕಾರ್ಯಕ್ಕೆ ತಕ್ಕುದಾಗಿರುವ ಎಂದರೆ ಸ್ತುತನಾದ ಸ್ವಾಮಿ ಎಂಬ ಅರ್ಥವುಳ್ಳ ಸ್ತುತಸ್ವಾಮಿ ಎಂಬ ಪ್ರಸಿದ್ಧವಾದ ಹೆಸರನ್ನು ಇಡುವರು.

೭೯. ಭದ್ರೇ, ನೀನು ಕೇಳಿದುದರಿಂದ ಸರ್ವಭಾಗವತರಿಗೂ ಪ್ರಿಯವಾದ ಈ ಸ್ತುತಸ್ವಾಮಿ ಎಂಬ ಹೆಸರಿನ ಅರ್ಥವನ್ನೂ ನಿನಗೆ ಹೇಳಿದೆನು.

ಏತತ್ ಸ್ತುತಗಿರೇರ್ದೇವಿ ಮಾಹಾತ್ಮ್ಯಂ ಕಥಿತಂ ಮಯಾ ।
ದ್ವಾಪರಂ ಯುಗಮಾಸಾದ್ಯ ಯತ್ರ ಸ್ಥಾಸ್ಯಾಮಿ ಸುಂದರಿ ॥ ೮೦ ॥

ಏತಾನಿ ಭೂಮೇ ಗುಹ್ಯಾನಿ ತತ್ರ ಭೂತಗಿರೌ ಮಮ ।
ಶ್ರದ್ಧಧಾನೇನ ಮರ್ತ್ಯೇನ ಶ್ರೋತವ್ಯಂ ನಾತ್ರ ಸಂಶಯಃ ॥ ೮೧ ॥

ಏತತ್ತೇ ಕಥಿತಂ ಭದ್ರೇ ಸರ್ವಧರ್ಮವ್ಯಪಾಶ್ರಯಂ ।
ಶ್ರೀಸ್ತುತಸ್ವಾಮಿಮಾಹಾತ್ಮ್ಯಂ ಕಿಮನ್ಯತ್ಪರಿಪೃಚ್ಛಸಿ ॥ ೮೨ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸ್ತುತಸ್ವಾಮಿಮಾಹಾತ್ಮ್ಯಂನಾಮ
ಅಷ್ಟಚತ್ವಾರಿಂಶದಧಿಕಶತತಮೋಽಧ್ಯಾಯಃ

---

೮೦. ದೇವಿ, ಸುಂದರಿ, ದ್ವಾಪರಯುಗದಲ್ಲಿ ನಾನು ಎಲ್ಲಿರುವೆನೋ ಆ ಸ್ತುತಗಿರಿಯ ಈ ಮಹಿಮೆಯನ್ನು ನಾನು ಹೇಳಿದುದಾಯಿತು.

೮೧. ಭೂಮಿ, ನನ್ನ ಆ ಭೂತಗಿರಿಯಲ್ಲಿ ಇವೇ ರಹಸ್ಯಗಳು. ವಿಶ್ವಾಸವುಳ್ಳವರು ಇದನ್ನು ಕೇಳಬೇಕು. ಇದರಲ್ಲಿ ಸಂಶಯವಿಲ್ಲ.

೮೨. ಭದ್ರೇ, ಸರ್ವಧರ್ಮಕ್ಕೂ ಆಶ್ರಯವಾದ ಈ ಶ್ರೀಸ್ತುತಸ್ವಾಮಿಯ ಮಹಿಮೆಯನ್ನು ಹೇಳಿದುದಾಯಿತು. ಬೇರೇನನ್ನು ಕೇಳುವೆ ?

ಅಧ್ಯಾಯದ ಸಾರಾಂಶ—

ಭೂದೇವಿಗೆ ಶ್ರೀ ವರಾಹದೇವನು—ಸ್ತುತಸ್ವಾಮಿಯೆಂದು ಪ್ರಸಿದ್ಧವಾದ ಕ್ಷೇತ್ರದ ಮಹಿಮೆಯನ್ನು ವಿವರಿಸುತ್ತ, ವರಾಹಪುರಾಣದ ಮಹಿಮೆಯನ್ನು ಇದು ಕರ್ಮ, ಜ್ಞಾನ, ಭಕ್ತಿ, ದಾನ, ಧರ್ಮಯೋಗ ಮೊದಲಾದುವುಗಳಲ್ಲಿ ಬೇಕಾದುದನ್ನು ಬೇಕಾದವರು ಅನುಸರಿಸಿ ಮುಕ್ತರಾಗುವ ಮಾರ್ಗವನ್ನು ತೋರಿಸುವುದೆಂದು ವಿಶದಪಡಿಸಿ, ಮಾತ್ಸರ್ಯದ ದೋಷಗಳನ್ನೂ ಸ್ತುತಸ್ವಾಮಿಕ್ಷೇತ್ರದಲ್ಲಿರುವ ಪಂಚಾರುಮ, ಭೃಗುಕುಂಡ, ಮಣಿಕುಂಡ, ಧೂತಪಾಪಗಳೆಂಬ ಹೆಸರಿನ ತೀರ್ಥಗಳ ವಿಚಾರವನ್ನು ತಿಳಿಸುವನು.

ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರ ನಲವತ್ತೆಂಟನೆಯ ಅಧ್ಯಾಯ.

|| ಶ್ರೀಃ ||

ಏಕೋನಪಂಚಾಶದಧಿಕಶತತಮೋಽಧ್ಯಾಯಃ

ಅಥ ದ್ವಾರಕಾ ಮಾಹಾತ್ಮ್ಯಂ

|| ಸೂತ ಉವಾಚ ||

ಶ್ರೀಸ್ತುತಸ್ವಾಮಿಮಾಹಾತ್ಮ್ಯಂ ಶ್ರುತ್ವಾ ಧರ್ಮಪರಾಯಣಾ ।
ಪರಿತುಷ್ಟಮನಾ ದೇವೀ ವಾಕ್ಯಮೇತದುವಾಚ ಹ || ೧ ||

|| ಧರಣ್ಯುವಾಚ ||

ಏತಚ್ಛ್ರುತ್ವಾ ತು ಮಾಹಾತ್ಮ್ಯಂ ದೇವ ದೇವವರ ಪ್ರಭೋ ।
ಮಮ ಚಿತ್ತಸ್ಯ ಪರಮಾ ಜಾತಾ ಶಾಂತಿರನುತ್ತಮಾ || ೨ ||

ನೂರ ನಲವತ್ತೊಂಭತ್ತನೆಯ ಅಧ್ಯಾಯ

ದ್ವಾರಕಿಯ ಮಹಿಮೆ

೧. ಸೂತಮುನಿ—ಧರ್ಮಪರಾಯಣಳಾದ ಭೂದೇವಿ ಶ್ರೀಸ್ತುತಸ್ವಾಮಿ ಮಹಾತ್ಮ್ಯವನ್ನು ಕೇಳಿ, ಬಹು ಸಂತೋಷದಿಂದ ಕೂಡಿದ ಮನಸ್ಸುಳ್ಳವಳಾಗಿ ಮುಂದಿನ ಮಾತನಾಡಿದಳು.

೨. ಭೂದೇವಿ—ದೇವ, ದೇವವರ, ಪ್ರಭುವೇ, ಈ ಮಹಿಮೆಯನ್ನು ಕೇಳಿ ನನ್ನ ಮನಸ್ಸಿಗೆ ಪರಮಶಾಂತಿಯುಂಟಾಯಿತು.

ನಾರಾಚಧಾರಾವರಣಾಸಿಧಾರೀ ಸುರರಿಪುವಧಕಾರೀ ಧರಣೀಧರಃ ।
ಧೃತಶಂಖ ಗದಾಬ್ಜ ಚಕ್ರಪಾಣಿಃ ಸ್ವಯಮಿಹ ಶಾಸ್ತ್ರಮುದಾವಹ
ತ್ಪ್ರಧಾನಂ ॥ ೩ ॥

ಏವಂ ಹಿ ಗುಣಮಾಹಾತ್ಮ್ಯಂ ಸ್ತುತಸ್ವಾಮಿನಿ ಮಚ್ಛ್ರುತಂ ।
ಅಸ್ಮಾಚ್ಚೇದಂ ಪರಂ ಶ್ರೇಷ್ಠಂ ತನ್ಮೇ ವದ ಕೃಪಾನಿಧೇ ॥ ೪ ॥

॥ ಶ್ರೀವರಾಹ ಉವಾಚ ॥

ಏವಂ ಭೂಮೇ ವರಂ ಶ್ರೇಷ್ಠೇ ಫುಲ್ಲಪಂಕಜಮಾಲಿನಿ ।
ಕಥಯಿಷ್ಯಾಮಿ ಚಾನ್ಯತ್ತೇ ಗುಹ್ಯಂ ಪಾಪಭಯಾಪಹಂ ॥ ೫ ॥

ದ್ವಾಪರಂ ಯುಗಮಾಸಾದ್ಯ ಯಾದವಾನಾಂ ಕುಲೋದ್ವಹಃ ।
*ಶೌರೀತಿ ತತ್ರ ವಿಖ್ಯಾತೋ ಭವಿಷ್ಯತಿ ಪಿತಾ ಮಮ ॥ ೬ ॥

೩–೪. ಕತ್ತಿ ಬತ್ತಳಿಕೆಗಳನ್ನು ಹೊತ್ತವನೂ, ರಾಕ್ಷಸಸಂಹಾರಕನೂ, ಧರಣೀಧರನೂ, ಶಂಖಚಕ್ರಗದಾಪದ್ಮಗಳನ್ನು ಕಯ್ಯಲ್ಲಿ ಧರಿಸಿರುವವನೂ ಆದ ಆ ದೇವನು ತಾನೇ ಈ ಲೋಕದಲ್ಲಿ ಮುಖ್ಯವಾದ ಶಾಸ್ತ್ರವನ್ನು ಪ್ರಕಟಿಸಿದನು. ಎಂಬ ಸ್ತುತಸ್ವಾಮಿಯ ಗುಣಮಹಿಮೆಯನ್ನು ನಾನು ಕೇಳಿದೆನು. ದಯಾನಿಧಿ, ಇದಕ್ಕಿಂತ ಶ್ರೇಷ್ಠವಾದುದು ಬೇರೆ ಇದ್ದರೆ ಅದನ್ನೂ ನನಗೆ ಹೇಳು.

೫. ಶ್ರೀ ವರಾಹ—ಅರಳಿದ ತಾವರೆಯ ಮಾಲೆಯುಳ್ಳವಳೇ, ಶ್ರೇಷ್ಠೇ, ಭೂಮೀ, ಹೀಗೆಯೇ ನಿನಗೆ, ಪಾಪಭಯನಿವಾರಕವೂ, ರಹಸ್ಯವೂ, ಉತ್ತಮವೂ ಆದ ಬೇರೆಯ ಕ್ಷೇತ್ರವನ್ನು ಹೇಳುತ್ತೇನೆ.

೬. ದ್ವಾಪರಯುಗದಲ್ಲಿ ಯಾದವಕುಲವರ್ಧನನೂ, ನನ್ನ ತಂದೆಯೂ ಆದ +ಶೌರಿಯೆಂಬುವನು ಪ್ರಸಿದ್ಧನಾಗುವನು.

---

* ಸೌರಿ.

+ ಶೌರಿ = ಶೂರನೆಂಬುವನ ಮಗ = ವಸುದೇವ.

ದ್ವಾರಕೇತಿ ಚ ವಿಖ್ಯಾತಾ ಪುರೀ ತತ್ರ ಸ್ಥಿತಾಭವತ್।
ಯಾಚದೇವಪುರೀ ರಮ್ಯಾ ವಿಶ್ವಕರ್ಮವಿನಿರ್ಮಿತಾ ॥ ೭ ॥

ಪಂಚಯೋಜನವಿಸ್ತಾರಾ ದಶಯೋಜನಮಾಯುತಾ ।
ವಸಾಮ್ಯತ್ರ ವರಾರೋಹೇ ಶತಪಂಚಸಮಾಸ್ತಥಾ ॥ ೮ ॥

ಭಾರಾವತರಣಂ ಕೃತ್ವಾ ದೇವಾನಾಂ ಸುಮಹತ್ಪ್ರಿಯಂ ।
ಪುನರಪ್ಯಾಗಮಿಷ್ಯಾಮಿ ಸ್ವರ್ಲೋಕಂ ಪ್ರತಿಸುಂದರಿ ॥ ೯ ॥

ಭವಿಷ್ಯತಿ ವರಾರೋಹೇ ಈಶ್ವರಃ ಸದೃಶೋ ಮಮ ।
ದುರ್ವಾಸಾ ಇತಿ ವಿಖ್ಯಾತಃ ಶಪಿಷ್ಯತಿ ಕುಲಂ ಮಮ ॥ ೧೦ ॥

ತಸ್ಯ ಶಾಪಾಭಿಸಂತಾಪಾತ್ ದ್ವಾರಕಾವಾಸಿನೋ ಧರೇ ।
ವೃಷ್ಣ್ಯಂಧಕಾಶ್ಚ ಭೋಜಾಶ್ಚ ಗಮಿಷ್ಯಂತಿ ಯಮಕ್ಷಮಂ ॥ ೧೧ ॥

---

೭. ಆಗ ಭೂಮಿಯಲ್ಲಿ ವಿಶ್ವಕರ್ಮನಿಂದ ನಿರ್ಮಿತವಾದ ದ್ವಾರಕೆಯೆಂಬ ಅಮರಾವತಿಯಂತೆ ಮನೋಹರವೂ, ಪ್ರಸಿದ್ಧವೂ ಆದ ಪಟ್ಟಣವಿರುವುದು.

೮. ಸುಂದರಿ, ಆ ನಗರವು ಹತ್ತುಯೋಜನ ಉದ್ದವೂ, ಐದುಯೋಜನ ಅಗಲವೂ ಉಳ್ಳದಾಗಿರುವುದು ಅಲ್ಲಿ ನಾನು ಐದುನೂರು ವರ್ಷಕಾಲ ವಾಸಮಾಡುವೆನು.

೯. ಸುಂದರಿ, ಅಲ್ಲಿದ್ದುಕೊಂಡು ದೇವತೆಗಳಿಗೆ ಬಹು ಪ್ರಿಯವಾಗುವಂತೆ ಭೂಭಾರವನ್ನಿಳಿಸಿ, ಬಳಿಕ ಮತ್ತೆ ಸ್ವರ್ಲೋಕಕ್ಕೆ ಬರುವೆನು.

೧೦. ವರಾರೋಹೇ, ನನಗೆ ಸಮಾನನಾದ ಈಶ್ವರನು ದುರ್ವಾಸನೆಂದು ಪ್ರಸಿದ್ಧನಾದ ಮುನಿಯಾಗಿ ಜನಿಸುವನು. ಆತನು ನಮ್ಮ ಕುಲಕ್ಕೆ ಶಾಪವನ್ನು ಕೊಡುವನು.

೧೧. ಭೂದೇವಿ, ಆತನ ಶಾಪವು ತಾಕುವುದರಿಂದ ದ್ವಾರಕೆಯಲ್ಲಿ ವಾಸಮಾಡುವ, ವೃಷ್ಣಿಗಳೂ, ಅಂಧಕರೂ, ಭೋಜರೂ, ಯಮಗೃಹವನ್ನು ಸೇರುವರು.

ಚಂದ್ರಪಾಂಡುರಸಂಕಾಶೋ ವನಮಾಲೀ *ಹಲಾಯುಧಃ ।
ಹಲೇನಾಕೃಷ್ಯ ನಗರಂ ಸಮುದ್ರಂ ಗಮಯಿಷ್ಯತಿ ॥ ೧೨ ॥

ನಾರಾಯಣವಚಃ ಶ್ರುತ್ವಾ ಧರ್ಮಕಾಮಾ ವಸುಂಧರಾ ।
ಉಭೌ ತೌ ಚರಣೌ ಗೃಹ್ಯ ಪುನಃ ಪಪ್ರಚ್ಛ ಮಾಧವೀ ॥ ೧೩ ॥

॥ ಧರಣ್ಯುವಾಚ ॥

ಲೋಕನಾಥೋಽಸಿ ಸರ್ವೇಷಾಂ ದೇವ ಮಾಯಾ+ಕರಂಡಕ ।
ಶಪಿಷ್ಯತಿ ಕಥಂ ತತ್ರ ದುರ್ವಾಸಾಸ್ತ್ವದ್ವದಸ್ವಮೇ ॥ ೧೪ ॥

॥ ಶ್ರೀವರಾಹ ಉವಾಚ ॥

ತತ್ರ ಜಾಂಬವತೀ ನಾಮ ಮಮ ಪತ್ನೀ ಭವಿಷ್ಯತಿ ।
ರೂಪಯೌವನಸಂಪನ್ನಾ ಮಮ ಭೋಗಸಮನ್ವಿತಾ ॥ ೧೫ ॥

---

೧೨. ಚಂದ್ರನಂತೆ ಬೆಳ್ಳಗಿರುವವನೂ, ವನಮಾಲಾಧರನೂ, ಹಲಾಯುಧನೂ ಆದ ಬಲರಾಮನು ನಗರವನ್ನು ತನ್ನ ನೇಗಿಲಿನಿಂದೆಳೆದು ಸಮುದ್ರದಲ್ಲಿ ಹೊಗಿಸುವನು.

೧೩. ನಾರಾಯಣನ ಈ ಮಾತನ್ನು ಕೇಳಿ, ಧರ್ಮಾಸಕ್ತಳೂ ಮಾಧವಿಯೂ ಆದ ಭೂದೇವಿ ಆತನ ಎರಡುಕಾಲುಗಳನ್ನು ಹಿಡಿದುಕೊಂಡು ಮತ್ತೆ ಕೇಳಿದಳು.

೧೪. ಭೂದೇವಿ—ದೇವ, ಮಾಯಾಕರಂಡಕ, ನೀನು ಲೋಕನಾಥನಾಗಿರುವೆ. ದುರ್ವಾಸನು ಎಲ್ಲರಿಗೂ ಹೇಗೆ ಶಾಪಕೊಡುವನು? ಅದನ್ನು ನನಗೆ ಹೇಳು.

೧೫. ಶ್ರೀವರಾಹ—ಕೃಷ್ಣಾವತಾರದಲ್ಲಿರುವಾಗ, ರೂಪಯೌವನ ಸಂಪನ್ನಳೂ, ನನ್ನ ಸುಖಭಾಗಿನಿಯೂ ಆದ ಜಾಂಬವತಿಯೆಂಬುವಳು ನನ್ನ ಪತ್ನಿಯಾಗುವಳು.

---

* ಹಲ= ನೇಗಿಲು

\+ ಕರಂಡಕ= ಭರಣಿ

ತಸ್ಯಾಃ ಪುತ್ರೋ ಮಹಾಭಾಗೋ ರೂಪಯೌವನದರ್ಪಿತಃ ।
ಸಾಂಬ ಇತ್ಯಭಿವಿಖ್ಯಾತೋ ಮಮೈವ ಸತತಂ ಪ್ರಿಯಃ ॥ ೧೬ ॥

*ತೇನೈವ ಕ್ರೀಡಮಾನೇನ ಕೃತ್ವಾ ಗರ್ಭಮತಥ್ಯತಃ ।
ಸ ಪೃಷ್ಟಃ ಪರಮಶ್ರೇಷ್ಠಃ ಋಷಿರೇಷಾಪ್ರಸೋಷ್ಯತಿ ॥ ೧೭ ॥

*ಪುತ್ರಕಾಮಾ ಸ್ತ್ರಿಯಂ ಬಾಲಾ ಮುನೇ ತತ್ ಪ್ರಬ್ರವೀಹಿ ಮೇ ॥ ೧೮ ॥

ಸಾಂಬೋಽಯಮಿತಿ ಚ ಜ್ಞಾತ್ವಾ ಸ ಮುನಿಃ ಕೋಪಮೂರ್ಛಿತಃ ।
ಉವಾಚ ತರ್ಹಿ ತೇ ಗರ್ಭಾನ್ಮುಸಲಂ ಕುಲನಾಶನಂ ।
ಯೇನ ವೃಷ್ಣ್ಯಂಧಕಾಃ ಸರ್ವೇ ಗಮಿಷ್ಯಂತಿ ಯಮಕ್ಷಯಂ ॥ ೧೯ ॥

---

೧೬. ಮಹಾಭಾಗ್ಯಶಾಲಿಯೂ, ರೂಪಯೌವನಗಳ ಗರ್ವವುಳ್ಳವನೂ. ಸಾಂಬನೆಂಬ ಹೆಸರಿನಿಂದ ಪ್ರಸಿದ್ಧನೂ ಆದ ಆಕೆಯ ಪುತ್ರನು ನನಗೆ ಯಾವಾಗಲೂ ಪ್ರೀತಿಪಾತ್ರನು.

೧೭–೧೮. ಆಟಕ್ಕಾಗಿ ಸಾಂಬನು ಗರ್ಭಿಣಿಯಂತೆ ವೇಷವನ್ನು ಹಾಕಿಕೊಂಡು ಪರಮಶ್ರೇಷ್ಠನಾದ ಆ ದುರ್ವಾಸಋಷಿಯ ಹತ್ತಿರ ಹೋಗಿ "ಮುನಿಯೇ, ಈ ಬಾಲೆಯೇನೋ ಮಗನಲ್ಲಿ ಇಚ್ಛೆಯುಳ್ಳವಳಾಗಿರುವಳು. ಇವಳು ಎಂತಹ ಮಗುವನ್ನು ಹೆರುವಳೋ ಅದನ್ನು ಹೇಳು" ಎಂದು ಕೇಳುವನು.

೧೯. ಇವನು ಸಾಂಬನೆಂದು ತಿಳಿದು ಕೋಪದಿಂದ ಮೈಮರೆತ ಆ ಮುನಿಯು, "ಆದರೆ ನಿನ್ನ ಗರ್ಭದಿಂದ ಕುಲನಾಶಕವಾದ ಒನಕೆಯು ಜನಿಸುವುದು. ಆದರಿಂದ ವೃಷ್ಣ್ಯಂಧಕರೆಲ್ಲರೂ ಯಮಲೋಕಕ್ಕೆ ಹೋಗುವರು" ಎಂದು ಹೇಳುವನು.

---

* ಈ ೧೭, ೧೮ ನೆಯ ಶ್ಲೋಕಗಳು ಸರಿಯಾಗಿಲ್ಲವೆಂಬುದು ೨೦ ನೆಯ ಶ್ಲೋಕದಲ್ಲಿ 'ಸರ್ವೇಕುಮಾರಕಾಃ' ಎಂದಿರುವುದರಿಂದ ವ್ಯಕ್ತವಾಗುತ್ತದೆ.

ಶ್ರುತ್ವಾ ದುರ್ವಾಸಸಃ ಶಾಪಂ ತೇ ಚ ಸರ್ವೇ ಕುಮಾರಕಾಃ |
ಶಾಪೇನ ಸಂತಪ್ತಧಿಯೋ ಮಾಮೂಚುರ್ಭಯಸಂಯುತಾಃ ॥ ೨೦ ॥

ತತಸ್ತಾನಾಗತಾನ್ ದೃಷ್ಟ್ವಾ ಕುಮಾರಾನ್ ಪೃಷ್ಟವಾನಹಂ |
ತೇ ಚ ಮಾಮಬ್ರುವನ್ ಸರ್ವೇ ಯಥಾವೃತ್ತಂ ಸಮುತ್ಸುಕಾಃ ॥ ೨೧ ॥

ತಚ್ಚ ತೇಷಾಂ ವಚಃ ಶ್ರುತ್ವಾ ಪ್ರೋಕ್ತವಾನಸ್ಮಿ ತಚ್ಛೃಣು |
ಭವಿಷ್ಯತಿ ನಸಂದೇಹೋ ದುರ್ವಾಸಾ ಯದುವಾಚ ಹ ॥ ೨೨ ॥

ಏವಂತೇ ಕಥಿತಂ ಭೂಮೇ ವೃಷ್ಣ್ಯಾದೇಃ ಶಾಪಕಾರಣಂ |
ತತ್ರಸ್ಥಾನಾನಿ ಮೇ ಭೂಮೇ ಕಥ್ಯಮಾನಾನಿ ಮೇ ಶೃಣು ॥ ೨೩ ॥

---

೨೦. ದುರ್ವಾಸರ ಶಾಪವನ್ನು ಕೇಳಿ ಸಾಂಬನೂ, ಅವನೊಡನಿದ್ದ ಎಲ್ಲಾ ಬಾಲಕರೂ ಶಾಪದಿಂದ ಸಂತಾಪಗೊಂಡ ಮನಸ್ಸುಳ್ಳವರಾಗಿ ಭಯದಿಂದ ನನ್ನೊಡನೆ ಮಾತನಾಡುವರು.

೨೧. ಬಳಿಕ, ನಾನು, ಅವರು ಬಂದುದನ್ನು ನೋಡಿ, ವಿಚಾರವೇನೆಂದು ಕೇಳುವೆನು. ಎಲ್ಲಾ ಬಾಲಕರೂ ಶಾಪದಿಂದ ಸಂತಾಪಗೊಂಡ ಮನಸ್ಸುಳ್ಳವರಾಗಿ ಭಯದಿಂದ ನನ್ನೊಡನೆ ಹೇಳುವರು.

೨೨. ಅವರ ಆ ಮಾತನ್ನು ಕೇಳಿ, ನಾನು, " ದುರ್ವಾಸರು ಹೇಳಿದುದು ಆಗುವುದು. ಸಂದೇಹವಿಲ್ಲ. " ಎಂದು ಹೇಳುವೆನು. ಕೇಳು.

೨೩. ಭೂದೇವಿ, ವೃಷ್ಣಿಗಳೇ ಮೊದಲಾದವರಿಗೆ ಶಾಪವು ಬರಲು ಕಾರಣವನ್ನು ನಿನಗೆ ಹೇಳಿದುದಾಯಿತು ಅಲ್ಲಿರುವ ನನ್ನ ತೀರ್ಥಕ್ಷೇತ್ರಗಳನ್ನು ಹೇಳುತ್ತೇನೆ. ಕೇಳು.

ದ್ವಾರಕಾಯಾಂ ಮಹಾಭಾಗೇ ವೈಷ್ಣವಾನಾಂ ಸುಖಾವಹೇ ।
ಅಸ್ತಿ ಪಂಚಸರೋ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ॥ ೨೪ ॥

ಸಮುದ್ರತೀರಮುತ್ಸೃಜ್ಯ ಮಮ ಕರ್ಮಸುಖಾವಹಂ ॥ ೨೫ ॥

ತತ್ರ ಸ್ನಾನಂ ತು ಕುರ್ವೀತ ಷಷ್ಠಕಾಲೋಷಿತೋ ನರಃ ।
ಮೋದತೇ ನಾಕಪೃಷ್ಠೇ ತು ಅಪ್ಸರೋ ಗಣಸಂಕುಲೇ ॥ ೨೬ ॥

ಅಥಾತ್ರ ಮುಂಚತಿ ಪ್ರಾಣಾನ್ ಕ್ಷೇತ್ರೇ ಪಂಚಸರೇ ಮಮ ।
ದೇವಲೋಕಂ ಸಮುತ್ಸೃಜ್ಯ ಮಮ ಲೋಕೇ ಮಹೀಯತೇ ॥ ೨೭ ॥

*ಪ್ಲಕ್ಷೋ ವೈ ತತ್ರ ಸುಶ್ರೋಣಿ ಶತಶಾಖೋ ಮಹಾದ್ರುಮಃ ।
ಸುಫಲೈಃ ಶೋಭನೈಃ ಕುಂಭಾಕೃತಿಭಿರ್ಬಹುಭಿಃ ಫಲೈಃ ॥ ೨೮ ॥

೨೪–೨೫. ಸೌಭಾಗ್ಯವತೀ, ವಿಷ್ಣುಭಕ್ತರಿಗೆ ಸುಖಕರವಾದ ದ್ವಾರಕಿಯಲ್ಲಿ ಸಮುದ್ರತೀರವನ್ನು ಬಿಟ್ಟು ಸ್ವಲ್ಪದೂರದಲ್ಲಿ ಪಂಚಸರೋವರವೆಂಬ ಉತ್ತಮವಾದ ನನ್ನ ರಹಸ್ಯಕ್ಷೇತ್ರವಿದೆ.

೨೬. ಅಲ್ಲಿ ಆರು(ಜಾವ) ಕಾಲವಿದ್ದು ಸ್ನಾನಮಾಡುವ ಮನುಷ್ಯನು ಅಪ್ಸರರ ಗುಂಪಿನಿಂದ ತುಂಬಿದ ಸ್ವರ್ಗದಮೇಲೆ ಆನಂದಪಡುವನು.

೨೭. ಬಳಿಕ, ದೇವಲೋಕವನ್ನು ಬಿಟ್ಟು, ನನ್ನ ಪಂಚಸರಕ್ಷೇತ್ರದಲ್ಲಿ ಪ್ರಾಣಬಿಟ್ಟು, ನನ್ನ ಲೋಕದಲ್ಲಿ ವಾಸಿಸುವನು.

೨೮. ಸುಂದರಾಂಗೀ, ಅಲ್ಲಿ ನೂರಾರು ಕೊಂಬೆಗಳುಳ್ಳ ಬಹಳ ದೊಡ್ಡ ಪ್ಲಕ್ಷ*ವೃಕ್ಷವಿದೆ. ಅದು, ಕುಂಭಾಕಾರದ ಮಂಗಳಕರವಾದ ಒಳ್ಳೆಯ ಹಣ್ಣುಗಳಿಂದ ತುಂಬಿದೆ.

---

* ಪ್ಲಕ್ಷ = ಬಸರೀಮರ, ಜುಲ್ಲೀಮರ, ಹಿಪ್ಪಲಿಗಿಡ

ಬಹವಸ್ತತ್ರ ಗಚ್ಛಂತಿ ಲಾಭಲೌಲ್ಯೇನ ಮಾನವಾಃ ।
ಫಲಂ ನಲಭತೇ ಕಶ್ಚಿನ್ಮುಕ್ತ್ವಾ ಭಾಗವತಂ ನರಂ ॥ ೨೯ ॥

ಲಭಂತೇ ಯೇ ಫಲಂ ತತ್ರ ಮುಕ್ತಾಃ ಪಾಪೇನ ಕರ್ಮಣಾ ।
ತೇ ಲಭಂತೇ ಪರಾಂ ಸಿದ್ಧಿಂ ಮಮ ಕರ್ಮಣಿಸಂಸ್ಥಿತಾಃ ॥ ೩೦ ॥

ಪ್ರಭಾಸಮಿತಿ ವಿಖ್ಯಾತಂ ತಸ್ಮಿಂಸ್ತೀರ್ಥೇ ಪರೇ ಮಮ ।
ಮನುಜಾ ಯಂ ನ ಪಶ್ಯಂತಿ ರಾಗಲೋಭಸಮನ್ವಿತಾಃ ॥ ೩೧ ॥

ತತ್ರ ಸ್ನಾನಂ ಪ್ರಕುರ್ವೀತ ಪಂಚಭಕ್ತೋಷಿತೋ ನರಃ ।
ಮೋದತೇ ಸಪ್ತದ್ವೀಪೇಷು ಗುಹ್ಯಾನಿ ಚ ಸ ಗಚ್ಛತಿ ॥ ೩೨ ॥

ಅಥ ಚೇನ್ಮುಂಚತಿ ಪ್ರಾಣಾನ್ ಪ್ರಭಾಸೇ ಗತಕಿಲ್ಬಿಷಃ ।
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೩೩ ॥

---

೨೯. ಲಾಭದ ಆಸೆಯಿಂದ ಹಲವು ಜನರು ಅಲ್ಲಿಗೆ ಹೋಗುವರು. ಆದರೆ ಭಗವದ್ಭಕ್ತನಿಗೆ ಹೊರತು ಬೇರಾವನಿಗೂ ಅಲ್ಲಿ ಹಣ್ಣು ದೊರೆಯುವುದಿಲ್ಲ.

೩೦. ಪಾಪಕರ್ಮದಿಂದ ಬಿಡುವನ್ನು ಹೊಂದಿದ ಯಾರು ಅಲ್ಲಿ ಹಣ್ಣನ್ನು ಪಡೆಯುವರೋ ಅವರು ನನ್ನ ಕರ್ಮದಲ್ಲಿ ನಿಷ್ಠರಾಗಿದ್ದು ಪರಮಸಿದ್ಧಿಯನ್ನು ಪಡೆಯುವರು.

೩೧. ಉತ್ತಮವಾದ ಆ ನನ್ನ ತೀರ್ಥಪ್ರದೇಶದಲ್ಲಿಯೇ ಪ್ರಭಾಸವೆಂದು ಪ್ರಸಿದ್ಧವಾದ ಮತ್ತೊಂದು ತೀರ್ಥವಿದೆ. ರಾಗಲೋಭಗಳಿಂದ ಕೂಡಿದ ಮನುಷ್ಯರು ಅದನ್ನು ನೋಡುವುದಿಲ್ಲ.

೩೨. ಐದನೆಯ ಒಂದುಭಾಗ ಆಹಾರವನ್ನು ಮಾತ್ರ ಸೇವಿಸಿ, ಅಲ್ಲಿದ್ದು ತೀರ್ಥಸ್ನಾನಮಾಡುವವನು ಸಪ್ತದ್ವೀಪಗಳಲ್ಲೂ ಆನಂದಪಡುವನು. ರಹಸ್ಯ ಸ್ಥಾನಗಳಿಗೂ ಅವನು ಹೋಗುವನು. ಅಥವಾ ರಹಸ್ಯಗಳನ್ನೂ ಅರಿಯುವನು.

೩೩. ಅಲ್ಲದೆ ಪ್ರಭಾಸತೀರ್ಥದಲ್ಲಿ ಪ್ರಾಣಬಿಟ್ಟರೆ ಅವನು ಪಾಪಗಳನ್ನು ಕಳೆದುಕೊಂಡು, ಸರ್ವಸಂಗವನ್ನೂ ಪರಿತ್ಯಜಿಸಿ ನನ್ನ ಲೋಕವನ್ನು ಸೇರುವನು.

ತತ್ರಾಶ್ಚರ್ಯಂ ಮಹಾಭಾಗೇ ಕಥ್ಯಮಾನಂ ಮಯಾ ಶೃಣು ।
ಪ್ರಭಾಸೇ ಯತ್ರ ಶೃಣ್ವಂತಿ ಸಾಗರೇ +ಗಮನಂ ಪ್ರತಿ ।
ಮಕರಾಸ್ತತ್ರ ದೃಶ್ಯಂತೇ ಭ್ರಮಮಾಣಾ ಇತಸ್ತತಃ ॥ ೩೪ ॥

ನ ಕಿಂಚಿದಪರಾಧ್ಯಂತಿ ಸ್ನಾಯಮಾನಾ ಜಲೇ ತತಃ ।
ಅಥಾತ್ರ ಪ್ರಕ್ಷಿಪೇತ್ಪಿಂಡಾನ್ ಪ್ರಸನ್ನೇ ಸಲಿಲೇನರಃ ॥ ೩೫ ॥

ಅಸಂಪ್ರಾಪ್ತೇ ಚ ಗೃಹ್ಣಂತಿ ಏವಮೇತನ್ನಸಂಶಯಃ ।
ಪಾಪಕರ್ಮರತಸ್ಯಾಪಿ ನ ಗೃಹ್ಣಂತಿ ಜಲಂ ಪ್ರತಿ ॥ ೩೬ ॥

ಧರ್ಮಾತ್ಮನಾಂ ಚ ಗೃಹ್ಣಂತಿ ಪಿಂಡಮೇವ ನ ಸಂಶಯಃ ॥ ೩೭ ॥

---

೩೪. ಮಹಾಭಾಗ್ಯೇ, ನಾನು ಹೇಳುವ ಅಲ್ಲಿನ ಆಶ್ಚರ್ಯವನ್ನು ಕೇಳು. ಸಾಗರದಲ್ಲಿ ಸಂಚರಿಸುವುವೆಂದು ಕೇಳಿರುವ ಮಕರಗಳು ಆ ಪ್ರಭಾಸತೀರ್ಥವಲ್ಲಿ ಅತ್ತಿತ್ತ ಸಂಚರಿಸುತ್ತಾ ಕಾಣಿಸುತ್ತವೆ.

೩೫. ಅಲ್ಲಿ ಸ್ನಾನಮಾಡುವವರು ಅವುಗಳಿಗೆ ಏನೂ ಅಪರಾಧಮಾಡಿದಂತಾಗುವುದಿಲ್ಲ. ಸ್ನಾನಮಾಡಿದ ಬಳಿಕ ಸ್ವಚ್ಛವಾದ ನೀರಿನಲ್ಲಿ ಪಿಂಡಗಳನ್ನು ಹಾಕಬೇಕು.

೩೬–೩೭. ಹಾಕಿದ ಪಿಂಡವು ಆವುಗಳ ಹತ್ತಿರ ಹೋಗದಿದ್ದರೂ ಅವು ಬಂದು ತೆಗೆದುಕೊಳ್ಳುವುದರಲ್ಲಿ ಸಂದೇಹವಿಲ್ಲ. ಆದರೆ ಪಾಪಕರ್ಮಾಸಕ್ತನಾದವನು ಹಾಕಿದುದನ್ನು ನೀರಿನೊಳಕ್ಕೂ ತೆಗೆದುಕೊಳ್ಳುವುದಿಲ್ಲ. ಧರ್ಮಾತ್ಮರಾದವರು ಹಾಕಿದ ಪಿಂಡವನ್ನು ಮಾತ್ರವೇ ತೆಗೆದುಕೊಳ್ಳುತ್ತವೆ. ಸಂದೇಹವಿಲ್ಲ.

+ ನಮರಂ (ಕ.) ನಗರಂ (ಬೊಂ.)

ಪಂಚಪಿಂಡಮಿತಿ ಖ್ಯಾತಂ ತಸ್ಮಿನ್ ಗುಹ್ಯಂ ಪರಂ ಮಮ |
ಅಗಾಧಸ್ಯಾಪ್ಯಪಾರಸ್ಯ ಕ್ರೋಶವಿಸ್ತಾರ ಏವ ಚ || ೩೮ ||

ತತ್ರಾಭಿಷೇಕಂ ಕುರ್ವೀತ ಪಂಚಕಾಲೋಷಿತೋ ನರಃ |
ಮೋದತೇ ಶಕ್ರಲೋಕೇ ಸ ಏವಮೇತನ್ನ ಸಂಶಯಃ || ೩೯ ||

ಅಥಾತ್ರ ಮುಂಚತಿ ಪ್ರಾಣಾನ್ ಪಂಚಕುಂಡೇ ಯಶಸ್ವಿನಿ |
ಶಕ್ರಲೋಕಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ || ೪೦ ||

ತತ್ರಾಶ್ಚರ್ಯಂ ಮಹಾಭಾಗೇ ಕಥ್ಯಮಾನಂ ಮಯಾ ಶೃಣು |
ನ ಪಶ್ಯೇತ್ ಪಾಪಕರ್ಮಾ ವೈ ಶುಭಕರ್ಮೈವ ಪಶ್ಯತಿ || ೪೧ ||

ಚತುರ್ವಿಂಶತಿದ್ವಾದಶ್ಯಾಂ ಮಧ್ಯಾಹ್ನೇ ಚ ದಿವಾಕರೇ |
ರೌಪ್ಯಂ ಸುವರ್ಣಕಂ ಪದ್ಮಂ ದೃಶ್ಯತೇ ನಾತ್ರ ಸಂಶಯಃ || ೪೨ ||

---

೩೮. ಆ ದ್ವಾರಕಾಕ್ಷೇತ್ರದಲ್ಲಿ ಪಂಚ(ಪಿಂಡ)ಕುಂಡವೆಂಬ ಪ್ರಸಿದ್ಧವೂ, ರಹಸ್ಯವೂ ಆದ ನನ್ನ ಮತ್ತೊಂದು ತೀರ್ಥವಿದೆ. ಬಹಳ ಆಳವುಳ್ಳದೂ, ದೊಡ್ಡದೂ ಆದ ಅದರ ವಿಸ್ತಾರವು ಹರಿದಾರಿಯಷ್ಟಿದೆ.

೩೯. ಅಲ್ಲಿ ಐದು(ಜಾವ)ಕಾಲ ಇದ್ದು ಸ್ನಾನಮಾಡಿದನಾದರೆ ಮನುಷ್ಯನು ಇಂದ್ರಲೋಕದಲ್ಲಿ ಆನಂದಪಡುವನು. ಸಂಶಯವಿಲ್ಲ.

೪೦. ಕೀರ್ತಿವಂತೇ, ಬಳಿಕ ಆ ಪಂಚಕುಂಡದಲ್ಲಿ ಪ್ರಾಣಬಿಟ್ಟನಾದರೆ ಇಂದ್ರಲೋಕವನ್ನು ಪರಿತ್ಯಜಿಸಿ ನನ್ನ ಲೋಕವನ್ನು ಸೇರುವನು.

೪೧–೪೨. ನಾನು ಹೇಳುವ ಅಲ್ಲಿನ ಆಶ್ಚರ್ಯವನ್ನು ಕೇಳು. ಮಹಾಭಾಗ್ಯೇ, ಅದನ್ನು ಪಾಪಕರ್ಮಿ ನೋಡಲಾರನು. ಅದು ಪುಣ್ಯ ಕರ್ಮಿಗೆ ಮಾತ್ರ ಕಾಣಿಸುತ್ತದೆ. ಅದೇನೆಂದರೆ, ಇಪ್ಪತ್ತನಾಲ್ಕು ದ್ವಾದಶಿ ಯಲ್ಲೂ ಸೂರ್ಯನು ಮಧ್ಯಾಹ್ನದಲ್ಲಿರುವಾಗ ಆ ತೀರ್ಥದಲ್ಲಿ ಬೆಳ್ಳಿಯ ಮತ್ತು ಚಿನ್ನದ ಕಮಲವು ಕಾಣಿಸುತ್ತದೆ. ಇದರಲ್ಲಿ ಸಂದೇಹವಿಲ್ಲ.

ಕ್ಷೇತ್ರಂ ಸಂಗಮನಂ ನಾಮ ತಸ್ಮಿಂಸ್ತೀರ್ಥೇ ಪರಂ ಮಮ ।
ಚತುರ್ಧಾರಾಃ ಪತಂತ್ಯತ್ರ ಮಣಿಪೂರಗಿರಿಂ ಶ್ರಿತಾಃ ॥ ೪೩ ॥

ತತ್ರಾಭಿಷೇಕಂ ಕುರ್ವೀತ ಚತುರ್ಭಕ್ತೋಷಿತೋ ನರಃ ।
ವೈಖಾನಸೇಷು ಲೋಕೇಷು ಮೋದತೇ ನಾತ್ರ ಸಂಶಯಃ ॥ ೪೪ ॥

ಅಥಾತ್ರ ಮುಂಚತಿ ಪ್ರಾಣಾನ್ಮದ್ಭಕ್ತಿಪರಾಯಣಃ ।
ತ್ಯಕ್ತ್ವಾ ವೈಖಾನಸಾನ್ ಲೋಕಾನ್ ಮಮ ಲೋಕಂ ಸ ಗಚ್ಛತಿ ॥ ೪೫ ॥

ತತ್ರಾಪಿ ಪರಮಾಶ್ಚರ್ಯಂ ಕಥ್ಯಮಾನಂ ಶೃಣುಷ್ವ ಮೇ ।
ದೃಶ್ಯಂತೇ ಯಾನಿ ಕುಂಡೇಷು ಮಣಿಪೂರಗಿರೌ ತಥಾ ॥ ೪೬ ॥

ಪ್ರಕ್ಷೀಯಮಾಣೇ ಪಾಪೇ ತು ನಯತೇ ತಜ್ಜಲಂ ಭುವಿ ।
ಸ್ನಾಯಮಾನೇಷು ಪಾಪೇಷು ನ ಪತೇತ್ತದ್ಯಥಾಪುರಾ ॥ ೪೭ ॥

---

೪೩. ಆ ತೀರ್ಥಕ್ಷೇತ್ರ ಸಮೀಪದಲ್ಲಿ ಸಂಗಮನವೆಂಬ ನನ್ನ ಮತ್ತೊಂದು ಕ್ಷೇತ್ರವಿದೆ. ಮಣಿಪೂರಗಿರಿಯನ್ನು ಆಶ್ರಯಿಸಿರುವ ನಾಲ್ಕು ತೀರ್ಥಧಾರೆಗಳು ಅಲ್ಲಿ ಧುಮುಕುತ್ತವೆ.

೪೪. ನಾಲ್ಕನೆಯ ಒಂದು ಭಾಗದಷ್ಟು ಆಹಾರವನ್ನು ಮಾತ್ರ ಸೇವಿಸಿ, ಅಲ್ಲಿದ್ದು ಆ ತೀರ್ಥದಲ್ಲಿ ಸ್ನಾನಮಾಡುವವನು ವೈಖಾನಸಲೋಕಗಳಲ್ಲಿ ಆನಂದಪಡುವುದರಲ್ಲಿ ಸಂಶಯವಿಲ್ಲ.

೪೫. ಬಳಿಕ ನನ್ನ ಭಕ್ತಿಯಲ್ಲಿ ನಿರತನಾಗಿದ್ದು ಅಲ್ಲಿ ಪ್ರಾಣಬಿಟ್ಟರೆ ವೈಖಾನಸಲೋಕಗಳನ್ನೂ ತ್ಯಜಿಸಿ ಅವನು ನನ್ನ ಲೋಕವನ್ನು ಸೇರುವನು.

೪೬. ಮಣಿಪೂರಗಿರಿಯಲ್ಲಿರುವ ಬೇರೆಯ ಕುಂಡಗಳಲ್ಲಿ ಕಾಣುವ ಆಶ್ಚರ್ಯಗಳಂತೆಯೇ ಆ ಸಂಗಮನತೀರ್ಥದಲ್ಲೂ ಕಾಣುವ ಪರಮಾಶ್ಚರ್ಯವನ್ನು ನಾನು ಹೇಳುತ್ತೇನೆ. ಕೇಳು.

೪೭. ಅಲ್ಲಿ ಸ್ನಾನಮಾಡುವವನ ಪಾಪವು ಪರಿಹಾರವಾದರೆ, ಹಿಂದಿನಂತೆಯೇ ಮೇಲಿನಿಂದ ಅಲ್ಲಿ ತೀರ್ಥಧಾರೆಯು ಭೂಮಿಗೆ ಬೀಳುತ್ತದೆ. ಪಾಪಿಗಳು ಸ್ನಾನಮಾಡುತ್ತಿದ್ದರೆ ಹಿಂದಿನಂತೆಯೇ ಧಾರೆಯು ಬೀಳುವುದಿಲ್ಲ.

ಹಂಸಕುಂಡೇತಿ ವಿಖ್ಯಾತಂ ತಸ್ಮಿನ್‌ಕ್ಷೇತ್ರೇ ಪರೇ ಮಮ ।
ಧಾರಾಚೈಕಾ ಪತತ್ಯತ್ರ ಮಣಿಪೂರಗಿರೌ ಶ್ರಿತಾ ॥ ೪೮ ॥

ತತ್ರಾಭಿಷೇಕಂ ಕುರ್ವೀತ ಷಷ್ಠಕಾಲೋಷಿತೋ ನರಃ ।
ಮುಕ್ತಸಂಗೋ ಮಹಾಭಾಗೇ ಮೋದತೇ ವರುಣಾಲಯೇ ॥ ೪೯ ॥

ಅಥಾತ್ರ ಮುಂಚತಿ ಪ್ರಾಣಾನ್ ಹಂಸಕುಂಡೇ ವರಾನನೇ ।
ವಾರುಣಂ ಲೋಕಮುತ್ಸೃಜ್ಯ ಮಮ ಲೋಕೇ ಮಹೀಯತೇ ॥ ೫೦ ॥

ತತ್ರಾಶ್ಚರ್ಯಂ ಪ್ರವಕ್ಷ್ಯಾಮಿ ಹಂಸಕುಂಡೇ ಯಶಸ್ವಿನಿ ।
ಶುದ್ಧಾಃ ಪಶ್ಯಂತಿ ಮನುಜಾಃ ಪಾಪಕರ್ಮಾ ನ ಪಶ್ಯತಿ ॥ ೫೧ ॥

ಚತುರ್ವಿಂಶತಿದ್ವಾದಶ್ಯಾಂ ಮಧ್ಯಾಹ್ನೇ ಚ ದಿವಾಕರೇ ।
ಹಂಸಾಶ್ಚೈವಾತ್ರ ದೃಶ್ಯಂತೇ ಚಂದ್ರಕುಂದಸಮಪ್ರಭಾಃ ॥ ೫೨ ॥

---

೪೮. ನನ್ನ ಆ ಉತ್ತಮಕ್ಷೇತ್ರದಲ್ಲಿ ಹಂಸಕುಂಡವೆಂದು ಪ್ರಸಿದ್ಧವಾದ ತೀರ್ಥವಿದೆ. ಮಣಿಪೂರಗಿರಿಯಿಂದ ಒಂದು ಜಲಧಾರೆಯು ಧುಮುಕುತ್ತದೆ.

೪೯. ಮಹಾಭಾಗ್ಯೇ, ಅಲ್ಲಿ ಆರು(ಜಾವಗಳ) ಕಾಲವಿದ್ದು ತೀರ್ಥದಲ್ಲಿ ಸ್ನಾನಮಾಡಿದನಾದರೆ ಮನುಷ್ಯನು ಸಂಗವನ್ನು ಬಿಟ್ಟು ವರುಣಲೋಕದಲ್ಲಿ ಆನಂದಪಡುವನು.

೫೦. ಸುಂದರಮುಖೀ, ಬಳಿಕ ವರುಣಲೋಕವನ್ನು ತ್ಯಜಿಸಿ ಆ ಹಂಸಕುಂಡದಲ್ಲಿ ಪ್ರಾಣಗಳನ್ನು ಬಿಟ್ಟರೆ ಅವನು ನನ್ನ ಲೋಕದಲ್ಲಿ ವಾಸಿಸುವನು.

೫೧–೫೨. ಕೀರ್ತಿವಂತೇ, ಆ ಹಂಸಕುಂಡದ ಆಶ್ಚರ್ಯವನ್ನು ಹೇಳುತ್ತೇನೆ. ಇಪ್ಪತ್ತನಾಲ್ಕು ದ್ವಾದಶಿಯಲ್ಲೂ ಸೂರ್ಯನು ಮಧ್ಯಾಹ್ನದಲ್ಲಿರುವಾಗ, ಅಲ್ಲಿ ಚಂದ್ರನಂತೆಯೂ, ಕುಂದಕುಸುಮಗಳಂತೆಯೂ ಬೆಳ್ಳಗೆ ಹೊಳೆಯುವ ಹಂಸಗಳು ಕಾಣಿಸಿಕೊಳ್ಳುತ್ತವೆ. ಆದರೆ ಅವನ್ನು, ಶುದ್ಧರಾದ. ಮನುಷ್ಯರು ಮಾತ್ರ ನೋಡಬಹುದು. ಪಾಪಿಯು ನೋಡಲಾರನು.

ಹಂಸಾನ್ ಪಶ್ಯಂತಿ ಯೇತತ್ರ ಭ್ರಮಮಾಣಾನಿತಸ್ತತಃ ।
ಲಭಂತೇ ತೇ ಪರಾಂ ಸಿದ್ಧಿಂ ಧರೇ ನಾಸ್ತ್ಯತ್ರ ಸಂಶಯಃ ॥ ೫೩ ॥

ಕದಂಬಮಿತಿ ವಿಖ್ಯಾತಂ ತಸ್ಮಿನ್ ಕ್ಷೇತ್ರೇ ಪರಂ ಮಮ ।
ವೃಷ್ಣಯೋ ಯತ್ರ ವೈ ಶುದ್ಧಾಃ ಸಂಪ್ರಾಪ್ತಾಶ್ಚ ಮಮಾಲಯಂ ॥ ೫೪ ॥

ತತ್ರಾಭಿಷೇಕಂ ಕುರ್ವೀತ ಚತುಃ ಕಾಲೋಷಿತೋ ನರಃ ।
ಮೋದತೇ ಋಷಿಲೋಕೇಷು ಪುಣ್ಯಾತ್ಮಾ ವೈ ನ ಸಂಶಯಃ ॥ ೫೫ ॥

ಅಥಾತ್ರ ಮುಂಚತಿ ಪ್ರಾಣಾನ್ ಕೃತ್ವಾ ಕರ್ಮ ಸುದುಷ್ಕರಂ ।
ಋಷಿಲೋಕಂ ಪರಿತ್ಯಜ್ಯ ಮಮ ಲೋಕಂ ಪ್ರಪದ್ಯತೇ ॥ ೫೬ ॥

ತತ್ರಾಶ್ಚರ್ಯಂ ಮಹಾಭಾಗೇ ಕಥ್ಯಮಾನಂ ಶೃಣುಷ್ವಮೇ ।
ಕದಂಬಾತ್ಪತತೇ ಧಾರಾ ತತ್ರ ಪೂರ್ವಂ ವಿನಿಸ್ಸೃತಾ ॥ ೫೭ ॥

---

೫೩. ಅಲ್ಲಿ ಅತ್ತಿತ್ತ ಸಂಚರಿಸುವ ಹಂಸಗಳನ್ನು ಕಾಣುವವರು ಪರಮಸಿದ್ಧಿಯನ್ನು ಪಡೆಯುವರು. ಇದರಲ್ಲಿ ಸಂಶಯವಿಲ್ಲ.

೫೪. ಆ ಕ್ಷೇತ್ರದಲ್ಲಿ ಕದಂಬವೆಂದು ಹೆಸರುಗೊಂಡ ಬೇರೊಂದು ನನ್ನ ತೀರ್ಥವಿದೆ. ವೃಷ್ಣಿಗಳು ಅಲ್ಲೇ ಶುದ್ಧರಾಗಿ ನನ್ನ ಲೋಕವನ್ನು ಸೇರುವರು.

೫೫. ಅಲ್ಲಿ ನಾಲ್ಕು(ಜಾವಗಳ) ಕಾಲವಿದ್ದು ತೀರ್ಥದಲ್ಲಿ ಸ್ನಾನಮಾಡುವವನು ಪವಿತ್ರಾತ್ಮನಾಗಿ ಋಷಿಜನಗಳೊಡನೆ ಸಂತೋಷಪಡುವುದರಲ್ಲಿ ಸಂಶಯವಿಲ್ಲ.

೫೬. ಬಳಿಕ ದುಷ್ಕರವಾದ ಕರ್ಮಗಳನ್ನು ಮಾಡಿ, ಆ ಕದಂಬತೀರ್ಥದಲ್ಲಿ ಪ್ರಾಣಬಿಟ್ಟರೆ ಋಷಿಲೋಕವನ್ನು ತ್ಯಜಿಸಿ ನನ್ನ ಲೋಕವನ್ನು ಸೇರುವನು.

೫೭. ಸೌಭಾಗ್ಯಶಾಲಿನಿ, ನಾನು ಹೇಳುವ ಅಲ್ಲಿಯ ಆಶ್ಚರ್ಯವನ್ನು ಕೇಳು. ಅಲ್ಲಿ ಒಂದು ಕದಂಬವೃಕ್ಷದಿಂದ ಹೊರಟು ಪೂರ್ವದಿಕ್ಕಿಗೆ ಒಂದು ತೀರ್ಥಧಾರೆಯು ಬೀಳುತ್ತದೆ.

ಸ ಕದಂಬೋ ಮಹಾಭಾಗೇ ಮಾಘಮಾಸಸ್ಯ ದ್ವಾದಶೀ ।
ಪುಷ್ಪಾಣಿ ವೈ ಪ್ರಕಟಯತ್ಯುದಯಸ್ಥೇ ದಿವಾಕರೇ ॥ ೫೮ ॥

ಯೇ ವಾ ಲಭಂತೇ ತತ್ಪುಷ್ಪಂ ಮಮ ಮಾರ್ಗಾನುಸಾರಿಣಃ ।
ತೇ ಲಭಂತೇ ಪರಾಂ ಸಿದ್ಧಿಮೇವಮೇತನ್ನಸಂಶಯಃ ॥ ೫೯ ॥

ಚಕ್ರ ತೀರ್ಥಮಿತಿ ಖ್ಯಾತಂ ತಸ್ಮಿನ್‌ಕ್ಷೇತ್ರೇ ಪರಂ ಮಮ ।
ಪಂಚಧಾರಾಃ ಪತಂತ್ಯತ್ರ ಮಣಿಪೂರಸಮಾಶ್ರಿತಾಃ ॥ ೬೦ ॥

ತತ್ರಾಭಿಷೇಕಂ ಕುರ್ವೀತ ಪಂಚಕಾಲೋಷಿತೋ ನರಃ ।
ದಶವರ್ಷಸಹಸ್ರಾಣಿ ಸ್ವರ್ಗಲೋಕೇ ಸ ಮೋದತೇ ॥ ೬೧ ॥

ಅಥಾತ್ರ ಮುಂಚತಿ ಪ್ರಾಣಾನ್ ಲೋಭಮೋಹವಿವರ್ಜಿತಃ ।
ಸರ್ವಾನ್ ಸ್ವರ್ಗಾನ್ ಸಮುತ್ಸೃಜ್ಯ ಮಮ ಲೋಕಂ ಸ ಗಚ್ಛತಿ ॥ ೬೨ ॥

---

೫೮. ಪೂಜ್ಯೇ, ಆ ಕದಂಬ(ಕಡಹದ)ವೃಕ್ಷದಲ್ಲಿ ಮಾಘಮಾಸದ ದ್ವಾದಶಿಯದಿನ ಸೂರ್ಯೋದಯವಾಗುತ್ತಿರುವಾಗ ಹೂಗಳು ಕಾಣಿಸುತ್ತವೆ.

೫೯. ನನ್ನ ಮಾರ್ಗವನ್ನು ಅನುಸರಿಸುವ ಯಾರು ಆ ಹೂವನ್ನು ಪಡೆಯುವರೋ ಅವರು ಪರಮಸಿದ್ಧಿಯನ್ನು ಪಡೆಯುವರೆಂಬುದರಲ್ಲಿ ಸಂದೇಹವಿಲ್ಲ-

೬೦. ಆ ನನ್ನ ಕ್ಷೇತ್ರದಲ್ಲಿ ಚಕ್ರತೀರ್ಥವೆಂದು ಹೆಸರುಗೊಂಡಿರುವ ಮತ್ತೊಂದು ಉತ್ತಮತೀರ್ಥವಿದೆ. ಮಣಿಪೂರಗಿರಿಯಿಂದ ಅಲ್ಲಿ ಐದು ಧಾರೆಗಳು ಧುಮುಕುತ್ತವೆ.

೬೧. ಅಲ್ಲಿ ಐದು(ಜಾವಗಳ)ಕಾಲವಿದ್ದು, ಮನುಷ್ಯನು ಸ್ನಾನಮಾಡಿದರೆ ಹತ್ತುಸಾವಿರ ವರ್ಷಗಳ ಕಾಲ ಸ್ವರ್ಗದಲ್ಲಿ ಅವನು ಆನಂದಪಡುವನು.

೬೨. ಆಮೇಲೆ, ಲೋಭಮೋಹಗಳನ್ನು ಬಿಟ್ಟು, ಆ ಕದಂಬತೀರ್ಥದಲ್ಲಿ ಪ್ರಾಣಗಳನ್ನು ತ್ಯಜಿಸಿದರೆ ಅವನು ಸರ್ವಸ್ವರ್ಗಗಳನ್ನೂ ಬಿಟ್ಟು ನನ್ನ ಲೋಕವನ್ನು ಸೇರುವನು.

ತತ್ರಾಶ್ಚರ್ಯಂ ಮಹಾಭಾಗೇ ಕಥ್ಯಮಾನಂ ಶೃಣುಷ್ವಮೇ ।
ಅನ್ಯಥೈತನ್ನ ಪಶ್ಯಂತಿ ಮಮ ಕರ್ಮಪರಾಯಣಾಃ ॥ ೬೩ ॥

ಚತುರ್ವಿಂಶತಿ ದ್ವಾದಶ್ಯಾಂ ಅರ್ಧರಾತ್ರೇ ಯಶಸ್ವಿನಿ ।
ಶ್ರೂಯತೇ ತತ್ರ ನಿರ್ಘೋಷೋ ಮನಃ ಕರ್ಣಸುಖಾವಹಃ ॥ ೬೪ ॥

ಸುಗಂಧೋ ವಹತೇ ವಾಯುರ್ಬಹುಮಾಲ್ಯ ಸಮನ್ವಿತಃ
ದುರ್ಲಭಃ ಪಾಪಿನಾಂ ಚೈವ ಸುಲಭಃ ಪುಣ್ಯಕರ್ಮಿಣಾಂ ॥ ೬೫ ॥

ತಸ್ಯ ಚೋತ್ತರಪಾರ್ಶ್ವೇನ ಅಶೋಕಶ್ಚ ಮಹಾದ್ರುಮಃ ।
ಪುಷ್ಪ್ಯತೇ ಸೋಥ ತತ್ರಾಪಿ ಸೂರ್ಯೇ ಚಾಭ್ಯುದಿತೇ ಸತಿ ॥ ೬೬ ॥

ಲಭಂತೇ ತತ್ರ ಯೇ ಪುಷ್ಪಂ ಮಮ ಮಾರ್ಗಾನುಸಾರಿಣಃ ।
ತೇ ಲಭಂತೇ ಪರಾಂ ಸಿದ್ಧಿಂ ಏವಂ ಭೂಮೇ ನ ಸಂಶಯಃ ॥ ೬೭ ॥

---

೬೩. ಮಹಾಭಾಗ್ಯೇ, ನಾನು ಹೇಳುವ ಅಲ್ಲಿಯ ಅತ್ಯಾಶ್ಚರ್ಯವನ್ನು ಕೇಳು. ನನ್ನ ಕರ್ಮಗಳಲ್ಲಿ ನಿರತರಾದವರೂ ಬೇರೆ ಎಲ್ಲೂ ಇದನ್ನು ನೋಡಲಾರರು.

೬೪–೬೫. ಯಶೋವತಿ, ಇಪ್ಪತ್ತನಾಲ್ಕು ದ್ವಾದಶಿಯಲ್ಲೂ ಅರ್ಧ ರಾತ್ರಿಯಲ್ಲಿ ಅಲ್ಲಿ ಮನಸ್ಸಿಗೂ, ಕಿವಿಗೂ ಆನಂದವನ್ನುಂಟುಮಾಡುವ ದನಿಯು ಕೇಳಿಸುತ್ತದೆ. ಬಹಳ ಹೂಗಳಿಂದ ಕೂಡಿದ ಸುವಾಸನೆಯ ಗಾಳಿ ಬೀಸುತ್ತದೆ. ಆದರೆ ಅದು ಪಾಪಿಗಳಿಗೆ ದುರ್ಲಭ, ಪುಣ್ಯಶಾಲಿಗಳಿಗೆ ಸುಲಭ.

೬೬. ಆ ಕದಂಬತೀರ್ಥಕ್ಕೆ ಉತ್ತರದಲ್ಲಿ ದೊಡ್ಡದಾದ ಅಶೋಕವೃಕ್ಷವಿದೆ. ಅದರಲ್ಲೂ, ಸೂರ್ಯೋದಯವಾಗುತ್ತಿರುವಾಗ ಹೂ ಬಿಡುತ್ತದೆ.

೬೭. ಭೂಮೀ, ನನ್ನ ಮಾರ್ಗವನ್ನು ಅನುಸರಿಸುವವರಾಗಿದ್ದು ಅಲ್ಲಿ ಆ ಹೂವನ್ನು ಪಡೆಯುವವರು ಸಂಶಯವಿಲ್ಲದೆ ಪರಮಸಿದ್ಧಿಯನ್ನು ಪಡೆಯುವರು.

ಅಸ್ತಿ ರೈವತಕಂ ನಾಮ ತಸ್ಮಿನ್‌ಕ್ಷೇತ್ರೇ ಪರಂ ಮಮ ।
ಸರ್ವಲೋಕೇಷು ವಿಖ್ಯಾತಂ ಯತ್ರ ವಿಕ್ರೀಡಿತಂ ಮಯಾ ॥ ೬೮ ॥

ಬಹುಗುಲ್ಮಲತಾಕೀರ್ಣಂ ಬಹುಪುಷ್ಪೈಶ್ಚ ಶೋಭಿತಂ ।
ಬಹುವರ್ಣಶಿಲಾಪಂಕ್ತಿರ್ಗುಹಾಶ್ಚಾಪಿ ದಿಶೋ ದಶ ।
ವಾಪ್ಯಶ್ಚ ಕಂದರಾಶ್ಚೈವ ದೇವಾನಾಮಪಿ ದುರ್ಲಭಾಃ ॥ ೬೯ ॥

ತತ್ರಾಭಿಷೇಕಂ ಕುರ್ವೀತ ಷಷ್ಠಕಾಲೋಷಿತೋ ನರಃ ।
ಗಚ್ಛೇತ್ತು ಸೋಮಲೋಕಂ ತು ಕೃತಕೃತ್ಯೋ ನ ಸಂಶಯಃ ॥ ೭೦ ॥

ಅಥಾತ್ರ ಮುಂಚತಿ ಪ್ರಾಣಾನ್ಮಮಕರ್ಮ ಸುನಿಷ್ಠಿತಃ ।
ಸೋಮಲೋಕಂ ಸಮುತ್ಸೃಜ್ಯ ಮಮ ಲೋಕಂ ಪ್ರಪದ್ಯತೇ ॥ ೭೧ ॥

---

೬೮. ಆ ನನ್ನ ಕ್ಷೇತ್ರದಲ್ಲಿ ನಾನು ಆಡಿದೆಡೆಯಾದ ರೈವತಕವೆಂಬ ಸರ್ವಲೋಕಪ್ರಸಿದ್ಧವೂ ಉತ್ತಮವೂ ಆದ ತೀರ್ಥಸ್ಥಾನವಿದೆ.

೬೯. ಅದು ಬಹಳವಾಗಿ ಪೊದೆಗಳಿಂದಲೂ ಬಳ್ಳಿಗಳಿಂದಲೂ ಕೂಡಿ, ಹಲವು ಬಗೆಯ ಬೇಕಾದಷ್ಟು ಹೂಗಳಿಂದೊಪ್ಪುತ್ತ, ಹಲವು ಬಣ್ಣದ ಕಲ್ಲುಗಳ ಸಾಲಿನಿಂದಲೂ, ಹತ್ತು ದಿಕ್ಕುಗಳಲ್ಲೂ ಗುಹೆಗಳಿಂದಲೂ ಕೂಡಿದುದಾಗಿದೆ. ಅಲ್ಲಿರುವ ಭಾವಿಗಳೂ, ಗುಹೆಗಳೂ ದೇವತೆಗಳಿಗೂ ದುರ್ಲಭಗಳು.

೭೦. ಅಲ್ಲಿ ಆರು(ಜಾವಗಳ)ಕಾಲವಿದ್ದು ಸ್ನಾನಮಾಡುವವನು ಕೃತಕೃತ್ಯನಾಗಿ ಸೋಮಲೋಕವನ್ನು ಸೇರುವುದರಲ್ಲಿ ಸಂದೇಹವಿಲ್ಲ.

೭೧. ಅನಂತರ ನನ್ನ ಕರ್ಮನಿರತನಾಗಿದ್ದು, ಸೋಮಲೋಕವನ್ನೂ ಬಿಟ್ಟು, ಆ ರೈವತಕತೀರ್ಥದಲ್ಲಿ ಪ್ರಾಣಗಳನ್ನು ತ್ಯಜಿಸಿದರೆ ನನ್ನ ಲೋಕವನ್ನು ಸೇರುವನು.

ತತ್ರಾಶ್ಚರ್ಯಂ ಮಹಾಭಾಗೇ ಕಥ್ಯಮಾನಂ ಮಯಾಶೃಣು ।
ಪಶ್ಯಂತಿ ಮನುಜಾಃ ಸರ್ವೇ ಧರ್ಮಕಾಮಾ ನ ಸಂಶಯಃ ॥ ೭೨ ॥

ಪತಂತಿ ಸರ್ವವೃಕ್ಷಾಣಾಂ ಪತ್ರಾಣಿ ಸುಬಹೂನ್ಯಪಿ ।
ಏಕಂ ಚಾಪಿ ನ ದೃಶ್ಯೇತ ಪ್ರಸನ್ನಂ ಯಾತಿ ತಜ್ಜಲಂ ॥ ೭೩ ॥

ಸ ಚ ಪೂರ್ವೇಣ ಪಾರ್ಶ್ವೇನ ಶೋಭತೇ ವೈ ÷ಮಹಾದ್ರುಮಃ ।
ಅಪರೋ ಮಮ ಪಾರ್ಶ್ವೇನ ದೇವಾನಾಮಪಿ ದುರ್ಲಭಃ ।
ಪಂಚಕ್ರೋಶಸುವಿಸ್ತಾರಃ ಶೋಭತೇ ವೈ ಮಹಾದ್ರುಮಃ ॥ ೭೪ ॥

ಪದ್ಮೈಶ್ಚೈವೋತ್ಪಲೈಶ್ಛನ್ನಂ ಸುಗಂಧಿಕುಸುಮೈಃ ಸಹ ॥ ೭೫ ॥

---

೭೨. ಮಹಾಭಾಗ್ಯವತಿ, ಅಲ್ಲಿಯ ಆಶ್ಚರ್ಯವನ್ನು ನಾನು ಹೇಳುತ್ತೇನೆ. ಕೇಳು. ಧರ್ಮಾಸಕ್ತರಾದ ಮನುಷ್ಯರೆಲ್ಲರೂ ಅದನು ನೋಡಬಹುದು. ಸಂದೇಹವಿಲ್ಲ.

೭೩. ಎಲ್ಲಾ ಮರಗಳ ಎಲೆಗಳೂ ಆ ತೀರ್ಥದಲ್ಲಿ ಹೆಚ್ಚಾಗಿಯೇ ಬೀಳುತ್ತವೆ. ಆದರೂ ಒಂದೆಲೆಯೂ ಅಲ್ಲಿ ಕಾಣುವುದಿಲ್ಲ. ನೀರು ತಿಳಿಯಾಗಿಯೇ ಇರುತ್ತದೆ.

೭೪. ಆ ಚಕ್ರತೀರ್ಥಕ್ಕೆ ಪೂರ್ವದಲ್ಲಿ ನನ್ನ ಪಕ್ಕದಲ್ಲಿ ದೇವತೆಗಳಿಗೂ ದುರ್ಲಭವಾದ ÷ಮಹಾದ್ರುಮಕ್ಷೇತ್ರವು ಒಪ್ಪುತ್ತದೆ. ಆ ಮಹಾದ್ರುಮವು ಐದು ಹರಿದಾರಿಯಷ್ಟು ವಿಸ್ತಾರವುಳ್ಳದಾಗಿ ಸೊಗಸುವುದು.

೭೫–೭೬. ಅದು ತಾವರೆಗಳಿಂದಲೂ, ನೈದಿಲೆಗಳಿಂದಲೂ, ಬೇರೆಯ ಸುವಾಸನೆಯುಳ್ಳ ಹೂಗಳಿಂದಲೂ, ಹಲವು ಬಗೆಯ ಮೀನುಗಳಿಂದಲೂ ಕೂಡಿದ

÷ ಮಹಾದ್ರುಮಃ = ದೊಡ್ಡಮರ, ದೊಡ್ಡಮರವುಳ್ಳದು.

ಬಹುಮತ್ಸ್ಯ ಜಲಾಕೀರ್ಣಂ ಸರ್ವವಸ್ತು ಫಲಾನ್ವಿತಂ ।
ಶಿಲಾತಲಗುಹಾಚ್ಛನ್ನಂ ಸುಗಂಧಿಕುಸುಮೈಃ ಸಹ ॥ ೭೬ ॥

ತತ್ರಾಭಿಷೇಕಂ ಕುರ್ವೀತ ಅಷ್ಟಭಕ್ತೋಷಿತೋ ನರಃ ।
ಮೋದತೇ ನಂದನೇ ದಿವ್ಯೇ ಅಪ್ಸರೋಭಿಃ ಸಮನ್ವಿತೇ ॥ ೭೭ ॥

ಅತ್ರಾಶ್ಚರ್ಯಂ ಮಹಾಭಾಗೇ ಕಥ್ಯಮಾನಂ ಮಯಾ ಶೃಣು ।
ಪಶ್ಯಂತಿ ಮನುಜಾಃ ಸರ್ವೇ ಧರ್ಮಕಾಮಾ ನ ಸಂಶಯಃ ॥ ೭೮ ॥

ಮಧ್ಯಾಹ್ನೇ ಚ ಪುನಃ ಪೂರ್ಣಶ್ಚಾರ್ಧರಾತ್ರೇ ಸಮೋವಹೇತ್ ।
ವರ್ಧತೇ ಕ್ಷೀಯತೇ ಚೈವ ಯಥೈವ ಚ ಮಹೋದಧಿಃ ॥ ೭೯ ॥

ಜಲಾಶಯ(ತೀರ್ಥ)ವುಳ್ಳದೂ, ಸರ್ವವಸ್ತು ಫಲಗಳಿಂದ ಕೂಡಿದುದೂ, ಸುಗಂಧಕುಸುಮಗಳೊಡಗೂಡಿದುದೂ, ಹಾಸುಗಲ್ಲುಗಳಿಂದ ಕೂಡಿದ ಗುಹೆಗಳುಳ್ಳುದೂ ಆಗಿದೆ.

೭೭. ಎಂಟನೆಯ ಒಂದುಭಾಗ ಆಹಾರವನ್ನು ಮಾತ್ರ ಸೇವಿಸುತ್ತ ಅಲ್ಲಿದ್ದು, ಆ ತೀರ್ಥದಲ್ಲಿ ಸ್ನಾನಮಾಡುವವನು ಅಪ್ಸರರಿಂದ ಕೂಡಿದ ದಿವ್ಯನಂದನದಲ್ಲಿ ಆನಂದಪಡುವನು.

೭೮. ಮಹಾಭಾಗ್ಯೇ, ನಾನು ಹೇಳುವ ಅಲ್ಲಿಯ ಅತ್ಯಾಶ್ಚರ್ಯವನ್ನು ಕೇಳು. ಆ ಆಶ್ಚರ್ಯವನ್ನು ಧರ್ಮದಲ್ಲಿ ಆಸಕ್ತಿಯುಳ್ಳ ಮನುಷ್ಯರೆಲ್ಲರೂ ನೋಡುತ್ತಾರೆಂಬುದರಲ್ಲಿ ಸಂದೇಹವಿಲ್ಲ.

೭೯. ಸಾಗರವು ಹೇಗೆ ಉಬ್ಬಿ, ಮತ್ತೆ ಇಳಿಯುವುದೋ ಹಾಗೆಯೇ ಆ ತೀರ್ಥವೂ ಮಧ್ಯಾಹ್ನಕಾಲದಲ್ಲಿ ಉಬ್ಬಿ ಪೂರ್ಣವಾಗಿದ್ದು ಅರ್ಧರಾತ್ರೆಯಲ್ಲಿ ಇಳಿದು ಸಮಸ್ಥಿತಿಗೆ ಬರುವುದು.

ತಸ್ಯ ಪಶ್ಚಿಮಪಾರ್ಶ್ವೇ ತು ಬಿಲ್ವಶ್ಚೈವ ಮಹಾದ್ರುಮಃ ।
ಚತುರ್ವಿಂಶತಿದ್ವಾದಶ್ಯಾಂ ಸ ಪುಷ್ಪ್ಯತಿ ಚ ನಿಷ್ಕಲಂ ॥ ೮೦ ॥

ಪಶ್ಯೇತ್ತು ಶುಭಕರ್ಮಾಚ ಪಾಪಕರ್ಮಾ ನ ಪಶ್ಯತಿ ।
ದೃಶ್ಯತೇ ಚ ಮಹಾಭಾಗೇ ಅಸ್ತಮೇತಿ ದಿವಾಕರೇ ॥ ೮೧ ॥

ಯಸ್ತತ್ರ ಲಭತೇ ಪುಷ್ಪಂ ಮಮ ಮಾರ್ಗಾನುಸಾರಕಃ ।
ಸಲಭೇತ ಪರಾಂ ಸಿದ್ಧಿಂ ಏವಂ ಭೂಮೇ ನ ಸಂಶಯಃ ॥ ೮೨ ॥

ವಿಷ್ಣುಸಂಕ್ರಮಣಂ ನಾಮ ತಸ್ಮಿನ್ ಕ್ಷೇತ್ರೇ ಪರೇ ಮಮ ।
ವಿದ್ಧೋಽಸ್ಮಿ ಯತ್ರ ವ್ಯಾಧೇನ ಸ್ವಮೂರ್ತಿಂ ಚಾಸ್ಥಿತಃ ಪುನಃ ॥ ೮೩ ॥

---

೮೦. ಆ ತೀರ್ಥದ ಪಶ್ಚಿಮಭಾಗದಲ್ಲಿ ಬಹಳ ದೊಡ್ಡದಾದ ಬಿಲ್ವಪತ್ರೆಯ ಮರವಿದೆ. ಇಪ್ಪತ್ತನಾಲ್ಕು ದ್ವಾದಶಿಯಲ್ಲೂ ಅದರಲ್ಲಿ ಪೂರ್ತಿಯಾಗಿ ಹೂ ಬಿಡುತ್ತದೆ.

೮೧. ಅದನ್ನು ಪುಣ್ಯಕರ್ಮಿಯು ನೋಡಬಹುದು. ಪಾಪಕರ್ಮನು ನೋಡಲಾಗುವುದಿಲ್ಲ. ಮಹಾಭಾಗ್ಯೇ. ಆ ಮರವನ್ನು, ಸೂರ್ಯನು ಮುಳುಗುತ್ತಲೂ ಎಂದರೆ ಸಂಧ್ಯಾಕಾಲದಲ್ಲಿ ನೋಡಬಹುದು.

೮೨. ಭೂಮೀ, ನನ್ನ ಮಾರ್ಗವನ್ನು ಅನುಸರಿಸುವ ಯಾರು ಅಲ್ಲಿ ಅದರ ಹೂವನ್ನು ಪಡೆಯುವನೋ ಅವನು ಪರಮಸಿದ್ಧಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

೮೩. ಶ್ರೇಷ್ಠವಾದ ಆ ನನ್ನ ಕ್ಷೇತ್ರದಲ್ಲಿ ವಿಷ್ಣುಸಂಕ್ರಮಣವೆಂಬ ಹೆಸರಿನ ಪ್ರದೇಶವೊಂದಿದೆ. ಕೃಷ್ಣಾವತಾರದಲ್ಲಿ ನಾನು ಅಲ್ಲೇ ಬೇಡನ ಬಾಣದೇಟಿಗೆ ಗುರಿಯಾಗಿ ಮತ್ತೆ ಸ್ವಸ್ವರೂಪವನ್ನು ಪಡೆಯುವುದು.

ತತ್ರಕುಂಡಂ ಮಹಾಭಾಗೇ ಮಣಿಪೂರಗಿರೌ ಶ್ರಿತಂ ।
ಧಾರಾ ಚೈಕಾ ಪತತ್ಯತ್ರ ಲಾಭಾಲಾಭವಿವರ್ಜಿತಃ ॥ ೮೪ ॥

*ಯಸ್ತತ್ರ ಕುರುತೇ ಸ್ನಾನಂ ಸೂರ್ಯಲೋಕೇ ಸ ಮೋದತೇ ।
ಅಥಾತ್ರ ಮುಂಚತಿ ಪ್ರಾಣಾನ್ ಮಮ ಭಕ್ತಿಪರಾಯಣಃ ॥ ೮೫ ॥

ಸೂರ್ಯಲೋಕಂ ಪರಿತ್ಯಜ್ಯ ಮಮ ಲೋಕೇ ಮಹೀಯತೇ ॥ ೮೬ ॥

ತತ್ರಾಶ್ಚರ್ಯಂ ಪ್ರವಕ್ಷ್ಯಾಮಿ ವಿಷ್ಣುಂ ಶತ್ರುಗಣೇಶ್ವರಂ ।
ಪಾಪಿನಾಂ ಯಸ್ತು ದುರ್ದರ್ಶಃ ಸುದೃಶ್ಯಃ ಪುಣ್ಯಚಾರಿಣಾಂ ॥ ೮೭ ॥

ತಸ್ಯ ದಕ್ಷಿಣಪಾರ್ಶ್ವೇನ ಅಶ್ವತ್ಥೋ ವೈ ಮಹಾದ್ರುಮಃ ।
ಉಚ್ಚಶ್ಚೈವ ವಿಶಾಲಶ್ಚ ಮನೋಜ್ಞಶ್ಚೈವ ಶೀತಲಃ ॥ ೮೮ ॥

೮೪-೮೬. ಮಹಾಭಾಗ್ಯೇ, ಮಣಿಪೂರಗಿರಿಯಲ್ಲಿ ಆ ವಿಷ್ಣುಸಂಕ್ರಮಣ ಕುಂಡವಿದೆ. ಅಲ್ಲಿ ಒಂದು ತೀರ್ಥಧಾರೆ ಧುಮುಕುತ್ತದೆ. ಲಾಭಾಲಾಭಗಳನ್ನು ಗಮನಿಸದವನಾಗಿ ಆ ತೀರ್ಥದಲ್ಲಿ ಸ್ನಾನಮಾಡುವವನು ಸೂರ್ಯಲೋಕದಲ್ಲಿ ಆನಂದಿಸುವನು. ಬಳಿಕ ನನ್ನ ಭಕ್ತಿಯಲ್ಲಿ ನಿರತನಾದ ಅವನು ಆ ವಿಷ್ಣುಸಂಕ್ರಮಣತೀರ್ಥದಲ್ಲಿ ಪ್ರಾಣಬಿಟ್ಟರೆ, ಸೂರ್ಯಲೋಕವನ್ನು ಪರಿತ್ಯಜಿಸಿ ನನ್ನ ಲೋಕದಲ್ಲಿ ವಾಸಿಸುವನು.

೮೭. ಅಲ್ಲಿಯ ಆಶ್ಚರ್ಯವನ್ನು ಹೇಳುತ್ತೇನೆ. ಶತ್ರುಗಳ ಗುಂಪಿಗೆ ಕಾಲರುದ್ರನಾಗಿ ಅಲ್ಲಿ ನೆಲಸಿರುವ ವಿಷ್ಣುವು ಪಾಪಿಗಳಿಗೆ ನೋಡಲು ಕಷ್ಟವಾಗುವಂತೆ ಉಗ್ರನಾಗಿಯೂ, ಪುಣ್ಯಶಾಲಿಗಳಿಗೆ ನೋಡಿದರೆ ಆನಂದವಾಗುವಂತೆ ಸೌಮ್ಯನಾಗಿಯೂ ಕಾಣಿಸುವನು

೮೮. ಆ ವಿಷ್ಣುಸನ್ನಿಧಿಯ ಬಲಗಡೆಯಲ್ಲಿ ಬಹಳ ದೊಡ್ಡ ಅರಳಿಯ ಮರವಿದೆ. ಅದು ಉನ್ನತವಾಗಿಯೂ, ವಿಶಾಲವಾಗಿಯೂ, ಮನೋಹರವಾಗಿಯೂ, ತಂಪಾಗಿಯೂ ಇದೆ.

---

* ಈ ಶ್ಲೋಕವಿಲ್ಲದಿದ್ದರೆ ಹಿಂದು ಮುಂದಿನ ಶ್ಲೋಕಗಳ ಅರ್ಥವು ಸರಿಯಾಗುವುದಿಲ್ಲವಾದುದರಿಂದ ಲುಪ್ತವಾಗಿರಬಹುದಾದ ಇದನ್ನು ಸೇರಿಸಿದೆ.

ಚತುರ್ವಿಂಶತಿದ್ವಾದಶ್ಯಾಂ ಮಧ್ಯಾಹ್ನೇ ತು ದಿವಾಕರೇ ।
ಫಲತೇ ಸ ಯಥಾನ್ಯಾಯಂ ಸರ್ವಭಾಗವತಪ್ರಿಯಂ ॥ ೮೯ ॥

ಯೇ ಲಭಂತೇ ಫಲಂ ತತ್ರ ಮಮ ಮಾರ್ಗಾನುಸಾರಿಣಃ ।
ತೇ ಲಭಂತೇ ಪರಾಂ ಸಿದ್ಧಿಮೇವಮೇತನ್ನ ಸಂಶಯಃ ॥ ೯೦ ॥

ತಸ್ಮಿನ್ ಕ್ಷೇತ್ರೇ ಮಹಾಭಾಗೇ ತಿಷ್ಠಾಮಿ ಚೋತ್ತರಾಮುಖಃ ।
ಸರ್ವಭಾಗವತಪ್ರೀತಃ ಸಮುದ್ರತಟಮಾಶ್ರಿತಃ ॥ ೯೧ ॥

ಅಹಂ ರಾಮೇಣಸಹಿತಃ ಸಾ ಚಾಪ್ಯೇಕಾದಶೀ ಶುಭಾ ।
ತ್ರಯಸ್ತ್ವತ್ರೈವ ತಿಷ್ಠಾಮೋ ದ್ವಾರಕಾಯಾಂ ಯಶಸ್ವಿನಿ ।
ತಸ್ಮಿನ್ ಕ್ಷೇತ್ರೇ ಮಹಾಭಾಗೇ ತ್ರಯೋ ಮೋದಾಮಹೇವಯಂ ॥ ೯೨ ॥

ತ್ರಿಂಶದ್ಯೋಜನವಿಸ್ತಾರಃ ಸರ್ವತಸ್ತು ದಿಶೋದಶ ।
ತತ್ರ ಗತ್ವಾ ವರಾರೋಹೇ ಯೇ ಮಾಂ ದ್ರಕ್ಷ್ಯಂತಿ ಭಕ್ತಿತಃ ॥ ೯೩ ॥

---

೮೯. ಇಪ್ಪತ್ತನಾಲ್ಕು ದ್ವಾದಶಿಯಲ್ಲೂ ಸೂರ್ಯನು ಮಧ್ಯಾಹ್ನದಲ್ಲಿರುವಾಗ ಆ ಮರವು ಸರ್ವಭಾಗವತರಿಗೂ ಸಂತೋಷವಾಗುವಂತೆ ಚೆನ್ನಾಗಿ ಫಲಿಸುತ್ತದೆ.

೯೦. ನನ್ನ ದಾರಿಯನ್ನು ಅನುಸರಿಸುವ ಯಾರು ಆ ಮರದ ಹಣ್ಣನ್ನು ಪಡೆಯುವರೋ ಅವರು ಪರಮಸಿದ್ಧಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೯೧. ಮಹಾಭಾಗ್ಯೇ, ನಾನು ಆದ್ವಾರಕಾಕ್ಷೇತ್ರದಲ್ಲಿ ಸರ್ವಭಾಗವತರಿಗೂ ಪ್ರೀತನಾಗಿ ಸಮುದ್ರದ ದಡದಲ್ಲಿ ಉತ್ತರಾಭಿಮುಖನಾಗಿರುವೆನು.

೯೨. ಯಶಸ್ವಿನೀ, ಬಲರಾಮಸಹಿತನಾದ ನಾನೂ, ಶುಭೆಯಾದ ಆ ಏಕಾದಶಿಯೂ ನಾವು ಮೂವರೂ ದ್ವಾರಕೆಯಲ್ಲಿರುತ್ತೇವೆ. ಮಹಾಭಾಗ್ಯೇ, ಆ ಕ್ಷೇತ್ರದಲ್ಲಿ ನಾವು ಮೂವರೂ ಆನಂದಿಸುವೆವು.

೯೩-೯೪. ವರಾರೋಹೇ, ಆ ದ್ವಾರಕಾಕ್ಷೇತ್ರವು ಹತ್ತುದಿಕ್ಕುಗಳಲ್ಲೂ ಮೂವತ್ತುಯೋಜನ ವಿಸ್ತಾರವುಳ್ಳದಾಗಿರುವುದು. ಅಲ್ಲಿಗೆ ಹೋಗಿ ಭಕ್ತಿಯಿಂದ

ಅದೀರ್ಘೇಣೈವ ಕಾಲೇನ ಪ್ರಾಪ್ನುವಂತಿ ಪರಾಂ ಗತಿಂ ॥ ೯೪ ॥

ಆಖ್ಯಾನಾನಾಂ ಮಹಾಖ್ಯಾನಂ ಶಾಂತೀನಾಂ ಶಾಂತಿರುತ್ತಮಾ ।
ಧರ್ಮಾಣಾಂ ಪರಮೋ ಧರ್ಮೋ ದ್ಯುತೀನಾಂಪರಮಾದ್ಯುತಿಃ ॥ ೯೫ ॥

ಲಾಭಾನಾಂ ಪರಮೋ ಲಾಭಃ ಕ್ರಿಯಾಣಾಂ ಪರಮಾ ಕ್ರಿಯಾ ।
ಶ್ರುತೀನಾಂ ಪರಮಂ ಶ್ರೇಷ್ಠಂ ತಪಸಾಂ ಚ ಪರಂ ತಪಃ ॥ ೯೬ ॥

ಏತನ್ಮರಣಕಾಲೇಽಪಿ ಮಾ ಕದಾಚಿತ್ತು ವಿಸ್ಮರೇತ್ ।
ಯದೀಚ್ಛೇತ್ಪರಮಾಂ ಸಿದ್ಧಿಂ ಮಮ ಲೋಕಂ ಸ ಗಚ್ಛತಿ ॥ ೯೭ ॥

ಯ ಏತತ್ಪಠತೇ ಭದ್ರೇ ಕಲ್ಯಮುತ್ಥಾಯ ಮಾನವಃ ।
+ಸ್ವಕುಲ್ಯಾಸ್ತಾರಿತಾಸ್ತೇನ ಸಪ್ತ ಸಪ್ತ ಚ ಸಪ್ತ ಚ ॥ ೯೮ ॥

ನನ್ನನ್ನು ಸಂದರ್ಶಿಸುವವರು ಸ್ವಲ್ಪ ಕಾಲದಲ್ಲೇ ಪರಮಗತಿಯನ್ನು ಪಡೆಯುವರು.

೯೫–೯೬. ಈ ದ್ವಾರಕಾಕ್ಷೇತ್ರ ವಿಚಾರವು ಆಖ್ಯಾನಗಳಲ್ಲಿ ಮಹಾಖ್ಯಾನವೂ ಶಾಂತಿಗಳಲ್ಲಿ ಉತ್ತಮಶಾಂತಿಯೂ, ಧರ್ಮಗಳಲ್ಲಿ ಪರಮಧರ್ಮವೂ, ಕಾಂತಿಗಳಲ್ಲಿ ಪರಮಕಾಂತಿಯೂ, ಲಾಭಗಳಲ್ಲಿ ಪರಮಲಾಭವೂ, ಕರ್ಮಗಳಲ್ಲಿ ಪರಮಕರ್ಮವೂ, ಶ್ರುತಿಗಳಿಗೂ ಪರಮಶ್ರೇಷ್ಠವೂ, ತಪಸ್ಸುಗಳಲ್ಲಿ ಉತ್ತಮ ತಪಸ್ಸೂ ಆದುದು.

೯೭. ಪರಮಸಿದ್ಧಿಯನ್ನು ಬಯಸುವವನು, ಮರಣಕಾಲದಲ್ಲಿಯೂ ಎಂದಿಗೂ ಇದನ್ನು ಮರೆಯದಿದ್ದರೆ ಅವನು ನನ್ನ ಲೋಕವನ್ನು ಸೇರುವನು.

೯೮. ಭದ್ರೇ, ಬೆಳಗ್ಗೆ ಎದ್ದು ಇದನ್ನು ಓದುವ ಅಥವಾ ಹೇಳುವ ಮನುಷ್ಯನು ತನ್ನ ಕುಲದ ಇಪ್ಪತ್ತೊಂದು ತಲೆಯವರನ್ನೂ ಸಂಸಾರಸಾಗರದಿಂದ ದಾಟಿಸುವನು.

+ ಸಕುಲ್ಯಾ

ಏತತ್ತೇ ಕಥಿತಂ ಭದ್ರೇ ದ್ವಾರಕಾಯಾಃ ಸುನಿಶ್ಚಯಂ ।
ಉಚಿತೇನೋಪಚಾರೇಣ ಕಿಮನ್ಯತ್ಪರಿಪೃಚ್ಛಸಿ ॥ ೯೯ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ದ್ವಾರಕಾಮಾಹಾತ್ಮ್ಯಂನಾಮ ಏಕೋನಪಂಚಾಶದಧಿಕಶತತಮೋಽಧ್ಯಾಯಃ

---

೯೯. ಶುಭೇ, ನಿನ್ನ ಉಚಿತವಾದ ಉಪಚಾರದಿಂದ ದ್ವಾರಕಿಯ ಸತ್ಯವಾದ ಈ ವಿಚಾರವನ್ನು ನಿನಗೆ ಹೇಳಿದೆನು. ಬೇರಾವುದನ್ನು ಕೇಳುವೆ ?

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ದ್ವಾರಕಾಕ್ಷೇತ್ರವಿಚಾರವನ್ನು ವಿವರಿಸುತ್ತ, ದ್ವಾರಕಿಯ ಮಹಿಮೆಯನ್ನೂ, ದುರ್ವಾಸರಿಂದ ಯಾದವರಿಗೆ ಶಾಪವು ಬರಲು ಕಾರಣವನ್ನೂ ತಿಳಿಸಿ, ಪಂಚಸರಾದಿ ತೀರ್ಥಕ್ಷೇತ್ರಗಳ ಮಹಿಮೆಯನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ನಲವತ್ತೊಂಭತ್ತನೆಯ ಅಧ್ಯಾಯು.

॥ ಶ್ರೀಃ ॥

ಪಂಚಾಶದಧಿಕಶತತಮೋಽಧ್ಯಾಯಃ

ಅಥ ಸಾನಂದೂರಮಾಹಾತ್ಮ್ಯಂ

॥ ಸೂತ ಉವಾಚ ॥

ದ್ವಾರಕಾಯಾಸ್ತು ಮಾಹಾತ್ಮ್ಯಂ ಶ್ರುತ್ವಾ ಹ್ಯೇತತ್ಸುಭಾಷಿತಂ ।
ಹೃಷ್ಟೋಽವಾಚ ತದಾ ದೇವಂ ಧರ್ಮಕಾಮಾ ವಸುಂಧರಾ ॥ ೧ ॥

॥ ಧರಣ್ಯುವಾಚ ॥

ಅಹೋ ದೇವ ಪ್ರಸಾದಶ್ಚ ಯತ್ತ್ವಯಾ ಪರಿಕೀರ್ತಿತಂ ।
ಶ್ರುತ್ವೈತತ್ಪರಮಂ ಪುಣ್ಯಂ ಪ್ರಾಪ್ತಾಸ್ಮಿ ಪರಮಾಂ ಶ್ರಿಯಂ ॥ ೨ ॥

ನೂರ ಐವತ್ತನೆಯ ಅಧ್ಯಾಯ

ಸಾನಂದೂರ ಮಹಿಮೆ

೧. ಸೂತಮುನಿ—ಧರ್ಮಾಸಕ್ತಳಾದ ಭೂದೇವಿ ದ್ವಾರಕೆಯ ಮಹಿಮೆಯ ಈ ಸುಭಾಷಿತವನ್ನು ಕೇಳಿ, ಹರ್ಷಗೊಂಡವಳಾಗಿ, ಆ ಶ್ರೀವರಾಹ ನೊಡನೆ ಆಗ ಮಾತನಾಡಿದಳು.

೨. ಭೂದೇವಿ—ಅಹೋ, ದೇವ! ನೀನು ಅನುಗ್ರಹದಿಂದ ಹೇಳಿದ ಈ ಪರಮಪುಣ್ಯವನು ಕೇಳಿ, ಪರಮಸಿರಿಯನ್ನು ಪಡೆದೆನು.

ಏತಸ್ಮಾದಪಿ ಚೇದ್ಗುಹ್ಯಂ ಲೋಕನಾಥ ಜನಾರ್ದನ ।
ಯದ್ಯಸ್ತಿ ಪ್ರೋಚ್ಯತಾಂ ಮಹ್ಯಂ ಕೃಪಾ ಚೇತ್ಪರಮಾ ಮಯಿ ॥ ೩ ॥

ತತೋ ಮಹೀವಚಃ ಶ್ರುತ್ವಾ ವಿಷ್ಣುಃ ಕಮಲಲೋಚನಃ ।
ವರಾಹರೂಪೀ ಭಗವಾನ್ ಪ್ರತ್ಯುವಾಚ ವಸುಂಧರಾಂ ॥ ೪ ॥

॥ ಶ್ರೀವರಾಹ ಉವಾಚ ॥

ಸಾನಂದೂರೇತಿ ವಿಖ್ಯಾತಂ ಭೂಮೇ ಗುಹ್ಯಂ ಪರಂ ಮಮ ।
ಉತ್ತರೇ ತು ಸಮುದ್ರಸ್ಯ ಮಲಯಸ್ಯ ತು ದಕ್ಷಿಣೇ ॥ ೫ ॥

ತತ್ರ ತಿಷ್ಠಾಮಿ ವಸುಧೇ ಉದೀಚೀಂ ದಿಶಮಾಶ್ರಿತಃ ।
ಪ್ರತಿಮಾ ವೈ ಮದೀಯಾಸ್ತಿ ನಾತ್ಯುಚ್ಚಾನಾತಿನೀಚಕಾ ॥ ೬ ॥

---

೩. ಲೋಕನಾಥಾ, ಜನಾರ್ದನಾ, ನಿನಗೆ ನನ್ನಲ್ಲಿ ಅತಿಯಾಗಿ ದಯೆಯಾದರೆ ಇದಕ್ಕಿಂತಲೂ ರಹಸ್ಯವಾದುದು ಯಾವುದಾದರೂ ಇದ್ದರೆ ಹೇಳು.

೪. ಭೂದೇವಿಯ ಈ ಮಾತನ್ನು ಕೇಳಿ, ಕಮಲನೇತ್ರನೂ, ವರಾಹರೂಪಿಯೂ ಆದ ಭಗವಂತನು ಬಳಿಕ ಆ ಭೂದೇವಿಗೆ ಮುಂದಿನಂತೆ ಹೇಳಿದನು.

೫. ಶ್ರೀವರಾಹ—ಭೂಮೀ, ದಕ್ಷಿಣಸಮುದ್ರಕ್ಕೆ ಉತ್ತರದಲ್ಲೂ, ಮಲಯ ಪರ್ವತಕ್ಕೆ ದಕ್ಷಿಣದಲ್ಲೂ 'ಸಾನಂದೂರ' ವೆಂಬ ಪ್ರಸಿದ್ಧವೂ, ಉತ್ತಮವೂ, ರಹಸ್ಯವೂ,ಆದ ನನ್ನ ಕ್ಷೇತ್ರವಿದೆ.

೬. ಆ ಕ್ಷೇತ್ರದಲ್ಲಿ ನಾನು ಉತ್ತರದಿಕ್ಕಿಗೆ ಅಭಿಮುಖನಾಗಿರುವೆನು. ನನ್ನ ಮೂರ್ತಿಯು ಅತ್ಯುನ್ನತವಾಗಿಯೂ ಇಲ್ಲ. ಬಹಳ ಕುಳ್ಳಾಗಿಯೂ ಇಲ್ಲ.

ಆಯಸೀಂತಾಂ ವದಂತ್ಯೇಕೇ ಅನ್ಯೇ ತಾಮ್ರಮಯೀಂ ತಥಾ ।
ಕಾಂಸ್ಯಾಂ ರೀತಿಮಯೀಮನ್ಯೇ ಕೇಚಿತ್ಸೀಸಕನಿರ್ಮಿತಾಂ ॥ ೭ ॥
ಶಿಲಾಮಯೀಮಿತ್ಯಪರೇ ಮಹದಾಶ್ಚರ್ಯರೂಪಿಣೀಂ ॥ ೮ ॥

ತತ್ರ ಸ್ಥಾನಾನಿ ವೈ ಭೂಮೇ ಕಥ್ಯಮಾನಾನಿ ವೈ ಶೃಣು ।
ಮನುಜಾ ಯತ್ರ ಮುಚ್ಯಂತೇ ಗತಾಃ ಸಂಸಾರಸಾಗರಾತ್ ॥ ೯ ॥

ತತ್ರಾಶ್ಚರ್ಯಂ ಪ್ರವಕ್ಷ್ಯಾಮಿ ಸಾನಂದೂರೇ ಯಶಸ್ವಿನಿ ।
ಸೌವರ್ಣಂ ದೃಶ್ಯತೇ ಪದ್ಮಂ ಮಧ್ಯಾಹ್ನೇ ತು ದಿವಾಕರೇ ॥ ೧೦ ॥

ಯತ್ರ ರಾಮಗೃಹಂ ನಾಮ ಮಮ ಗುಹ್ಯಂ ಯಶಸ್ವಿನಿ ।
ತತ್ರಾಪಿ ಶೃಣುಚಾಶ್ಚರ್ಯಂ ಯಶ್ಚಾಪಿ ಪರಿವರ್ತತೇ ॥
ಏಕಾ ಯತ್ರ ಲತಾವೃಕ್ಷೆ ಉಚ್ಚೈಸ್ಥೂಲೋ ಮಹಾದ್ರುಮಃ ।
ಸಮುದ್ರಮಧ್ಯೇ ತಿಷ್ಠಂತಂ ಕೋಪಿ ತತ್ರ ನ ಪಶ್ಯತಿ ॥ ೧೧ ॥

೭–೮. ಅತ್ಯಾಶ್ಚರ್ಯಕರವಾದ ಆ ನನ್ನ ಮೂರ್ತಿಯನ್ನು ಕೆಲವರು ಉಕ್ಕಿನದೆಂದೂ, ಕೆಲವರು ತಾಮ್ರದಿಂದಾದುದೆಂದೂ, ಮತ್ತೆ ಕೆಲವರು ಹಿತ್ತಾಳೆಯದೆಂದೂ, ಬೇರೆ ಕೆಲವರು ಸೀಸದ್ದೆಂದೂ, ಉಳಿದ ಕೆಲವರು ಶಿಲಾಮಯವಾದುದೆಂದೂ ಹೇಳುವರು.

೯. ಭೂಮೀ, ಯಾವ ಸ್ಥಳಗಳಿಗೆ ಹೋದ ಮನುಷ್ಯರು ಸಂಸಾರ ಸಾಗರದಿಂದ ಮುಕ್ತರಾಗುವರೋ ಅಂತಹ ಆ ಕ್ಷೇತ್ರದಲ್ಲಿರುವ ಸ್ಥಳಗಳನ್ನು ಹೇಳುತ್ತೇನೆ. ಕೇಳು.

೧೦. ಯಶೋವತೀ, ಆ ಸಾನಂದೂರಕ್ಷೇತ್ರದ ಆಶ್ಚರ್ಯವನ್ನು ಹೇಳುತ್ತೇನೆ. ಸೂರ್ಯನು ಮಧ್ಯಾಹ್ನದಲ್ಲಿರುವಾಗ ಅಲ್ಲಿ ಸುವರ್ಣದ ಕಮಲವು ಕಾಣಿಸುತ್ತದೆ.

೧೧. ಕೀರ್ತಿವಂತೇ, ರಾಮಗೃಹವೆಂಬ ಹೆಸರಿನ ರಹಸ್ಯವಾದ ನನ್ನ ಕ್ಷೇತ್ರದ ಆಶ್ಚರ್ಯವನ್ನೂ ಕೇಳು ಒಂದೇ ಒಂದು ಬಳ್ಳಿ ಹಬ್ಬಿರುವ ಎತ್ತರವೂ ದಪ್ಪವೂ ಆದ ಹೆಮ್ಮರವೊಂದು ಅಲ್ಲಿ ಸಮುದ್ರಮಧ್ಯದಲ್ಲಿದೆ. ಅದು ಅಲ್ಲಿರುವುದನ್ನು ಯಾರೂ ಕಾಣರು.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಮಹಾಶ್ಚರ್ಯಂ ವಸುಂಧರೇ ।
ಮಮ ಭಕ್ತಾ ಹಿ ಪಶ್ಯಂತಿ ವಿದ್ಯಮಾನಾಃ ಸ್ವಕರ್ಮಣಾ ॥ ೧೨ ॥

ಬಹುಮತ್ಸ್ಯಸಹಸ್ರಾಣಿ ಕೋಟ್ಯೋ ಹ್ಯರ್ಬುದಮೇವ ಚ ।
ಏಕಸ್ತತ್ರ ಸ್ಥೂಲಮತ್ಸ್ಯೋ ಭೂಮೇ ಚಕ್ರೇಣ ಚಾಂಕಿತಃ ॥ ೧೩ ॥

ಕ್ಷಿಪ್ತಃ ಪಿಂಡಶ್ಚ ತನ್ಮಧ್ಯೇ ಯೇನ ಕೇನ ವಿಕರ್ಮಿಣಾ ।
ತಾವತ್ಕಶ್ಚಿನ್ನ ಗೃಹ್ಣಾತಿ ಯಾವತ್ತೇನ ನ ಭಕ್ಷಿತಃ ॥ ೧೪ ॥

ತತ್ರ ರಾಮಸರೋ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಅಗಾಧಂ ಚಾಪ್ಯಪಾರಂಚ ರಕ್ತಪದ್ಮವಿಭೂಷಿತಂ ॥ ೧೫ ॥

ತತ್ರ ಸ್ನಾನಂ ತು ಕುರ್ವೀತ ಏಕರಾತ್ರ್ಯೋಷಿತೋ ನರಃ ।
ಬುಧಸ್ಯ ಭವನಂಗತ್ವಾ ಮೋದತೇ ನಾತ್ರ ಸಂಶಯಃ ॥ ೧೬ ॥

---

೧೨. ವಸುಂಧರೇ, ಬೇರೊಂದು ಅತ್ಯಾಶ್ಚರ್ಯವನ್ನು ನಿನಗೆ ಹೇಳುತ್ತೇನೆ. ಅದನ್ನು ಸ್ವಕರ್ಮಗಳಲ್ಲಿರುವ ನನ್ನ ಭಕ್ತರು ನೋಡಬಹುದು.

೧೩. ಅಲ್ಲಿ ಹಲವು ಸಾವಿರಗಳೋ, ಕೋಟಿಗಳೋ, ಅರ್ಬುದಗಳೋ ಮೀನುಗಳಿವೆ. ಭೂಮೀ, ಅವುಗಳಲ್ಲೊಂದು ದೊಡ್ಡಮೀನು ಚಕ್ರದ ಗುರುತುಳ್ಳದಾಗಿದೆ.

೧೪. ಯಾವನಾದರೂ ವಿಕರ್ಮಿಯು ಅವುಗಳ ನಡುವೆ ಪಿಂಡವನ್ನು ಹಾಕಿದರೆ, ಆ ಚಕ್ರದ ಗುರುತಿನ ದೊಡ್ಡ ಮೀನು ಅದನ್ನು ತಿನ್ನುವವರೆಗೂ ಯಾವ ಬೇರೆಯ ಮೀನೂ ಅದನ್ನು ಮುಟ್ಟುವುದಿಲ್ಲ.

೧೫. ಅಲ್ಲಿ ರಾಮಸರಸ್ಸೆಂಬ ನನ್ನ ಬೇರೊಂದು ಉತ್ತಮವಾದ ರಹಸ್ಯತೀರ್ಥವಿದೆ. ಅದು ಅಗಾಧವಾಗಿಯೂ, ವಿಸ್ತಾರವಾಗಿಯೂ, ಕೆಂದಾವರೆಗಳಿಂದ ಅಲಂಕೃತವಾಗಿಯೂ ಇದೆ.

೧೬. ಅಲ್ಲಿ ಒಂದುರಾತ್ರಿ ಇದ್ದು ತೀರ್ಥದಲ್ಲಿ ಸ್ನಾನಮಾಡುವವನು ಬುಧನ ಲೋಕವನ್ನು ಸೇರಿ, ಆನಂದಪಡುವುದರಲ್ಲಿ ಸಂಶಯವಿಲ್ಲ.

ಅಥ ಪ್ರಾಣಾನ್ ಪ್ರಮುಚ್ಯೇತ ತಸ್ಮಿನ್ ಸರಸಿ ಸುಂದರಿ ।
ಬುಧಸ್ಯ ಭವನಂ ತ್ಯಕ್ತ್ವಾ ಮಮ ಲೋಕಂ ಪ್ರಪದ್ಯತೇ ॥ ೧೭ ॥

ತಸ್ಮಿನ್ ರಾಮಸರಸ್ಯುಚ್ಚೈರಾಶ್ಚರ್ಯಂ ಶೃಣು ಸುಂದರಿ ।
ಮನುಜಾಸ್ತನ್ನ ಪಶ್ಯಂತಿ ಮಮ ಕರ್ಮರತಾ ನ ಯೇ ॥ ೧೮ ॥

ತತ್ಸರಃ ಕ್ರೋಶವಿಸ್ತಾರಂ ಬಹುಗುಲ್ಮಲತಾವೃತಂ ।
ಮನೋಜ್ಞಂ ರಮಣೀಯಂ ಚ ಜಲಜೈಶ್ಚಾಪಿ ಸಂವೃತಂ ॥ ೧೯ ॥

ತತ್ರ ರೂಢಾನಿ ಪದ್ಮಾನಿ ದ್ಯೋತಯಂತಿ ದಿಶೋ ದಶ ।
ಏಕಂ ತು ದೃಶ್ಯತೇ ಶ್ವೇತಂ ಅಬ್ಜಂ ರುಕ್ಮಮಯಂ ತಥಾ ॥ ೨೦ ॥

ತತ್ರ ಬ್ರಹ್ಮಸರಸ್ಯುಚ್ಚೈರುತ್ತರಂ ಪಾರ್ಶ್ವಮಾಶ್ರಿತಾ ।
ಧಾರಾ ಚೈಕಾ ಪ್ರಪತತಿ ಸ್ಥೂಲಾ ಮುಸಲಸನ್ನಿಭಾ ॥ ೨೧ ॥

---

೧೭. ಸುಂದರೀ, ಆ ರಾಮಸರಸ್ಸಿನಲ್ಲಿ ಮಡಿದನಾದರೆ ಬುಧಲೋಕವನ್ನು ತ್ಯಜಿಸಿ, ನನ್ನ ಲೋಕವನ್ನು ಸೇರುವನು.

೧೮. ಸುಂದರೀ, ಆ ರಾಮಸರೋವರದ ಅತ್ಯಾಶ್ಚರ್ಯವನ್ನು ಕೇಳು. ನನ್ನ ಕರ್ಮದಲ್ಲಿ ಆಸಕ್ತರಲ್ಲದ ಮನುಷ್ಯರು ಅದನ್ನು ಕಾಣಲಾಗುವುದಿಲ್ಲ.

೧೯. ಆ ರಾಮಸರೋವರವು ಹರಿದಾರಿಯಷ್ಟು ವಿಶಾಲವಾಗಿಯೂ, ಬಹಳ ಪೊದೆಗಳಿಂದಲೂ, ಬಳ್ಳಿಗಳಿಂದಲೂ ಆವೃತವಾಗಿಯೂ, ಕಮಲಗಳಿಂದ ಕೂಡಿದಾಗಿಯೂ, ರಮಣೀಯವಾಗಿಯೂ, ಮನೋಹರವಾಗಿಯೂ ಇದೆ.

೨೦. ಅಲ್ಲಿ ಬೆಳೆದಿರುವ ಕಮಲಗಳು ಹತ್ತುದಿಕ್ಕುಗಳನ್ನೂ ಬೆಳಗುವುವು. ಅವುಗಳಲ್ಲಿ ಒಂದು ಸುವರ್ಣದ ಕಮಲವು ಮಾತ್ರ ಬೆಳ್ಳಗೆ ಕಾಣಿಸುತ್ತದೆ.

೨೧. ಆ ಬ್ರಹ್ಮಸರೋವರದಲ್ಲಿ ಉತ್ತರಪಾರ್ಶ್ವದಲ್ಲಿ ಒನಕೆಯಂತೆ ದಪ್ಪವಾದ ಒಂದು ಜಲಧಾರೆಯು ಮೇಲಿನಿಂದ ಧುಮುಕುತ್ತದೆ.

ತತ್ರ ಸ್ನಾನಂ ಪ್ರಕುರ್ವೀತ ಷಷ್ಠಕಾಲೋಷಿತೋ ನರಃ ।
ಬ್ರಹ್ಮಲೋಕಂ ಸಮಾಸಾದ್ಯ ಮೋದತೇ ನಾತ್ರ ಸಂಶಯಃ ॥ ೨೨ ॥

ಅಥಾತ್ರ ಮುಚ್ಯತೇ ಪ್ರಾಣೈರ್ಭೂಮೇ ಬ್ರಹ್ಮ ಸರಸ್ಯಪಿ ।
ಬ್ರಹ್ಮಣಾ ಸಮನುಜ್ಞಾತೋ ಮಮ ಲೋಕಂ ಚ ಗಚ್ಛತಿ ॥ ೨೩ ॥

ತತ್ರಾಶ್ಚರ್ಯಂ ಮಹಾಭಾಗೇ ರಮ್ಯೇ ಬ್ರಹ್ಮಸರೇ ಶೃಣು ।
ಮದ್ಭಕ್ತಾ ಯಚ್ಚ ಪಶ್ಯಂತಿ ಘೋರಸಂಸಾರಮೋಕ್ಷಣಂ ॥ ೨೪ ॥

ಚತುರ್ವಿಂಶತಿದ್ವಾದಶ್ಯಾಂ ಸಾ ಧಾರಾ ಪೃಥುಲೇಕ್ಷಣೇ ।
ಭೂಮೌ ಪತತಿ ಮಧ್ಯಾಹ್ನೇ ಯಾವತ್ಸೂರ್ಯಸ್ತು ತಿಷ್ಠತಿ ॥ ೨೫ ॥

ಪರಿವೃತ್ತೇ ತು ಮಧ್ಯಾಹ್ನೇ ಸಾ ಧಾರಾ ನಪತೇದ್ಭುವಿ ।
ಏವಂ ತತ್ರ ಮಹಾಶ್ಚರ್ಯಂ ಪುಣ್ಯಬ್ರಹ್ಮ ಸರೋವರೇ ॥ ೨೬ ॥

---

೨೨. ಅಲ್ಲಿ ಆರು(ಜಾವಗಳ) ಕಾಲವಿದ್ದು ಆ ತೀರ್ಥದಲ್ಲಿ ಸ್ನಾನ ಮಾಡುವವನು ಬ್ರಹ್ಮಲೋಕವನ್ನು ಸೇರಿ, ಆನಂದಿಸುವುದರಲ್ಲಿ ಸಂಶಯವಿಲ್ಲ.

೨೩. ಭೂಮೀ, ಆಬ್ರಹ್ಮಸರಸ್ಸಿನಲ್ಲಿ ಪ್ರಾಣಬಿಟ್ಟರೆ ಬ್ರಹ್ಮನ ಅನುಮತಿಯನ್ನು ಪಡೆದು, ಅವನು ನನ್ನ ಲೋಕವನ್ನು ಸೇರುವನು.

೨೪. ಮಹಾಭಾಗ್ಯೇ, ರಮ್ಯವಾದ ಆ ಬ್ರಹ್ಮಸರೋವರದಲ್ಲಿ ನನ್ನ ಭಕ್ತರು ನೋಡಬಹುದಾದ ಘೋರಸಂಸಾರವಿಮೋಚಕವಾದ ಆಶ್ಚರ್ಯವನ್ನು ಕೇಳು.

೨೫-೨೬. ವಿಶಾಲಾಕ್ಷೀ, ಭೂದೇವಿ, ಇಪ್ಪತ್ತನಾಲ್ಕು ದ್ವಾದಶಿಯಲ್ಲೂ ಸೂರ್ಯನು ಮಧ್ಯಾಹ್ನದಲ್ಲಿರುವವರೆಗೂ. ಮೊದಲು ಹೇಳಿದ ಆ ಜಲಧಾರೆಯು ಧುಮುಕುತ್ತಿರುತ್ತದೆ. ಮಧ್ಯಾಹ್ನವು ತಿರುಗಿದಮೇಲೆ ಆ ಧಾರೆಯು ಭೂಮಿಗೆ ಧುಮುಕುವುದೇ ಇಲ್ಲ. ಆ ಪುಣ್ಯಬ್ರಹ್ಮಸರೋವರದಲ್ಲಿ ಹೀಗೆ ಅತ್ಯಾಶ್ಚರ್ಯವು ನಡೆಯುವುದು.

ಅಸ್ತಿ ಸಂಗಮನಂ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಸಮುದ್ರಶ್ಚೈವ ರಾಮಶ್ಚ ಸಮೇಷ್ಯೇತೇ ವರಾಂಗನೇ ॥ ೨೭ ॥

ತತ್ರಕುಂಡಂ ಮಹಾಭಾಗೇ ಪ್ರಸನ್ನವಿಮಲೋದಕಂ ।
ಬಹುಗುಲ್ಮಲತಾಕೀರ್ಣಂ ಶೋಭಿತಂಚ ವಿಹಂಗಮೈಃ ॥ ೨೮ ॥

ಸಮುದ್ರಸ್ಯತು ಪಾರ್ಶ್ವೇನ ಹ್ಯದೂರಾತ್ತತ್ರ ಯೋಜನಾತ್ ।
ಮಂಡಿತಂ ಕುಮುದೈಃ ಪದ್ಮೈಃ ಸುಗಂಧೈಶ್ಚೋತ್ತಮೈಸ್ತಥಾ ॥ ೨೯ ॥

ತತ್ರ ಸ್ನಾನಂ ತು ಕುರ್ವೀತ ಷಷ್ಠಕಾಲೋಷಿತೋ ನರಃ ।
ಸಮುದ್ರಭವನಂ ಗತ್ವಾ ಮಮಲೋಕಂ ಪ್ರಪದ್ಯತೇ ॥ ೩೦ ॥

ತತ್ರಾಶ್ಚರ್ಯಂ ಪ್ರವಕ್ಷ್ಯಾಮಿ ಕುಂಡಂ ರಾಮಸ್ಯ ಸಂಗಮೇ ।
ಯದ್ದೃಷ್ಟ್ವಾ ಮನುಜಾಸ್ತತ್ರ ಭ್ರಮಂತಿ ವಿಗತಜ್ವರಾಃ ॥ ೩೧ ॥

---

೨೭. ವರಾಂಗನೇ, ಸಂಗಮನವೆಂಬ ನನ್ನ ಉತ್ತಮವಾದ, ರಹಸ್ಯಕ್ಷೇತ್ರ ವೊಂದಿದೆ. ಅಲ್ಲಿ ಸಮುದ್ರವೂ, ರಾಮಸರೋವರವೂ ಸಂಗಮವಾಗುತ್ತವೆ.

೨೮. ಮಹಾಭಾಗ್ಯೇ, ಶಾಂತವೂ, ನಿರ್ಮಲವೂ ಆದ ನೀರುಳ್ಳ ಆ ಕುಂಡವು ಬಹಳಪೊದೆಗಳಿಂದಲೂ, ಬಳ್ಳಿಗಳಿಂದಲೂ, ಆವರಿಸಲ್ಪಟ್ಟಿದೆ. ಹಕ್ಕಿಗಳಿಂದ ಸೊಗಸಾಗಿದೆ.

೨೯. ಸುಗಂಧವುಳ್ಳ ಉತ್ತಮವಾದ ಬೆಳ್ನೈದಿಲೆಗಳಿಂದಲೂ, ತಾವರೆ ಗಳಿಂದಲೂ ಅಲಂಕೃತವಾಗಿದೆ. ಅದು ಸಮುದ್ರತೀರಕ್ಕೆ ಒಂದು ಯೋಜನ ಕ್ಕಿಂತಲೂ ಹತ್ತಿರದಲ್ಲಿಯೇ ಇದೆ.

೩೦. ಅಲ್ಲಿ ಆರು(ಜಾವಗಳ) ಕಾಲವಿದ್ದು, ಸ್ನಾನಮಾಡುವವನು ಸಮುದ್ರಗೃಹಕ್ಕೆ ಹೋಗಿ ಬಳಿಕ ನನ್ನ ಲೋಕವನ್ನು ಸೇರುವನು.

೩೧. ರಾಮಸಂಗಮದಲ್ಲಿರುವ ಯಾವ ಕುಂಡವನ್ನು ನೋಡಿದ ಜನರು ಭಯತಾಪವಿಲ್ಲದವರಾಗಿ ಅಲ್ಲಿ ಸಂಚರಿಸುವರೋ ಆ ಕುಂಡದ ಆಶ್ಚರ್ಯವನ್ನು ಹೇಳುತ್ತೇನೆ.

ಯಾನಿಕಾನಿ ಚ ಪರ್ಣಾನಿ ಪತಂತಿ ಜಲಸಂಸದಿ ।
ಏಕಮಪ್ಯತ್ರ ಪಶ್ಯಂತಿ ನ ಕೇಪಿ ವಸುಧೇ ನರಾಃ ॥ ೩೨ ॥

ಅಚ್ಛಿದ್ರಾಣಿ ಚ ಪತ್ರಾಣಿ ತಸ್ಮಿನ್ ರಾಮಸ್ಯ ಸಂಗಮೇ ।
ಪ್ರಪನ್ನೇನಾಪಿ ಮಾರ್ಗಂ ತಚ್ಛಿದ್ರಂ ತತ್ರ ನ ಪಶ್ಯತಿ ॥ ೩೩ ॥

ಅಸ್ತಿ ಶಕ್ರಸರೋ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ತತ್ರ ಪೂರ್ವೇಣ ಪಾರ್ಶ್ವೇನ ಹ್ಯದೂರಾದರ್ಧಯೋಜನಾತ್ ॥ ೩೪ ॥

ತಸ್ಯ ಕುಂಡಸ್ಯ ಸುಶ್ರೋಣಿ ಚತಸ್ರೋ ವಿಷಮಾಶ್ರಿತಾಃ ।
ಧಾರಾಃ ಪತಂತಿ ಕಲ್ಯಾಣಿ ಪ್ರಸನ್ನಸಲಿಲಾಸ್ತಥಾ ॥ ೩೫ ॥

ತತ್ರ ಸ್ನಾನಂ ಪ್ರಕುರ್ವೀತ ಚತುಷ್ಕಾಲೋಷಿತೋ ನರಃ ।
ಚತುರ್ಣಾಂ ಲೋಕಪಾಲಾನಾಂ ಲೋಕಾನಾಪ್ನೋತಿ ಚೋತ್ತಮಾನ್ ॥ ೩೬ ॥

---

೩೨. ಭೂಮೀ, ಯಾವ ಯಾವ ಎಲೆಗಳೋ ಆ ಕುಂಡದ ನೀರಿನಲ್ಲಿ ಬೀಳುತ್ತವೆ. ಆದರೆ ನೀರಿನಮೇಲೆ ಒಂದು ಎಲೆಯನ್ನೂ ಯಾರು ಕಾಣುವುದಿಲ್ಲ.

೩೩. ಆ ರಾಮಸಂಗಮದಲ್ಲಿರುವ ಎಲೆಗಳೆಲ್ಲವೂ ರಂಧ್ರವಿಲ್ಲದವು. ಹುಡುಕಿದರೂ, ಅಥವಾ ಎಲೆಯಲ್ಲಿ ರಂಧ್ರವನ್ನು ಮಾಡಿದರೂ ಆ ರಂಧ್ರವು ಕಾಣಿಸುವುದೇ ಇಲ್ಲ.

೩೪. ಶಕ್ರಸರೋವರವೆಂಬ ಹೆಸರಿನ ಬೇರೊಂದು ನನ್ನ ರಹಸ್ಯವಾದ ಕ್ಷೇತ್ರವಿದೆ. ಅದು ರಾಮಸಂಗಮಕುಂಡಕ್ಕೆ ಪೂರ್ವದಿಕ್ಕಿನಲ್ಲಿ ಅರ್ಧಯೋಜನಕ್ಕಿಂತಲೂ ಸಮೀಪದಲ್ಲಿಯೇ ಇದೆ.

೩೫. ಸುಂದರೀ, ಕಲ್ಯಾಣೀ, ಆ ಕುಂಡಕ್ಕೆ ಬೇರೆ ಬೇರೆ ಕಡೆಯಿಂದ ಅಥವಾ ಒಂದೇ ಸಮವಲ್ಲದ ಸ್ವಚ್ಛವಾದ ನಾಲ್ಕು ಜಲಧಾರೆಗಳು ಧುಮುಕುತ್ತವೆ.

೩೬. ಅಲ್ಲಿ ನಾಲ್ಕುಜಾವಗಳ ಕಾಲವಿದ್ದು, ಸ್ನಾನಮಾಡುವವನು ನಾಲ್ಕುಜನ ಲೋಕಪಾಲಕರ ಉತ್ತಮಲೋಕಗಳನ್ನು ಸೇರುವನು.

ಅಸ್ಮಿಂಶ್ಚ ಶಕ್ರಸರಸಿ ಯದಿ ಪ್ರಾಣಾನ್ ಪ್ರಮುಂಚತಿ ।
ಲೋಕಪಾಲಾನ್ ಸಮುತ್ಸೃಜ್ಯ ಮಮ ಲೋಕೇಷು ಮೋದತೇ ॥ ೩೭ ॥

ತತ್ರಾಶ್ಚರ್ಯಂ ಮಹಾಭಾಗೇ ದೃಶ್ಯತೇ ತಚ್ಛೃಣುಷ್ವಮೇ ।
ಶುದ್ಧೈರ್ಭಾಗವತೈರ್ಭೂಮೇ ಸರ್ವಸಂಸಾರಮೋಕ್ಷಣಂ ॥ ೩೮ ॥

ಚತುರ್ಧಾರಾಸ್ತತೋ ಭದ್ರೇ ಪತಂತಿ ಚತುರೋ ದಿಶಃ ।
ನ ಚ ತದ್ವರ್ಧತೇ ಚಾಂಭೋ ನ ಚೈವ ಪರಿಹೀಯತೇ ॥ ೩೯ ॥

ಮಾಸೇ ಭಾದ್ರಪದೇ ಚೈವ ಶುಕ್ಲಪಕ್ಷೇ ತು ದ್ವಾದಶೀ ।
ಶ್ರೂಯತೇ ಗೀತನಿರ್ಘೋಷಃ ಶ್ರುತಿ ಕರ್ಮಮನೋಹರಃ ॥ ೪೦ ॥

ಅಸ್ತಿ ಸೂರ್ಪಾರಕಂ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಜಾಮದಗ್ನ್ಯಸ್ಯ ರಾಮಸ್ಯ ಸ್ವಾಶ್ರಮೋಥ ಭವಿಷ್ಯತಿ ॥ ೪೧ ॥

---

೩೭. ಆ ಶಕ್ರಸರಸ್ಸಿನಲ್ಲಿ ಪ್ರಾಣಗಳನ್ನು ಬಿಟ್ಟರೆ, ಆ ಲೋಕಪಾಲರನ್ನು ತ್ಯಜಿಸಿ, ನನ್ನ ಲೋಕಗಳಲ್ಲಿ ಆನಂದಿಸುವನು.

೩೮. ಮಹಾಭಾಗ್ಯೇ, ಭೂಮೀ, ಶುದ್ಧರಾದ ಭಾಗವತರ ಸರ್ವಸಂಸಾರ ವನ್ನೂ ವಿಮೋಚನಮಾಡುವ, ಅಲ್ಲಿ ಕಾಣುವ ಆಶ್ಚರ್ಯವನ್ನು ಕೇಳು.

೩೯. ಭದ್ರೇ, ಅಲ್ಲಿ ನಾಲ್ಕುದಿಕ್ಕುಗಳಲ್ಲೂ ನಾಲ್ಕು ಧಾರೆಗಳು ಬೀಳುತ್ತವೆಯಷ್ಟೆ. ಆದರೂ ಅಲ್ಲಿಯ ನೀರು ಹೆಚ್ಚುವುದೂ ಇಲ್ಲ. ಕುಂದುವುದೂ ಇಲ್ಲ.

೪೦. ಭಾದ್ರಪದಮಾಸದ ಶುಕ್ಲಪಕ್ಷದ್ವಾದಶಿಯದಿನ ಅಲ್ಲಿ ಕಿವಿಗಿನಿದಾಗಿ ಮನೋಹರವಾಗಿರುವ ಗಾನನಾದವು ಕೇಳಿಸುತ್ತದೆ.

೪೧. ಸೂರ್ಪಾರಕವೆಂಬ ಹೆಸರಿನ ರಹಸ್ಯವಾದ ಬೇರೊಂದು ನನ್ನ ಕ್ಷೇತ್ರವಿದೆ. ಅದು ಮುಂದೆ ಪರಶುರಾಮನ ಆಶ್ರಮವಾಗುವುದು.

ತತ್ರ ತಿಷ್ಠಾಮ್ಯಹಂ ದೇವಿ ಸಮುದ್ರತಟಮಾಶ್ರಿತಃ ।
ಶಾಲ್ಮಲೀಂಚಾಗ್ರತಃ ಕೃತ್ವಾಧಿಷ್ಠಿತಶ್ಚೋತ್ತರಾಮುಖಃ ॥ ೪೨ ॥

ತತ್ರ ಸ್ನಾನಂ ಪ್ರಕುರ್ವೀತ ಪಂಚಕಾಲೋಷಿತೋ ನರಃ ।
ಋಷಿಲೋಕಂ ತತೋ ಗತ್ವಾ ಪಶ್ಯೇತ್ತತ್ರಾಪ್ಯರುಂಧತೀಂ ॥ ೪೩ ॥

ಅಥ ಪ್ರಾಣಾನ್ ವಿಮುಂಚೇತ ಕೃತ್ವಾ ಕರ್ಮಸುದುಷ್ಕರಂ ।
ಋಷಿಲೋಕಂ ಪರಿತ್ಯಜ್ಯ ಮಮಲೋಕಂ ಪ್ರಪದ್ಯತೇ ॥ ೪೪ ॥

ತತ್ರಾಶ್ಚರ್ಯಂ ಮಹಾಭಾಗೇ ನಮಸ್ಕಾರಂ ಚ ಕುರ್ವತೇ ।
ವರ್ಷಾಣಿ ದ್ವಾದಶೈತೇನ ನಮಸ್ಕಾರಃ ಕೃತೋಭವೇತ್ ॥ ೪೫ ॥

ತಸ್ಮಿನ್‌ಕ್ಷೇತ್ರೇ ಮಹಾಭಾಗೇ ಪಶ್ಯಂತಿ ಪರಿನಿಷ್ಠಿತಾಃ ।
ಪಾಪಾತ್ಮಾನೋ ನ ಪಶ್ಯಂತಿ ಮಮ ಮಾಯಾವಿಮೋಹಿತಾಃ ॥ ೪೬ ॥

---

೪೨. ದೇವೀ, ಸಮುದ್ರದ ದಡದಲ್ಲಿ ಬೂರಗದ ಮರವನ್ನು ಎದುರಿಗಿರಿಸಿಕೊಂಡು ಉತ್ತರಾಭಿಮುಖನಾಗಿ ಅಲ್ಲಿ ನಾನಿರುವೆನು.

೪೩. ಅಲ್ಲಿ ಐದು ಜಾವಗಳ ಕಾಲವಿದ್ದು, ತೀರ್ಥಸ್ನಾನಮಾಡುವವನು ಬಳಿಕ ಋಷಿಲೋಕವನ್ನು ಸೇರಿ ಅಲ್ಲಿ ಅರುಂಧತಿಯನ್ನು ಸಂದರ್ಶಿಸುವನು.

೪೪. ದುಷ್ಕರವಾದ ಕರ್ಮಗಳನ್ನು ಮಾಡಿ ಅಲ್ಲಿ ಪ್ರಾಣಬಿಟ್ಟರೆ, ಋಷಿಲೋಕವನ್ನು ಪರಿತ್ಯಜಿಸಿ, ನನ್ನ ಲೋಕವನ್ನು ಸೇರುವನು.

೪೫. ಮಹಾಭಾಗ್ಯೇ, ಅಲ್ಲಿಯ ಆಶ್ಚರ್ಯವೇನೆಂದರೆ, ಅಲ್ಲಿ ಯಾರಾದರೂ ಒಂದುಸಾರಿ ನಮಸ್ಕಾರಮಾಡಿದರೆ ಅವರು ಹನ್ನೆರಡುವರ್ಷಕಾಲ ನಮಸ್ಕಾರ ಮಾಡಿದಂತೆ ಆಗುವುದು.

೪೬–೪೭ ಮಹಾಭಾಗ್ಯಶಾಲಿನೀ, ಇಪ್ಪತ್ತನಾಲ್ಕು ದ್ವಾದಶಿಯಲ್ಲಿಯೂ ಅಲ್ಲಿಗೆ ಬರುವ ಪರಿನಿಷ್ಠಿತರಾದ ಶುದ್ಧಭಾಗವತರು ಮಾತ್ರವೇ ಬೂರುಗದ

ಚತುರ್ವಿಂಶತಿದ್ವಾದಶ್ಯಾಂ ಸಮುಪಾಯಾಂತಿ ಶಾಲ್ಮಲೀಂ ।
ತತ್ರ ಪಶ್ಯಂತಿ ಸುಶ್ರೋಣಿ ಶುದ್ಧಾ ಭಾಗವತಾ ನರಾಃ ॥ ೪೭ ॥

ತಸ್ಮಿನ್‌ಕ್ಷೇತ್ರೇ ಮಹಾಭಾಗೇ ಅಸ್ತಿ ಗುಹ್ಯಂ ಪರಂ ಮಮ ।
ಜಟಾಕುಂಡಮಿತಿ ಖ್ಯಾತಂ ವಾಯವ್ಯಾಂ ದಿಶಿ ಸಂಸ್ಥಿತಂ ॥ ೪೮ ॥

ತತ್ಕುಂಡಸ್ಯ ಮಹಾಭಾಗೇ ಸಮಂತಾದ್ದಶಯೋಜನಂ ।
ಮಲಯಸ್ಯ ದಕ್ಷಿಣೇನ ಸಮುದ್ರಸ್ಯೋತ್ತರೇ ತಥಾ ॥ ೪೯ ॥

ತತ್ರ ಸ್ನಾನಂ ತು ಕುರ್ವೀತ ಪಂಚಕಾಲೋಷಿತೋ ನರಃ ।
ಅಗಸ್ತಿಭವನಂ ಗತ್ವಾ ಮೋದತೇ ನಾತ್ರ ಸಂಶಯಃ ॥ ೫೦ ॥

ಅಥ ಪ್ರಾಣಾನ್ ಪ್ರಮುಂಚೇತ ಮಮ ಚಿಂತಾಪರಾಯಣಃ ।
ಅಗಸ್ತಿಭವನಂ ತ್ಯಕ್ತ್ವಾ ಮಮ ಲೋಕಂತು ಗಚ್ಛತಿ ॥ ೫೧ ॥

ಮರವನ್ನು ಕಾಣುವರು. ಸುಂದರೀ, ನನ್ನ ಮಾಯೆಯಿಂದ ಮೋಹಿತರಾದ ಪಾಪಾತ್ಮರು ಅದನ್ನು ಕಾಣಲಾಗುವುದಿಲ್ಲ.

೪೮. ಮಹಾಭಾಗ್ಯೇ, ಆ ಕ್ಷೇತ್ರದಲ್ಲೇ ವಾಯುವ್ಯದಿಕ್ಕಿನಲ್ಲಿ ಜಟಾಕುಂಡವೆಂದು ಪ್ರಸಿದ್ಧವಾದ ರಹಸ್ಯವಾಗಿರುವ ಬೇರೊಂದು ನನ್ನ ತೀರ್ಥವಿದೆ.

೪೯. ಸುತ್ತಲೂ ಅದು ಹತ್ತುಯೋಜನದಳತೆಯುಳ್ಳದಾಗಿ, ಮಲಯ ಪರ್ವತಕ್ಕೆ ದಕ್ಷಿಣದಲ್ಲೂ, ಸಮುದ್ರಕ್ಕೆ ಉತ್ತರದಲ್ಲೂ ಇದೆ.

೫೦. ಐದುಜಾವಗಳಕಾಲ ಅಲ್ಲಿದ್ದು, ಸ್ನಾನಮಾಡುವವನು ಅಗಸ್ತಿಗೃಹವನ್ನು ಸೇರಿ, ಸಂತೋಷಪಡುವುದರಲ್ಲಿ ಸಂಶಯವಿಲ್ಲ.

೫೧. ನನ್ನ ಧ್ಯಾನಾಸಕ್ತನಾದವನು ಆ ತೀರ್ಥದಲ್ಲಿ ಪ್ರಾಣಬಿಟ್ಟರೆ, ಅಗಸ್ತಿಗೃಹಕ್ಕೆ ಹೋಗದೆ ನನ್ನ ಲೋಕವನ್ನು ಸೇರುವನು.

ತಸ್ಯ ಕುಂಡಸ್ಯ ಸುಶ್ರೋಣಿ ನವ ಧಾರಾ ನ ಕಿಂಚನ ।
ವಿಸ್ತಾರಶ್ಚ ಮಹಾಭಾಗೇ ಅಗಾಧಶ್ಚ ಮಹಾರ್ಣವಃ ॥ ೫೨ ॥

ಆಶ್ಚರ್ಯಂ ಸುಮಹತ್ತತ್ರ ಕಥ್ಯಮಾನಂ ಮಯಾ ಶೃಣು ।
ಯಚ್ಚ ಪಶ್ಯತಿ ಸುಶ್ರೋಣಿ ಸಮಂತಾದಿತರೋ ಜನಃ ॥ ೫೩ ॥

ಚತುರ್ವಿಂಶತಿದ್ವಾದಶ್ಯಾಂ ರವಾವಭ್ಯುದಿತೇ ಸತಿ ।
ನ ವರ್ಧತೇ ತತಶ್ಚಾಂಭೋ ಯಾವತ್ತಿಷ್ಠತಿ ತತ್ಪುನಃ ॥ ೫೪ ॥

ಏತತ್ತೇ ಕಥಿತಂ ಭದ್ರೇ ಸಾನಂದೂರೇತಿ ತನ್ಮಯಾ ।
ಆಶ್ಚರ್ಯಂ ಚ ಪ್ರಮಾಣಂ ಚ ಭಕ್ತಿಕೀರ್ತಿವಿವರ್ಧನಂ ॥ ೫೫ ॥

ಗುಹ್ಯಾನಾಂ ಪರಮಂ ಗುಹ್ಯಂ ಸ್ಥಾನಾನಾಂ ಪರಮಂ ಮಹತ್ ॥ ೫೬ ॥

ಯಸ್ತು ಗಚ್ಛತಿ ಸುಶ್ರೋಣಿ ಅಷ್ಟಭಕ್ತಪಥೇ ಸ್ಥಿತಃ ।
ಪ್ರಾಪ್ನೋತಿ ಪರಮಾಂ ಸಿದ್ಧಿಂ ಮನ್ಮೈವ ವಚನಂ ಯಥಾ ॥ ೫೭ ॥

---

೫೨. ಸುಶ್ರೋಣಿ, ಮಹಾಭಾಗ್ಯೇ, ಆ ಕುಂಡಕ್ಕೆ ಒಂಬತ್ತು ಧಾರೆಗಳು ಬೀಳುವುವೇ ಹೊರತು ಬೇರಾವ ಪ್ರವಾಹವೂ ಇಲ್ಲ. ಅದರೂ ಅದು ವಿಸ್ತಾರವೂ ಆಳವೂ ಆದ ದೊಡ್ಡ ಸಮುದ್ರವಾಗಿದೆ.

೫೩–೫೪. ಸುಂದರೀ, ನಾನು ಹೇಳುವ ಅಲ್ಲಿಯ ಅತ್ಯಾಶ್ಚರ್ಯವನ್ನು ಕೇಳು. ಅದನ್ನು ಇತರರೂ ಆ ಕುಂಡದ ಸುತ್ತಲೂ ನೋಡುವರು. ಇಪ್ಪತ್ತನಾಲ್ಕು ದ್ವಾದಶಿಗಳಲ್ಲೂ ಸೂರ್ಯೋದಯವಾಗಲಾಗಿ ಅದರಲ್ಲಿ ನೀರು ಎಷ್ಟಿದ್ದಿತೋ ಅಷ್ಟೇ ಇರುವುದೇ ಹೊರತು ಮತ್ತೆ ಹೆಚ್ಚುವುದಿಲ್ಲ.

೫೫. ಭದ್ರೇ, ಆಶ್ಚರ್ಯವೂ, ಸತ್ಯವೂ, ಭಕ್ತಿಕೀರ್ತಿವಿವರ್ಧಕವೂ ಆದ ಸಾನಂದೂರ ಕ್ಷೇತ್ರದ ಈ ವಿಚಾರವನ್ನು ನಿನಗೆ ಹೇಳಿದುದಾಯಿತು.

೫೬. ಆ ಕ್ಷೇತ್ರವು ರಹಸ್ಯವಾದುವುಗಳಲ್ಲಿ ಪರಮರಹಸ್ಯವಾದುದೂ, ಸ್ಥಾನಗಳಲ್ಲಿ ಅತಿಶ್ರೇಷ್ಠವಾದ ಸ್ಥಾನವೂ ಆಗಿದೆ.

೫೭. ಸುಂದರೀ, ಎಂಟನೆಯ ಒಂದುಭಾಗ ಆಹಾರವನ್ನು ಮಾತ್ರ ಸೇವಿಸುತ್ತ ಆ ಕ್ಷೇತ್ರಕ್ಕೆ ಹೋಗುವವನು ನನ್ನ ವಚನದಂತೆ ಪರಮ ಸಿದ್ಧಿಯನ್ನು ಪಡೆಯುವನು.

ಯ ಏತತ್ಪಠತೇ ನಿತ್ಯಂ ಯಶ್ಚೈವಂ ಶೃಣುಯಾನ್ಮುದಾ ।
ಕುಲಾನಿ ತೇನ ತೀರ್ಣಾನಿ ಷಟ್ ಚ ಷಟ್ ಚ ಪುನಶ್ಚ ಷಟ್ ॥ ೫೮ ॥

ಏತನ್ಮರಣಕಾಲೇ ನ ವಿಸ್ಮರ್ತವ್ಯಂ ಕದಾಚನ ।
ಯದೀಚ್ಛೇದ್ವಿಷ್ಣುಲೋಕೇ ಹಿ ನಿಷ್ಕಲಂಗಮನಂ ನರಃ ॥ ೫೯ ॥

ಏತತ್ತೇ ಕಥಿತಂ ಭದ್ರೇ ತ್ವಯಾ ಪೃಷ್ಟಂ ಚ ಮಾಂ ಪ್ರತಿ ।
ಉಕ್ತಂ ಭಾಗವತಾರ್ಥಾಯ ಕಿಮನ್ಯತ್ಪರಿಪೃಚ್ಛಸಿ ॥ ೬೦ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸಾನಂದೂರ ಮಾಹಾತ್ಮ್ಯಂ
ನಾಮ ಪಂಚಾಶದಧಿಕಶತತಮೋಧ್ಯಾಯಃ

---

೫೮. ಈ ಮಹಿಮೆಯನ್ನು ನಿತ್ಯವೂ ಸಂತೋಷದಿಂದ ಹೇಳುವವನೂ, ಕೇಳುವವನೂ ತನ್ನ ಹದಿನೆಂಟು ಕುಲವನ್ನು ಉತ್ತಾರಣ ಮಾಡುವನು.

೫೯ ಮನುಷ್ಯನು ವಿಷ್ಣುಲೋಕದಲ್ಲಿ ತನಗೆ ತಡೆಯಿಲ್ಲದ ಗಮನವನ್ನು ಬಯಸುವುದಾದರೆ ಇದನ್ನು ಮರಣಕಾಲದಲ್ಲಿಯೂ ಮರೆಯಬಾರದು.

೬೦. ಭದ್ರೇ, ಭಗವದ್ಭಕ್ತರ ಪ್ರಯೋಜನಾರ್ಥವಾಗಿ ನೀನು ನನ್ನನ್ನು ಪ್ರಾರ್ಥಿಸಿದ ಈ ವಿಚಾರವನ್ನು ನಿನಗೆ ಹೇಳಿದುದಾಯಿತು. ಬೇರೆ ಏನನ್ನು ಕೇಳುವೆ ?

ಅಧ್ಯಾಯದ ಸಾರಾಂಶ—

ಪ್ರಾರ್ಥಿಸಿದ ಭೂದೇವಿಗೆ ಶ್ರೀವರಾಹದೇವನು ಮಲಯಪರ್ವತಕ್ಕೆ ದಕ್ಷಿಣದಲ್ಲಿ ದಕ್ಷಿಣಸಮುದ್ರಕ್ಕೆ ಸಮೀಪದಲ್ಲಿರುವ 'ಸಾನಂದೂರ' ಎಂಬ ಕ್ಷೇತ್ರದ ಮಹಿಮೆಯನ್ನು ವಿವರಿಸುವವನಾಗಿ, ರಾಮಸರೋವರ, ಸಂಗಮನ, ಶಕ್ರಸರೋವರ, ಸೂರ್ಪಾರಕ, ಜಟಾಕುಂಡ ಎಂಬ ಹೆಸರಿನ ಅಲ್ಲಿರುವ ತೀರ್ಥಗಳ ವಿಚಾರವನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತನೆಯ ಅಧ್ಯಾಯ.

॥ ಶ್ರೀಃ ॥

ಏಕಪಂಚಾಶದಧಿಕಶತತಮೋಽಧ್ಯಾಯಃ

ಅಥ ಲೋಹಾರ್ಗಲಮಾಹಾತ್ಮ್ಯಂ

॥ ಸೂತ ಉವಾಚ ॥

ಸಾನಂದೂರಸ್ಯ ಮಾಹಾತ್ಮ್ಯಂ ಏತಚ್ಛ್ರುತ್ವಾ ವಸುಂಧರಾ ।
ಕೃತಾಂಜಲಿಪುಟಾ ಭೂತ್ವಾ ವರಾಹಂ ಪುನರಬ್ರವೀತ್ ॥ ೧ ॥

॥ ಧರಣ್ಯುವಾಚ ॥

ಶ್ರುತಮೇತಜ್ಜಗನ್ನಾಥ ವಿಷ್ಣೋ ಗುಹ್ಯಮನುತ್ತಮಂ ।
ಯಚ್ಛ್ರುತ್ವಾ ಸುಮಹಾಭಾಗ ಜಾತಾಸ್ಮಿ ವಿಗತಜ್ವರಾ ॥ ೨ ॥

ನೂರ ಐವತ್ತೊಂದನೆಯ ಅಧ್ಯಾಯ

ಲೋಹಾರ್ಗಲಕ್ಷೇತ್ರಮಹಿಮೆ.

೧. ಸೂತಮುನಿ–ಭೂದೇವಿ ಈ ಸಾನಂದೂರಕ್ಷೇತ್ರ ಮಹಿಮೆಯನ್ನು ಕೇಳಿ, ಕೈಮುಗಿದುಕೊಂಡು ಆ ಶ್ರೀವರಾಹನಿಗೆ ಮತ್ತೆ ಮುಂದಿನಂತೆ ಹೇಳಿದಳು.

೨. ಭೂದೇವಿ—ಜಗನ್ನಾಥಾ, ವಿಷ್ಣುವೇ, ಅತ್ಯುತ್ತಮವಾದ ಈ ರಹಸ್ಯವನ್ನು ಕೇಳಿದುದಾಯಿತು. ಪೂಜ್ಯನೇ, ಇದನ್ನು ಕೇಳಿ ತಾಪರಹಿತಳಾಗಿದ್ದೇನೆ.

ಅಪರಂ ನಾಸ್ತಿ ಚೇತ್ಕಿಂಚಿದ್ಗುಹ್ಯಂ ಕ್ಷೇತ್ರಂ ಶುಭಾವಹಂ |
ಸಾನಂದುರಾತ್ಪರಂ ಗುಹ್ಯಂ ಕ್ಷೇತ್ರಮಸ್ತಿ ನ ವಾ ಪರಂ || ೩ ||

ಸುರಶರಣ ನೃಸಿಂಹ ಲೋಕನಾಥ
ಯುತಸಸುರಾಸುರಧೀರದೇವವೀರ |
ಕಮಲದಲ ಸಹಸ್ರನೇತ್ರರೂಪೋ
ಜಯತಿ ಕೃತಾಂತಸಮಾನಕಾಲರೂಪಃ || ४ ||

ಗದ್ಗದಂ ವಚನಂ ಶ್ರುತ್ವಾ ಪೃಥಿವ್ಯಾಃ ಸ ಜನಾರ್ದನಃ |
ಉವಾಚ ಮಧುರಂ ವಾಕ್ಯಂ ಸರ್ವಲೋಕಾರ್ತಿಹಾ ಹರಿಃ || ೫ ||

|| ಶ್ರೀವರಾಹ ಉವಾಚ ||
ಶೃಣು ದೇವಿ ಚ ತತ್ವೇನ ಯನ್ಮಾಂ ತ್ವಂ ಪರಿಪೃಚ್ಛಸಿ |
ಗುಹ್ಯಮನ್ಯತ್ ಪ್ರವಕ್ಷ್ಯಾಮಿ ಮದ್ವತಃ ಕರ್ಮಣೋಜನಿಃ || ೬ ||

---

೩. ಬೇರೆ ಯಾವುದಾದರೊಂದು ರಹಸ್ಯವೂ, ಶುಭಕರವೂ ಆದ ಕ್ಷೇತ್ರವು ಇರಬಹುದಾದರೂ ಸಾನಂದೂರಕ್ಕಿಂತಲೂ ಉತ್ತಮವಾದ ರಹಸ್ಯಕ್ಷೇತ್ರವು ಬೇರೆ ಇದೆಯೋ ಇಲ್ಲವೋ ? !

४. ದೇವತೆಗಳ ಮುಖ್ಯಸಾಧಕನೇ, ನರಸಿಂಹನೇ, ಲೋಕನಾಥನೇ, ಉಪೇಂದ್ರನೇ, ಅಸುರಜಯಧೀರಾ, ದೇವವೀರಾ, ಸಹಸ್ರದಳ ಕಮಲ ಸದೃಶ ನೇತ್ರನೂ, ಯಮನ ವರ್ಣಕ್ಕೆ ಸಮಾನವಾದ ನೀಲವರ್ಣವುಳ್ಳವನೂ ಆದ ನೀನು ಜಯಶೀಲನಾಗಿರುವೆ.

೫. ಭೂದೇವಿಯ ಈ ಗದ್ಗದವಚನವನ್ನು ಕೇಳಿ, ಸರ್ವಲೋಕಾರ್ತಿ ಹರನೂ, ಜನಾರ್ದನನೂ ಆದ ಆ ಹರಿ ಆಕೆಗೆ ಇಂಪಾಗಿರುವ ಮಾತನಾಡಿದನು.

೬. ಶ್ರೀವರಾಹ—ದೇವೀ, ನೀನು ನನ್ನಲ್ಲಿ ಪ್ರಶ್ನಿಸುವ ಬೇರೆಯ ರಹಸ್ಯವನ್ನು ನಿಜವಾಗಿ ಹೇಳುತ್ತೇನೆ. ಕೇಳು. ನನ್ನಂತಹವನಿಗೂ ಕರ್ಮಾರ್ಥ ವಾಗಿ ಅವತಾರ.

ತತಃ ಸಿದ್ಧವಟೇ ಗತ್ವಾ ತ್ರಿಂಶದ್ಯೋಜನದೂರತಃ |
ಮ್ಲೇಚ್ಛಮಧ್ಯೇ ವರಾರೋಹೇ ಹಿಮವಂತಂ ಸಮಾಶ್ರಿತೇ |
ತತ್ರ ಲೋಹಾರ್ಗಲೇ ಕ್ಷೇತ್ರೇ ನಿವಾಸೋ ವಿಹಿತಃ ಶುಭಃ || ೭ ||

ಗುಹ್ಯಂ ಪಂಚದಶಾಯಾಮಂ ಸಮಂತಾತ್ಪಂಚ ಯೋಜನಂ |
ದುರ್ಗಮಂ ದುಸ್ಸಹಂಚೈವ ಪಾಪೈಃ ಸರ್ವತ್ರ ವೇಷ್ಟಿತಂ || ೮ ||

ಸುಲಭಂ ಪುಣ್ಯಯುಕ್ತಾನಾಂ ಮಮ ಚಿಂತಾನುಸಾರಿಣಾಂ || ೯ ||

ತತ್ರ ತಿಷ್ಠಾಮ್ಯಹಂ ಭದ್ರೇ ಉದೀಚೀಂ ದಿಶಮಾಶ್ರಿತಃ |
ಹಿರಣ್ಯಪ್ರತಿಮಾಂ ಕೃತ್ವಾ ಜಾತರೂಪಾಂ ನ ಸಂಶಯಃ || ೧೦ ||

ತತೋ ಮೇ ದಾನವಾಃ ಸರ್ವೇ ಕ್ರಮಂತಂ ಲೋಕಮುತ್ತಮಂ |
ಮಯಾ ಚೈವಾಂತರಂಕೃತ್ವಾ ಕೃತ್ವಾ ಮಾಯಾಂ ಚ ವೈಷ್ಣವೀಂ || ೧೧ ||

---

೭. ವರಾರೋಹೇ, ನಾನು ಮೂವತ್ತುಯೋಜನ ದೂರದಿಂದ ಮ್ಲೇಚ್ಛದೇಶದ ಮಧ್ಯದಲ್ಲಿ ಹಿಮವತ್ಪರ್ವತದಲ್ಲಿರುವ ಸಿದ್ಧವಟದ ಸಮೀಪಕ್ಕೆ ಹೋಗಿ, ಅಲ್ಲಿ ಲೋಹಾರ್ಗಲಕ್ಷೇತ್ರದಲ್ಲಿ ಶುಭವಾದ ನಿವಾಸವನ್ನು ಮಾಡಿದೆನು.

೮–೯. ಆ ಕ್ಷೇತ್ರವು ರಹಸ್ಯವಾಗಿ ಹದಿನೈದು ಹರಿದಾರಿ ಅಥವಾ ಐದುಯೋಜನ ಉದ್ದವೂ, ಐದುಯೋಜನ ಅಗಲವೂ, ಉಳ್ಳದಾಗಿ. ದುರ್ಗಮವೂ, ಪಾಪಿಗಳಿಂದ ಸುತ್ತಲೂ ಆವೃತವಾಗಿರುವುದರಿಂದ ದುಸ್ಸಹವೂ ಆಗಿದೆ. ಆದರೆ ನನ್ನ ಧ್ಯಾನಾಸಕ್ತರಾದ ಪುಣ್ಯಶಾಲಿಗಳಿಗೆ ಆ ಕ್ಷೇತ್ರವು ಸುಲಭವಾದುದು.

೧೦. ಭದ್ರೇ, ಆ ಕ್ಷೇತ್ರದಲ್ಲಿ ನಾನು ಸುವರ್ಣಮಯಮೂರ್ತಿಯಾಗಿ, ಉತ್ತರದಿಕ್ಕಿಗೆ ಅಭಿಮುಖನಾಗಿ ನೆಲೆಸಿರುವೆನು. ಸಂಶಯವಿಲ್ಲ.

೧೧–೧೩. ದಾನವರೆಲ್ಲರೂ ನನ್ನ ಸ್ವರ್ಗಾದಿ ಉತ್ತಮಲೋಕವನ್ನು ಮುತ್ತಿದರು. ನಾನು ವೈಷ್ಣವಮಾಯೆಯನ್ನು ತೆರೆಯಾಗಿ ನಡುವೆ ಇಟ್ಟು, ಆ

ತತ್ರ ಬ್ರಹ್ಮಾ ಚ ರುದ್ರಶ್ಚ ಸ್ಕಂದೇಂದ್ರೌ ಸಮರುದ್ಗಣಾಃ ।
ಆದಿತ್ಯಾವಸವೋ ವಾಯುರಶ್ವಿನೌ ಚ ಮಹೌಜಸೌ ॥ ೧೨ ॥

ಸೋಮೋ ಬೃಹಸ್ಪತಿಶ್ಚೈವ ಯೇ ಚಾನ್ಯೇ ವೈ ದಿವೌಕಸಃ ।
ತೇಷಾಂ ಚೈವಾರ್ಗಲಂ ದತ್ವಾ ಚಕ್ರಂ ಗೃಹ್ಯ ಮಹೌಜಸಂ ॥
ಶತಕೋಟಿ ಸಹಸ್ರಾಣಿ ಶೀಘ್ರಮೇವ ನಿಪಾತಿತಂ ॥ ೧೩ ॥

ತತಶ್ಚ ದೇವತಾಃ ಸರ್ವಾಸ್ತುಷ್ಯಮಾಣಾ ಇತಸ್ತತಃ ।
ಏವಂ ಲೋಹಾರ್ಗಲಂ ನಾಮ ಕ್ಷೇತ್ರಂ ಚೈವ ಮಯಾಕೃತಂ ॥ ೧೪ ॥

ತತೋ ದೇವಾಸುರೇ ಯುದ್ಧೇ ಹತ್ವಾ ತ್ರಿದಶಕಂಟಕಾನ್ ।
ತೇಷಾಂ ಸಂಸ್ಥಾಪನಂ ತತ್ರ ಕೃತಂ ಚೈವ ಮಹೌಜಸಾಂ ॥ ೧೫ ॥

ಯೋ ಮಾಂ ಪಶ್ಯತಿ ತತ್ರಸ್ಥಂ ಪ್ರಯತ್ನೇನ ಕದಾಚನ ।
ಸೋಽಪಿ ಭಾಗವತೋ ಭೂಮೇ ಭವತ್ಯೇವ ಸುನಿಶ್ಚಿತಃ ॥ ೧೬ ॥

ಕ್ಷೇತ್ರದಲ್ಲಿ ಬ್ರಹ್ಮರುದ್ರಸ್ಕಂದೇಂದ್ರರನ್ನೂ, ಮರುದ್ಗಣದೊಡಗೂಡಿದ ಆದಿತ್ಯರನ್ನೂ, ಹಸುಗಳನ್ನೂ, ವಾಯುವನ್ನೂ, ಮಹೌಜಸರಾದ ಅಶ್ವಿನೀದೇವತೆಗಳನ್ನೂ, ಚಂದ್ರಬೃಹಸ್ಪತಿಗಳನ್ನೂ, ಇತರ ಎಲ್ಲಾ ಸ್ವರ್ಗವಾಸಿಗಳನ್ನೂ ನಿಲ್ಲಿಸಿ, ಅವರಿಗೆ ಅಗುಳಿಯನ್ನು ಕೊಟ್ಟು, ಅತಿತೇಜೋಬಲಗಳುಳ್ಳ ಚಕ್ರವನ್ನು ಹಿಡಿದುಕೊಂಡು, ನೂರುಕೋಟಿ ಸಹಸ್ರರಾಕ್ಷಸರನ್ನು ಶೀಘ್ರದಲ್ಲೇ ಕೊಂದು ಕೆಡವಿದೆನು.

೧೪. ಬಳಿಕ ದೇವತೆಗಳೆಲ್ಲರೂ ಸಂತೋಷಪಡುತ್ತಾ ಅತ್ತಿತ್ತ ಹೊರಟರು ಹೀಗೆ ಲೋಹಾರ್ಗಲವೆಂಬ ಹೆಸರ ಕ್ಷೇತ್ರವೂ ನನ್ನಿಂದಾಯಿತು.

೧೫ ಅನಂತರ ದೇವಾಸುರಯುದ್ಧದಲ್ಲಿ ದೇವಕಂಟಕರಾದ ರಾಕ್ಷಸರನ್ನು ಕೊಂದು ಮಹೌಜಸರಾದ ಆ ದೇವತೆಗಳನ್ನೂ ಅವರ ಸ್ಥಾನದಲ್ಲಿ ನಿಲ್ಲಿಸಿದೆನು.

೧೬. ಭೂಮೀ, ಲೋಹಾರ್ಗಲಕ್ಷೇತ್ರದಲ್ಲಿರುವ ನನ್ನನ್ನು ಪ್ರಯತ್ನಪೂರ್ವಕವಾಗಿ ಯಾವಾಗಲಾದರೂ ನೋಡುವವನೂ ಬಹು ನಿಷ್ಠನಾದ ಭಾಗವತನೇ ಆಗುವನು.

ತಸ್ಮಿನ್ ಕುಂಡೇತು ಸುಶ್ರೋಣಿ ಯಃ ಸ್ನಾತಿ ನಿಯತೋ ನರಃ ।
ಉಪೋಷ್ಯಚ ತ್ರಿರಾತ್ರಂತು ನಿಧಿದೃಷ್ಟೇನ ಕರ್ಮಣಾ ॥ ೧೭ ॥

ತತಃ ಸ್ವರ್ಗಸಹಸ್ರೇಷು ಮೋದತೇ ನಾತ್ರಸಂಶಯಃ ॥ ೧೮ ॥

ಅಥಾತ್ರ ಮುಂಚತಿ ಪ್ರಾಣಾನ್ ಸ್ವಕರ್ಮಪರಿನಿಷ್ಠಿತಃ ।
ಸರ್ವಾನ್ ಸ್ವರ್ಗಾನ್ ಪರಿತ್ಯಜ್ಯ ಮಮ ಲೋಕಂ ಪ್ರಪದ್ಯತೇ ॥ ೧೯ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಯತ್ರ ತತ್ಪರಮಾದ್ಭುತಂ ।
ಲೋಕವಿಸ್ಮಾಪನಾರ್ಥಾಯ ಮಯಾ ತತ್ರ ಚ ಯತ್ಕೃತಂ ॥ ೨೦ ॥

ಚತುರ್ವಿಂಶತಿ ದ್ವಾದಶ್ಯಾಂ ಮಾಸೇನ ವಿಧಿನಾ ಮಮ ।
ಬಲಿಃ ಪ್ರದೀಯತೇ ತತ್ರ ಸರ್ವಕಾಮವಿಶೋಧನಃ ॥ ೨೧ ॥

ಅಶ್ವೋನೌ ಕಲ್ಪಿತಸ್ತತ್ರ ಸರ್ವರತ್ನವಿಭೂಷಿತಃ ।
ಶ್ವೇತಃ ಕುಮುದವರ್ಣಾಭಃ ಶಂಖಕುಂದಸಮಪ್ರಭಃ ॥ ೨೨ ॥

೧೭-೧೮. ಸುಂದರಿ, ವಿಧಿಯಲ್ಲಿ ಹೇಳಿರುವಂತೆ ಮೂರುರಾತ್ರಿ ಉಪವಾಸ ಮಾಡಿದ್ದು, ಅಲ್ಲಿರುವ ಕುಂಡದಲ್ಲಿ ಸ್ನಾನಮಾಡುವ ಪ್ರತಿಯು ಬಳಿಕ ಸಹಸ್ರಸ್ವರ್ಗಗಳಲ್ಲಿ ಆನಂದಪಡುವುದರಲ್ಲಿ ಸಂಶಯವಿಲ್ಲ.

೧೯. ಸರ್ವಕರ್ಮಗಳಲ್ಲೂ ಸ್ಥಿರನಾಗಿದ್ದು, ಅಲ್ಲಿ ಪ್ರಾಣಬಿಟ್ಟರೆ, ಸರ್ವ ಸ್ವರ್ಗಗಳನ್ನೂ ತ್ಯಜಿಸಿ, ನನ್ನ ಲೋಕವನ್ನು ಸೇರುವನು.

೨೦. ಲೋಕವನ್ನು ವಿಸ್ಮಯಗೊಳಿಸುವುದಕ್ಕಾಗಿ ಅಲ್ಲಿ ನಾನು ಮಾಡಿದ ಅತ್ಯಾಶ್ಚರ್ಯವನ್ನೂ ನಿನಗೆ ಹೇಳುತ್ತೇನೆ.

೨೧. ಇಪ್ಪತ್ತನಾಲ್ಕು ದ್ವಾದಶಿಯಲ್ಲೂ ಅಲ್ಲಿ ನನಗೆ ಮಾಸವಿಧಿಯಿಂದ ಸರ್ವೇಷ್ಟಗಳನ್ನೂ ಪೂರ್ಣಗೊಳಿಸುವ ಪೂಜೆಯು ನಡೆಯುತ್ತದೆ.

೨೨. ಅಲ್ಲಿ ನಾನು ಸರ್ವರತ್ನಾಲಂಕೃತವೂ, ಬೆಳ್ನೈದಿಲೆ ಶಂಖ ಕೋಲುಮಲ್ಲಿಗೆಗಳಂತೆ ಕಾಂತಿಯುಳ್ಳದೂ ಆದ ಬಿಳಿಯ ಕುದುರೆಯನ್ನು ಕಲ್ಪಿಸಿದೆನು.

ಮಾರ್ಗಣಾ ಮೇ ಧನುಸ್ತತ್ರ ಅಕ್ಷಸೂತ್ರಂ ಕಮಂಡಲುಃ ।
ಆಸನಂ ವಿತತಂ ದಿವ್ಯಂ ದೀಯತೇಶ್ವೋಪರಿಸ್ಥಿರಂ ॥ ೨೩ ॥

ಶ್ವೇತಪರ್ವತಮಾರುಹ್ಯ ಪತಮಾನಃ ಕುರೂನ್ ಬಹೂನ್ ॥ ೨೪ ॥

ಪತಿತಸ್ತತ್ರ ದೃಶ್ಯೇತ ಕ್ಷತಂ ತತ್ರ ನ ದೃಶ್ಯತೇ ।
ಅನೇಕಾನ್ಯೇವರೂಪಾಣಿ ಪಾತಯಿತ್ವಾ ನಭಸ್ತಲಾತ್ ॥
ಶಾಂತೋ ದಾಂತಃ ಪರಿಕ್ಲಿಷ್ಟಃ ಸ ಚಾಶ್ವೋ ದಿವಿ ವರ್ತತೇ ॥ ೨೫ ॥

॥ ಸೂತ ಉವಾಚ ॥

ತತೋ ಭೂಮ್ಯಾ ವಚಃ ಶ್ರುತ್ವಾ ಬ್ರಹ್ಮಪುತ್ರೋ ಮಹಾಮುನಿಃ ।
ವಿಸ್ಮಯಂ ಪರಮಂ ಪ್ರಾಪ್ತೋ ವಿಷ್ಣುಮಾಯೋಪಬೃಂಹಿತಃ ॥ ೨೬ ॥

ತತಃ ಸ ವಿಸ್ಮಯಾವಿಷ್ಟೋ ಬ್ರಹ್ಮಪುತ್ರೋ ಮಹಾಮತಿಃ ।
ಸನತ್ಕುಮಾರೋ ಭಗವಾನ್ ಪುನರೇವಮಭಾಷತ ॥ ೨೭ ॥

೨೩–೨೪. ನನ್ನ ಬಿಲ್ಲುಬಾಣಗಳೂ, ಜಪಮಾಲಾಕಮಂಡಲುಗಳೂ, ವಿಸ್ತಾರವಾದ ದಿವ್ಯಾಸನವೂ ಆ ಕುದುರೆಯ ಮೇಲೆ ಸ್ಥಿರವಾಗಿದ್ದುವು ನಾನು ಆ ಕುದುರೆಯಮೇಲೆ ಶ್ವೇತಪರ್ವತವನ್ನೇರಿ ಬಹಳವಾಗಿದ್ದ ಕುರುಗಳಮೇಲೆ ಬೀಳುಪನಾದೆನು.

೨೫. ಅಲ್ಲಿ ನನ್ನ ಏಟಿನಿಂದ ಬಿದ್ದವನು ಮಾತ್ರ ಕಾಣಿಸುತ್ತಿದ್ದನೇ ಹೊರತು ಗಾಯವು ಕಾಣಿಸುತ್ತಿರಲಿಲ್ಲ. ಆ ಕುದುರೆಯು ಅನೇಕವ್ಯಕ್ತಿಗಳನ್ನು ಆಕಾಶದಿಂದ ಬೀಳಿಸಿ, ಶಾಂತವೂ, ದಾಂತವೂ, ಬಹು ಆಯಾಸವುಳ್ಳದೂ ಆಗಿ ಸ್ವರ್ಗದಲ್ಲಿ ನೆಲಸಿತು.

೨೬–೨೭. ಸೂತಮುನಿ—ಬಳಿಕ ಭೂದೇವಿಯ ಮಾತನ್ನು ಕೇಳಿ, ಬ್ರಹ್ಮಪುತ್ರನೂ, ಪೂಜ್ಯನೂ ಆದ ಸನತ್ಕುಮಾರ ಮಹಾಮುನಿಯು ಪರಮಾಶ್ಚರ್ಯಗೊಂಡು ವಿಷ್ಣುಮಾಯೆಯಿಂದ ಉಬ್ಬಿದವನಾಗಿ ಮತ್ತೆ ಮುಂದಿರುವಂತೆ ಮಾತನಾಡಿದನು.

॥ ಸನತ್ಕುಮಾರ ಉವಾಚ॥

ಧನ್ಯಾಸಿ ದೇವಿ ಸುಶ್ರೋಣಿ ಸು ಪುಣ್ಯಾಸಿ ವರಾನನೇ ।
ದೇವಿ ಯಲ್ಲೋಕನಾಥಸ್ಯ ಸಾಕ್ಷಾದ್ದರ್ಶನಮಾಗತಾ ॥ ೨೮ ॥

ಪದ್ಮಪತ್ರವಿಶಾಲಾಕ್ಷೋ ಯತ್ತ್ವಯಾ ಪರಿಭಾಷಿತಃ ।
ತೇನೋಕ್ತಂ ಶಂಸ ಸಕಲಂ ಸರ್ವೇಷಾಂ ಸುಖವರ್ಧನಂ ॥ ೨೯ ॥

ಯಥಾ ಯಥಾ ವದಸಿ ಚ ಧರ್ಮಸಂಹಿತಂ
ಗುಹ್ಯಂ ಪರಂ ದೇವವರಪ್ರಣೀತಂ ।
ಗುಣೋತ್ತಮಂ ಕಾರಣಸಂಪ್ರಯುಕ್ತಂ
ತಥಾ ತಥಾ ಭಾವಯಸೀಮನೋಮಮ ॥ ೩೦ ॥

ತತಃ ಸ ಪುಂಡರೀಕಾಕ್ಷಃ ಕಿಮಾಜಷ್ಟ ತತಃ ಪರಂ ।
ಕರ್ಮಣಾ ವಿಧಿದೃಷ್ಟೇನ ಸರ್ವಭಾಗವತಪ್ರಿಯಃ ॥ ೩೧ ॥

---

೨೮. ಸನತ್ಕುಮಾರಮುನಿ—ದೇವಿ, ಸುಶ್ರೋಣೀ, ಸುಂದರಮುಖೀ, ನೀನು ಲೋಕನಾಥನ ಪ್ರತ್ಯಕ್ಷದರ್ಶನವನ್ನು ಪಡೆದುದರಿಂದ ಧನ್ಯಳಾಗಿರುವೆ.

೨೯. ಕಮಲದಳದಂತೆ ವಿಶಾಲವಾದ ನೇತ್ರವುಳ್ಳ ಆತನೊಡನೆ ನೀನು ಮಾತನಾಡಿದುದೇನು ? ಆತನು ಹೇಳಿದ, ಸರ್ವರಿಗೂ ಸುಖವರ್ಧಕವಾದ ವಿಚಾರವೆಲ್ಲವನ್ನೂ ಹೇಳು.

೩೦. ಆ ದೇವೋತ್ತಮನು ಹೇಳಿದ ಧರ್ಮಯುಕ್ತವೂ, ಪರಮರಹಸ್ಯವೂ ಗುಣಗಳಿಂದ ಉತ್ತಮವೂ, ಸಕಾರಣವೂ ಆದ ವಿಚಾರವನ್ನು ನೀನು ನನಗೆ ಹೇಳುತ್ತ ಹೇಳುತ್ತ ನನ್ನ ಮನಸ್ಸನ್ನು ಹೆಚ್ಚು ಹೆಚ್ಚಾಗಿ ಸಂತೋಷ ಪಡಿಸುತ್ತೀಯೆ.

೩೧. ಬೆಳ್ದಾವರೆಗಣ್ಣಿನವನೂ, ಸರ್ವಭಾಗವತಪ್ರಿಯನೂ ಆದ ಆತನು ವಿಧ್ಯುಕ್ತವಾದ ಕರ್ಮದಲ್ಲಿ ಏನು ಹೇಳಿದನು ?

॥ ಸೂತ ಉವಾಚ ॥

ತಸ್ಯ ತದ್ವಚನಂ ಶ್ರುತ್ವಾ ಕುಮಾರಸ್ಯ ಮಹೌಜಸಃ ।
ಉವಾಚ ಮಧುರಂ ವಾಕ್ಯಮಾಭಾಷ್ಯ ಬ್ರಹ್ಮಣಃ ಸುತಂ ॥ ೩೨ ॥

ಶೃಣುವತ್ಸ ಜಗನ್ನಾಥೋ ಯಥಾ ಮಾಮಾಹ ಚೋದಿತಃ ॥ ೩೩ ॥

॥ ಶ್ರೀವರಾಹ ಉವಾಚ ॥

ಏವಂ ತತ್ರೈವ ಕರ್ಮಾಣಿ ಕ್ರಿಯಂತೇ ವಿಧಿಪೂರ್ವಕಂ ।
ಶೋಧಕಾನಿ ಚ ಪಾಪಾನಾಂ ಮೃದೂನಿ ಚ ಶುಭಾನಿ ಚ ॥ ೩೪ ॥

ಅಶ್ವಾನಾಂ ತತ್ಕುಲೀನಾನಾಮಾವಹಂತಿ ಸುಮಧ್ಯಮೇ ।
ನಾನ್ಯಂ ವಹಂತಿತೇಚಾಶ್ವಾ ಮಮ ವಾಹಾ ದುರತ್ಯಯಾಃ ॥ ೩೫ ॥

೩೨-೩೩. ಭೂದೇವಿ ಮಹೌಜಸನಾದ ಆ ಕುಮಾರನ ಆಮಾತನು ಕೇಳಿ, ಇಂಪಾದ ಮಾತನಾಡಿ, ಬ್ರಹ್ಮಪುತ್ರನಾದ ಆತನಿಗೆ, "ಮಗೂ, ಪ್ರಾರ್ಥಿತನಾದ ಆ ಜಗನ್ನಾಥನು ನನಗೆ ಏನು ಹೇಳಿದನೆಂಬುದನ್ನು ಕೇಳು" ಎಂದಳು.

೩೪. ಶ್ರೀವರಾಹ—ಸುಮಧ್ಯಮೇ, ಹೀಗೆ ಅಲ್ಲೀ ಪಾಪಗಳನ್ನು ಪರಿಹರಿಸುವ, ಸುಲಭವೂ, ಶುಭವೂ ಆದ ಕರ್ಮಗಳು ವಿಧಿಪೂರ್ವಕವಾಗಿ ಮಾಡಲ್ಪಡುತ್ತವೆ.

೩೫. ನಾನು ಕಲ್ಪಿಸಿದ ಆ ಕುದುರೆಯಕುಲದಲ್ಲುದಿಸಿದ ಕುದುರೆಗಳು ನನ್ನನ್ನು ವಹಿಸುತ್ತವೆ. ಅವು ಬೇರೆಯವನನ್ನು ಬೆನ್ನಿನ ಮೇಲೇರಿಸಿಕೊಳ್ಳುವುದಿಲ್ಲ. ನನ್ನ ಆ ಕುದುರೆಗಳು ದುರತಿಕ್ರಮಗಳು.

ಕುಂಡಂ ಪಂಚಸರೋ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಚತುರ್ಧಾರಾಃ ಪತಂತ್ಯತ್ರ ಶಂಖವರ್ಣಾ ಮನೋಜವಾಃ ॥ ೩೬ ॥

ತತ್ರ ಸ್ನಾನಂತು ಕುರ್ವೀತ ಚತುರ್ಭಕ್ತೋಷಿತೋ ನರಃ ।
ಲೋಕಂ ಚೈತ್ರಾಂಗದಂ ಗತ್ವಾ ಗಂಧರ್ವೈಃ ಸಹ ಮೋದತೇ ॥ ೩೭ ॥

ಅಥಚೇನ್ಮುಂಚತಿಪ್ರಾಣಾಂಸ್ತಸ್ಮಿನ್‌ಕ್ಷೇತ್ರೇ ಪರೇ ಮಮ ।
ಗಂಧರ್ವಲೋಕಮುತ್ಸೃಜ್ಯ ಮಮ ಲೋಕಂ ಸ ಗಚ್ಛತಿ ॥ ೩೮ ॥

ತತೋ ನಾರದಕುಂಡೇತಿ ಮಮ ಕ್ಷೇತ್ರೇ ಪರೇ ಮಹತ್ ।
ಪಂಚ ಧಾರಾಃ ಪತಂತ್ಯತ್ರ ತಾಲವೃಕ್ಷ ಸಮೋಪಮಾಃ ॥ ೩೯ ॥

---

೩೬. ಪಂಚಸರೋವರವೆಂಬ ಹೆಸರಿನ ಕುಂಡವು ರಹಸ್ಯವಾದ ನನ್ನ ಮತ್ತೊಂದು ಕ್ಷೇತ್ರ. ಅಲ್ಲಿ ಶಂಖದ ಬಣ್ಣದವೂ, ಮನೋವೇಗವುಳ್ಳವೂ ಆದ ನಾಲ್ಕು ಜಲಧಾರೆಗಳು ಧುಮುಕುತ್ತವೆ.

೩೭. ನಾಲ್ಕನೆಯ ಒಂದು ಭಾಗದಷ್ಟು ಆಹಾರವನ್ನು ಮಾತ್ರ ಸೇವಿಸಿ ಅಲ್ಲಿದ್ದು, ಆ ತೀರ್ಥದಲ್ಲಿ ಸ್ನಾನಮಾಡುವವನು ಚೈತ್ರಾಂಗದ ಲೋಕಕ್ಕೆ ಹೋಗಿ, ಅಲ್ಲಿ ಗಂಧರ್ವರೊಡನೆ ಸಂತೋಷಪಡುವನು.

೩೮. ಉತ್ತಮವಾದ ಆ ನನ್ನ ಕ್ಷೇತ್ರದಲ್ಲಿ ಪ್ರಾಣಗಳನ್ನು ಬಿಟ್ಟರೆ, ಅವನು ಗಂಧರ್ವಲೋಕವನ್ನು ತ್ಯಜಿಸಿ, ನನ್ನ ಲೋಕವನ್ನು ಸೇರುವನು.

೩೯. ಉತ್ತಮವಾದ ಆ ನನ್ನ ಕ್ಷೇತ್ರದಲ್ಲಿ ಶ್ರೇಷ್ಠವಾದ ನಾರದ ಕುಂಡವೆಂಬುದೊಂದಿದೆ. ಓಲೆಯಮರದಷ್ಟು ಗಾತ್ರದ ಐದು ಜಲಧಾರೆಗಳು ಅಲ್ಲಿ ಧುಮುಕುತ್ತವೆ.

ತತ್ರ ಸ್ನಾನಂ ತು ಕುರ್ವೀತ ಏಕಭುಕ್ತೋಷಿತೋ ನರಃ ।
ದೇವರ್ಷಿಂ ನಾರದಂ ಪಶ್ಯೇನ್ಮೋದತೇ ತೇನ ವೈ ಸಮಂ ॥ ೪೦ ॥

ಅಥಾತ್ರ ಮುಂಚತಿ ಪ್ರಾಣಾನ್ ಮಮ ಗುಹ್ಯವಿನಿಶ್ಚಿತಃ ।
ಪ್ರಮುಚ್ಯ ನಾರದಂ ದಿವ್ಯಂ ಮಮ ಲೋಕಂ ಚ ಗಚ್ಛತಿ ॥ ೪೧ ॥

ತತೋ ವಸಿಷ್ಠಕುಂಡಂ ತು ತಸ್ಮಿನ್ ಕ್ಷೇತ್ರಂ ಪರಂ ಮಮ ।
ಧಾರಾಃ ಪತಂತಿ ತಿಸ್ರಸ್ತು ನ ಸ್ಥೂಲಾ ನಾತಿ ವೈ ಕೃಶಾಃ ॥ ೪೨ ॥

ತತ್ರಾಭಿಷೇಕಂ ಕುರ್ವೀತ ಪಂಚಕಾಲೋಷಿತೋ ನರಃ ।
ವಾಸಿಷ್ಠಂ ಲೋಕಮಾಸಾದ್ಯ ಮೋದತೇ ನಾತ್ರ ಸಂಶಯಃ ॥ ೪೩ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮಸು ನಿಶ್ಚಿತಃ ।
ವಾಸಿಷ್ಠಂ ಲೋಕಮುತ್ಸೃಜ್ಯ ಮಮ ಲೋಕಂ ಪ್ರಪದ್ಯತೇ ॥ ೪೪ ॥

---

೪೦. ಒಂದುಹೊತ್ತು ಮಾತ್ರ ಊಟಮಾಡುತ್ತ ಅಲ್ಲಿದ್ದು ಸ್ನಾನ ಮಾಡುವವನು ದೇವರ್ಷಿಯಾದ ನಾರದನನ್ನು ನೋಡಿ, ಅವನೊಡನೆ ಸಂತೋಷಿಸುವನು.

೪೧. ನನ್ನ ರಹಸ್ಯವನ್ನು ನಂಬಿ, ಆ ನಾರದಕುಂಡದಲ್ಲಿ ಪ್ರಾಣಗಳನ್ನು ತ್ಯಜಿಸಿದರೆ, ಅವನು ನಾರದನನ್ನು ಬಿಟ್ಟು, ನನ್ನ ದಿವ್ಯಲೋಕವನ್ನು ಸೇರುವನು.

೪೨. ಅಲ್ಲದೆ, ಅಲ್ಲೇ ಇರುವ ವಸಿಷ್ಠಕುಂಡವೆಂಬ ನನ್ನ ಕ್ಷೇತ್ರವು ಉತ್ತಮವಾದುದು. ಬಹಳ ದೊಡ್ಡವೂ, ಬಹಳ ಸಣ್ಣವೂ ಅಲ್ಲದ ಮೂರು ಜಲಧಾರೆಗಳು ಅಲ್ಲಿ ಬೀಳುತ್ತವೆ.

೪೩. ಅಲ್ಲಿ ಐದುಜಾವಗಳ ಕಾಲವಿದ್ದು ಸ್ನಾನಮಾಡುವವನು ವಸಿಷ್ಠ ಲೋಕವನ್ನು ಸೇರಿ ಆನಂದಪಡುವುದರಲ್ಲಿ ಸಂಶಯವಿಲ್ಲ.

೪೪. ನನ್ನ ಕರ್ಮನಿಷ್ಠನಾಗಿದ್ದು ಆ ಕ್ಷೇತ್ರದಲ್ಲಿ ಪ್ರಾಣಬಿಟ್ಟರೆ ವಸಿಷ್ಠ ಲೋಕವನ್ನು ತ್ಯಜಿಸಿ, ನನ್ನ ಲೋಕವನ್ನು ಪಡೆಯುವನು.

ಪಂಚಕುಂಡೇತಿ ವಿಖ್ಯಾತಂ ತಸ್ಮಿನ್ ಕ್ಷೇತ್ರೇ ಪರಂ ಮಮ ।
ಪಂಚಧಾರಾಃ ಪತಂತ್ಯತ್ರ ಹಿಮಕೂಟವಿನಿಸ್ಸೃತಾಃ ॥ ೪೫ ॥

ತತ್ರಾಭಿಷೇಕಂ ಕುರ್ವೀತ ಪಂಚಕಾಲೋಷಿತೋ ನರಃ ।
ಸ ತತ್ರ ಗಚ್ಛೇದ್ವೈ ಭೂಮೇ ಯತ್ರ ಪಂಚಶಿಖೋ ಮುನಿಃ ॥ ೪೬ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಭಕ್ತೋ ಜಿತೇಂದ್ರಿಯಃ ।
ಪಂಚಚೂಡಂ ಸಮುತ್ಸೃಜ್ಯ ಸ ಯಾತಿ ಪರಮಾಂ ಗತಿಂ ॥ ೪೭ ॥

ಸಪ್ತರ್ಷಿಕುಂಡಂ ವಿಖ್ಯಾತಮಸ್ಮಿನ್ ಕ್ಷೇತ್ರೇ ಪರಂ ಮಮ ।
ಸಪ್ತಧಾರಾಃ ಪತಂತ್ಯತ್ರ ಹಿಮವತ್ಪರ್ವತಸ್ಥಿತಾಃ ॥ ೪೮ ॥

---

೪೫. ಆ ಕ್ಷೇತ್ರದಲ್ಲಿ ಪಂಚಕುಂಡವೆಂದು ಪ್ರಸಿದ್ಧವಾದ ಮತ್ತೊಂದು ನನ್ನ ತೀರ್ಥವಿದೆ. ಹಿಮಶಿಖರದಿಂದ ಹೊರಡುವ ಐದು ಜಲಧಾರೆಗಳು ಅಲ್ಲಿ ಬೀಳುತ್ತವೆ.

೪೬. ಭೂಮೀ, ಐದು ಜಾವಗಳಕಾಲ ಅಲ್ಲಿದ್ದು ತೀರ್ಥಸ್ನಾನ ಮಾಡುವವನು ಪಂಚಶಿಖನೆಂಬ ಮುನಿಯಿರುವೆಡೆಗೆ ಹೋಗುವನು.

೪೭. ನನ್ನ ಭಕ್ತನೂ, ಜಿತೇಂದ್ರಿಯನೂ ಆಗಿ ಪಂಚಕುಂಡದಲ್ಲಿ ಪ್ರಾಣ ಬಿಟ್ಟರೆ, ಪಂಚಚೂಡಮುನಿಯ ಸಮೀಪವನ್ನು ತ್ಯಜಿಸಿ, ಅವನು ಪರಮಗತಿಯನ್ನು ಪಡೆಯುವನು.

೪೮. ಆ ಕ್ಷೇತ್ರದಲ್ಲಿ ಸಪ್ತರ್ಷಿಕುಂಡವೆಂಬುದು ಮತ್ತೊಂದು ಪ್ರಸಿದ್ಧವಾದ ತೀರ್ಥ. ಹಿಮವತ್ಪರ್ವತದಿಂದ ಹೊರಡುವ ಏಳು ತೀರ್ಥಧಾರೆಗಳು ಅಲ್ಲಿ ಧುಮುಕುತ್ತವೆ.

ತತ್ರಾಭಿಷೇಕಂ ಕುರ್ವೀತ ಸಪ್ತಭಕ್ತೋಷಿತೋ ನರಃ ।
ಮೋದತೇ ಋಷಿಲೋಕೇಷು ಋಷಿಕನ್ಯಾಭಿಸಂವೃತಃ ॥ ೪೯ ॥

ಅಥಾತ್ರ ಮುಂಚತಿ ಪ್ರಾಣಾನ್ ರಾಗಲೋಭವಿವರ್ಜಿತಃ ।
ಸಪ್ತರ್ಷೀನ್ಸ ಸಮುತ್ಸೃಜ್ಯ ಮೋದತೇ ಮಮ ಸಂಸ್ಥಿತಃ ॥ ೫೦ ॥

ಶರಭಂಗಸ್ಯ ಕುಂಡಂ ವೈ ಕ್ಷೇತ್ರೇ ಗುಹ್ಯಂ ಪರಂ ಮಮ ।
ತತ್ರ ಧಾರಾ ಪತತ್ಯೇಕಾ ಶರಭಂಗಾಶ್ರಿತಾ ನದೀ ॥ ೫೧ ॥

ಸ್ನಾನಂ ಯಸ್ತತ್ರ ಕುರ್ವೀತ ಷಷ್ಠಭಕ್ತೋಷಿತೋ ನರಃ ।
ಮೋದತೇ ತಸ್ಯ ಲೋಕೇಷು ಋಷಿಕನ್ಯಾಪ್ರಮೋದಿತಃ ॥ ೫೨ ॥

ಅಥಾತ್ರ ಮುಂಚತಿ ಪ್ರಾಣಾನ್ ಸರ್ವಸಂಗವಿವರ್ಜಿತಃ ।
ಶರಭಂಗಂ ಸಮುತ್ಸೃಜ್ಯ ಮಮ ಲೋಕೇ ಮಹೀಯತೇ ॥ ೫೩ ॥

---

೪೯. ಏಳನೆಯ ಒಂದುಭಾಗ ಆಹಾರವನ್ನು ಮಾತ್ರ ಸೇವಿಸಿ, ಅಲ್ಲಿದ್ದು ತೀರ್ಥಸ್ನಾನಮಾಡುವವನು ಋಷಿಲೋಕಗಳಲ್ಲಿ ಋಷಿಕನ್ನೆಯರಿಂದ ಸುತ್ತಿದವನಾಗಿ ಸಂತೋಷಪಡುವನು.

೫೦. ರಾಗಲೋಭಗಳಿಲ್ಲದವನಾಗಿ ಅಲ್ಲಿ ಪ್ರಾಣಬಿಟ್ಟರೆ ಸಪ್ತರ್ಷಿಗಳನ್ನೂ ತ್ಯಜಿಸಿ, ನನ್ನೊಡನಿದ್ದು ಆನಂದಪಡುವನು.

೫೧. ಆ ನನ್ನ ಉತ್ತಮಕ್ಷೇತ್ರದಲ್ಲಿ ಶರಭಂಗಕುಂಡವೆಂಬುದು ರಹಸ್ಯವಾದುದು. ಅಲ್ಲಿ ಶರಭಂಗಾಶ್ರಿತವಾದ ನದಿಯು ಒಂದು ಧಾರೆಯಾಗಿ ಧುಮುಕುತ್ತದೆ.

೫೨. ಆರರಲ್ಲಿ ಒಂದುಭಾಗ ಆಹಾರವುಳ್ಳವನಾಗಿ ಅಲ್ಲಿದ್ದು ಆ ತೀರ್ಥದಲ್ಲಿ ಸ್ನಾನಮಾಡುವವನು ಶರಭಂಗಋಷಿಲೋಕಗಳಲ್ಲಿ ಮುನಿಕನ್ನೆಯರಿಂದ ಸಂತೋಷಿತನಾಗಿ ಆನಂದಪಡುವನು.

೫೩. ಸರ್ವಸಂಗವನ್ನೂ, ಶರಭಂಗನನ್ನೂ ಬಿಟ್ಟು, ಅಲ್ಲಿ ಪ್ರಾಣಗಳನ್ನು ತ್ಯಜಿಸಿದರೆ ನನ್ನ ಲೋಕದಲ್ಲಿ ಅವನು ವಾಸಿಸುವನು.

ಕುಂಡಮಗ್ನಿಸರೋ ನಾಮ ಸರ್ವಮಾಯಾಭಿಸಂವೃತಂ ।
ಭೂಮಿಂ ನೀತ್ವಾ ಜಲಂ ತತ್ರ ತಿಷ್ಠತ್ಯೇವ ವರಾನನೇ ॥ ೫೪ ॥

ತತ್ರ ಸ್ನಾನಂ ಪ್ರಕುರ್ವೀತ ಚಾಷ್ಟಕಾಲೋಷಿತೋ ನರಃ ।
ಗಚ್ಛತ್ಯಂಗಿರಸೋ ಲೋಕಂ ಸುಖಭಾಗೀ ನ ಸಂಶಯಃ ॥ ೫೫ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮಪರಾಯಣಃ ।
*ಅಗ್ನಿಲೋಕಂ ಸಮುತ್ಸೃಜ್ಯ ಮಮ ಲೋಕಂ ಸ ಗಚ್ಛತಿ ॥ ೫೬ ॥

ಕುಂಡಂ ಬೃಹಸ್ಪತೇರ್ಭೂಮೇ ಸರ್ವವೇದೋದಕಾಶ್ರಿತಂ ।
ಧಾರಾ ಚೈಕಾ ಪತತ್ಯತ್ರ ಹಿಮಕೂಟಸಮಾಶ್ರಿತಾ ॥ ೫೭ ॥

---

೫೪. ವರಮುಖೀ, ಅಲ್ಲಿರುವ ಅಗ್ನಿಸರೋವರವೆಂಬ ಕುಂಡವು ಸರ್ವಮಾಯೆಗಳಿಂದಾವೃತವಾಗಿರುವುದು. ಅಲ್ಲಿ ನೀರು ಭೂಮಿಯನ್ನು ಕೊರೆದು ನಿಂತಿದೆ.

೫೫. ಅಲ್ಲಿ ಎಂಟುಜಾವಗಳ ಕಾಲವಿದ್ದು, ಸ್ನಾನಮಾಡುವವನು ಅಂಗಿರಸಲೋಕಕ್ಕೆ ಹೋಗಿ, ಸುಖಕ್ಕೆ ಭಾಗಿಯಾಗುವುದರಲ್ಲಿ ಸಂದೇಹವಿಲ್ಲ.

೫೬. ನನ್ನ ಕರ್ಮಗಳಲ್ಲಿ ನಿರತನಾದವನು ಬಳಿಕ ಆ ಅಗ್ನಿಸರೋವರದಲ್ಲಿ ಪ್ರಾಣಬಿಟ್ಟರೆ *ಅಗ್ನಿಲೋಕವನ್ನು ತ್ಯಜಿಸಿ ನನ್ನ ಲೋಕವನ್ನು ಸೇರುವನು.

೫೭. ಭೂಮೀ, ಅಲ್ಲಿರುವ ಬೃಹಸ್ಪತಿಕುಂಡವು ಸರ್ವವೇದೋದಕದಿಂದ ಕೂಡಿದುದು. ಹಿಮಗಿರಿಶಿಖರದಿಂದ ಒಂದು ತೀರ್ಥಧಾರೆ ಆ ಕುಂಡದಲ್ಲಿ ಬೀಳುತ್ತದೆ.

---

* ಅಂಗಿರಸನಿಗೆ ಕೆಲವುಕಾಲ ಅಗ್ನಿಯ ಅಧಿಕಾರವಿದ್ದಿತು. (ಭಾರತ ವನಪರ್ವ . ೨೨೩೦)

ತತ್ರ ಸ್ನಾನಂ ಪ್ರಕುರ್ವೀತ ಷಷ್ಠಕಾಲೋಷಿತೋ ನರಃ ।
ಗತ್ವಾ ಬೃಹಸ್ಪತೇರ್ಲೋಕಂ ಮುನಿಕನ್ಯಾಭಿಮೋದಿತಃ ॥ ೫೮ ॥

ಅಥಾತ್ರ ಮುಂಚತಿ ಪ್ರಾಣಾನ್ ಮಮ ಲೋಕಂ ಸಮಾಶ್ರಿತಃ ।
ಸೋಽಪಿಯಾತಿ ಪರಾಂ ಸಿದ್ಧಿಂ ಸಮುತ್ಸೃಜ್ಯ ಬೃಹಸ್ಪತಿಂ ॥ ೫೯ ॥

ವೈಶ್ವಾನರಸ್ಯ ಕುಂಡಂ ತು ಗುಹ್ಯಂ ಕ್ಷೇತ್ರಂ ಪರಂ ಮಮ ।
ಧಾರಾ ಚೈಕಾ ಪತತ್ಯತ್ರ ದೃಶ್ಯತೇ ಹಿಮಸಂಶ್ರಯಾತ್ ॥ ೬೦ ॥

ತತ್ರಾಭಿಷೇಕಂ ಕುರ್ವೀತ ಷಷ್ಠಭಕ್ತೋಷಿತೋ ನರಃ ।
÷(ಗತ್ವಾ ಬೃಹಸ್ಪತೇರ್ಲೋಕಂ ಮುನಿಕನ್ಯಾಭಿಮೋದಿತಃ ॥)
ವೈಶ್ವಾನರೇಷು ಲೋಕೇಷು ಮೋದತೇ ನಾತ್ರ ಸಂಶಯಃ ॥ ೬೧ ॥

---

೫೮. ಆರು ಜಾವಗಳ ಕಾಲ ಅಲ್ಲಿದ್ದು ಆ ತೀರ್ಥದಲ್ಲಿ ಸ್ನಾನಮಾಡಿದರೆ, ಮನುಷ್ಯನು ಬೃಹಸ್ಪತಿಲೋಕಕ್ಕೆ ಹೋಗಿ ಮುನಿಕನ್ನೆಯರಿಂದ ಸಂತೋಷ ಪಡುವನು.

೫೯. ಆಮೇಲೆ ಬೃಹಸ್ಪತಿಯನ್ನು ತ್ಯಜಿಸಿ, ಆ ಕುಂಡದಲ್ಲಿ ಪ್ರಾಣಬಿಟ್ಟರೆ ಅವನು ಪರಮಸಿದ್ಧಿಯನ್ನು ಪಡೆದು, ನನ್ನ ಲೋಕವನ್ನು ಸೇರುವನು.

೬೦. ವೈಶ್ವಾನರ(ಅಗ್ನಿ)ಕುಂಡವೆಂಬುದು ನನ್ನ ಮತ್ತೊಂದು ರಹಸ್ಯಕ್ಷೇತ್ರ. ಹಿಮಾಲಯದಿಂದ ಒಂದು ಜಲಧಾರೆಯು ಅಲ್ಲಿ ಧುಮುಕುವುದು ಕಾಣುತ್ತದೆ.

೬೧. ನಿತ್ಯದ ಆರನೆಯ ಒಂದು ಭಾಗದಷ್ಟು ಆಹಾರವನ್ನು ಮಾತ್ರ ಸೇವಿಸಿ ಅಲ್ಲಿದ್ದು, ಸ್ನಾನಮಾಡುವವನು ಅಗ್ನಿಲೋಕಗಳಲ್ಲಿ ಸಂತೋಷಪಡುವುದರಲ್ಲಿ ಸಂದೇಹವಿಲ್ಲ.

÷ ೫೮ ನೆಯ ಶ್ಲೋಕಾರ್ಧದಂತಿರುವ ಈ ಅರ್ಧಶ್ಲೋಕವು ಇಲ್ಲಿ ಅನವಶ್ಯವಾಗಿ ಅಧಿಕವಾಗಿದೆ.

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮಪರಾಯಣಃ ।
ವೈಶ್ವಾನರಂ ಸಮುತ್ಸೃಜ್ಯ ಮಮ ಲೋಕಂ ಸ ಗಚ್ಛತಿ ॥ ೬೨ ॥

ಕಾರ್ತಿಕೇಯಸ್ಯ ಕುಂಡಂ ತು ಗುಹ್ಯಂ ಕ್ಷೇತ್ರಂ ಪರಂ ಮಮ ।
ಯತ್ರ ಪಂಚದಶಾ ಧಾರಾಃ ಪತಂತಿ ಹಿಮಪರ್ವತಾತ್ ॥ ೬೩ ॥

ತತ್ರ ಸ್ನಾನಂ ಪ್ರಕುರ್ವೀತ ಷಷ್ಠಕಾಲೋಷಿತೋ ನರಃ ।
ಕುಮಾರಂ ಪಶ್ಯತಿ ವ್ಯಕ್ತಂ ಷಣ್ಮುಖಂ ಶುಭದರ್ಶನಂ ॥ ೬೪ ॥

ಅಥಾತ್ರ ಮುಂಚತಿ ಪ್ರಾಣಾನ್ ಕೃತ್ವಾ ಚಾಂದ್ರಾಯಣಂ ಶುಚಿಃ ।
ಕಾರ್ತಿಕೇಯಂ ಸಮುತ್ಸೃಜ್ಯ ಮೋದತೇ ಮಮ ಮಂಡಲೇ ॥ ೬೫ ॥

ಉಮಾಕುಂಡಮಿತಿಖ್ಯಾತಂ ತಸ್ಮಿನ್‌ಕ್ಷೇತ್ರೇ ಪರಂ ಮಮ ।
ಸಾ ಗೌರೀ ಯತ್ರ ಚೋತ್ಪನ್ನಾ ಮಹಾದೇವವರಾಂಗನಾ ॥ ೬೬ ॥

---

೬೨. ನನ್ನ ಕರ್ಮದಲ್ಲಿ ನಿರತನಾದ ಅವನು, ಆ ಅಗ್ನಿಕುಂಡದಲ್ಲಿ ಪ್ರಾಣಬಿಟ್ಟರೆ, ಬಳಿಕ ಅಗ್ನಿಯ ಸಮೀಪವನ್ನೂ ತ್ಯಜಿಸಿ, ನನ್ನ ಲೋಕವನ್ನು ಸೇರುವನು.

೬೩. ಕಾರ್ತಿಕೇಯ(ಷಣ್ಮುಖ)ಕುಂಡವೆಂಬುದು ನನ್ನ ಮತ್ತೊಂದು ರಹಸ್ಯವಾದ ಕ್ಷೇತ್ರ. ಅಲ್ಲಿ ಹಿಮವತ್ಪರ್ವತದಿಂದ ಹದಿನೈದು ಜಲಧಾರೆಗಳು ಬೀಳುತ್ತವೆ.

೬೪. ಆರು(ಜಾವಗಳ)ಕಾಲ ಅಲ್ಲಿದ್ದು ಸ್ನಾನಮಾಡಿದರೆ ಮನುಷ್ಯನು ಶುಭದರ್ಶನನೂ, ಶಿವಕುಮಾರನೂ ಆದ ಷಣ್ಮುಖನ ದರ್ಶನವನ್ನು ಮಾಡುವನು.

೬೫. ಅಲ್ಲದೆ, ಚಾಂದ್ರಾಯಣ ವ್ರತವನ್ನು ಮಾಡಿ, ಪರಿಶುದ್ಧನಾಗಿ ಆ ಕುಂಡದಲ್ಲಿ ಪ್ರಾಣಬಿಟ್ಟರೆ ಬಳಿಕ ಅವನು ಷಣ್ಮುಖಲೋಕವನ್ನೂ ತ್ಯಜಿಸಿ, ನನ್ನ ದಿವ್ಯದೇಶದಲ್ಲಿ ಆನಂದಪಡುವನು.

೬೬. ಉಮಾ(ಪಾರ್ವತೀ)ಕುಂಡವೆಂದು ಪ್ರಸಿದ್ಧವಾಗಿರುವುದು ನನ್ನ ಆ ಕ್ಷೇತ್ರದಲ್ಲಿ ಶ್ರೇಷ್ಠವಾದ ಒಂದು ತೀರ್ಥ. ಅದು ಮಹಾದೇವನ ಉತ್ತಮ ಪತ್ನಿಯಾದ ಆ ಗೌರಿಯು ಜನಿಸಿದ ಸ್ಥಳ.

ತತ್ರ ಸ್ನಾನಂ ತು ಕುರ್ವೀತ ದಶರಾತ್ರೋಷಿತೋ ನರಃ ।
ಗೌರೀಂ ದೇವೀಂ ಸ ಪಶ್ಯೇತ್ತು ತಸ್ಯಾ ಲೋಕೇ ಚ ಮೋದತೇ ॥ ೬೭ ॥

ಅಥ ಪ್ರಾಣಾನ್ ಪ್ರಮುಂಚೇತ ದಶರಾತ್ರೋಷಿತೋ ನರಃ ।
ಉಮಾಲೋಕಂ ಸಮುತ್ಸೃಜ್ಯ ಮಮ ಲೋಕಂ ಪ್ರಪದ್ಯತೇ ॥ ೬೮ ॥

ಮಹೇಶ್ವರಸ್ಯ ವೈ ಕುಂಡಃ ಯತ್ರ ಚೋದ್ವಾಹಿತಾ ಉಮಾ ।
ಕಾದಂಬೈಶ್ಚಕ್ರವಾಕೈಶ್ಚ ಹಂಸಸಾರಸಸೇವಿತಂ ॥ ೬೯ ॥

ತಿಸ್ರೋ ಧಾರಾಃ ಪತಂತ್ಯತ್ರ ಹಿಮವತ್ಪರ್ವತಾಶ್ರಿತಾಃ ।
ಸ್ಥೂಲಾಶ್ಚ ರಮಣೀಯಾಶ್ಚ ನ ಹ್ರಸ್ವಾಶ್ಚಾತಿ ನಿರ್ಮಲಾಃ ॥ ೭೦ ॥

ತತ್ರ ಸ್ನಾನಂ ತು ಕುರ್ವೀತ ದ್ವಾದಶಾಹೋಷಿತೋ ನರಃ ।
ಮೋದತೇ ರುದ್ರಲೋಕೇಷು ರುದ್ರಕನ್ಯಾಭಿರಾವೃತಃ ॥ ೭೧ ॥

---

೬೭. ಅಲ್ಲಿ ಹತ್ತುರಾತ್ರೆಗಳು ವಾಸಮಾಡಿ, ಆ ತೀರ್ಥದಲ್ಲಿ ಸ್ನಾನ ಮಾಡುವವನು ಗೌರೀದೇವಿಯನ್ನು ಸಂದರ್ಶಿಸಿ, ಆಕೆಯ ಲೋಕದಲ್ಲಿ ಸಂತೋಷಪಡುವನು.

೬೮. ಆ ಕುಂಡದ ಹತ್ತಿರ ಹತ್ತುರಾತ್ರೆ ವಾಸಮಾಡಿ, ಅಲ್ಲಿ ಪ್ರಾಣಬಿಟ್ಟರೆ ಬಳಿಕ ಪಾರ್ವತಿಯ ಲೋಕವನ್ನೂ ಪರಿತ್ಯಜಿಸಿ, ಅವನು ನನ್ನ ಲೋಕವನ್ನು ಪಡೆಯುವನು.

೬೯. ಕಲಹಂಸಗಳಿಂದಲೂ, ಚಕ್ರವಾಕಗಳಿಂದಲೂ ಕೂಡಿರುವ ಮಹೇಶ್ವರಕುಂಡವೆಂಬುದು ಪಾರ್ವತಿಗೆ ವಿವಾಹವಾದ ಸ್ಥಳ.

೭೦. ಹಿಮವತ್ಪರ್ವತದಿಂದ ಅಲ್ಲಿ ಮೂರುತೀರ್ಥಧಾರೆಗಳು ಧುಮುಕುತ್ತವೆ. ಆ ಧಾರೆಗಳು ಬಹಳ ಸಣ್ಣಗಿರದೆ ಗಾತ್ರವಾಗಿಯೂ, ನಿರ್ಮಲವಾಗಿಯೂ, ಮನೋಹರವಾಗಿಯೂ ಇವೆ.

೭೧. ಅಲ್ಲಿ ಹನ್ನೆರಡುದಿನ ವಾಸಮಾಡಿ ಆ ತೀರ್ಥದಲ್ಲಿ ಸ್ನಾನಮಾಡಿದರೆ ಮನುಷ್ಯನು ರುದ್ರಲೋಕದಲ್ಲಿ ರುದ್ರಕನ್ನೆಯರಿಂದ ಸುತ್ತುಗಟ್ಟಿಸಿಕೊಂಡು, ಸಂತೋಷಪಡುವನು.

ಅಥಾತ್ರ ಮುಂಚತಿ ಪ್ರಾಣಾನ್ ಕೃತ್ವಾ ಕರ್ಮ ಸುದುಷ್ಕರಂ ।
ರುದ್ರಲೋಕಂ ಸಮುತ್ಸೃಜ್ಯ ಮಮ ಲೋಕಂ ಚ ಗಚ್ಛತಿ ॥ ೭೨ ॥

ಪ್ರಖ್ಯಾತಂ ಬ್ರಹ್ಮಕುಂಡಂ ತು ವೇದಾ ಯತ್ರ ಸಮುತ್ಥಿತಾಃ ।
ಚತಸ್ರೋ ವೇದಧಾರಾಸ್ತು ಪತಂತಿ ಚ ಹಿಮಾಲಯಾತ್ ॥ ೭೩ ॥

ತತಃ ಪೂರ್ವೇಣ ಪಾರ್ಶ್ವೇನ *ಸಾಮ ಧಾರಾ ಪತೇಚ್ಛುಭಾ ।
ಉಚ್ಚಾ ಚ ರಮಣೀಯಾ ಚ ಪಾಂಡುರೋದಕ ಶೋಭಿತಾ ॥ ೭೪ ॥

ಪುನರಸ್ಯೋತ್ತರೇ ಪಾರ್ಶ್ವೇ ಸುವರ್ಣಸದೃಶೋಪಮಾ ।
ಋಗ್ವೇದಃ ಪತತೇ ಧಾರಾ ಪ್ರಸನ್ನಾ ವಿಮಲೋದಕಾ ॥ ೭೫ ॥

---

೭೨. ಅಲ್ಲದೆ ಬಹು ದುಷ್ಕರವಾದ ಕರ್ಮಗಳನ್ನು ಆಚರಿಸಿ ಆ ಕುಂಡದಲ್ಲಿ ಪ್ರಾಣಬಿಟ್ಟರೆ ರುದ್ರಲೋಕವನ್ನೂ ತ್ಯಜಿಸಿ, ನನ್ನ ಲೋಕವನ್ನು ಸೇರುವನು.

೭೩. ವೇದಗಳು ಮೇಲೆದ್ದ(ಅಥವಾ ಹುಟ್ಟಿದ) ಸ್ಥಳವಾದ ಬ್ರಹ್ಮಕುಂಡ ವೆಂಬುದು ಪ್ರಸಿದ್ಧವಾದುದು. ಅಲ್ಲಿ ಹಿಮಾಲಯ ಪರ್ವತದಿಂದ ನಾಲ್ಕು ವೇದಧಾರೆಗಳು ಧುಮುಕುತ್ತವೆ.

೭೪. ಪೂರ್ವದಿಕ್ಕಿನಿಂದ, ಉನ್ನತವೂ, ರಮಣೀಯವೂ, ಬಿಳಿಯ ನೀರಿಂದ ಹೊಳೆಯುವುದೂ, ಶುಭವೂ ಆದ *ಸಾಮವೇದಧಾರೆಯು ಧುಮುಕುತ್ತದೆ.

೭೫. ಆ ಕುಂಡದ ಉತ್ತರಭಾಗದಲ್ಲಿ, ನಿರ್ಮಲವಾಗಿಯೂ, ತಿಳಿಯಾಗಿಯೂ ಇರುವ ಸುವರ್ಣಸಮಾನಕಾಂತಿಯ ಋಗ್ವೇದಧಾರೆಯು ಧುಮುಕುತ್ತದೆ.

---

* ಸಮಾಧಾರಾ

ಅಥ ಪಶ್ಚಿಮಪಾರ್ಶ್ವೇನ ಯಜುರ್ವೇದೇನ ಸಂಯುತಾ ।
ಅಥ ದಕ್ಷಿಣಪಾರ್ಶ್ವೇನ ಚಾಥರ್ವಣಸಮನ್ವಿತಾ ॥
ಏಕಾ ಧಾರಾ ಪತತ್ಯತ್ರ ಇಂದ್ರಗೋಪಕಸನ್ನಿಭಾ ॥ ೭೬ ॥

ಯಸ್ತತ್ರ ಕುರುತೇ ಸ್ನಾನಂ ಸಪ್ತರಾತ್ರೋಷಿತೋ ನರಃ ।
ಬ್ರಹ್ಮಲೋಕಂ ಸಮಾಸಾದ್ಯ ಬ್ರಹ್ಮಣಾ ಸಹ ಮೋದತೇ ॥ ೭೭ ॥

ಅಥಾತ್ರ ಮುಂಚತಿ ಪ್ರಾಣಾನ್ ಅಹಂಕಾರ ವಿವರ್ಜಿತಃ ।
ಬ್ರಹ್ಮಲೋಕಂ ಪರಿತ್ಯಜ್ಯ ಮಮ ಲೋಕಂ ಪ್ರಪದ್ಯತೇ ॥ ೭೮ ॥

ಗುಹ್ಯಾಖ್ಯಾನೇ ಮಹಾಭಾಗೇ ಕ್ಷೇತ್ರೇ ಲೋಹಾರ್ಗಲೇ ಮಮ ।
ಸಿದ್ಧಿಕಾಮೇನ ಮರ್ತ್ಯೇನ ಗಂತವ್ಯಂ ನಾತ್ರ ಸಂಶಯಃ ॥ ೭೯ ॥

---

೭೬. ಪಶ್ಚಿಮದಿಕ್ಕಿನಿಂದ, ಯಜುರ್ವೇದದಿಂದ ಕೂಡಿದ ಧಾರೆಯೂ, ದಕ್ಷಿಣಪಾರ್ಶ್ವದಿಂದ ಅಥರ್ವಣವೇದದಿಂದ ಕೂಡಿದ ಇಂದ್ರಗೋಪವರ್ಣದ ಒಂದು ಧಾರೆಯೂ ದುಮಿಕುತ್ತದೆ.

೭೭. ಏಳುರಾತ್ರೆ ಅಲ್ಲಿ ವಾಸಮಾಡಿ, ಆ ತೀರ್ಥದಲ್ಲಿ ಸ್ನಾನಮಾಡುವವನು ಬ್ರಹ್ಮಲೋಕವನ್ನು ಸೇರಿ, ಬ್ರಹ್ಮನೊಡನೆ ಆನಂದಪಡುವನು.

೭೮. ಅಹಂಕಾರವನ್ನು ಬಿಟ್ಟು, ಆ ತೀರ್ಥದಲ್ಲಿ ಪ್ರಾಣಗಳನ್ನು ತ್ಯಜಿಸಿದರೆ ಬ್ರಹ್ಮಲೋಕವನ್ನೂ ತ್ಯಜಿಸಿ ನನ್ನ ಲೋಕವನ್ನು ಪಡೆಯುವನು.

೭೯. ಮಹಾಭಾಗ್ಯೇ, ರಹಸ್ಯವಾದ ಚರಿತ್ರೆಯುಳ್ಳ ನನ್ನ ಲೋಹಾರ್ಗಲ ಕ್ಷೇತ್ರಕ್ಕೆ ಸಿದ್ಧಿಯನ್ನು ಬಯಸುವವರು ಹೋಗಬೇಕು. ಇದರಲ್ಲಿ ಸಂಶಯವಿಲ್ಲ.

ಸಮಂತಾತ್ಪಂಚವಿಂಶತಿಯೋಜನಾನಿ ವರಾನನೇ ।
ನ ತಸ್ಯ ಕರ್ಮ ವಿದ್ಯೇತ ಸ ಏವಮಪಿ ಸಂಸ್ಥಿತಃ ॥ ೮೦ ॥

ಆಖ್ಯಾನಾನಾಂ ಮಹಾಖ್ಯಾನಂ ಧರ್ಮಾಣಾಂ ಧರ್ಮ ಉತ್ತಮಃ ।
ಪವಿತ್ರಾಣಾಂ ಪವಿತ್ರಂ ತು ನ ದೇಯಂ ಯಸ್ಯ ಕಸ್ಯಚಿತ್ ॥ ೮೧ ॥

ಯೇ ಪಠಂತಿ ಮಹಾಭಾಗೇ ಸ್ಥಿತಾಃ ಶೃಣ್ವಂತಿ ಮತ್ಪಥೇ ।
ತಾರಿತಾನಿ ಕುಲಾನಿ ಸ್ಯುರಭಯತ್ರ ದಶಾಪಿ ಚ ॥ ೮೨ ॥

ಏತ ನ್ಮರಣಕಾಲೇ ತು ನ ಕದಾಚಿತ್ತು ವಿಸ್ಮರೇತ್ ।
ಯದೀಚ್ಛೇತ್ಪರಮಾಂ ಸಿದ್ಧಿಂ ಸರ್ವಸಂಸಾರಮೋಕ್ಷಣೀಂ ॥ ೮೩ ॥

---

೮೦. ಸುಂದರಮುಖೀ, ಲೋಹಾರ್ಗಲಕ್ಷೇತ್ರವು ಇಪ್ಪತ್ತೈದುಯೋಜನ ವಿಸ್ತಾರವುಳ್ಳದಾಗಿದೆ. ಅಲ್ಲಿ ನನ್ನ ದರ್ಶನಮಾಡುವವನಿಗೆ ಕರ್ಮವಿರುವುದಿಲ್ಲ.

೮೧ ಇದು ಚರಿತ್ರೆಗಳಲ್ಲಿ ಮಹಾಚರಿತ್ರೆಯೂ, ಧರ್ಮಗಳಲ್ಲಿ ಉತ್ತಮ ಧರ್ಮವೂ, ಪವಿತ್ರವಾದುವುಗಳಲ್ಲಿ ಅತಿಪವಿತ್ರವೂ ಆದುದು. ಇದನ್ನು ಸಿಕ್ಕಿದವನಿಗೆಲ್ಲಾ ಹೇಳಬಾರದು.

೮೨. ಮಹಾಭಾಗ್ಯೇ, ನನ್ನ ಮಾರ್ಗದಲ್ಲಿದ್ದುಕೊಂಡು ಇದನ್ನು ಹೇಳುವ ಅಥವಾ ಕೇಳುವ ಮನುಷ್ಯರು, ತಮ್ಮ ಉಭಯವರ್ಗದ ಹತ್ತುತಲೆಯವರನ್ನೂ ಸಂಸಾರಸಾಗರದಿಂದ ದಾಟಿಸುವರು.

೮೩. ಸರ್ವಸಂಸಾರವಿಮೋಚಕವಾದ ಪರಮಸಿದ್ಧಿಯನ್ನು ಬಯಸುವುದಾದರೆ ಮನುಷ್ಯರು ಈ ಲೋಹಾರ್ಗಲಕ್ಷೇತ್ರಮಹಿಮೆಯನ್ನು ಮರಣಕಾಲದಲ್ಲೂ ಎಂದಿಗೂ ಮರೆಯಬಾರದು.

ಏತತ್ತೇ ಕಥಿತಂ ಭದ್ರೇ ಲೋಹಾರ್ಗಲಮನುತ್ತಮಂ ।
ಮಾಹಾತ್ಮ್ಯಂ ಪದ್ಮಪತ್ರಾಕ್ಷಿ ಗುಹ್ಯಂ ಯಚ್ಚ ಮಹೌಜಸಂ ॥ ೮೪ ॥

ಮಂಗಲ್ಯಂ ಚ ಪವಿತ್ರಂ ಚ ಮಮ ಭಕ್ತಸುಖಾವಹಂ ॥ ೮೫ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಲೋಹಾರ್ಗಲಮಾಹಾತ್ಮ್ಯಂ ನಾಮ ಏಕಪಂಚಾಶದಧಿಕಶತತಮೋಽಧ್ಯಾಯಃ

೮೪–೮೫. ಭದ್ರೇ, ಕಮಲದಳನೇತ್ರೇ, ಅತ್ಯುತ್ತಮವೂ, ಮಹೌಜಸವೂ, ರಹಸ್ಯವೂ, ಮಂಗಳವೂ, ಪವಿತ್ರವೂ, ನನ್ನ ಭಕ್ತರಿಗೆ ಸುಖಕರವೂ ಆದ ಈ ಲೋಹಾರ್ಗಲಕ್ಷೇತ್ರದ ಮಹಿಮೆಯನ್ನು ನಿನಗೆ ಹೇಳಿದೆನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಲೋಹಾರ್ಗಲಕ್ಷೇತ್ರ ಮಹಿಮೆಯನ್ನು ಆ ಕ್ಷೇತ್ರದಲ್ಲಿರುವ ಪಂಚಸರಸ್ಸೇ ಮೊದಲಾದ ತೀರ್ಥಗಳ ಪ್ರಭಾವದೊಡನೆ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತೊಂದನೆಯ ಅಧ್ಯಾಯ.

|| ಶ್ರೀಃ ||

ದ್ವಾಪಂಚಾಶದಧಿಕಶತತಮೋಽಧ್ಯಾಯಃ

ಮಥುರಾತೀರ್ಥಪ್ರಶಂಸಾ

|| ಸೂತ ಉವಾಚ ||

ಶ್ರುತ್ವಾ ದೇವಸ್ಯ ಮಾಹಾತ್ಮ್ಯಂ ಲೋಹಾರ್ಗಲನಿವಾಸಿನಃ ।
ತ್ರೈಲೋಕ್ಯನಾಥಾಧಿಪತೇರ್ವಿಸ್ಮಯಂ ಪರಮಂ ಗತಾ || ೧ ||

|| ಧರಣ್ಯುವಾಚ ||

ಪದ್ಮಪತ್ರವಿಶಾಲಾಕ್ಷ ಲೋಕನಾಥ ಜಗತ್ಪತೇ ।
ತ್ವತ್ಪ್ರಸಾದಾಚ್ಚ ದೇವೇಶ ಶ್ರುತಂ ಶಾಸ್ತ್ರಂ ಮಹೌಜಸಂ || ೨ ||

ನೂರೈವತ್ತೆರಡನೆಯ ಅಧ್ಯಾಯ

ಮಧುರಾತೀರ್ಥಪ್ರಶಂಸೆ

೧. ಸೂತಮುನಿ—ಲೋಹಾರ್ಗಲಕ್ಷೇತ್ರದಲ್ಲಿ ನೆಲೆಸಿರುವ ತ್ರಿಲೋಕನಾಥಾಧಿಪತಿಯಾದ ದೇವನ ಮಹಿಮೆಯನ್ನು ಕೇಳಿ, ಭೂದೇವಿಯು ಪರಮಾಶ್ಚರ್ಯಗೊಂಡಳು. ಆ ಭೂದೇವಿಯು ಹೇಳಿದಳು.

೨. ಕಮಲದಳ ವಿಶಾಲನೇತ್ರಾ, ಲೋಕನಾಥಾ, ಜಗತ್ಪತೀ, ದೇವೇಶಾ, ನಿನ್ನ ಅನುಗ್ರಹದಿಂದ ಮಹೌಜಸವಾದ ಶಾಸ್ತ್ರವನ್ನು ಕೇಳಿದೆನು.

ತವ ಶಿಷ್ಯಾ ಚ ದಾಸೀ ಚ ತ್ವಾಮಹಂ ಶರಣಂ ಗತಾ |
ಜಗದ್ಧಾತಾ ಜಗಜ್ಜ್ಯೋತಿರ್ಜಗತ್ಪ್ರಭುರತಂದ್ರಿತಃ || ೩ ||

ತವ ಸಂಭಾವನಾದ್ದೇವ ಜಾತಾಸ್ಮಿ ಕನಕೋಜ್ಜ್ವಲಾ |
ಅಲಂಕೃತಾ ಚ ಶಸ್ತಾ ಚ ಸರ್ವಶಾಸ್ತ್ರೇಣ ಮಾನದ || ೪ ||

ಜಗದ್ಧಾತುರ್ಜಗಚ್ಛಾಸ್ತ್ರಕೃತೇ ನ ಹಿ ಪರಿಶ್ರಮಃ |
ತ್ವಯ್ಯಾಯತ್ತಂ ಜಗತ್ಸರ್ವಂ ಯಚ್ಚ ಕಿಂಚಿತ್ಪ್ರವರ್ತತೇ || ೫ ||

ಇತಿ ಕೃತ್ವಾ ಚ ಮೇ ದೇವ ಸಾ ತ್ವಾಹ್ಲಾದೋ ಹೃದಿ ವರ್ತ್ತಸೇ || ೬ ||

ಲೋಹಾರ್ಗಲಾತ್ಪರಂ ಶ್ರೇಷ್ಠಂ ಗುಹ್ಯಂ ಪರಮದುರ್ಲಭಂ |
ತೀರ್ಥಂ ತದ್ವದ ಕಲ್ಯಾಣಂ ತೀರ್ಥಾನಾಮುತ್ತಮೋತ್ತಮಂ |
ಯದಸ್ತಿ ದುರ್ಲಭಂ ತೀರ್ಥಂ ತತ್ತ್ವಂ ಕಥಯ ಮೇ ಪ್ರಭೋ || ೭ ||

೩–೪. ದೇವ, ಮಾನದ, ನಿನ್ನ ಶಿಷ್ಯಳೂ, ಸೇವಕಳೂ ಆದ ನಾನು ನಿನಗೆ ಶರಣಾಗತಳಾಗಿದ್ದೇನೆ. ಜಗದ್ಧಾತೃವೂ, ಜಗಜ್ಜ್ಯೋತಿಯೂ, ಜಾಗರೂಕನಾದ ಜಗತ್ಪ್ರಭುವೂ ಆದ ನಿನ್ನ ಸಂಭಾವನೆಯಿಂದ ನಾನು ಸುವರ್ಣದಂತೆ ಪ್ರಕಾಶಿಸುವಳೂ, ಸರ್ವಶಾಸ್ತ್ರದಿಂದಲೂ ಅಲಂಕೃತಳೂ, ಪ್ರಶಸ್ತಳೂ ಆಗಿರುವೆನು.

೫–೬. ದೇವಾ, ಜಗತ್ತನ್ನು ಧರಿಸಿರುವವನೂ, ಜಗಚ್ಛಾಸ್ತ್ರಕರ್ತೃವೂ ಆದ ನಿನಗೆ ಆಯಾಸವೆಂಬುದೇ ಇಲ್ಲ. ಯಾವುದು ಇದೆಯೋ ಅಥವಾ ಕಾರ್ಯಮಾಡುವುದೋ ಆ ಜಗತ್ತೆಲ್ಲವೂ ನಿನಗೆ ಅಧೀನವಾದುದು, ಎಂಬುದರಿಂದ ನನ್ನ ಹೃದಯದಲ್ಲಿ ನೀನು ಆನಂದದಿಂದ ಕೂಡಿದವನಾಗಿ ಅಥವಾ ಆನಂದ ರೂಪನಾಗಿ ಇದ್ದೀಯೆ.

೭. ಪ್ರಭೂ, ಲೋಹಾರ್ಗಲಕ್ಕಿಂತಲೂ ಶ್ರೇಷ್ಠತರವೂ, ರಹಸ್ಯವೂ ಆದ ತೀರ್ಥವು ಪರಮದುರ್ಲಭ ಆದರೂ ಇರುವ ತೀರ್ಥಗಳಲ್ಲಿ ಉತ್ತಮೋತ್ತಮವೂ, ಮಂಗಳಕರವೂ, ದುರ್ಲಭವೂ, ಆದ ತೀರ್ಥವು ಯಾವುದಿದೆಯೋ ಅದನ್ನು ನೀನು ನನಗೆ ಹೇಳು.

॥ ಶ್ರೀವರಾಹ ಉವಾಚ ॥

ನ ವಿದ್ಯತೇ ಚ ಪಾತಾಲೇ ನಾಂತರಿಕ್ಷೇ ನ ಮಾನುಷೇ ।
ಸಮಾನಂ ಮಥುರಾಯಾ ಹಿ ಪ್ರಿಯಂ ಮಮ ವಸುಂಧರೇ ॥ ೮ ॥

॥ ಸೂತ ಉವಾಚ ॥

ತಚ್ಛ್ರುತ್ವಾ ವಚನಂ ತಸ್ಯ ಪ್ರಿಯಂ ಚ ವಸುಧಾ ತದಾ ।
ಪ್ರಣಮ್ಯ ಶಿರಸಾ ದೇವೀ ವರಾಹಂ ಪುನರಬ್ರವೀತ್ ॥ ೯ ॥

॥ ಪೃಥಿವ್ಯುವಾಚ ॥

ಪುಷ್ಕರಂ ನೈಮಿಷಂ ಚೈವ ಪುರೀಂ ವಾರಾಣಸೀಂ ತಥಾ ।
ಏತಾನ್ಹಿತ್ವಾ ಮಹಾಭಾಗ ಮಥುರಾಂ ಕಿಂ ಪ್ರಶಂಸಸಿ ॥ ೧೦ ॥

॥ ಶ್ರೀವರಾಹ ಉವಾಚ ॥

ಶೃಣು ಕಾರ್ತ್ಸ್ನ್ಯೇನ ವಸುಧೇ ಕಥ್ಯಮಾನಂ ಮಯಾನಘೇ ।
ಮಥುರೇತಿ ಚ ವಿಖ್ಯಾತಂ ತಸ್ಮಾನ್ನಾಸ್ತಿ ಪರಂ ಮಮ ॥ ೧೧ ॥

---

೮. ಶ್ರೀವರಾಹ—ವಸುಂಧರೇ, ಮಧುರೆಗೆ ಸಮಾನವಾಗಿ ನನಗೆ ಪ್ರಿಯವಾದುದು ಪಾತಾಳದಲ್ಲಾಗಲಿ, ಸ್ವರ್ಗದಲ್ಲಾಗಲಿ, ಮನುಷ್ಯಲೋಕದಲ್ಲಾಗಲಿ ಬೇರಾವುದೂ ಇಲ್ಲ.

೯. ಸೂತಮುನಿ—ಭೂದೇವಿಯು ಆತನ ಪ್ರಿಯವಾದ ಆ ಮಾತನ್ನು ಕೇಳಿ, ಆಗ ಶ್ರೀವರಾಹನಿಗೆ ತಲೆಬಾಗಿ ಪ್ರಣಾಮವನ್ನು ಮಾಡಿ ಮತ್ತೆ ಹೇಳಿದಳು.

೧೦. ಭೂದೇವಿ—ಪೂಜ್ಯನೇ, ಪುಷ್ಕರಕ್ಷೇತ್ರ, ನೈಮಿಷಾರಣ್ಯ, ವಾರಾಣಸಿ (ಕಾಶಿ) ನಗರಿ ಇವನ್ನೆಲ್ಲಾ ಬಿಟ್ಟು ಮಧುರೆಯನ್ನು ಏಕೆ ಹೊಗಳುತ್ತೀಯೆ ? !

೧೧. ಶ್ರೀ ವರಾಹ—ಪಾಪರಹಿತೇ, ಭೂದೇವೀ, ನಾನು ಹೇಳುವುದನ್ನು ಪೂರ್ಣವಾಗಿ ಕೇಳು. ಮಥುರೆಯೆಂದು ಪ್ರಸಿದ್ಧವಾಗಿರುವ ಅದಕ್ಕಿಂತಲೂ ನನಗೆ ಉತ್ತಮವಾದುದು ಯಾವುದೂ ಇಲ್ಲ.

ಸಾ ರಮ್ಯಾ ಚ ಸುಶಸ್ತಾ ಚ ಜನ್ಮಭೂಮಿಸ್ತಥಾ ಮಮ ।
ಶೃಣು ದೇವಿ ಯಥಾಸ್ತೌಮಿ ಮಥುರಾಂ ಪಾಪಹಾರಿಣೀಂ ॥ ೧೨ ॥

ತತ್ರ ವಾಸೀ ನರೋ ಯಾತಿ ಮೋಕ್ಷಂ ನಾಸ್ತ್ಯತ್ರ ಸಂಶಯಃ ।
ಮಹಾಮಾಘ್ಯಾಂ ಪ್ರಯಾಗೇ ತು ಯತ್ಫಲಂ ಲಭತೇ ನರಃ ॥
ತತ್ಫಲಂ ಲಭತೇ ದೇವಿ ಮಥುರಾಯಾ ದಿನೇದಿನೇ ॥ ೧೩ ॥

ಪೂರ್ಣಂ ವರ್ಷಸಹಸ್ರಂ ತು ವಾರಾಣಸ್ಯಾಂತು ಯತ್ಫಲಂ ।
ತತ್ಫಲಂ ಲಭತೇ ದೇವಿ ಮಥುರಾಯಾಂ ಕ್ಷಣೇನ ಹಿ ॥ ೧೪ ॥

ಕಾರ್ತಿಕ್ಯಾಂ ಚೈವ ಯತ್ಪುಣ್ಯಂ ಪುಷ್ಕರೇ ತು ವಸುಂಧರೇ ।
ತತ್ಫಲಂ ಲಭತೇ ದೇವಿ ಮಥುರಾಯಾಂ ಜಿತೇಂದ್ರಿಯಃ ॥ ೧೫ ॥

---

೧೨. ದೇವಿ, ಆ ಮಥುರೆಯು ರಮ್ಯವೂ, ಪಶಸ್ತವೂ ಆಗಿರುವುದಲ್ಲದೆ ನನ್ನ ಜನ್ಮಭೂಮಿ. ಪಾಪಪರಿಹಾರಕವಾದ ಆ ಮಥುರೆಯನ್ನು ನಾನು ಹೇಗೆ ಸ್ತುತಿಸುವೆನೋ ಕೇಳು.

೧೩. ಮಥುರೆಯಲ್ಲಿ ವಾಸಮಾಡುವವರು ಮೋಕ್ಷವನ್ನು ಪಡೆಯುವರ ಎಂಬುದರಲ್ಲಿ ಸಂದೇಹವಿಲ್ಲ. ಪ್ರಯಾಗಕ್ಷೇತ್ರದಲ್ಲಿ ಮಹಾ ಮಾಘಮಾಸದಲ್ಲಿ ಸ್ನಾನಾದಿಗಳಿಂದ ಮನುಷ್ಯನು ಪಡೆಯುವ ಫಲವನ್ನು ಮಥುರೆಯಲ್ಲಿ ಪ್ರತಿದಿನವೂ ಪಡೆಯುವನು.

೧೪. ದೇವಿ, ಸಾವಿರವರ್ಷ ಪೂರ್ಣವಾಗಿ ವಾರಾಣಸಿ (ಕಾಶಿ) ಯಲ್ಲಿ ಪಡೆಯುವ ಫಲವನ್ನು ಮಥುರೆಯಲ್ಲಿ ಒಂದು ಕ್ಷಣದಲ್ಲೇ ಪಡೆಯಬಹುದು.

೧೫. ದೇವೀ, ರತ್ನಧರೇ, ಜಿತೇಂದ್ರಿಯನಾದವನು ಕಾರ್ತಿಕಮಾಸದಲ್ಲಿ ಪುಷ್ಕರಕ್ಷೇತ್ರದಲ್ಲಿ ಯಾವ ಪುಣ್ಯಫಲವನ್ನು ಪಡೆಯುವನೋ ಅದೇ ಫಲವನ್ನು ಮಥುರೆಯಲ್ಲಿ ಒಂದು ಕ್ಷಣದಲ್ಲಿ ಪಡೆಯುವನು.

ಮಥುರಾಂ ತು ಪರಿತ್ಯಜ್ಯ ಯೋನ್ಯತ್ರ ಕುರುತೇ ರತಿಂ |
ಮೂಢೋ ಭ್ರಮತಿ ಸಂಸಾರೇ ಮೋಹಿತೋ ಮಮ ಮಾಯಯಾ ॥೧೬॥

ಯಃ ಶೃಣೋತಿ ವರಾರೋಹೇ ಮಾಥುರಂ ಮಮ ಮಂಡಲಂ |
ಅನ್ಯೇನೋಚ್ಚಾರಿತಂ ಶಶ್ವತ್ ಸೋಪಿ ಪಾಪೈಃ ಪ್ರಮುಚ್ಯತೇ ॥ ೧೭ ॥

ಪೃಥಿವ್ಯಾಂ ಯಾನಿ ತೀರ್ಥಾನಿ ಆಸಮುದ್ರಂ ಸರಾಂಸಿ ಚ |
ಮಥುರಾಯಾಂ ಪ್ರಯಾಂತ್ಯತ್ರ ಸುಪ್ತೇ ಚೈವ ಜನಾರ್ದನೇ ॥ ೧೮ ॥

ಮಥುರಾ ಮಂಡಲಂ ಪ್ರಾಪ್ಯ ಶ್ರಾದ್ಧಂ ಕೃತ್ವಾ ಯಥಾವಿಧಿ |
ತೃಪ್ತಿಂ ಪ್ರಯಾಂತಿ ಪಿತರೋ ಯಾವತ್ಸ್ಥಿತ್ಯಗ್ರಜನ್ಮನಃ ॥೧೯ ॥

---

೧೬. ಮಥುರೆಯನ್ನು ಪರಿತ್ಯಜಿಸಿ ಬೇರೆ ಎಡೆಯಲ್ಲಿ ಅನುರಾಗವನ್ನು ಮಾಡುವ ಮೂಢಮನುಜನು ನನ್ನ ಮಾಯೆಯಿಂದ ಮೋಹಿತನಾಗಿ ಸಂಸಾರದಲ್ಲಿ ತೊಳಲುವನು.

೧೭. ಸುಂದರೀ, ನನ್ನ ಮಥುರಾಮಂಡಲದ ವಿಚಾರವಾಗಿ ಮತ್ತೊಬ್ಬರು ಹೇಳಿದುದನ್ನು ಮತ್ತೆ ಮತ್ತೆ ಕೇಳುವವರೂ ಪಾಪದಿಂದ ವಿಮುಕ್ತರಾಗುವರು.

೧೮. ಪೃಥಿವಿಯಲ್ಲಿ ಸಮುದ್ರ, ಸರೋವರ ಮೊದಲಾದ ಯಾವ ಯಾವ ತೀರ್ಥಗಳಿವೆಯೋ ಅವೆಲ್ಲವೂ ಜನಾರ್ದನನು * ಮಲಗಿದಮೇಲೆ ಮಥುರಾ ಮಂಡಲಕ್ಕೆ ಬರುವುವು.

೧೯. ಮಥುರಾಮಂಡಲಕ್ಕೆ ಬಂದು ಅಲ್ಲಿ ಯಥಾವಿಧಿಯಾಗಿ ಶ್ರಾದ್ಧ ಮಾಡುವವನ ಪಿತೃಗಳು, ಬ್ರಹ್ಮನಿರುವವರೆಗೂ ತೃಪ್ತಿಯನ್ನು ಪಡೆಯುವರು.

---

* ವಿಷ್ಣುವು ಆಷಾಢಶುದ್ಧದ್ವಾದಶಿಯ ದಿನ ಶೇಷಶಯ್ಯೆಯಲ್ಲಿ ಮಲಗಿ ಮತ್ತೆ ಕಾರ್ತಿಕಶುದ್ಧ ದ್ವಾದಶಿಯ ದಿನ ಏಳುವನು.

ಯೇ ವಸಂತಿ ಮಹಾಭಾಗೇ ಮಥುರಾಮಿತರೇ ಜನಾಃ ।
ತೇಪಿ ಯಾಂತಿ ಪರಾಂ ಸಿದ್ಧಿಂ ಮತ್ಪ್ರಸಾದನ್ನ ಸಂಶಯಃ ॥ ೨೦ ॥

ಕುಬ್ಜಾಮ್ರಕೇ ಸೌಕರವೇ ಮಥುರಾಯಾಂ ವಿಶೇಷತಃ ।
ವಿನಾ ಸಾಂಖ್ಯೇನ ಯೋಗೇನ ಮತ್ಪ್ರಸಾದನ್ನ ಸಂಶಯಃ ॥ ೨೧ ॥

ಮಥುರಾಯಾಂ ಮಹಾಪುರ್ಯಾಂ ಯೇ ವಸಂತಿ ಶುಚಿವ್ರತಾಃ ।
ಬಲಿಭಿಕ್ಷಾಪ್ರದಾತಾರೋ ದೇವಾಸ್ತೇ ನರವಿಗ್ರಹಾಃ ॥ ೨೨ ॥

ಭವಿಷ್ಯಾಮಿ ವರಾರೋಹೇ ದ್ವಾಪರೇ ಯುಗಸಂಸ್ಥಿತೇ ।
ಯಯಾತಿ ಭೂಪವಂಶಾಚ್ಚ ಕ್ಷತ್ರಿಯಃ ಕುಲವರ್ಧನಃ ॥ ೨೩ ॥

ಭವಿಷ್ಯಾಮಿ ವರಾರೋಹೇ ಮಥುರಾಯಾಂ ನ ಸಂಶಯಃ ॥ ೨೪ ॥

---

೨೦. ಮಹಾಭಾಗ್ಯೇ, ಮಥುರೆಯಲ್ಲಿ ವಾಸಮಾಡುವ ಇತರ ಜನರೂ ನನ್ನ ಅನುಗ್ರಹದಿಂದ ಪರಮಸಿದ್ಧಿಯನ್ನು ಪಡೆಯುವರು.

೨೧. ಕುಬ್ಜಾಮ್ರಕಕ್ಷೇತ್ರದಲ್ಲೂ, ಸೌಕರಕ್ಷೇತ್ರದಲ್ಲೂ ಸಾಂಖ್ಯವೂ, ಯೋಗವೂ ಇಲ್ಲದೆ ನನ್ನ ಅನುಗ್ರಹದಿಂದಲೇ ಪರಮಸಿದ್ಧಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೨೨. ಮಥುರೆಯೆಂಬ ಮಹಾಪುರಿಯಲ್ಲಿ ವಾಸಮಾಡುವ ಶುದ್ಧರಾದ ವ್ರತಿಗಳು, ಮನುಷ್ಯದೇಹವನ್ನು ಪಡೆದಿರುವ ಬಲಿಭಿಕ್ಷಾಪ್ರದಾತೃಗಳಾದ ದೇವತೆಗಳು.

೨೩–೨೪. ವರಾರೋಹೇ, ದ್ವಾಪರಯುಗವು ನಡೆಯುತ್ತಿರುವಾಗ ಕ್ಷತ್ರಿಯಕುಲವರ್ಧನನಾಗಿ ಯಯಾತಿರಾಜವಂಶದಲ್ಲಿ ಅವತರಿಸುವೆನು. ಸುಂದರಿ, ನಾನು ನಿಜವಾಗಿ ಮಥುರೆಯಲ್ಲೇ ಜನಿಸುವೆನು.

ಮೂರ್ತಿಂ ಚತುರ್ವಿಧಾಂ ಕೃತ್ವಾ ಸ್ಥಾಸ್ಯಾಮಿ ಋಷಿಭಿಃ ಸ್ತುತಃ ।
ವತ್ಸರಾಣಾಂ ಶತಂ ತತ್ರ ಯುದ್ಧೇಷು ಕೃತನಿಶ್ಚಯಃ ॥ ೨೫ ॥

ಏಕಾ ಚಂದನಸಂಕಾಶಾ ದ್ವಿತೀಯಾ ಕನಕಪ್ರಭಾ ।
ಅಶೋಕಸದೃಶಾ ಚಾನ್ಯಾ ಅನ್ಯಾ ಚೋತ್ಪಲಸನ್ನಿಭಾ ॥ ೨೬ ॥

ತತ್ರ ಗುಹ್ಯಾನಿ ನಾಮಾನಿ ಭವಿಷ್ಯಂತಿ ಮಮ ಪ್ರಿಯೇ ।
ಪುಣ್ಯಾನಿ ಚ ಪವಿತ್ರಾಣಿ ಸಂಸಾರಚ್ಛೇದನಾನಿ ಚ ॥ ೨೭ ॥

ಯತ್ರಾಹಂ ಘಾತಯಿಷ್ಯಾಮಿ ದ್ವಾತ್ರಿಂಶತ್ತು ವಸುಂಧರೇ ।
ದೈತ್ಯಾನ್ ಘೋರಾನ್ ಮಹಾಭಾಗೇ ಕಂಸಾದೀನ್ ಧರ್ಮದೂಷಕಾನ್॥ ೨೮ ॥

---

೨೫. ನಾನು, ನೂರುವರ್ಷಗಳಕಾಲ ಯುದ್ಧದಲ್ಲಿ ನಿಶ್ಚಯಮಾಡಿಕೊಂಡು ನಾಲ್ಕು ವಿಧವಾದ ಮೂರ್ತಿಯನ್ನು ಪರಿಗ್ರಹಿಸಿ ಋಷಿಗಳಿಂದ ಸ್ತುತನಾಗಿರುವೆನು.

೨೬. ನನ್ನ ಮೂರ್ತಿಗಳಲ್ಲಿ ಒಂದು(ಸಂಕರ್ಷಣಮೂರ್ತಿ) ಶ್ರೀಗಂಧದಂತೆ ಬೆಳ್ಳಗಿರುವುದು. ಎರಡನೆಯದು ಸುವರ್ಣಕಾಂತಿಯುಳ್ಳದು. ಮತ್ತೊಂದು ಅಶೋಕದಂತೆ ಕೆಂಪಾಗಿರುವುದು. ಇನ್ನೊಂದು (ವಾಸುದೇವಮೂರ್ತಿ) ಕನ್ನೈದಿಲೆಯ ಕಾಂತಿಯುಳ್ಳದಾಗಿರುವುದು.

೨೭. ನನ್ನ ಪ್ರಿಯೇ, ಆ ಮೂರ್ತಿಗಳಿಗೆ, ಪವಿತ್ರಗಳೂ, ಪುಣ್ಯಗಳೂ, ಸಂಸಾರಚ್ಛೇದಕಗಳೂ, ರಹಸ್ಯವೂ ಆದ ಹೆಸರುಗಳಾಗುವುವು.

೨೮. ವಸುಂಧರೇ, ಮಹಾಭಾಗ್ಯೇ, ನಾನು ಆ ಹೆಸರುಗಳಿಂದ ಘೋರರೂ ಧರ್ಮನಿಂದಕರೂ ಆದ ಕಂಸನೇ ಮೊದಲಾದ ಮೂವತ್ತೆರಡುಜನ ರಾಕ್ಷಸರನ್ನು ಕೊಲ್ಲುವೆನು.

ಯಮುನಾ ಯತ್ರ ಸುವಹಾ ನಿತ್ಯಸನ್ನಿಹಿತಾ ಧ್ರುವಂ ।
ವೈವಸ್ವತ*ಸ್ವಸಾ ರಮ್ಯಾ ಯಮುನಾ ಯತ್ರ ವಿಶ್ರುತಾ ॥ ೨೯ ॥

ಗಂಗಾಂ ಪ್ರಾಪ್ಯ ಪ್ರಯಾಗೇ ಯಾ ವೇಣೀತಿ ಪ್ರಥಿತಾ ಭುವಿ ।
ಗಂಗಾಶತಗುಣಾ ಪುಣ್ಯಾ ಮಾಥುರೇ ಮಮ ಮಂಡಲೇ ॥ ೩೦ ॥

ಯಮುನಾ ವಿಶ್ರುತಾ ದೇವಿ ನಾತ್ರ ಕಾರ್ಯಾವಿಚಾರಣಾ ॥ ೩೧ ॥

ತತ್ರ ತೀರ್ಥಾನಿ ಗುಹ್ಯಾನಿ ಭವಿಷ್ಯಂತಿ ಮಮಾನಘೇ ।
ಯೇಷು ಸ್ನಾನೇ ನರೋ ದೇವಿ ಮಮ ಲೋಕೇ ಮಹೀಯತೇ ॥ ೩೨ ॥

ಅಥಾತ್ರ ಮುಂಚತಿ ಪ್ರಾಣಾನ್ಮಮಕರ್ಮಪರಾಯಣಃ ।
ನ ಜಾಯತೇ ಸ ಮರ್ತ್ಯೇಷು ಜಾಯತೇ ಚ ಚತುರ್ಭುಜಃ ॥ ೩೩ ॥

---

೨೯. ಆ ಮಥುರೆಯಲ್ಲಿ ಚೆನ್ನಾಗಿ ಪ್ರವಹಿಸುವವಳೂ, ಯಮನ ಸಹೋದರಿಯೂ, ಮನೋಹರಳೂ, ಪ್ರಸಿದ್ಧಳೂ ಆದ ಯಮುನೆ ಯಾವಾಗಲೂ ಸಮೀಪದಲ್ಲಿಯೇ ಇರುವಳು.

೩೦-೩೧. ಪ್ರಯಾಗದಲ್ಲಿ ಗಂಗೆಯನ್ನು ಸೇರಿ, ವೇಣಿಯೆಂದು ಭೂಮಿಯಲ್ಲಿ ಪ್ರಸಿದ್ಧಳಾಗಿರುವ ಪವಿತ್ರಳಾದ ಆ ಯಮುನೆ ನನ್ನ ಮಥುರಾ ಮಂಡಲದಲ್ಲಿ ಗಂಗೆಯ ನೂರರಷ್ಟು ಗುಣವುಳ್ಳವಳು. ದೇವೀ, ಯಮುನೆ ಪ್ರಸಿದ್ಧಳಾಗಿರುವಳು. ಆದುದರಿಂದ ಈ ಅಂಶದಲ್ಲಿ ವಿಚಾರವು ಬೇಕಿಲ್ಲ.

೩೨. ಪಾಪರಹಿತೇ, ಆ ಯಮುನೆಯಲ್ಲೂ, ಮಥುರಾಮಂಡಲದಲ್ಲೂ ರಹಸ್ಯವಾದ ನನ್ನ ತೀರ್ಥಗಳಿವೆ. ದೇವೀ, ಅವುಗಳಲ್ಲಿ ಸ್ನಾನಮಾಡುವುದರಿಂದ ಮನುಷ್ಯನು ನನ್ನ ಲೋಕದಲ್ಲಿ ನೆಲಸುವನು.

೩೩. ಅಲ್ಲದೆ ನನ್ನ ಕರ್ಮಗಳಲ್ಲಿ ನಿರತನಾದವನು ಆ ತೀರ್ಥಗಳಲ್ಲಿ ಪ್ರಾಣಬಿಟ್ಟರೆ ಮತ್ತೆ ಆವನು ಮನುಷ್ಯರಲ್ಲಿ ಜನಿಸುವುದಿಲ್ಲ. ಚತುರ್ಭುಜಗಳುಳ್ಳವನಾಗುವನು.

---

* ಸುತಾ

ಅವಿಮುಕ್ತೇ ನರಃ ಸ್ನಾತಃ ಮುಕ್ತಿಂಪ್ರಾಪ್ನೋತ್ಯಸಂಶಯಂ ।
ತಥಾತ್ರ ಮುಂಚತಿ ಪ್ರಾಣಾನ್ ಮಮ ಲೋಕಂ ಸ ಗಚ್ಛತಿ ॥ ೩೪ ॥

ವಿಶ್ರಾಂತಿಸಂಜ್ಞಕಂ ನಾಮ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಯಸ್ಮಿಂಸ್ನಾತೋ ನರೋ ದೇವಿ ಮಮ ಲೋಕಂ ಪ್ರಪದ್ಯತೇ ॥ ೩೫ ॥

ಸರ್ವತೀರ್ಥೇಷು ಯತ್ಸ್ನಾನಂ ಸರ್ವತೀರ್ಥೇಷು ಯತ್ಫಲಂ ।
ತತ್ಫಲಂ ಲಭತೇ ದೇವಿ ದೃಷ್ಟ್ವಾ ದೇವಂ ಗತಶ್ರಮಃ ॥ ೩೬ ॥

ನ ಚ ಯಜ್ಞೈರ್ನ ತಪಸಾ ನ ಧ್ಯಾನೈರ್ನ ಚ ಸಂಯಮೈಃ ।
ತತ್ಫಲಂ ಲಭತೇ ಸ್ನಾತೋ ಯಥಾ ವಿಶ್ರಾಂತಿ ಸಂಜ್ಞಕೇ ॥ ೩೭ ॥

---

೩೪. ಅವಿಮುಕ್ತವೆಂಬ ತೀರ್ಥದಲ್ಲಿ ಸ್ನಾನಮಾಡಿದ ಮನುಷ್ಯನು ಸಂಶಯವಿಲ್ಲದೆ ಮುಕ್ತಿಯನ್ನು ಪಡೆಯುವನು.ಅಲ್ಲದೆ ಅಲ್ಲಿ ಪ್ರಾಣಬಿಡುವವನೂ ನನ್ನ ಲೋಕವನ್ನು ಸೇರುವನು.

೩೫. ದೇವೀ, ಯಾವುದರಲ್ಲಿ ಸ್ನಾನಮಾಡಿದ ಮನುಷ್ಯನು ನನ್ನ ಲೋಕವನ್ನು ಪಡೆಯುವನೋ ಆ 'ವಿಶ್ರಾಂತಿ' ಯೆಂಬ ಹೆಸರಿನ ತೀರ್ಥವು ಮೂರುಲೋಕಗಳಲ್ಲೂ ಪ್ರಸಿದ್ಧವಾಗಿದೆ

೩೬. ದೇವೀ, ಮನುಷ್ಯನು ಸರ್ವತೀರ್ಥಗಳಲ್ಲೂ ಸ್ನಾನಮಾಡುವುದರಿಂದ ಯಾವ ಫಲವನ್ನು ಪಡೆಯಬಹುದೋ ಆ ಫಲವನ್ನು ವಿಶ್ರಾಂತಿಕ್ಷೇತ್ರದಲ್ಲಿರುವ ದೇವನ ದರ್ಶನವನ್ನು ಮಾಡಿದಮಾತ್ರದಲ್ಲಿ ಪಡೆದು, ಶ್ರಮವನ್ನು ಕಳೆದು ಕೊಳ್ಳುವನು.

೩೭. ವಿಶ್ರಾಂತಿಯೆಂಬ ಹೆಸರಿನ ತೀರ್ಥದಲ್ಲಿ ಸ್ನಾನಮಾಡಿದವನು ಪಡೆಯುವಂತಹ ಫಲವನ್ನು ಬೇರೆಯವನು, ಯಜ್ಞದಿಂದಾಗಲಿ, ತಪಸ್ಸಿನಿಂದಾಗಲಿ, ಧ್ಯಾನದಿಂದಾಗಲಿ, ವ್ರತಗಳಿಂದಾಗಲಿ ಪಡೆಯುವುದಿಲ್ಲ.

ಕಾಲತ್ರಯಂ ತು ವಸುಧೇ ಯಃ ಪಶ್ಯತಿ ಗತಶ್ರಮಃ ।
ಕೃತ್ವಾ ಪ್ರದಕ್ಷಿಣೇ ದ್ವೇ ತು ವಿಷ್ಣುಲೋಕಂ ಸ ಗಚ್ಛತಿ ॥ ೩೮ ॥

ಅಸ್ತಿ ಚಾನ್ಯತ್ಪರಂ ಗುಹ್ಯಂ ಸರ್ವಸಂಸಾರಮೋಕ್ಷಣಂ ।
ಯಸ್ಮಿಂಸ್ನಾತೋ ನರೋ ದೇವಿ ಮಮ ಲೋಕಂ ಪ್ರಪದ್ಯತೇ ॥ ೩೯ ॥

ಪ್ರಯಾಗಂ ನಾಮ ತೀರ್ಥಂ ತು ದೇವಾನಾಮಪಿ ದುರ್ಲಭಂ ।
ಯಸ್ಮಿಂಸ್ನಾತೋ ನರೋ ದೇವಿ ಅಗ್ನಿಷ್ಟೋಮಫಲಂ ಲಭೇತ್ ॥ ೪೦ ॥

ಇಂದ್ರಲೋಕಂ ಸಮಾಸಾದ್ಯ ನರೋ ಸೌ ದೇವಿ ಮೋದತೇ ।
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೪೧ ॥

ತಥಾ ಕನಖಲಂ ನಾಮ ತೀರ್ಥಂ ಗುಹ್ಯಂ ಪರಂ ಮಮ ।
ಸ್ನಾನಮಾತ್ರೇಣ ತತ್ರಾಪಿ ನಾಕಪೃಷ್ಠೇ ಸ ಮೋದತೇ ॥ ೪೨ ॥

---

೩೮. ಭೂಮೀ, ಮೂರು ಸಂಧ್ಯಾಕಾಲಗಳಲ್ಲೂ ವಿಶ್ರಾಂತಿಕ್ಷೇತ್ರದಲ್ಲಿ ನೆಲಸಿರುವ ದೇವನ ದರ್ಶನವನ್ನು ಮಾಡಿ, ಎರಡುಸಾರಿ ಪ್ರದಕ್ಷಿಣೆಮಾಡುವವನು ತನ್ನ ಶ್ರಮವನ್ನು ಕಳೆದುಕೊಂಡು ವಿಷ್ಣುಲೋಕವನ್ನು ಸೇರುವನು.

೩೯. ದೇವೀ, ಸರ್ವಸಂಸಾರವಿಮೋಚಕವಾದ ಮತ್ತೊಂದು ರಹಸ್ಯವಾದ ತೀರ್ಥವಿದೆ. ಆದರಲ್ಲಿ ಸ್ನಾನಮಾಡಿದವನು ನನ್ನ ಲೋಕವನ್ನು ಪಡೆಯುವನು.

೪೦-೪೧. ದೇವೀ, ಪ್ರಯಾಗವೆಂಬ ತೀರ್ಥವು ದೇವತೆಗಳಿಗೂ ದುರ್ಲಭವಾದುದು ಆದರಲ್ಲಿ ಸ್ನಾನಮಾಡಿದವನು ಅಗ್ನಿಷ್ಟೋಮಯಾಗದ ಫಲವನ್ನು ಪಡೆದು ಇಂದ್ರಲೋಕವನ್ನು ಸೇರಿ, ಆನಂದಪಡುವನು. ಆ ತೀರ್ಥದಲ್ಲಿ ಪ್ರಾಣಬಿಟ್ಟರೆ ಅವನು ನನ್ನ ಲೋಕವನ್ನು ಸೇರುವನು.

೪೨ ಇನ್ನು ಕನಖಲವೆಂಬ ಹೆಸರಿನ ರಹಸ್ಯವಾದ ನನ್ನ ಬೇರೊಂದು ತೀರ್ಥವಿದೆ. ಅಲ್ಲೂ, ಸ್ನಾನಮಾಡಿದ ಮಾತ್ರದಲ್ಲಿಯೇ ಮನುಷ್ಯನು ಸ್ವರ್ಗದ ಮೇಲೆ ಸಂತೋಷಿಸುವನು.

ಅಸ್ತಿ ಕ್ಷೇತ್ರಂ ಪರಂ ಗುಹ್ಯಂ ತಿಂದುಕಂ ನಾಮ ನಾಮತಃ ।
ತಸ್ಮಿಂಸ್ನಾತೋ ನರೋ ದೇವಿ ಮಮ ಲೋಕೇ ಮಹೀಯತೇ ॥ ೪೩ ॥

ಅಸ್ಮಿಂಸ್ತೀರ್ಥೇ ಪುರಾವೃತ್ತಂ ತಚ್ಛೃಣುಷ್ವ ವಸುಂಧರೇ ।
ಪಾಂಚಾಲವಿಷಯೇ ದೇವಿ ಕಾಂಪಿಲ್ಯಂ ಚ ಪುರೋತ್ತಮಮ್
ಧನಧಾನ್ಯಸಮಾಯುಕ್ತಂ ಬ್ರಹ್ಮದತ್ತೇನ ಪಾಲಿತಮ್ ॥ ೪೪ ॥

ತಸ್ಮಿಂಸ್ತು ವಸತೇ ದೇವಿ ತಿಂದುಕೋ ನಾಮ ನಾಪಿತಃ ॥ ೪೫ ॥

ತಸ್ಮಿಂಸ್ತು ವಸತಸ್ತಸ್ಯ ನಾಪಿತಸ್ಯ ಪುರೋತ್ತಮೇ ।
ಕಾಲೇನ ಮಹತಾ ತಸ್ಯ ಕುಟುಂಬಂಚ ಕ್ಷಯಂಗತಮ್ ॥ ೪೬ ॥

ಕ್ಷೀಣೇ ಕುಟುಂಬೇ ತು ತದಾ ಸುಭೃಶಂ ದುಃಖಪೀಡಿತಃ ।
ಸರ್ವಸಂಗಂ ಪರಿತ್ಯಜ್ಯ ಸೋಗಚ್ಛನ್ಮಥುರಾಂ ತದಾ ॥ ೪೭ ॥

---

೪೩. ದೇವಿ, ತಿಂದುಕವೆಂಬ ಹೆಸರಿನ ಮತ್ತೊಂದು ರಹಸ್ಯತೀರ್ಥ ಕ್ಷೇತ್ರವಿದೆ. ಅಲ್ಲಿ ಸ್ನಾನಮಾಡುವ ಮನುಷ್ಯನು ನನ್ನ ಲೋಕದಲ್ಲಿ ನೆಲೆಸುವನು.

೪೪. ಧನರತ್ನಧರೇ, ಆ ತೀರ್ಥದಲ್ಲಿ ಹಿಂದೆ ನಡೆದ ವೃತ್ತಾಂತವನ್ನು ಕೇಳು. ದೇವಿ, ಪಾಂಚಾಲದೇಶದಲ್ಲಿ ಕಾಂಪಿಲ್ಯವೆಂಬ ಉತ್ತಮನಗರವು ಧನಧಾನ್ಯಗಳಿಂದ ತುಂಬಿದುದಾಗಿದ್ದಿತು. ಬ್ರಹ್ಮದತ್ತನೆಂಬ ದೊರೆಯು ಅದನ್ನು ಪಾಲಿಸುತ್ತಿದ್ದನು.

೪೫–೪೬. ದೇವಿ, ಅದೇ ಪಟ್ಟಣದಲ್ಲಿ ತಿಂದುಕನೆಂಬ ಹೆಸರಿನ ನಾಪಿತನು ವಾಸಮಾಡುತ್ತಿದ್ದನು. ಇರುತ್ತಿರಲು ಬಹಳಕಾಲದಮೇಲೆ ಅವನ ಕುಟುಂಬವು ನಾಶವಾಯಿತು.

೪೭. ಅದರಿಂದ ಬಹುದುಃಖಪೀಡಿತನಾದ ಅವನು ಸರ್ವಸಂಗವನ್ನೂ ತ್ಯಜಿಸಿ, ಅಲ್ಲಿಂದ ಮಥುರೆಗೆ ಹೊರಟು ಹೋದನು.

ಬ್ರಾಹ್ಮಣಾವಸಥೇ ಸೋಽಪಿ ವಸಮಾನೋ ವಸುಂಧರೇ ।
ತಸ್ಯೈಕರ್ಮಶತಂ ಕೃತ್ವಾ ಸ್ನಾತ್ವೈವ ಯಮುನಾಂ ನದೀಮ್ ॥
ನಿತ್ಯಂ ಸ ಯಮುನಾಂ ಸ್ನಾತಿ ಚಿರಕಾಲಂ ದೃಢವ್ರತಃ ॥ ೪೮ ॥

ತತಃ ಕಾಲೇನ ಮಹತಾ ಪಂಚತ್ವಂ ಸಮುಪಾಗತಃ ।
ಸಚ ತೀರ್ಥಪ್ರಭಾವೇಣ ಜಾತೋಽಸೌ ಬ್ರಾಹ್ಮಣೋತ್ತಮಃ ॥ ೪೯ ॥

ತಸ್ಮಿನ್ನರಗೃಹೇ ದೇವಿ ಬ್ರಾಹ್ಮಣೋ ಯೋಗಿನಾಂ ವರಃ ।
ಜಾತಿಸ್ಮರೋ ಮಹಾಪ್ರಾಜ್ಞೋ ವಿಷ್ಣುಭಕ್ತೋ ವಸುಂಧರೇ ॥ ೫೦ ॥

ತತ್ತೀರ್ಥಸ್ಯ ಪ್ರಭಾವೇಣ ಜಾತಾ ಮುಕ್ತಿಃ ಸುದುರ್ಲಭಾ ॥ ೫೧ ॥

---

೪೮. ವಸುಂಧರೇ, ಮಥುರೆಯಲ್ಲಿ ಬ್ರಾಹ್ಮಣನ ಮನೆಯಲ್ಲಿ ವಾಸ ಮಾಡುತ್ತಿದ್ದ ಅವನೂ ನಿತ್ಯವೂ ಯಮುನಾನದಿಯಲ್ಲಿ ಸ್ನಾನಮಾಡಿಯೇ ಬಳಿಕ ಅವನ ನೂರಾರು ಕೆಲಸಗಳನ್ನು ಮಾಡುತ್ತಿದ್ದನು. ಅವನು ಬಹುಕಾಲ ದೃಢವಾದ ನಿಯಮವುಳ್ಳವನಾಗಿ ನಿತ್ಯವೂ ಹಾಗೆಯೇ ಯಮುನಾನದಿಯಲ್ಲಿ ಸ್ನಾನ ಮಾಡುತ್ತಿದ್ದನು.

೪೯–೫೧. ಬಳಿಕ ಬಹುಕಾಲದಮೇಲೆ ಮರಣವನ್ನು ಹೊಂದಿ ಆ ನಾಪಿತನು ತೀರ್ಥದ ಪ್ರಭಾವದಿಂದ ಆ ಬ್ರಾಹ್ಮಣನ ಉತ್ತಮಗೃಹದಲ್ಲೇ ಬ್ರಾಹ್ಮಣೋತ್ತಮನಾಗಿ ಜನಿಸಿದನು. ದೇವಿ, ಆತನು ಯೋಗಿವರನಾಗಿಯೂ, ಮಹಾಪ್ರಾಜ್ಞನಾಗಿಯೂ, ವಿಷ್ಣುಭಕ್ತನಾಗಿಯೂ, ಪೂರ್ವಜನ್ಮದ ಸ್ಮರಣೆಯುಳ್ಳವನಾಗಿಯೂ ಇದ್ದನು. ಬಳಿಕ ಅವನಿಗೆ ಆ ತೀರ್ಥದ ಮಹಿಮೆಯಿಂದ, ಬಹು ದುರ್ಲಭವಾದ ಮುಕ್ತಿಯೂ ಲಭಿಸಿತು.

ತತಃ ಪರಂ ಸೂರ್ಯತೀರ್ಥಂ ಸರ್ವಪಾಪಪ್ರಮೋಚನಮ್ ।
ವೈರೋಚನೇನ ಬಲಿನಾ ಸೂರ್ಯಸ್ತ್ವಾರಾಧಿತಃ ಪುರಾ ।
ಭ್ರಷ್ಟರಾಜ್ಯೇನ ಹಿ ತಥಾ ಧನಕಾಮೇನ ಸುಂದರಿ ॥ ೫೨ ॥

ಊರ್ಧ್ವಬಾಹುರ್ನಿರಾಹಾರಸ್ತತಾಪ ಪರಮಂ ತಪಃ ।
ಸಾಗ್ರಂ ಸಂವತ್ಸರಂ ದೇವಿ ತತಃ ಕಾಮಮವಾಪ್ತವಾನ್ ॥ ೫೩ ॥

ತಸ್ಯ ಪ್ರಸನ್ನೋ ಭಗವಾನ್ ದ್ಯುಮಣಿಃ ಪ್ರತ್ಯಭಾಷತ ।
ಕಿಂಕಾರಣಂ ಬಲೇ ಬ್ರೂಹಿ ತಪಸ್ಯಸಿ ಮಹತ್ತಪಃ ॥ ೫೪ ॥

॥ ಬಲಿರುವಾಚ ॥

ಭ್ರಷ್ಟರಾಜ್ಯೋಽಸ್ಮಿ ದೇವೇಶ ಪಾತಾಲೇ ನಿವಸಾಮ್ಯಹಮ್ ।
ವಿತ್ತೇನಾಪಿ ವಿಹೀನಸ್ಯ ಕುಟುಂಬಭರಣಂ ಕುತಃ ॥ ೫೫ ॥

---

೫೨. ಸುಂದರಿ, ಅಲ್ಲಿ ಸರ್ವಪಾಪಗಳನ್ನೂ ವಿಮೋಚನೆಮಾಡುವ ಸೂರ್ಯತೀರ್ಥವೆಂಬುದೊಂದಿದೆ. ವಿರೋಚನನ ಪುತ್ರನಾದ ಬಲಿಯು ಪೂರ್ವದಲ್ಲಿ ರಾಜ್ಯವನ್ನು ಕಳೆದುಕೊಂಡು, ಬಳಿಕ ಧನಕಾಮನಾಗಿ ಅಲ್ಲಿ ಸೂರ್ಯನನ್ನು ಆರಾಧಿಸಿದನು.

೫೩. ದೇವೀ, ಬಲಿಯು ನಿರಾಹಾರನಾಗಿ ತೋಳುಗಳನ್ನು ಮೇಲೆತ್ತಿ, ಒಂದುವರ್ಷ ಪೂರ್ತಿಯಾಗಿ ಪರಮತಪಸ್ಸನ್ನು ಮಾಡಿ, ಬಳಿಕ ತನ್ನ ಇಷ್ಟಾರ್ಥವನ್ನು ಪಡೆದನು.

೫೪. ತಪಸ್ಸನ್ನು ಮಾಡುತ್ತಿದ್ದ ಆತನಿಗೆ ಒಲಿದ ಪೂಜ್ಯನಾದ ಸೂರ್ಯನು ಅವನನ್ನು "ಬಲೀ, ಏತಕ್ಕಾಗಿ ಮಹಾತಪಸ್ಸನ್ನು ಮಾಡುತ್ತೀಯೆ ? ಹೇಳು" ಎಂದು ಕೇಳಿದನು.

೫೫. ಬಲಿಯು "ದೇವೇಶಾ, ನಾನು ರಾಜ್ಯವನ್ನು ಕಳೆದುಕೊಂಡಿದ್ದೇನೆ. ಪಾತಾಳದಲ್ಲಿ ವಾಸಮಾಡುತ್ತಿದ್ದೇನೆ. ಧನಹೀನನಾದವನಿಂದ ಕುಟುಂಬ ಪೋಷಣೆಯು ಹೇಗೆತಾನೆ ಆದೀತು !" ಎಂದನು.

ಮುಕುಟಾತ್ತಸ್ಯ ವೈ ಸೂರ್ಯೋ ದದೌ ಚಿಂತಾಮಣಿಂ ತತಃ ।
ಚಿಂತಾಮಣಿಂ ಸಮಾಸಾದ್ಯ ಪಾತಾಲಮಗಮದ್ಬಲಿಃ ॥ ೫೬ ॥

ತಸ್ಮಿಂಸ್ತೀರ್ಥೇ ನರಃ ಸ್ನಾತಃ ಸರ್ವಪಾಪೈಃ ಪ್ರಮುಚ್ಯತೇ ।
ತತ್ರಾಥ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೫೭ ॥

ಆದಿತ್ಯಾಹನಿ ಸಂಕ್ರಾಂತೌ ಗ್ರಹಣೇ ಚಂದ್ರಸೂರ್ಯಯೋಃ ।
ತಸ್ಮಿಂಸ್ನಾತೋ ನರೋ ದೇವಿ ರಾಜಸೂಯಫಲಂ ಲಭೇತ್ ॥ ೫೮ ॥

ಧ್ರುವೇಣ ಯತ್ರ ಸಂತಪ್ತಂ ಸ್ವೇಚ್ಛಯಾ ಪರಮಂ ತಪಃ ।
ತತ್ರ ವೈ ಸ್ನಾನಮಾತ್ರೇಣ ಧ್ರುವಲೋಕೇ ಮಹೀಯತೇ ॥ ೫೯ ॥

ತತ್ರಾಥಮುಂಚತಿ ಪ್ರಾಣಾನ್ಮಮ ಲೋಕೇ ಮಹೀಯತೇ ॥ ೬೦ ॥

---

೫೬. ಬಳಿಕ ಸೂರ್ಯನು ತನ್ನ ಕಿರೀಟದಿಂದ ಒಂದು ಚಿಂತಾಮಣಿಯನ್ನು ತೆಗೆದು, ಬಲಿಗೆ ಕೊಟ್ಟನು. ಆತನು ಚಿಂತಾಮಣಿಯನ್ನು ತೆಗೆದುಕೊಂಡು ಪಾತಾಳಕ್ಕೆ ಹೊರಟುಹೋದನು.

೫೭. ಆ ಸೂರ್ಯತೀರ್ಥದಲ್ಲಿ ಸ್ನಾನಮಾಡಿದ ಮನುಷ್ಯನು ಸರ್ವ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುವನು. ಅಲ್ಲಿ ಪ್ರಾಣವನ್ನು ಬಿಟ್ಟರೆ, ಅವನು ನನ್ನ ಲೋಕವನ್ನು ಸೇರುವನು.

೫೮. ದೇವಿ, ಭಾನುವಾರದಲ್ಲಿಯೂ, ಸಂಕ್ರಾಂತಿಯಲ್ಲಿಯೂ ಚಂದ್ರ ಸೂರ್ಯಗ್ರಹಣಕಾಲಗಳಲ್ಲಿಯೂ ಆ ತೀರ್ಥದಲ್ಲಿ ಸ್ನಾನಮಾಡುವವನು ರಾಜಸೂಯಯಜ್ಞದ ಫಲವನ್ನು ಪಡೆಯುವನು.

೫೯–೬೦. ಧ್ರುವನು ತನ್ನ ಇಚ್ಛೆಯಂತೆ ಪರಮತಪಸ್ಸನ್ನು ಮಾಡಿದೆಡೆಯಾದ ಧ್ರುವತೀರ್ಥದಲ್ಲಿ ಸ್ನಾನಮಾಡಿದ ಮಾತ್ರದಲ್ಲಿ ಮನುಷ್ಯನು ಧ್ರುವಲೋಕದಲ್ಲಿ ವಾಸಿಸುವನು. ಅಲ್ಲಿ ಪ್ರಾಣಬಿಟ್ಟರೆ ನನ್ನ ಲೋಕದಲ್ಲಿ ನೆಲಸುವನು.

ಧ್ರುವತೀರ್ಥೇ ತು ವಸುಧೇ ಯಃ ಶ್ರಾದ್ಧಂ ಕುರುತೇ ನರಃ |
ಪಿತೄಂಸ್ತಾರಯತೇ ಸರ್ವಾನ್ ಪಿತೃಪಕ್ಷೇ ವಿಶೇಷತಃ || ೬೧ ||

ದಕ್ಷಿಣೇ ಧ್ರುವತೀರ್ಥಸ್ಯ ತೀರ್ಥರಾಜಂ ಪ್ರಕೀರ್ತಿತಂ |
ತಸ್ಮಿಂಸ್ನಾತೋ ನರೋ ದೇವಿ ಋಷಿಲೋಕಂ ಪ್ರಪದ್ಯತೇ || ೬೨ ||

ತದ್ದಕ್ಷಿಣೇ ಮಹಾದೇವಿ ಋಷಿತೀರ್ಥಂ ಪರಂ ಮಮ |
ತತ್ರಸ್ನಾತೋ ನರೋ ದೇವಿ ಋಷಿಲೋಕಂ ಪ್ರಪದ್ಯತೇ ||
ಅಥಾತ್ರ ಮುಂಚತಿ ಪ್ರಾಣಾನ್ಮಮಲೋಕೇ ಮಹೀಯತೇ || ೬೩ ||

ದಕ್ಷಿಣೇ ಋಷಿತೀರ್ಥಸ್ಯ ಮೋಕ್ಷತೀರ್ಥಂ ಪರಂ ಮಮ |
ತತ್ರ ವೈ ಸ್ನಾನಮಾತ್ರೇಣ ಮೋಕ್ಷಮೇವ ಪ್ರಪದ್ಯತೇ || ೬೪ ||

ತತ್ರ ವೈ ಕೋಟಿತೀರ್ಥಂ ಹಿ ದೇವಾನಾಮಪಿ ದುರ್ಲಭಂ |
ತತ್ರ ಸ್ನಾನೇನ ದಾನೇನ ಮಮ ಲೋಕೇ ಮಹೀಯತೇ || ೬೫ ||

---

೬೧. ಭೂದೇವಿ, ಧ್ರುವತೀರ್ಥದಲ್ಲಿ ಮುಖ್ಯವಾಗಿ ಪಿತೃಪಕ್ಷದಲ್ಲಿ ಶ್ರಾದ್ಧಮಾಡುವ ಮನುಷ್ಯನು ಸರ್ವಪಿತೃಗಳನ್ನೂ ಉತ್ತಾರಣಮಾಡುವನು.

೬೨. ದೇವೀ, ಧ್ರುವತೀರ್ಥಕ್ಕೆ ದಕ್ಷಿಣದಲ್ಲಿ ತೀರ್ಥರಾಜನೆಂಬುದಿದೆ. ಅದರಲ್ಲಿ ಸ್ನಾನಮಾಡುವವನು ನನ್ನ ಲೋಕವನ್ನು ಪಡೆಯುವನು.

೬೩. ಮಹಾದೇವೀ, ತೀರ್ಥರಾಜಕ್ಷೇತ್ರಕ್ಕೆ ದಕ್ಷಿಣದಲ್ಲಿ ಉತ್ತಮವಾದ ನನ್ನ ಋಷಿತೀರ್ಥವಿದೆ. ದೇವೀ, ಅಲ್ಲಿ ಸ್ನಾನಮಾಡಿದವನು ಋಷಿಲೋಕವನ್ನು ಸೇರುವನು. ಅಲ್ಲಿ ಪ್ರಾಣಬಿಟ್ಟರೆ ನನ್ನ ಲೋಕದಲ್ಲಿ ನೆಲೆಸುವನು.

೬೪. ಋಷಿತೀರ್ಥಕ್ಕೆ ದಕ್ಷಿಣದಲ್ಲಿ ನನ್ನ ಶ್ರೇಷ್ಠವಾದ ಮೋಕ್ಷತೀರ್ಥವಿದೆ. ಅಲ್ಲಿ ಸ್ನಾನಮಾತ್ರದಿಂದ ಮನುಷ್ಯನು ಮೋಕ್ಷವನ್ನೇ ಪಡೆಯುವನು.

೬೫. ಅಲ್ಲಿರುವ ಕೋಟಿತೀರ್ಥವೆಂಬುದು ದೇವತೆಗಳಿಗೂ ದುರ್ಲಭವಾದುದು. ಅಲ್ಲಿಯ ಸ್ನಾನದಾನಗಳಿಂದ ಮನುಷ್ಯನು ನನ್ನ ಲೋಕದಲ್ಲಿ ವಾಸಿಸುವವನಾಗುವನು.

ಕೋಟಿತೀರ್ಥೇ ನರಃ ಸ್ನಾತ್ವಾ ಸಂತರ್ಪ್ಯ ಪಿತೃದೇವತಾಃ |
ತಾರಿತಾಃ ಪಿತರಸ್ತೇನ ತಥೈವ ಪ್ರಪಿತಾಮಹಾಃ |
ಕೋಟಿತೀರ್ಥೇ ನರಃ ಸ್ನಾತ್ವಾ ಬ್ರಹ್ಮಲೋಕೇ ಮಹೀಯತೇ || ೬೬ ||

ತತ್ರೈವ ವಾಯುತೀರ್ಥಂ ತು ಪಿತೄಣಾಮಪಿ ದುರ್ಲಭಂ |
ಪಿಂಡದಾನಾತ್ತು ತತ್ರೈವ ಪಿತೃಲೋಕಂ ಸ ಗಚ್ಛತಿ || ೬೭ ||

ಗಯಾಪಿಂಡಪ್ರದಾನೇನ ಯತ್ಫಲಂ ಲಭತೇ ನರಃ |
ತತ್ಫಲಂ ಲಭತೇ ದೇವಿ ಜ್ಯೇಷ್ಠೇ ದಾನಾನ್ನ ಸಂಶಯಃ || ೬೮ ||

ದ್ವಾದಶೈತಾನಿ ತೀರ್ಥಾನಿ ದೇವಾನಾಂ ದುರ್ಲಭಾನಿಚ |
ಸ್ನಾನಂ ದಾನಂ ಜಪಂ ಹೋಮಂ ಸಹಸ್ರಗುಣಿತಂ ಭವೇತ್ || ೬೯ ||

---

೬೬. ಕೋಟಿತೀರ್ಥದಲ್ಲಿ ಸ್ನಾನಮಾಡಿ, ಪಿತೃದೇವತೆಗಳಿಗೆ ಸಂತರ್ಪಣ ಮಾಡುವವನು ತನ್ನ ಪಿತೃಪಿತಾಮಹಪ್ರಪಿತಾಮಹರನ್ನು ಉತ್ತಾರಣ ಗೊಳಿಸುವನು. ಕೋಟಿತೀರ್ಥದಲ್ಲಿ ಸ್ನಾನಮಾಡಿದ ಮನುಷ್ಯನು ಬ್ರಹ್ಮಲೋಕ ದಲ್ಲಿ ವಾಸಿಸುವನು.

೬೭. ಅಲ್ಲಿರುವ ವಾಯುತೀರ್ಥವು ಪಿತೃಗಳಿಗೂ ದುರ್ಲಭವಾದುದು. ಅಲ್ಲಿಯೇ ಪಿತೃಗಳಿಗೆ ಪಿಂಡವನ್ನು ಅರ್ಪಿಸುವುದರಿಂದ ಅರ್ಪಿಸಿದವನು ಪಿತೃಲೋಕವನ್ನು ಸೇರುವನು.

೬೮. ದೇವೀ, ಗಯೆಯಲ್ಲಿ ಪಿಂಡಪ್ರದಾನಮಾಡುವುದರಿಂದ ಮನುಷ್ಯನು ಪಡೆಯುವ ಫಲವನ್ನು ಕೋಟಿತೀರ್ಥವಲ್ಲಿ ಜ್ಯೇಷ್ಠಮಾಸದಲ್ಲಿ ದಾನಮಾಡು ವುದರಿಂದ ಪಡೆಯುವುದರಲ್ಲಿ ಸಂಶಯವಿಲ್ಲ.

೬೯. ಈಗ ಹೇಳಿದ ಈ ಹನ್ನೆರಡು (ದ್ವಾದಶ) ತೀರ್ಥಗಳು ದೇವತೆಗಳಿಗೂ ದುರ್ಲಭವಾದುವು. ಈ ತೀರ್ಥಗಳಲ್ಲಿ ಮಾಡುವ ಸ್ನಾನವೂ, ದಾನವೂ, ಜಪವೂ, ಹೋಮವೂ ಸಹಸ್ರಗುಣಿತ ಫಲದಾಯಕವಾಗುವುದು.

ಯೇಷಾಂ ಸ್ಮರಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ।
ತೀರ್ಥಾನಾಂ ಚೈವ ಮಾಹಾತ್ಮ್ಯಂ ಶ್ರುತ್ವಾ ಕಾಮಾನವಾಪ್ನುಯಾತ್ ॥೭೦॥

ಇತಿ ಶ್ರೀ ವರಾಹಪುರಾಣೇಮಥು ರಾಮಾಹಾತ್ಮ್ಯೇ ಮಥುರಾತೀರ್ಥ ಪ್ರಶಂಸಾನಾಮ ದ್ವಾಪಂಚಾಶದಧಿಕಶತತಮೋಧ್ಯಾಯಃ

---

೭೦. ಸ್ಮರಿಸಿದ ಮಾತ್ರದಲ್ಲೇ ಸರ್ವಪಾಪಗಳನ್ನು ವಿಮೋಚನಮಾಡುವ ಈ ತೀರ್ಥಗಳ ಮಹಿಮೆಯನ್ನು ಕೇಳಿ, ಮನುಷ್ಯನು ತನ್ನ ಇಷ್ಟಾರ್ಥಗಳನ್ನು ಪಡೆಯುವನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಥುರಾಕ್ಷೇತ್ರಮಹಿಮೆಯನ್ನು ವಿವರಿಸುತ್ತ, ಮಥುರಾಪುರಿಯನ್ನೂ, ಯಮುನಾ ನದಿಯನ್ನೂ ವರ್ಣಿಸಿ, ಮಥುರಾಮಂಡಲದಲ್ಲಿರುವ ಅವಿಮುಕ್ತಾದಿ ತೀರ್ಥಗಳ ಪ್ರಾಶಸ್ತ್ಯವನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತೆರಡನೆಯ ಅಧ್ಯಾಯ.

|| ಶ್ರೀಃ ||

ತ್ರಿಪಂಚಾಶದಧಿಕಶತತಮೋಽಧ್ಯಾಯಃ

ಅಥ ಮಧುರಾತೀರ್ಥಮಾಹಾತ್ಮ್ಯಂ

॥ ಶ್ರೀವರಾಹ ಉವಾಚ ||

ಉತ್ತರೇ ಶಿವಕುಂಡಾಚ್ಚ ತೀರ್ಥಾನಾಂ ನವಕಂ ಸ್ಮೃತಂ ।
ನವತೀರ್ಥಾತ್ಪರಂ ತೀರ್ಥಂ ನ ಭೂತಂ ನ ಭವಿಷ್ಯತಿ ॥ ೧ ॥

ತತ್ರೈವ ಸ್ನಾನಮಾತ್ರೇಣ ಸೌಭಾಗ್ಯಂ ಜಾಯತೇ ಪರಂ ।
ರೂಪವಂತಃ ಪ್ರಜಾಯಂತೇ ಸ್ವರ್ಗಲೋಕೇ ನ ಸಂಶಯಃ ।
***ತಸ್ಮಿನ್ಮೃತೋ ನರೋ ದೇವಿ ಮಮ ಲೋಕಂ ಪ್ರಪದ್ಯತೇ ॥ ೨ ॥**

ನೂರೈವತ್ತಮೂರನೆಯ ಅಧ್ಯಾಯ

ಮಧುರಾತೀರ್ಥ ಮಹಿಮೆ.

೧. ಶ್ರೀವರಾಹ—ದೇವೀ, ಶಿವಕುಂಡಕ್ಕೆ ಉತ್ತರದಲ್ಲಿ ನವ(ಒಂಬತ್ತು) ತೀರ್ಥಗಳಿವೆ. ನವತೀರ್ಥಕ್ಕಿಂತ ಶ್ರೇಷ್ಠವಾದುದು ಆಗಿಲ್ಲ. ಆಗುವುದೂ ಇಲ್ಲ.

೨. ಅಲ್ಲಿಯ ಸ್ನಾನಮಾತ್ರದಿಂದಲೇ ಮನುಷ್ಯರಿಗೆ ಪರಮಸೌಭಾಗ್ಯ ವುಂಟಾಗುವುದು. ಅವರು ಸ್ವರ್ಗಲೋಕದಲ್ಲಿ ರೂಪವಂತರಾಗಿ ಜನಿಸುವುದರಲ್ಲಿ ಸಂಶಯವಿಲ್ಲ. ಆ ನವತೀರ್ಥದಲ್ಲಿ ಮೃತನಾದವನು ನನ್ನ ಲೋಕವನ್ನು ಪಡೆಯುವನು.

---

* ತಸ್ಮಿನ್ಸ್ನಾತೋ.

ತತ್ರ +ಸಂಯಮನಂ ನಾಮ ತೀರ್ಥಂ ತ್ರೈಲೋಕ್ಯವಿಶ್ರುತಂ ।
ತತ್ರ ಸ್ನಾತೋ ಮೃತೋ ವಾಪಿ ಮಮ ಲೋಕಂ ಸ ಗಚ್ಛತಿ ॥ ೩ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತಸ್ಮಿನ್ ಸಂಯಮನೇ ತೀರ್ಥೇ ಯದ್ವೃತ್ತಂ ಪುರಾತನಂ ॥ ೪ ॥

ಕಶ್ಚಿತ್ಪಾಪಸಮಾಚಾರೋ ನಿಷಾದೋ ದುಷ್ಟಮಾನಸಃ ।
ವಸತೇ ನೈಮಿಷಾರಣ್ಯೇ ಸುಪ್ರತೀತೇಽತಿಪಾಪಕೃತ್ ॥ ೫ ॥

ಕೇನಚಿತ್ತ್ವಥ ಕಾಲೇನ ಸೋಽಗಚ್ಛನ್ಮಧುರಾಂ ಪ್ರತಿ ।
ತತ್ರ ಪ್ರಾಪ್ಯ ಚ ಕಾಲಿಂದೀಂ ಕೃಷ್ಣಪಕ್ಷೇ ಚತುರ್ದಶೀಂ ॥ ೬ ॥

ಸನಿಷಾದಸ್ತತ್ತುರ್ಕಾಮಸ್ತಸ್ಯಾಂ ಚೈವ ತಿಥೌತತಃ ॥ ೭ ॥

---

೩. ಅಲ್ಲಿ ಸಂಯಮನವೆಂಬ ಹೆಸರಿನ ತೀರ್ಥವು ಮೂರು ಲೋಕದಲ್ಲೂ ಪ್ರಸಿದ್ಧವಾದುದು. ಅಲ್ಲಿ ಸ್ನಾನಮಾಡಿದವನೂ, ಮೃತನಾದವನೂ ನನ್ನ ಲೋಕವನ್ನು ಸೇರುವನು.

೪. ವಸುಂಧರೇ, ಆ ಸಂಯಮನತೀರ್ಥದಲ್ಲಿ ಪೂರ್ವದಲ್ಲಿ ಏನೇನು ನಡೆಯಿತೋ ಆ ವಿಚಾರವನ್ನೂ ಹೇಳುವೆನು. ಕೇಳು.

೫. ಸುಪ್ರಸಿದ್ಧವಾದ ನೈಮಿಷಾರಣ್ಯದಲ್ಲಿ ಕೆಟ್ಟ ನಡತೆಯುಳ್ಳವನೂ, ದುಷ್ಟಮನದವನೂ, ಅತಿಪಾಪಮಾಡುವನೂ ಆದ ಒಬ್ಬ ಬೇಡನು ವಾಸಮಾಡುತ್ತಿದ್ದನು.

೬–೭. ಕೆಲವು ಕಾಲದಮೇಲೆ ಆ ಬೇಡನು ಮಧುರೆಯನ್ನು ಕುರಿತು ಹೋದನು. ಅಲ್ಲಿ ಕೃಷ್ಣಪಕ್ಷದ ಚತುರ್ದಶಿಯ ದಿನ ಯಮುನಾನದಿಯ ತೀರವನ್ನು ಸೇರಿ, ಆ ದಿನವೇ ಅದನ್ನು ದಾಟಲು ಮನಸ್ಸುಳ್ಳವನಾದನು.

+ ಸಂಯಮನತೀರ್ಥವೆಂಬುದು ಯಮುನಾನದಿಯಲ್ಲಿಯೇ ಒಂದು ಪ್ರದೇಶ.

ತತಾರಯಮುನಾಂ ಸೋಥ ಪ್ರಾಪ್ಯ ಸಂಯಮನಂ ಶುಭೇ |
ಮಮಜ್ಜಾಸೌ ತತಃ ಪಾಪಸ್ತಸ್ಮಿಂಸ್ತೀರ್ಥೇ ವರೇ ಶುಭೇ ॥ ೮ ॥

ಮಗ್ನಮಾತ್ರಸ್ತತಃ ಪಾಪಃ ಸದ್ಯಃ ಪ್ರಾಣೈರ್ವ್ಯಯುಜ್ಯತ ॥ ೯ ॥

ತತ್ತೀರ್ಥಸ್ಯ ಪ್ರಭಾವೇಣ ಜಾತೋಸೌ ಪೃಥಿವೀಪತಿಃ |
ಸೌರಾಷ್ಟ್ರವಿಷಯೇ ದೇವಿ ಕ್ಷತ್ರಿಯೋಭೂದ್ಧನುರ್ಧರಃ ॥
ನಾಮ್ನಾಯಕ್ಷ್ಮಧನುರ್ನಾಮ ಸೋಭವತ್ಪ್ರಿಯದರ್ಶನಃ ॥ ೧೦ ॥

ಪಾಲಯಮಾಸ ವಸುಧಾಂ ಕ್ಷತ್ರಧರ್ಮಂ ಸಮಾಶ್ರಿತಃ |
ತೇನೋಢಾಕಾಶಿರಾಜಸ್ಯ ಪೀವರೀ ನಾಮತಃ ಶುಭಾ ॥ ೧೧ ॥

ಪತ್ನೀಶತಾನಾಂ ಮುಖ್ಯಾನಾಂ ಪ್ರವರಾ ಸಾ ವಸುಂಧರೇ |
ತಾಂ ಚೈವ ರಮಯಾಮಾಸ ಉದ್ಯಾನೇಷು ವನೇಷು ಚ ॥ ೧೨ ॥

೮–೯. ಶುಭೇ, ಬಳಿಕ ಯಮುನೆಯನ್ನು ದಾಟುತ್ತ, ಸಂಯಮನ ತೀರ್ಥವನ್ನು ಪ್ರವೇಶಿಸಿದ ಆ ಪಾಪಿಯು ಉತ್ತಮವಾದ ಆ ತೀರ್ಥದಲ್ಲಿ ಮುಳುಗಿಹೋದನು. ಮುಳುಗಿದೊಡನೆಯೇ ಪ್ರಾಣಗಳನ್ನು ಬಿಟ್ಟನು.

೧೦. ದೇವೀ, ಬಳಿಕ ಆ ಬೇಡನು ಆ ತೀರ್ಥದ ಪ್ರಭಾವದಿಂದ ಸೌರಾಷ್ಟ್ರದೇಶದಲ್ಲಿ ಕ್ಷತ್ರಿಯವಂಶದಲ್ಲಿ 'ಯಕ್ಷ್ಮಧನು' ವೆಂಬ ಹೆಸರಿನ ದೊರೆಯಾಗಿ ಜನಿಸಿದನು. ಆತನು ಧನುರ್ಧರನೂ, ಸುಂದರನೂ ಆಗಿದ್ದನು.

೧೧. ಆತನು ಕ್ಷತ್ರಿಯಧರ್ಮವನ್ನು ಅನುಸರಿಸಿ ಭೂಮಿಯನ್ನು ಪಾಲಿಸುತ್ತಿದ್ದನು. ಆತನು ಕಾಶಿಯರಾಜನ ಪುತ್ರಿಯಾದ ಪೀವರಿಯೆಂಬ ಶುಭೆಯನ್ನು ವಿವಾಹಮಾಡಿಕೊಂಡನು.

೧೨–೧೩. ವಸುಂಧರೇ, ಆ ಪೀವರಿ ಆ ದೊರೆಯ ಮುಖ್ಯರಾದ ನೂರುಜನ ಪತ್ನಿಯರಲ್ಲಿ ಶ್ರೇಷ್ಠಳಾಗಿದ್ದಳು. ಆ ದೊರೆಯು ಆಕೆಯನ್ನು

ಪ್ರಾಸಾದೇಷು ಚ ರಮ್ಯೇಷು ನದೀನಾಂ ಪುಲಿನೇಷು ಚ ॥ ೧೩ ॥

ಪ್ರಜಾಃ ಪಾಲಯತಸ್ತಸ್ಯ ದಾನಾನಿ ದದತಸ್ತಥಾ ।
ಕಾಲೋ ಗಚ್ಛತಿ ರಾಜಾತು ಭೋಗಾಸಕ್ತಿಂ ಚ ವಿಂದತಿ ।
ಭೋಗಾಸಕ್ತಸ್ಯ ವಸುಧೇ ವರ್ಷಾಣಿ ಸಪ್ತಸಪ್ತತಿಃ ॥ ೧೪ ॥

ಪುತ್ರಾಃ ಸಪ್ತ ತಥಾಜಾತಾಃ ಕನ್ಯಾಃ ಪಂಚ ಸುಶೋಭನಾಃ
ರಾಜ್ಞಾಂ ಪಂಚಸುತಾ ದತ್ತಾ ಕನ್ಯಾಃ ಕಮಲಲೋಚನಾಃ ॥
ಪುತ್ರಾನ್ ಸಂಸ್ಥಾಪಯಾಮಾಸ ಸ್ಥಾನೇಷು ವಸುಧಾಧಿಪಾನ್ ॥ ೧೫ ॥

ಪೀವರ್ಯಾಸಹ ಸುಪ್ತಃ ಸ ರಾತ್ರೌ ಚ ವಸುಧಾಧಿಪಃ ॥ ೧೬ ॥

ತತ್ರ ಪ್ರಬುದ್ಧೋ ನೃಪತಿರ್ಹಾಹೇತಿ ವದತೇ ಮುಹುಃ ।
ಸ್ಮೃತ್ವಾ ತು ಮಧುರಾಂ ದೇವಿ ಸ್ಮೃತ್ವಾ ಸಂಯಮನಂ ಪರಮ್ ॥ ೧೭ ॥

ಉಪವನಗಳಲ್ಲಿಯೂ, ವನಗಳಲ್ಲಿಯೂ, ರಮ್ಯವಾದ ಅರಮನೆಗಳಲ್ಲಿಯೂ, ನದಿಗಳ ಮರಳು ದಿಣ್ಣೆಗಳಲ್ಲಿಯೂ ಸಂತೋಷಪಡಿಸುತ್ತಿದ್ದನು.

೧೪. ಪ್ರಜೆಗಳನ್ನು ಪಾಲಿಸುತ್ತ, ದಾನಗಳನ್ನು ಕೊಡುತ್ತ, ಕಾಲಕಳೆಯುತ್ತಿರುವ ಆ ರಾಜನಿಗೆ ಭೋಗಾಭಿಲಾಷೆಯೂ ಇದ್ದಿತು. ಭೂದೇವೀ, ಭೋಗಾಸಕ್ತನಾಗಿದ್ದ ಆ ದೊರೆಗೆ ಎಪ್ಪತ್ತೇಳು ವರ್ಷಗಳಾದುವು

೧೫ ಏಳುಜನ ಪುತ್ರರೂ, ಮಂಗಳಾಗಿಯರಾದ ಐವರು ಪುತ್ರಿಯರೂ. ಆತನಿಗೆ ಜನಿಸಿದರು. ಕಮಲನೇತ್ರೆಯರಾದ ಆ ಐವರು ಕನ್ನೆಯರನ್ನೂ ದೊರೆಯು ರಾಜರಿಗೆ ವಿವಾಹಮಾಡಿಕೊಟ್ಟನು. ಗಂಡುಮಕ್ಕಳನ್ನು ತಕ್ಕೆಡೆಗಳಲ್ಲಿ ದೊರೆಗಳನ್ನಾಗಿ ನಿಲ್ಲಿಸಿದನು.

೧೬–೧೭. ಬಳಿಕ ಒಂದುದಿನ ರಾತ್ರೆ, ರಾಣಿಯಾದ ಪೀವರಿಯೊಡನೆ ಮಲಗಿ, ನಿದ್ದೆಮಾಡುತ್ತಿದ್ದ ದೊರೆಯು ಎಚ್ಚರಗೊಂಡು ಮಧುರೆಯನ್ನೂ, ಉತ್ತಮವಾದ ಸಂಯಮನವನ್ನೂ ಜ್ಞಾಪಿಸಿಕೊಂಡು, ಅಲ್ಲಿಯೇ “ ಹಾ, ಹಾ, ” ಎಂದು ಮತ್ತೆ ಮತ್ತೆ ಕೂಗಿದನು.

ತತಃ ಸಾ ಪೀವರೀ ಪ್ರಾಹ ಕಿಮೇವಂ ಭಾಷಸೇ ನೃಪ ।
ಪ್ರಿಯಾಯಾ ವಚನಂ ಶ್ರುತ್ವಾ ರಾಜಾ ವಚನಮಬ್ರವೀತ್ ॥ ೧೮ ॥

ಮತ್ತಃ ಸುಪ್ತಃ ಪ್ರಮತ್ತಶ್ಚ ಅಸಂಬದ್ಧಂ ಪ್ರಭಾಷತೇ ।
ನಿದ್ರಾವಶಸ್ಯ ವಚನಂ ನ ಸಂಪ್ರಷ್ಟುಂತ್ವಮರ್ಹಸಿ ॥ ೧೯ ॥

॥ ಪೀವರ್ಯುವಾಚ ॥

ಕಥಯಸ್ವ ಮಮಾದ್ಯ ತ್ವಂ ಯದ್ಯಹಂ ವಲ್ಲಭಾತವ ।
ಪ್ರಾಣಾಂಸ್ತ್ಯಕ್ಷ್ಯಾಮ್ಯಹಂ ದೇವ ಗೋಪಯಿಷ್ಯಸಿ ಮೇ ಯದಿ ॥ ೨೦ ॥

ಪ್ರಿಯಾಯಾ ವಚನಂ ಶ್ರುತ್ವಾ ಪ್ರತ್ಯುವಾಚ ನರಾಧಿಪಃ ।
ಅವಶ್ಯಂ ಯದಿ ವಕ್ತವ್ಯಂ ಗಚ್ಛಾವೋ ಮಥುರಾಂ ಪುರೀಮ್ ॥ ೨೧ ॥

ತತ್ರಗತ್ವಾ ಯಥಾತತ್ತ್ವಂ ವದಿಷ್ಯಾಮಿ ಶುಭಾನನೇ ।
ದದಸ್ವ ವಿಪುಲಂ ದಾನಂ ಬ್ರಾಹ್ಮಣೇಭ್ಯಃ ಸುಲೋಚನೇ ॥ ೨೨ ॥

೧೮-೧೯. ಬಳಿಕ ಆ ಪೀವರಿಯು, "ದೊರೆಯೇ, ಇದೇನು ಹೀಗೆ ಹೇಳುತ್ತೀಯೇ ?!" ಎಂದು ಕೇಳಿದಳು. ಪ್ರಿಯೆಯ ಮಾತನ್ನು ಕೇಳಿ, ದೊರೆಯು, "ಮದಿಸಿದವನೂ, ನಿದ್ದೆಯವನೂ, ಹುಚ್ಚನೂ ಅಸಂಬದ್ಧವಾದುದನ್ನು ಹೇಳುತ್ತಾನೆ. ಆದುದರಿಂದ ನಿದ್ದೆಯಲ್ಲಿದ್ದವನ ಮಾತನ್ನು ನೀನು ಏಕೆಂದು ಕೇಳಬಾರದು" ಎಂದನು.

೨೦. ಪೀವರಿ—ನಾನು ನಿನಗೆ ಪ್ರಿಯೆಯಾಗಿದ್ದರೆ ಈಗ ನೀನು ಆ ವಿಚಾರವನ್ನು ನನಗೆ ಹೇಳು. ದೇವ, ನೀನು ನನ್ನಲ್ಲಿ ಅದನ್ನು ಮರೆಸುವೆಯಾದರೆ ನಾನು ಪ್ರಾಣಗಳನ್ನು ಬಿಡುತ್ತೇನೆ.

೨೧-೨೨. ಪ್ರಿಯೆಯ ಮಾತನ್ನು ಕೇಳಿ, ದೊರೆಯು "ಅವಶ್ಯವಾಗಿ ಹೇಳಲೇ ಬೇಕಾದರೆ, ಮಥುರಾಪುರಿಗೆ ಹೋಗೋಣ. ಶುಭಾನನೇ, ಅಲ್ಲಿಗೆ ಹೋಗಿ, ಇರುವ ವಿಚಾರವನ್ನು ನಿಜವಾಗಿ ಹೇಳುವೆನು. ಸುಲೋಚನೇ, ಬ್ರಾಹ್ಮಣರಿಗೆ ಬೇಕಾದಹಾಗೆ ದಾನಮಾಡು" ಎಂದು ಬದಲು ಹೇಳಿದನು.

ಪುತ್ರಾನ್‌ಸಂಸ್ಥಾಪ್ಯ ದೌಹಿತ್ರಾನ್ ಸ್ವೇಸ್ವೇಸ್ಥಾನೇ ಶುಭಾನ್ ಪ್ರಿಯೇ ।
ಗ್ರಾಮಾಂಶ್ಚ ಕೋಶಂ ರತ್ನಾನಿ ಪುತ್ರಾನ್ ವೀಕ್ಷ್ಯ ಪುನಃ ಪುನಃ ॥ ೨೩ ॥

ತತಃ ಸಮ್ಮಾನಯಾಮಾಸ ಜನಂ ಪುರನಿವಾಸಿನಮ್ ।
ಪಿತೃಪೈತಾಮಹಂ ರಾಜ್ಯಂ ಪಾಲನೀಯಂ ಯಥಾಕ್ರಮಮ್ ॥
ರಾಜ್ಯೇ ಪುತ್ರಾನ್ನಿಯೋಕ್ಷ್ಯಾಮಿ ಯದಿ ವೋ ರೋಚತೇಽನಘಾಃ ॥ ೨೪ ॥

ರಾಜ್ಯಪುತ್ರಕಲತ್ರಾಣಿ ಬಂಧುವರ್ಗಂ ತಥೈವ ಚ ।
* ನಿತ್ಯಮಿಚ್ಛತಿ ವೈ ಲೋಕೋ ಯಮಸ್ಯೇಚ್ಛಾತುಚಾನ್ಯಥಾ ॥ ೨೫ ॥

ಏವಂ ಜ್ಞಾತ್ವಾ ಪ್ರಸನ್ನೇನ ಕರ್ತವ್ಯಂ ಚಾತ್ಮನೋ ಹಿತಮ್ ॥ ೨೬ ॥

---

೨೩. ಪ್ರಿಯೇ, ಬಳಿಕ ದೊರೆಯು ಶುಭಕರರಾದ ಪುತ್ರರಿಗೂ, ದೌಹಿತ್ರರಿಗೂ ಗ್ರಾಮಗಳನ್ನೂ, ಕೋಶಗಳನ್ನೂ ಕೊಟ್ಟು, ಅವರವರನ್ನು ಸರಿಯಾದ ಸ್ಥಾನದಲ್ಲಿಟ್ಟು, ಪುತ್ರರನ್ನು ಮತ್ತೆ ಮತ್ತೆ ನೋಡಿದನು.

೨೪. ಬಳಿಕ ದೊರೆಯು ಪುರನಿವಾಸಿಗಳಾದ ಜನರನ್ನು ಗೌರವಿಸಿ, "ತಂದೆತಾತಂದಿರಿಂದ ಬಂದಿರುವ ರಾಜ್ಯವನ್ನು ಕ್ರಮವಾಗಿ ರಕ್ಷಿಸಬೇಕು. ದೋಷರಹಿತರೇ, ನಿಮಗೆ ಅಭಿಮತವಾದರೆ ರಾಜ್ಯವಾಳಲು ಪುತ್ರರನ್ನು ನಿಯಮಿಸುತ್ತೇನೆ-

೨೫-೨೬. ಲೋಕವು ಯಾವಾಗಲೂ ರಾಜ್ಯಪುತ್ರಪತ್ನಿಯರನ್ನೂ, ಬಂಧುವರ್ಗವನ್ನೂ ಶಾಶ್ವತವಾಗಿ ಬಯಸುತ್ತದೆ. ಆದರೆ ಯಮನ ಬಯಕೆಯೇ ಬೇರೆ. ಎಂಬುದನ್ನು ನಿರ್ಮಲಹೃದಯನಾದವನು ಅರಿತು ಆತ್ಮಹಿತವನ್ನು ಮಾಡಿಕೊಳ್ಳಬೇಕು.

---

* ನಿತ್ಯಮಿಚ್ಛತಿ ವೈ ಲೋಕೋ ಯಮಸ್ಯೇಚ್ಛತಿ ನಾನ್ಯಥಾ (ಬೊಂ)
ನಿತ್ಯಮಿಚ್ಛಂತಿ ವೈ ಲೋಕೋ ಯಮಸ್ಯೇಚ್ಛಾನಿ ಚಾನ್ಯಥಾ (ಕ.)

ತಸ್ಮಾತ್ಸರ್ವಪ್ರಯತ್ನೇನ ಗಚ್ಛಾಮೋ ಮಧುರಾಂ ಪುರೀಮ್ ।
ಅಹೋ ಕಷ್ಟಂ ಯದಸ್ಮಾಭಿಃ ಪುರಾ ರಾಜ್ಯಮನುಷ್ಠಿತಮ್ ॥ ೨೭ ॥

ಇದಾನೀಂ ತುಮಯಾ ಜ್ಞಾತಂ ತ್ಯಾಗಾನ್ನಾಸ್ತಿಪರಂ ಸುಖಮ್ ।
ನಾಸ್ತಿವಿದ್ಯಾಸಮಂ ಚಕ್ಷುಃ ನಾಸ್ತಿ ಚಕ್ಷುಃ ಸಮಂ ಬಲಂ ॥ ೨೮ ॥

ನಾಸ್ತಿರಾಗಸಮಂ ದುಃಖಂ ನಾಸ್ತಿತ್ಯಾಗಾತ್ಪರಂ ಸುಖಂ ।
ಯಃ ಕಾಮಾನ್ ಕುರುತೇ ಸರ್ವಾನ್ ಯಶ್ಚೈತಾನ್ ಕೇವಲಾಂ ತ್ಯಜೇತ್ ॥
ಪ್ರಾಯೇಣ ಸರ್ವಕಾಮಾನಾಂ ಪರಿತ್ಯಾಗೋ ವಿಶಿಷ್ಯತೇ ॥ ೩೦ ॥

ಅಭಿಷಿಚ್ಯ ಸುತಂ ಜ್ಯೇಷ್ಠಮನುಯೋಜ್ಯ ಪರಾನ್ ಬಹೂನ್ ।
ತತಃ ಪೌರಜನಂ ದೃಷ್ಟ್ವಾ ಚತುರಂಗ ಬಲಾನ್ವಿತಃ ॥
ತತಃ ಕಾಲೇನ ಮಹತಾ ಸಂಪ್ರಾಪ್ತೋ ಮಧುರಾಂ ಪುರೀಂ ॥ ೩೧ ॥

---

೨೭. ಆದುದರಿಂದ ನಾವು ಸರ್ವಪ್ರಯತ್ನದಿಂದ ಮಧುರಾಪುರಿಗೆ ಹೋಗುತ್ತೇವೆ. ಅಯ್ಯೋ! ಕಷ್ಟ. ನಾವು ಇದುವರೆಗೂ ರಾಜ್ಯವನ್ನು ಆಳಿದುದಾಯಿತು.

೨೮-೩೦. ಈಗ ನನಗೆ ತಿಳಿಯಿತು! ತ್ಯಾಗಕ್ಕಿಂತ ಮೇಲಾದ ಸುಖವಿಲ್ಲ. ವಿದ್ಯೆಗೆ ಸಮವಾದ ಕಣ್ಣಿಲ್ಲ. ಕಣ್ಣಿಗೆ ಸಮವಾದ ಬಲವಿಲ್ಲ. ರಾಗಕ್ಕೆ ಸಮವಾದ ದುಃಖವಿಲ್ಲ. ತ್ಯಾಗ(ಇದ್ದುದನ್ನು ಕೊಟ್ಟು ಆಸೆಯನ್ನು ಬಿಡುವುದ)ಕ್ಕಿಂತ ಉತ್ತಮಸುಖವಿಲ್ಲ. ಇದನ್ನರಿತ ಯಾವನುತಾನೆ ಸರ್ವಕಾಮಗಳನ್ನೂ ಬಯಸುತ್ತಾ ಈ ಮುಖ್ಯಧರ್ಮಗಳನ್ನು ಅಥವಾ ತತ್ವಗಳನ್ನು ಬಿಟ್ಟಾನು! ಪ್ರಾಯಿಕವಾಗಿ ಸರ್ವಕಾಮಗಳನ್ನೂ ಪರಿತ್ಯಜಿಸುವುದೇ ಉತ್ತಮ" ಎಂದು ಹೇಳಿದನು.

೩೧. ಬಳಿಕ ಆ ಯಜ್ಞಮೂರ್ತಿಧನುರಾಜನು ಹಿರಿಯ ಮಗನಿಗೆ ರಾಜ್ಯದಲ್ಲಿ ಅಭಿಷೇಕಮಾಡಿ, ಬಹುಜನ ಅಧೀನರಾಜರು ಮಂತ್ರಿಗಳೇ ಮೊದಲಾದವರನ್ನು ಅವನ ಸಹಾಯಕ್ಕೆ ಸೇರಿಸಿ, ಪುರಜನರನ್ನೂ ನೋಡಿ, ಬಳಿಕ ಚತುರಂಗಬಲ ಸಹಿತನಾಗಿ ಹೊರಟು, ಬಹಳದಿನಗಳಮೇಲೆ ಮಧುರಾಪಟ್ಟಣವನ್ನು ಸೇರಿದನು.

ತೇನ ದೃಷ್ಟ್ವಾ ಪುರೀ ರಮ್ಯಾವಾಸವಸ್ಯ ಪುರೀ ಯಥಾ ।
ತೀರ್ಥೈರ್ದ್ವಾದಶಭಿರ್ಯುಕ್ತಾ ಪುಣ್ಯಾ ಪಾಪಹರಾ ಶುಭಾ ॥ ೩೨ ॥

ರಮ್ಯಂ ಮಧುವನಂ ನಾಮ ವಿಷ್ಣುಸ್ಥಾನಮನುತ್ತಮಂ ।
ತಂ ದೃಷ್ಟ್ವಾ ಮನುಜೋ ದೇವಿ ಕೃತಕೃತ್ಯೋ ಹಿ ಜಾಯತೇ ॥ ೩೩ ॥

ಏಕಾದಶೀ ಶುಕ್ಲಪಕ್ಷೇ ಮಾಸಿ ಭಾದ್ರಪದೇ ತಥಾ ।
ತಸ್ಮಿನ್ ಸ್ನಾತೋ ನರೋ ದೇವಿ ಕೃತಕೃತ್ಯೋ ಹಿ ಜಾಯತೇ ॥ ೩೪ ॥

ವನಂ ಕುಂದವನಂ ನಾಮ ತೃತೀಯಂ ಚೈವಮುತ್ತಮಂ ।
ತತ್ರ ಗತ್ವಾ ನರೋ ದೇವಿ ಕೃತಕೃತ್ಯೋ ಹಿ ಜಾಯತೇ ॥ ೩೫ ॥

ಏಕಾದಶೀ ಕೃಷ್ಣಪಕ್ಷೇ ಮಾಸಿ ಭಾದ್ರಪದೇ ಹಿ ಯಾ ।
ತತ್ರ ಸ್ನಾತೋ ನರೋ ದೇವಿ ರುದ್ರಲೋಕೇ ಮಹೀಯತೇ ॥ ೩೬ ॥

---

೩೨. ಆ ದೊರೆಗೆ ದ್ವಾದಶತೀರ್ಥಗಳಿಂದ ಕೂಡಿ, ಪವಿತ್ರವೂ, ಪಾಪಹರವೂ, ಶುಭವೂ, ಮನೋಹರವೂ ಆದ ಆ ಪಟ್ಟಣವು ಅಮರಾವತಿಯಂತೆ ಕಾಣಿಸಿತು.

೩೩. ಭೂದೇವೀ, ರಮ್ಯವಾದ ಮಧುವನವೆಂಬುದು ಅತ್ಯುತ್ತಮವಾದ ವಿಷ್ಣುಸ್ಥಾನ. ಅದನ್ನು ನೋಡಿದ ಮನುಷ್ಯನು ಕೃತಕೃತ್ಯನಾಗುವನು.

೩೪. ದೇವೀ, ಭಾದ್ರಪದಮಾಸದ ಶುಕ್ಲಪಕ್ಷದ ಏಕಾದಶಿಯಲ್ಲಿ ಆ ತೀರ್ಥದಲ್ಲಿ ಸ್ನಾನಮಾಡಿದ ಮನುಷ್ಯನು ಕೃತಕೃತ್ಯ(ತಾನು ಮಾಡಬೇಕಾದುದನ್ನೆಲ್ಲಾ ಪೂರ್ಣವಾಗಿ ಮಾಡಿದವ)ನಾಗುವನು.

೩೫. ದೇವೀ, ಮೂರನೆಯದಾದ ಕುಂದವನವೆಂಬ ಹೆಸರಿನ ವನವೂ ಉತ್ತಮವಾದುದು. ಅಲ್ಲಿಗೆ ಹೋಗಿ ಮನುಷ್ಯನು ಕೃತಕೃತ್ಯನಾಗುವನು.

೩೬. ದೇವೀ, ಭಾದ್ರಪದಮಾಸದ ಕೃಷ್ಣಪಕ್ಷದ ಏಕಾದಶಿಯದಿನ ಅಲ್ಲಿ ಸ್ನಾನಮಾಡಿದ ಮನುಷ್ಯನು ರುದ್ರಲೋಕದಲ್ಲಿ ವಾಸಿಸುವನು.

ಚತುರ್ಥಂ ಕಾಮ್ಯಕವನಂ ವನಾನಾಮುತ್ತಮಂ ವನಂ ।
ತತ್ರ ಗತ್ವಾ ನರೋ ದೇವಿ ಮಮ ಲೋಕೇ ಮಹೀಯತೇ ॥ ೩೭ ॥

ವಿಮಲಸ್ಯ ಚ ಕುಂಡೇ ತು ಸರ್ವಪಾಪೈಃ ಪ್ರಮುಚ್ಯತೇ ।
ಯಸ್ತತ್ರ ಮುಂಚತಿ ಪ್ರಾಣಾನ್ ಮಮ ಲೋಕಂ ಸ ಗಚ್ಛತಿ ॥ ೩೮ ॥

ಬಕುಲಂ ಪಂಚಮಂ ನಾಮ ವನಾನಾಮುತ್ತಮಂ ವನಂ ।
ತತ್ರ ಗತ್ವಾ ನರೋ ದೇವಿ ಅಗ್ನಿಸ್ಥಾನಂ ಸ ಗಚ್ಛತಿ ॥ ೩೯ ॥

ಯಮುನಾಯಾಃ ಪರೇ ಪಾರೇ ದೇವಾನಾಮಪಿ ದುರ್ಲಭಂ
ಅಸ್ತಿ ಭದ್ರವನಂ ನಾಮ ಷಷ್ಠಂ ವನಮನುತ್ತಮಂ ॥ ೪೦ ॥

ತತ್ರ ಗತ್ವಾ ತು ವಸುಧೇ ಮದ್ಭಕ್ತೋ ಮತ್ಪರಾಯಣಃ ।
ತದ್ವನಸ್ಯ ಪ್ರಭಾವೇಣ ನಾಗಲೋಕಂ ಸ ಗಚ್ಛತಿ ॥ ೪೧ ॥

೩೭–೩೮, ದೇವೀ, ನಾಲ್ಕನೆಯದಾದ ಕಾಮ್ಯಕವನವೆಂಬುದು ವನಗಳಲ್ಲಿ ಉತ್ತಮವಾದುದು. ಅಲ್ಲಿಗೆ ಹೋಗಿ, ಅಲ್ಲಿರುವ ವಿಮಲಕುಂಡದಲ್ಲಿ ಸ್ನಾನ ಮಾಡುವವನೂ, ಅಲ್ಲಿ ಪ್ರಾಣಬಿಡುವವನೂ ಸರ್ವಪಾಪಗಳನ್ನೂ ಕಳೆದುಕೊಂಡು ನನ್ನ ಲೋಕವನ್ನು ಸೇರುವನು.

೩೯. ದೇವೀ, ಐದನೆಯದಾದ ಬಕುಲವನವೆಂಬುದು ವನಗಳಲ್ಲೆಲ್ಲಾ ಉತ್ತಮವಾದುದು. ಅಲ್ಲಿಗೆ ಹೋದ ಮನುಷ್ಯನು ಅಗ್ನಿಲೋಕವನ್ನು ಸೇರುವನು.

೪೦. ಯಮುನಾನದಿಯ ಮತ್ತೊಂದು ದಡದಲ್ಲಿರುವ ಭದ್ರವನವೆಂಬುದು ದೇವತೆಗಳಿಗೂ ದುರ್ಲಭವಾದುದೂ, ಅತ್ಯುತ್ತಮವಾದುದೂ ಆಗಿ ಆರನೆಯದಾಗಿದೆ.

೪೧. ಭೂಮೀ, ನನ್ನ ಭಕ್ತಿಯಲ್ಲಿ ನಿರತನಾಗಿ, ನನ್ನನ್ನು ಯಾವಾಗಲೂ ಧ್ಯಾನಿಸುವವನು ಆ ಭದ್ರವನಕ್ಕೆ ಹೋದರೆ ಆ ವನದ ಮಹಿಮೆಯಿಂದ ಅವನು ನಾಗಲೋಕವನ್ನು ಸೇರುವನು.

ಸಪ್ತಮಂ ತು ವನಂ ಭೂಮೇ ಖಾದಿರಂ ಲೋಕವಿಶ್ರುತಂ ।
ತತ್ರ ಗತ್ವಾ ನರೋ ಭದ್ರೇ ಮಮಲೋಕಂ ಸ ಗಚ್ಛತಿ ॥ ೪೨ ॥

ಮಹಾವನಂ ಚಾಷ್ಟಮಂ ತು ಸದೈವ ತು ಮಮ ಪ್ರಿಯಂ ।
ಯತ್ರ ಗತ್ವಾ ತು ಮನುಜ ಇಂದ್ರಲೋಕೇ ಮಹೀಯತೇ ॥ ೪೩ ॥

ಲೋಹಜಂಘವನಂ ನಾಮ ಲೋಹಜಂಘೇನ ರಕ್ಷಿತಂ ।
ನವಮಂ ತು ವನಂ ನಾಮ ಸರ್ವಪಾತಕನಾಶನಂ ॥ ೪೪ ॥

ವನಂ ಬಿಲ್ವವನಂ ನಾಮ ದಶಮಂ ದೇವಪೂಜಿತಂ ।
ತತ್ರ ಗತ್ವಾ ತು ಮನುಜೋ ಬ್ರಹ್ಮಲೋಕೇ ಮಹೀಯತೇ ॥ ೪೫ ॥

ಏಕಾದಶಂ ತು +ಭಾಂಡೀರಂ ಯೋಗಿನಾಂ ಪ್ರಿಯಮುತ್ತಮಂ ।
ತಸ್ಯ ದರ್ಶನಮಾತ್ರೇಣ ನರೋ ಗರ್ಭಂ ನ ಗಚ್ಛತಿ ॥ ೪೬ ॥

---

೪೨. ಭೂಮೀ, ಏಳನೆಯದು ಲೋಕಪ್ರಸಿದ್ಧವಾದ ಖಾದಿರವನ, ಭದ್ರೇ, ಮನುಷ್ಯನು ಅಲ್ಲಿಗೆ ಹೋದರೆ, ನನ್ನ ಲೋಕವನ್ನು ಸೇರುವನು.

೪೩. ಎಲ್ಲಿಗೆ ಹೋದ ಮನುಷ್ಯನು ಇಂದ್ರಲೋಕವನ್ನು ಸೇರುವನೋ ಆ ಎಂಟನೆಯದಾದ ಮಹಾವನವು ನನಗೆ ಯಾವಾಗಲೂ ಪ್ರಿಯವಾದುದು

೪೪. ಲೋಹಜಂಘನೆಂಬುವನು ಕಾಯುತ್ತಿರುವ ಲೋಹಜಂಘವನವೆಂಬ ಒಂಭತ್ತನೆಯ ವನವು ಸರ್ವಪಾಪನಾಶಕವಾದುದು.

೪೫. ಹತ್ತನೆಯದಾದ ಬಿಲ್ವವನವೆಂಬುದು ದೇವತೆಗಳಿಂದ ಪೂಜಿತವಾದುದು. ಅಲ್ಲಿಗೆ ಹೋಗುವುದರಿಂದ ಮನುಷ್ಯನು ಬ್ರಹ್ಮಲೋಕದಲ್ಲಿ ನೆಲಸುವನಾಗುವನು.

೪೬–೪೭. ಹನ್ನೊಂದನೆಯದು + ಭಾಂಡೀರವನ. ಉತ್ತಮವಾದ ಅದು ಯೋಗಿಗಳಿಗೆ ಪ್ರಿಯವಾದುದು. ಆದರ ದರ್ಶನಮಾತ್ರದಿಂದ ಮನುಷ್ಯನು

\+ ಭಾಂಡೀರವೆಂಬುದು ಒಂದು ಆಲದಮರ. ಕೃಷ್ಣನು ಗೋಕುಲದಲ್ಲಿದ್ದಾಗ ಬಿಸಿಲುಹೊತ್ತಿನಲ್ಲಿ ದನಕರುಗಳನ್ನು ಆ ಮರದಡಿಯಲ್ಲಿ ನಿಲ್ಲಿಸುತ್ತಿದ್ದನು. (ಭಾರತ. ಸ.ಪ. ೫೩)

ಭಾಂಡೀರಂ ಸಮನುಪ್ರಾಪ್ಯ ವನಾನಾಂ ವನಮುತ್ತಮಂ ।
ವಾಸುಧೇವಂ ತತೋ ದೃಷ್ಟ್ವಾ ಪುನರ್ಜನ್ಮ ನವಿದ್ಯತೇ ॥ ೪೭ ॥

ವೃಂದಾವನಂ ದ್ವಾದಶಮಂ ವೃಂದಯಾ ಪರಿರಕ್ಷಿತಂ ।
ಮಮ ಚೈವ ಪ್ರಿಯಂ ಭೂಮೇ ಮಹಾಪಾತಕನಾಶನಂ ॥ ೪೮ ॥

ವೃಂದಾವನಂ ಚ ಗೋವಿಂದಂ ಯೇ ಪಶ್ಯಂತಿ ವಸುಂಧರೇ ।
ನ ತೇ ಯಮಪುರಂ ಯಾಂತಿ ಯಾಂತಿ ಪುಣ್ಯಕೃತಾಂ ಗತಿಂ ॥ ೪೯ ॥

ಇತಿ ಶ್ರೀ ವರಾಹಪುರಾಣೇ ಭಗವಚ್ಛಾಸ್ತ್ರೇ ಮಧುರಾಮಾಹಾತ್ಮ್ಯೇ ಮಧುರಾ ತೀರ್ಥಮಾಹಾತ್ಮ್ಯಂ ನಾಮ ತ್ರಿಪಂಚಾಶದಧಿಕಶತತಮೋಧ್ಯಾಯಃ

ಮತ್ತೆ ಗರ್ಭದಲ್ಲಿ ಜನಿಸುವುದಿಲ್ಲ. ವನಗಳಲ್ಲಿ ಉತ್ತಮವಾದ ಭಾಂಡೀರವನಕ್ಕೆ ಹೋಗಿ, ಬಳಿಕ ಕೃಷ್ಣನ ದರ್ಶನಮಾಡಿದರೆ ಪುನರ್ಜನ್ಮವಿಲ್ಲ.

೪೮. ವೃಂದೆಯೆಂಬುವಳಿಂದ ರಕ್ಷಿತವಾದ ವೃಂದಾವನವು ಹನ್ನೆರಡನೆಯ ಪುಣ್ಯಕ್ಷೇತ್ರ. ಭೂಮೀ, ಅದು ನನಗೆ ಪ್ರಿಯವಾದುದೂ, ಮಹಾಪಾತಕಗಳನ್ನು ನಾಶಮಾಡುವುದೂ ಆಗಿದೆ.

೪೯. ವಸುಂಧರೇ, ವೃಂದಾವನವನ್ನೂ, ಗೋವಿಂದನನ್ನೂ ನೋಡುವವರು ಯಮಪುರಕ್ಕೆ ಹೋಗರು. ಸುಕೃತಿಗಳ ಗತಿಗೆ ಹೋಗುವರು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು, ಭೂದೇವಿಗೆ ಮಧುರೆಯ ಹನ್ನೆರಡು ತೀರ್ಥಗಳ ಮಹಿಮೆಯನ್ನು ವಿವರಿಸುತ್ತಾ, ಸಂಯಮನ ತೀರ್ಥದಲ್ಲಿ ಮೃತನಾಗಿ, ತೀರ್ಥಮಹಿಮೆಯಿಂದ ಯಕ್ಷ್ಮಧನುವೆಂಬ ಹೆಸರಿನಿಂದ ಸೌರಾಷ್ಟ್ರದೇಶದ ರಾಜನಾಗಿ ಜನಿಸಿದ ಬೇಡನ ಕಥೆಯನ್ನೂ ಮಧುವನ ಬೃಂದಾವನಾದಿಗಳ ಪ್ರಾಶಸ್ತ್ಯವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತಮೂರನೆಯ ಅಧ್ಯಾಯ.

॥ ಶ್ರೀಃ ॥

ಚತುಃಪಂಚಾಶದಧಿಕಶತತಮೋಽಧ್ಯಾಯಃ

ಯಮುನಾತೀರ್ಥಪ್ರಭಾವಃ

॥ ಶ್ರೀವರಾಹ ಉವಾಚ ॥

ಏವಂ ವಿಧಾಂ ಚ ಮಥುರಾಂ ದೃಷ್ಟ್ವಾ ತೌ ಮುದಮಾಪತುಃ ।
ಏವಂತು ವಸತಸ್ತಸ್ಯ ರಾಜ್ಞಸ್ತತ್ರ ವಸುಂಧರೇ ॥ ೧ ॥

ಪಪ್ರಚ್ಛ ಚ ತದಾ ಭಾರ್ಯಾ ಯದ್ಗುಹ್ಯಂ ಪೂರ್ವಭಾಷಿತಂ ।
ಪುರಸ್ಥೇನ ತದಾ ರಾಜ್ಞಾ ವಕ್ಷ್ಯಾಮಿ ಮಥುರಾಂ ಪ್ರತಿ ॥ ೨ ॥

ತನ್ಮೇ ವದ ಮಹಾರಾಜ ಯದ್ಗೋಪ್ಯಂ ಪೂರ್ವಭಾಷಿತಂ ।
ರಾಜಾಪ್ಯುವಾಚ ತಾಂ ರಾಜ್ಞೀಂ ತ್ವಯಾಪ್ಯುಕ್ತಂ ಪುರಾ ಮಮ ॥ ೩ ॥

ನೂರೈವತ್ತನಾಲ್ಕನೆಯ ಅಧ್ಯಾಯ

ಯಮುನಾತೀರ್ಥಮಹಿಮೆ.

೧-೨. ಶ್ರೀವರಾಹ—ಆ ಬಗೆಯ ರಮ್ಯವಾದ ಮಥುರೆಯನ್ನು ನೋಡಿ, ರಾಜರಾಣಿಯರಾದ ಯಕ್ಷ್ಮಧನುಷೀವರಿಯರು ಸಂತೋಷಪಟ್ಟರು. ವಸುಂಧರೇ ಹಾಗೆಯೇ ಅವರು ಅಲ್ಲಿ ವಾಸಮಾಡುತ್ತಿರಲು, ರಾಣಿಯು ಹಿಂದೆ ಸೌರಾಷ್ಟ್ರ ರಾಜಧಾನಿಯಲ್ಲಿದ್ದಾಗ ರಾಜನು ಆಕೆಗೆ, ಮಥುರೆಗೆ ಹೋಗಿ ಹೇಳುವೆನೆಂದಿದ್ದ ರಹಸ್ಯವಿಚಾರವನ್ನು ಹೇಳಬೇಕೆಂದು ಕೇಳಿದಳು.

೩-೪. ಆಕೆ, "ಮಹಾರಾಜಾ, ಹಿಂದೆ ಗುಟ್ಟೆಂದು ಯಾವುದನ್ನು ಹೇಳಿದ್ದೆಯೋ ಅದನ್ನು ಈಗ ನನಗೆ ತಿಳಿಸು" ಎಂದಳು. ದೊರೆಯೂ ರಾಣಿಗೆ,

ತದ್ವದಸ್ವ ಸ್ವಕಂ ಗುಹ್ಯಂ ಪಶ್ಚಾದ್ವಕ್ಷ್ಯಾಮ್ಯಹಂ ತವ ॥ ೪ ॥

ಇತ್ಯುಕ್ತ್ವಾ ಪೀವರೀ ಜ್ಞಾತ್ವಾ ಪ್ರಹಸ್ಯ ತು ಗುಣಾಲಯಾ ।
ಪ್ರೋವಾಚ ಚೈವ ರಾಜಾನಂ ಮನಸಃ ಪ್ರೀತಿಕಾರಣಂ ॥ ೫ ॥

ಅಹಂತು ಪೀವರೀ ನಾಮ ಗಂಗಾತೀರನಿವಾಸಿನೀ ।
ಆಗತೇಮಾಂ ಪುರೀಂ ದ್ರಷ್ಟುಂ ಕುಮುದಸ್ಯ ತು ದ್ವಾದಶೀಂ ॥
ನಾವಮಾರುಹ್ಯ ಯಾಂತೀಹ ಪತಿತಾ ಯಮುನಾಜಲೇ ॥ ೬ ॥

ಸದ್ಯಃ ಪ್ರಾಣೈರ್ವಿಯುಕ್ತಾ ಚ ತತ್ತೀರ್ಥಸ್ಯ ಪ್ರಭಾವತಃ ।
ಕಾಶೀರಾಜಪತೇಃ ಕನ್ಯಾ ಜಾತಾಸ್ಮಿ ವಸುಧಾಧಿಪ ।
ತ್ವಯಾ ವಿವಾಹಿತಾ ರಾಜನ್ನ ಚ ಮಾಂ ವಿಜಹಾತ್ ಸ್ಮೃತಿಃ ॥ ೭ ॥

"ನೀನೂ ಹಿಂದೆ ನನಗೆ ಹೇಳಿದ್ದೆ. ನಿನ್ನ ಗುಟ್ಟನ್ನು ಮೊದಲು ನನಗೆ ಹೇಳು. ಆಮೇಲೆ ನಾನು ನನ್ನದನ್ನು ಹೇಳುವೆನು" ಎಂದು ಹೇಳಿದನು.

೫. ಹಾಗೆ ಹೇಳಿಸಿಕೊಂಡ ಗುಣಶಾಲಿನಿಯಾದ ಆ ಪೀವರಿ ಅದನ್ನು ತಿಳಿದು ನಕ್ಕು, ಮನಸ್ಸಿನ ಪ್ರೀತಿಗೆ ಕಾರಣನಾದ ಆ ದೊರೆಗೆ ಮುಂದಿನ ಮಾತನ್ನು ಹೇಳಿದಳು.

೬. "ದೊರೆಯೇ, ನಾನು ಗಂಗಾತೀರದಲ್ಲಿ ವಾಸಮಾಡುತ್ತಿದ್ದ ಪೀವರಿಯೆಂಬುವಳು. ಈ ಪಟ್ಟಣವನ್ನು ನೋಡಬೇಕೆಂದು ಕಾರ್ತಿಕಮಾಸದ ದ್ವಾದಶಿಯದಿನ ಇಲ್ಲಿಗೆ ಬಂದೆನು. ಹಡಗನ್ನೇರಿ ಇಲ್ಲಿಗೆ ಬರುತ್ತ ಯಮುನೆಯ ನೀರಿನಲ್ಲಿ ಬಿದ್ದೆನು.

೭. ದೊರೆಯೇ, ಕೂಡಲೇ ನಾನು ಪ್ರಾಣಬಿಟ್ಟು, ಆ ತೀರ್ಥದ ಪ್ರಭಾವದಿಂದ ಕಾಶೀರಾಜೋತ್ತಮನ ಮಗಳಾಗಿ ಜನಿಸಿದೆನು. ರಾಜನೇ, ನೀನು ನನ್ನನ್ನು ವಿವಾಹಮಾಡಿಕೊಂಡೆ. ಆದರೆ ನನಗೆ ಹಿಂದಿನ ಜನ್ಮದ ಸ್ಮರಣೆಯು ಹೋಗಲಿಲ್ಲ.

ಏತತ್ತೀರ್ಥಪ್ರಭಾವೇಣ ಧರ್ಮಯುಕ್ತಾ ತಥಾನಘ ।
ಧಾರಾಪತನಕೇ ತೀರ್ಥೇ ತ್ಯಕ್ತ್ವಾ ಜೀವಿತಮಾತ್ಮನಃ ॥ ೮ ॥

ಏತಚ್ಛ್ರುತ್ವಾ ತತೋ ರಾಜಾ ಕಥಾಂ ಪ್ರಾಗ್ಜನ್ಮಸಂಭವಾಂ ।
ಸ್ವಾಂ ಚಾಸ್ಯೈಕಥಯತ್ತಸ್ಯೈ ಯಥಾ ಸಂಯಮನೇ ಮೃತಃ ॥ ೯ ॥

ಏವಂ ತೌ ಮಥುರಾಂ ಪ್ರಾಪ್ಯ ಸ್ನಾತ್ವಾ ಯಾಮುನತೀರ್ಥಕೇ ।
ಮಾಂ ಪಶ್ಯಂತೌ ನಿಯಮತಸ್ತತ್ರೈವ ನಿಧನಂ ಗತೌ ॥ ೧೦ ॥

ಮತೌ ಸರ್ವಪರಿತ್ಯಕ್ತೌ ಗತೌ ಮಮ ಸಲೋಕತಾಂ ॥ ೧೧ ॥

ಏತತ್ತೇ ಕಥಿತಂ ದೇವಿ ಅಶ್ಚರ್ಯಂ ಯದಭೂನ್ಮಹತ್ ।
ತ್ಯಕ್ತ್ವಾ ಚಾತ್ಮತನುಂ ತೀರ್ಥೇ ಧಾರಾಪತನಸಂಜ್ಞಕೇ ।
*ಮಮ ಲೋಕಮವಾಪ್ನೋತಿ ತ್ಯಕ್ತಪಾಪೋ ನ ಸಂಶಯಃ ॥ ೧೨ ॥

---

೮. ದೋಷರಹಿತನೇ, ಧಾರಾಪತನಕತೀರ್ಥದಲ್ಲಿ ನಾನು ಪ್ರಾಣಬಿಟ್ಟು, ಈ ತೀರ್ಥದ ಮಹಿಮೆಯಿಂದ ಹಾಗೆ ಧರ್ಮಯುಕ್ತಳೂ ಆದೆನು.''

೯. ಅದನ್ನು ಕೇಳಿ, ಬಳಿಕ ಆ ದೊರೆಯು ಹಿಂದಿನಜನ್ಮದಲ್ಲಿ ಸಂಯಮನ ತೀರ್ಥದಲ್ಲಿ ಹೇಗೆ ಸತ್ತನೋ ಆ ತನ್ನ ಕಥೆಯನ್ನು ಆಕೆಗೆ ಹೇಳಿದನು

೧೦-೧೧. ಹೀಗೆ ಅವರಿಬ್ಬರೂ ಮಥುರೆಯನ್ನು ಸೇರಿ, ಯಮುನೆಯ ತೀರ್ಥಗಳಲ್ಲಿ ಸ್ನಾನಮಾಡಿ, ನಿಯಮದಿಂದ ನನ್ನ ಸಂದರ್ಶನವನ್ನು ಮಾಡುತ್ತಾ ಇದ್ದು, ಅಲ್ಲಿಯೇ ಮಡಿದು, ಸರ್ವವನ್ನೂ ತ್ಯಜಿಸಿ, ನನಗೆ ಇಷ್ಟರಾಗಿ, ನನ್ನ ಲೋಕವನ್ನು ಸೇರಿದರು.

೧೨. ಭೂದೇವೀ, ಮಥುರೆಯಲ್ಲಿ ನಡೆದ ಈ ಮಹಾಶ್ಚರ್ಯವನ್ನು ನಿನಗೆ ಹೇಳಿದುದಾಯಿತು. ಧಾರಾಪತನಕವೆಂಬ ತೀರ್ಥದಲ್ಲಿ ದೇಹತ್ಯಾಗಮಾಡುವವನು ಪಾಪವನ್ನು ಕಳೆದುಕೊಂಡು ನನ್ನ ಲೋಕವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

---

* ನಾಕಲೋಕ

ಯಮುನೇಶ್ವರಮಾಸಾದ್ಯ ತ್ಯಕ್ತ್ವಾ ಜೀವಿತಮಾತ್ಮನಃ ।
ವಿಷ್ಣುಲೋಕಮವಾಪ್ನೋತಿ ದಿವ್ಯಮೂರ್ತಿಶ್ಚತುರ್ಭುಜಃ ॥ ೧೩ ॥

ಧಾರಾಪತನಕೇ ಸ್ನಾತ್ವಾ ನಾಕಲೋಕೇ ಸ ಮೋದತೇ ।
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸಗಚ್ಛತಿ ॥ ೧೪ ॥

ಅತಃ ಪರಂ ನಾಗತೀರ್ಥಂ ತೀರ್ಥಾನಾಮುತ್ತಮೋತ್ತಮಂ ।
ಯತ್ರ ಸ್ನಾತ್ವಾ ದಿವಂ ಯಾಂತಿ ಯೇ ಮೃತಾಸ್ತೇಽಪುನರ್ಭವಾಃ ॥ ೧೫ ॥

ಘಂಟಾಭರಣಕಂ ತೀರ್ಥಂ ಸರ್ವಪಾಪಪ್ರಮೋಚನಂ ।
ಯಸ್ಮಿನ್‌ಸ್ನಾತೋ ನರೋ ಯಾತಿ ಸೂರ್ಯಲೋಕಂ ನ ಸಂಶಯಃ ॥

ಅಥಾತ್ರಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೧೭ ॥

---

೧೩. ಯಮುನೇಶ್ವರತೀರ್ಥಕ್ಕೆ ಹೋಗಿ, ಅಲ್ಲಿ ಪ್ರಾಣಬಿಡುವವನು ದಿವ್ಯಮೂರ್ತಿಯೂ, ಚತುರ್ಭುಜನೂ ಆಗಿ, ವಿಷ್ಣುಲೋಕವನ್ನು ಸೇರುವನು.

೧೪. ಧಾರಾಪತನಕತೀರ್ಥದಲ್ಲಿ ಸ್ನಾನಮಾಡಿದ ಮನುಷ್ಯನು ಸ್ವರ್ಗಲೋಕದಲ್ಲಿ ಆನಂದಪಡುವನು. ಅಲ್ಲಿ ಪ್ರಾಣಬಿಟ್ಟರೆ, ನನ್ನ ಲೋಕವನ್ನು ಸೇರುವನು.

೧೫. ಆಮೇಲೆ ತೀರ್ಥಗಳಲ್ಲಿ ಉತ್ತಮೋತ್ತಮವಾದ ನಾಗತೀರ್ಥ. ಅಲ್ಲಿ ಸ್ನಾನಮಾಡಿದವರು ಸ್ವರ್ಗಕ್ಕೆ ಹೋಗುವರು ಮಡಿದವರು ಪುನರ್ಜನ್ಮವಿಲ್ಲದವರಾಗುವರು.

೧೬–೧೭. ಯಾವುದರಲ್ಲಿ ಸ್ನಾನಮಾಡಿದವನು ಸಂಶಯವಿಲ್ಲದೆ ಸೂರ್ಯಲೋಕವನ್ನು ಸೇರುವನೋ ಆ ಘಂಟಾಭರಣಕತೀರ್ಥವು ಪಾಪಗಳನ್ನೆಲ್ಲಾ ಹೋಗಲಾಡಿಸುವುದು ಪ್ರಾಣಬಿಡುವವನು ಅಲ್ಲಿ ನನ್ನ ಲೋಕವನ್ನು ಸೇರುವನು.

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತೀರ್ಥಾನಾಮುತ್ತಮಂ ತೀರ್ಥಂ ಬ್ರಹ್ಮಲೋಕೇಷು ವಿಶ್ರುತಂ ॥ ೧೮ ॥

ತತ್ರ ಸ್ನಾತ್ವಾ ಚ ಪೀತ್ವಾ ಚ ನಿಯತೋ ನಿಯತಾಶನಃ ।
ಬ್ರಹ್ಮಣಾ ಸಮನುಜ್ಞಾತೋ ಮಮ ಲೋಕಂ ಸ ಗಚ್ಛತಿ ॥ ೧೯ ॥

ಸೋಮತೀರ್ಥೇ ತು ವಸುಧೇ ಪವಿತ್ರೇ ಯಮುನಾಂಭಸಿ ।
ಯತ್ರ ಪಶ್ಯತಿ ಮಾಂ ಸೋಮೋ ದ್ವಾಪರೇ ಯುಗಸಂಸ್ಥಿತೇ ॥ ೨೦ ॥

ತತ್ರಾಭಿಷೇಕಂ ಕುರ್ವೀತ ಸ್ವಕರ್ಮಪರಿನಿಷ್ಠಿತಃ ।
ಮೋದತೇ ಸೋಮಲೋಕೇ ತು ಏವಮೇವ ನ ಸಂಶಯಃ ॥ ೨೧ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೨೨ ॥

---

೧೮. ವಸುಂಧರೇ, ಮತ್ತೆ ಬೇರೊಂದು ತೀರ್ಥವನ್ನು ಹೇಳುತ್ತೇನೆ. ಕೇಳು ತೀರ್ಥಗಳಲ್ಲಿ ಉತ್ತಮವಾದ ಅದು ಬ್ರಹ್ಮಲೋಕಗಳಲ್ಲೂ ಪ್ರಸಿದ್ಧವಾಗಿದೆ.

೧೯. ಆಹಾರವ್ಯವಹಾರಗಳಲ್ಲಿ ನಿಯಮವುಳ್ಳವನಾಗಿದ್ದು ಆ ತೀರ್ಥದಲ್ಲಿ ಸ್ನಾನಪಾನಗಳನ್ನು ಮಾಡುವವನು, ಬ್ರಹ್ಮನಿಂದ ಅನುಮತಿಯನ್ನು ಪಡೆದು, ನನ್ನ ಲೋಕವನ್ನು ಸೇರುವನು.

೨೦. ಭೂದೇವೀ, ಯಮುನೆಯ ನೀರಿನಲ್ಲಿ ಪವಿತ್ರವಾದ ಸೋಮ ತೀರ್ಥದಲ್ಲಿ, ದ್ವಾಪರಯುಗದಲ್ಲಿ ಚಂದ್ರನು ನನ್ನನ್ನು ನೋಡುವನು.

೨೧–೨೨. ಸ್ವಕರ್ಮನಿಷ್ಠನಾದವನು ಅಲ್ಲಿ ಸ್ನಾನಮಾಡಿದನಾದರೆ, ಅವನು ಚಂದ್ರಲೋಕದಲ್ಲಿ ಸಂತೋಷಪಡುವುದರಲ್ಲಿ ಸಂಶಯವಿಲ್ಲ. ಅವನು ಆ ತೀರ್ಥದಲ್ಲಿ ಮಡಿದನಾದರೆ, ನನ್ನ ಲೋಕವನ್ನು ಸೇರುವನು.

ಸರಸ್ವತ್ಯಾಶ್ಚ ಪತನಂ ಸರ್ವಪಾಪಹರಂ ಶುಭಂ ।
ತತ್ರಸ್ನಾತೋ ನರೋ ದೇವಿ ಅವರ್ಣೋऽಪಿ ಯತಿರ್ಭವೇತ್ ॥ ೨೩ ॥

ಪುನರನ್ಯತ್ಪ್ರವಕ್ಷ್ಯಾಮಿ ಮಾಥುರೇ ಮಮ ಮಂಡಲೇ ।
ಯಸ್ತತ್ರ ಕುರುತೇ ಸ್ನಾನಂ ತ್ರಿರಾತ್ರೋಪೋಷಿತೋ ನರಃ ॥ ೨೪ ॥

ಸ್ನಾನಮಾತ್ರೇಣ ಮನುಜೋ ಮುಚ್ಯತೇ ಬ್ರಹ್ಮಹತ್ಯಯಾ ।
ಅಥಾತ್ರ ಮುಂಚತಿ ಪ್ರಾಣಾನ್ಮಮಲೋಕಂ ಸ ಗಚ್ಛತಿ ॥ ೨೫ ॥

ದಶಾಶ್ವಮೇಧಮೃಷಿಭಿಃ ಪೂಜಿತಂ ಸರ್ವದಾಮುದಾ ।
ತತ್ರ ಯೇ ಸ್ನಾಂತಿ ನಿಯತಾಸ್ತೇಷಾಂ ಸ್ವರ್ಗೋ ನ ದುರ್ಲಭಃ ॥ ೨೬ ॥

ಮಥುರಾಪಶ್ಚಿಮೇ ಪಾರ್ಶ್ವೇ ಸತತಂ ಋಷಿಪೂಜಿತಂ ।
ಬ್ರಹ್ಮಣಾ ಸೃಷ್ಟಿಕಾಲೇ ತು ಮನಸಾ ನಿರ್ಮಿತಂ ಪುರಾ ॥ ೨೭ ॥

---

೨೩. ದೇವೀ, ಸರಸ್ವತೀಪತನವೆಂಬ ಶುಭತೀರ್ಥವು ಸರ್ವಪಾಪಹರವಾದುದು. ಅಲ್ಲಿ ಸ್ನಾನಮಾಡುವವನು ವರ್ಣಹೀನನಾದರೂ ಸನ್ಯಾಸಿಯಾಗುವನು.

೨೪–೨೫. ನನ್ನ ಮಥುರಾಮಂಡಲದಲ್ಲಿರುವ ಮತ್ತೊಂದು ತೀರ್ಥವನ್ನು ಹೇಳುತ್ತೇನೆ. ಮೂರುರಾತ್ರಿ ಉಪವಾಸಮಾಡಿ, ಅಲ್ಲಿ ಸ್ನಾನವನ್ನು ಮಾಡುವವನು ಆ ಸ್ನಾನಮಾತ್ರದಿಂದಲೇ, ಬ್ರಹ್ಮಹತ್ಯಾಪಾಪವಿದ್ದರೂ ಕಳೆದುಕೊಳ್ಳುವನು. ಅಲ್ಲಿ ಪ್ರಾಣಬಿಟ್ಟರೆ ನನ್ನ ಲೋಕವನ್ನು ಸೇರುವನು.

೨೬. ದಶಾಶ್ವಮೇಧತೀರ್ಥವು ಸರ್ವದಾ ಋಷಿಗಳಿಂದ ಸಂತೋಷದಿಂದ ಪೂಜಿತವಾದುದು. ನಿಯಮವುಳ್ಳವರಾಗಿ ಅಲ್ಲಿ ಸ್ನಾನಮಾಡುವವರಿಗೆ ಸ್ವರ್ಗವು ದುರ್ಲಭವಲ್ಲ.

೨೭–೨೮. ಮಥುರೆಯ ಪಶ್ಚಿಮಪಾರ್ಶ್ವದಲ್ಲಿ, ಯಾವಾಗಲೂ ಋಷಿಗಳು ಪೂಜಿಸುವ, ಬ್ರಹ್ಮನು ಹಿಂದೆ ಸೃಷ್ಟಿಕಾಲದಲ್ಲಿ ಮನಸ್ಸಿನಿಂದ ನಿರ್ಮಿಸಿದ

ಮಾನಸಂ ನಾಮ ತೀರ್ಥಂ ತು ಋಷಿಭಿಃ ಪೂಜಿತಂ ಪುರಾ ।
ತತ್ರ ಸ್ನಾತ್ವಾ ದಿವಂ ಯಾಂತಿ ಯೇ ಮೃತಾಸ್ತೇಽಪುನರ್ಭವಾಃ ॥ ೨೮ ॥

ತೀರ್ಥಂತು ವಿಘ್ನರಾಜಸ್ಯ ಪುಣ್ಯಂ ಪಾಪಹರಂ ಶುಭಂ ।
ತತ್ರ ಸ್ನಾತಾನ್ಮನುಷ್ಯಾಂಶ್ಚ ವಿಘ್ನರಾಜೋ ನ ಪೀಡಯೇತ್ ॥ ೨೯ ॥

ಅಷ್ಟಮ್ಯಾಂ ಚ ಚತುರ್ದಶ್ಯಾಂ ಚತುರ್ಥ್ಯಾಂ ತು ವಿಶೇಷತಃ ।
ತಸ್ಮಿಂಸ್ತೀರ್ಥವರೇ ಸ್ನಾತಂ ನ ಪೀಡಯತಿ ವಿಘ್ನರಾಟ್ ॥ ೩೦ ॥

ವಿದ್ಯಾರಂಭೇಷು ಸರ್ವೇಷು ಯಜ್ಞದಾನ ಕ್ರಿಯಾಸು ಚ ।
ಅವಿಘ್ನಂ ಕುರುತೇ ತಸ್ಯ ಸತತಂ ಪಾರ್ವತೀಸುತಃ ।
ತತ್ರಾಥ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೩೧ ॥

ಮಾನಸವೆಂಬ ತೀರ್ಥವಿದೆ. ಅದು ಪೂರ್ವದಲ್ಲಿಯೂ ಋಷಿಗಳಿಂದ ಪೂಜಿತವಾದುದು. ಅಲ್ಲಿ ಸ್ನಾನಮಾಡಿ, ಮನುಷ್ಯರು ಸ್ವರ್ಗಕ್ಕೆ ಹೋಗುವರು. ಅಲ್ಲಿ ಮಡಿದು, ಪುನರ್ಜನ್ಮವಿಲ್ಲದವರಾಗುವರು.

೨೯ ವಿಘ್ನರಾಜತೀರ್ಥವೆಂಬುದು ಪುಣ್ಯವೂ, ಪಾಪಪರಿಹಾರಕವೂ ಶುಭವೂ, ಆದುದು. ಅಲ್ಲಿ ಸ್ನಾನಮಾಡಿದ ಮನುಷ್ಯರನ್ನು ವಿಘ್ನರಾಜನು ಪೀಡಿಸುವುದಿಲ್ಲ.

೩೦. ಅಷ್ಟಮಿಯಲ್ಲಿಯೂ, ಚತುರ್ದಶಿಯಲ್ಲಿಯೂ, ವಿಶೇಷವಾಗಿ ಚೌತಿಯಲ್ಲಿಯೂ, ಆ ಉತ್ತಮತೀರ್ಥದಲ್ಲಿ ಸ್ನಾನಮಾಡಿದವನನ್ನು ವಿಘ್ನರಾಜನು ಪೀಡಿಸುವುದಿಲ್ಲ.

೩೧. ವಿದ್ಯಾರಂಭಗಳಲ್ಲೂ, ಯಜ್ಞದಾನಾದಿ ಸರ್ವಕರ್ಮಗಳಲ್ಲೂ, ಪಾರ್ವತೀಪುತ್ರನಾದ ಆ ವಿನಾಯಕನು ಯಾವಾಗಲೂ ವಿಘ್ನವಿಲ್ಲದಂತೆ ಮಾಡುವನು. ಆ ವಿಘ್ನರಾಜತೀರ್ಥದಲ್ಲಿ ಪ್ರಾಣಬಿಡುವವನು ನನ್ನ ಲೋಕವನ್ನು ಸೇರುವನು.

ತತಃ ಪರೇ ಕೋಟಿ ತೀರ್ಥಂ ಪವಿತ್ರಂ ಪರಮಂ ಸ್ಮೃತಂ ।
ತತ್ರ ವೈ ಸ್ನಾನಮಾತ್ರೇಣ ಗವಾಂ ಕೋಟಿಫಲಂ ಲಭೇತ್ ॥ ೩೨ ॥

ತಥಾತ್ರ ಮುಂಚತಿ ಪ್ರಾಣಾನ್ ಲೋಭಮೋಹ ವಿವರ್ಜಿತಃ ।
ಸೋಮಲೋಕಮತಿಕ್ರಮ್ಯ ಮಮ ಲೋಕಂಚ ಗಚ್ಛತಿ ॥ ೩೩ ॥

ಅತಃ ಪರಂ ಶಿವಕ್ಷೇತ್ರಂ ಅರ್ಧಕ್ರೋಶಂ ತು ದುಷ್ಕರಂ ।
ತತ್ರ ಸ್ಥಿತೋ ಹರೋ ದೇವೋ ಮಥುರಾಂ ರಕ್ಷತೇ ಸದಾ ॥ ೩೪ ॥

ತತ್ರ ಸ್ನಾತ್ವಾ ಚ ಪೀತ್ವಾ ಚ ಮಾಥುರಂ ಲಭತೇ ಫಲಂ ।
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೩೫ ॥

ಇತಿಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಮಥುರಾಮಾಹಾತ್ಮ್ಯೇಯಮುನಾ ತೀರ್ಥಪ್ರಭಾವೋನಾಮ ಚತುಃಪಂಚಾಶದಧಿಕಶತತಮೋಽಧ್ಯಾಯಃ

---

೩೨. ಆದಾವಮೇಲಿರುವ ಕೋಟಿತೀರ್ಥವು ಪರಮಪವಿತ್ರವೆನಿಸಿ ಕೊಂಡಿರುವುದು. ಅಲ್ಲಿ ಸ್ನಾನಮಾಡಿದ ಮಾತ್ರದಲ್ಲಿ ಮನುಷ್ಯನು ಕೋಟಿ ಗೋದಾನದ ಫಲವನ್ನು ಪಡೆಯುವನು.

೩೩. ಅಲ್ಲದೆ, ಲೋಭಮೋಹಗಳನ್ನು ಬಿಟ್ಟು ಆ ತೀರ್ಥದಲ್ಲಿ ಪ್ರಾಣಬಿಡು ವವನು ಚಂದ್ರಲೋಕವನ್ನೂ ಅತಿಕ್ರಮಿಸಿ ನನ್ನ ಲೋಕವನ್ನು ಸೇರುವನು.

೩೪. ಆಮೇಲೆ, ದುಷ್ಕರವಾದ ಶಿವಕ್ಷೇತ್ರವು ಅರ್ಧಹರಿದಾರಿಯಿದೆ. ಅಲ್ಲಿದ್ದುಕೊಂಡು ಈಶ್ವರದೇವನು ಮಥುರೆಯನ್ನು ಸದಾ ರಕ್ಷಿಸುವನು.

೩೫. ಆ ಕ್ಷೇತ್ರತೀರ್ಥದಲ್ಲಿ ಸ್ನಾನಪಾನಗಳನ್ನು ಮಾಡಿದ ಮನುಷ್ಯನು, ಮಥುರೆಯ ಫಲವನ್ನು ಪೂರ್ಣವಾಗಿ ಪಡೆಯುವನು. ಅಲ್ಲದೆ ಅಲ್ಲಿ ಮಡಿದರೆ ಅವನು ನನ್ನ ಲೋಕವನ್ನು ಸೇರುವನು

ಅಧ್ಯಾಯದ ಸಾರಾಂಶ—

ಶ್ರೀವರಾಹ ದೇವನು ಭೂದೇವಿಗೆ ಸೌರಾಷ್ಟ್ರಾಧಿಪನಾದ ಯಕ್ಷ್ಮಧನು ರಾಜನು ಸಪತ್ನೀಕನಾಗಿ ಮಥುರೆಗೆ ಬಂದುದನ್ನೂ, ಅವನ ಮುಂದಿನ ಚರಿತ್ರೆಯನ್ನೂ, ಯಮುನಾನದಿಯಲ್ಲಿರುವ ಧಾರಾಪತನಕಾದಿ ತೀರ್ಥಕ್ಷೇತ್ರಗಳ ಪ್ರಾಶಸ್ತ್ಯವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತನಾಲ್ಕನೆಯ ಅಧ್ಯಾಯ.

|| ಶ್ರೀಃ ||

ಪಂಚಪಂಚಾಶದಧಿಕಶತತಮೋಽಧ್ಯಾಯಃ

ಅಥ ಅಕ್ರೂರತೀರ್ಥಪ್ರಭಾವಃ

|| ಶ್ರೀವರಾಹ ಉವಾಚ ||

ಪುನರನ್ಯತ್ಪ್ರವಕ್ಷ್ಯಾಮಿ ಮರ್ತ್ಯಲೋಕೇ ಸುದುರ್ಲಭಂ ।
ಅನಂತಂ ವಿದಿತಂ ತೀರ್ಥಮಚಲಂ ಧ್ರುವಮವ್ಯಯಂ || ೧ ||

ತತ್ರ ನಿತ್ಯಂ ಸ್ಥಿತೋ ದೇವಿ ಲೋಕಾನಾಂ ಹಿತಕಾಮ್ಯಯಾ ।
ಮಾಂ ದೃಷ್ಟ್ವಾ ಮನುಜಾ ದೇವಿ ಮುಕ್ತಿಭಾಜೋ ಭವಂತಿ ತೇ || ೨ ||

ನೂರೈವತ್ತೈದನೆಯ ಅಧ್ಯಾಯ

ಅಕ್ರೂರತೀರ್ಥಪ್ರಭಾವ.

೧. ಶ್ರೀವರಾಹ—ದೇವೀ, ಮನುಷ್ಯಲೋಕದಲ್ಲಿ ಬಹುದುರ್ಲಭವೂ, ಅತಿ ಸ್ಥಿರವೂ, ಪ್ರಸಿದ್ಧವೂ ಆದ ಅನಂತವೆಂಬ ಬೇರೊಂದು ತೀರ್ಥವಿಚಾರವನ್ನು ಹೇಳುತ್ತೇನೆ.

೨. ಲೋಕಹಿತೇಚ್ಛೆಯಿಂದ ನಾನು ಯಾವಾಗಲೂ ಅಲ್ಲಿರುವೆನು. ದೇವೀ, ನನ್ನ ದರ್ಶನವನ್ನು ಮಾಡಿ ಆ ಮನುಷ್ಯರು ಮೋಕ್ಷಭಾಗಿಗಳಾಗುವರು.

ಆಯನೇ ವಿಷುವೇ ಚೈವ ತಥಾ ವಿಷ್ಣುಪದೀಷು ಚ ।
ಅನಂತಂ ತಂ ಸಮಾಸಾದ್ಯ ಮುಚ್ಯತೇ ಸರ್ವಪಾತಕೈಃ ॥ ೩ ॥

ಅಕ್ರೂರೇತಿ ಚ ವಿಖ್ಯಾತಂ ಮಮ ಕ್ಷೇತ್ರಂ ವಸುಂಧರೇ ।
ತತ್ರ ಸ್ನಾತ್ವಾ ಮಹಾಭಾಗೇ ರಾಹುಗ್ರಸ್ತೇ ದಿವಾಕರೇ ॥ ೪ ॥

ರಾಜಸೂಯಾಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ ।
ತೀರ್ಥರಾಜಂ ಹಿ ಚಾಕ್ರೂರಂ ಗುಹ್ಯಾನಾಂ ಗುಹ್ಯಮುತ್ತಮಂ ॥ ೫ ॥

ತತ್ಸ್ನಾನಾತ್ಫಲಮಾಪ್ನೋತಿ ಪ್ರಯಾಗಸ್ನಾನಜಂ ಫಲಂ ।
ಅಸ್ಮಿಂಸ್ತೀರ್ಥೇ ಪುರಾವೃತ್ತಂ ತಚ್ಛೃಣುಷ್ವ ವಸುಂಧರೇ ॥ ೬ ॥

ನಾಮ್ನಾ ತು ಸುಧನೋ ನಾಮ ಮಮ ಭಕ್ತಃ ಸದೈವ ಹಿ ।
ಧನಧಾನ್ಯಸಮಾಯುಕ್ತಃ ಸುತಯುಕ್ತಃ ಸದೈವ ಹಿ ॥ ೭ ॥

---

೩. ಉತ್ತರಾಯಣ ದಕ್ಷಿಣಾಯನ ಪುಣ್ಯಕಾಲಗಳಲ್ಲಿಯೂ, ಮೇಷ, ತುಲಾ ಸಂಕ್ರಮಣ (ವಿಷುವತ್ಪುಣ್ಯಕಾಲ) ಗಳಲ್ಲಿಯೂ, ವಿಷ್ಣುಪದಪುಣ್ಯಕಾಲ (ವೃಷಭ, ಸಿಂಹ, ವೃಶ್ಚಿಕ, ಕುಂಭ, ಸಂಕ್ರಮಣ) ಗಳಲ್ಲೂ, ಆ ಅನಂತಸನ್ನಿಧಿಗೆ ಹೋಗುವವರು ಸರ್ವಪಾಪಗಳಿಂದಲೂ ಬಿಡುಗಡೆಯನ್ನು ಹೊಂದುವರು.

೪–೫. ವಸುಂಧರೇ, ಅಕ್ರೂರವೆಂಬುದು ಪ್ರಸಿದ್ಧವಾದ ನನ್ನ ಕ್ಷೇತ್ರ. ಮಹಾಭಾಗ್ಯೇ, ಸೂರ್ಯಗ್ರಹಣಕಾಲದಲ್ಲಿ ಆ ತೀರ್ಥದಲ್ಲಿ ಸ್ನಾನಮಾಡುವವನು ರಾಜಸೂಯಾಶ್ವಮೇಧಯಜ್ಞಗಳ ಫಲವನ್ನು ಪಡೆಯುವನು. ಅತಿರಹಸ್ಯವೂ, ಉತ್ತಮವೂ ಆದ ಅಕ್ರೂರತೀರ್ಥವು ತೀರ್ಥರಾಜನೆನಿಸಿಕೊಳ್ಳುವುದು.

೬. ಅಲ್ಲಿಯ ಸ್ನಾನದಿಂದ ಮನುಷ್ಯನು ಪ್ರಯಾಗಕ್ಷೇತ್ರಸ್ನಾನದಿಂದಾಗುವ ಫಲವನ್ನು ಪಡೆಯುವನು. ವಸುಂಧರೇ, ಆ ತೀರ್ಥದಲ್ಲಿ ಹಿಂದೆ ನಡೆದ ಸಮಾಚಾರವನ್ನು ಹೇಳುತ್ತೇನೆ. ಕೇಳು.

೭–೮. ಸುಧನನೆಂಬ ಹೆಸರಿನ ನನ್ನ ನಿತ್ಯಭಕ್ತನೊಬ್ಬನಿದ್ದನು. ಅವನು ಯಾವಾಗಲೂ ಧನಧಾನ್ಯಸಮೃದ್ಧಿಯುಳ್ಳವನಾಗಿಯೂ, ಹೆಂಡತಿ ಮಕ್ಕಳಿಂದಲೂ

ಬಂಧುಪುತ್ರ ಕಲತ್ರೈಶ್ಚ ಗೃಹೇ ಪ್ರೀತಿರನುತ್ತಮಾ ॥ ೮ ॥

ಪುತ್ರದಾರಸಮೇತಸ್ಯ ಮಯಿ ಭಕ್ತಿರ್ವಸುಂಧರೇ ।
ಗಚ್ಛಂತಿ ದಿವಸಾಸ್ತಸ್ಯ ಮಾಸಾಃ ಸಂವತ್ಸರಾಸ್ತಥಾ ॥ ೯ ॥

ಕರೋತಿ ಗೃಹಕೃತ್ಯಾನಿ ಧನೋಪಾಯೇನ ನಿತ್ಯಶಃ ।
ಮಾನಕೂಟಂ ತುಲಾಕೂಟಂ ನ ಕರೋತಿ ಸ ಕರ್ಹಿಚಿತ್ ॥
ಏವಂ ಚ ವಸತಸ್ತಸ್ಯ ಬಹವೋ ವತ್ಸರಾ ಗತಾಃ ॥ ೧೦ ॥

ನಿತ್ಯಂ ಕಾಲಂ ಚ ಕುರುತೇ ಹರಿಪೂಜನಮುತ್ತಮಂ ।
ಪುಷ್ಪದೀಪಪ್ರದಾನೇನ ಚಂದನೇನ ಸುಗಂಧಿನಾ ॥
ಉಪಹಾರೇಣ ದಿವ್ಯೇನ ಧೂಪೇನ ಚ ಸುಗಂಧಿನಾ ॥ ೧೧ ॥

ನೆಂಟರಿಂದಲೂ ಕೂಡಿದವನಾಗಿಯೂ ಇದ್ದನು. ಅವನಿಗೆ ಮನೆಯವರಲ್ಲಿ ಹೆಚ್ಚಾದ ಪ್ರೀತಿ.

೯. ಹೆಂಡತಿಮಕ್ಕಳೊಡಗೂಡಿದ ಆತನಿಗೆ ನನ್ನಲ್ಲಿ ಅತಿಶಯವಾದ ಭಕ್ತಿಯಿದ್ದಿತು. ವಸುಂಧರೇ, ದಿವಸಗಳೂ, ತಿಂಗಳುಗಳೂ, ವರ್ಷಗಳೂ ಕಳೆಯುತ್ತಿದ್ದವು.

೧೦. ಧನಸಂಪಾದನೆಗಾಗಿ ತನ್ನ ಗೃಹಕೃತ್ಯಗಳನ್ನು ಎಂದರೆ ವಾಣಿಜ್ಯವನ್ನು ಮಾಡುತ್ತಿದ್ದನು. ಅವನು ಅಳತೆಯಲ್ಲೂ, ತೂಕದಲ್ಲೂ ಎಂದಿಗೂ ಮೋಸಮಾಡುತ್ತಿರಲಿಲ್ಲ. ಹಾಗೆ ವಾಸಮಾಡುತ್ತಿರಲು ಹಲವು ವರ್ಷಗಳು ಕಳೆದುವು.

೧೧. ಆ ಸುಧನನು ನಿತ್ಯವೂ ಸಕಾಲದಲ್ಲಿ ಹರಿಪೂಜೆಯನ್ನು ದಿವ್ಯವಾದ ಸುಗಂಧಪುಷ್ಪ ಧೂಪದೀಪನೈವೇದ್ಯೋಪಹಾರಾದಿಗಳಿಂದ ಚೆನ್ನಾಗಿ ಮಾಡುತ್ತಿದ್ದನು.

ಏಕಾದಶ್ಯಾಂ ತು ಕುರುತೇ ಪಕ್ಷಯೋರುಭಯೋರಪಿ ।
ಉಪವಾಸಂ ತು ಕುರುತೇ ರಾತ್ರೌ ಜಾಗರಣಂ ತಥಾ ॥ ೧೨ ॥

ಸ ಗಚ್ಛತಿ ಯಥಾಕಾಲಮಕ್ರೂರಂ ತೀರ್ಥಮುತ್ತಮಂ ।
ತತ್ರಾಗತ್ಯಮಮಾಗ್ರೇಸೌ ನೃತ್ಯತೇ ಶುಭದರ್ಶನಃ ॥ ೧೩ ॥

ಸುಧನಸ್ತು ವಣಿಕ್‌ಶ್ರೇಷ್ಠಃ ಕದಾಚಿದ್ರಾತ್ರಿ ಜಾಗರೇ ।
ಚಲಮಾನೋ ಗೃಹೀತಸ್ತು ಚರಣೇ ಬ್ರಹ್ಮರಕ್ಷಸಾ ॥ ೧೪ ॥

ಕೃಷ್ಣವರ್ಣೋ ಮಹಾಕಾಯ ಊರ್ಧ್ವಕೇಶೋ ಭಯಂಕರಃ ।
ಪಾದೇ ಗೃಹೀತ್ವಾ ವಸುಧೇ ಇದಂ ವಚನಬ್ರವೀತ್ ॥ ೧೫ ॥

ರಾಕ್ಷಸೋಽಹಂ ವಣಿಕ್‌ಶ್ರೇಷ್ಠ ವಸಾಮಿ ವನಮಾಶ್ರಿತಃ ।
ತ್ವಾಮದ್ಯ ಭಕ್ಷಯಿಷ್ಯಾಮಿ ತೃಪ್ತಿಂ ಯಾಸ್ಯಾಮಿ ಶಾಶ್ವತೀಂ ॥ ೧೬ ॥

೧೨–೧೩. ಶುಕ್ಲಕೃಷ್ಣಪಕ್ಷಗಳೆರಡರ ಏಕಾದಶಿಯಲ್ಲೂ ಉಪವಾಸವನ್ನೂ ರಾತ್ರೆ ಜಾಗರಣೆಯನ್ನೂ ಮಾಡುತ್ತಿದ್ದನು. ಆತನು ತಕ್ಕ ಕಾಲದಲ್ಲಿ ಉತ್ತಮವಾದ ಅಕ್ರೂರತೀರ್ಥಕ್ಕೆ ಬಂದು, ಅಲ್ಲಿ ನನ್ನೆದುರಿಗೆ ಶುಭದರ್ಶನನಾಗಿ ನರ್ತನ ಮಾಡುತ್ತಿದ್ದನು.

೧೪. ವರ್ತಕರಲ್ಲಿ ಉತ್ತಮನಾದ ಅವನು ಒಂದಾನೊಂದು ದಿನ ರಾತ್ರಿ ಜಾಗರಣೆಗಾಗಿ ಅಕ್ರೂರಕ್ಷೇತ್ರಕ್ಕೆ ನಡೆಯುತ್ತಾ ಇರುವಾಗ ಬ್ರಹ್ಮರಾಕ್ಷಸನೊಬ್ಬನು ಅವನ ಕಾಲನ್ನು ಹಿಡಿದುಕೊಂಡನು.

೧೫-೧೬. ಭೂಮೀ, ಕಪ್ಪುಬಣ್ಣದ ದೊಡ್ಡ ಮೈಯ್ಯುಳ್ಳವನೂ, ಮೇಲೆದ್ದ ಕೂದಲುಳ್ಳವನೂ ಆಗಿ ಭಯಂಕರನಾದ ಆತನು ವರ್ತಕನ ಕಾಲನ್ನು ಹಿಡಿದು ಕೊಂಡು, "ವಣಿಗ್ವರನೇ, ನಾನು ರಾಕ್ಷಸ ವನದಲ್ಲಿ ವಾಸಮಾಡುತ್ತಿದ್ದೇನೆ. ಈಗ ನಿನ್ನನ್ನು ತಿಂದು ಶಾಶ್ವತವಾದ ತೃಪ್ತಿಯನ್ನು ಪಡೆಯುತ್ತೇನೆ" ಎಂದು ಹೇಳಿದನು.

|| ಸುಧನ ಉವಾಚ ||

ಪ್ರತೀಕ್ಷಸ್ವ ಕ್ಷಣಂ ಮೇದ್ಯ ದಾಸ್ಯಾಮಿ ತವ ಪುಷ್ಕಲಂ |
ಭಕ್ಷಯಿಷ್ಯಸಿ ಮೇ ಗಾತ್ರಂ ಮಿಷ್ಟಾನ್ನಪರಿಪೋಷಿತಂ || ೧೭ ||

ಜಾಗರಂ ದೇವದೇವಸ್ಯ ಕರ್ತುಮಿಚ್ಛಾಮಿ ರಾಕ್ಷಸ |
ಮಮ ವ್ರತಂ ಸರ್ವಕಾಲಂ ಯಜ್ಜಾಗರ್ಮಿ ಹರೇಃ ಪುರಃ || ೧೮ ||

ತತ್ರ ಜಾಗರಣಂ ಕೃತ್ವಾ ಪ್ರಭಾತೇ ತವ ಸನ್ನಿಧೌ |
ಆಗಮಿಷ್ಯಾಮ್ಯಹಂ ಶೀಘ್ರಮಾದಿತ್ಯೋದಯನಂ ಪ್ರತಿ || ೧೯ ||

ತತಃ ಖಾದಿಷ್ಯಸೇ ಗಾತ್ರಂ ವಿನಿವೃತ್ತಸ್ಯ ಜಾಗರಾತ್ |
ವಿಷ್ಣುತುಷ್ಟ್ಯೈ ವ್ರತಮಿದಮಾರಬ್ಧಂ ಸರ್ವಕಾಮದಂ || ೨೦ ||

ಮಾ ಕುರು ವ್ರತಭಂಗಂ ಮೇ ರಕ್ಷೋ ನಾರಾಯಣಸ್ಯ ಹಿ |
ಜಾಗರೇ ವಿನಿವೃತ್ತೇ ತು ಮಾಂ ಭಕ್ಷಯ ಯಥೇಪ್ಸಿತಂ || ೨೧ ||

೧೭-೧೮. ಸುಧನನು—"ರಾಕ್ಷಸನೇ, ಈಗ ಸ್ವಲ್ಪ ತಾಳು. ನಿನಗೆ ಬೇಕಾದ ಹಾಗೆ ಕೊಡುತ್ತೇನೆ. ಮೃಷ್ಟಾನ್ನದಿಂದ ಪೋಷಿತವಾಗಿರುವ ನನ್ನ ದೇಹವನ್ನು ತಿನ್ನುವೆಯಂತೆ. ದೇವದೇವನ ಸನ್ನಿಧಿಯಲ್ಲಿ ಜಾಗರಣೆ ಮಾಡುವುದಕ್ಕೆ ಬಯಸುತ್ತೇನೆ. ಹರಿಯ ಎದುರಿಗೆ ಜಾಗರಣೆಮಾಡುವ ನನ್ನ ವ್ರತವು ಯಾವಾಗಲೂ ನಡೆಯತಕ್ಕದು.

೧೯-೨೦. ಹರಿಯ ಸನ್ನಿಧಿಯಲ್ಲಿ ಜಾಗರಣೆಯನ್ನು ಮಾಡಿ, ಬೆಳಗ್ಗೆ ಸೂರ್ಯೋದಯಕ್ಕೆ ಸರಿಯಾಗಿ ನಿನ್ನ ಸನ್ನಿಧಿಗೆ ಬೇಗನೆ ಬರುತ್ತೇನೆ. ಬಳಿಕ ಜಾಗರಣೆಯಿಂದ ಹಿಂದಿರುಗಿಬಂದ ನನ್ನ ದೇಹವನ್ನು ತಿನ್ನುವೆಯಂತೆ. ಸರ್ವೇಷ್ಟಾರ್ಥಗಳನ್ನೂ ಕೊಡುವ ಈ ವ್ರತವನ್ನು ವಿಷ್ಣುವಿನ ತೃಪ್ತಿಗಾಗಿ ಆರಂಭಿಸಿದುದಾಯಿತು.

೨೧. ರಾಕ್ಷಸನೇ, ನನ್ನ ನಾರಾಯಣವ್ರತಕ್ಕೆ ಭಂಗವನ್ನು ಮಾಡಬೇಡ. ಜಾಗರಣೆಯು ಕಳೆದ ಬಳಿಕ ನಿನ್ನ ಇಷ್ಟಾನುಸಾರವಾಗಿ ನನ್ನನ್ನು ತಿನ್ನು."

ಸುಧನಸ್ಯ ವಚಃ ಶ್ರುತ್ವಾ ಬ್ರಹ್ಮರಕ್ಷಃ ಕ್ಷುಧಾರ್ದಿತಃ ।
ಉವಾಚ ಮಧುರಂ ವಾಕ್ಯಂ ವಣಿಜಂ ಪ್ರತಿಸಾದರಂ ॥ ೨೨ ॥

ಮಿಥ್ಯಾ ಪ್ರಭಾಷಸೇ ಸಾಧೋ ತ್ವಂ ಪುನಃ ಕಥಮೇಷ್ಯಸಿ ।
ಕೋಹಿ ರಕ್ಷೋಮುಖಾದ್ಭ್ರಷ್ಟೋ ಮಾನುಷೋ ಯೋನಿವರ್ತತೇ॥ ೨೩ ॥

ರಾಕ್ಷಸಸ್ಯ ವಚಃ ಶ್ರುತ್ವಾ ಸವಣಿಗ್ವಾಕ್ಯಮಬ್ರವೀತ್ ।
ಸತ್ಯಮೂಲಂ ಜಗತ್ಸರ್ವಂ ಸರ್ವಂ ಸತ್ಯೇ ಪ್ರತಿಷ್ಠಿತಂ ॥ ೨೪ ॥

ಸಿದ್ಧಿಂ ಲಭಂತೇ ಸತ್ಯೇನ ಋಷಯೋ ವೇದಪಾರಗಾಃ ॥ ೨೫ ॥

ಯದ್ಯಹಂ ಚ ವಣಿಕ್ ಪೂರ್ವಂ ಕರ್ಮಣಾ ನ ಹಿ ದೂಷಿತಃ ।
ಪ್ರಾಪ್ತಶ್ಚ ಮಾನುಷೋ ಭಾವೋ ವಿಹಿತೇನಾಂತರಾತ್ಮನಾ ॥ ೨೬ ॥

ಶೃಣು ಮತ್ಸಮಯಂ ರಕ್ಷೋ ಯೇನಾಹಂ ಪುನರಾಗಮಂ ॥ ೨೭ ॥

೨೨-೨೩. ಸುಧನನ ಮಾತನ್ನು ಕೇಳಿ, ಹಸಿವಿನಿಂದ ಪೀಡಿತನಾಗಿದ್ದ ಆ ಬ್ರಹ್ಮರಾಕ್ಷಸನು ಆ ವೈಶ್ಯನಿಗೆ ಆದರದಿಂದ ಇಂಪಾಗಿರುವಂತೆ—"ಸಾಧುವೇ, ಸುಳ್ಳು ಹೇಳುತ್ತೀಯೆ, ನೀನು ಹೋಗಿ ಮತ್ತೆ ಹೇಗೆ ಬರುವೆ? ರಾಕ್ಷಸನ ಬಾಯಿಂದ ತಪ್ಪಿಸಿಕೊಂಡ ಯಾವ ಮನುಷ್ಯನು ತಾನೆ ಹಿಂದಿರುಗುವನು?" ಎಂದು ಕೇಳಿದನು.

೨೪-೨೫. ರಾಕ್ಷಸನ ಮಾತನ್ನು ಕೇಳಿ, ಆ ವೈಶ್ಯನು ಮುಂದಿನ ಮಾತನ್ನು ಹೇಳಿದನು—"ಜಗತ್ತೆಲ್ಲವೂ ಸತ್ಯಮೂಲವಾದುದು. ಎಲ್ಲವೂ ಸತ್ಯದಲ್ಲಿ ನಿಂತಿದೆ. ವೇದಪಾರಂಗತರಾದ ಋಷಿಗಳೂ ಸತ್ಯದಿಂದಲೇ ಸಿದ್ಧಿಯನ್ನು ಪಡೆಯುವರು.

೨೬-೨೭. ನಾನು ಪೂರ್ವದಲ್ಲಿ ವೈಶ್ಯನಾಗಿದ್ದು, ನನ್ನ ಕರ್ಮಗಳಲ್ಲಿ ತಪ್ಪುಮಾಡದೆ ಇದ್ದು ಮತ್ತೆ ಮನುಷ್ಯಜನ್ಮವನ್ನು ಪಡೆದಿದ್ದರೆ ವಿಹಿತವಾದ ಮನಸ್ಸಿನಿಂದ ಹೇಳುತ್ತೇನೆ. ಮತ್ತೆ ನಾನು ಬರುವೆನೆಂಬುದಕ್ಕೆ ನನ್ನ ಪ್ರತಿಜ್ಞೆಯನ್ನು ಕೇಳು.

ಕೃತ್ವಾ ಜಾಗರಣಂ ತತ್ರ ನೃತ್ಯಂ ಕೃತ್ವಾ ಯಥಾಸುಖಂ ।
ಪುನರೇಷ್ಯಾಮ್ಯಹಂ ರಕ್ಷೋ ನಾಸತ್ಯಂ ವಿದ್ಯತೇ ಮಯಿ ॥ ೨೮ ॥

ಸತ್ಯೇನ ದೀಯತೇ ಕನ್ಯಾ ಸತ್ಯಂ ಜಲ್ಪಂತಿ ಬ್ರಾಹ್ಮಣಾಃ ।
ಸತ್ಯೋತ್ತೀರ್ಣಾ ಹಿ ರಾಜಾನಃ ಸತ್ಯೇನ ವಸುಧಾ ಧೃತಾ ॥ ೨೯ ॥

ಸ್ವರ್ಗಮಿಚ್ಛಂತಿ ಸತ್ಯೇನ ಮೋಕ್ಷಃ ಸತ್ಯೇನ ಲಭ್ಯತೇ ।
ಸತ್ಯೇನ ಸೂರ್ಯಸ್ತಪತಿ ಸೋಮಃ ಸತ್ಯೇನ ರಾಜತೇ ॥ ೩೦ ॥

ಯಮಃ ಸತ್ಯೇನ ಹರತಿ ಸತ್ಯಾದಿಂದ್ರೋ ವಿರಾಜತೇ ।
ತತ್ಸತ್ಯಂ ಮಮ ನಶ್ಯೇತ ಯದ್ಯಹಂ ನಾಗಮೋ ಪುನಃ ॥ ೩೧ ॥

ಪರದಾರಾಂಸ್ತು ಯೋ ಗಚ್ಛೇತ್ ಕಾಮಮೋಹಪ್ರಪೀಡಿತಃ ।
ತಸ್ಯ ಪಾಪೇನ ಲಿಪ್ಯೇಹಂ ಯದಿ ನಾಯಾಮಿ ತೇ ಪುರಃ ॥ ೩೨ ॥

---

೨೮. ನಾನು ಅಲ್ಲಿ ಜಾಗರಣೆಯನ್ನು ಮಾಡಿ, ಇಷ್ಟಬಂದಂತೆ ಕುಣಿದು, ಮತ್ತೆ ಇಲ್ಲಿ ಬರುವೆನು. ರಾಕ್ಷಸನೇ, ನನ್ನಲ್ಲಿ ಅಸತ್ಯವಿಲ್ಲ.

೨೯. ಸತ್ಯದಿಂದಲೇ ಕನ್ಯೆಯನ್ನು ದಾನಮಾಡುವುದು. ಬ್ರಾಹ್ಮಣರು ಸತ್ಯವನ್ನೇ ಹೇಳುವರು. ರಾಜರು ಸತ್ಯದಿಂದಲೇ ಉತ್ತೀರ್ಣರಾಗಿರುವರು. ಸತ್ಯದಿಂದಲೇ ಭೂಮಿಯು ನಿಂತಿದೆ.

೩೦-೩೧. ಎಲ್ಲರೂ ಸತ್ಯದಿಂದಲೇ ಸ್ವರ್ಗವನ್ನು ಪಡೆಯಲಿಚ್ಛಿಸುವರು. ಮೋಕ್ಷವೂ ಸತ್ಯದಿಂದಲೇ ಲಭಿಸುವುದು. ಸೂರ್ಯನು ಸತ್ಯದಿಂದಲೇ ತಾಪವುಳ್ಳವನಾಗಿರುವನು. ಚಂದ್ರನು ಸತ್ಯದಿಂದಲೇ ಹೊಳೆಯುವನು. ಯಮನು ಸತ್ಯದಿಂದಲೇ ಪ್ರಾಣಹರಣಮಾಡುವನು. ಸತ್ಯದಿಂಧಲೇ ಇಂದ್ರನು ಪ್ರಕಾಶಿಸುವನು. ನಾನು ಹಿಂದಿರುಗಿ ಇಲ್ಲಿಗೆ ಬರದಿದ್ದರೆ ಆ ಸತ್ಯವು ನನಗಿಲ್ಲವಾದೀತು.

೩೨. ನಿನ್ನೆದುರಿಗೆ ನಾನು ಮತ್ತೆ ಬಾರದಿದ್ದರೆ ಕಾಮಮೋಹಪೀಡಿತನಾಗಿ ಪರಸ್ತ್ರೀಸಂಗಮಾಡುವವನ ಪಾಪಕ್ಕೆ ಗುರಿಯಾಗುವೆನು

ದತ್ವಾ ಚ ಭೂಮಿದಾನಂ ಯೋऽಕ್ಷೆಹ್ಯಪಹಾರಂ ಕರೋತಿ ಚ ।
ತೇನ ಪಾಪೇನ ಲಿಪ್ಯೇऽಹಂ ಯದ್ಯಹಂ ನಾಗಮೇ ಪುನಃ ॥ ೩೩ ॥

ಪೂರ್ವಂ ಭುಕ್ತ್ವಾ ಸ್ತ್ರಿಯಂ ಯಸ್ತು ಸುಖಮಾಪ್ಯ ವಿಹೃತ್ಯ ಚ ।
ದ್ವೇಷಾತ್ತಾಂ ಯದಿ ಚೇಜ್ಜಹ್ಯಾತ್ತಸ್ಯಾಘಂ ಮೇ ಭವತ್ವಲಂ ॥ ೩೪ ॥

ಪಂಗ್ತಿಭೇದಂತು ಯಃ ಕುರ್ಯಾದೇಕ ಪಗ್ತ್ಯಾಶಿನಾಂ ಧ್ರುವಂ ।
ತಸ್ಯ ಪಾಪೇನ ಲಿಪ್ಯೇऽಹಂ ನಾಗಂತಾ ಯದಿ ತೇ ಪುರಃ ॥ ೩೫ ॥

ಅಮಾವಾಸ್ಯಾಂ ಮಹಾರಕ್ಷಃ ಶ್ರಾದ್ಧಂ ಕೃತ್ವಾ ಸ್ತ್ರಿಯಂ ವ್ರಜೇತ್ ।
ತೇನ ಪಾಪೇನ ಲಿಪ್ಯೇऽಹಂ ಯದ್ಯಹಂ ನಾಗಮೇ ಪುನಃ ॥ ೩೬ ॥

---

೩೩. ನಾನು ಮತ್ತೆ ನಿನ್ನಲ್ಲಿ ಬಾರದಿದ್ದರೆ, ಭೂದಾನವನ್ನು ಕೊಟ್ಟು, ಮತ್ತೆ ಅದನ್ನು ಅಪಹರಿಸುವವನ ಪಾಪಕ್ಕೀಡಾಗುವೆನು.

೩೪. ಸ್ತ್ರೀಯನ್ನು ಪರಿಗ್ರಹಿಸಿ, ಅವಳೊಡನೆ ಸುಖಿಸಿ, ವಿಹರಿಸಿ, ಬಳಿಕ ಅವಳನ್ನು ದ್ವೇಷದಿಂದ ಪರಿತ್ಯಜಿಸಿದರೆ ಯಾವ ಪಾಪವುಂಟಾಗುವುದೋ ಆ ಪಾಪವೆಲ್ಲಾ ನಾನು ಮತ್ತೆ ನಿನ್ನ ಹತ್ತಿರ ಬಾರದಿದ್ದರೆ ನನಗುಂಟಾಗಲಿ.

೩೫. ಒಂದೇ ಪಂಗ್ತಿಯಲ್ಲಿ ಊಟಮಾಡುವವರಿಗೆ ಪಂಗ್ತಿಭೇದವನ್ನು ಮಾಡುವವನು ಗುರಿಯಾಗುವ ಪಾಪಕ್ಕೆ ನಿನ್ನೆದುರಿಗೆ ಬಾರದಿದ್ದರೆ ನಾನು ಗುರಿಯಾಗುವೆನು.

೩೬. ಮಹಾರಾಕ್ಷಸಾ, ನಾನು ಇಲ್ಲಿಗೆ ಮತ್ತೆ ಬಾರದಿದ್ದರೆ ಅಮಾವಾಸ್ಯೆಯಲ್ಲಿ ಶ್ರಾದ್ಧವನ್ನು ಮಾಡಿ, ಸ್ತ್ರೀಸಮಾಗಮಮಾಡುವವನು ಗುರಿಯಾಗುವ ಪಾಪಕ್ಕೆ ಗುರಿಯಾಗುವೆನು.

---

‡ ಹ್ಯಪಕಾರಂ

ಷಷ್ಠ್ಯಷ್ಟಮೀ ತ್ವಮಾವಸ್ಯಾ ಉಭೇ ಪಕ್ಷೇ ಚತುರ್ದಶೀ ।
ಅಸ್ನಾತಾನಾಂ ಗತಿಂ ಯಾಸ್ಯಾಮ್ಯಹಂ ವೈ ನಾಗಮೇ ಪುನಃ ॥ ೩೭ ॥

ಗುರೋರ್ಭಾರ್ಯಾ ಸುತಸ್ಯಾಪಿ ಸಖ್ಯುರ್ವೈ ಮಾತುಲಸ್ಯ ಚ ।
ವ್ಯವಸ್ಯತಿಚ ಯನ್ನಾರೀಂ ಯೋ ಮೋಹೇನ ವಿಮೋಹಿತಃ ॥ ೩೮ ॥

ಅಭಿಗಚ್ಛತಿ ಮಂದಾತ್ಮಾ ತತ್ಪಾಪಂ ಮೇ ಭವೇತ್ತದಾ ॥ ೩೯ ॥

ರಾಜಪತ್ನೀಂ ಬ್ರಹ್ಮಪತ್ನೀಂ ವಿಧವಾಂ ಯೋಭಿಗಚ್ಛತಿ ।
ತಸ್ಯ ಪಾಪೇನ ಲಿಪ್ಯೇಹಂ ಯದ್ಯಹಂ ನಾಗಮೇ ಪುನಃ ॥ ೪೦ ॥

ಯಸ್ತು ಕನ್ಯಾಂ ಸಕೃದ್ದತ್ವಾ ಅನ್ಯಸ್ಮೈ ಚೇತ್ಪುನರ್ದದೇತ್ ।
ತೇನ ಪಾಪೇನ ಲಿಪ್ಯೇಹಂ ಯದ್ಯಹಂ ನಾಗಮೇ ಪುನಃ ॥ ೪೧ ॥

---

೩೭. ನಾನು ಮತ್ತೆ ಬರದೆ ಇದ್ದರೆ ಷಷ್ಠಿ, ಅಷ್ಟಮಿ, ಅಮಾವಾಸ್ಯೆ, ಎರಡು ಪಕ್ಷದ ಚತುರ್ದಶಿ ಇವುಗಳಲ್ಲಿ ಸ್ನಾನಮಾಡದಿರುವವರ ದುರ್ಗತಿಯನ್ನು ಪಡೆಯುವೆನು.

೩೮–೩೯. ನಾನು ಬರದೆ ನಿಂತೆನಾದರೆ, ಮೋಹದಿಂದ ಭ್ರಾಂತನಾಗಿ, ಗುರುಪತ್ನಿಯನ್ನಾಗಲಿ, ಸಹೋದರನ ಪತ್ನಿಯನ್ನಾಗಲಿ, ಸೊಸೆಯನ್ನಾಗಲಿ, ಮಿತ್ರಪತ್ನಿಯನ್ನಾಗಲಿ, ಸೋದರಮಾವನ ಹೆಂಡತಿಯನ್ನಾಗಲಿ ಕೂಡುವುದಕ್ಕೆ ಪ್ರಯತ್ನಿಸುವ ಅಥವಾ ಕೂಡುವ ಮಂದಾತ್ಮನ ಪಾಪವು ನನಗಾಗಲಿ.

೪೦. ನಾನು ಹಿಂದಿರುಗಿ ಬರದಿದ್ದರೆ ರಾಜಪತ್ನಿಯನ್ನು, ಬ್ರಾಹ್ಮಣಪತ್ನಿಯನ್ನು ಅಥವಾ ವಿಧವೆಯನ್ನು ಗಮಿಸುವವನ ಪಾಪವು ನನಗೆ ಅಂಟಲಿ.

೪೧. ಕನ್ನೆಯನ್ನು ಒಬ್ಬನಿಗೆ ದಾನಮಾಡಿ, ಮತ್ತೆ ಅವಳನ್ನೇ ಬೇರೆಯವನಿಗೆ ಕೊಡುವವನ ಪಾಪವು ನಿನ್ನೆಡೆಗೆ ಮತ್ತೆ ಬಾರದ ನನಗಾಗಲಿ.

ರಾಜಯಾಜಕಯಾಜ್ಯಾಶ್ಚ ಯೇ ಚ ವೈ ಗ್ರಾಮಯಾಜಕಾಃ ।
ತೇಷಾಂ ಪಾಪೇನ ಲಿಪ್ಯೇಽಹಂ ಯದ್ಯಹಂ ನಾಗಮೇ ಪುನಃ ॥ ೪೨ ॥

ಬ್ರಹ್ಮಘ್ನೇ ಚ ಸುರಾಪೇ ಚ ಚೌರೇ ಭಗ್ನವ್ರತೇ ಶಠೇ ।
ಯಾಗತಿಸ್ತಾಂ ಪ್ರಪದ್ಯೇಽಹಂ ಯದ್ಯಹಂ ನಾಗಮೇ ಪುನಃ ॥ ೪೩ ॥

॥ ಶ್ರೀವರಾಹ ಉವಾಚ ॥

ಸುಧನಸ್ಯ ವಚಃ ಶ್ರುತ್ವಾ ಸಂತುಷ್ಟೋ ಬ್ರಹ್ಮರಾಕ್ಷಸಃ ।
ಉವಾಚ ಮಧುರಂ ವಾಕ್ಯಂ ಗಚ್ಛ ಶೀಘ್ರಂ ನಮೋಽಸ್ತುತೇ ॥ ೪೪ ॥

ಬ್ರಹ್ಮರಾಕ್ಷಸಮುಕ್ತೋಽಸೌ ವಣಿಕ್ ತು ದೃಢನಿಶ್ಚಯಃ ।
ಪುನರ್ನೃತ್ಯತಿ ಚೈವಾಗ್ರೇ ಮಮ ಭಕ್ತ್ಯಾ ವ್ಯವಸ್ಥಿತಃ ॥ ೪೫ ॥

---

೪೨. ನಾನು ಮತ್ತೆ ಬಾರದಿದ್ದರೆ ರಾಜಯಾಜಕರೂ, ಗ್ರಾಮಯಾಜಕರೂ ಆದವರ ಪಾಪವು ನನಗಂಟಲಿ.

೪೩. ನಾನು ನಿನ್ನ ಹತ್ತಿರಕ್ಕೆ ಪುನಃ ಬಾರದಿದ್ದರೆ ಬ್ರಹ್ಮಘ್ನನಿಗೂ, ಮದ್ಯಪಾನಮಾಡುವವನಿಗೂ, ಕಳ್ಳನಿಗೂ, ವ್ರತಭಂಗವಾದವನಿಗೂ, ಶಠನಿಗೂ ಆಗುವ ಗತಿಯು ನನಗಾಗಲಿ.

೪೪. ಶ್ರೀವರಾಹ—ಸುಧನನ ಮಾತನ್ನು ಕೇಳಿ, ಸಂತುಷ್ಟನಾದ ಬ್ರಹ್ಮರಾಕ್ಷಸನು " ಬೇಗ ಹೋಗು. ನಿನಗೆ ನಮಸ್ಕಾರ " ಎಂದು ಹಿತವಾಗಿ ನುಡಿದನು.

೪೫ ಬ್ರಹ್ಮರಾಕ್ಷಸನಿಂದ ಬಿಡಿಸಿಕೊಂಡ ದೃಢನಿಶ್ಚಯವುಳ್ಳ ಆ ವೈಶ್ಯನು ನನ್ನಲ್ಲಿ ಸ್ಥಿರಭಕ್ತಿಯುಳ್ಳವನಾಗಿ ನನ್ನೆದುರಿಗೆ ಮತ್ತೆ ಮತ್ತೆ ನರ್ತನವನ್ನು ಮಾಡಿದನು.

ಅಥ ಪ್ರಭಾತಸಮಯೇ ನೃತ್ಯಚಿತ್ತೋತಿಕೋವಿದಃ ।
ಪುನಃ ಪುನರ್ವೈ ಉಚ್ಚಾರ್ಯ ನಮೋ ನಾರಾಯಣಾಯಚ ॥ ೪೬ ॥

ನಿವೃತ್ತೇ ಜಾಗರೇ ಸೋಥ ಕಾಲಿಂದೀಸಲಿಲಾಪ್ಲುತಃ ।
ದೃಷ್ಟ್ವಾ ಮಾಂ ದಿವ್ಯರೂಪಂ ತು ಗತೋಸೌ ಮಧುರಾಂ ಪುರೀಂ ॥ ೪೭ ॥

ದೃಷ್ಟಶ್ಚಾಗ್ರೇ ತ್ವಹಂ ತೇನ ಪುರುಷೋ ದಿವ್ಯರೂಪವಾನ್ ।
ಸ ಚ ಪೃಷ್ಟೋ ಮಯಾ ದೇವಿ ಕ್ವ ಭವಾನ್ ಪ್ರಸ್ಥಿತೋ ದ್ರುತಂ ॥ ೪೮ ॥

ಪುರುಷಸ್ಯ ವಚಃ ಶ್ರುತ್ವಾ ಸುಧನೋ ವಾಕ್ಯಮಬ್ರವೀತ್ ।
ಅಹಂ ಗಚ್ಛಾಮಿ ತ್ವರಿತೋ ಬ್ರಹ್ಮರಾಕ್ಷಸ ಸನ್ನಿಧೌ ॥ ೪೯ ॥

---

೪೬. ನೃತ್ಯದಲ್ಲಿ ಮನಸ್ಸಿಟ್ಟವನೂ, ಅತಿವಿದ್ವಾಂಸನೂ ಆದ ಆ ವೈಶ್ಯನು ಬಳಿಕ ಬೆಳಗಾಗುವ ಸಮಯದಲ್ಲಿ ನಮೋ ನಾರಾಯಣಾಯ' ಎಂದು ಮತ್ತೆ ಮತ್ತೆ ಹೇಳಿ ಕುಣಿದನು.

೪೭. ಆ ಸುಧನನು, ಜಾಗರಣೆಯು ಕಳೆದ ಬಳಿಕ ಯಮುನೆಯ ತೀರ್ಥದಲ್ಲಿ ಸ್ನಾನಮಾಡಿ, ದಿವ್ಯರೂಪನಾದ ನನ್ನನ್ನು ಸಂದರ್ಶಿಸಿ ಮಧುರಾಪುರಿಗೆ ಹೊರಟನು.

೪೮. ದೇವೀ, ಹೋಗುತ್ತಿರುವ ಅವನೆದುರಿಗೆ ದಿವ್ಯರೂಪದ ಪುರುಷನಾಗಿ ನಾನು ಕಾಣಿಸಿಕೊಂಡು, " ನೀನು ಎಲ್ಲಿಗೆ ಬೇಗನೆ ಹೊರಟಿದ್ದೀಯೆ ? " ಎಂದು ಅವನನ್ನು ಕೇಳಿದೆನು.

೪೯. ಮನುಷ್ಯನ(ನನ್ನ) ಮಾತನ್ನು ಕೇಳಿ, ಆ ಸುಧನನು, " ನಾನು ಬ್ರಹ್ಮರಾಕ್ಷಸನ ಹತ್ತಿರಕ್ಕೆ ಬೇಗನೆ ಹೋಗುತ್ತೇನೆ " ಎಂದು ಹೇಳಿದನು.

ನಿವಾರಯಾಮಾಸ ತದಾ ನ ಗಂತವ್ಯಂ ತ್ವಯಾನಘ ।
ಜೀವತೋ ಧರ್ಮಮಾಹಾತ್ಮ್ಯಂ ಮೃತೇ ಧರ್ಮಃ ಕುತೋ ಯಶಃ ॥೫೦॥

ಪುರುಷಸ್ಯ ವಚಃ ಶ್ರುತ್ವಾ ಸ ವಣಿಗ್ವಾಕ್ಯಮಬ್ರವೀತ್ ।
ತತ್ರ ಸತ್ಯಂ ವದಿಷ್ಯಾಮಿ ಯಾಸ್ಯೇ ರಾಕ್ಷಸಸನ್ನಿಧೌ ॥ ೫೧ ॥

*[ಸ ತತೋ ರಾಕ್ಷಸಂ ಗತ್ವಾತ್ವರಿತಂ ತಮುವಾಚ ಹ ।]
ಆಗತೋಽಹಂ ಮಹಾಭಾಗ ನರ್ತಯಿತ್ವಾ ಯಥಾಸುಖಂ ।
ವಿಷ್ಣವೇ ಲೋಕನಾಥಾಯ ಆಗತೋ ಹರಿಜಾಗರಾತ್ ॥ ೫೨ ॥

ಇದಂ ಶರೀರಂ ಮೇ ರಕ್ಷೋ ಭಕ್ಷಯಸ್ವ ಯಥೇಪ್ಸಿತಂ ।
ಯಥಾನ್ಯಾಯಂ ವಿಧಾನೇನ ಯಥಾವಾ ತವ ರೋಚತೇ ॥ ೫೩ ॥

---

೫೦. ಆಗ ಪುರುಷನು(ನಾನು) "ಪಾಪರಹಿತನೇ, ನೀನು ಹೋಗ ಕೂಡದು. ಜೀವಿಸುವವನಿಗೆ ಧರ್ಮದ ಮಹಿಮೆ. ಸತ್ತರೆ ಧರ್ಮವೆಲ್ಲಿ? ಯಶಸ್ಸು ತಾನೆ ಎಲ್ಲಿ?!" ಎಂದು ಅವನನ್ನು ತಡೆದ(ದೆ)ನು.

೫೧. ಪುರುಷನ ಮಾತನ್ನು ಕೇಳಿ, ಆ ವೈಶ್ಯನು, "ಬಿಡು, ಈ ವಿಚಾರದಲ್ಲಿ ಸತ್ಯವಾಗಿ ಹೇಳುತ್ತೇನೆ. ನಾನು ರಾಕ್ಷಸನ ಹತ್ತಿರಕ್ಕೆ ಹೋಗುತ್ತೇನೆ" ಎಂದು ಹೇಳಿದನು.

೫೨. *(ಬಳಿಕ ಬ್ರಹ್ಮರಾಕ್ಷಸನ ಹತ್ತಿರಕ್ಕೆ ಬೇಗನೆ ಹೋಗಿ ಅವನನ್ನು ಕುರಿತು)" ಮಹಾಭಾಗ, ನಾನು ಬಂದಿದ್ದೇನೆ. ಲೋಕನಾಥನಾದ ವಿಷ್ಣುವಿಗೆ ಸುಖವಾಗುವಂತೆ ನರ್ತನಮಾಡಿ, ಹರಿಜಾಗರಣೆಯನ್ನೂ ಮುಗಿಸಿ ಬಂದಿದ್ದೇನೆ.

೫೩. ರಾಕ್ಷಸನೇ, ನನ್ನ ಈ ಶರೀರವನ್ನು ನ್ಯಾಯವಾದ ವಿಧಾನದಿಂದ ಲಾಗಲಿ, ನಿನಗೆ ಇಷ್ಟಬಂದಂತಾಗಲಿ ಬೇಕಾದಹಾಗೆ ತಿನ್ನು.

---

* ಲುಪ್ತವಾಗಿರಬಹುದಾದ ಈ ಅರ್ಧಶ್ಲೋಕವನ್ನು ಕಲ್ಪಿಸಿದೆ.

ನೋಕ್ತಪೂರ್ವಂ ಮಯಾಽಸತ್ಯಂ ಕದಾಚಿದಪಿ ರಾಕ್ಷಸ ।
ತೇನ ಸತ್ಯೇನ ಮಾಂ ಭುಂಕ್ಷ್ವ ಬ್ರಹ್ಮರಾಕ್ಷಸ ದಾರುಣ ॥ ೫೪ ॥

ವಣಿಜಸ್ತು ವಚಃ ಶ್ರುತ್ವಾ ತತೋಽಸೌ ಬ್ರಹ್ಮರಾಕ್ಷಸಃ ।
ಉವಾಚ ಮಧುರಂ ವಾಕ್ಯಂ ಸುಧನಂ ತದನಂತರಂ ॥ ೫೫ ॥

ಸಾಧು ತುಷ್ಟೋಽಸ್ಮಿ ಭದ್ರಂತೇ ಸತ್ಯಂ ಧರ್ಮಶ್ಚ ಪಾಲಿತಃ ।
ವಣಿಕ್ ತ್ವಂ ಚಾತಿವಿಜ್ಞಸ್ತು ಯಸ್ಯ ತೇ ಗತಿರೀದೃಶೀ ॥ ೫೬ ॥

ಜಾಗರಸ್ಯ ಸಮಸ್ತಸ್ಯ ಮಮ ಪುಣ್ಯಂ ಪ್ರಯಚ್ಛ ವೈ ।
ತಸ್ಯ ಪುಣ್ಯಪ್ರಭಾವೇಣ ಯಥಾಹಂ ಮುಕ್ತಿಮಾಪ್ನುಯಾಂ ॥ ೫೭ ॥

॥ ಸುಧನ ಉವಾಚ ॥

ನಾಹಂ ದಾಸ್ಯಾಮಿ ತೇ ಪುಣ್ಯಂ ನೃತ್ಯಸ್ಯ ನರಭೋಜನ ।
ಅರ್ಧಂ ವಾಥ ಸಮಸ್ತಂ ವಾ ಪ್ರಹರಂ ಚಾರ್ಧಮೇವ ವಾ ॥ ೫೮ ॥

---

೫೪. ಘೋರರಾಕ್ಷಸಾ, ಬ್ರಹ್ಮರಾಕ್ಷಸಾ, ನಾನೆಂದೂ ಸುಳ್ಳುಹೇಳಿಲ್ಲ. ಆದುದರಿಂದ ಸತ್ಯದಿಂದ ಬಂದಿದ್ದೇನೆ. ನನ್ನನ್ನು ತಿನ್ನು" ಎಂದನು.

೫೫. ಆ ಬ್ರಹ್ಮರಾಕ್ಷಸನು, ವಣಿಜನ ಆ ಮಾತನ್ನು ಕೇಳಿ, ಬಳಿಕ ಅವನಿಗೆ ಇಂಪಾದ ಮಾತನ್ನು ಹೇಳಿದನು.

೫೬–೫೭. "ಭಾಪು! ತೃಪ್ತನಾದೆನು. ನಿನಗೆ ಮಂಗಳವಾಗಲಿ; ಸತ್ಯವೂ ಧರ್ಮವೂ, ನಿನ್ನಿಂದ ರಕ್ಷಿತವಾಯಿತು. ಹೀಗೆ ನಡೆಯುವುದರಿಂದ ವೈಶ್ಯನಾದ ನೀನು ಅತಿಪ್ರಾಜ್ಞನಾಗಿ ಕಾಣುತ್ತೀಯೆ. ನಿನ್ನ ಎಲ್ಲಾಜಾಗರಣೆಯ ಪುಣ್ಯವನ್ನು ನನಗೆ ಕೊಡು. ಆ ಪುಣ್ಯಪ್ರಭಾವದಿಂದ ನಾನು ಮುಕ್ತಿಯನ್ನು ಪಡೆಯುವೆನು."

೫೮. ಸುಧನ—ನರಭಕ್ಷಕನೇ, ನೃತ್ಯದ ಪುಣ್ಯವನ್ನು ಪೂರ್ಣವಾಗಿ ಯಾಗಲಿ, ಅರ್ಧವನ್ನಾಗಲಿ, ಅರ್ಧಜಾವದ್ದನ್ನಾಗಲಿ ನಾನು ನಿನಗೆ ಕೊಡುವುದಿಲ್ಲ.

ಸುಧನಸ್ಯ ವಚಃ ಶ್ರುತ್ವಾ ಅಬ್ರವೀದ್ಬ್ರಹ್ಮರಾಕ್ಷಸಃ ।
ಏಕನೃತ್ಯಸ್ಯ ಮೇ ಪುಣ್ಯಂ ದದ ತ್ವಂ ವಣಿಜೋತ್ತಮ ॥ ೫೯ ॥

॥ ಸುಧನ ಉವಾಚ ॥

ನಾಹಂ ದಾಸ್ಯಾಮಿ ತೇ ಪುಣ್ಯಂ ಯಥೋಕ್ತಂ ಚ ಸಮಾಚರ ।
ಕೇನ ತ್ವಂ ಕರ್ಮದೋಷೇಣ ರಾಕ್ಷಸತ್ವಮುಪಾಗತಃ ॥ ೬೦ ॥

ಯತ್ತೇ ಗುಹ್ಯಂ ಮಹಾಭಾಗ ಸರ್ವಂ ತತ್ಕಥಯಸ್ವ ಮೇ ॥ ೬೧ ॥

ಸುಧನಸ್ಯ ವಚಃ ಶ್ರುತ್ವಾ ವಿಹಸಿತ್ವಾಹ ರಾಕ್ಷಸಃ ।
ಕಿಂ ತ್ವಂ ಮಾಂ ಚ ನಜಾನಾಸಿ ಪ್ರತಿವಾಸೀ ಹ್ಯಹಂ ತವ ॥ ೬೨ ॥

ಅಗ್ನಿದತ್ತಸ್ತು ವೈ ನಾಮ ಛಾಂದಸೋ ಬ್ರಾಹ್ಮಣೋತ್ತಮಃ ।
ಇಷ್ಟಕಾಂಸ್ತು ಹರನ್ನಿತ್ಯಂ ಪರಕೀಯಾಂಶ್ಚ ಸರ್ವದಾ ॥ ೬೩ ॥

ಮೃತಸ್ತು ಗೃಹಕಾಮೇನ ರಾಕ್ಷಸತ್ವಮುಪಾಗತಃ ।
ಮಯಾ ತ್ವಂ ಹಿ ಯಥಾಪ್ರಾಪ್ತ ಉಪಕಾರಂ ಕುರುಷ್ವಮೇ ॥ ೬೪ ॥

---

೫೯. ಸುಧನನ ಮಾತನ್ನು ಕೇಳಿ ಬ್ರಹ್ಮರಾಕ್ಷಸನು, "ವಣಿಜೋತ್ತಮನೇ, ನಿನ್ನ ಒಂದು ನೃತ್ಯದ ಪುಣ್ಯವನ್ನಾದರೂ ನನಗೆ ಕೊಡು" ಎಂದನು.

೬೦–೬೧. "ನಾನು ನಿನಗೆ ಪುಣ್ಯವನ್ನು ಕೊಡುವುದಿಲ್ಲ. ಹೇಳಿರುವಂತೆ ನಡೆಯಿಸು ನಿನಗೆ ಯಾವ ಕರ್ಮದೋಷದಿಂದ ರಾಕ್ಷಸಜನ್ಮವು ಬಂದಿತು? ನಿನ್ನ ರಹಸ್ಯವೇನು? ಮಹಾಭಾಗ್ಯನೇ, ನನಗೆ ಅದೆಲ್ಲವನ್ನೂ ಹೇಳು."

೬೨–೬೪. ಸುಧನನ ಮಾತನ್ನು ಕೇಳಿ ನಕ್ಕು ಆ ರಾಕ್ಷಸನು "ನನ್ನನ್ನೂ ನೀನು ಅರಿಯೆಯೇನು? ನಾನು ನಿನ್ನ ನೆರೆಮನೆಯವನು. ಅಗ್ನಿದತ್ತನೆಂಬ ಹೆಸರಿನ ವೇದಜ್ಞನಾದ ಬ್ರಾಹ್ಮಣೋತ್ತಮನು. ಮನೆಯನ್ನು ಕಟ್ಟಬೇಕೆಂಬ ಆಸೆಯಿಂದ ನಿತ್ಯವೂ ಯಾವಾಗಲೂ ಪರಕೀಯರ ಇಟ್ಟಿಗೆಗಳನ್ನು ಕದಿಯುತ್ತಾ ಇದ್ದು, ಸತ್ತು, ರಾಕ್ಷಸಜನ್ಮವನ್ನು ಪಡೆದೆನು. ನನಗೆ ನೀನು ಅಕಸ್ಮಾತ್ತಾಗಿ

ಏಕವಿಶ್ರಾಮಪುಣ್ಯಂ ಮೇ ದೇಹಿ ತ್ವಂ ವಣಿಜೋತ್ತಮ ॥ ೬೫ ॥

ಕೃಪಯಾ ತು ಸಮಾಯುಕ್ತೋ ವಣಿಗ್ವಚನಬ್ರವೀತ್ ।
ಸಾಧುರಾಕ್ಷಸ ದತ್ತಂತೇ ಏಕನೃತ್ಯಂ ಮಯಾ ತವ ॥
ಏಕನೃತ್ಯಪ್ರಭಾವೇಣ ರಾಕ್ಷಸೋ ಮುಕ್ತಿಮಾಗತಃ ॥ ೬೬ ॥

॥ ವರಾಹ ಉವಾಚ ॥

ಸುಧನಸ್ತು ತತೋದೇವಿ ವಿಶ್ವರೂಪಂ ಜನಾರ್ದನಂ ।
ಅಗ್ರತಸ್ತು ಸ್ಥಿತಂ ದೇವಂ ದೃಷ್ಟ್ವಾಸೌ ಧರಣೀಂ ಗತಃ ॥ ೬೭ ॥

ಉವಾಚ ಮಧುರಂ ವಾಕ್ಯಂ ದೇವದೇವೋ ಜನಾರ್ದನಃ ।
ಚತುರ್ಭುಜೋ ದಿವ್ಯತನುಃ ಶಂಖಚಕ್ರಗದಾಧರಃ ॥ ೬೮ ॥

ವಿಮಾನವರಮಾರುಹ್ಯ ಮಮ ಲೋಕಂ ವ್ರಜಸ್ವ ಚ ।
ಇತ್ಯುಕ್ತ್ವಾ ಮಾಧವೋ ದೇವಃ ತತ್ರೈವಾಂತರಧೀಯತ ॥ ೬೯ ॥

ದೊರೆತೆ. ನನಗೆ ಉಪಕಾರವನ್ನು ಮಾಡು. ವಣಿಜೋತ್ತಮಾ, ನಿನ್ನ ಒಂದು ವಿಶ್ರಾಮದ ಪುಣ್ಯವನ್ನು ನನಗೆ ನೀನು ಕೊಡು" ಎಂದು ಹೇಳಿದನು.

೬೬. ಆ ವೈಶ್ಯನು ದಯೆಯುಳ್ಳವನಾಗಿ, "ಒಳ್ಳೆಯದು! ರಾಕ್ಷಸನೇ, ಒಂದು ಕುಣಿತದ ಪುಣ್ಯವನ್ನು ನಾನು ನಿನಗೆ ಕೊಟ್ಟಿದ್ದೇನೆ." ಎಂದು ಹೇಳಿದನು. ಆ ಏಕನೃತ್ಯದ ಮಹಿಮೆಯಿಂದ ರಾಕ್ಷಸನು ಮುಕ್ತಿಯನ್ನು ಪಡೆದನು.

೬೭. ಶ್ರೀವರಾಹ—ದೇವೀ, ಬಳಿಕ ಆ ಸುಧನನು, ಎದುರಿಗೆ ನಿಂತಿರುವ ವಿಶ್ವರೂಪನಾದ ಜನಾರ್ದನದೇವನನ್ನು ಕಂಡು, ಭೂಮಿಯಮೇಲೆ ಮೈನೀಡಿ, ವಂದಿಸಿದನು.

೬೮–೬೯. ದೇವದೇವನೂ, ಜನಾರ್ದನನೂ, ಚತುರ್ಭುಜನೂ, ದಿವ್ಯದೇಹನೂ, ಶಂಖಚಕ್ರಗದಾಧರನೂ, ಲಕ್ಷ್ಮೀಪತಿಯೂ ಆದ ಪರಮಾತ್ಮನು ಸುಧನನಿಗೆ, ಇಂಪಾದ ಮಾತಿನಿಂದ, "ನೀನು ವಿಮಾನವನ್ನೇರಿ, ನನ್ನ ಲೋಕಕ್ಕೆ ಹೊರಡು" ಎಂದು ಹೇಳಿ, ಅಲ್ಲೇ ಮಾಯವಾದನು.

ಸುಧನಃ ಸಶರೀರೋಽಪಿ ಸಕುಟುಂಬೋ ದಿವಂ ಯಯೌ ।
ವಿಮಾನವರಮಾರುಹ್ಯ ವಿಷ್ಣೋರ್ಲೋಕಂ ಜಗಾಮ ಹ ॥ ೭೦ ॥

ಏಷ ತೀರ್ಥಪ್ರಭಾವೋ ವೈ ಕಥಿತಸ್ತೇ ವಸುಂಧರೇ ।
ಅಕ್ರೂರಾಚ್ಚ ಪರಂ ತೀರ್ಥಂ ನ ಭೂತಂ ನ ಭವಿಷ್ಯತಿ ॥ ೭೧ ॥

ತಸ್ಯ ತೀರ್ಥಪ್ರಭಾವೇಣ ಸುಧನೋ ಮುಕ್ತಿಮಾಪ್ತವಾನ್ ॥ ೭೨ ॥

ದ್ವಾದಶೀ ಶುಕ್ಲಪಕ್ಷೇ ತು ಕುಮುದಸ್ಯ ಚ ಯಾ ಭವೇತ್ ।
ತಸ್ಮಿನ್ ಸ್ನಾತಸ್ಯ ವಸುಧೇ ರಾಜಸೂಯಫಲಂ ಭವೇತ್ ॥ ೭೩ ॥

ಕಾರ್ತಿಕೀಂ ಸಮನುಪ್ರಾಪ್ಯ ತತ್ತೀರ್ಥೇ ತು ವಸುಂಧರೇ ।
ವೃಷೋತ್ಸರ್ಗಂ ನರಃ ಕುರ್ವಂಸ್ತಾರಯೇತ್ ಸ್ವಕುಲೋದ್ಭವಾನ್ ॥ ೭೪ ॥

---

೭೦. ಸುಧನನು ಸಶರೀರನಾಗಿಯೇ, ಕುಟುಂಬ ಸಹಿತನಾಗಿ ವಿಮಾನವನ್ನೇರಿ, ಆಕಾಶಕ್ಕೆ ಹಾರಿ, ವಿಷ್ಣುಲೋಕಕ್ಕೆ ಹೋದನು.

೭೧–೭೨. ವಸುಂಧರೇ, ಅಕ್ರೂರತೀರ್ಥದ ಈ ಮಹಿಮೆಯನ್ನು ನಿನಗೆ ಹೇಳಿದ್ದೇನೆ. ಅಕ್ರೂರತೀರ್ಥಕ್ಕಿಂತ ಉತ್ತಮವಾದ ತೀರ್ಥವು ಆಗಿಲ್ಲ. ಆಗುವುದೂ ಇಲ್ಲ ಆ ತೀರ್ಥದ ಪ್ರಭಾವದಿಂದ ಸುಧನನು ಮೋಕ್ಷವನ್ನು ಪಡೆದನು.

೭೩. ಕಾರ್ತಿಕಮಾಸದ ಶುಕ್ಲಪಕ್ಷದ(ಉತ್ಥಾನ) ದ್ವಾದಶಿಯದಿನ ಆ ತೀರ್ಥದಲ್ಲಿ ಸ್ನಾನಮಾಡಿದವನಿಗೆ ರಾಜಸೂಯಯಾಗದ ಫಲವುಂಟಾಗುವುದು.

೭೪. ವಸುಂಧರೇ, ಕಾರ್ತಿಕಮಾಸದಲ್ಲಿ ಆ ತೀರ್ಥದಲ್ಲಿ ವೃಷೋತ್ಸರ್ಗವನ್ನು ಮಾಡುವ ಮನುಷ್ಯನು ತನ್ನ ಕುಲಜರನ್ನೆಲ್ಲಾ ಉತ್ತಾರಣಗೊಳಿಸುವನು.

ಶ್ರಾದ್ಧಂ ಯಃ ಕುರುತೇ ಸುಭ್ರು ಕಾರ್ತಿಕ್ಯಾಂ ಪ್ರಯತೋನರಃ ।
ಪಿತರಸ್ತಾರಿತಾಸ್ತೇನ ಸದೈವ ಪ್ರಪಿತಾಮಹಾಃ ॥ ೭೫ ॥

ಇತಿ ಶ್ರೀವರಾಹಪುರಾಣೇ ಮಥುರಾಮಾಹಾತ್ಮ್ಯೇ ಅಕ್ರೂರತೀರ್ಥ ಪ್ರಭಾವೋ ನಾಮ ಪಂಚಪಂಚಾಶದಧಿಕಶತತಮೋಽಧ್ಯಾಯಃ

---

೭೫. ಸುಂದರೀ, ಕಾರ್ತಿಕಮಾಸದಲ್ಲಿ ಪರಿಶುದ್ಧನಾಗಿ ಆ ಅಕ್ರೂರ ತೀರ್ಥದಲ್ಲಿ ಶ್ರಾದ್ಧಮಾಡುವವನು ಪಿತೃಗಳನ್ನೂ ಪ್ರಪಿತಾಮಹರನ್ನೂ ಯಾವಾಗಲೂ ಉತ್ತಾರಣಮಾಡುವನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಯಮುನಾನದಿಯಲ್ಲಿರುವ ಅಕ್ರೂರ ವೆಂಬ ತೀರ್ಥದ ಮಹಿಮೆಯನ್ನು ವಿವರಿಸುತ್ತ ಆ ತೀರ್ಥಕ್ಷೇತ್ರದಲ್ಲಿ ಸ್ನಾನ ಪೂಜಾದಿಗಳನ್ನೂ, ಏಕಾದಶಿಯದಿನ ರಾತ್ರಿ ಆ ಕ್ಷೇತ್ರನಾಥನ ಸನ್ನಿಧಿಯಲ್ಲಿ ನೃತ್ಯ ಜಾಗರಣೆಗಳನ್ನೂ ಮಾಡಿದ ಪುಣ್ಯಬಲದಿಂದ ಅಗ್ನಿದತ್ತನೆಂಬ ಬ್ರಾಹ್ಮಣನ ಬ್ರಹ್ಮರಾಕ್ಷಸಜನ್ಮವನ್ನೂ ಹೋಗಲಾಡಿಸಿ, ಮುಕ್ತಿಯಾಗುವಂತೆ ಮಾಡಿ, ತಾನೂ ಸಕುಟುಂಬನಾಗಿ, ಸಶರೀರನಾಗಿಯೇ ಮೋಕ್ಷವನ್ನು ಪಡೆದ ಸುಧನನೆಂಬ ಸುಕೃತಿಯಾದ ವೈಶ್ಯನ ಕಥೆಯನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತೈದನೆಯ ಅಧ್ಯಾಯ.

॥ ಶ್ರೀಃ ॥

ಷಟ್‌ಪಂಚಾಶದಧಿಕಶತತಮೋಽಧ್ಯಾಯಃ

ಅಥ ಮಧುರಾಪ್ರಾದುರ್ಭಾವಃ

॥ ವರಾಹ ಉವಾಚ ॥

ವತ್ಸಕ್ರೀಡನಕಂ ನಾಮ ತೀರ್ಥಂ ವಕ್ಷ್ಯೇ ಪರಂ ಮಮ ।
ತತ್ರ ರಕ್ತಶಿಲಾಬದ್ಧಂ ರಕ್ತಚಂದನಭೂಷಿತಂ ॥ ೧ ॥

ಸ್ನಾನಮಾತ್ರೇಣ ತತ್ರೈವ ವಾಯುಲೋಕಂ ವ್ರಜೇನ್ನರಃ ।
ತತ್ರಾಥ ಮುಂಚತಿ ಪ್ರಾಣಾನ್ಮಮ ಲೋಕೇ ಮಹೀಯತೇ ॥ ೨ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಅಸ್ತಿ ಭಾಂಡೀರಕಂ ನಾಮ ಯತ್ತೀರ್ಥಂ ಪರಮುತ್ತಮಮ್ ॥ ೩ ॥

ನೂರೈವತ್ತಾರನೆಯ ಅಧ್ಯಾಯ

ಮಧುರೆಯ ಪ್ರಾದುರ್ಭಾವ.

೧. ಶ್ರೀವರಾಹ—ಆ ಮಧುರಾಮಂಡಲದಲ್ಲಿ ಕೆಂಪುಕಲ್ಲುಗಳಿಂದ ಕಟ್ಟಿದುದಾಗಿಯೂ, ಕೆಂಪಾದ ಗಂಧದಿಂದ ಅಲಂಕೃತವಾಗಿಯೂ ಇರುವ ವತ್ಸಕ್ರೀಡನಕವೆಂಬ ನನ್ನ ಮತ್ತೊಂದು ಉತ್ತಮತೀರ್ಥವನ್ನು ಹೇಳುವೆನು.

೨. ಅಲ್ಲಿಯ ಸ್ನಾನಮಾತ್ರದಿಂದಲೇ ಮನುಷ್ಯನು ವಾಯುಲೋಕವನ್ನು ಸೇರುವನು. ಅಲ್ಲದೆ ಅಲ್ಲಿ ಪ್ರಾಣಗಳನ್ನು ಬಿಟ್ಟರೆ ನನ್ನ ಲೋಕವನ್ನು ಸೇರುವನು.

೩–೪. ವಸುಂಧರೇ, ಮತ್ತೊಂದು ತೀರ್ಥವನ್ನು ಹೇಳುತ್ತೇನೆ. ಕೇಳು. ಭಾಂಡೀರಕವೆಂಬುದೇ ಅತ್ಯುತ್ತಮವಾದ ಆ ತೀರ್ಥ, ಅದರ ಸುತ್ತಲೂ ಮತ್ತಿ,

ಶಾಲ್ಮೈಸ್ತಾಲೈಶ್ಚ ತರುಭಿಸ್ತಮಾಲೈರರ್ಜುನೈಸ್ತಥಾ ।
ಇಂಗುದೈಃ ಪೀಲುಕೈಶ್ಚೈವ ಕರೀರೈ ರಕ್ತಪುಷ್ಪಕೈಃ ॥ ೪ ॥

ತಸ್ಮಿನ್ ಭಾಂಡೀರಕೇ ಸ್ನಾತೋ ನಿಯತೋ ನಿಯತಾಶನಃ ।
ಸರ್ವಪಾಪವಿನಿರ್ಮುಕ್ತ ಇಂದ್ರಲೋಕಂ ಸ ಗಚ್ಛತಿ ॥ ೫ ॥

ತತ್ರಾಥ ಮುಂಚತಿ ಪ್ರಾಣಾನ್ಮಮ ಲೋಕಂ ಚ ಗಚ್ಛತಿ ॥ ೬ ॥

ಪುನರನ್ಯತ್ಪ್ರವಕ್ಷ್ಯಾಮಿ ಕ್ಷೇತ್ರಂ ವೃಂದಾವನಂ ಮಮ ।
ತತ್ರಾಹಂ ಕ್ರೀಡಯಿಷ್ಯಾಮಿ ಗೋಭಿರ್ಗೋಪಾಲಕೈಃ ಸಹ ॥
ರಮ್ಯಂಚ ಸುಪ್ರತೀತಂ ಚ ದೇವದಾನವದುರ್ಲಭಂ ॥ ೭ ॥

ತತ್ರ ಕುಂಡೇ ಮಹಾಭಾಗೇ ಬಹುಗುಲ್ಮಲತಾವೃತೇ ।
ತತ್ರ ಸ್ನಾನಂ ಪ್ರಕುರ್ವೀತ ಏಕರಾತ್ರೋಷಿತೋ ನರಃ ॥ ೮ ॥

ತಾಳೆ, ಹೊಂಗೆ, ಕೆಂಪುಮತ್ತಿ, ತಾರೆ, ಗೋಣಿ ಈ ಮರಗಳೂ, ಬಿದಿರುಮೆಳೆಗಳೂ ಮುತ್ತುಗದ ಮರಗಳೂ ಒತ್ತಾಗಿ ಬೆಳೆದಿವೆ.

೫–೬. ಆಹಾರವ್ಯವಹಾರಗಳಲ್ಲಿ ನಿಯಮವುಳ್ಳವನಾಗಿದ್ದು, ಆ ಭಾಂಡೀರ ತೀರ್ಥದಲ್ಲಿ ಸ್ನಾನಮಾಡುವವನು ಪಾಪವನ್ನೆಲ್ಲಾ ಕಳೆದುಕೊಂಡು ಇಂದ್ರ ಲೋಕಕ್ಕೆ ಹೋಗುವನು. ಅಲ್ಲಿ ಪ್ರಾಣಬಿಡುವವನು ನನ್ನ ಲೋಕವನ್ನು ಸೇರುವನು.

೭. ಬೇರೊಂದನ್ನು ಹೇಳುತ್ತೇನೆ. ಬೃಂದಾವನವೆಂಬ ಅದು ನನ್ನ ಕ್ಷೇತ್ರ. ನಾನು ಅಲ್ಲಿ ಗೋವುಗಳೊಡನೆಯೂ, ಗೋಪಾಲಕರೊಡನೆಯೂ ಆಡುವೆನು. ರಮ್ಯವೂ, ಸುಪ್ರಸಿದ್ಧವೂ ಆದ ಅದು ದೇವದಾನವರಿಗೆ ದುರ್ಲಭವಾದುದು.

೮–೯. ಮಹಾಭಾಗ್ಯೇ, ಬಹಳ ಪೊದೆಗಳೂ, ಬಳ್ಳಿಗಳೂ ಸುತ್ತಿಕೊಂಡಿರುವ ಅಲ್ಲಿಯ ಕುಂಡದ ಹತ್ತಿರ ಒಂದುರಾತ್ರೆ ಇದ್ದು ತೀರ್ಥದಲ್ಲಿ ಸ್ನಾನಮಾಡುವವನು

ಗಂಧರ್ವೈರಪ್ಸರೋಭಿಶ್ಚ ಕ್ರೀಡಮಾನಃ ಸ ಮೋದತೇ ।
ತತ್ರಾಥ ಮುಂಚತಿ ಪ್ರಾಣಾನ್ಮಮ ಲೋಕಂ ಚ ಗಚ್ಛತಿ ॥ ೯ ॥

ಪುನರನ್ಯತ್ಪ್ರವಕ್ಷ್ಯಾಮಿ ಮಹಾಪಾತಕನಾಶನಮ್ ।
ತತ್ರ ವೃಂದಾವನೇ ತೀರ್ಥೇ ಯತ್ರ ಕೇಶೀ ನಿಪಾತಿತಃ ॥ ೧೦ ॥

ತೀರ್ಥಂ ಶತಗುಣಂ ಪುಣ್ಯಂ ಯತ್ರ ಕೇಶೀ ನಿಪಾತಿತಃ ।
ಕೇಶ್ಯಾಃ ಶತಗುಣಂ ಪುಣ್ಯಂ ಯತ್ರ ವಿಶ್ರಮತೇ ಹರಿಃ ॥ ೧೧ ॥

ತಸ್ಮಾಚ್ಛತಗುಣಂ ಪುಣ್ಯಂ ನಾತ್ರಕಾರ್ಯಾ ವಿಚಾರಣಾ ॥ ೧೨ ॥

ತತ್ರಾಪಿಚ ವಿಶೇಷೋಽಸ್ತಿ ಕೇಶೀತೀರ್ಥೇ ವಸುಂಧರೇ ।
ತಸ್ಮಿನ್ ಪಿಂಡಪ್ರದಾನೇನ ಗಯಾತುಲ್ಯಫಲಂ ಭವೇತ್ ॥
ಸ್ನಾನೇ ದಾನೇ ತಥಾ ಹೋಮೇ ಅಗ್ನಿಷ್ಟೋಮಫಲಂ ಭವೇತ್ ॥ ೧೩ ॥

ಗಂಧರ್ವರೊಡನೆಯೂ, ಅಪ್ಸರರೊಡನೆಯೂ ಕ್ರೀಡಿಸುತ್ತ ಆನಂದಪಡುವನು. ಮತ್ತು ಅಲ್ಲಿ ಮೃತನಾಗುವವನು ನನ್ನ ಲೋಕವನ್ನು ಸೇರುವನು.

೧೦-೧೨. ಮಹಾಪಾತಕವನ್ನು ನಾಶಮಾಡುವ ಬೇರೊಂದನ್ನು ಹೇಳುತ್ತೇನೆ. ಆ ಬೃಂದಾವನತೀರ್ಥದಲ್ಲಿ ನಾನು ಕೇಶಿಯೆಂಬ ರಾಕ್ಷಸನನ್ನು ಬೀಳಿಸಿದೆಡೆಯು ಬೃಂದಾವನದ ಸಾಮಾನ್ಯತೀರ್ಥಕ್ಕೆ ನೂರರಷ್ಟು ಪುಣ್ಯವಾದುದು ಆ ಕೇಶಿತೀರ್ಥಕ್ಕಿಂತ ಕೃಷ್ಣನು ವಿಶ್ರಮಿಸಿಕೊಳ್ಳುವೆಡೆಯ ತೀರ್ಥವು ನೂರರಷ್ಟು ಪವಿತ್ರವಾದುದು. ಇದರಲ್ಲಿ ವಿಮರ್ಶೆಮಾಡಬೇಕಾದುದೇನೂ ಇಲ್ಲ.

೧೩. ವಸುಂಧರೇ, ಅದರಲ್ಲೂ ಆ ಕೇಶೀತೀರ್ಥದಲ್ಲಿ ಒಂದು ವಿಶೇಷವಿದೆ. ಅದರಲ್ಲಿ ಪಿಂಡಪ್ರದಾನಮಾಡಿದರೆ, ಗಯೆಯಲ್ಲಿ ಪಿಂಡಪ್ರದಾನಮಾಡಿದರೆ ಬರುವ ಫಲವೇ ಬರುವುದು. ಅಲ್ಲಿಯ ಸ್ನಾನ ಅಥವಾ ಹೋಮದಿಂದ ಅಗ್ನಿಷ್ಟೋಮ ಯಾಗದ ಫಲವುಂಟಾಗುವುದು.

ಸೂರ್ಯತೀರ್ಥೇಷು ವಸುಧೇ ದ್ವಾದಶಾದಿತ್ಯಸಂಜ್ಞಕೇ ।
ಕಾಲೀಯೋ ರಮತೇ ತತ್ರ ಕಾಲಿಂದ್ಯಾಃ ಸಲಿಲೇ ಶುಭೇ ॥ ೧೪ ॥

ಕಾಲೀಯೋ ದಮಿತಸ್ತತ್ರ ಆದಿತ್ಯಾಃ ಸ್ಥಾಪಿತಾ ಮಯಾ ।
ವರಂ ವೃಣುಧ್ವಂ ಭದ್ರಂ ವೋ ಯದ್ವೋ ಮನಸಿವರ್ತತೇ ॥ ೧೫ ॥

॥ ಆದಿತ್ಯಾ ಊಚುಃ ॥

ವರಂ ದದಾಸಿನೋ ದೇವ ವರಾಹರ್ಾ ಯದಿ ವಾವಯಮ್ ।
ಅಸ್ಮಿಂಸ್ತೀರ್ಥವರೇ ಸ್ನಾನಮಸ್ಮಾಕಂ ಸಂಪ್ರದೀಯತಾಮ್ ॥ ೧೬ ॥

ಆದಿತ್ಯಾನಾಂ ವಚಃ ಶ್ರುತ್ವಾ ಕ್ರೀಡಾಂ ಕೃತ್ವಾ ವಸುಂಧರೇ ॥ ೧೭ ॥

ಸ್ನಾನಮಾತ್ರೇಣ ತತ್ರೈವ ಮುಚ್ಯತೇ ಸರ್ವಕಿಲ್ಬಿಷೈಃ ।
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೧೮ ॥

೧೪-೧೫. ಭೂದೇವೀ, ಯಮುನೆಯ ಶುಭಜಲದಲ್ಲಿ ದ್ವಾದಶಾದಿತ್ಯವೆಂಬ ಹೆಸರುಳ್ಳ ಸೂರ್ಯತೀರ್ಥಗಳಲ್ಲಿ ಕಾಳಿಯನಾಗನು ಆಡುತ್ತಿರುವನು. ಕಾಳಿಯನನ್ನು ಮರ್ದಿಸಿ, ನಾನು ಅಲ್ಲಿ ಆದಿತ್ಯರನ್ನು ನೆಲೆಗೊಳಿಸಿ, "ನಿಮಗೆ ಶುಭವಾಗಲಿ. ನಿಮ್ಮ ಮನದಲ್ಲಿರುವ ವರವನ್ನು ಬೇಡಿ." ಎಂದೆನು.

೧೬. ಆದಿತ್ಯರು—"ದೇವ, ನಾವು ವರಕ್ಕೆ ಅರ್ಹರಾಗಿದ್ದು, ನೀನು ಅದನ್ನು ಕೊಡುವೆಯಾದರೆ ಈ ಉತ್ತಮತೀರ್ಥದಲ್ಲಿ ನಮಗೆ ಸ್ನಾನವನ್ನು ಅನುಗ್ರಹಿಸು."

೧೭. ವಸುಂಧರೇ, ನಾನು ಆದಿತ್ಯರ ಮಾತನ್ನು ಕೇಳಿ ವಿನೋದದಿಂದಾಡುತ್ತ ಹಾಗೆಯೇ ಆಗಲಿ ಎಂದೆನು.

೧೮. ಆ ಸೂರ್ಯತೀರ್ಥದ ಸ್ನಾನಮಾತ್ರದಿಂದಲೇ ಮನುಷ್ಯನು ಸರ್ವಪಾಪಗಳಿಂದಲೂ ವಿಮುಕ್ತನಾಗುವನು. ಅಲ್ಲಿ ಮಡಿದನಾದರೆ ನನ್ನ ಲೋಕವನ್ನು ಸೇರುವನು.

ಉತ್ತರೇ ಹರಿದೇವಸ್ಯ ದಕ್ಷಿಣೇ ಕಾಲಿಯಸ್ಯತು ।
ಅನಯೋರ್ದೇವಯೋರ್ಮಧ್ಯೇ ಯೇ ಮೃತಾಸ್ತೇಽಪುನರ್ಭವಾಃ॥ ೧೯ ॥

ಇತಿ ಶ್ರೀವರಾಹಪುರಾಣೇ ಮಧುರಾಮಾಹಾತ್ಮ್ಯೇ ಮಧುರಾ ಪ್ರಾದುರ್ಭಾವೋ ನಾಮ ಷಟ್‌ಪಂಚಾಶದಧಿಕ ಶತತಮೋಽಧ್ಯಾಯಃ

---

೧೯. ಉತ್ತರದಲ್ಲಿರುವ ಹರಿ (ತೀರ್ಥಕ್ಕೂ) ದಕ್ಷಿಣದಲ್ಲಿರುವ ಕಾಲಿಯ (ತೀರ್ಥಕ್ಕೂ) ಈ ಇಬ್ಬರು ದೇವರ (ತೀರ್ಥಗಳ) ನಡುವೆ ಮೃತರಾದವರು ಪುನರ್ಜನ್ಮವಿಲ್ಲದವರು.

ಅಧ್ಯಾಯದ ಸಾರಾಂಶ—

ಶ್ರೀವರಾಹನು ಭೂದೇವಿಗೆ ಮಧುರಾಮಂಡಲದಲ್ಲಿರುವ ಕ್ರೀಡನಕ, ಭಾಂಡೀರ, ಬೃಂದಾವನ, ಕೇಶಿ, ಹರಿ, ಸೂರ್ಯ ಎಂಬ ಹೆಸರಿನ ತೀರ್ಥಕ್ಷೇತ್ರಗಳ ಪ್ರಾಶಸ್ತ್ಯವನ್ನು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತಾರನೆಯ ಅಧ್ಯಾಯ.

|| ಶ್ರೀಃ ||

ಸಪ್ತಪಂಚಾಶದಧಿಕಶತತಮೋಽಧ್ಯಾಯಃ
ಮಲಯಾರ್ಜುನತೀರ್ಥಸ್ನಾನಾದಿಪ್ರಶಂಸಾ

|| ಶ್ರೀವರಾಹ ಉವಾಚ ||

ಯಮುನಾಪಾರಮುಲ್ಲಂಘ್ಯ ತತ್ರೈವ ಚ ಮಹಾ+ಮತೇ |
ಮಲಯಾರ್ಜುನಕಂ ತೀರ್ಥಂ ಕುಂಡಂ ತತ್ರ ಚ ವಿದ್ಯತೇ || ೧ ||

ಪರ್ಯಸ್ತಂ ತತ್ರ ಶಕಟಂ ಭಿನ್ನಭಾಂಡಕುಟೀಘಟಿಮ್ |
ತತ್ರ ಸ್ನಾನೋಪವಾಸಾಭ್ಯಾಮನಂತಂ ಫಲಮಶ್ನುತೇ || ೨ ||

ನೂರೈವತ್ತೇಳನೆಯ ಅಧ್ಯಾಯ
ಮಲಯಾರ್ಜುನತೀರ್ಥಸ್ನಾನಾದಿಪ್ರಶಂಸೆ.

೧-೨. ಮಹಾಮತಿ, ಯಮುನೆಯ ದಡವನ್ನು ದಾಟಿದರೆ ಅಲ್ಲೇ ಮಲಯಾರ್ಜುನಕವೆಂಬ ತೀರ್ಥಕುಂಡವಿದೆ. ನಾನು ತುಂಬಿದ ಮಡಕೆ ಕುಡಿಕೆಗಳೊಡನೆ ಬಂಡಿಯನ್ನು (ಶಕಟವನ್ನು) ಪುಡಿಮಾಡಿದುದು ಅಲ್ಲಿಯೇ. ಅಲ್ಲಿಯ ಸ್ನಾನೋಪವಾಸಗಳಿಂದ ಮನುಷ್ಯನು ಅನಂತ ಫಲವನ್ನು ಅನುಭವಿಸುವನು.

\+ ಮುನೇ

ದ್ವಾದಶ್ಯಾಂ ಶುಕ್ಲಪಕ್ಷಸ್ಯ ಜ್ಯೇಷ್ಠಮಾಸೇ ವಸುಂಧರೇ ।
ತತ್ರ ಸ್ನಾನೇನ ದಾನೇನ ಮಹಾಪಾತಕನಾಶನಮ್ ॥ ೩ ॥

ಜ್ಯೇಷ್ಠಸ್ಯ ಶುಕ್ಲದ್ವಾದಶ್ಯಾಂ ಸ್ನಾತ್ವಾ ಸುನಿಯತೇಂದ್ರಿಯಃ ।
ಮಥುರಾಯಾಂ ಹರಿಂ ದೃಷ್ಟ್ವಾ ಪ್ರಾಪ್ನೋತಿ ಪರಮಾಂ ಗತಿಮ್ ॥ ೪ ॥

ಯಮುನಾಸಲಿಲೇ ಸ್ನಾತಃ ಶುಚಿರ್ಭೂತ್ವಾ ಜಿತೇಂದ್ರಿಯಃ ।
ಸಮಭ್ಯರ್ಚ್ಯಾಚ್ಯುತಂ ಸಮ್ಯಕ್ ಪ್ರಾಪ್ನೋತಿ ಪರಮಾಂ ಗತಿಮ್ ॥ ೫ ॥

ಅಪಿ ಚಾಸ್ಮತ್ಕುಲೇ ಜಾತಃ ಕಾಲಿಂದೀಸಲಿಲೇ ಪ್ಲುತಃ ।
ಅರ್ಚಯಿಷ್ಯತಿ ಗೋವಿಂದಂ ಮಥುರಾಯಾಮುಪೋಷಿತಃ ॥ ೬ ॥

ದ್ವಾದಶ್ಯಾಂ ಜ್ಯೇಷ್ಠಮಾಸೇ ತು ಸಮಭ್ಯರ್ಚ್ಯ ಜನಾರ್ದನಮ್ ।
ಧನ್ಯೋಽಸೌ ಪಿಂಡನಿರ್ವಾಪಂ ಯಮುನಾಯಾಂ ಕರಿಷ್ಯತಿ ॥ ೭ ॥

ಇತಿ ಗಾಯಂತಿ ಪಿತರಃ ಪರಲೋಕಗತಾಃ ಸದಾ ॥ ೮ ॥

---

೩. ವಸುಂಧರೇ, ಜ್ಯೇಷ್ಠಮಾಸದ ಶುಕ್ಲಪಕ್ಷ ದ್ವಾದಶಿಯದಿನ ಅಲ್ಲಿ ಸ್ನಾನವನ್ನೂ, ದಾನವನ್ನೂ ಮಾಡುವುದರಿಂದ ಮಹಾಪಾತಕಗಳೂ ನಾಶವಾಗುವುವು.

೪. ಜ್ಯೇಷ್ಠ ಶುದ್ಧ ದ್ವಾದಶಿಯಲ್ಲಿ ಜಿತೇಂದ್ರಿಯನಾದವನು ಅಲ್ಲಿ ಸ್ನಾನಮಾಡಿ, ಮಥುರೆಯಲ್ಲಿ ಶ್ರೀಹರಿಯನ್ನು ಸಂದರ್ಶಿಸುವುದರಿಂದ ಪರಮಗತಿಯನ್ನು ಪಡೆಯುವನು.

೫. ಜಿತೇಂದ್ರಿಯನ್ನಾಗಿದ್ದು ಯಮುನೆಯ ತೀರ್ಥದಲ್ಲಿ ಸ್ನಾನಮಾಡಿ, ಶುಚಿರ್ಭೂತನಾಗಿ ಅಚ್ಯುತನನ್ನು ಚೆನ್ನಾಗಿ ಪೂಜಿಸುವವನು ಪರಮಗತಿಯನ್ನು ಪಡೆಯುವನು.

೬. "ನಮ್ಮ ಕುಲದಲ್ಲಿ ಹುಟ್ಟಿದವನು ಮಥುರೆಯಲ್ಲಿ ಉಪವಾಸವಿದ್ದು ಯಮುನಾನದಿಯಲ್ಲಿ ನೀರಲ್ಲಿ ಸ್ನಾನಮಾಡಿ, ಗೋವಿಂದನನ್ನು ಪೂಜಿಸಿಯಾನೆ?

೭–೮. ಅಂತಹ ಧನ್ಯನು ಜ್ಯೇಷ್ಠಮಾಸದ ದ್ವಾದಶಿಯಲ್ಲಿ ಜನಾರ್ದನ ದೇವನನ್ನು ಚೆನ್ನಾಗಿ ಪೂಜಿಸಿ, ಯಮುನೆಯಲ್ಲಿ ಪಿಂಡಪ್ರದಾನ ಮಾಡಿಯಾನೇ? ಎಂದು ಪರಲೋಕದಲ್ಲಿರುವ ಪಿತೃಗಳು ಯಾವಾಗಲೂ ಹಾಡುತ್ತಿರುವರು.

ತತ್ರೈವ ತು ಮಹಾತೀರ್ಥೇ ವನೇ ಬಹುಲಸಂಜ್ಞಕೇ ।
ತತ್ರಸ್ನಾತೋ ನರೋ ದೇವಿ ರುದ್ರಲೋಕೇ ಮಹೀಯತೇ ॥ ೯ ॥

ದ್ವಾದಶ್ಯಾಂ ಚೈತ್ರಮಾಸೇ ತು ಶುಕ್ಲಪಕ್ಷೇ ವಸುಂಧರೇ ।
ತತ್ರ ಸ್ನಾತೋ ನರೋ ಯಾತಿ ಮಮ ಲೋಕಂ ನ ಸಂಶಯಃ ॥ ೧೦ ॥

ಅಸ್ತಿ ಭಾಂಡಹ್ರದಂ ನಾಮ ಪರಪಾರೇಷು ದುರ್ಲಭಮ್ ।
ದೃಶ್ಯಂತೇಽಹರಹಸ್ತತ್ರ ಆದಿತ್ಯಾಃ ಶುಭಕಾರಿಣಃ ।

ತತ್ರ ಚಾರ್ಕಸ್ಥಲೇ ಕುಂಡೇ ಸ್ನಾನಂ ಯಃ ಕುರುತೇ ನರಃ ।
ಸರ್ವಪಾಪವಿನಿರ್ಮುಕ್ತಃ ಸೂರ್ಯಲೋಕಂ ವ್ರಜೇನ್ನರಃ ॥ ೧೨ ॥

ತತ್ರಾಥ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೧೩ ॥

ಅರ್ಕಸ್ಥಲಸಮೀಪೇತು ಕೂಪಂ ತು ವಿಮಲೋದಕಂ ।
ಸಪ್ತಸಾಮುದ್ರಿಕಂ ನಾಮ ದೇವಾನಾಮಪಿ ದುರ್ಲಭಂ ॥ ೧೪ ॥

---

೯. ದೇವೀ, ಅಲ್ಲಿಯೇ ಬಹುಳವೆಂಬ ಹೆಸರಿನ ವನದಲ್ಲಿರುವ ಮಹಾ ತೀರ್ಥದಲ್ಲಿ ಸ್ನಾನಮಾಡಿದವನು ರುದ್ರಲೋಕದಲ್ಲಿ ವಾಸಿಸುವನು.

೧೦. ವಸುಂಧರೇ, ಚೈತ್ರಮಾಸದ ಶುಕ್ಲಪಕ್ಷದ್ವಾದಶಿಯಲ್ಲಿ ಆ ತೀರ್ಥದಲ್ಲಿ ಸ್ನಾನಮಾಡುವವನು ಸಂಶಯವಿಲ್ಲದೆ ನನ್ನ ಲೋಕವನ್ನು ಸೇರುವನು.

೧೧ ಯಮುನೆಯ ಆಚೆಯ ದಡದಲ್ಲಿ ದುರ್ಲಭವಾದ ಭಾಂಡಹ್ರದವೆಂಬ ತೀರ್ಥವೊಂದಿದೆ. ಅಲ್ಲಿ ಪ್ರತಿದಿನವೂ ಶುಭಕರರಾದ ಆದಿತ್ಯರು ಕಾಣಿಸುವರು.

೧೨-೧೩. ಸೂರ್ಯಸ್ಥಾನವಾದ ಆ ಕುಂಡದಲ್ಲಿ ಸ್ನಾನಮಾಡುವ ಮನುಷ್ಯನು ಪಾಪಗಳೆಲ್ಲವನ್ನೂ ಕಳೆದುಕೊಂಡು, ಸೂರ್ಯಲೋಕವನ್ನು ಸೇರುವನು. ಅಲ್ಲಿ ಪ್ರಾಣಬಿಡುವವನು ನನ್ನ ಲೋಕವನ್ನು ಸೇರುವನು.

೧೪. ಆ ಅರ್ಕಕ್ಷೇತ್ರದ ಹತ್ತಿರದಲ್ಲೇ ನಿರ್ಮಲವಾದ ನೀರುಳ್ಳ ಸಪ್ತಸಾಮುದ್ರಿಕವೆಂಬ ಹೆಸರಿನ ದೇವತೆಗಳಿಗೂ ದುರ್ಲಭವಾದ ಬಾವಿಯಿದೆ.

ತತ್ರ ಸ್ನಾನೇನ ವಸುಧೇ ಸ್ವಚ್ಛಂದಗಮನಾಲಯಃ ।
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೧೫ ॥

ತತ್ರ ವೀರಸ್ಥಲಂ ನಾಮ ಕ್ಷೇತ್ರಂ ಗುಹ್ಯಂ ಪರಂ ಮಮ ।
ಆಸನ್ನ ಸಲಿಲಂ ಚೈವ ಪದ್ಮೋತ್ಪಲವಿಭೂಷಿತಂ ॥ ೧೬ ॥

ಯಸ್ತತ್ರ ಕುರುತೇ ಸ್ನಾನಂ ಏಕರಾತ್ರೋಷಿತೋ ನರಃ ।
ಸ ಮತ್ಪ್ರಸಾದಾತ್ ಸುಶ್ರೋಣಿ ವೀರಲೋಕೇ ಮಹೀಯತೇ ॥
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೧೭ ॥

ಕುಶಸ್ಥಲಂ ಚ ತತ್ರೈವ ಪುಣ್ಯಂ ಪಾಪಹರಂ ಶುಭಂ ।
ತತ್ರ ಸ್ನಾತೋ ನರೋ ದೇವಿ ಬ್ರಹ್ಮಲೋಕೇ ಮಹೀಯತೇ ॥ ೧೮ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೧೯ ॥

---

೧೫. ಭೂದೇವೀ, ಅಲ್ಲಿ ಸ್ನಾನಮಾಡುವುದರಿಂದ ಮನುಷ್ಯನು ಸ್ವೇಚ್ಛೆಯಿಂದ ಯಾವೆಡೆಗೆಬೇಕಾದರೂ ಹೋಗುವವನಾಗುವನು. ಅಲ್ಲಿ ಮಡಿದರೆ ಅವನು ನನ್ನ ಲೋಕವನ್ನು ಸೇರುವನು.

೧೬. ಅಲ್ಲೇ ಹತ್ತಿರದಲ್ಲೇ ನೀರುಳ್ಳುದೂ, ತಾವರೆನೈದಿಲೆಗಳಿಂದೊಪ್ಪುವುದೂ ಆದ ವೀರಸ್ಥಳವೆಂಬ ರಹಸ್ಯವಾದ ಮತ್ತೊಂದು ನನ್ನ ಕ್ಷೇತ್ರವಿದೆ.

೧೭. ಸುಂದರಿ, ಅಲ್ಲಿ ಒಂದುರಾತ್ರಿ ಇದ್ದು ತೀರ್ಥದಲ್ಲಿ ಸ್ನಾನಮಾಡುವವನು ನನ್ನ ಅನುಗ್ರಹದಿಂದ ವೀರಲೋಕದಲ್ಲಿ ವಾಸಿಸುವನು ಆ ತೀರ್ಥದಲ್ಲಿ ಪ್ರಾಣಬಿಟ್ಟನಾದರೆ ನನ್ನ ಲೋಕವನ್ನು ಸೇರುವನು.

೧೮–೧೯. ಅಲ್ಲೇ ಪವಿತ್ರವೂ, ಪಾಪಹರವೂ, ಶುಭವೂ ಆದ ಕುಶಸ್ಥಳವೆಂಬ ಕ್ಷೇತ್ರವಿದೆ. ದೇವೀ, ಅಲ್ಲಿ ಸ್ನಾನಮಾಡುವ ಮನುಷ್ಯನು ಬ್ರಹ್ಮಲೋಕದಲ್ಲಿ ವಾಸಮಾಡುವನು. ಅಲ್ಲಿ ಮಡಿದರೆ ನನ್ನ ಲೋಕವನ್ನೇ ಸೇರುವನು.

ತತ್ರ ಪುಷ್ಪಸ್ಥಲಂ ನಾಮ ಶಿವಕ್ಷೇತ್ರಮನುತ್ತಮಂ ।
ತತ್ರ ಸ್ನಾನೇನ ಮನುಜಃ ಶಿವಲೋಕೇ ಮಹೀಯತೇ ॥ ೨೦ ॥

ಖ್ಯಾತಾ ಏತೇ ಪಂಚದೇಶಾ ಮಹಾಪಾಪ ವಿನಾಶನಾಃ ।
ತೇಷು ಸ್ನಾನೇಷು ವಸುಧೇ ಬ್ರಹ್ಮಣಾ ಸಹ ಮೋದತೇ ॥ ೨೧ ॥

ತತ್ರ ಗೋಪೀಶ್ವರೋ ನಾಮ ಮಹಾಪಾತಕನಾಶನಃ ।
ಕೃಷ್ಣಸ್ಯ ರಮಣಾರ್ಥಂ ಹಿ ಸಹಸ್ರಾಣಿ ಚ ಷೋಡಶ ॥ ೨೨ ॥

ಗೋಪ್ಯೋ ರೂಪಾಣಿ ಚಕ್ರೇ ಚ ತತ್ರ ಕ್ರೀಡನಕಂ ಹರಿಃ ॥ ೨೩ ॥

ಯದಾ ಬಾಲೇನ ಕೃಷ್ಣೇನ ಭಗ್ನಾರ್ಜುನಯುಗಂ ತಥಾ ।
ಶಕಟಂ ಚ ತದಾ ಭಿನ್ನಂ ಘಟಭಾಂಡಕುಟೀರಕಂ ॥ ೨೪ ॥

ತಾಭಿಸ್ತತ್ರೈವ ಗೋವಿಂದಂ ಕ್ರೀಡಂತಂ ಚ ಯದೃಚ್ಛಯಾ ।
ಪರಿಷ್ವಜ್ಯ ಹಿ ಧರ್ಮೇಣ ವ್ಯಾಜೇನ ಚ ಸುಗೋಪಿತಂ ॥ ೨೫ ॥

---

೨೦. ಅಲ್ಲಿ ಪುಷ್ಪಸ್ಥಳವೆಂಬ ಅತ್ಯುತ್ತಮವಾದ ಶಿವಕ್ಷೇತ್ರವಿದೆ. ಮನುಷ್ಯನು ಅಲ್ಲಿ ಸ್ನಾನಮಾಡುವುದರಿಂದ ಶಿವಲೋಕದಲ್ಲಿ ನೆಲಸುವನು.

೨೧. ಭೂದೇವೀ, ಈ ಐದು ಸ್ಥಳಗಳೂ ಪ್ರಸಿದ್ಧವಾದವುಗಳೂ, ಮಹಾಪಾಪಗಳನ್ನೂ ನಾಶಮಾಡುವುವುಗಳೂ ಆಗಿವೆ. ಅವುಗಳಲ್ಲಿ ಸ್ನಾನಮಾಡುವವನು ಬ್ರಹ್ಮನೊಡನೆ ಆನಂದಪಡುವನು.

೨೨–೨೩. ಅಲ್ಲಿರುವ ಗೋಪೀಶ್ವರವೆಂಬ ಹೆಸರಿನ ಕ್ಷೇತ್ರವು ಮಹಾಪಾತಕಗಳನ್ನೂ ನಾಶಮಾಡುವುದು. ಕೃಷ್ಣನ ಸಂತೋಷಕ್ಕಾಗಿ ಹದಿನಾರು ಸಾವಿರಜನ ಗೋಪಿಯರು ಅಲ್ಲಿ ರೂಪಗಳನ್ನು ಧರಿಸಿದರು.ಕೃಷ್ಣನು ಅಲ್ಲಿ ಆಟಗಳನ್ನು ಆಡಿದನು.

೨೪–೨೫ ಬಾಲನಾದ ಕೃಷ್ಣನು ಯಮಳಾರ್ಜುನಭಂಗವನ್ನೂ, ಮಡಕೆ ಕುಡಿಕೆಗಳಿಂದ ತುಂಬಿದ ಬಂಡಿಯ ರೂಪದಿಂದಿದ್ದ ಶಕಟಾಸುರನ ವಧೆಯನ್ನೂ ಮಾಡಿ, ಅಲ್ಲೇ ಆಡುತ್ತಿದ್ದಾಗ ಅವನನ್ನು ಗೋಪಿಯರು ಸರಿಯಾಗಿಯೇ ಆಲಿಂಗಿಸಿಕೊಂಡು, ಆಕಸ್ಮಾತ್ತಾಗಿ ಆಯಿತೆಂಬ ನೆಪದಿಂದ ಅದನ್ನು ಮರೆಸಿದರು.

ಮಾತಲಿಸ್ತತ್ರ ಚಾಗತ್ಯ ದೇವೈರುಕ್ತಂ ಯಥೋದಿತಂ |
ಗೋಪವೇಷಧರಂ ದೇವಮಭಿಷೇಕಂ ಚಕಾರ ಹ ॥ ೨೬ ॥

ಆನೀಯ ಸಪ್ತ ಕಲಶಾನ್ರತ್ನೌಷಧಿ ಪರಿಪ್ಲುತಾನ್ ।
ಗೋಪೀಮಂಡಲ ಪಾತೇನ ಸ್ನಾಪಿತೋ ಹೇಮಕುಂಡಲಃ ।
ಗೋಪ್ಯೋ ಗಾಯಂತಿ ನೃತ್ಯಂತಿ ಕೃಷ್ಣ ಕೃಷ್ಣ ಇತಿ ಬ್ರುವನ್. ॥ ೨೭ ॥

ತತ್ರ ಗೋಪೀಶ್ವರಂ ದೇವಂ ಮಾತಲಿಃ ಸ್ಥಾಪ್ಯ ಪೂಜಿತಂ |
ಕೂಪಂಚ ಸ್ಥಾಪಯಾ ಮಾಸ ಮಂಗಲ್ಯೈಃ ಕಲಶೈಃ ಶುಭೈಃ ॥ ೨೮ ॥

ಸಪ್ತಸಾಮುದ್ರಿಕಂ ನಾಮ ಕೂಪಂ ತು ವಿಮಲೋದಕಂ ।
ದೇವಸ್ಯಾಗ್ರೇ ತು ವಸುಧೇ ಗೋಪಾ ಯಸ್ಯ ಮಹಾತ್ಮನಃ ॥ ೨೯ ॥

---

೨೬. ಇಂದ್ರನ ಸಾರಥಿಯಾದ ಮಾತಲಿಯು ದೇವತೆಗಳು ಹೇಳಿದಂತೆ ಅಲ್ಲಿಗೆ ಬಂದು, ಗೋಪವೇಷಧರನಾಗಿದ್ದ ಕೃಷ್ಣನಿಗೆ ಅಭಿಷೇಕವನ್ನು ಮಾಡಿದನು.

೨೭. ಮಾತಲಿಯು, ರತ್ನೌಷಧಿಗಳಿಂದ ತುಂಬಿದ ಏಳು ಕಲಶಗಳನ್ನು ತಂದು, ಗೋಪಿಯರ ಗುಂಪಿನ ನಡುವೆ ಸುವರ್ಣಕುಂಡಲನಾದ ಕೃಷ್ಣನಿಗೆ ಅಭಿಷೇಕಮಾಡಿದನು. ಆಗ ಗೋಪಿಯರು, " ಕೃಷ್ಣಾ, ಕೃಷ್ಣಾ " ಎಂದು ಹೇಳುತ್ತ, ಹಾಡುತ್ತ ನರ್ತನಮಾಡಿದರು.

೨೮–೨೯. ಭೂಮೀ, ಮಾತಲಿಯು, ಅಲ್ಲಿ ತಾನು ಪೂಜಿಸಿದ ದೇವನಾದ ಗೋಪೀಶ್ವರನನ್ನು ನೆಲೆಗೊಳಿಸಿ, ಆ ದೇವನೆದುರಿಗೆ ಗೋಪರಿರುವೆಡೆಯಲ್ಲಿ ಮಂಗಲಕಲಶೋದಕಗಳಿಂದ ಸಪ್ತಸಾಮುದ್ರಿಕವೆಂಬ ಹೆಸರಿನ ಒಂದು ಬಾವಿಯನ್ನು ಏರ್ಪಡಿಸಿದನು.

ಪಿತರಶ್ಚಾಪಿ ನಂದಂತಿ ಪಾನೀಯಂ ಪಿಂಡಮೇವ ಚ ।
ಸಪ್ತಸಾಮುದ್ರಿಕೇ ಕೂಪೇ ಯಃ ಶ್ರಾದ್ಧಂ ಸಂಪ್ರದಾಸ್ಯತಿ ॥
ಪಿತರಸ್ತಾರಿತಾಸ್ತೇನ ಕುಲಾನಾಂ ಸಪ್ತಸಪ್ತತಿಃ ॥ ೩೦ ॥

ಸೋಮವಾರೇ ತ್ವಮಾಯಾಂ ವೈ ಪಿಂಡದಾನಂ ಕರೋತಿ ಯಃ ।
ಪಿತರಸ್ತಸ್ಯ ತೃಪ್ಯಂತಿ ಕೋಟಿವರ್ಷ ಶತಾನ್ಯಲಂ ॥ ೩೧ ॥

ಗೋವಿಂದಸ್ಯ ಚ ದೇವಸ್ಯ ತಥಾ ಗೋಪೀಶ್ವರಸ್ಯ ಚ ।
ಮಧ್ಯೇ ತು ಮರಣಂ ಯಸ್ಯ ಶಕ್ರಸ್ಯೈತಿ ಸಲೋಕತಾಮ್ ॥ ೩೨ ॥

ತಥಾ ಬಹುಲರುದ್ರಸ್ಯ ಗೋವಿಂದಸ್ಯೈವ ಮಧ್ಯತಃ ।
ತದ್ವದ್ಬ್ರಹ್ಮಾಣಮಾಶಾಸ್ಯ ಗೋಪೀಶಸ್ಯೈವ ಮಧ್ಯತಃ ॥ ೩೩ ॥

ಏತೇಷು ಸ್ನಾನದಾನೇನ ಪಿಂಡಪಾತೇನ ಭಾಮಿನಿ ।
ನರಸ್ತಾರಯತೇ ಪುಂಸಾಂ ದಶ ಪೂರ್ವಾನ್ ದಶಾಪರಾನ್ ॥ ೩೪ ॥

---

೩೦. ಆ ಸಪ್ತಸಾಮುದ್ರಿಕತೀರ್ಥದಲ್ಲಿ ಕೊಡುವ ನೀರನ್ನೂ, ಪಿಂಡವನ್ನೂ ಪಿತೃಗಳು ಮೆಚ್ಚುವರು. ಅಲ್ಲಿ ಶ್ರಾದ್ಧಮಾಡುವವನು ತನ್ನ ಪಿತೃಗಳನ್ನೂ, ಎಪ್ಪತ್ತೇಳುತಲೆಯವರನ್ನೂ ಉತ್ತಾರಣಗೊಳಿಸುವನು.

೩೧. ಸೋಮವಾರ ಕೂಡಿದ ಅಮಾವಾಸ್ಯೆಯದಿನ ಅಲ್ಲಿ ಪಿಂಡಪ್ರದಾನ ಮಾಡುವವನ ಪಿತೃಗಳು ನೂರುಕೋಟಿವರ್ಷಕಾಲ ಪೂರ್ಣತೃಪ್ತರಾಗಿರುವರು.

೩೨–೩೩. ದೇವನಾದ ಗೋವಿಂದನ ಮತ್ತು ಗೋಪೀಶ್ವರತೀರ್ಥದ ನಡುವೆ ಮೃತನಾಗುವವನು ಇಂದ್ರಲೋಕವನ್ನು ಪಡೆಯುವನು. ಬಹುಲರುದ್ರ ಗೋವಿಂದರ ಮಧ್ಯದಲ್ಲಿಯೂ, ಬ್ರಹ್ಮಗೋಪೀಶ್ವರರ ಮಧ್ಯದಲ್ಲಿಯೂ ಪ್ರಾಣ ಬಿಡುವವನು ಹಾಗೆಯೇ ಇಂದ್ರಲೋಕವನ್ನು ಪಡೆಯುವನು.

೩೪. ಸುಂದರೀ, ಇವುಗಳಲ್ಲಿ ಸ್ನಾನದಾನಗಳನ್ನೂ, ಪಿಂಡಪ್ರದಾನವನ್ನೂ ಮಾಡುವುದರಿಂದ ಮನುಷ್ಯನು ತನ್ನ ವಂಶದ ಹಿಂದಿನ ಮತ್ತು ಮುಂದಿನ ಹತ್ತು ತಲೆಯವರನ್ನು ಉತ್ತಾರಣಗೊಳಿಸುವನು.

ಏಷು ಸ್ನಾತೋ ನರೋ ದೇವಿ ದೇವೈಶ್ಚ ಸಹ ಮೋದತೇ |
ತತ್ರಾಥ ಮುಂಚತಿ ಪ್ರಾಣಾನ್ಮಮಲೋಕಂ ಸ ಗಚ್ಛತಿ || ೩೫ ||

ವಸುಪತ್ರಂ ಮಹಾತೀರ್ಥಂ ಪುಣ್ಯಂ ಪರಮಮುತ್ತಮಮ್ |
ಮಥುರಾದಕ್ಷಿಣೇ ಪಾರ್ಶ್ವೇ ಕ್ಷೇತ್ರಂ ಫಾಲ್ಗುನಕಂ ತಥಾಂ || ೩೬ ||

ತತ್ರ ಸ್ನಾತ್ವಾ ಚಪೀತ್ವಾಚ ಪರಲೋಕೇ ಮಹೀಯತೇ |
ತತ್ರ ಫಾಲ್ಗುನಕೇ ಚೈವ ತೀರ್ಥೇ ಪರಮದುರ್ಲಭೇ || ೩೭ ||

ವೃಷಭಾಂಜನಕಂ ನಾಮ ಕ್ಷೇತ್ರಂ ಮೇ ದುರ್ಲಭಂ ಮಹತ್ |
ತತ್ರಾಭಿಷೇಕಂ ಯಃ ಕುರ್ಯಾತ್ಸ ದೇವೈಃ ಸಹ ಮೋದತೇ || ೩೮ ||

ತತ್ರ ಯೋ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ || ೩೯ ||

ಅಸ್ತಿ ತಾಲವನಂ ನಾಮ ಧೇನುಕಾಸುರ ರಕ್ಷಿತಮ್ |
ಮಥುರಾಪಶ್ಚಿಮೇ ಭಾಗೇ ಅದೂರಾದರ್ಧಯೋಜನಮ್ || ೪೦ ||

---

೩೫. ಇವುಗಳಲ್ಲಿ ಸ್ನಾನಮಾಡುವವನು ದೇವತೆಗಳೊಡನೆ ಸಂತೋಷ ಪಡುವನು. ಅಲ್ಲಿ ಪ್ರಾಣಗಳನ್ನು ಬಿಡುವವನು ನನ್ನ ಲೋಕವನ್ನು ಸೇರುವನು.

೩೬–೩೭. ವಸ್ತುಪತ್ರವೆಂಬ ಮಹಾತೀರ್ಥವು ಪವಿತ್ರವೂ ಪರಮೋತ್ತಮವೂ ಆದುದು. ಅಲ್ಲದೆ ಮಥುರೆಯ ದಕ್ಷಿಣದಲ್ಲಿರುವ ಫಾಲ್ಗುನಕವೆಂಬ ತೀರ್ಥವು ಪರಮದುರ್ಲಭವಾದುದು. ಆ ತೀರ್ಥಗಳಲ್ಲಿ ಸ್ನಾನಪಾನಗಳನ್ನು ಮಾಡುವುದರಿಂದ ಮನುಷ್ಯನು ನನ್ನ ಲೋಕದಲ್ಲಿ ವಾಸಿಸುವನಾಗುವನು.

೩೮–೩೯. ವೃಷಭಾಂಜನವೆಂಬ ನನ್ನ ಕ್ಷೇತ್ರವು ಮಹಾದುರ್ಲಭವಾದುದು. ಅಲ್ಲಿ ಸ್ನಾನಮಾಡುವವನು ದೇವತೆಗಳೊಡನೆ ಸಂತೋಷಪಡುವನಾಗುವನು. ಅಲ್ಲಿ ಪ್ರಾಣಗಳನ್ನು ಬಿಡುವವನು ನನ್ನ ಲೋಕವನ್ನು ಸೇರುವನು.

೪೦. ಮಥುರೆಗೆ ಪಶ್ಚಿಮದಲ್ಲಿ ಸುಮಾರು ಅರ್ಧಯೋಜನದೂರದಲ್ಲಿ ಧೇನುಕಾಸುರನು ರಕ್ಷಿಸುತ್ತಿದ್ದ ತಾಳಿಯುವನವಿದೆ.

ತತ್ರ ಕುಂಡಂ ಸ್ವಚ್ಛಜಲಂ ನೀಲೋತ್ಪಲವಿಭೂಷಿತಮ್ ।
ತತ್ರ ಸ್ನಾನೇನ ದಾನೇನ ವಾಂಛಿತಂ ಫಲಮಾಪ್ನುಯಾತ್ ॥ ೪೧ ॥

ಅಸ್ತಿ ಸಂಪೀಠಕಂ ನಾಮ ಅಸ್ಮಿನ್‌ಕ್ಷೇತ್ರೇ ಪರಂ ಮಮ ।
ತತ್ರ ಕುಂಡಂ ವಿಶಾಲಾಕ್ಷಿ ಪ್ರಸನ್ನಸಲಿಲಂ ಶುಭಮ್ ॥ ೪೨ ॥

ತತ್ರ ಸ್ನಾನಂ ಚ ಯೇಕುರ್ಯುರೇಕರಾತ್ರೋಷಿತಾ ನರಾಃ ।
ಅಗ್ನಿಷ್ಟೋಮಫಲಂಚೈವ ಲಭಂತೇ ನಾತ್ರ ಸಂಶಯಃ ॥
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೪೩ ॥

ದೇವಕೀಗರ್ಭಸಂಭೂತೋ ವಸುದೇವಗೃಹೇ ಶುಭೇ ।
ತತ್ರ ಪುಣ್ಯೇನ ಹಿ ಮಯಾ ರವಿರಾರಾಧಿತಃ ಶುಭಃ ॥ ೪೪ ॥

---

೪೧. ಅಲ್ಲಿರುವ ಕುಂಡವು ನಿರ್ಮಲವಾದ ನೀರುಳ್ಳುದಾಗಿ ಕನ್ನೈದಿಲೆಗಳಿಂದ ಒಪ್ಪುತ್ತಿದೆ. ಅಲ್ಲಿ ಸ್ನಾನದಾನಗಳನ್ನು ಮಾಡುವವರು ಇಷ್ಟಾರ್ಥವನ್ನು ಪಡೆಯುವರು.

೪೨. ವಿಶಾಲಾಕ್ಷೀ, ಆ ಕ್ಷೇತ್ರದಲ್ಲಿ ಸಂಪೀಠಕವೆಂಬ ನಿರ್ಮಲೋದಕವುಳ್ಳ ಶುಭಕುಂಡವಿದೆ.

೪೩. ಅಲ್ಲಿ ಒಂದುರಾತ್ರಿ ಇದ್ದು, ಸ್ನಾನಮಾಡುವವರು ಅಗ್ನಿಷ್ಟೋಮ ಫಲವನ್ನು ಪಡೆಯುವುದರಲ್ಲಿ ಸಂಶಯವಿಲ್ಲ. ಅಲ್ಲಿ ಪ್ರಾಣಗಳನ್ನು ಬಿಡುವವನು ನನ್ನ ಲೋಕವನ್ನು ಸೇರುವನು.

೪೪—೪೫. ವಸುದೇವನ ಶುಭಗೃಹದಲ್ಲಿ ದೇವಕಿಯ ಗರ್ಭದಲ್ಲುದಿಸಿದ ನಾನು, ಅಲ್ಲಿ ಪರಿಶುದ್ಧನಾಗಿ ಶುಭಕರನಾದ ಸೂರ್ಯನನ್ನು ಆರಾಧಿಸಿದೆನು.

ಲಬ್ಧಃ ಪ್ರಾಜ್ಞೋಮಯಾ ಪುತ್ರೋ ರೂಪವಾಂಶ್ಚ ಗುಣಾನ್ವಿತಃ ।
ತತ್ರೈವಂ ತು ತತೋ ದೃಷ್ಟಃ ಪದ್ಮಹಸ್ತೋದಿವಾಕರಃ || ೪೫ ||

ಮಾಸಿ ಭಾದ್ರಪದೇ ದೇವಿ ತಿಗ್ಮತೇಜಾ ವಿಭಾವಸುಃ ।
ಸಪ್ತಮ್ಯಾಂ ಕೃಷ್ಣಪಕ್ಷಸ್ಯ ರವಿಸ್ತಿಷ್ಠತಿ ಸರ್ವದಾ || ೪೬ ||

ತಸ್ಮಿನ್ನಹನಿ ಯಃ ಸ್ನಾನಂ ಕುರ್ಯಾತ್ಕುಂಡೇ ಸಮಾಃ ಹಿತ।
ನ ತಸ್ಯ ದುರ್ಲಭಂ ಲೋಕೇ ಸರ್ವದಾತಾ ದಿವಾಕರಃ || ೪೭ ||

ಆದಿತ್ಯೇಹನಿ ಸಂಪ್ರಾಪ್ತೇ ಸಪ್ತಮ್ಯಾಂ ತು ವಸುಂಧರೇ ।
ನರೋ ವಾಪ್ಯಥವಾ ನಾರೀ ಪ್ರಾಪ್ನೋತ್ಯವಿಕಲಂ ಫಲಂ || ೪೮ ||

ತತ್ರೈವ ತು ತಪಸ್ತಪ್ತಂ ರಾಜ್ಞಾ ಶಂತನುನಾ ಪುರಾ ।
ಆದಿತ್ಯಂತು ಪುರಃ ಸ್ಥಾಪ್ಯ ಪಾಪ್ತೋ ಭೀಷ್ಮೋ ಮಹಾಬಲಃ || ೪೯ ||

ಪದ್ಮಹಸ್ತನಾದ ಆ ಸೂರ್ಯನನ್ನು ಅಲ್ಲೇ ಸಂದರ್ಶಿಸಿದೆನು. ಬಳಿಕ ರೂಪವಂತನೂ, ಗುಣವಂತನೂ, ಪ್ರಾಜ್ಞನೂ ಆದ ಪುತ್ರನ್ನು ಪಡೆದೆನು.

೪೬. ದೇವೀ, ಭಾದ್ರಪದಮಾಸದ ಕೃಷ್ಣಪಕ್ಷದ ಸಪ್ತಮಿಯ ದಿನ ಉಗ್ರತೇಜನಾದ ಸೂರ್ಯನು ಅಲ್ಲಿ ಯಾವಾಗಲೂ ಸನ್ನಿಹಿತನಾಗಿರುವನು.

೪೭. ಆದಿನ ಆ ಕುಂಡದಲ್ಲಿ ಸಮಾಹಿತನಾಗಿ ಸ್ನಾನಮಾಡುವವನಿಗೆ ಲೋಕದಲ್ಲಿ ದುರ್ಲಭವಾದುದು ಯಾವುದೂ ಇಲ್ಲ. ಸೂರ್ಯನು ಸರ್ವವನ್ನೂ ಕೊಡುವನು.

೪೮. ವಸುಂಧರೇ, ಮೇಲೆಹೇಳಿದ ಸಪ್ತಮಿಯ ದಿನ ಭಾನುವಾರವೂ ಸೇರಿದ್ದರೆ, ಆದಿನ ಅಲ್ಲಿ ಸ್ನಾನಮಾಡುವ ಪುರುಷನಾಗಲಿ, ಸ್ತ್ರೀಯಾಗಲಿ, ಪೂರ್ಣಫಲವನ್ನು ಪಡೆಯುವರು.

೪೯–೫೦. ಪೂರ್ವದಲ್ಲಿ ಶಂತನು ಮಹಾರಾಜನು ಅಲ್ಲೇ ಸೂರ್ಯನನ್ನು ಮುಂದಿಟ್ಟುಕೊಂಡು ತಪಸ್ಸನ್ನು ಮಾಡಿದನು. ಮಹಾ ಬಲಶಾಲಿಯಾದ

ಶಂತನುಃ ಪ್ರಾಪ್ಯ ತಂ ಪುತ್ರಂ ಗತೋಽಸೌ ಹಸ್ತಿನಾಪುರಂ ।
ತತ್ರ ಸ್ನಾನೇನ ದಾನೇನ ವಾಂಛಿತಂ ಫಲಮಾಪ್ನುಯಾತ್ ॥ ೫೦ ॥

ಇತಿ ಶ್ರೀವರಾಹಪುರಾಣೇ ಮಥುರಾಮಾಹಾತ್ಮ್ಯೇ ಮಲಯಾರ್ಜುನ ತೀರ್ಥಸ್ನಾನಾದಿಪ್ರಶಂಸಾನಾಮ ಸಪ್ತಪಂಚಾಶದಧಿಕ ಶತತಮೋಽಧ್ಯಾಯಃ

ಭೀಷ್ಮನೆಂಬ ಪುತ್ರನನ್ನು ಅಲ್ಲೇ ಪಡೆದು, ಆ ಶಂತನುವು ಬಳಿಕ ಹಸ್ತಿನಾಪುರಕ್ಕೆ ಹೊರಟು ಹೋದನು. ಅಲ್ಲಿ ಸ್ನಾನದಾನಗಳನ್ನು ಮಾಡುವವರು ಬೇಕಾದ ಫಲವನ್ನು ಪಡೆಯುವರು.

ಅಧ್ಯಾಯದ ಸಾರಾಂಶ—

ಶ್ರೀವರಾಹ ದೇವನು ಭೂದೇವಿಗೆ ಮಥುರಾಮಂಡಲದಲ್ಲಿರುವ ಮಲಯಾರ್ಜುನ, ಭಾಂಡಹ್ರದ, ವೀರಸ್ಥಳ ಕುಶಸ್ಥಲ, ಪುಷ್ಪಸ್ಥಳ, ಸಪ್ತಸಾಮುದ್ರಕ, ಗೋಪೀಶ್ವರ, ವಸುಪತ್ರ, ಫಾಲ್ಗುನಕ, ವೃಷಭಾಂಜನ, ಕಾಲವನ, ಸಂಪೀಠಕ, ಎಂಬ ಹೆಸರಿನ ತೀರ್ಥಕ್ಷೇತ್ರಗಳ ಪ್ರಾಶಸ್ತ್ಯವನ್ನು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತೇಳನೆಯ ಅಧ್ಯಾಯ.

॥ ಶ್ರೀಃ ॥

ಅಷ್ಟಪಂಚಾಶದಧಿಕಶತತಮೋಽಧ್ಯಾಯಃ
ಅಥ ಮಧುರಾತೀರ್ಥಪ್ರಾದುರ್ಭಾವಃ

॥ ಶ್ರೀವರಾಹ ಉವಾಚ ॥

ವಿಂಶತಿರ್ಯೋಜನಾನಾಂ ತು ಮಾಥುರಂ ಮಮ ಮಂಡಲಂ ।
ಯತ್ರ ತತ್ರ ನರಃ ಸ್ನಾತೋ ಮುಚ್ಯತೇ ಸರ್ವಕಿಲ್ಬಿಷೈಃ ॥ ೧ ॥

ವರ್ಷಾಕಾಲೇ ತು ಸ್ಥಾತವ್ಯಂ ಯಚ್ಚ ಸ್ನಾನಂತು ಹರ್ಷದಂ ।
ಪುಣ್ಯಾತ್ಪುಣ್ಯತರಂ ಚೈವ ಮಾಥುರೇ ಮಮ ಮಂಡಲೇ ॥ ೨ ॥

ಸಪ್ತದ್ವೀಪೇಷು ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ಮಥುರಾಯಾಂ ಗಮಿಷ್ಯಂತಿ ಪ್ರಸುಪ್ತೇ ತು ಸದಾಮಯಿ ॥ ೩ ॥

ನೂರೈವತ್ತೆಂಟನೆಯ ಅಧ್ಯಾಯ
ಮಧುರಾತೀರ್ಥಪ್ರಾದುರ್ಭಾವ.

೧. ಶ್ರೀವರಾಹ- ಭೂಮೀ, ನನ್ನ ಮಧುರಾಮಂಡಲವು ಇಪ್ಪತ್ತು ಯೋಜನವಿಸ್ತಾರವುಳ್ಳದು. ಆ ಮಂಡಲದಲ್ಲಿರುವ ಯಾವ ತೀರ್ಥಗಳಲ್ಲಿ ಸ್ನಾನಮಾಡಿದರೂ ಮನುಷ್ಯನು ಸರ್ವಪಾಪಗಳನ್ನೂ ಕಳೆದುಕೊಳ್ಳುವನು.

೨. ನನ್ನ ಮಧುರಾಮಂಡಲದಲ್ಲಿ ಮಳೆಗಾಲದಲ್ಲಿ ಇರಬೇಕು. ಆಗ ಅಲ್ಲಿಯ ಸ್ನಾನವು ಹರ್ಷಕರವಾಗಿರುವುದಲ್ಲದೆ ಅತಿ ಪುಣ್ಯಪ್ರದವೂ ಆಗುವುದು.

೩. ನಾನು * ಶಯನದ್ವಾದಶಿಯಲ್ಲಿ ಮಲಗಿದ ಬಳಿಕ ಸಪ್ತದ್ವೀಪಗಳಲ್ಲಿರುವ ತೀರ್ಥಗಳೂ, ಪವಿತ್ರ ದೇವಾಲಯಗಳೂ ಮಧುರೆಗೆ ಬರುವುವು

---

* ಶಯನದ್ವಾದಶಿ = ಆಷಾಢ ಶುಕ್ಲ ದ್ವಾದಶಿ.

ಸುಪ್ತೋತ್ಥಿತಂ ತು ದೃಷ್ಟ್ವಾ ಮಾಂ ಮಥುರಾಯಾಂ ವಸುಂಧರೇ ।
ತೇ ನರಾ ಮಾಂ ಪ್ರಪಶ್ಯಂತಿ ಸರ್ವಕಾಲಂ ನ ಸಂಶಯಃ ॥ ೪ ॥

ಸುಪ್ತೋತ್ಥಿತಂ ತು ವಸುಧೇ ದೃಷ್ಟ್ವಾ ಮೇ ಮುಖಪಂಕಜಂ ।
ಸಪ್ತಜನ್ಮಕೃತಂ ಪಾಪಂ ತತ್‌ಕ್ಷಣಾದೇವ ಮುಂಚತಿ ॥ ೫ ॥

ಮಥುರಾವಾಸಿನೋ ಲೋಕಾಃ ಸರ್ವೇ ತೇ ಮುಕ್ತಿಭಾಜನಾಃ ।
ಮಥುರಾಂ ಸಮನುಪ್ರಾಪ್ಯ ದೃಷ್ಟ್ವಾ ದೇವಂತು ಕೇಶವಂ ॥
ಸ್ನಾತ್ವಾ ಪುನಸ್ತು ಕಾಲಿಂದ್ಯಾಂ ಮಮ ಲೋಕೇ ಮಹೀಯತೇ ॥ ೬ ॥

ಸ ತತ್ಫಲಮವಾಪ್ನೋತಿ ರಾಜಸೂಯಾಶ್ವಮೇಧಯೋಃ ।
ಪ್ರದಕ್ಷಿಣೀಕೃತೋ ಯೇನ ಮಥುರಾಯಾಂ ತು ಕೇಶವಃ ॥ ೭ ॥

ಪ್ರದಕ್ಷಿಣೀಕೃತಾ ತೇನ ಸಪ್ತದ್ವೀಪಾ ವಸುಂಧರಾ ॥ ೮ ॥

---

೪. ವಸುಂಧರೇ, ಮಲಗಿದ್ದು, + ಉತ್ಥಾನದ್ವಾದಶಿಯದಿನ ಏಳುವ ನನ್ನನ್ನು ಮಥುರೆಯಲ್ಲಿ ಸಂದರ್ಶಿಸುವವರು ಸರ್ವದಾ ನನ್ನನ್ನೇ ಸೇರಿರುವವರಾಗುವುದರಲ್ಲಿ ಸಂಶಯವಿಲ್ಲ.

೫. ಭೂದೇವೀ, ಮಲಗಿ ಎದ್ದ ನನ್ನ ಮುಖಕಮಲಸಂದರ್ಶನದಿಂದ ಒಡನೆಯೇ ಸಪ್ತಜನ್ಮಗಳಲ್ಲಿ ಮಾಡಿದ್ದ ಪಾಪವೂ ಬಿಟ್ಟುಹೋಗುವುದು.

೬. ಮಥುರೆಯಲ್ಲಿ ವಾಸಮಾಡುವ ಜನರೆಲ್ಲರೂ ಮುಕ್ತಿಗೆ ಪಾತ್ರರಾಗ ವರು. ಮಥುರೆಗೆ ಹೋಗಿ ಯಮುನಾನದಿಯಲ್ಲಿ ಸ್ನಾನಮಾಡಿ, ಕೇಶವದೇವ ನನ್ನು ಸಂದರ್ಶಿಸುವವನು ನನ್ನ ಲೋಕದಲ್ಲಿ ನೆಲಸುವನು.

೭-೮. ಮಥುರೆಯಲ್ಲಿ ಕೇಶವನಾದ ನನ್ನನ್ನು ಪ್ರದಕ್ಷಿಣಮಾಡುವುದರಿಂದ ಮನುಷ್ಯನು ಸಪ್ತದ್ವೀಪಗಳಿಂದ ಕೂಡಿದ ಭೂದೇವಿಯಾದ ನಿನ್ನನ್ನು ಪ್ರದಕ್ಷಿಣ ಮಾಡಿದಂತಾಗುವುದು.

+ ಉತ್ಥಾನ ದ್ವಾದಶಿ = ಕಾರ್ತಿಕ ಶುಕ್ಲ ದ್ವಾದಶಿ.

ಘೃತಪೂರ್ಣೇನ ಪಾತ್ರೇಣ ಸಮಗ್ರೇಣ ಚ ವಾಸಸಾ ।
ಕೇಶವಸ್ಯಾಗ್ರತೋ ದತ್ವಾ ದೀಪಕಂ ತು ವಸುಂಧರೇ ॥ ೯ ॥

ಪಂಚಯೋಜನವಿಸ್ತಾರಮಾಯಾಮಂ ಪಂಚವಿಸ್ತರಂ ।
ದೀಪಮಾಲಾ ಸಮಾಕೀರ್ಣಂ ವಿಮಾನಂ ಲಭತೇ ನರಃ ॥ ೧೦ ॥

ಸರ್ವಕಾಮಸಮೃದ್ಧಂ ತದಪ್ಸರೋಗಣಸೇವಿತಂ ।
ರಮ್ಯಮಾಲಾಸಮಾಕೀರ್ಣಂ ಭೋಗಾಢ್ಯಂ ಸರ್ವಕಾಮಿಕಂ ॥ ೧೧ ॥

ಸಮಾರೋಹತಿ ವೈ ನಿತ್ಯಂ ಪ್ರಭಾಮಂಡಲಮಂಡಿತಂ ।
ಯೇ ದೇವಾ ಯೇ ಚ ಗಂಧರ್ವಾಃ ಸಿದ್ಧಾಶ್ಚಾರಣಪನ್ನಗಾಃ ॥ ೧೨ ॥

ತಂ ಸ್ಪೃಹಂತಿ ಸದಾ ದೇವಿ ಪುಣ್ಯಮಸ್ತಿ ಕೃತಂ ಭುವಿ ॥ ೧೩ ॥

ಯದಿ ಕಾಲಾಂತರೇ ಪುಣ್ಯಂ ಹೀಯತೇಽಸ್ಯ ಪುರಾಕೃತಂ ।
ಸತಾಂ ಪುಣ್ಯಗೃಹೇ ದೇವಿ ಜಾಯತೇ ಮಾನವೋ ಹಿ ಸಃ ॥ ೧೪ ॥

೯–೧೦. ವಸುಂಧರೇ ತುಪ್ಪದಿಂದ ತುಂಬಿದ ದೀಪಪಾತ್ರೆ (ಹಣತೆ)ಯಲ್ಲಿ ಸರಿಯಾದ ದೊಡ್ಡ ಬತ್ತಿಯನ್ನು ಹಾಕಿ, ಕೇಶವನೆದುರಿಗೆ ದೀಪವನ್ನಿರಿಸುವು ದರಿಂದ ಮನುಷ್ಯನು ದೇವನಾಗಿ, ಐದುಯೋಜನ ಉದ್ದವೂ, ಐದುಯೋಜನ ಅಗಲವೂ ಆದ ದೀಪಮಾಲೆಗಳಿಂದ ಬೆಳಗುವ ವಿಮಾನವನ್ನು ಪಡೆಯುವನು.

೧೧–೧೩. ಅವನೇರುವ ಸರ್ವಕಾಮಸಮೃದ್ಧಿಯುಳ್ಳದೂ, ಅಪ್ಸರಸರ ಗುಂಪಿನಿಂದ ಸೇವಿತವೂ, ಮನೋಹರವಾದ ಮಾಲೆಗಳಿಂದೊಪ್ಪುವುದೂ, ಸುಖಪೂರ್ಣವೂ, ಸರ್ವೇಷ್ಟಗಳನ್ನೂ ಕೊಡುವುದೂ, ಸದಾ ಕಾಂತಿಮಂಡಲದಿಂದ ಲಂಕೃತವೂ ಆದ ಆ ವಿಮಾನವನ್ನು ದೇವತೆಗಳೂ, ಗಂಧರ್ವರೂ, ಸಿದ್ಧಚಾರಣರೂ ಪನ್ನಗರೂ ಯಾವಾಗಲೂ ಬಯಸುತ್ತಿರುವರು.

೧೪. ದೇವೀ, ಕಾಲಾಂತರದಲ್ಲಿ ಅವನು ಮಾಡಿದ್ದ ಪುಣ್ಯವು ಮುಗಿದು ಹೋದರೆ ಭೂಮಿಯಲ್ಲಿ ಸತ್ಪುರುಷರ ಪವಿತ್ರಗೃಹದಲ್ಲಿ ಮತ್ತೆ ಮನುಷ್ಯನಾಗಿ ಜನಿಸುವನು.

|| ಧರಣ್ಯುವಾಚ ||

ಕ್ಷೇತ್ರಂ ಹಿ ರಕ್ಷತೇ ದೇವ ಕಸ್ತ್ವಿದಂ ಪಾಪನಾಶನಂ ।
ಪಶುಭೂತಪಿಶಾಚೈಶ್ಚ ರಕ್ಷೋಭೂತ ವಿನಾಯಕೈಃ ।
ಏವಮಾದಿಭಿರಾಕೃಷ್ಟಂ ತತ್ಕ್ಷೇತ್ರಂ ಫಲದಂ ಭವೇತ್ || ೧೫ ||

|| ಶ್ರೀವರಾಹ ಉವಾಚ ||

ಮತ್ಕ್ಷೇತ್ರಂ ತೇ ನ ಪಶ್ಯಂತಿ ಮತ್ಪ್ರಭಾವಾತ್ಕದಾಚನ ।
ನವಿಕುರ್ವಂತಿ ತೇ ದೃಷ್ಟ್ವಾ ಮತ್ಪರಾಣಾಂ ಹಿ ದೇಹಿನಾಂ || ೧೬ ||

ರಕ್ಷಾರ್ಥಂ ಹಿ ಮಯಾ ದತ್ತಾ ದಿಕ್ಪಾಲಾಸ್ತು ವರಾನನೇ ।
ಲೋಕಪಾಲಾಸ್ತು ಚತ್ವಾರಸ್ತೀರ್ಥಂ ರಕ್ಷಂತಿ ಯೇ ಸದಾ || ೧೭ ||

ಪೂರ್ವಾಂ ರಕ್ಷತಿ ಇಂದ್ರಸ್ತು ಯಮೋ ರಕ್ಷತಿ ದಕ್ಷಿಣಾಂ ।
ಪಶ್ಚಿಮಾಂ ರಕ್ಷತೇ ನಿತ್ಯಂ ವರುಣಃ ಪಾಶಭೃತ್ಸ್ವಯಂ || ೧೮ ||

---

೧೫. ಭೂಮಿ—ದೇವಾ, ಪಾಪನಾಶಕವಾದ ಆ ಮಧುರಾಕ್ಷೇತ್ರವನ್ನು ರಕ್ಷಿಸುವವರಾರು ? ಫಲದಾಯಕವಾದ ಆ ಕ್ಷೇತ್ರವನ್ನು ಪಶುಭೂತಪಿಶಾಚಗಳೂ ರಾಕ್ಷಸಭೂತವಿನಾಯಕರೇ ಮೊದಲಾದವರೂ ಆಕ್ರಮಿಸಿರಬಹುದು.

೧೬. ಶ್ರೀವರಾಹ—ದೇವೀ, ನನ್ನ ಪ್ರಭಾವದಿಂದ ಆ ಭೂತಪಿಶಾಚಗಳು ಎಂದಿಗೂ ನನ್ನ ಕ್ಷೇತ್ರವನ್ನು ನೋಡುವುದೂ ಇಲ್ಲ. ಅಲ್ಲದೆ ಅಲ್ಲಿಗೆ ಬರುವ, ನನ್ನಲ್ಲಿ ಆಸಕ್ತರಾದ ಮನುಷ್ಯರನ್ನು ನೋಡಿದರೆ ಅವು ತೊಂದರೆಪಡಿಸುವುದೂ ಇಲ್ಲ.

೧೭. ವರಮುಖೀ, ಅಲ್ಲದೆ ನಾನು ರಕ್ಷಣೆಗಾಗಿ ನಿಯಮಿಸಿರುವ ನಾಲ್ವರು ಲೋಕಪಾಲರು ಯಾವಾಗಲೂ ತೀರ್ಥವನ್ನು ರಕ್ಷಿಸುವರು.

೧೮-೧೯. ಪೂರ್ವದಿಕ್ಕಿನಲ್ಲಿ ಇಂದ್ರನೂ, ದಕ್ಷಿಣದಿಕ್ಕಿನಲ್ಲಿ ಯಮನೂ, ಪಶ್ಚಿಮದಿಕ್ಕಿನಲ್ಲಿ ಪಾಶಧಾರಿಯಾದ ವರುಣನೂ, ಉತ್ತರದಲ್ಲಿ ಮಹಾಬಲ

ಉತ್ತರಾಂ ವೈ ಕುಬೇರಸ್ತು ಮಹಾಬಲಪರಾಕ್ರಮಃ ।
ಮಧ್ಯಂತು ರಕ್ಷತೇ ನಿತ್ಯಂ ಶಿವೋ ದೇವ ಉಮಾಪತಿಃ ॥ ೧೯ ॥

ಮಥುರಾಯಾಂ ಗೃಹಂ ಯಸ್ತು ಪ್ರಾಸಾದಂ ಕುರುತೇ ನರಃ ।
ಚತುರ್ಭುಜಸ್ತು ವಿಜ್ಞೇಯೋ ಜೀವನ್ಮುಕ್ತೋ ನ ಸಂಶಯಃ ॥ ೨೦ ॥

ಮಥುರಾಯಾ ಮಹಾಭಾಗೇ ಕುಂಡೇ ಚ ವಿಮಲೋದಕೇ ।
ಗಂಭೀರೇ ಸರ್ವದಾ ದೇವಿ ತಿಷ್ಠತೇಚ ಚತುರ್ಭುಜಃ ॥ ೨೧ ॥

ತತ್ರ ಮುಂಚೇತ ಯಃ ಪ್ರಾಣಾನ್ ಸ್ನಾನಂ ಕೃತ್ವಾ ವಸುಂಧರೇ ।
ವೈಷ್ಣವಂ ಲೋಕಮಾಸಾದ್ಯ ಕ್ರೀಡತೇ ಸ ಸುಖಾದಿವ ॥ ೨೨ ॥

ತತ್ರೈವ ತು ಸದಾಶ್ಚರ್ಯಂ ಕಥ್ಯಮಾನಂ ಮಯಾಶೃಣು ।
ಯದುಚ್ಯತೇ ವೈ ಸುಶ್ರೋಣಿ ಕುಂಡೇ ತು ವಿಮಲೋದಕೇ ॥ ೨೩ ॥

ಪರಾಕ್ರಮಗಳುಳ್ಳ ಕುಬೇರನೂ ಸದಾ ಕಾಯುವರು. ಮಧ್ಯಭಾಗವನ್ನು ಪಾರ್ವತೀಪತಿಯಾದ ಶಿವನು ಯಾವಾಗಲೂ ರಕ್ಷಿಸುವನು.

೨೦. ಮಥುರೆಯಲ್ಲಿ ಸಾಮಾನ್ಯವಾದ ಮನೆಯನ್ನಾಗಲಿ, ಉಪ್ಪರಿಗೆಯ ಮನೆಯನ್ನಾಗಲಿ ಕಟ್ಟಿಕೊಳ್ಳುವವನನ್ನು ನಿಜವಾಗಿಯೂ ಜೀವನ್ಮುಕ್ತನಾದ ಚತುರ್ಭುಜನೆಂದರಿಯಬೇಕು.

೨೧. ಮಹಾಭಾಗ್ಯೇ, ಮಥುರೆಯ ನಿರ್ಮಲೋದಕದ ಗಂಭೀರವಾದ ಕುಂಡದಲ್ಲಿ ಯಾವಾಗಲೂ ಚತುರ್ಭುಜನಿರುವನು.

೨೨. ವಸುಂಧರೇ, ಅಲ್ಲಿ ಸ್ನಾನಮಾಡಿ, ಪ್ರಾಣಬಿಡುವವನು ವಿಷ್ಣುವಿನ ಲೋಕವನ್ನು ಸೇರಿ, ಅಲ್ಲಿ ಸುಖದಿಂದ ವಿಹರಿಸುವನು.

೨೩–೨೪. ಸುಂದರೀ, ನಾನು ಹೇಳುವ ಅಲ್ಲಿನ ಆಶ್ಚರ್ಯವನ್ನು ಕೇಳು. ವಿಮಲೋದಕ ಕುಂಡದಲ್ಲಿ, ನನ್ನ ತೇಜಸ್ಸಿನಿಂದ ನೀರು ಹೇಮಂತ

ಹೇಮಂತೇ ತು ಭವೇಚ್ಚೋಷ್ಣಂ ಶೀತಲಂ ಗ್ರೀಷ್ಮಕೇ ಭವೇತ್ |
ತೇಜಸಾ ಮಮ ಸುಶ್ರೋಣಿ ತುಷಾರಸದೃಶೋಪಮಂ || ೨೪ ||

ನ ವರ್ಧತೇ ಚ ವರ್ಷಾಸು ಗ್ರೀಷ್ಮೇ ಚಾಪಿ ನ ಹೀಯತೇ |
ಏತಚ್ಚ ಮಹದಾಶ್ಚರ್ಯಂ ತಸ್ಮಿನ್ ಕುಂಡೇ ಪರಂ ಮಮ || ೨೫ ||

ಪದೇಪದೇ ತೀರ್ಥಫಲಂ ಮಥುರಾಯಾಂ ವಸುಂಧರೇ |
ತತ್ರ ತತ್ರ ನರಃ ಸ್ನಾತೋ ಮುಚ್ಯತೇ ಸರ್ವಪಾತಕೈಃ || ೨೬ ||

ಸರ್ವಾಸು ಸ್ಥೂಲತೀರ್ಥೇಷು ಸ್ನಾತವ್ಯಂತು ಪ್ರಯತ್ನತಃ |
ಕೂಪೇ ಹ್ರದೇ ದೇವಖಾತೇ ಗರ್ತೇಷು ಚ ನದೀಷು ಚ || ೨೭ ||

ಪ್ರವಾಹೇಷು ಚ ದಿವ್ಯೇಷು ನದೀನಾಂ ಸಂಗಮೇಷು ಚ |
ವರ್ಷಾಸು ಸರ್ವತಃ ಸ್ನಾಯಾದ್ಯದೀಚ್ಛೇತ್ಪರಮಾಂ ಗತಿಂ || ೨೮ ||

ಋತುವಿನಲ್ಲಿ ಬಿಸಿಯಾಗಿಯೂ, ಬೇಸಗೆಯಲ್ಲಿ ಹಿಮದಂತೆ ತಣ್ಣಗೂ ಇರುವುದು.

೨೫. ಆ ಕುಂಡದಲ್ಲಿ ಮಳೆಗಾಲದಲ್ಲಿ ನೀರು ಹೆಚ್ಚುವುದೂ ಇಲ್ಲ. ಬೇಸಗೆಯಲ್ಲಿ ಬತ್ತಿ ಕುಡಿಮೆಯಾಗುವುದೂ ಇಲ್ಲ. ನನ್ನ ಆ ಕುಂಡದಲ್ಲಿ ಇದೊಂದು ಅತ್ಯಾಶ್ಚರ್ಯ.

೨೬. ವಸುಂಧರೇ, ಮಥುರೆಯಲ್ಲಿ ಅಡಿಗಡಿಗೆ ತೀರ್ಥದ ಫಲ. ಅಲ್ಲಿ ಸ್ನಾನಮಾಡುವವನು ಸರ್ವಪಾಪಗಳನ್ನೂ ಕಳೆದುಕೊಳ್ಳುವನು.

೨೭–೨೮. ಎಲ್ಲಾ ಉತ್ತಮತೀರ್ಥಗಳಲ್ಲೂ ಪ್ರಯತ್ನಪೂರ್ವಕವಾಗಿ ಸ್ನಾನವನ್ನು ಮಾಡಬೇಕು. ಪರಮಗತಿಯನ್ನು ಬಯಸುವುದಾದರೆ ವರ್ಷ ಋತುವಿನಲ್ಲಿ ಅಲ್ಲಿನ ಬಾವಿಗಳಲ್ಲೂ ಮಡುಗಳಲ್ಲೂ, ದೇವನಿರ್ಮಿತತೀರ್ಥ ಗಳಲ್ಲೂ, ಹಳ್ಳಗಳಲ್ಲೂ, ನದಿಗಳಲ್ಲೂ, ಪ್ರವಾಹಗಳಲ್ಲೂ, ದಿವ್ಯವಾದ ನದಿಗಳ ಸಂಗಮಗಳಲ್ಲೂ ಸ್ನಾನಮಾಡಬೇಕು.

ಅಸ್ತೀ ಕ್ಷೇತ್ರಂ ಪರಂ ದಿವ್ಯಂ ಮುಚುಕುಂದಂ ತು ನಾಮತಃ ||
ಮುಚುಕುಂದಃ ಸ್ಥಿತಸ್ತತ್ರ ದಾನವಾಸುರಘಾತನಃ || ೨೯ ||

ತತ್ರ ಕುಂಡೇ ನರಃ ಸ್ನಾತ್ವಾ ಪ್ರಾಪ್ನೋತ್ಯಭಿಮತಂ ಫಲಂ |
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ || ೩೦ ||

ಇಹಜನ್ಮಕೃತಂ ಪಾಪಂ ಅನ್ಯಜನ್ಮಕೃತಂ ಚ ಯತ್ |
ಶೀಘ್ರಂ ನಶ್ಯತಿ ತತ್ಸರ್ವಂ ಕೀರ್ತನಾತ್ಕೇಶವಸ್ಯತು || ೩೧ ||

ಕಿಂ ತಸ್ಯ ಬಹುಭಿರ್ಮಂತ್ರೈರ್ಭಕ್ತಿರ್ಯಸ್ಯ ಜನಾರ್ದನೇ |
ನರಕೇ ಪಚ್ಯಮಾನಸ್ಯ ಗತಿರ್ದೇವಿ ಜನಾರ್ದನಃ || ೩೨ ||

ಕೃತ್ವಾ ಪ್ರದಕ್ಷಿಣಂ ದೇವಿ ವಿಶ್ರಾಮಂ ಕುರುತೇ ತು ಯಃ |
ನಾರಾಯಣ ಸಮೀಪೇ ತು ಸೋಽನಂತಫಲಮಶ್ನುತೇ || ೩೩ ||

---

೨೯. ಮುಚುಕುಂದವೆಂಬ ಹೆಸರಿನ ಬೇರೊಂದು ದಿವ್ಯಕ್ಷೇತ್ರವಿದೆ. ಕಾಲಯವನಾದಿ ರಾಕ್ಷಸರನ್ನು ಕೊಂದ * ಮುಚುಕುಂದನು ಅಲ್ಲಿ ಮಲಗಿರುವನು.

೩೦. ಅಲ್ಲಿರುವ ತೀರ್ಥಕುಂಡದಲ್ಲಿ ಸ್ನಾನಮಾಡಿದ ಮನುಷ್ಯನು ತನ್ನ ಇಷ್ಟಫಲವನ್ನು ಪಡೆಯುವನು. ಅಲ್ಲದೆ ಅಲ್ಲಿ ಪ್ರಾಣಗಳನ್ನು ಬಿಡುವವನು ನನ್ನ ಲೋಕವನ್ನು ಸೇರುವನು.

೩೧. ಕೇಶವನನ್ನು ಕೀರ್ತಿಸುವುದರಿಂದ ಈ ಜನ್ಮದಲ್ಲಿಯೂ, ಬೇರೆಯ ಜನ್ಮದಲ್ಲಿಯೂ ಮಾಡಿದ ಪಾಪವೆಲ್ಲವೂ ಬೇಗನೆ ನಾಶವಾಗುವುದು.

೩೨. ದೇವೀ, ಜನಾರ್ದನನಲ್ಲಿ ಭಕ್ತಿಯುಳ್ಳವನಿಗೆ ಬಹುಮಂತ್ರಗಳಿಂದಾಗಬೇಕಾದುದೇನು ! ನರಕದಲ್ಲಿ ಬೇಯುವವನಿಗೆ ಜನಾರ್ದನನೇ ಗತಿ.

೩೩. ದೇವೀ, ನಾರಾಯಣನನ್ನು ಪ್ರದಕ್ಷಿಣಮಾಡಿ, ಅವನ ಸಮೀಪದಲ್ಲಿ ವಿಶ್ರಾಂತಿಗೊಳ್ಳುವವನು ಅನಂತಫಲವನ್ನು ಅನುಭವಿಸುವನು.

---

* ಮುಚುಕುಂದನು ಸೂರ್ಯವಂಶದ ಮಾಂಧಾತರಾಜನ ಮಗ, ಕೃಷ್ಣಭಕ್ತ.

ಸುಪ್ತೋತ್ಥಿತಂ ಹರಿಂ ದೃಷ್ಟ್ವಾ ಮಥುರಾಯಾಂ ವಸುಂಧರೇ ।
ನ ತಸ್ಯ ಪುನರಾವೃತ್ತಿರ್ಜಾಯತೇ ಸ ಚತುರ್ಭುಜಃ ॥ ೩೪ ॥

ಕುಮುದಸ್ಯ ತು ಮಾಸಸ್ಯ ನವಮ್ಯಾಂತು ವಸುಂಧರೇ ।
ಪ್ರದಕ್ಷಿಣೀಕೃತ್ಯ ಭುವಂ ಸರ್ವಪಾಪೈಃ ಪ್ರಮುಚ್ಯತೇ ॥ ೩೫ ॥

ಬ್ರಹ್ಮಘ್ನಶ್ಚ ಸುರಾಪಶ್ಚ ಗೋಘ್ನೋ ಭಗ್ನವ್ರತಸ್ತಥಾ ।
ಮಥುರಾಂ ತು ಪರಿಕ್ರಮ್ಯ ಪೂತೋ ಭವತಿ ಮಾನವಃ ॥ ೩೬ ||

ಅಷ್ಟಮ್ಯಾಂ ಪ್ರಾಪ್ಯ ಮಥುರಾಂ ದಂತಧಾವನಪೂರ್ವಕಂ ।
ಬ್ರಹ್ಮಚರ್ಯೇಣ ತಾಂ ರಾತ್ರಿಂ ಕೃತಸಂಕಲ್ಪಮಾನಸಃ ॥ ೩೭ ||

---

೩೪. ವಸುಂಧರೇ, ಮಥುರೆಯಲ್ಲಿ ಮಲಗಿ ಏಳುವ ಹರಿಯನ್ನು ಸಂದರ್ಶಿಸುವವನಿಗೆ ಪುನರ್ಜನ್ಮವಿಲ್ಲ. ಅವನು ಚತುರ್ಭುಜನಾಗುವನು.

೩೫. ವಸುಂಧರೇ, ಕಾರ್ತಿಕಮಾಸದ ನವಮಿಯ ದಿನ × ಕೇಶವನನ್ನು (ಭೂಮಿಯನ್ನು) ಪ್ರದಕ್ಷಿಣಮಾಡುವವನು ಸರ್ವಪಾಪಗಳನ್ನೂ ಕಳೆದುಕೊಳ್ಳುವನು.

೩೬. ಬ್ರಹ್ಮಹತ್ಯೆ, ಗೋಹತ್ಯೆ, ಸುರಾಪಾನ ಇವುಗಳನ್ನು ಮಾಡಿದವನೂ, ವ್ರತಗೆಟ್ಟವನೂ ಸಂತೋಷದಿಂದ ಮಥುರೆಯಲ್ಲಿ ಸಂಚರಿಸಿದರೆ ಪವಿತ್ರನಾಗುವನು.

೩೭–೩೮. ಅಷ್ಟಮಿಯ ದಿನ ಮಥುರೆಗೆ ಹೋಗಿ, ಹಲ್ಲನ್ನುಜ್ಜಿಕೊಂಡು ಸಂಕಲ್ಪಪೂರ್ವಕವಾಗಿ ಆ ರಾತ್ರಿಯನ್ನು ಬ್ರಹ್ಮಚರ್ಯದಿಂದ ಕಳೆದು,

---

× ಕೇಶವನನ್ನು ಪ್ರದಕ್ಷಿಣಮಾಡಿದರೆ ಭೂಪ್ರದಕ್ಷಿಣಮಾಡಿದಂತೆ ಆಗುವುದು. (ಇದೇ ಅಧ್ಯಾಯದ ೭, ೮ ನೆಯ ಶ್ಲೋಕಗಳನ್ನು ನೋಡಬಹುದು.)

ಧೌತವಸ್ತ್ರಸ್ತು ಸುಸ್ನಾತೋ ಮೌನವ್ರತಪರಾಯಣಃ ।
ಪ್ರದಕ್ಷಿಣಂ ತು ಕುರ್ವೀತ ಸರ್ವಪಾತಕನಾಶನಂ ॥ ೩೮ ॥

ಪ್ರದಕ್ಷಿಣಾಂ ಪ್ರಕುರ್ವಾಣಮನ್ಯೋ ಯಃ ಸ್ಪೃಶತೇ ನರಃ ।
ಸರ್ವಾನ್‌ಕಾಮಾನವಾಪ್ನೋತಿ ನಾತ್ರಕಾರ್ಯಾವಿಚಾರಣಾ ॥ ೩೯ ॥

ಮಧುರಾಯಾಂ ನರೋ ಗತ್ವಾ ದೃಷ್ಟ್ವಾ ದೇವಂ ಸ್ವಯಂಭುವಂ ।
ಪ್ರದಕ್ಷಿಣಾಯಾಂ ಯತ್ಪುಣ್ಯಂ ತತ್ಪುಣ್ಯಂ ಲಭತೇ ನರಃ ॥ ೪೦ ॥

ದೇವಸ್ಯಾಗ್ರೇ ತು ವಸುಧೇ ಕೂಪಂ ತು ವಿಮಲೋದಕಂ ।
ಪಿತರಶ್ಚಾಭಿನಂದಂತಿ ಪಾನೀಯಂ ಪಿಂಡಮೇವ ಚ ॥ ೪೧ ॥

ಚತುಸ್ಸಾಮುದ್ರಿಕಂ ನಾಮ ತ್ರಿಷು ಲೋಕೇಷು ವಿಶ್ರುತಂ ॥ ೪೨ ॥

ಮಾರನೆಯ ದಿನ ಬೆಳಗ್ಗೆ ಸರಿಯಾಗಿ ಸ್ನಾನಮಾಡಿ, ಮಡಿಯನ್ನುಟ್ಟುಕೊಂಡು ಮೌನವ್ರತವುಳ್ಳವನಾಗಿ, ಕೇಶವನ ಪ್ರದಕ್ಷಿಣಮಾಡುವುದರಿಂದ ಸರ್ವಪಾಪವೂ ನಾಶವಾಗುವುದು.

೩೯. ಹಾಗೆ ಪ್ರದಕ್ಷಿಣಮಾಡುತ್ತಿರುವ ಮನುಷ್ಯನನ್ನು ಬೇರಾವನಾದರೂ ಮುಟ್ಟಿದರೆ ಆತನೂ ಸರ್ವೇಷ್ಟಾರ್ಥಗಳನ್ನೂ ಪಡೆಯುವನು. ಈ ವಿಚಾರದಲ್ಲಿ ವಿಮರ್ಶೆ ಬೇಕಿಲ್ಲ.

೪೦. ಸಾಕ್ಷಾದ್ಬ್ರಹ್ಮದೇವನನ್ನು ಸಂದರ್ಶಿಸಿ, ಪ್ರದಕ್ಷಿಣಮಾಡಿ, ಪಡೆಯಬಹುದಾದ ಪುಣ್ಯವನ್ನು ಮನುಷ್ಯನು ಮಧುರೆಗೆ ಹೋದಮಾತ್ರದಲ್ಲೇ ಪಡೆಯುವನು.

೪೧-೪೨. ಭೂದೇವೀ, ಅಲ್ಲಿ ದೇವನೆದುರಿಗೆ ಚತುಸ್ಸಾಮುದ್ರಿಕವೆಂಬ ನಿರ್ಮಲೋದಕದ ಬಾವಿಯಿದೆ. ಅಲ್ಲಿ ಕೊಡುವ ತಿಲೋದಕವನ್ನೂ, ಪಿಂಡವನ್ನೂ ಪಿತೃಗಳೂ ಮೆಚ್ಚುವರು.

ತತ್ರ ಸ್ನಾತೋ ನರೋ ಭದ್ರೇ ದೇವೈಶ್ಚ ಸಹ ಮೋದತೇ ।
ತತ್ರಾಥ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೪೩ ॥

ಇತಿ ಶ್ರೀ ವರಾಹಪುರಾಣೇ ಮಧುರಾಮಾಹಾತ್ಮ್ಯೇ ಮಧುರಾತೀರ್ಥ ಪ್ರಭಾವೋ ನಾಮ ಅಷ್ಟಪಂಚಾಶದಧಿಕಶತತಮೋಽಧ್ಯಾಯಃ

---

೪೩. ಭದ್ರೇ, ಅಲ್ಲಿ ಸ್ನಾನಮಾಡುವ ಮನುಷ್ಯನು ದೇವತೆಗಳೊಡನೆ ಸಂತೋಷಪಡುವನು. ಅಲ್ಲದೆ ಅಲ್ಲಿ ದೇಹವನ್ನು ತ್ಯಜಿಸುವವನು ನನ್ನ ಲೋಕವನ್ನು ಸೇರುವನು.

ಅಧ್ಯಾಯದ ಸಾರಾಂಶ—

ಶ್ರೀವರಾಹ ದೇವನು ಭೂದೇವಿಗೆ ಮಧುರಾಕ್ಷೇತ್ರದ ಪ್ರಾಶಸ್ತ್ಯವನ್ನು ಎಂದರೆ ಮನುಷ್ಯನಿಗೆ ಮಧುರೆಯ ಪ್ರವೇಶ ತೀರ್ಥಸ್ನಾನಾದಿಗಳಿಂದ ಲಭಿಸುವ ಪುಣ್ಯಫಲವನ್ನೂ, ಮುಚುಕುಂದಕ್ಷೇತ್ರದ ಮಹಿಮೆಯನ್ನೂ ವಿವರಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತೆಂಟನೆಯ ಅಧ್ಯಾಯ.

॥ ಶ್ರೀಃ ॥

ಏಕೋನಷಷ್ಟ್ಯಧಿಕಶತತಮೋಧ್ಯಾಯಃ
ಮಧುರಾಪ್ರದಕ್ಷಿಣ ವಿಧ್ಯಾದಿಕಂ

॥ ಧರಣ್ಯುವಾಚ ॥

ಶ್ರುತಂ ಸು ಬಹುಶೋ ದೇವ ತೀರ್ಥಾನಾಂ ಗುಣವಿಸ್ತರಂ ।
ಪ್ರೋಚ್ಯಮಾನಂ ತು ಪುಣ್ಯಾಖ್ಯಂ ತ್ವತ್ಪ್ರಸಾದಾಜ್ಜನಾರ್ದನ ॥ ೧ ॥

ನ ದಾನೈರ್ನ ತಪೋಭಿಶ್ಚ ನ ಯಜ್ಞೈಸ್ತಾದೃಶಂ ಫಲಂ ।
ಭೂಮೇಃ ಪ್ರದಕ್ಷಿಣಾಯಾಶ್ಚ ಯಾದೃಶಂ ತೀರ್ಥಸೇವಯಾ ॥ ೨ ॥

ಭುವಶ್ಚ ಚತುರಂತಾಯಾಸ್ತೀರ್ಥಪ್ರಕ್ರಮಣಂ ಹರೇ ।
ಸರ್ವತೀರ್ಥಾಭಿಗಮನಮಸ್ತಿ ದುರ್ಗತರಂ ನೃಣಾಂ ॥ ೩ ॥

ನೂರೈವತ್ತೊಂಬತ್ತನೆಯ ಅಧ್ಯಾಯ
ಮಧುರಾಪ್ರದಕ್ಷಿಣವಿಧಿಯೇ ಮೊದಲಾದುದು.

೧. ದೇವ, ಜನಾರ್ದನಾ, ನೀನು ಹೇಳಿದ ಪುಣ್ಯತೀರ್ಥಗಳ ಗುಣವಿವರಣೆಯನ್ನು ನಿನ್ನ ಅನುಗ್ರಹದಿಂದ ಬಹಳವಾಗಿ ಕೇಳಿದುದಾಯಿತು.

೨. ತೀರ್ಥಸೇವೆಯಿಂದ ಲಭಿಸುವಂತಹ ಫಲವು ದಾನಗಳಿಂದಾಗಲಿ, ತಪಸ್ಸುಗಳಿಂದಾಗಲಿ, ಯಜ್ಞಗಳಿಂದಲಾಗಲಿ, ಭೂಪ್ರದಕ್ಷಿಣೆಯಿಂದಲೇ ಆಗಲಿ ಲಭಿಸುವುದಿಲ್ಲ.

೩–೪. ಹರೀ, ನಾಲ್ಕು ಕೊನೆಗಳುಳ್ಳ ಭೂಮಿಯಲ್ಲಿರುವ ತೀರ್ಥಗಳಿಗೆ ಹೋಗುವುದು ಅದರಲ್ಲೂ ಸರ್ವತೀರ್ಥಗಳಿಗೂ ಹೋಗುವುದು ಮನುಷ್ಯರಿಗೆ

ಅಸ್ತಿ ಕಶ್ಚಿದುಪಾಯೋತ್ರ ಯೇನ ಸಮ್ಯಗವಾಪ್ಯತೇ ।
ಪ್ರಸಾದಸುಮುಖೋ ಭೂತ್ವಾ ತತ್ಸರ್ವಂ ಕಥಯಸ್ವ ಮೇ ॥ ೪ ॥

॥ ಶ್ರೀವರಾಹ ಉವಾಚ ॥

ಭದ್ರೇ ಶೃಣು ಮಹತ್ಪುಣ್ಯಂ ಪೃಥಿವ್ಯಾಂ ಸರ್ವತೋದಿಶಂ ।
ಪರಿಕ್ರಮ್ಯ ಯಥಾಧ್ವಾನಂ ಪ್ರಮಾಣಗಣಿತಂ ಶುಭಂ ॥ ೫ ॥

ಭೂಮ್ಯಾಃ ಪರಿಕ್ರಮೋ ಸಮ್ಯಕ್ ಯೋಜನಾನಾಂ ಪ್ರಮಾಣಕಂ ।
ಷಷ್ಟಿಕೋಟಿಸಹಸ್ರಾಣಿ ಷಷ್ಟಿಕೋಟಿಶತಾನಿ ಚ ॥ ೬ ॥

ತೀರ್ಥಾನ್ಯೇತಾನಿ ದೇವಾಶ್ಚ ತಾರಕಾಶ್ಚ ನಭಸ್ಥಲೇ ।
ಗಣಿತಾನಿ ಸಮುಸ್ತಾನಿ ವಾಯುನಾ ಜಗದಾಯುಷಾ ॥ ೭ ॥

ಬ್ರಹ್ಮಣಾ ಲೋಮಶೇನೈವ ನಾರದೇನ ಧ್ರುವೇಣ ಚ ।
ಜಾಂಬವತ್ಯಾಶ್ಚ ಪುತ್ರೇಣ ರಾವಣೇನ ಹನೂಮತಾ ॥ ೮ ॥

ಬಹು ಕಷ್ಟಕರ. ಆದುದರಿಂದ ಸರ್ವತೀರ್ಥಗಳ ಸೇವೆಯಿಂದಾಗುವ ಫಲವನ್ನು ಪೂರ್ಣವಾಗಿ ಪಡೆಯಲು ಸುಲಭವಾದ ಉಪಾಯವಾವುದಾದರೂ ಇದ್ದರೆ ಅನುಗ್ರಹದಿಂದ ಸುಮುಖನಾಗಿ ಅದನ್ನೆಲ್ಲಾ ನನಗೆ ಹೇಳು.

೫. ಶ್ರೀವರಾಹ—ಭದ್ರೇ, ಭೂಮಿಯಲ್ಲಿ ಎಲ್ಲಾ ದಿಕ್ಕುಗಳಲ್ಲೂ ದಾರಿಯನ್ನು ಮೀರದೆ ಸಂಚರಿಸಿ, ನಿಷ್ಕರ್ಷಿಸಿರುವ ಶುಭವೂ, ಮಹಾಪುಣ್ಯಪ್ರದವೂ ಆದ ಲೆಕ್ಕವನ್ನು ಕೇಳು.

೬–೭. ಭೂಮಿಯಲ್ಲಿ ಸರಿಯಾಗಿ ಸಂಚರಿಸಿದರೆ ಅದರ ದೂರದಳತೆಯು ಅರವತ್ತುಕೋಟಿಸಾವಿರಯೋಜನವಾಗುವುದು. ತೀರ್ಥಗಳ ಸಂಖ್ಯೆಯು ಆರವತ್ತುನೂರುಕೋಟಿ ಅಥವಾ ಆರು ಅರ್ಬುದ. ದೇವತೆಗಳ ಮತ್ತು ಆಕಾಶದಲ್ಲಿರುವ ನಕ್ಷತ್ರಗಳ ಗಣನೆಯೆಲ್ಲವೂ ಹೀಗೆಯೇ ಜಗತ್ಪ್ರಾಣನಾದ ವಾಯುವಿನಿಂದಾಗಿದೆ.

೮–೯. ಬ್ರಹ್ಮರ್ಷಿಯಾದ ಲೋಮಶನೂ, ನಾರದನೂ, ಧ್ರುವನೂ, ಜಾಂಬವತಿಯ ಪುತ್ರ ಸಾಂಬನೂ, ರಾವಣನೂ, ಹನುಮಂತನೂ, ಬಲಿಯೂ,

ಏತೈರನೇಕಧಾ ದೇವೈಃ ಸಸಾಗರಾವನಾ ಮಹೀ ।
ಕ್ರಮಿತಾ ಬಲಿನಾ ಚೈವ ಬಾಹ್ಯಮಂಡಲರೇಖಯಾ ॥ ೯ ॥

ಅಂತರಾ ಭ್ರಮಣೇ ನೈವ ಸುಗ್ರೀವೇಣ ಮಹಾತ್ಮನಾ ।
ತಥಾ ಚ ಪೂರ್ವಂ ದೇವೇಂದ್ರೈಃ ಪಂಚಭಿಃ ಪಾಂಡುನಂದನೈಃ ॥ ೧೦ ॥

ಯೋಗಸಿದ್ಧೈಸ್ತಥಾ ಕೈಶ್ಚಿನ್ಮಾರ್ಕಂಡೇಯಮುಖೈರಪಿ ।
ಕ್ರಮಿತಾ ನ ಕ್ರಮಿಷ್ಯಂತಿ ನ ಪೂರ್ವೇ ನಾಪರೇ ಜನಾಃ ॥ ೧೧ ॥

ಅಲ್ಪಸತ್ವಬಲೋಪೇತೈಃ ಪ್ರಾಣಿಭಿಶ್ಚಾಲ್ಪಬುದ್ಧಿಭಿಃ ।
ಮನಸಾಪಿ ನ ಶಕ್ಯಂತೇ ಗಮನಸ್ಯ ಚ ಕಾಕಥಾ ॥ ೧೨ ॥

ಸಪ್ತದ್ವೀಪೇ ಚ ತೀರ್ಥಾನಾಂ ಭ್ರಮಣಾದ್ಯತ್ಫಲಂ ಭವೇತ್ ।
ಪ್ರಾಪ್ಯತೇ ಚಾಧಿಕಂ ತಸ್ಮಾನ್ಮಥುರಾಯಾಃ ಪರಿಕ್ರಮೇ ॥ ೧೩ ॥

ಹಲವರು ದೇವತೆಗಳೂ, ಸಾಗರವನಸಹಿತವಾದ ಭೂಮಿಯನ್ನು ಹೊರಗಿನ ವೃತ್ತರೇಖೆಯಮೇಲೆ ನಡೆದು ಮುಗಿಸಿರುವರು.

೧೦-೧೧. ಮಹಾತ್ಮನಾದ ಸುಗ್ರೀವನೂ, ಪೂರ್ವದಲ್ಲಿ ದೇವೇಂದ್ರರಾಗಿದ್ದು ಮನುಷ್ಯರಾಗಿ ಜನಿಸಿದ ಪಂಚಪಾಂಡವರೂ, ಮಾರ್ಕಂಡೇಯನೇ ಮೊದಲಾದ ಕೆಲವರು ಯೋಗಸಿದ್ಧರೂ ನಡುವೆ ಸುತ್ತುವುದರಿಂದಲೇ ಭೂಮಿಯಮೇಲೆ ನಡೆದು ಮುಗಿಸಿರುವರು. ಮತ್ತಾರೂ ಹಿಂದೆ ಪ್ರದಕ್ಷಿಣಮಾಡಿದವರಿಲ್ಲ. ಮುಂದೆ ಮಾಡುವವರಿಲ್ಲ.

೧೨. ಅಲ್ಪವಾದ ಸತ್ವಬಲಬುದ್ಧಿಗಳುಳ್ಳ ಪ್ರಾಣಿಗಳಿಗೆ ಮನಸ್ಸಿನಿಂದಲೂ ಭೂಮಿಯನ್ನೆಲಾ ಸಂಚರಿಸಲು ಸಾಧ್ಯವಿಲ್ಲದಿರುವಲ್ಲಿ ನಿಜವಾಗಿ ನಡೆದು ಪ್ರದಕ್ಷಿಣ ಮಾಡುವುದನ್ನು ಹೇಳಬೇಕಾದುದೇನು !

೧೩. ಸಪ್ತದ್ವೀಪಗಳಲ್ಲಿರುವ ತೀರ್ಥಗಳೆನ್ನೆಲ್ಲಾ ಸುತ್ತುವುದರಿಂದಾಗುವ ಫಲಕ್ಕಿಂತಲೂ ಹೆಚ್ಚಾದ ಫಲವು ಮಥುರೆಯನ್ನು ಸುತ್ತುವುದರಿಂದಾಗುವುದು.

ಮಧುರಾಂ ಸಮನುಪ್ರಾಪ್ಯ ಯಸ್ತು ಕುರ್ಯಾತ್ಪ್ರದಕ್ಷಿಣಂ ।
ಪ್ರದಕ್ಷಿಣೀಕೃತಾ ತೇನ ಸಪ್ತದ್ವೀಪಾ ವಸುಂಧರಾ ॥ ೧೪ ॥

ತಸ್ಮಾತ್ಸರ್ವಪ್ರಯತ್ನೇನ ಸರ್ವಕಾಮಾನಭೀಪ್ಸುಭಿಃ ।
ಕರ್ತವ್ಯಾ ಮಧುರಾಂ ಪ್ರಾಪ್ಯ ನರೈಃ ಸಮ್ಯಕ್ಪ್ರದಕ್ಷಿಣಾ ॥ ೧೫ ॥

॥ ಧರಣ್ಯುವಾಚ ॥

ಯಥಾವಿಧಾನುಕ್ರಮಣಂ ಮಧುರಾಯಾಮುಪಾಸ್ಯತೇ ।
ಪ್ರದಕ್ಷಿಣಾಫಲಂ ಸಮ್ಯಗನುಕ್ರಮವಿಧಿಂ ವದ ॥ ೧೬ ॥

॥ ಶ್ರೀವರಾಹ ಉವಾಚ ॥

ಪುರಾ ಸಪ್ತರ್ಷಿಭಿಃ ಪೃಷ್ಟೋ ಬ್ರಹ್ಮಾ ಲೋಕಪಿತಾಮಹಃ ।
ಇದಮೇವ ಪುರಾ ಪ್ರೋಕ್ತಂ ಯಥಾ+ಪೃಷ್ಟಸ್ತ್ವಯಾಹ್ಯಹಂ ॥ ೧೭ ॥

---

೧೪. ಮಧುರೆಗೆ ಹೋಗಿ, ಯಾರಾದರೂ ಆ ಪುರವನ್ನು ಪ್ರದಕ್ಷಿಣ ಮಾಡಿದರೆ ಅವರು ಸಪ್ತದ್ವೀಪಗಳಿಂದ ಕೂಡಿದ ಭೂಮಿಯನ್ನು ಪ್ರದಕ್ಷಿಣ ಮಾಡಿದಂತಾಗುವುದು.

೧೫. ಆದುದರಿಂದ ಸರ್ವೇಷ್ಟಾರ್ಥಗಳನ್ನೂ ಬಯಸುವವರು ಸರ್ವ ಪ್ರಯತ್ನದಿಂದ ಮಧುರೆಗೆ ಹೋಗಿ ಅದನ್ನು ಸರಿಯಾಗಿ ಪ್ರದಕ್ಷಿಣೆಮಾಡಬೇಕು.

೧೬. ಭೂದೇವಿ—ದೇವ, ಯಾವ ಕ್ರಮದಿಂದ ಮಧುರೆಯನ್ನು ಪ್ರದಕ್ಷಿಣಮಾಡುವುದರಿಂದಲೂ, ಅಲ್ಲಿ ಸಂಚರಿಸುವುದರಿಂದಲೂ ಪೂರ್ಣಫಲವನ್ನು ಪಡೆಯಬಹುದೋ ಅದನ್ನು ಸರಿಯಾಗಿ ಹೇಳು.

೧೭. ಶ್ರೀವರಾಹ—ನೀನು ಈಗ ನನ್ನನ್ನು ಕೇಳಿದಂತೆಯೇ ಹಿಂದೆ ಸಪ್ತರ್ಷಿಗಳು ಲೋಕಕ್ಕೆ ಅಜ್ಜನಾದ ಬ್ರಹ್ಮನನ್ನು ಇದನ್ನೇ ಕೇಳಿದ್ದರು.

\+ ಪೃಷ್ಟಾ (ಬೊಂ.) ತ್ವಂ ಪೃಷ್ಟವಾನ್ ಮಮ (ಕ.)

ಶ್ರುತ್ವಾ ಸರ್ವಪುರಾಣೋಕ್ತಂ ತೀರ್ಥಸಂಕ್ರಮಣಂ ಪರಂ ।
ಪೃಥಿವ್ಯಾಶ್ಚತುರಂತಾಯಾಸ್ತಥಾ ತದ್ವಕ್ತುಮುದ್ಯತಃ ॥ ೧೮ ॥

ಸರ್ವದೇವೇಷು ಯತ್ಪುಣ್ಯಂ ಸರ್ವತೀರ್ಥೇಷು ಯತ್ಫಲಂ ।
ಸರ್ವದಾನೇಷು ಯತ್ಪ್ರೋಕ್ತಂ ಇಷ್ಟಾಪೂರ್ತೇಷು ಚೈವ ಹಿ ॥ ೧೯ ॥

ಯತ್ಫಲಂ ಲಭ್ಯತೇ ವಿಪ್ರಾಸ್ತಸ್ಮಾಚ್ಛತ ಗುಣೋತ್ತರಂ ।
ಪ್ರಕ್ರಮಾನ್ಮಥುರಾಯಾಸ್ತು ಸತ್ಯಮೇತದ್ವದಾಮಿ ವಃ ॥ ೨೦ ॥

ಇತ್ಯುಕ್ತ್ವಾ ಋಷಯೋ ಜಗ್ಮುರಭಿವಾದ್ಯ ಸ್ವಯಂಭುವಂ ।
ಆಗತ್ಯ ಮಥುರಾಂ ದೇವೀಮಾಶ್ರಮಾಂಶ್ಚಕ್ರಿರೇ ದ್ವಿಜಾಃ ॥ ೨೧ ॥

ಧ್ರುವೇಣಸಹಿತಾಶ್ಚಾಸನ್ ಕಾಮಯಾನಾಸ್ತು ತದ್ದಿನಂ ॥ ೨೨ ॥

---

೧೮. ಬ್ರಹ್ಮನು ಸರ್ವಪುರಾಣಗಳಲ್ಲಿಯೂ ಹೇಳಿರುವ, ನಾಲ್ಕು ಕೊನೆಗಳುಳ್ಳ ಭೂಮಿಯಮೇಲಿರುವ ತೀರ್ಥಗಳ ಉತ್ತಮಯಾತ್ರೆಯ ವಿಚಾರವನ್ನು ಹೇಳಲು ಮೊದಲುಮಾಡಿ, ಮುಂದಿನಂತೆ ನುಡಿದನು.

೧೯–೨೦. "ಬ್ರಾಹ್ಮಣರೇ, ಸರ್ವದೇವರ ದರ್ಶನಪೂಜಾದಿಗಳಿಂದ ಯಾವ ಪುಣ್ಯವು ಬರುವುದೋ, ಸರ್ವತೀರ್ಥಗಳ ಸ್ನಾನಾದಿಗಳಿಂದಲೂ, ಸರ್ವದಾನಗಳಿಂದಲೂ, ಯಜ್ಞಗಳಿಂದಲೂ, ಧರ್ಮಾರ್ಥವಾಗಿ ಕೆರೆಕಟ್ಟೆ ಮೊದಲಾದುವುಗಳನ್ನು ಕಟ್ಟಿಸುವುದರಿಂದಲೂ, ಯಾವ ಫಲವು ದೊರೆಯುವುದೋ ಅದಕ್ಕಿಂತ ನೂರರಷ್ಟು ಹೆಚ್ಚಾದ ಪುಣ್ಯವೂ, ಫಲವೂ ಮಥುರಾನಗರದ ಸಂಚಾರಪ್ರದಕ್ಷಿಣೆಗಳಿಂದ ಲಭಿಸುವುದು. ಸತ್ಯವಾದ ಈ ಮಾತನ್ನು ನಿಮಗೆ ಹೇಳಿದ್ದೇನೆ" ಎಂದನು.

೨೧–೨೨ ಬ್ರಹ್ಮನು ಹೀಗೆ ಹೇಳಲು ಆ ಬ್ರಹ್ಮರ್ಷಿಗಳು ಆತನನ್ನು ವಂದಿಸಿ, ಅಲ್ಲಿಂದ ಮಥುರಾನಗರಿಗೆ ಧ್ರುವನೊಡನೆ ಬಂದು, ಕಾರ್ತಿಕಶುಕ್ಲ ನವಮಿಯಾದ ಆ ಉತ್ತಮದಿವಸವನ್ನು ನಿರೀಕ್ಷಿಸುತ್ತ, ಅಲ್ಲಿಯೇ ಆಶ್ರಮವನ್ನು ಮಾಡಿಕೊಂಡಿದ್ದರು.

ಕುಮುದಸ್ಯ ತು ಮಾಸಸ್ಯ ನವಮ್ಯಾಂ ಶುಕ್ಲಪಕ್ಷಕೇ ।
ಮಧುರೋಪಕ್ರಮಂ ಕೃತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೨೩ ॥

ಇತಿ ಶ್ರೀವರಾಹಪುರಾಣೇ ಮಧುರಾಮಾಹಾತ್ಮ್ಯೇ ಮಧುರಾಪ್ರದಕ್ಷಿಣಾದಿಕಂ ನಾಮ ಏಕೋನಷಷ್ಟ್ಯಧಿಕ ಶತತಮೋಽಧ್ಯಾಯಃ

---

೨೩. ಕಾರ್ತಿಕಮಾಸದ ಶುಕ್ಲಪಕ್ಷದ ನವಮಿಯದಿನ ಮಧುರಾ ಪ್ರದಕ್ಷಿಣಾದಿಗಳನ್ನು ಮಾಡಿದವರು ಸರ್ವಪಾಪಗಳನ್ನೂ ಕಳೆದುಕೊಳ್ಳುವರು.

ಅಧ್ಯಾಯದ ಸಾರಾಂಶ—

ಭೂದೇವಿಗೆ ಶ್ರೀವರಾಹ ದೇವನು, ಮಧುರಾಪ್ರದಕ್ಷಿಣದಿಂದ ಭೂಮಿಯ ಸರ್ವತೀರ್ಥಗಳ ಸೇವೆಗಿಂತಲೂ ಹೆಚ್ಚಾದ ಫಲವು ದೊರೆಯುವುದೆಂಬುದನ್ನೂ ಸಪ್ತದ್ವೀಪಗಳಿಂದ ಕೂಡಿದ ಭೂಮಿಯನ್ನೇ ಪ್ರದಕ್ಷಿಣಮಾಡಿದಂತಾಗುವು ದೆಂಬುದನ್ನೂ ಇತರ ಫಲಗಳನ್ನೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈವತ್ತೊಂಬತ್ತನೆಯ ಅಧ್ಯಾಯ

॥ ಶ್ರೀಃ ॥

ಷಷ್ಟ್ಯಧಿಕಶತತಮೋಧ್ಯಾಯಃ

ಮಧುರಾಪರಿಕ್ರಮಪ್ರಾದುರ್ಭಾವಃ

॥ ಶ್ರೀವರಾಹ ಉವಾಚ ॥

ಅಷ್ಟಮ್ಯಾಂ ಮಧುರಾಂ ಪ್ರಾಪ್ಯ ಕಾರ್ತಿಕಸ್ಯಾಸಿತೇ ನರಃ ।
ಸ್ನಾತ್ವಾ ವಿಶ್ರಾಂತಿತೀರ್ಥೇ ತು ಪಿತೃದೇವಾರ್ಚನೇ ರತಃ ॥ ೧ ॥

ವಿಶ್ರಾಂತಿದರ್ಶನಂ ಕೃತ್ವಾ ದೀರ್ಘವಿಷ್ಣುಂ ಚ ಕೇಶವಂ ।
ಪ್ರದಕ್ಷಿಣಾಯಾಃ ಸಮ್ಯಗ್ವೈ ಫಲಂಪ್ರಾಪ್ನೋತಿ ಮಾನವಃ ॥ ೨ ॥

ಉಪವಾಸರತಃ ಸಮ್ಯಗಲ್ಪಮೇಧ್ಯಾಶನೋಥವಾ ।
ದಂತಕಾಷ್ಠಂ ಚ ಸಾಯಾಹ್ನೇ ಕೃತ್ವಾ ಶುಧ್ಯರ್ಥಮಾತ್ಮನಃ ॥ ೩ ॥

ನೂರ ಅರವತ್ತನೆಯ ಅಧ್ಯಾಯ

ಮಧುರೆಯ ಸಂಚಾರದ ಪ್ರಾದುರ್ಭಾವ.

೧-೨. ಶ್ರೀವರಾಹ—ಕಾರ್ತಿಕಮಾಸದ ಕೃಷ್ಣಪಕ್ಷದ ಅಷ್ಟಮಿಯ ದಿನ ಯಾತ್ರಿಕನು ಮಧುರೆಗೆ ಹೋಗಿ, ವಿಶ್ರಾಂತಿತೀರ್ಥದಲ್ಲಿ ಸ್ನಾನಮಾಡಿ, ಪಿತೃದೇವತೆಗಳ ಪೂಜೆಯಲ್ಲಿ ನಿರತನಾಗಿ, ವಿಶ್ರಾಂತಿತೀರ್ಥದ ಸಮೀಪದಲ್ಲಿ ನೆಲಸಿರುವ ದೀರ್ಘವಿಷ್ಣುವನ್ನೂ, ಕೇಶವನನ್ನೂ ಸಂದರ್ಶಿಸುವುದರಿಂದ ಮಧುರಾಪ್ರದಕ್ಷಿಣದ ಫಲವನ್ನು ಚೆನ್ನಾಗಿ ಪಡೆಯುವನು.

೩-೫. ಉಪವಾಸಮಾಡಿಯಾಗಲಿ, ಸ್ವಲ್ಪವಾಗಿ ಶುದ್ಧವಾದ ಆಹಾರವನ್ನು ಸೇವಿಸಿಯೇ ಆಗಲಿ ಇದ್ದು ಸಾಯಂಕಾಲ ದೇಹಶುದ್ಧಿಗಾಗಿ ದಂತಕಾಷ್ಠದಿಂದ

ಬ್ರಹ್ಮಚರ್ಯೇಣ ತಾಂರಾತ್ರಿಂ ಕೃತ್ವಾ ಸಂಕಲ್ಪ್ಯ ಮಾನಸೇ ।
ಧೌತವಸ್ತ್ರೇಣ ಸುಸ್ನಾತೋ ಮೌನವ್ರತಪರಾಯಣಃ ॥ ೪ ॥

ತಿಲಾಕ್ಷತಕುಶಾನ್‌ಗೃಹ್ಯ ಪಿತೃದೇವಾರ್ಥಮುದ್ಯತಃ ।
ದೀಪಹಸ್ತೋ ವನಂಗತ್ವಾ ಶ್ರಾಂತೋ ವಿಶ್ರಾಂತಿಜಾಗರೇ ॥ ೫ ॥

ಯಥಾನುಕ್ರಮಣಂತ್ವೈಶ್ಚ ಧ್ರುವಾದ್ಯೈಋಷಿಭಿಃ ಕೃತಂ ।
ಏವಂ ಪರಂಪರಾಯಾತಂ ಕ್ರಮಣೇಯಂ ನರೋತ್ತಮೈಃ ॥ ೬ ॥

ಪ್ರದಕ್ಷಿಣಾವರ್ತಮಾನೋ ನರೋ ಭಕ್ತಿಸಮನ್ವಿತಃ ।
ಸರ್ವಾನ್‌ಕಾಮಾನವಾಪ್ನೋತಿ ಹಯಮೇಧಫಲಂ ಲಭೇತ್ ॥ ೭ ॥

ಏವಂ ಜಾಗರಣಂ ಕೃತ್ವಾ ನವಮ್ಯಾಂ ನಿಯತಃ ಶುಚಿಃ ।
ಬ್ರಾಹ್ಮೇ ಮುಹೂರ್ತೇ ಸಂಪ್ರಾಪ್ತೇ ತತೋ ಯಾತ್ರಾಮುಪಕ್ರಮೇತ್ ॥

ಹಲ್ಲನ್ನುಜ್ಜಿ, ಆ ರಾತ್ರಿಯನ್ನು ಬ್ರಹ್ಮಚರ್ಯದಿಂದ ಕಳೆದು, ಮನಸ್ಸಿನಲ್ಲಿ ಸಂಕಲ್ಪಮಾಡಿ, ಸ್ನಾನಮಾಡಿ, ಮಡಿಯನ್ನುಟ್ಟು, ಮೌನವ್ರತವುಳ್ಳವನಾಗಿ, ತಿಲಾಕ್ಷತದರ್ಭೆಗಳನ್ನು ತೆಗೆದುಕೊಂಡು, ಪಿತೃದೇವತೆಗಳ ತರ್ಪಣವನ್ನು ಮಾಡಿ, ದೀಪವನ್ನು ಕಯ್ಯಲ್ಲಿ ಹಿಡಿದುಕೊಂಡು ವನಕ್ಕೆ ಹೋಗಿ, ಜಾಗರಣೆಯಿಂದ ಬಳಲಿದವನಾಗಬೇಕು.

೬. ಬಳಿಕ ಧ್ರುವಾದಿಗಳಾದ ಋಷಿಗಳು ಯಾವ ಕ್ರಮದಿಂದ ಪ್ರದಕ್ಷಿಣೆ ಮಾಡಿದರೆಂದು ತಿಳಿದುಬಂದಿದೆಯೋ ಆ ಕ್ರಮದಿಂದಲೇ ಉತ್ತಮರಾದ ಯಾತ್ರಿಕರು ಪ್ರದಕ್ಷಿಣಾದಿಗಳನ್ನು ಮಾಡಬೇಕು.

೭. ಹಾಗೆ ಭಕ್ತಿಪೂರ್ವಕವಾಗಿ ಪ್ರದಕ್ಷಿಣೆಮಾಡುವವನು ಸರ್ವೇಷ್ಟಾರ್ಥಗಳನ್ನೂ, ಅಶ್ವಮೇಧಯಜ್ಞದ ಫಲವನ್ನೂ ಪಡೆಯುವನು.

೮. ಮೊದಲು ಹೇಳಿದಂತೆ ಅಷ್ಟಮಿಯ ದಿನ ರಾತ್ರೆ ಜಾಗರಣೆಯನ್ನು ಮಾಡಿ, ನವಮಿಯದಿನ ಬೆಳಗಿನ ಜಾವದಲ್ಲಿ ನಿಯಮದಿಂದ ಶುಚಿಯಾಗಿ ಯಾತ್ರೆಯನ್ನು ಆರಂಭಿಸಬೇಕು.

ತಥಾಪ್ರಾರಭಯೇದ್ಯಾತ್ರಾಂ ಯಾವನ್ನೋದಯತೇ ರವಿಃ ।
ಪ್ರಾತಃ ಸ್ನಾನಂ ತಥಾ ಕುರ್ಯಾತ್ತೀರ್ಥೇ ದಕ್ಷಿಣಕೋಟಿಕೇ ॥ ೯ ॥

ಪ್ರಕ್ಷಾಲ್ಯ ಪಾದಾವಾಚಮ್ಯ ಹನುಮಂತಂ ಪ್ರಸಾದಯೇತ್ ।
ಸರ್ವಮಂಗಲಮಾಂಗಲ್ಯಂ ಕುಮಾರಂ ಬ್ರಹ್ಮಚಾರಿಣಂ ॥ ೧೦ ॥

ವಿಜ್ಞಾಪ್ಯ ಸಿದ್ಧಿಕರ್ತಾರಂಯಾತ್ರಾಸಿದ್ಧಿಪ್ರದಾಯಕಂ ।
ಯಸ್ಯ ಸಂಸ್ಮರಣಾದೇವ ಸರ್ವೇ ನಶ್ಯಂತ್ಯುಪದ್ರವಾಃ ॥ ೧೧ ॥

ಯಥಾರಾಮಸ್ಯ ಯಾತ್ರಾಯಾಂ ಸಿದ್ಧಿಸ್ತೇ ಸುಪ್ರತಿಷ್ಠಿತಾ ।
ತಥಾ ಪರಿಭ್ರಮನ್ಮೇದ್ಯ ಭವಾನ್ ಸಿದ್ಧಿಪ್ರದೋ ಭವ ॥ ೧೨ ॥

ಇತಿ ವಿಜ್ಞಾಪ್ಯ ವಿಧಿವದ್ಧನೂಮಂತಂ ಗಣೇಶ್ವರಂ ।
ದೀಪಪುಷ್ಪೋಪಹಾರೈಸ್ತು ಪೂಜಯಿತ್ವಾ ವಿಸರ್ಜಯೇತ್ ॥ ೧೩ ॥

---

೯. ಸೂರ್ಯನು ಹುಟ್ಟುವುದಕ್ಕಿಂತ ಮೊದಲೇ ಯಾತ್ರೆಗೆ ಆರಂಭಿಸಿ, ದಕ್ಷಿಣಕೋಟಿಕತೀರ್ಥದಲ್ಲಿ ಪ್ರಾತಃಸ್ನಾನವನ್ನು ಮಾಡಬೇಕು.

೧೦–೧೧. ಬಳಿಕ ಕಾಲನ್ನು ತೊಳೆದುಕೊಂಡು ಆಚಮನವನ್ನು ಮಾಡಿ, ಯಾರ ಸ್ಮರಣಮಾತ್ರದಿಂದ ತೊಂದರೆಗಳೆಲ್ಲವೂ ಹೋಗುವುವೋ ಆ ಸರ್ವ ಮಂಗಳಮಾಂಗಲ್ಯನೂ, ಬ್ರಹ್ಮಚಾರಿಯೂ, ವಾಯುಕುಮಾರನೂ, ಸಿದ್ಧಿ ಕರ್ತೃವೂ, ಯಾತ್ರೆಯಲ್ಲಿ ಸಿದ್ಧಿಯನ್ನುಂಟುಮಾಡುವವನೂ, ಆದ ಹನುಮಂತನನ್ನು ವಂದಿಸಿ, ವಿಜ್ಞಾಪಿಸಿ, ಪ್ರಸನ್ನನನ್ನಾಗಿ ಮಾಡಿಕೊಳ್ಳಬೇಕು.

೧೨–೧೩. "ಶ್ರೀರಾಮನ ಜಯಯಾತ್ರೆಯಲ್ಲಿ ನಿನಗೆ ಅಥವಾ ನಿನ್ನಿಂದ ಹೇಗೆ ಪೂರ್ಣಸಿದ್ಧಿಯುಂಟಾಯಿತೋ ಹಾಗೆಯೇ ಮಧುರೆಯಲ್ಲಿ ಸಂಚಾರ ಪ್ರದಕ್ಷಿಣಗಳನ್ನು ಮಾಡುವ ನನಗೆ ಈಗ ನೀನು ಸಿದ್ಧಿಯನ್ನುಂಟುಮಾಡು ವವನಾಗು" ಎಂದು ವಿಜ್ಞಾಪಿಸಿ, ಗಣೇಶ್ವರನಾದ ಆ ಹನುಮಂತನನ್ನು ವಿಧಿಯಂತೆ ದೀಪಪುಷ್ಪೋಪಹಾರಗಳಿಂದ ಪೂಜಿಸಿ, ಬಳಿಕ ಅವನನ್ನು ಬಿಟ್ಟು ಮುಂದೆ ಹೋಗಬೇಕು.

ತಥೈವ ಪದ್ಮನಾಭಂತು ದೀರ್ಘವಿಷ್ಣುಂ ಭಯಾಪಹಂ ।
ವಿಜ್ಞಾಪ್ಯ ಸಿದ್ಧಿಕರ್ತಾರಂ ದೇವ್ಯಶ್ಚ ತದನಂತರಂ ॥ ೧೪ ॥

ದೃಷ್ಟ್ವಾ ವಸುಮತೀಂ ದೇವೀಂ ತಥೈವ ಹ್ಯಪರಾಜಿತಾಂ ।
ಆಯುಧಾಗಾರಸಂಸ್ಥಾಂ ಚ ನೃಣಾಂ ಸರ್ವಭಯಾಪಹಾಂ ॥ ೧೫ ॥

ಕಂಸವಾಸನಿಕಾಂ ತದ್ವದೌಗ್ರಸೇನಾಂ ಚ ಚರ್ಚಿಕಾಂ ।
ವಧೂಟೀಂಚ ತಥಾ ದೇವಿ ದಾನವಕ್ಷಯಕಾರಿಣೀಂ ॥ ೧೬ ॥

ಜಯದಾಂ ದೇವತಾನಾಂ ಚ ಮಾತರೋ ದೇವಪೂಜಿತಾಃ ।
ಗೃಹದೇವ್ಯೋ ವಾಸ್ತುದೇವ್ಯೋ ದೃಷ್ಟ್ವಾನುಜ್ಞಾಪ್ಯ ನಿರ್ಗಮೇತ್ ॥೧೭॥

ಮೌನವ್ರತಧರೋ ಗಚ್ಛೇದ್ಧ್ಯಾವದ್ದಕ್ಷಿಣಕೋಟಿಕೇ ।
ಪ್ರಾಪ್ಯ ಸ್ನಾತ್ವಾ ಪಿತೄಂಸ್ತರ್ಪ್ಯ ದೃಷ್ಟ್ವಾ ದೇವಂ ಪ್ರಣಮ್ಯ ಚ ।
ನತ್ವಾ ಗಚ್ಛೇದಿಕ್ಷುವಾಸಾಂ ದೇವೀಂ ಕೃಷ್ಣಸುಪೂಜಿತಾಂ ॥ ೧೮ ॥

---

೧೪. ಬಳಿಕ, ಭಯನಾಶಕನೂ, ಪದ್ಮನಾಭನೂ, ಸಿದ್ಧಿಕರ್ತೃವೂ ಆದ ದೀರ್ಘವಿಷ್ಣುವನ್ನು ಸಂದರ್ಶಿಸಿ, ಅವನಲ್ಲಿ ವಿಜ್ಞಾಪಿಸಿ, ಬಳಿಕ ದೇವಿಯರ ಸಂದರ್ಶನವನ್ನು ಮಾಡಬೇಕು.

೧೫–೧೭. ಭೂದೇವೀ, ಮೊದಲು ವಸುಮತೀದೇವಿಯನ್ನು ಸಂದರ್ಶಿಸಿ, ಬಳಿಕ ಅಪರಾಜಿತಾದೇವಿಯನ್ನೂ, ಆಯುಧಾಗಾರದಲ್ಲಿ ನೆಲಸಿರುವವಳೂ, ಮನುಷ್ಯರ ಸರ್ವಭಯನಿವಾರಕಳೂ ಆದ ಕಂಸವಾಸನಿಕಾ ದೇವಿಯನ್ನೂ, ಔಗ್ರಸೇನಾ ದೇವಿಯನ್ನೂ, ಚರ್ಚಿಕಾದೇವಿಯನ್ನೂ, ವಧೂಟೀದೇವಿಯನ್ನೂ, ದಾನವನಾಶಕಳಾದ ಜಯದಾದೇವಿಯನ್ನೂ ಸಂದರ್ಶಿಸಬೇಕು. ದೇವತೆಗಳೂ ಮಾತೆಯರೂ, ದೇವಪೂಜಿತರೂ, ಗೃಹದೇವಿಯರೂ, ವಾಸ್ತುದೇವಿಯರೂ ಆದ ಇವರ ದರ್ಶನವನ್ನು ಪಡೆದು, ಇವರ ಅನುಜ್ಞೆಯಿಂದ ಮುಂದೆ ಹೊರಡಬೇಕು.

೧೮. ದೇವೀ, ಮೌನವ್ರತವನ್ನವಲಂಬಿಸಿ, ದಕ್ಷಿಣಕೋಟಿಕಕ್ಕೆ ಹೋಗಿ, ಅಲ್ಲಿ ಸ್ನಾನವನ್ನು ಮಾಡಿ, ಪಿತೃಗಳಿಗೆ ತರ್ಪಣವನ್ನು ಮಾಡಿ, ದೇವನನ್ನು ಸಂದರ್ಶಿಸಿ, ಪ್ರಣಾಮಮಾಡಿ, ಬಳಿಕ ಕೃಷ್ಣನು ಪೂಜಿಸಿದ ಇಕ್ಷುವಾಸಾದೇವಿಯ ಸನ್ನಿಧಿಗೆ ಹೋಗಬೇಕು.

ಬಾಲಕ್ರೀಡನರೂಪಾಣಿ ಕೃತಾನಿ ಸಹ ಗೋಪಕೈಃ ।
ಯಾನಿ ತೀರ್ಥಾನಿ ತಾನ್ಯೇವ ಸ್ಥಾಪಿತಾನಿ ಮಹರ್ಷಿಭಿಃ ॥ ೧೯ ॥

ಖ್ಯಾತಿಂಗತಾನಿ ಸರ್ವಾಣಿ ಸರ್ವಪಾಪಹರಾಣಿ ಚ ॥ ೨೦ ॥

ವತ್ಸಪುತ್ರಂ ತತೋ ಗಚ್ಛೇತ್ಸರ್ವಪಾಪಹರಂ ಪರಂ ।
ಅರ್ಕಸ್ಥಲಂ ವೀರಸ್ಥಲಂ ಕುಶಸ್ಥಲಮನಂತರ ॥
ಪುಣ್ಯಸ್ಥಲಂ ಮಹಾಸ್ಥಲಂ ಮಹಾಪಾಪವಿನಾಶನಂ ॥ ೨೧ ॥
ಪಂಚಸ್ಥಲಾನಿತತ್ರೈವ ಸರ್ವಪಾಪಹರಾಣಿ ಚ ।
ಯೇಷಾಂ ತು ದರ್ಶನಾದೇವ ಬ್ರಹ್ಮಣಾ ಸಹ ಮೋದತೇ ॥ ೨೨ ॥
ಶಿವಂ ಸಿದ್ಧಮುಖಂ ದೃಷ್ಟ್ವಾ ಸ್ಥಲಾನಾಂ ಫಲಮಾಪ್ನುಯಾತ್ ॥ ೨೩ ॥
ಹಯಮುಕ್ತಿಂ ತತೋ ಗಚ್ಛೇತ್ಸಿಂದೂರಂ ಸಸಹಾಯಕಂ ।
ಶ್ರೂಯತೇ ಚಾತ್ರ ಋಷಿಭಿರ್ಗಾಥಾಗೀತಾ ಪುರಾತನೀ ॥ ೨೪ ॥

೧೯–೨೦. ಕೃಷ್ಣನು ಗೋಪಬಾಲರೊಡನೆ ಯಾವಯಾವೆಡೆಯಲ್ಲಿ ಯಾವಯಾವ ನೀರಲ್ಲಿ ಆಡಿದನೋ ಅವೆಲ್ಲವೂ ತೀರ್ಥಗಳೆಂದು ಮಹರ್ಷಿಗಳು ಸ್ಥಾಪಿಸಿದರು. ಅವು ಸರ್ವಪಾಪಹರಗಳಾಗಿ ಪ್ರಸಿದ್ಧಿಯನ್ನು ಪಡೆದುವು.

೨೧. ಆಮೇಲೆ, ಸರ್ವಪಾಪನಾಶಕವೂ, ಶ್ರೇಷ್ಠವೂ ಆದ ವತ್ಸಪುತ್ರವೆಂಬ ಸ್ಥಳಕ್ಕೆ ಹೋಗಬೇಕು. ಅನಂತರ ಮಹಾಪಾಪವಿನಾಶಕವಾದ ಅರ್ಕಸ್ಥಲ, ವೀರಸ್ಥಲ, ಕುಶಸ್ಥಲ, ಪುಣ್ಯಸ್ಥಲ, ಮಹಾಸ್ಥಳಗಳಿಗೆ ಕ್ರಮವಾಗಿ ಹೋಗಬೇಕು

೨೨–೨೩. ಅಲ್ಲಿ ಸಮೀಪದಲ್ಲಿಯೇ ಇರುವ ಈ ಐದುಸ್ಥಲಗಳೂ ಸರ್ವಪಾಪಗಳನ್ನೂ ನಾಶಮಾಡುವುವು. ಅವುಗಳ ದರ್ಶನದಿಂದಲೇ ಮನುಷ್ಯನು ಬ್ರಹ್ಮನೊಡಗೂಡಿ, ಆನಂದಪಡುವನು. ಅಲ್ಲಿರುವ ಸಿದ್ಧಮುಖನೆಂಬ ಹೆಸರಿನ ಶಿವನ ಸಂದರ್ಶನದಿಂದ ಪಂಚಸ್ಥಳಗಳ ಪುಣ್ಯವನ್ನು ಪೂರ್ತಿಯಾಗಿ ಪಡೆಯಬಹುದು.

೨೪–೨೫. ಬಳಿಕ, ಸಿಂದೂರನೆಂಬ ಸಹಾಯಕನುಳ್ಳ ಹಯದಮುಕ್ತಿ ಕ್ಷೇತ್ರಕ್ಕೆ ಹೋಗಬೇಕು. ಆ ಕ್ಷೇತ್ರವಿಚಾರದಲ್ಲಿ, "ಒಬ್ಬ ರಾಜಕುಮಾರನು

ಅಶ್ವಾರೂಢೇನ ತೇನೈವ ಯಾತ್ರೇಯಂ ಸಮನುಷ್ಠಿತಾ ।
ಅಶ್ವೋ ಮುಕ್ತಿಂ ಗತಸ್ತತ್ರ ಸಹಾಯಸಹಿತಃ ಸುಖಂ ॥
ರಾಜಪುತ್ರಃ ಸ್ಥಿತಸ್ತತ್ರ ಯಾನಯಾತ್ರಾ ನಮುಕ್ತಿದಾ ॥ ೨೫ ॥

ತಸ್ಮಾದ್ಯಾನೈಶ್ಚ ಯಾತ್ರಾ ತು ನ ಕರ್ತವ್ಯಾ ಫಲೇಚ್ಛಯಾ ।
ತಸ್ಮಿಂಸ್ತೀರ್ಥೇ ತು ತಂ ದೃಷ್ಟ್ವಾ ಸ್ಪೃಷ್ಟ್ವಾ ಪಾಪೈಃ ಪ್ರಮುಚ್ಯತೇ ॥೨೬॥

ಕುಂಡಂ ಶಿವಸ್ಯ ವಿಖ್ಯಾತಂ ತತ್ರಸ್ನಾನಫಲಂ ಮಹತ್ ।
ಮಲ್ಲಿಕಾದರ್ಶನಂ ಕೃತ್ವಾ ಕೃಷ್ಣಸ್ಯ ಜಯದಂ ಶುಭಂ ॥ ೨೭ ॥

ತತಃ ತದಂಬಕುಂಡಸ್ಯ ಗಮನಾತ್ಸಿದ್ಧಿಮಾಪ್ನುಯಾತ್ ॥ ೨೮ ॥

ಚರ್ಚಿಕಾ ಯೋಗಿನೀ ತತ್ರ ಯೋಗಿನೀಪರಿವಾರಿತಾ ।
ಕೃಷ್ಣಸ್ಯ ರಕ್ಷಣಾರ್ಥಂ ಹಿ ಸ್ಥಿತಾ ಸಾ ದಕ್ಷಿಣಾಂದಿಶಂ ॥ ೨೯ ॥

ಕುದುರೆಯ ಮೇಲೇರಿಕೊಂಡು ಅಲ್ಲಿ ಯಾತ್ರೆಯನ್ನು ಮಾಡಿದನು. ಆ ಕುದುರೆಯು ಅಲ್ಲೇ ತನ್ನ ಸಹಾಯಕನೊಡನೆ ಸುಖವಾಗಿ ಮುಕ್ತಿಯನ್ನು ಪಡೆಯಿತು. ರಾಜಪುತ್ರನು ಮಾತ್ರ ಅಲ್ಲೇ ಉಳಿದನು. ಆದುದರಿಂದ ವಾಹನಗಳನ್ನೇರಿಕೊಂಡು ಮಾಡುವ ಯಾತ್ರೆಯು ಮೋಕ್ಷದಾಯಕವಲ್ಲ'' ಎಂದು ಋಷಿಗಳು ಹೇಳಿರುವ ಪುರಾತನವಾದ ಗಾದೆಯಿದೆ.

೨೬. ಆದುದರಿಂದ, ಫಲವನ್ನು ಬಯಸಿ, ವಾಹನಗಳನ್ನೇರಿಕೊಂಡು ಯಾತ್ರೆಯನ್ನು ಮಾಡಬಾರದು. ಆ ತೀರ್ಥದಲ್ಲಿ ಆ ಕುದುರೆಯನ್ನು ನೋಡಿಯೂ, ಮುಟ್ಟಿಯೂ ಪಾಪದಿಂದ ವಿಮುಕ್ತರಾಗುವರು.

೨೭–೨೮. ಶಿವಕುಂಡವೆಂಬುದು ಪ್ರಸಿದ್ಧವಾದುದು. ಅಲ್ಲಿ ಸ್ನಾನಮಾಡುವುದರಿಂದಾಗುವ ಫಲವು ಅಧಿಕವಾದುದು. ಕೃಷ್ಣನಿಗೆ ಜಯವನ್ನುಂಟುಮಾಡಿದ ಶುಭವಾದ ಮಲ್ಲಿಗೆಯ ದರ್ಶನವನ್ನು ಮಾಡಿ ಬಳಿಕ ಕದಂಬಕುಂಡಕ್ಕೆ ಹೋಗುವುದರಿಂದ ಮನುಷ್ಯನು ಸಿದ್ಧಿಯನ್ನು ಪಡೆಯುವನು.

೨೯. ಅಲ್ಲಿ ಚರ್ಚಿಕೆಯೆಂಬ ಯೋಗಿನಿಯು ಇತರ ಯೋಗಿನಿಯರಿಂದೊಡಗೂಡಿ, ಕೃಷ್ಣನ ರಕ್ಷಣೆಗಾಗಿ ದಕ್ಷಿಣದಿಕ್ಕಿನಲ್ಲಿ ನೆಲಸಿರುವಳು.

ಅಸ್ಪೃಶ್ಯಾ ಚಾಸ್ಪೃಶಾಚ್ಛೈವ ಮಾತರೌ ಲೋಕಪೂಜಿತೌ ।
ಬಾಲಾನಾಂ ದರ್ಶನಂ ತಾಭ್ಯಾಂ ಮಹಾರಕ್ಷಾಂಕರಿಷ್ಯತಿ ॥ ೩೦ ॥

ವರ್ಷಖಾತಂ ತತೋ ಗತ್ವಾ ಕುಂಡಂ ಪಾಪಹರಂ ಪರಂ ।
ಗತ್ವಾ ಸ್ನಾತ್ವಾ ಪಿತೃಂಸ್ತರ್ಪ್ಯ ಸರ್ವಪಾಪೈಃ ಪ್ರಮುಚ್ಯತೇ ॥ ೩೧ ॥

ಕ್ಷೇತ್ರಪಾಲಂ ತತೋ ಗತ್ವಾ ಶಿವಂ ಭೂತೇಶ್ವರಂ ಹರಂ ।
ಮಧುರಾಕ್ರಮಣಂ ತಸ್ಯ ಜಾಯತೇ ಸಫಲಂ ತಥಾ ॥ ೩೨ ॥

ಕೃಷ್ಣಕ್ರೀಡಾಸೇತುಬಂಧಂ ಮಹಾಪಾತಕನಾಶನಂ ।
ಬಾಲಾನಾಂ ಕ್ರೀಡನಾರ್ಥಂ ಚ ಕೃತ್ವಾ ದೇವೋ ಗದಾಧರಃ ॥ ೩೩ ॥

ಗೋಪಕೈಃ ಸಹಿತಸ್ತತ್ರ ಕ್ಷಣಮೇಕಂ ದಿನೇ ದಿನೇ ।
ತತ್ರೈವ ರಮಣಾರ್ಥಂ ಹಿ ನಿತ್ಯಕಾಲಂ ಸ ಗಚ್ಛತಿ ॥ ೩೪ ॥

---

೩೦. ಅಲ್ಲಿರುವ ಅಸ್ಪೃಶ್ಯಾ, ಅಸ್ಪೃಶಾ ಎಂಬ ಮಾತೃದೇವಿಯರು ಲೋಕಪೂಜಿತರು. ಬಾಲರಿಗೆ ಅವರ ದರ್ಶನವು ಮಹಾರಕ್ಷೆಯನ್ನುಂಟು ಮಾಡುವುದು.

೩೧. ಬಳಿಕ, ಶ್ರೇಷ್ಠವೂ, ಪಾಪಹರವೂ ಆದ ವರ್ಷಖಾತವೆಂಬ ಕುಂಡಕ್ಕೆ ಹೋಗಿ, ಸ್ನಾನಮಾಡಿ, ಪಿತೃಗಳಿಗೆ ತರ್ಪಣವನ್ನು ಮಾಡುವುದರಿಂದ ಮನುಷ್ಯನು ಸರ್ವಪಾಪಗಳಿಂದಲೂ ವಿಮುಕ್ತನಾಗುವನು.

೩೨. ಆಮೇಲೆ, ಮಧುರಾಕ್ಷೇತ್ರಪಾಲನೂ, ಭೂತೇಶ್ವರನೂ, ಹರನೂ ಆದ ಶಿವನ ಸನ್ನಿಧಿಗೆ ಹೋಗುವುದರಿಂದ ಯಾತ್ರಿಕನ ಮಧುರೆಯ ಪ್ರದಕ್ಷಿಣ ಸಂಚಾರವು ಸಫಲವಾಗುವುದು.

೩೩–೩೪. ಕೃಷ್ಣನ 'ಕ್ರೀಡಾಸೇತುಬಂಧ' ವೆಂಬುದು ಮಹಾಪಾತಕವನ್ನೂ ನಾಶಮಾಡುವುದು. ಗದಾಧರನಾದ ಕೃಷ್ಣದೇವನು ಬಾಲರ ಆಟಕ್ಕಾಗಿ ಆ ಸೇತುವೆಯನ್ನು ಮಾಡಿ, ಗೋಪರೊಡನೆ ಅಲ್ಲಿ ಪ್ರತಿದಿನವೂ ಸ್ವಲ್ಪಕಾಲ ಆಡುವನು. ಆಟಕ್ಕಾಗಿಯೇ ನಿತ್ಯವೂ ಅಲ್ಲಿಗೆ ಹೋಗುವನು.

ಬಲಿಹ್ರದಂಚ ತತ್ರೈವ ಜಲಕ್ರೀಡಾಕೃತಂ ಶುಭಂ ।
ಯಸ್ಯ ಸಂದರ್ಶನಾದೇವ ಸರ್ವಪಾಪೈಃ ಪ್ರಮುಚ್ಯತೇ ॥ ೩೫ ॥

ತತಃ ಪರಂ ಚ ಕೃಷ್ಣೇನ ಕುಕ್ಕುಟೈಃ ಕ್ರೀಡನಂ ಕೃತಂ ।
ಯಸ್ಯ ದರ್ಶನಮಾತ್ರೇಣ ಚಂಡೋಽಪಿ ಗತಿಮಾಪ್ನುಯಾತ್ ॥ ೩೬ ॥

ಸ್ತಂಭೋಽಚ್ಚಯಂ ಸುಶಿಖರಂ ಸೌರಭ್ಯೈಃ ಸುಸುಗಂಧಿಭಿಃ ।
ಭೂಷಿತಂ ಪೂಜಿತಂ ತತ್ರ ಕೃಷ್ಣೇನಾಕ್ಲಿಷ್ಟಕರ್ಮಣಾ ॥ ೩೭ ॥

ತಸ್ಯ ಪ್ರದಕ್ಷಿಣಂ ಕೃತ್ವಾ ಪರಿಪೂಜ್ಯ ಪ್ರಯತ್ನತಃ ।
ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ವ್ರಜೇತ್ತು ಸಃ ॥ ೩೮ ॥

ವಸುದೇವೇನ ದೇವಕ್ಯಾ ಗರ್ಭಸಂರಕ್ಷಣಾಯ ಚ ।
ಕೃತಮೇಕಾಂತಶಯನಂ ಮಹಾಪಾತಕನಾಶನಂ ॥ ೩೯ ॥

---

೩೫. ಅಲ್ಲಿಯೇ, ಕೃಷ್ಣನು ಜಲಕ್ರೀಡೆಯಾಡಿದ ಬಲಿಹ್ರದವೆಂಬ ಶುಭ ತೀರ್ಥವಿದೆ. ಅದರ ಸಂದರ್ಶನದಿಂದಲೇ ಮನುಷ್ಯರು ಎಲ್ಲಾ ಪಾಪಗಳನ್ನೂ ಕಳೆದುಕೊಳ್ಳುವರು.

೩೬. ಆಮೇಲೆ, ಕೃಷ್ಣನು ಕೋಳಿಗಳೊಡನೆ ಆಡಿದ ಸ್ಥಳ. ಆ ಸ್ಥಳದ ದರ್ಶನಮಾತ್ರದಿಂದ ಚಂಡನೂ ಉತ್ತಮಗತಿಯನ್ನು ಪಡೆಯುವನು.

೩೭–೩೮. ಅಲ್ಲೇ ದುಃಖರಹಿತವಾದ ಕಾರ್ಯಗಳನ್ನು ಮಾಡುವ ಕೃಷ್ಣನು ಅತ್ಯುತ್ತಮವಾದ ಸುಗಂಧದ್ರವ್ಯಗಳಿಂದ ಅಲಂಕರಿಸಿದ ಸ್ತಂಭೋಚ್ಚಯ ವೆಂಬ ಸುಶಿಖರವಿದೆ. ಅದನ್ನು ಪ್ರದಕ್ಷಿಣಮಾಡಿ, ಪ್ರಯತ್ನಪೂರ್ವಕವಾಗಿ ಪೂಜಿಸುವವನು ಪಾಪಗಳನ್ನೆಲ್ಲಾ ಕಳೆದುಕೊಂಡು ವಿಷ್ಣುಲೋಕವನ್ನು ಸೇರುವನು.

೩೯–೪೦. ಬಳಿಕ ವಸುದೇವನು ದೇವಕಿಯ ಗರ್ಭಸಂರಕ್ಷಣಾರ್ಥವಾಗಿ ರಹಸ್ಯವಾಗಿಮಲಗಿದ ಸ್ಥಳವೂ, ಮಹಾಪಾತಕನಾಶಕವೂ ಆದ ನಾರಾಯಣ

ತತೋ ನಾರಾಯಣಸ್ಥಾನಂ ಪ್ರವಿಶೇನ್ಮುಕ್ತಿಹೇತವೇ ।
ಪರಿಕ್ರಮ್ಯ ತತೋ ದೇವಾನ್ನಾರಾಯಣಪುರೋಗಮಾನ್ ॥ ೪೦ ॥

ದೃಷ್ಟ್ವಾ ತತಃ ಸುವಿಜ್ಞಾಪ್ಯ ಗಣಂ ವಿಧಿವಿನಾಯಕಂ ।
ಕುಬ್ಜಿಕಾಂ ವಾಮನಾಂಚೈವ ಬ್ರಾಹ್ಮಣ್ಯೌ ಕೃಷ್ಣಪಾಲಿತೇ ॥ ೪೧ ॥

ಅನುಜ್ಞಾಯ ತತಃ ಸ್ಥಾನಂ ದ್ರಷ್ಟುಂ ಗರ್ತೇಶ್ವರಂ ಶಿವಂ ।
ದೃಷ್ಟಮಾತ್ರೇಣ ತತ್ರೈವ ಯಾತ್ರಾಫಲಮವಾಪ್ಯತೇ ॥ ೪೨ ॥

ಮಹಾವಿದ್ಯೇಶ್ವರೀ ದೇವೀ ಆರಕ್ಷಂ ಪಾಪಕಂ ಹರೇತ್ ।
ಕ್ಷೇತ್ರಸ್ಯ ರಕ್ಷಣಾರ್ಥಂ ಹಿ ಯಾತ್ರಾಯಾಃ ಸಿದ್ಧಿದಾಂ ನೃಣಾಂ ।
ಪ್ರಭಾಮಲ್ಲೀಂ ಚ ತತ್ರೈವ ದೃಷ್ಟ್ವಾ ಕಾಮಾನವಾಪ್ನುಯಾತ್ ॥ ೪೩ ॥

ಸ್ಥಾನವನ್ನು ಮುಕ್ತಿಗಾಗಿ ಪ್ರವೇಶಿಸಬೇಕು. ಪ್ರವೇಶಿಸಿ, ನಾರಾಯಣನೇ ಮೊದಲಾದ ದೇವರನ್ನು ಪ್ರದಕ್ಷಿಣಮಾಡಿ ವಂದಿಸಬೇಕು.

೪೧-೪೨. ಬಳಿಕ, ವಿಧಿವಿನಾಯಕನನ್ನೂ, ಅವನ ಗಣವನ್ನೂ ಸಂದರ್ಶಿಸಿ, ವಿಜ್ಞಾಪನೆಮಾಡಿ, ಕುಳ್ಳಿಯಾದ ಕುಬ್ಜೆಯನ್ನೂ, ಕೃಷ್ಣನನ್ನು ಪಾಲಿಸಿದ ಬ್ರಾಹ್ಮಣಸ್ತ್ರೀಯರಿಬ್ಬರನ್ನೂ ನೋಡಿ ಅವರ ಅನುಜ್ಞೆಯನ್ನೂ ಪಡೆದು, ಬಳಿಕ ಗರ್ತೇಶ್ವರನೆಂಬ ಶಿವನ ಸನ್ನಿಧಿಗೆ ಹೋಗಬೇಕು. ಶಿವನ ದರ್ಶನಮಾತ್ರ ದಿಂದ ಅಲ್ಲೇ ಯಾತ್ರೆಯ ಫಲವನ್ನು ಪಡೆಯುವನು.

೪೩. ಮಹಾವಿದ್ಯೇಶ್ವರೀದೇವಿಯು ಪಾಪವನ್ನು ಹೋಗಲಾಡಿಸುವಳು ಕ್ಷೇತ್ರರಕ್ಷಣೆಗಾಗಿ ಇರುವವಳೂ, ಮನುಷ್ಯರಿಗೆ ಯಾತ್ರೆಯ ಸಿದ್ಧಿಯನ್ನುಂಟು ಮಾಡುವವಳೂ ಆದ ಪ್ರಭಾಮಲ್ಲಿಯನ್ನೂ ಅಲ್ಲೇ ನೋಡಿ, ಯಾತ್ರಿಕನು ತನ್ನ ಇಷ್ಟವನ್ನು ಪಡೆಯುವನು.

ಮಹಾವಿದ್ಯೇಶ್ವರೀ ದೇವೀ ಕೃಷ್ಣರಕ್ಷಾರ್ಥಮುದ್ಯತಾ ।
ನಿತ್ಯಂ ಸನ್ನಿಹಿತಾ ತತ್ರ ಸಿದ್ಧಿದಾ ಪಾಪನಾಶಿನೀ ॥ ೪೪ ॥

ಕೃಷ್ಣೇನ ಬಲಭದ್ರೇಣ ಗೋಪೈಃ ಕಂಸಂ ಜಿಘಾಂಸುಭಿಃ ॥ ೪೫ ॥

ಸಂಕೇತಕಂ ಕೃತಂ ತತ್ರ ಮಂತ್ರನಿಶ್ಚಯಕಾರಕಂ ।
ತದಾ ಸಂಕೇತಕೈಃ ಸಾ ಚ ಸಿದ್ಧಾ ದೇವೀ ಪ್ರತಿಷ್ಠಿತಾ ॥ ೪೬ ॥

ಸಿದ್ಧಿಪ್ರದಾ ಭೋಗದಾ ಚ ತೇನ ಸಿದ್ಧೇಶ್ವರೀ ಸ್ಮೃತಾ ।
ಸಂಕೇತಕೇಶ್ವರೀಂ ಚೈವ ದೃಷ್ಟ್ವಾ ಸಿದ್ಧಿಮವಾಪ್ನುಯಾತ್ ॥ ೪೭ ॥

ತತ್ರ ಕುಂಡಂ ಸ್ವಚ್ಛಜಲಂ ಮಹಾಪಾತಕನಾಶನಂ ।
ತತೋ ದೃಷ್ಟ್ವಾ ಮಹಾದೇವಂ ಗೋಕರ್ಣೇಶ್ವರನಾಮಕಂ ॥ ೪೮ ॥

---

೪೪. ಮಹಾ ವಿದ್ಯೇಶ್ವರೀದೇವಿಯು ಕೃಷ್ಣನ ರಕ್ಷಣೆಗಾಗಿ ಉದ್ಯುಕ್ತಳಾದವಳು. ಅಲ್ಲಿ ಯಾವಾಗಲೂ ಇದ್ದು ಪಾಪವನ್ನು ಹೋಗಲಾಡಿಸಿ, ಸಿದ್ಧಿಯನ್ನುಂಟುಮಾಡುವಳು.

೪೫–೪೬. ಕೃಷ್ಣನೂ, ಬಲರಾಮನೂ, ಕಂಸನನ್ನು ಕೊಲ್ಲಲಿಚ್ಛಿಸಿದ ಗೋಪರೊಡನೆ ಮಂತ್ರಾಲೋಚನೆಮಾಡಿ, ನಿರ್ಣಯಿಸಿ, ಅಲ್ಲಿ ಸಂಕೇತವನ್ನು ಮಾಡಿದರು. ಸಂಕೇತಮಾಡಿದ ಅವರು ಆ ಸಿದ್ಧಿದೇವಿಯನ್ನು ಪ್ರತಿಷ್ಠೆ ಮಾಡಿದರು.

೪೭. ಆದುದರಿಂದ ಸಿದ್ಧಿಪ್ರದಳೂ, ಸುಖದಾಯಕಳೂ ಆದ ಆಕೆ ಸಿದ್ಧೇಶ್ವರಿಯೆಂದೆನಿಸಿಕೊಂಡಳು. ಸಂಕೇತೇಶ್ವರಿಯೆಂಬ ಹೆಸರೂ ಉಳ್ಳ ಆ ದೇವಿಯನ್ನು ನೋಡಿ ಯಾತ್ರಿಕನು ಸಿದ್ಧಿಯನ್ನು ಪಡೆಯುವನು.

೪೮–೪೯. ಅಲ್ಲಿರುವ ಕುಂಡವು ನಿರ್ಮಲವಾದ ನೀರುಳ್ಳದ್ದೂ, ಮಹಾಪಾತಕನಾಶಕವೂ ಆಗಿದೆ. ಬಳಿಕ ಯಾರ ದರ್ಶನಮಾತ್ರದಿಂದಲೇ

ಯಸ್ಯ ದರ್ಶನಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ।
ಸರಸ್ವತೀಂ ನದೀಂ ದೃಷ್ಟ್ವಾ ತತೋ ಭದ್ರಾಣಿ ಪಶ್ಯತಿ ॥ ೪೯ ॥

ವಿಘ್ನರಾಜಂ ತತೋ ಗಚ್ಛೇದ್ಗಣೇಶಂ ವಿಘ್ನನಾಯಕಂ ।
ಸರ್ವಸಿದ್ಧಿಪ್ರದಂ ರಮ್ಯಂ ದರ್ಶನಾಚ್ಚ ಫಲಂ ಲಭೇತ್ ॥ ೫೦ ॥

ಗಂಗಾ ಸಾಧ್ವೀ ಚ ತತ್ರೈವ ಮಹಾಪಾತಕನಾಶಿನೀ ।
ದೃಷ್ಟ್ವಾ ಸ್ಪೃಷ್ಟ್ವಾ ತಥಾ ಧ್ಯಾತ್ವಾ ಸರ್ವಕಾಮಾನ್ಸಮಶ್ನುತೇ ॥ ೫೧ ॥

ಮಹಾದೇವಮುಖಾಕಾರಂ ನಾಮ್ನಾ ರುದ್ರಮಹಾಲಯಂ ।
ಕ್ಷೇತ್ರಪಂ ತಂ ಪರಂ ದೃಷ್ಟ್ವಾ ಕ್ಷೇತ್ರವಾಸಫಲಂ ಲಭೇತ್ ॥ ೫೨ ॥

ಪಾಪಗಳನ್ನೆಲ್ಲಾ ಕಳೆದುಕೊಳ್ಳುವನೋ ಆ ಗೋಕರ್ಣೇಶ್ವರನೆಂಬ ಹೆಸರಿನ ಈಶ್ವರನನ್ನು ಸಂದರ್ಶಿಸಿ, ಆಮೇಲೆ ಸರಸ್ವತೀನದಿಯ ದರ್ಶನವನ್ನು ಮಾಡಿ, ಯಾತ್ರಿಕನು ಶುಭಗಳನ್ನು ಪಡೆಯುವನು.

೫೦. ಬಳಿಕ ಗಣೇಶನೂ, ವಿಘ್ನನಾಯಕನೂ, ಸರ್ವಸಿದ್ಧಿಪ್ರದನೂ, ಮನೋಹರನೂ ಆದ ವಿಘ್ನರಾಜನ ಸನ್ನಿಧಿಗೆ ಹೋಗಬೇಕು. ಅವನ ದರ್ಶನದಿಂದಲೂ ಯಾತ್ರಿಕನು ಫಲವನ್ನು ಪಡೆಯುವನು.

೫೧. ಅಲ್ಲೇ ಇರುವ ಪತಿವ್ರತೆಯಾದ ಗಂಗೆಯು ಮಹಾಪಾತಕ ನಾಶಕಳು. ಆಕೆಯ ದರ್ಶನಸ್ಪರ್ಶನಧ್ಯಾನಗಳಿಂದ ಸರ್ವೇಷ್ಟಸುಖಗಳನ್ನೂ ಅನುಭವಿಸುವನು.

೫೨. ಮಹಾದೇವನ ಮುಖದಂತೆಯೇ ಮುಖವುಳ್ಳ ರುದ್ರಮಹಾಲಯನೆಂಬ ಹೆಸರಿನ ಮತ್ತೊಬ್ಬ ಕ್ಷೇತ್ರಪಾಲನನ್ನು ನೋಡುವುದರಿಂದ ಯಾತ್ರಿಕನು ಕ್ಷೇತ್ರವಾಸದ ಫಲವನ್ನು ಪಡೆಯುವನು.

ತಸ್ಮಾದುತ್ತರಕೋಟಿಂ ಚ ದೃಷ್ಟ್ವಾ ದೇವಂ ಗಣೇಶ್ವರಂ ।
ದ್ಯೂತಕ್ರೀಡಾ ಭಗವತಾ ಕೃತಾ ಗೋಪಜನೈಃ ಸಹ ॥ ೫೩ ॥

×ನಾನೋಪಹಾಸರೂಪೇಣ ಜಿತಾ ಗೋಪ್ಯೋ ಧನಾನಿ ಚ ।
ಗೋಪೈರಾನೀಯ ತಾಶ್ಚೈವ ಕೃಷ್ಣಾಯ ಚ ನಿವೇದಿತಾಃ ॥ ೫೪ ॥

ಗೋಪಾಲಕೃಷ್ಣಗಮನಂ ಮಹಾಪಾತನಾಶನಂ ।
ಸಮಸ್ತಂ ಬಾಲಚರಿತಂ ಭ್ರಮಣಂ ಚ ಯಥಾಸುಖಂ ॥ ೫೫ ॥

ಕೃತಂ ತತ್ರ ಯಥಾರೂಪಂ ಯದ್ರೂಪಂಚ ಯಥಾತಥಾ ।
ಋಷಿಭಿಃ ಸೇವಿತಂ ಧ್ಯಾತಂ ವಿಷ್ಣೋರ್ಮಹಾತ್ಮ್ಯಮುತ್ತಮಂ ॥ ೫೬ ॥

ತತೋ ಗಚ್ಛೇನ್ಮಹಾತೀರ್ಥಂ ವಿಮಲಂ ಯಮುನಾಂಭಸಿ ।
ಸ್ನಾತ್ವಾ ಪೀತ್ವಾ ಪಿತೄಂಸ್ತರ್ಪ್ಯ ನಾಮ್ನಾ ರುದ್ರಮಹಾಲಯಂ ॥ ೫೭ ॥

೫೩–೫೪. ಬಳಿಕ ಉತ್ತರದಕಡೆಯಲ್ಲಿರುವ ಗಣೇಶ್ವರದೇವನನ್ನು ಸಂದರ್ಶಿಸಬೇಕು. ಭಗವಂತನಾದ ಕೃಷ್ಣನು ಅಲ್ಲಿ ಗೊಲ್ಲರೊಡನೆ ಜೂಜಾಟವನ್ನಾಡಿದನು. ಬಗೆ ಬಗೆಯ ಉಪಹಾಸ್ಯರೂಪದಿಂದ ಅವನು ಗೋಪಿಯರನ್ನೂ ಧನವನ್ನೂ ಗೆದ್ದನು. ಗೊಲ್ಲರು ಗೋಪಿಯರನ್ನು ಕರೆದುಕೊಂಡು ಬಂದು ಕೃಷ್ಣನಿಗೆ ಅರ್ಪಿಸಿದರು.

೫೫–೫೬. ಗೋಪಾಲಕೃಷ್ಣನ ಸನ್ನಿಧಿಗೆ ಹೋಗುವುದು ಮಹಾಪಾತಕನಾಶಕ್ಕೆ ಕಾರಣ. ಕೃಷ್ಣನ ಸಮಸ್ತಬಾಲಚರಿತವನ್ನೂ, ಅವನ ಸಂಚಾರವನ್ನೂ ನಡೆದಂತೆಯೇ ಋಷಿಗಳು ಪ್ರತ್ಯಕ್ಷವಾಗಿ ತಮಗೆ ಸಂತೋಷವಾಗುವಂತೆ ನೋಡಿ, ವಿಷ್ಣುವಿನ ಉತ್ತಮ ಮಹಿಮೆಯನ್ನು ಧ್ಯಾನಿಸಿದರು.

೫೭. ಬಳಿಕ ಯಮುನೆಯ ನೀರಿನಲ್ಲಿ ನಿರ್ಮಲವೂ, ರುದ್ರಮಹಾಲಯವೆಂಬ ಹೆಸರುಳ್ಳುದೂ ಆದ ಮಹಾತೀರ್ಥಕ್ಕೆ ಹೋಗಿ ಸ್ನಾನಾಚಮನಾದಿಗಳನ್ನು ಮಾಡಿ, ಪಿತೃಗಳಿಗೆ ತರ್ಪಣವನ್ನು ಮಾಡಬೇಕು.

× ನಾನಾಪಹಾಸ (ಬೊಂ.) ನಾನಾವಹಾಸ (ಕ.)

ಗಾರ್ಗ್ಯತೀರ್ಥೇ ಮಹಾಪುಣ್ಯೇ ನರಸ್ತತ್ರ ತಥಾಕ್ರಮೇತ್ ।
ಭದ್ರೇಶ್ವರೇ ಮಹಾತೀರ್ಥೇ ಸೋಮತೀರ್ಥೇ ತಥೈವ ಚ ॥
ಸ್ನಾತ್ವಾ ಸೋಮೇಶ್ವರಂ ದೇವಂ ದೃಷ್ಟ್ವಾ ಯಾತ್ರಾಫಲಂ ಲಭೇತ್ ॥೫೮॥

ಸರಸ್ವತ್ಯಾಃ ಸಂಗಮೇ ಚ ದೇವರ್ಷಿಪಿತೃಮಾನವಾನ್ ।
ಸಂತರ್ಪ್ಯ ವಿಧಿವದ್ದತ್ವಾ ವಿಷ್ಣುಸಾಯುಜ್ಯಮಾಪ್ನುಯಾತ್ ॥ ೫೯ ॥

ಘಂಟಾಭರಣಕೇ ತದ್ವತ್ತಥಾ ಗರುಡಕೇಶವೇ ।
ಧಾರಾಲೋಪನಕೇ ತದ್ವದ್ವೈಕುಂಠೇ ಖಂಡವೇಲಕೇ ॥ ೬೦ ॥

*ಮಂದಾಕಿನ್ಯಾಃ ಸಂಯಮನೇ ಅಸಿಕುಂಡೇ ತಥೈವ ಚ ।
ಗೋಪಾನಾಂ ತೀರ್ಥಕೇ ಚೈವ ತಥಾನ್ಯೇ ಮುಕ್ತಿಕೇಶ್ವರೇ ॥
ವೈಲಕ್ಷಗರುಡೇ ಚೈವ ಮಹಾಪಾತಕನಾಶನೇ ॥ ೬೧ ॥

---

೫೮. ಆಮೇಲೆ, ಮಹಾಪುಣ್ಯವಾದ ಗಾರ್ಗ್ಯತೀರ್ಥಕ್ಕೆ ಯಾತ್ರಿಕನು ಹೋಗಬೇಕು. ಅನಂತರ ಭದ್ರೇಶ್ವರ ಮಹಾತೀರ್ಥದಲ್ಲೂ, ಸೋಮ ತೀರ್ಥದಲ್ಲೂ ಸ್ನಾನಮಾಡಿ, ಸೋಮೇಶ್ವರದೇವನನ್ನು ಸಂದರ್ಶಿಸಿ, ಯಾತ್ರೆಯ ಫಲವನ್ನು ಪಡೆಯಬೇಕು

೫೯. ಮುಂದೆ ಸರಸ್ವತೀಸಂಗಮದಲ್ಲೂ ವಿಧಿಯಂತೆ ಬೇಕಾದುದನ್ನು ಕೊಟ್ಟು, ದೇವರ್ಷಿಪಿತೃಗಳನ್ನೂ ಮನುಷ್ಯರನ್ನೂ ಚೆನ್ನಾಗಿ ತೃಪ್ತಿಪಡಿಸಿದರೆ, ಮನುಷ್ಯನು ವಿಷ್ಣುಸಾಯುಜ್ಯವನ್ನು ಪಡೆಯುವನು.

೬೦–೬೧. ಹೀಗೆಯೇ, ಮಹಾಪಾತಕನಾಶಕಗಳಾದ, ಘಂಟಾಭರಣಕ ತೀರ್ಥದಲ್ಲೂ, ಗರುಡಕೇಶವತೀರ್ಥದಲ್ಲೂ, ಧಾರಾಲೋಪನಕತೀರ್ಥದಲ್ಲೂ, ಖಂಡವೇಲಕತೀರ್ಥದಲ್ಲೂ, ಮಂದಾಕಿನಿಯಸಂಯಮನತೀರ್ಥದಲ್ಲೂ, ಅಸಿಕುಂಡತೀರ್ಥದಲ್ಲೂ, ಗೋಪತೀರ್ಥದಲ್ಲೂ, ಮುಕ್ತಿಕೇಶ್ವರ ತೀರ್ಥದಲ್ಲಿಯೂ, ವೈಲಕ್ಷಗರುಡ ತೀರ್ಥದಲ್ಲೂ, ಸ್ನಾನದಾನಾದಿಗಳನ್ನು ಮಾಡಬೇಕು.

---

* ಸಂಯಮನ ತೀರ್ಥವು ಯಮುನಾನದಿಯದೆಂದು ೧೫೩ ನೇ ಅಧ್ಯಾಯದ ೮, ೯ ನೆಯ ಶ್ಲೋಕಗಳಲ್ಲಿದೆ.

ತೀರ್ಥಾನ್ಯೇತಾನಿ ಪುಣ್ಯಾನಿ ಯಥಾವಿಶ್ರಾಂತಿಸಂಜ್ಞಕಂ ।
ಏಷು ತೀರ್ಥೇಷು ಕ್ರಮಿತೋ ಭಕ್ತಿಮಾಂಶ್ಚ ಜಿತೇಂದ್ರಿಯಃ ॥ ೬೨ ॥

ದೇವಾನ್ ಪಿತೄನ್ಸಮಭ್ಯರ್ಚ್ಯ ತತೋ ದೇವಂ ಪ್ರಸಾದಯೇತ್ ॥ ೬೩ ॥

ಅವಿಮುಕ್ತೇಶ ದೇವೇಶ ಸಪ್ತರ್ಷಿಭಿರಭಿಷ್ಟುತ ।
ಮಧುರಾಕ್ರಮಣೀಯಂ ಮೇ ಸಫಲಂ ಸ್ಯಾತ್ತವಾಜ್ಞಯಾ ॥ ೬೪ ॥

ಇತ್ಯೇವಂ ದೇವದೇವೇಶಂ +ವಿಜ್ಞಾಪ್ಯಕ್ಷೇತ್ರಪಂ ಶಿವಂ ।
ವಿಶ್ರಾಂತಿಸಂಜ್ಞಕೇ ಸ್ನಾನಂ ಕೃತ್ವಾ ಚ ಪಿತೃತರ್ಪಣಂ ॥
ಗತಶ್ರಮಂ ಪರಿಕ್ರಮ್ಯ ಸ್ತುತ್ವಾ ದೃಷ್ಟ್ವಾ ಪ್ರಣಮ್ಯ ಚ ॥ ೬೫ ॥

ಸುಮಂಗಲಾಂ ತತೋ ಗಚ್ಛೇದ್ಯಾತ್ರಾಸಿದ್ಧಿಂ ಪ್ರಸಾದಯೇತ್ ।
ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ॥
ಯಾತ್ರೇಯಂ ತ್ವತ್ಪ್ರಸಾದೇನ ಸಫಲಾ ಮೇ ಭವತ್ವಿತಿ ॥ ೬೬ ॥

೬೨–೬೩. ಈ ತೀರ್ಥಗಳೆಲ್ಲವೂ ವಿಶ್ರಾಂತಿಯೆಂಬ ಹೆಸರಿನ ತೀರ್ಥದಂತೆಯೇ ಪುಣ್ಯಪ್ರದವಾದುವು. ಭಕ್ತಿಯುಳ್ಳವನೂ, ಜಿತೇಂದ್ರಿಯನೂ ಆಗಿ ಈ ತೀರ್ಥಗಳಿಗೆ ಹೋಗಿ ಸ್ನಾನಮಾಡಿ, ದೇವತೆಗಳನ್ನೂ, ಪಿತೃಗಳನ್ನೂ ಚೆನ್ನಾಗಿ ಪೂಜಿಸಿ, ಬಳಿಕ ಮುಂದೆ ಹೇಳಿರುವಂತೆ ದೇವನನ್ನು ಸ್ತುತಿಸಿ ಒಲಿಸಿಕೊಳ್ಳಬೇಕು.

೬೪–೬೫. "ಸಪ್ತರ್ಷಿಗಳಿಂದ ಸ್ತುತನಾದ ಅವಿಮುಕ್ತೇಶಾ, ದೇವೇಶಾ, ನಿನ್ನ ಆಜ್ಞೆಯಿಂದ ನನ್ನ ಮಧುರಾಯಾತ್ರೆಯು ಸಫಲವಾಗಲಿ" ಎಂದು ಕ್ಷೇತ್ರಪಾಲನಾದ ದೇವದೇವೇಶಶಿವನಿಗೆ ವಿಜ್ಞಾಪಿಸಿ, ವಿಶ್ರಾಂತಿ ತೀರ್ಥದಲ್ಲಿ ಸ್ನಾನಮಾಡಿ, ಪಿತೃಗಳಿಗೆ ತರ್ಪಣವನ್ನು ಮಾಡಿ, ಗತಶ್ರಮದೇವನನ್ನು ಪ್ರದಕ್ಷಿಣೆ ಮಾಡಿ, ಸ್ತುತಿಸಿ, ಸಂದರ್ಶಿಸಿ, ವಂದಿಸಬೇಕು.

೬೬. ಬಳಿಕ ಸುಮಂಗಲಾಕ್ಷೇತ್ರಕ್ಕೆ ಹೋಗಿ, "ಸರ್ವಮಂಗಳಮಾಂಗಲ್ಯೇ, ಶಿವೇ, ಸರ್ವಾರ್ಥಸಾಧಿಕೇ, ನಿನ್ನ ಪ್ರಸಾದದಿಂದಕ್ಕೆ ಎನ್ನೀ ಯಾತ್ರೆಗೆ ಸತ್ಫಲಂ" ಎಂದು ಶಿವೆಯಲ್ಲಿ ಯಾತ್ರೆಯ ಸಿದ್ಧಿಯನ್ನು ಬೇಡಬೇಕು.

\+ ವಿಜ್ಞಾಯ

ಪಿಪ್ಪಲಾದೇಶ್ವರಂ ದೇವಂ ಪಿಪ್ಪಲಾದೇನ ಪೂಜಿತಂ ।
ವಿಶ್ರಾಂತಸ್ತು ಪರಿಕ್ರಮ್ಯ ತ್ರಾತಸ್ತತ್ರ ಮಹಾತಪಾಃ ॥ ೬೭ ॥

ಉಪಲಿಪ್ಯ ತತಸ್ತಸ್ಯ ಶೀರ್ಷೋಪರಿ ಮಹಚ್ಛಿವಂ ।
ಸ್ವನಾಮ್ನಾ ಚಿಹ್ನಿತಂ ಸ್ಥಾಪ್ಯ ತದಾ ಯಾತ್ರಾಫಲಂ ಲಭೇತ್ ॥ ೬೮ ॥

ಕರ್ಕೋಟಕಂ ತಥಾ ನಾಗಂ ಮಹಾದುಷ್ಟನಿವಾರಣಂ ।
ದೃಷ್ಟ್ವಾ ಗಚ್ಛೇತ್ತತೋ ದೇವೀಂ ಯಾ ಕೃಷ್ಣೇನ ವಿನಿರ್ಮಿತಾ ॥ ೬೯ ॥

ಕಂಸಭೇದಂ ಪ್ರಥಮತಃ ಶ್ರುತಂ ಯತ್ರ ಕುಮಂತ್ರಿತಂ ।
ಸುಖವಾಸಂ ಚ ವರದಂ ಕೃಷ್ಣಸ್ಯಾಕ್ಲಿಷ್ಟಕರ್ಮಣಃ ॥ ೭೦ ॥

ಸುಖಾಸೀನಂ ಚ ತತ್ರೈವ ಸ್ಥಾಪಿತಂ ಶಕುನಾಯ ವೈ ॥ ೭೧ ॥

೬೭-೬೮. ಮಹಾಶಿವನಿಂದ ರಕ್ಷಿತನಾದ ಪಿಪ್ಪಲಾದನೆಂಬ ಮಹಾತಪಸ್ವಿಯು ಆ ಶಿವನ ತಲೆಯಮೇಲೆ ಗಂಧವನ್ನು ಲೇಪಿಸಿ, ತನ್ನ ಹೆಸರನ್ನು ಬರೆದು ಪ್ರತಿಷ್ಠೆಮಾಡಿ, ಪೂಜಿಸಿದನು. ಆ ಪಿಪ್ಪಲಾದೇಶ್ವರನೆಂಬ ದೇವನನ್ನು ವಿಶ್ರಾಂತನಾಗಿ ಪ್ರದಕ್ಷಿಣಮಾಡಿದರೆ ಯಾತ್ರೆಯ ಫಲವನ್ನು ಚೆನ್ನಾಗಿ ಪಡೆಯುವನು.

೬೯. ಆಮೇಲೆ, ಮಹಾ ದುಷ್ಟರನ್ನು ನಿವಾರಣೆಮಾಡುವ ಕರ್ಕೋಟಕ ನಾಗನನ್ನು ನೋಡಿ, ಬಳಿಕ ಕೃಷ್ಣನಿಂದ ನಿರ್ಮಿತಳಾದ ದುರ್ಗಾದೇವಿಯ ಸಮೀಪಕ್ಕೆ ಹೋಗಬೇಕು.

೭೦-೭೧. ಕಂಸನು ಕುಮಂತ್ರಾಲೋಚನೆಯಿಂದ ಮಾಡಿದ್ದ ಭೇದೋಪಾಯವನ್ನು ಕೃಷ್ಣಾದಿಗಳು ಮೊದಲು ಕೇಳಿದೆಡೆಯಲ್ಲಿ ಸುಖಕರವಾದ ಕಾರ್ಯಗಳನ್ನೇ ಮಾಡುವ ಆ ಕೃಷ್ಣನು ಸುಖವಾಗಿ ಮಂಡಿಸಿರುವಂತೆ ಶಕುನಕ್ಕಾಗಿ ಸ್ಥಾಪಿಸಿರುವ, ವರಪ್ರದನಾದ ಸುಖಾವಾಸನೆಂಬ ದೇವನನ್ನೂ ಸಂದರ್ಶಿಸಬೇಕು.

ಸ್ವಾನುಕೂಲಃ ಸ್ವರೋ ಯತ್ರ ಪ್ರವೇಶೇ ದಕ್ಷಿಣಃ ಸ್ವನಃ।
ಧ್ಯಾತಾ ಸ್ವಭಾವೇ ಕೃಷ್ಣೇನ ಸ್ವಸಾ ಸಾತಿಸುಖಪ್ರದಾ ॥ ೭೨ ॥

ಭಯಾರ್ತೇನ ಚ ಕೃಷ್ಣೇನ ಧ್ಯಾತಾ ದೇವೀ ಚ ಚಂಡಿಕಾ ।
ಸ್ಥಾಪಿತಾ ಸಿದ್ಧಿದಾ ತತ್ರ ನಾಮ್ನಾ ಚಾರ್ತಿಹರಾ ತತಃ ॥
ದೃಷ್ಟ್ವಾ ಸರ್ವಾರ್ತಿಹರಣಂ ಯಸ್ಯಾ ದೇವ್ಯಾಃ ಸುಖೀ ನರಃ ॥ ೭೩ ॥

ಅಗ್ರೋತ್ತರಂ ಶುಭವರಂ ಶಕುನಾರ್ಥಂ ಚ ಯಾಚತಃ ।
ಕೃಷ್ಣಸ್ಯ ಕಂಸಘಾತಾರ್ಥಂ ಸಂಭೂತಾ ಸಾ ತಥೋತ್ತರೇ ॥ ೭೪ ॥

ತಾಂ ದೃಷ್ಟ್ವಾ ತು ಮನುಜಃ ಕಾಮಾನ್ ಸರ್ವಾನಿಷ್ಟಾನವಾಪ್ನುಯಾತ್ ॥೭೫॥

ವಜ್ರಾನನಂ ತತೋ ಧ್ಯಾತ್ವಾ ಕೃಷ್ಣೋ ಮಲ್ಲಜಿಘಾಂಸಯಾ ।
ನಿಹತ್ಯ ಮಲ್ಲಾನ್ ಪಶ್ಚಾದ್ಧಿ ವಜ್ರಾನನಮಕಲ್ಪಯತ್ ॥ ೭೬ ॥

---

೭೨. ಕೃಷ್ಣನು ಮಥುರೆಗೆ ಪ್ರವೇಶಿಸುವಾಗ ತನಗೆ ಜಯಸೂಚಕವಾದ ಧ್ವನಿಯು ಸರಳವಾಗಿ ಬಲಗಡೆಯಿಂದ ಕೇಳಿದೆಡೆಯಲ್ಲಿ ತನ್ನ ಸಹೋದರಿಯೂ, ಅತಿಸುಖಪ್ರದಳೂ ಆದ ದುರ್ಗಿಯನ್ನು ತನ್ನ ಮನಸ್ಸಿನಲ್ಲಿ ಸ್ಮರಿಸಿದನು.

೭೩. ಕೃಷ್ಣನು ತಾನು ಭಯಪೀಡಿತನಾಗಿ ಸ್ಮರಿಸಿದ, ಸಿದ್ಧಿಪ್ರದಳಾದ ಆ ಚಂಡಿಕಾದೇವಿಯನ್ನು 'ಆರ್ತಿಹರೆ' ಎಂಬ ಹೆಸರಿನಿಂದ ಅಲ್ಲಿ ಸ್ಥಾಪಿಸಿದನು. ದೇವಿಯ ಸರ್ವಾರ್ತಿಹರಣರೂಪವನ್ನು ನೋಡಿದ ಮನುಷ್ಯನು ಸುಖವನ್ನು ಪಡೆಯುವನು.

೭೪-೭೫. ಮುಂದೆ, ಅತಿಶುಭವನ್ನೂ ಶುಭಶಕುನವನ್ನೂ ಬೇಡುವ ಕೃಷ್ಣನಿಗೆ ಕಂಸನನ್ನು ಸಂಹರಿಸುವುದಕ್ಕೆ ಸಹಾಯಮಾಡಲು ಆ ದೇವಿಯುದಿಸಿದಳು. ಉತ್ತರದಲ್ಲಿರುವ ಅವಳನ್ನು ನೋಡಿ, ಮನುಷ್ಯನು ಸರ್ವೇಷ್ಟಾರ್ಥಗಳನ್ನೂ ಪಡೆಯುವನು.

೭೬. ಕಂಸನ ಜಟ್ಟಿಗಳನ್ನು ಕೊಲ್ಲಬೇಕೆಂಬ ಇಚ್ಛೆಯಿಂದ ಕೃಷ್ಣನು ವಜ್ರಾನನನನ್ನು ಧ್ಯಾನಿಸಿ, ಬಳಿಕ ಆ ಜಟ್ಟಿಗಳನ್ನು ಕೊಂದು, ಆಮೇಲೆ ವಜ್ರಾನನದೇವನನ್ನು ಅಲ್ಲಿ ಕಲ್ಪಿಸಿದನು.

ವಾಂಛಿತಾರ್ಥಫಲಂ ಚಕ್ರೇ ಕೃಷ್ಣಸ್ಯಾಸ್ಯ ಮನೋರಥಾನ್ ।
ಯಸ್ಯೈ ಯಸ್ಯೈ ದೇವತಾಯೈ ತಸ್ಯೈ ತಸ್ಯೈ ದದೌ ಮಖಂ ॥ ೭೭ ॥

ಉಪಯಾಚಿತಂತು ಮಾಂಗಲ್ಯಂ ಸರ್ವಪಾಪಹರಂ ಶುಭಂ ।
ಕೃಷ್ಣಸ್ಯ ಬಾಲಚರಿತಂ ಮಹಾತಕನಾಶನಂ ॥ ೭೮ ॥

ಸೂರ್ಯಂ ತಂ ವರದಂ ದೇವಂ ಮಾಥುರಾಣಾಂ ಕುಲೇಶ್ವರಂ ।
ದೃಷ್ಟ್ವಾ ತತ್ರೈವ ದಾನಂ ಚ ದತ್ವಾ ಯಾತ್ರಾಂ ಸಮಾಪಯೇತ್ ॥ ೭೯ ॥

ಏವಂ ಪ್ರದಕ್ಷಿಣಂ ಕೃತ್ವಾ ನವಮ್ಯಾಂ ಶುಕ್ಲಕೌಮುದೇ ॥
ಸರ್ವಂ ಕುಲಂ ಸಮಾದಾಯ ವಿಷ್ಣುಲೋಕೇ ಮಹೀಯತೇ ॥ ೮೦ ॥

ಕ್ರಮತಃ ಪದವಿನ್ಯಾಸಾದ್ಯಾವಂತಃ ಸರ್ವತೋ ದಿಶಃ ।
ತಾವಂತಃ ಕುಲಸಂಭೂತಾಃ ಸೂರ್ಯೇ ತಿಷ್ಠಂತಿ ಶಾಶ್ವತೇ ॥ ೮೧ ॥

---

೭೭. ವಜ್ರಾನನದೇವನು ಆ ಕೃಷ್ಣನ ಮನೋರಥಗಳನ್ನೆಲ್ಲಾ ಸಫಲವನ್ನಾಗಿ ಮಾಡಿದನು. ಕೃಷ್ಣನು ಎಲ್ಲಾ ದೇವತೆಯರಿಗೂ ಅವರವರಿಗೆ ಬೇಕಾದ ಯಜ್ಞವನ್ನು ಮಾಡಿದನು.

೭೮. ಕೃಷ್ಣನ ಬಾಲ್ಯಚರಿತ್ರೆ ಮಂಗಳೆಯುತವೂ, ಸರ್ವಪಾಪಹರವೂ, ಶುಭವೂ, ಮಹಾ ಪಾತಕನಾಶಕವೂ ಆದುದು.

೭೯. ಬಳಿಕ ಮಥುರೆಯವರ ಕುಲೇಶ್ವರನೂ, ವರದನೂ ಆದ ಸೂರ್ಯದೇವನನ್ನು ಸಂದರ್ಶಿಸಿ, ಅಲ್ಲೇ ದಾನವನ್ನೂ ಕೊಟ್ಟು, ಯಾತ್ರೆಯನ್ನು ಮುಗಿಸಬೇಕು.

೮೦. ದೇವೀ, ಕಾರ್ತಿಕಮಾಸದ ಶುಕ್ಲಪಕ್ಷದ ನವಮಿಯ ದಿನ ಹೀಗೆ ಮಥುರೆಯನ್ನು ಪ್ರದಕ್ಷಿಣಮಾಡುವ ಯಾತ್ರಿಕನು ತನ್ನ ಕುಲದವರನ್ನೆಲ್ಲಾ ಕರೆದುಕೊಂಡು ಹೋಗಿ ವಿಷ್ಣುಲೋಕದಲ್ಲಿ ನೆಲಸುವನು.

೮೧. ಎಲ್ಲಾ ದಿಕ್ಕನ್ನೂ ಸುತ್ತುವಾಗ ಯಾತ್ರಿಕನು ಎಷ್ಟು ಹೆಜ್ಜೆಗಳನ್ನಿಡುವನೋ, ಅಷ್ಟುಜನ ಅವನ ವಂಶೋತ್ಪನ್ನರು ಶಾಶ್ವತವಾದ ಸೂರ್ಯಲೋಕದಲ್ಲಿ ನಿಲ್ಲುವರು.

ಬ್ರಹ್ಮಘ್ನಶ್ಚ ಸುರಾಪಶ್ಚ ಚೋರಾ ಭಗ್ನವ್ರತಾಶ್ಚ ಯೇ ।
ಅಗಮ್ಯಾಗಮನೇ ಶೀಲಾಃ ಕ್ಷೇತ್ರದಾರಾಪಹಾರಕಾಃ ॥ ೬೨ ॥

ಮಥುರಾಕ್ರಮಣಂ ಕೃತ್ವಾ ವಿಪಾಪ್ಮಾನೋ ಭವಂತಿ ತೇ ॥ ೬೩ ॥

ಅನ್ಯದೇಶಾಗತೋ ದೂರಾತ್ಪರಿಭ್ರಮತಿ ಯೋನರಃ ।
ತಸ್ಯ ಸಂದರ್ಶನಾದನ್ಯೇ ಪೂತಾಃ ಸ್ಯುರ್ವಿಗತಾಮಯಾಃ ॥ ೬೪ ॥

ಶ್ರುತಂ ಯೈಶ್ಚ ವಿದೂರಸ್ಥೈಃ ಕೃತಯಾತ್ರಂ ನರಂ ನರೈಃ ।
ಸರ್ವಪಾಪವಿನಿರ್ಮುಕ್ತಾಸ್ತೇ ಯಾಂತಿ ಪರಮಂ ಪದಂ ॥ ೬೫ ॥

ಇತಿ ಶ್ರೀವರಾಹಪುರಾಣೇ ಮಥುರಾಪರಿಕ್ರಮಪ್ರಾದುರ್ಭಾವೋ ನಾಮ ಷಷ್ಟ್ಯಧಿಕಶತತಮೋಧ್ಯಾಯಃ

೬೨-೬೩. ಬ್ರಹ್ಮಹತ್ಯೆಮಾಡಿದವನೂ, ಮದ್ಯಪಾಯಿಯೂ, ಕಳ್ಳರೂ, ವ್ರತಭಂಗವನ್ನು ಪಡೆದವರೂ, ಅಗಮ್ಯಾಗಮನಶೀಲರೂ, ಪರರ ಭೂಮಿಯನ್ನೂ ಸ್ತ್ರೀಯನ್ನೂ ಅಪಹರಿಸುವವರೂ, ಮಥುರೆಯನ್ನು ಪ್ರದಕ್ಷಿಣಮಾಡಿ, ಪಾಪವಿಲ್ಲದವರಾಗುವರು.

೬೪. ದೂರದೇಶದಿಂದ ಮಥುರೆಗೆ ಹೋಗಿ, ಪ್ರದಕ್ಷಿಣೆಮಾಡಿ ಬಂದ ಮನುಷ್ಯನನ್ನು ನೋಡಿದವರೂ ರೋಗರಹಿತರಾಗಿ ಪವಿತ್ರರಾಗುವರು.

೬೫. ಬಹು ದೂರದಲ್ಲಿದ್ದು, ಮಥುರೆಗೆ ಹೋಗಲು ಸಾಧ್ಯವಿಲ್ಲದವರು, ಮಥುರೆಗೆ ಹೋಗಿ ಯಾತ್ರೆಮಾಡಿದ ಮನುಷ್ಯನ ವಿಚಾರವನ್ನು ಕೇಳಿದರೂ ಸರ್ವಪಾಪಗಳನ್ನೂ ಕಳೆದುಕೊಂಡು ಪರಮಪದವನ್ನು ಪಡೆಯುವರು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಯಾತ್ರಿಕನು ಕಾರ್ತಿಕಮಾಸದ ಶುಕ್ಲಪಕ್ಷದ ಅಷ್ಟಮಿಯ ದಿನ ಮಥುರೆಗೆ ಹೋಗಿ ಬೆಳಗಾಗುವುದಕ್ಕೆ ಮುಂಚೆಯೇ ಅನುಕ್ರಮವಾಗಿ ಯಾವ ಯಾವ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತ ಹೇಗೆ ಮಥುರೆಯನ್ನು ಪ್ರದಕ್ಷಿಣಮಾಡಬೇಕೆಂಬುವನ್ನೂ, ಆಯಾ ಕ್ಷೇತ್ರಗಳ ಪ್ರಾಶಸ್ತ್ಯವನ್ನೂ ಯಾತ್ರಾಫಲಗಳನ್ನೂ ಹೇಳುವನು

ಇಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರರವತ್ತನೆಯ ಅಧ್ಯಾಯ.

|| ಶ್ರೀಃ ||

ಏಕಷಷ್ಟ್ಯಧಿಕಶತತಮೋಽಧ್ಯಾಯಃ

ದೇವವನಪ್ರಭಾವಃ

|| ಧರಣ್ಯುವಾಚ ||

ಯೇ ಧರ್ಮವಿಮುಖಾ ಮೂಢಾಃ ಸರ್ವಜ್ಞಾನವಿವರ್ಜಿತಾಃ ।
ಕಾಗತಿಃ ಕೃಷ್ಣ ತೇಷಾಂ ಹಿ ವಿಹಿತಾ ನರಕೇ ಸುರೈಃ || ೧ ||

ಅಭುಕ್ತ್ವಾ ನಾರಕಂ ದುಃಖಂ ಸುಕೃತೈಃ ಪುಣ್ಯದೈರ್ನೃಣಾಂ ।
ಪ್ರಯಾಂತಿ ಕರ್ಮಣಾ ಯೇನ ತಮುಪಾಯಂ ಬ್ರವೀಹಿ ಮೇ || ೨ ||

ನೂರ ಅರವತ್ತೊಂದನೆಯ ಅಧ್ಯಾಯ

ದೇವವನದ ಮಹಿಮೆ.

೧-೨. ಕೃಷ್ಣಾ, ಸ್ವಲ್ಪವೂ ಜ್ಞಾನವಿಲ್ಲದವರೂ, ಧರ್ಮಪರಾಙ್ಮುಖರೂ ಆದ ಮೂಢರಿಗೆ ನರಕದಲ್ಲಿ ಯಾವ ಗತಿಯುಂಟಾಗುವುದು? ಅವರು ನರಕ ದುಃಖವನ್ನು ಅನುಭವಿಸದೆ, ಜ್ಞಾನಿಗಳಾದ ಮನುಷ್ಯರು ಪುಣ್ಯಪ್ರದಗಳಾದ, ಸತ್ಕರ್ಮಗಳಿಂದ ಪಡೆಯುವ ಸ್ವರ್ಗವನ್ನು ಯಾವುದರಿಂದ ಪಡೆಯಬಹುದೋ ಆ ಉಪಾಯ (ಕಾರ್ಯ)ವನ್ನು ನನಗೆ ಹೇಳು.

॥ ಶ್ರೀವರಾಹ ಉವಾಚ ॥

ಸರ್ವಧರ್ಮವಿಹೀನಾನಾಂ ಪುರುಷಾಣಾಂ ದುರಾತ್ಮನಾಂ ।
ನರಕಾರ್ತಿಹರಾ ದೇವೀ ಮಥುರಾ ಪಾಪಘಾತಿನೀ ॥ ೩ ॥

ಮಥುರಾವಾಸಿನೋ ಯೇ ಚ ತೀರ್ಥಾನಾಂ ಚೋಪಸೇವಕಾಃ ।
ವನಾನಾಂ ದರ್ಶಕೋವಾಥ ಮಥುರಾಕ್ರಮಕೋಪಿ ವಾ ॥ ४ ॥

ಏಷಾಂ ಮಧ್ಯೇ ಕೃತಂ ಯೈಶ್ಚ ಏಕಂ ಚ ಶತವೋಜಸಾ ।
ನತೇ ನರಕಭೋಕ್ತಾರಃ ಸ್ವರ್ಗಭಾಜೋ ಭವಂತಿತೇ ॥ ೫ ॥

ಆದೌ ಮಧುವನಂ ನಾಮ ದ್ವಿತೀಯಂ ಕಾಲವೇವ ಚ ।
ವನಂ ಕುಂದವನಂ ಚೈವ ತೃತೀಯಂ ವನಮುತ್ತಮಂ ॥ ೬ ॥

ಚತುರ್ಥಂ ಕಾಮ್ಯವನಂ ವನಾನಾಂ ವನಮುತ್ತಮಂ ।
ಪಂಚಮಂ ವೈ ಬಹುವನಂ ಷಷ್ಠಂ ಭದ್ರವನಂ ಸ್ಮೃತಂ ॥ ೭ ॥

---

೩. ಶ್ರೀವರಾಹ—ದೇವೀ, ಸರ್ವಧರ್ಮವಿಹೀನರೂ, ದುರಾತ್ಮರೂ ಆದ ಮನುಷ್ಯರಿಗೆ ನರಕದುಃಖವನ್ನು ತಪ್ಪಿಸುವುದು ಪಾಪನಾಶಕವಾದ ಮಥುರೆ.

४-೫. ಮಥುರೆಯಲ್ಲಿ ವಾಸಮಾಡುವವರೂ, ಅಲ್ಲಿಯ ತೀರ್ಥದ ಸೇವೆ ಮಾಡುವವರೂ, ಹಿಂದೆ ಹೇಳಿರುವ ವನದರ್ಶನಮಾಡುವವರೂ, ಮಥುರೆಯಲ್ಲಿ ಸಂಚರಿಸುವವರೂ, ಪ್ರದಕ್ಷಿಣಮಾಡುವವರೂ, ವಾಸವೇ ಮೊದಲಾದ ಹಿಂದೆ ಹೇಳಿರುವ ಹಲವು ಕಾರ್ಯಗಳಲ್ಲಿ ಯಾವುದಾದರೊಂದನ್ನು ಚೆನ್ನಾಗಿ ಎಂದರೆ ಮನಃಪೂರ್ವಕವಾಗಿ ಮಾಡುವವರೂ ನರಕವನ್ನು ಅನುಭವಿಸುವುದಿಲ್ಲ. ಸ್ವರ್ಗವನ್ನು ಪಡೆಯುವರು.

೬. ಭೂಮಿ, ವನಗಳಲ್ಲಿ ಮೊದಲನೆಯದು ಮಧುವನ, ಎರಡನೆಯದು ತಾಲವನ, ಉತ್ತಮವಾದ ಕುಂದವನವು ಮೂರನೆಯದು.

೭. ನಾಲ್ಕನೆಯದು ಕಾಮ್ಯಕವನ. ಅದು ವನಗಳಲ್ಲೆಲ್ಲಾ ಉತ್ತಮವಾದುದು. ಐದನೆಯದು ಬಹುವನ. ಆರನೆಯದು ಭದ್ರವನವೆನಿಸಿಕೊಳ್ಳುವುದು.

ಸಪ್ತಮಂ ತು ವನಂ ಭೂಮೇ ಖಾದಿರಂ ಲೋಕವಿಶ್ರುತಂ ।
ಮಹಾವನಂ ಚಾಷ್ಟಮಂ ತು ಸದೈವ ಚ ಮಮ ಪ್ರಿಯಂ ॥ ೮ ॥

ಲೋಹಾರ್ಗಲವನಂ ನಾಮ ನವಮಂ ಪಾತಕಾಪಹಂ ।
ವನಂ ಬಿಲ್ವವನಂ ನಾಮ ದಶಮಂ ದೇವಪೂಜಿತಂ ॥ ೯ ॥

ಏಕಾದಶಂ ತು ಭಾಂಡೀರಂ ದ್ವಾದಶಂ ವೃಂದಕಾವನಂ ।
ಏತಾನಿ ಯೇ ಪ್ರಪಶ್ಯಂತಿ ನ ತೇ ನರಕಭೋಗಿನಃ ॥ ೧೦ ॥

ಯಥಾಕ್ರಮೇಣ ಯೇ ಯಾತ್ರಾಂ ವನಾನಾಂ ಚ ಜಿತೇಂದ್ರಿಯಾಃ ।
ಕರಿಷ್ಯಂತಿ ವರಾರೋಹೇ ಇಂದ್ರಲೋಕಂ ವ್ರಜಂತಿ ತೇ ॥ ೧೧ ॥

ಇತಿ ಶ್ರೀ ವರಾಹಪುರಾಣೇ ಮಥುರಾಮಹಾತ್ಮ್ಯೇ ದೇವವನಪ್ರಭಾವೋ ನಾಮ ಏಕಷಷ್ಟ್ಯಧಿಕಶತತಮೋಽಧ್ಯಾಯಃ

---

೮. ಏಳನೆಯದಾದ ಖಾದಿರವನವು ಲೋಕಪ್ರಸಿದ್ಧವಾದುದು ಎಂಟನೆಯದಾದ ಮಹಾವನವು ನನಗೆ ಯಾವಾಗಲೂ ಪ್ರಿಯವಾದುದು.

೯. ಲೋಹಾರ್ಗಲವೆಂಬ ಒಂಬತ್ತನೆಯ ವನವು ಪಾಪನಾಶಕವಾದುದು. ಹತ್ತನೆಯದಾದ ಬಿಲ್ವವನವು ದೇವತೆಗಳಿಂದ ಪೂಜಿತವಾದುದು.

೧೦. ಹನ್ನೊಂದನೆಯದು ಭಾಂಡೀರವನ ಹನ್ನೆಡನೆಯದು ವೃಂದಕಾವನ, ಈ ವನಗಳನ್ನು ನೋಡುವ ಅಜ್ಞಾನಿಗಳಾದ ಮೂಢರೂ ನರಕವನ್ನನುಭವಿಸುವವರಲ್ಲ.

೧೧. ಉತ್ತಮವನಿತೇ, ಜಿತೇಂದ್ರಿಯರಾಗಿ ಈ ವನಗಳ ಯಾತ್ರೆಯನ್ನೂ ಅನುಕ್ರಮವಾಗಿ ಮಾಡುವವರು ಇಂದ್ರಲೋಕವನ್ನು ಸೇರುವರು.

ಅಧ್ಯಾಯದ ಸಾರಾಂಶ—

ಅಜ್ಞಾನಿಗಳೂ, ಧರ್ಮವಿಮುಖರೂ ಆದ ಮೂಢರು ಸ್ವರ್ಗವನ್ನು ಪಡೆಯಬಹುದಾದ ಸುಲಭೋಪಾಯವನ್ನು ತಿಳಿಸಬೇಕೆಂದು ಕೇಳಿದ ಭೂದೇವಿಗೆ ಶ್ರೀವರಾಹದೇವನು ಮಥುರೆಯ ಅಥವಾ ಮಧುವನಾದಿ ದ್ವಾದಶವನಗಳ ಯಾತ್ರೆಯೇ ಉಪಾಯವೆಂದು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರರವತ್ತೊಂದನೆಯ ಅಧ್ಯಾಯ.

|| ಶ್ರೀಃ ||

ದ್ವಿಷಷ್ಟ್ಯಧಿಕಶತತಮೋಽಧ್ಯಾಯಃ

ಚಕ್ರತೀರ್ಥ ಪ್ರಭಾವಃ

|| ಶ್ರೀವರಾಹ ಉವಾಚ ||

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಚಕ್ರತೀರ್ಥೇ ಪುರಾವೃತ್ತಂ ಮಧುರಾಯಾಸ್ತಥೋತ್ತರೇ || ೧ ||

ಮಹಾಗೃಹೋದಯಂ ನಾಮ ಜಂಬೂದ್ವೀಪಸ್ಯ ಭೂಷಣಂ ।
ತಸ್ಮಿನ್ ಪುರವರೇ ದಿವ್ಯೇ ಬ್ರಾಹ್ಮಣೋ ವಸತೇ ಶುಭೇ || ೨ ||

ಸ ಕನ್ಯಾಂ ಪುತ್ರಮಾದಾಯ ಬ್ರಾಹ್ಮಣೋ ವೇದಪಾರಗಃ ।
ಶಾಲಿಗ್ರಾಮಂ ಮಹಾಪುಣ್ಯಂ ಅಗಚ್ಛದ್ಬ್ರಾಹ್ಮಣೋತ್ತಮಃ || ೩ ||

ನೂರ ಅರವತ್ತೆರಡನೆಯ ಅಧ್ಯಾಯ

ಚಕ್ರತೀರ್ಥ ಪ್ರಭಾವ.

೧. ಶ್ರೀವರಾಹ—ವಸುಂಧರೇ, ಮಧುರೆಗೆ ಉತ್ತರದಲ್ಲಿರುವ ಚಕ್ರತೀರ್ಥದಲ್ಲಿ ನಡೆದ ಬೇರೊಂದು ವಿಚಾರವನ್ನು ಹೇಳುತ್ತೇನೆ. ಕೇಳು.

೨. ಜಂಬೂದ್ವೀಪಕ್ಕೆ ಅಲಂಕಾರವಾದ ಮಹಾಗೃಹೋದಯವೆಂಬ ಒಂದು ಪಟ್ಟಣವಿರುವುದು. ದಿವ್ಯವೂ, ಶುಭವೂ ಆದ ಆ ಪುರವರದಲ್ಲಿ ಒಬ್ಬ ಬ್ರಾಹ್ಮಣನು ವಾಸಮಾಡುತ್ತಿದ್ದನು.

೩. ವೇದಪಾರಂಗತನಾದ ಆ ಬ್ರಾಹ್ಮಣೋತ್ತಮನು ತನ್ನ ಮಗನನ್ನೂ, ಮಗಳನ್ನೂ ಕರೆದುಕೊಂಡು ಮಹಾಪುಣ್ಯವಾದ ಸಾಲಗ್ರಾಮಕ್ಷೇತ್ರಕ್ಕೆ ಹೋದನು.

ತತ್ರಾಸೌ ವಾಸಮಕರೋತ್ಪುಣ್ಯಸೇವೀ ಜಿತೇಂದ್ರಿಯಃ ।
ತೀರ್ಥಸೇವೀ ತಥಾ ಸ್ನಾಯೀ ದೇವತಾ ದರ್ಶನೇ ರತಃ ॥ ೪ ॥

ತತ್ರ ಸಿದ್ಧೇನ ಸಂವಾಸೋ ಬ್ರಾಹ್ಮಣಸ್ಯಾಭವತ್ತದಾ ।
ಸ ಸಿದ್ಧೋ ವಸತೇ ನಿತ್ಯಂ ಕಲ್ಪಗ್ರಾಮೇ ಚ ಸರ್ವದಾ ॥ ೫ ॥

ಗಚ್ಛತ್ಸ ಸರ್ವಕಾಲಂ ತು ಶಾಲಿಗ್ರಾಮೇ ವಸುಂಧರೇ ।
ಸ ತೇನ ಸಹ ಸಂಗತ್ಯ ಕಾನ್ಯಕುಬ್ಜನಿವಾಸಿನಾ ।
ಕಲ್ಪಗ್ರಾಮವಿಭೂತಿಂ ಚ ನಿತ್ಯಕಾಲಮವರ್ಣಯತ್ ॥ ೬ ॥

ಕಲ್ಪಗ್ರಾಮವಿಭೂತಿಂ ಚ ಶ್ರುತ್ವಾ ಸ ಮುನಿಸತ್ತಮಃ ।
ಗಮನೇ *ಬುದ್ಧಿ ಮಕರೋತ್ ತತಃ ಸಿದ್ಧಿಮುವಾಚ ತ ॥ ೭ ॥

ಮಿತ್ರ ತ್ವಂ ವರ್ತಸೇ ಸಿದ್ಧೋ ನಯಸ್ವಾತ್ರ ನಿವೇಶನೇ ॥ ೮ ॥

---

೪. ಪುಣ್ಯಕಾರಿಯೂ, ಜಿತೇಂದ್ರಿಯನೂ ಆದ ಆ ಬ್ರಾಹ್ಮಣನು ಅಲ್ಲಿ ತೀರ್ಥಸೇವೆಯನ್ನು ಮಾಡುತ್ತ, ಸ್ನಾನಮಾಡುತ್ತ ದೇವದರ್ಶನದಲ್ಲಿ ನಿರತನಾಗಿ ವಾಸಮಾಡುತ್ತಿದ್ದನು.

೫. ಅಲ್ಲಿ ಆ ಬ್ರಾಹ್ಮಣನಿಗೆ ಸಿದ್ಧನೊಬ್ಬನೊಡನೆ ಸಹವಾಸವಾಯಿತು. ಆ ಸಿದ್ಧನು ಯಾವಾಗಲೂ ಕಲ್ಪಗ್ರಾಮದಲ್ಲಿ ನೆಲೆಯಾಗಿ ವಾಸಮಾಡುತ್ತಿದ್ದನು.

೬. ವಸುಂಧರೇ, ಆ ಸಿದ್ಧನು ಸಾಲಗ್ರಾಮಕ್ಷೇತ್ರಕ್ಕೆ ಯಾವಾಗಲೂ ಹೋಗುತ್ತ ಕನ್ಯಕುಬ್ಜ (ಮಹೋದಯ) ನಿವಾಸಿಯಾದ ಆ ಬ್ರಾಹ್ಮಣನೊಡನೆ ಸೇರಿ ಕಲ್ಪಗ್ರಾಮದ ಐಶ್ವರ್ಯವನ್ನು ಸರ್ವದಾ ವರ್ಣಿಸುತ್ತಿದ್ದನು.

೭-೮. ಬ್ರಾಹ್ಮಣಮುನಿವರ್ಯನು ಕಲ್ಪಗ್ರಾಮದ ವಿಭೂತಿಯನ್ನು ಕೇಳಿ ಅಲ್ಲಿಗೆ ಹೋಗಲು ಮನಸ್ಸುಳ್ಳವನಾಗಿ ಬಳಿಕ ಸಿದ್ಧನನ್ನು "ಮಿತ್ರನೇ, ನೀನು ಸಿದ್ಧನಾಗಿದ್ದೀಯೆ. ನಮ್ಮನ್ನು ನಿಮ್ಮೂರಿಗೆ ಕರೆದುಕೊಂಡು ಹೋಗು" ಎಂದು ಬೇಡಿದನು.

---

* ಬುದ್ಧಿರುತ್ಪನ್ನಾ

ಬ್ರಾಹ್ಮಣಸ್ಯ ವಚಃ ಶ್ರುತ್ವಾ ಸಿದ್ಧೋ ವಚನಮಬ್ರವೀತ್ ।
ತತ್ರ ಸಿದ್ಧಾಹಿ ಗಚ್ಛಂತಿ ತೇ ನ ತತ್ರ ಗತಿರ್ಭವೇತ್ ॥ ೯ ॥

ಪ್ರಾರ್ಥನಾದುಃಖಲಾಭಂತು ಶೃಣು ವೈ ಬ್ರಾಹ್ಮಣೋತ್ತಮ ।
ಆತ್ಮಯೋಗ ಬಲೇನೈವ ಚಲಿಷ್ಯಾಮಿ ಸಪುತ್ರಕಃ ॥ ೧೦ ॥

ದಕ್ಷಿಣೇ ತು ಕರೇ ಗೃಹ್ಯ ಬ್ರಾಹ್ಮಣಂ ವೇದಪಾರಗಂ ।
ವಾಮೇ ಚೈವ ಕರೇ ಗೃಹ್ಯ ತಸ್ಯ ಪುತ್ರಂ ಮಹಾಮತಿಂ ॥ ೧೧ ॥

ಉತ್ಪಪಾತ ತದಾ ಸಿದ್ಧೋ ಗೃಹೀತ್ವಾ ಬ್ರಾಹ್ಮಣೋತ್ತಮೌ ।
ಕಲ್ಪಗ್ರಾಮೇತು ತೌಮುಕ್ತ್ವಾ ಪಿತಾಪುತ್ರೌ ವಸುಂಧರೇ ॥ ೧೨ ॥

ತತ್ರ ತೌ ವಸತೋ ನಿತ್ಯಂ ಕಲ್ಪಗ್ರಾಮೇ ದ್ವಿಜೋತ್ತಮೌ ।
ತತ್ರ ಕಾಲೇನ ಮಹತಾ ರುಗ್ದೇಹೇ ಚಾಭವತ್ತದಾ ॥ ೧೩ ॥

೯–೧೦. ಬ್ರಾಹ್ಮಣನ ಮಾತನ್ನು ಕೇಳಿ, ಸಿದ್ಧನು "ಅಲ್ಲಿಗೆ ಸಿದ್ಧರು ಹೋಗುವರು. ನಿನಗೆ ಅಲ್ಲಿಗೆ ನಡೆದು ಹೋಗಲು ಆಗುವುದಿಲ್ಲ. ಬ್ರಾಹ್ಮಣೋತ್ತಮನೇ, ನಿನ್ನ ಪ್ರಾರ್ಥನೆಯಿಂದ ನನಗೆ ಕಷ್ಟವಾಗಿದೆ. ಕೇಳು. ನನ್ನ ಯೋಗಬಲದಿಂದಲೇ ಪುತ್ರಸಹಿತನಾದ ನಿನ್ನನ್ನು ನಾನು ಅಲ್ಲಿಗೆ ಕರೆದುಕೊಂಡು ಹೋಗುವೆನು" ಎಂದನು.

೧೧-೧೨. ವಸುಂಧರೇ, ಬಳಿಕ ಸಿದ್ಧನು ತನ್ನ ಬಲಗಯ್ಯಿಂದ ವೇದಪಾರಂಗತನಾದ ಬ್ರಾಹ್ಮಣನನ್ನೂ, ಎಡಗಯ್ಯಿಂದ ಅವನ ಮಗನಾದ ಮಹಾಮತಿಯನ್ನೂ ಹಿಡಿದುಕೊಂಡು, ಆಕಾಶದಲ್ಲಿ ಹಾರಿಹೋಗಿ ಆ ಬ್ರಾಹ್ಮಣೋತ್ತಮರಾದ ತಂದೆಮಕ್ಕಳನ್ನು ಕಲ್ಪಗ್ರಾಮದಲ್ಲಿಳಿಸಿದನು.

೧೩. ಬಳಿಕ ಆ ಬ್ರಾಹ್ಮಣೋತ್ತಮರು ಆ ಕಲ್ಪಗ್ರಾಮದಲ್ಲಿಯೇ ಯಾವಾಗಲೂ ವಾಸಮಾಡುತ್ತಿದ್ದರು. ಬಹುಕಾಲದಮೇಲೆ ವೃದ್ಧಬ್ರಾಹ್ಮಣನಿಗೆ ದೇಹದಲ್ಲಿ ವ್ಯಾಧಿಯುಂಟಾಯಿತು.

ರುಜಾ ತು ಪೀಡ್ಯಮಾನಃ ಸ ದಶಮೀಂ ಚ ದಶಾಂಗತಃ ।
ಮರ್ತುಕಾಮೋ ದ್ವಿಜವರೋ ನಿರೀಕ್ಷ್ಯ ಸುತಮುತ್ತಮಂ ॥ ೧೪ ॥

ಉವಾಚ ಪುತ್ರಂ ಧರ್ಮಾತ್ಮಾ ಮರಣೇ ಸಮುಪಸ್ಥಿತೇ ।
ಗಂಗಾತೀರೇ ಚ ಮಾಂ ಪುತ್ರ ನಯ ತ್ವಂ ಮಾವಿಲಂಬಯ ॥ ೧೫ ॥

ತೇನ ಪುತ್ರೇಣ ನೀತೋಽಸೌ ಗಂಗಾತೀರೇ ಮಹಾಮುನಿಃ ।
ರುರೋದ ಪುತ್ರಸ್ತು ತದಾ ಪಿತೃಸ್ನೇಹ ಸಮನ್ವಿತಃ ॥ ೧೬ ॥

ವೇದಾಧ್ಯಯನಶೀಲಃ ಸ ಪಿತೃಭಕ್ತ್ಯಾನಿಯಂತ್ರಿತಃ ।
ವಸತಸ್ತಸ್ಯ ವೈ ತತ್ರ ಕಾಲೋ ಜಾತೋ ಮಹಾಮತೇಃ ॥ ೧೭ ॥

ಕಲ್ಪಗ್ರಾಮೇ ತದಾ ಸಿದ್ಧಸ್ತಸ್ಯ ಕನ್ಯಾ ಸುಮಧ್ಯಮಾ ।
ವರಮನ್ವೇಷಯಂತೀ ಸಾ ನ ಪ್ರಾಪ್ತಸ್ತು ತಯಾ ಮತಃ ॥ ೧೮ ॥

೧೪–೧೫. ರೋಗಪೀಡಿತನಾದ ಧರ್ಮಾತ್ಮನಾದ ಆ ಬ್ರಾಹ್ಮಣನು ಮರಣಾವಸ್ಥೆಯುಳ್ಳವನಾಗಿ ಪ್ರಾಣಬಿಡಲು ಇಚ್ಛಿಸಿ, ತನ್ನ ಸುಪುತ್ರನನ್ನು ನೋಡಿ "ಮಗೂ, ನನ್ನನ್ನು ಗಂಗಾನದಿಯ ತೀರಕ್ಕೆ ಕರೆದುಕೊಂಡು ಹೋಗು. ತಡಮಾಡಬೇಡ." ಎಂದನು.

೧೬. ಆ ಮಗನು ತಂದೆಯಾದ ಆ ಮಹಾಮುನಿಯನ್ನು ಗಂಗಾತೀರಕ್ಕೆ ಕರೆದುಕೊಂಡು ಹೋಗಿ, ಪಿತೃಪ್ರೀತಿಯಿಂದ ಅತ್ತುಬಿಟ್ಟನು.

೧೭. ವೇದಾಧ್ಯಯನಶೀಲನೂ, ಪಿತೃಭಕ್ತಿಯಿಂದ ಬಂಧಿತನೂ ಆಗಿ, ಅಲ್ಲಿ ವಾಸಮಾಡುತ್ತ ಆ ಮಹಾಮತಿ ಕಾಲವನ್ನು ತಳ್ಳುತ್ತಿದ್ದನು.

೧೮. ಆ ಕಾಲದಲ್ಲಿ ಕಲ್ಪಗ್ರಾಮದಲ್ಲಿದ್ದ ಸಿದ್ಧನ ಮಗಳಾದ ಚೆನ್ನನಡುವಿನ ಕನ್ನೆಯು ವರನನ್ನು ಹುಡುಕುತ್ತಿದ್ದಳಾದರೂ ಅವಳಿಗೆ ಇಷ್ಟನಾದ ವರನು ದೊರೆತಿರಲಿಲ್ಲ.

ಕದಾಚಿದ್ದೈವಯೋಗೇನ *ಕಲ್ಪಗ್ರಾಮ ನಿವಾಸಿನಃ ।
ಗೃಹೇ ಪ್ರವಿಷ್ಟೋ ವಿಪ್ರಃ ಸ ಭೋಜನಾರ್ಥಂ ಮಹಾಮತಿಃ ॥ ೧೯ ॥

ಪೃಷ್ಟೋ ಸೌ ಬ್ರಾಹ್ಮಣೋ ಭದ್ರೇ ಕ್ವ ಭವಾಂಸ್ತ್ವಮಿಹಾಗತಃ ।
ಸ ಸರ್ವಂ ಕಥಯಾಮಾಸ ಯಥಾವೃತ್ತಂ ದೃಢವ್ರತಃ ॥ ೨೦ ॥

ದಿವ್ಯಜ್ಞಾನೇನ ತಂ ಜ್ಞಾತ್ವಾ ಪೂಜಯಾಮಾಸ ತಂ ದ್ವಿಜಃ ।
ಪೂಜಯಿತ್ವಾ ಯಥಾನ್ಯಾಯಂ ಕನ್ಯಾಂ ತಸ್ಮೈ ದದೌ ತದಾ ॥ ೨೧ ॥

ಶ್ವಶುರಸ್ಯ ಗೃಹೇ ನಿತ್ಯಂ ಭೋಜನಂ ಕುರುತೇ ದ್ವಿಜಃ ।
ವಸತೇ ಪಿತೃಸಾನ್ನಿಧ್ಯೇ ಪ್ರತಿಚಾರೀ ಸ ಪುತ್ರಕಃ ॥ ೨೨ ॥

---

೧೯. ಒಂದಾನೊಂದು ದಿನ ದೈವಯೋಗದಿಂದ ಕಲ್ಪಗ್ರಾಮದಲ್ಲಿ ವಾಸಮಾಡುತ್ತಿದ್ದ ಆ ಸಿದ್ಧನಮನೆಗೆ ಮಹೋದಯಪುರದ ಬ್ರಾಹ್ಮಣನ ಪುತ್ರನಾದ ಆ ಮಹಾಮತಿ ಊಟಕ್ಕಾಗಿ ಹೋದನು.

೨೦. ಭದ್ರೇ, ಸಿದ್ಧನು "ನೀನು ಎಲ್ಲಿಂದ ಇಲ್ಲಿಗೆ ಬಂದೆ?" ಎಂದು ಕೇಳಲು, ದೃಢವ್ರತನಾದ ಆ ಬ್ರಾಹ್ಮಣಯುವಕನು ವಿಚಾರವನ್ನೆಲ್ಲಾ ಇದ್ದಂತೆಯೇ ಹೇಳಿದನು.

೨೧. ಸಿದ್ಧನು ದಿವ್ಯಜ್ಞಾನದಿಂದ ಅವನನ್ನು ಅರಿತು, ಸರಿಯಾಗಿ ಪೂಜಿಸಿ, ಶಾಸ್ತ್ರೋಕ್ತವಾಗಿ ತನ್ನ ಮಗಳನ್ನು ಅವನಿಗೆ ಮದುವೆಮಾಡಿಕೊಟ್ಟನು.

೨೨. ಬಳಿಕ ಆ ಬ್ರಾಹ್ಮಣಯುವಕನು ಮಾವನ ಮನೆಯಲ್ಲಿಯೇ ನಿತ್ಯವೂ ಊಟಮಾಡುತ್ತ, ಗಂಗೆಯ ತೀರದಲ್ಲಿದ್ದ ತಂದೆಯ ಸಮೀಪದಲ್ಲಿ ವಾಸಮಾಡುತ್ತ, ಅಲ್ಲಿಗೂ ಇಲ್ಲಿಗೂ ನಿತ್ಯವೂ ತಿರುಗುತ್ತಾ ಇದ್ದನು.

---

* ಕಾನ್ಯಕುಬ್ಜ.

ಕಾಲೇ ಭಗವತಸ್ತಸ್ಯ ಅತಿಕ್ಷೀಣಃ ಪಿತಾ ತದಾ ।
ತಂ ದೃಷ್ಟ್ವಾ ಕ್ಷೀಣತಾಂ ಪ್ರಾಪ್ತಂ ಶ್ವಶುರಂ ಪರ್ಯಪೃಚ್ಛತ ॥ ೨೩ ॥

ಸ್ವಾಮಿನ್ ಪಿತುರ್ಮೇ ಮರಣಂ ಭವಿಷ್ಯತಿ ವದಸ್ವ ಮಾಂ ॥ ೨೪ ॥

ಜಾಮಾತೃವಚನಂ ಶ್ರುತ್ವಾ ಪ್ರಹಸ್ಯ ಶ್ವಶುರೋಽಬ್ರವೀತ್ ।
ಶೂದ್ರಾನ್ನಂ ಭಕ್ಷಿತಂ ತೇನ ನಿತ್ಯಕಾಲಂ ದ್ವಿಜೋತ್ತಮ ॥
ತಸ್ಯ ಚಾಹಾರದೋಷೇಣ ಮೃತ್ಯುರ್ದೂರಂಗತಃ ಪಿತುಃ ॥ ೨೫ ॥

ಪಾದಯೋರ್ವಿದ್ಯತೇ ತಚ್ಚ ಶೂದ್ರಾನ್ನಂ ಚ ಪಿತುಸ್ತವ ॥ ೨೬ ॥

ಜಾನ್ವೋರೂರ್ಧ್ವೇ ನ ವಿದ್ಯೇತ ಶೂದ್ರಾನ್ನಂ ಚ ದ್ವಿಜೋತ್ತಮ ।
ಶೂದ್ರಾನ್ನೇನ ವಿಹೀನಸ್ಯ ತಸ್ಯ ಮೃತ್ಯುರ್ಭವಿಷ್ಯತಿ ॥ ೨೭ ॥

೨೩–೨೪. ಕಾಲ ಕಳೆಯಲಾಗಿ ಭಗವಂತನ ವಿಲಾಸದಿಂದ ಆತನ ತಂದೆ ಬಹು ಕ್ಷೀಣನಾದನು. ಕೃಶನಾದ ಅವನನ್ನು ನೋಡಿ, ಮಹಾಮತಿಯು ತನ್ನ ಮಾವನನ್ನು, "ಮಾವಾ, ನಮ್ಮ ತಂದೆಗೆ ಮರಣವು ಎಂದು ಆಗುವುದೋ ಹೇಳು" ಎಂದು ಕೇಳಿದನು.

೨೫. ಅಳಿಯನ ಮಾತನ್ನು ಕೇಳಿ, ಮಾವನು ನಕ್ಕು, "ದ್ವಿಜೋತ್ತಮನೇ, ನಿಮ್ಮ ತಂದೆಯು ನಿತ್ಯವೂ ಶೂದ್ರಾನ್ನವನ್ನು ತಿಂದನು. ಆ ಆಹಾರದೋಷದಿಂದ ನಿಮ್ಮ ತಂದೆಗೆ ಮರಣವು ದೂರ ಹೋಯಿತು.

೨೬–೨೭. ಬ್ರಾಹ್ಮಣೋತ್ತಮನೇ, ಆ ಶೂದ್ರಾನ್ನವು ಇನ್ನೂ ನಿನ್ನ ತಂದೆಯ ಕಾಲುಗಳಲ್ಲಿದೆ. ಅದು ಮೊಳಕಾಲಿಂದ ಮೇಲಿಲ್ಲ. ಆ ಶೂದ್ರಾನ್ನವನ್ನು ಪೂರ್ಣವಾಗಿ ಕಳೆದುಕೊಂಡಾಗ ಆತನಿಗೆ ಮರಣವುಂಟಾಗುವುದು." ಎಂದನು.

ಶ್ವಶುರಸ್ಯ ವಚಸ್ತಸ್ಯ ಪಿತುರಗ್ರೇ ನ್ಯವೇದಯತ್ ।
ತಸ್ಯ ಪುತ್ರಸ್ಯ ವಚನಂ ಶ್ರುತ್ವಾತ್ಮಾನಂ ವಿಗರ್ಹಯತ್ ॥ ೨೮ ॥

ತತಃ ಪ್ರಭಾತೇ ವಿಮಲೇ ಉದಿತೇ ಚ ದಿವಾಕರೇ ।
ಪಿತುಃ ಸಮೀಪಾತ್ಸ ಗತಃ ಶ್ವಶುರಸ್ಯ ನಿವೇಶನಂ ॥ ೨೯ ॥

ಗತೇ ಪುತ್ರೇ ಪಿತಾ ತಸ್ಯ ರುಜಾ ತ್ವತ್ಯಂತ ಪೀಡಿತಃ ।
ದುಃಖೇನ ಪೀಡಿತಃ ಕ್ಷೀಣೋ ಮರ್ತುಕಾಮೋ ದ್ವಿಜೋತ್ತಮಃ ॥ ೩೦ ॥

ಗಂಗಾತೀರಾತ್ಸಮುತ್ತಿಷ್ಠ ದಿಶಃ ಸರ್ವಾ ವಿಲೋಕಯನ್ ।
ಸನ್ನಿಧಾವುಪಲಂ ದೃಷ್ಟ್ವಾ ಗೃಹೀತಂ ತೇನ ತತ್ಪದಾ ॥ ೩೧ ॥

ಚೂರ್ಣಯಾಮಾಸ ತೌ ಪಾದೌ ಪೀಡಯಾ ಮೋಹಿತೋ ದ್ವಿಜಃ ।
ತತಃ ಪ್ರಾಣಾನ್ ಪರಿತ್ಯಜ್ಯ ಗತೋಽಸೌ ಕಾಲವರ್ತನಂ ॥ ೩೨ ॥

---

೨೮. ಮಾವನ ಮಾತನ್ನು ಕೇಳಿ, ಆತನು ಅದನ್ನು ತನ್ನ ತಂದೆಗೆ ಹೇಳಿದನು. ಆತನು ಮಗನ ಮಾತನ್ನು ಕೇಳಿ, ತನ್ನನ್ನು ನಿಂದಿಸಿಕೊಂಡನು.

೨೯. ಬಳಿಕ ಬೆಳಗಾಗಿ ಸೂರ್ಯನು ಉದಯಿಸಲು ಆ ಮಹಾಮತಿಯು ತಂದೆಯ ಸಮೀಪದಿಂದ ಮಾವನ ಮನೆಗೆ ಹೊರಟು ಹೋದನು.

೩೦–೩೨. ಮಗನು ಹೊರಟು ಹೋಗಲಾಗಿ, ತಂದೆಯು ರೋಗದಿಂದ ಹೆಚ್ಚಾಗಿ ನರಳುತ್ತ, ದುಃಖಪೀಡಿತನಾಗಿ, ಕೃಶನಾಗಿ ಸಾಯಲಿಚ್ಛಿಸಿ, ಗಂಗಾತೀರದಿಂದ ಎದ್ದು, ಎಲ್ಲಾ ಕಡೆಯೂ ನೋಡುತ್ತ ಹತ್ತಿರದಲ್ಲಿದ್ದ ಕಲ್ಲನ್ನು ಕಂಡು, ಅದನ್ನು ಕಾಲಿನಿಂದ ತೆಗೆದುಕೊಂಡು, ಬಾಧೆಯಿಂದ ಅಜ್ಞಾನವುಳ್ಳವನಾಗಿ ಆ ಕಲ್ಲಿನಿಂದ ತನ್ನ ಕಾಲುಗಳನ್ನು ಜಜ್ಜಿಕೊಂಡು ಕಾಲಗತಿಯನ್ನೈದಿದನು.

ಸ್ನಾತ್ವಾ ಭುಕ್ತ್ವಾ ತತೋ ಗತ್ವಾ ಪ್ರೇಕ್ಷ್ಯ ತಂ ಪಿತರಂ ಮೃತಂ ।
ಗತಸಂಜ್ಞಂ ಚ ಪಿತರಂ ದೃಷ್ಟ್ವಾ ಸಾ ರುರುದೇ ಭೃಶಂ ॥ ೩೩ ॥

ರುದಿತ್ವಾ ಸುಚಿರಂ ಕಾಲಂ ಶಾಸ್ತ್ರಂ ದೃಷ್ಟ್ವಾ ವ್ಯಚಿಂತಯತ್ ।
ಸಂಸ್ಕಾರಯೋಗ್ಯತಾ ನಾಸ್ತಿಇತ್ಯೇವಂ ಪುನರಬ್ರವೀತ್ ॥ ೩೪ ॥

ಸರ್ಪ ದಂಷ್ಟ್ರ ಹತಾನಾಂ ಚ ಶೃಂಗಿ ವಿಪ್ರಹತಸ್ಯ ಚ ।
ಆತ್ಮನಸ್ತ್ಯಾಗಿನಶ್ಚೈವ ಆಪಸ್ತಂಬೋಽಬ್ರವೀದಿದಂ ॥ ೩೫ ॥

ಆತ್ಮಘಾತೀ ನರಃ ಪಾಪೋ ನರಕೇ ಪಚ್ಯತೇ ಚಿರಂ ।
ಪ್ರಾಯಶ್ಚಿತ್ತಂ ವಿಧೀಯೀತ ನ ದದ್ಯಾಚ್ಚೋದಕ ಕ್ರಿಯಾಂ ॥ ೩೬ ॥

---

೩೩. ಮಹಾಮತಿ ಸ್ನಾನಮಾಡಿ ಊಟಮಾಡಿ, ಬಳಿಕ ಗಂಗಾತೀರಕ್ಕೆ ಹೋಗಿ, ಜ್ಞಾನವಿಲ್ಲದೆ ಬಿದ್ದಿರುವ ತಂದೆಯನ್ನು ನೋಡಿ, ಹತ್ತಿರ ಹೋಗಿ, ಸತ್ತಿರುವುದನ್ನು ಕಂಡು, ಬಹಳವಾಗಿ ಅತ್ತನು.

೩೪. ಬಹಳ ಹೊತ್ತು ಅತ್ತು, ಶಾಸ್ತ್ರವನ್ನು ನೋಡಿ, ಆಲೋಚಿಸಿ, ' ಸಂಸ್ಕಾರ ಯೋಗ್ಯತೆಯಿಲ್ಲ ' ಎಂದು, ಮತ್ತೆ ಹೇಳಿಕೊಂಡನು.

೩೫. ಸರ್ಪದಷ್ಟರಾಗಿ ಮೃತರಾದವರಿಗೂ, ಕೊಂಬುಳ್ಳ ಪ್ರಾಣಿಗಳಿಂದಲೂ ಬ್ರಾಹ್ಮಣರಿಂದಲೂ ಹತರಾದವರಿಗೂ, ಆತ್ಮಹತ್ಯಮಾಡಿಕೊಂಡವನಿಗೂ ಸಂಸ್ಕಾರಾರ್ಹತೆಯಿಲ್ಲ. ಆಪಸ್ತಂಬರು ಹೀಗೆ ಹೇಳಿರುವರು.

೩೬. " ಆತ್ಮಹತ್ಯಮಾಡಿಕೊಳ್ಳುವ ಪಾಪಿಮನುಷ್ಯನು ನರಕದಲ್ಲಿ ಬಹುಕಾಲ ಬೇಗೆಗೊಳಗಾಗುವನು. ಅವನಿಗೆ ಪ್ರಾಯಶ್ಚಿತ್ತವನ್ನು ಮಾಡಬೇಕು. ಅವನಿಗೆ ತಿಲಜಲಾಂಜಲಿಯನ್ನು ಕೊಡಕೂಡದು "

ಅಹೋ ದೈವಂ ಸುಬಲ ತ್ಪೌರುಷಂ ತು ನಿರರ್ಥಕಂ ।
ತಸ್ಯ ಪುತ್ರೋ ಮಹಾಭಾಗೋ ಗತಃ ಶ್ವಶುರಮಂದಿರಂ ॥ ೩೭ ॥

ತಂ ದೃಷ್ಟ್ವಾ ಶ್ವಶುರೋ ದೀನಮಿದಂ ವಚನಬ್ರವೀತ್ ।
ಬ್ರಹ್ಮಹತ್ಯಾ ತು ತೇ ಜಾತಾ ಗಚ್ಛ ತ್ವಂ ಚ ಯಥೇಪ್ಸಿತಂ ॥ ೩೮ ॥

ಶ್ವಶುರಸ್ಯ ವಚಃ ಶ್ರುತ್ವಾ ಜಾಮಾತಾ ವಾಕ್ಯಮಬ್ರವೀತ್ ।
ನ ಮಯಾ ಬ್ರಾಹ್ಮಣವಧಃ ಕದಾಚಿದಪಿ ಕಾರಿತಃ ।
ಕೇನ ದೋಷೇಣ ಮೇ ಸಿದ್ಧಂ ಬ್ರಹ್ಮಹತ್ಯಾಫಲಂ ಮಹತ್ ॥ ೩೯ ॥

ಜಾಮಾತುರ್ವಚನಂ ಶ್ರುತ್ವಾ ಶ್ವಶುರೋ ವಾಕ್ಯಮಬ್ರವೀತ್ ।
ಪಿತುಸ್ತ್ವಯಾ ವಧೋಪಾಯೋ ವಿನಿರ್ದಿಷ್ಟಶ್ಚ ಪುತ್ರಕ ॥ ೪೦ ॥

ತೇನ ದೋಷೇಣ ವಿಪ್ರರ್ಷೇ ಬ್ರಹ್ಮಹತ್ಯಾಫಲಂ ತವ ॥ ೪೧ ॥

---

೩೭. ಮಹಾಭಾಗ್ಯೋ, " ಅಯ್ಯೋ ! ವಿಧಿ ಬಹು ಬಲವುಳ್ಳದು, ಪೌರುಷವು ನಿರರ್ಥಕ " ಎಂದುಕೊಂಡು ಆ ಮಹಾಮತಿಯು ಮಾವನ ಮನೆಗೆ ಹೊರಟು ಹೋದನು.

೩೮. ಮಾವನು, ದೀನನಾದ ಅವನನ್ನು ನೋಡಿ, ನಿನಗೆ " ಬ್ರಹ್ಮಹತ್ಯೆ ಯುಂಟಾಯಿತು ನೀನು ಬೇಕಾದಲ್ಲಿಗೆ ಹೊರಟು ಹೋಗು " ಎಂದು ಹೇಳಿದನು.

೩೯. ಮಾವನ ಮಾತನ್ನು ಕೇಳಿ ಅಳಿಯನು, " ನಾನು ಎಂದೂ ಬ್ರಾಹ್ಮಣ ವಧೆಯನ್ನು ಮಾಡಿಸಿಲ್ಲ. ಯಾವ ತಪ್ಪಿನಿಂದ ನನಗೆ ಕ್ರೂರವಾದ ಬ್ರಹ್ಮಹತ್ಯೆಯ ದುಷ್ಫಲವೋ ? " ಎಂದನು.

೪೦-೪೧. ಅಳಿಯನ ಮಾತನ್ನು ಕೇಳಿ, ಮಾವನು " ಮಗೂ ನೀನು ನಿನ್ನ ತಂದೆಗೆ ಪ್ರಾಣಬಿಡುವ ಉಪಾಯವನ್ನು ತೋರಿಸಿಕೊಟ್ಟೆ. ಬ್ರಹ್ಮರ್ಷೀ, ಆ ತಪ್ಪಿನಿಂದ ನಿನಗೆ ಬ್ರಹ್ಮಹತ್ಯೆಯ ದೋಷ.

ಆಸನ್ನಶಯನಾಚ್ಛ್ಯೈನಂ ಭೋಜನಾತ್ಕಥನಾದಿಷು ।
ಸಂವತ್ಸರೇಣ ಪತತಿ ಪತಿತೇನ ಸಹಾಚರನ್ ॥
ತಸ್ಮಾನ್ಮಮಗೃಹೇ ನಾಸ್ತಿ ವಾಸಸ್ತೇ ಹಿ ದ್ವಿಜೋತ್ತಮ ॥ ೪೨ ॥

ಶ್ವಶುರಸ್ಯ ವಚಃ ಶ್ರುತ್ವಾ ಜಾಮಾತಾ ವಾಕ್ಯಮಬ್ರವೀತ್ ।
ಕಿಂಮಯಾ ವದ ಕರ್ತವ್ಯಂ ತ್ವಯಾ ತ್ಯಕ್ತೇನ ಸುವ್ರತ ॥ ೪೩ ॥

ತಸ್ಯ ತದ್ವಚನಂ ಶ್ರುತ್ವಾ ಬ್ರಾಹ್ಮಣಃ ಸಂಶಿತವ್ರತಃ ।
ಕಲ್ಪಗ್ರಾಮಂ ಪರಿತ್ಯಜ್ಯ ಮಥುರಾಂ ಯಾಹಿ ಸುವ್ರತ ॥ ೪೪ ॥

ನಾನ್ಯತ್ರ ತವ ಸಂಶುದ್ಧಿಃ ಕದಾಚಿತ್ಪಿತೃಘಾತಿನಃ ॥ ೪೫ ॥

---

೪೨. ಬ್ರಹ್ಮಹತ್ಯೆಮಾಡಿ ಪತಿತನಾದವನಿಗೆ ಹತ್ತಿರವಾಗಿ ಮಲಗುವುದರಿಂದಲೂ, ಅವನ ಜತೆಯಲ್ಲಿ ಭೋಜನಮಾಡುವುದರಿಂದಲೂ, ಒಂದು ವರ್ಷಕಾಲ ಸಂಭಾಷಣೆ ಮೊದಲಾದುವುಗಳಲ್ಲಿ ಹತ್ತಿರ ಸೇರುವುದರಿಂದಲೂ ಮನುಷ್ಯನು ಪಾಪದಲ್ಲಿ ಬೀಳುವನು. ದ್ವಿಜೋತ್ತಮನೇ, ಅದುದರಿಂದ ನನ್ನ ಮನೆಯಲ್ಲಿ ನಿನಗೆ ವಾಸವಿಲ್ಲ" ಎಂದು ಹೇಳಿದನು.

೪೩. ಮಾವನ ಮಾತನ್ನು ಕೇಳಿ, ಅಳಿಯನು "ಸುವ್ರತನೇ, ನಿನ್ನಿಂದ ಪರಿತ್ಯಕ್ತನಾದ ನಾನು ಮಾಡಬೇಕಾದುದೇನು ? ಹೇಳು" ಎಂದನು.

೪೪–೪೫. ಅವನ ಮಾತನ್ನು ಕೇಳಿ, ತೀಕ್ಷ್ಣವ್ರತಿಯಾದ ಆ ಬ್ರಾಹ್ಮಣನು "ಸುವ್ರತನೇ ಈ ಕಲ್ಪಗ್ರಾಮವನ್ನು ಬಿಟ್ಟು ಮಥುರೆಗೆ ಹೋಗು. ತಂದೆಯನ್ನು ಕೊಂದ ನಿನಗೆ ಬೇರೆ ಎಲ್ಲೂ ಎಂದಿಗೂ ಪರಿಶುದ್ಧತೆಯುಂಟಾಗುವುದಿಲ್ಲ." ಎಂದನು.

ಕಲ್ಪಗ್ರಾಮಂ ಪರಿತ್ಯಜ್ಯ ತತ್ ಕ್ಷಣಾದೇವ ನಿ ಸ್ಸೃತಃ ।
ತತಃ ಕಾಲೇನ ಮಹತಾ ಸಂಪ್ರಾಪ್ತೋ ಮಧುರಾಂ ಪುರೀಂ ॥
ಬ್ರಾಹ್ಮಣೇಭ್ಯೋ ಬಹಿಃಸ್ಥಾನೇ ನಿತ್ಯಂತು ವಸತೇ ದ್ವಿಜಃ ॥ ೪೬ ॥

ಕನ್ಯಾಪುರನಿವಾಸೀ ತು ಕುಶಿಕೋಥ ನರಾಧಿಪಃ ।
ತಸ್ಯ ಸತ್ರಂ ನಿತ್ಯಕಾಲಂ ಮಧುರಾಯಾಂ ಪ್ರವರ್ತತೇ ॥ ೪೭ ॥

ದ್ವೇ ಸಹಸ್ರೇ ತು ವಿಪ್ರಾಣಾಂ ತಸ್ಯ ಸತ್ರೇ ಚ ಭುಂಜತೇ ।
ಬ್ರಾಹ್ಮಣಾನಾಂ ಸದೋಚ್ಛಿಷ್ಟಂ ತತಶ್ಚೋದ್ಧರತೇ ತು ಸಃ ॥ ೪೮ ॥

ಚಕ್ರತೀರ್ಥಂ ಸಮಾಸಾದ್ಯ ಸ್ನಾನಂ ಚ ಕುರುತೇ ಸದಾ ।
ನ ಭಿಕ್ಷಾಂ ಕುರುತೇ ತತ್ರ ಭೋಜನಾರ್ಥಂ ನ ಗಚ್ಛತಿ ॥ ೪೯ ॥

---

೪೬. ಅಳಿಯನಾದ ಮಹಾಮತಿ ಒಡನೆಯೇ ಕಲ್ಪಗ್ರಾಮವನ್ನು ಬಿಟ್ಟು ಹೊರಟು, ಬಹುದಿನಗಳಮೇಲೆ ಮಧುರಾಪುರಿಯನ್ನು ಸೇರಿದನು. ಅಲ್ಲಿ ಆತನು ಬ್ರಾಹ್ಮಣರ ವಾಸಸ್ಥಾನದ ಹೊರಗೆ ಬೇರೆಡೆಯಲ್ಲಿ ಯಾವಾಗಲೂ ವಾಸಮಾಡುತ್ತಿದ್ದನು.

೪೭–೪೮. ಆಗ ಕನ್ಯಾಪುರನಿವಾಸಿಯಾದ ಕುಶಿಕರಾಜನು ಮಧುರೆಯಲ್ಲಿ ನಿತ್ಯವೂ ಸತ್ರವನ್ನು ನಡೆಯಿಸುತ್ತಿದ್ದನು. ಆ ಸತ್ರದಲ್ಲಿ ನಿತ್ಯವೂ ಎರಡುಸಾವಿರ ಜನ ಬ್ರಾಹ್ಮಣರು ಭೋಜನಮಾಡುತ್ತಿದ್ದರು. ಪಿತೃಹತ್ಯಾಪಾಪಕ್ಕೊಳಗಾಗಿದ್ದ ಆ ಬ್ರಾಹ್ಮಣನು ಸತ್ರದಲ್ಲಿ ಊಟಮಾಡಿದ ಬ್ರಾಹ್ಮಣರ ಎಂಜಲೆಲೆಯನ್ನು ಎತ್ತಿ ಹಾಕುತ್ತಿದ್ದನು.

೪೯. ಆತನು ನಿತ್ಯವೂ ಚಕ್ರತೀರ್ಥಕ್ಕೆ ಹೋಗಿ ಸ್ನಾನಮಾಡುತ್ತಿದ್ದನು. ಸತ್ರಕ್ಕೆ ಭೋಜನಕ್ಕೆ ಹೋಗುತ್ತಿರಲಿಲ್ಲ. ಊಟಕ್ಕಾಗಿ ಭಿಕ್ಷವನ್ನೂ ಮಾಡುತ್ತಿರಲಿಲ್ಲ.

ತತಃ ಕಾಲೇನ ಮಹತಾ ಚಿಂತಾಭೂಚ್ಛ್ವಶುರಸ್ಯ ಚ |
ದಿವ್ಯಜ್ಞಾನೇನ ತತ್ಸರ್ವಂ ಜ್ಞಾತ್ವಾ ಜಾಮಾತೃಚೇಷ್ಟಿತಮ್ || ೫೦ ||

ಸ್ವಾಂ ಸುತಾಂ ಚೋದಯಾಮಾಸ ಗಚ್ಛ ತಾಂ ಮಧುರಾಂ ಪುರೀಮ್ ।
ಭೋಜನಂ ಗೃಹ್ಯ ತತ್ರೈವ ಗಚ್ಛ ತ್ವಂ ಭರ್ತೃಸನ್ನಿಧೌ || ೫೧ ||

*ದಿವ್ಯಯಾನೇನ ಚ ತದಾ ನಿತ್ಯಂ ಸಾ ಭರ್ತೃಸನ್ನಿಧೌ ।
ದಿನೇ ದಿನೇ ಗಚ್ಛತಿ ಸಾ ಭರ್ತೃಭೋಜನ ಕಾರಣಾತ್ || ೫೨ ||

ದಿವಸಸ್ಯಾವಸಾನೇ ತು ಭೋಜನಂ ಗೃಹ್ಯ ಗಚ್ಛತಿ |
ಭೋಜನಂ ಕುರುತೇ ನಿತ್ಯಂ ಪ್ರಿಯಾದತ್ತಂ ವಸುಂಧರೇ || ೫೩ ||

ಪಾತ್ರಂ ನಿಕ್ಷಿಪ್ಯ ಕುಂಡೇ ತು ಸತ್ರೇ ವಸತಿ ಸರ್ವದಾ |
ಏವಂ ನಿವಸತಸ್ತಸ್ಯ ವರ್ಷಾರ್ಧಂತು ಗತಂ ತದಾ || ೫೪ ||

೫೦–೫೧ ಬಹುದಿನಗಳಮೇಲೆ ಆತನ ಮಾವನಿಗೆ ಆವನ ಯೋಚನೆಯುಂಟಾಯಿತು. ದಿವ್ಯಜ್ಞಾನದಿಂದ ಅಳಿಯನ ಆಕಾರ್ಯಗಳೆಲ್ಲವನ್ನೂ ಅರಿತು ತನ್ನ ಮಗಳಿಗೆ "ಊಟಕ್ಕೆ ತೆಗೆದುಕೊಂಡು ಮಧುರೆಗೆ ನಿನ್ನ ಪತಿಯ ಹತ್ತಿರಕ್ಕೆ ಹೋಗು." ಎಂದು ಬೋಧಿಸಿದನು.

೫೨–೫೩. ವಸುಂಧರೇ, ಬಳಿಕ ಆಕೆ ದಿವ್ಯಯಾನದಿಂದ ನಿತ್ಯವೂ ಗಂಡನ ಸಮೀಪಕ್ಕೆ ಅವನ ಭೋಜನಕ್ಕಾಗಿ ಆಹಾರವನ್ನು ತೆಗೆದುಕೊಂಡು ಸಂಜೆಯಾಗುತ್ತಲೂ ಹೋಗುತ್ತಿದ್ದಳು. ಆತನು ಪ್ರಿಯೆ ತಂದು ಪಾತ್ರೆಯಲ್ಲಿ ಕೊಟ್ಟುದನ್ನು ನಿತ್ಯವೂ ಊಟಮಾಡುತ್ತಿದ್ದನು.

೫೪. ಆತನು ತನ್ನ ಆಹಾರದ ಪಾತ್ರೆಯನ್ನು ಕುಂಡದಲ್ಲಿಟ್ಟು. ಯಾವಾಗಲೂ ಸತ್ರದಲ್ಲಿ ವಾಸಮಾಡುವನು. ಹೀಗಿರುತ್ತಿರಲಾಗಿ ಅರ್ಧವರ್ಷವು ಕಳೆಯಿತು.

---

* ದಿವ್ಯಜ್ಞಾನೇನ

ತತಃ ಕಾಲೇನ ಮಹತಾ ತೈಃ ಪೃಷ್ಟಃ ಸ ದ್ವಿಜೋತ್ತಮಃ ।
ಕುತ್ರ ಸಂತಿಷ್ಠಸೇ ನಿತ್ಯಂ ಭೋಜನಂ ಕುರುಷೇ ಕುತ ॥ ೫೫ ॥

ಕಥಯಾಮಾಸ ವೃತ್ತಾಂತಂ ತಂ ಸರ್ವಂಚಾತ್ಮನೋ ಹಿ ಸಃ ॥ ೫೬ ॥

ತೇ ಶ್ರುತ್ವಾ ಬ್ರಾಹ್ಮಣಾಃ ಸರ್ವೇ ಏಕೀಭೂತಾ ವಸುಂಧರೇ ।
ಇದಮೂಚುಸ್ತತೋ ವಿಪ್ರಾ ಶುದ್ಧೋಽಸೀತಿ ದ್ವಿಜಂ ಪ್ರತಿ ॥ ೫೭ ॥

ಚಕ್ರತೀರ್ಥಪ್ರಭಾವೇಣ ಪಾಪಾನ್ಮುಕ್ತಃ ಸನಾತನಃ ।
ಅಸ್ಮಾಕಂ ವದನಾಚ್ಚೈವ ಪುನಃ ಸಿದ್ಧೋಽಸಿ ವೈ ದ್ವಿಜ ॥ ೫೮ ॥

ಬ್ರಾಹ್ಮಣಾನಾಂ ವಚಃ ಶ್ರುತ್ವಾ ಸ ದ್ವಿಜೋ ಹೃಷ್ಟಮಾನಸಃ ।
ಸ್ನಾನಾರ್ಥಂ ತು ತತಃ ಸ್ಥಾನಾಚ್ಚಕ್ರತೀರ್ಥಂ ಸಮಾಗತಃ ॥ ೫೯ ॥

೫೫–೫೬. ಬಹುಕಾಲದಮೇಲೆ ಆ ಬ್ರಾಹ್ಮಣರು ಬ್ರಾಹ್ಮಣೋತ್ತಮನಾದ ಮಹಾಮತಿಯನ್ನು "ನೀನು ಎಲ್ಲಿ ವಾಸಮಾಡುತ್ತೀಯೆ? ಎಲ್ಲಿ ಹೇಗೆ ಊಟಮಾಡುತ್ತೀಯೆ?" ಎಂದು ಕೇಳಿದರು. ಆತನು ತನ್ನ ವೃತ್ತಾಂತವೆಲ್ಲವನ್ನೂ ಅವರಿಗೆ ಹೇಳಿದನು.

೫೭–೫೮. ವಸುಂಧರೇ, ಇದನ್ನು ಕೇಳಿ, ಆ ಬ್ರಾಹ್ಮಣರು ಎಲ್ಲರೂ ಒಟ್ಟಿಗೆ ಸೇರಿ, ಆತನಿಗೆ ಹೀಗೆ ಹೇಳಿದರು. "ಸನಾತನನಾದ ನೀನು ಚಕ್ರತೀರ್ಥದ ಪ್ರಭಾವದಿಂದಲೇ ಪಾಪದಿಂದ ವಿಮುಕ್ತನಾಗಿರುವೆ. ದ್ವಿಜನೇ, ನಮ್ಮ ಮುಖದಿಂದಲೂ ನೀನು ಮತ್ತೆ ಸಿದ್ಧನಾಗಿದ್ದೀಯೆ."

೫೯. ಬ್ರಾಹ್ಮಣರ ಮಾತನ್ನು ಕೇಳಿ ಸಂತೋಷಗೊಂಡ ಮನಸ್ಸುಳ್ಳ ಆ ಬ್ರಾಹ್ಮಣನು ಸ್ನಾನಕ್ಕಾಗಿ ಆ ಸ್ಥಳದಿಂದ ಚಕ್ರತೀರ್ಥಕ್ಕೆ ಬಂದನು.

ಗತೇ ತಸ್ಮಿಂಸ್ತಸ್ಯ ಭಾರ್ಯಾ ಭಿಕ್ಷಾಮಾದಾಯ ಚಾಗತಾ ।
ಸಾತು ಹೃಷ್ಟೇನ ಮನಸಾ ಭರ್ತಾರಂ ವಾಕ್ಯಮಬ್ರವೀತ್ ॥
ಭೋಜನಂ ಕುರು ಮೇ ದತ್ತಂ ಹತ್ಯಾಂ ಲಕ್ಷ್ಯಾಮಿ ತೇ ಗತಾಮ್ ॥ ೬೦ ॥

ಪ್ರಿಯಾವಚನಮಾಕರ್ಣ್ಯ ಭರ್ತಾ ವಚನಮಬ್ರವೀತ್ ।
ಪುನರಾಭಾಷಿತಂ ಬ್ರೂಹಿ ಯದಿದಂ ಭಾಷಿತಂ ತ್ವಯಾ ॥ ೬೧ ॥

ಭರ್ತುರ್ವಚನಮಾಕರ್ಣ್ಯ ಪತ್ನೀ ವಚನಮಬ್ರವೀತ್ ।
ನತ್ವಂ ಸಂಭಾಷಿತಃ ಪೂರ್ವಂ ಬ್ರಹ್ಮಹತ್ಯಾಸಮನ್ವಿತಃ ॥ ೬೨ ॥

ಚಕ್ರತೀರ್ಥಪ್ರಭಾವೇಣ ಮುಕ್ತೋऽಸಿ ದ್ವಿಜಸತ್ತಮ ।
ಉತ್ತಿಷ್ಠ ಕಾಂತ ಗಚ್ಛಾವ ಕಲ್ಪಗ್ರಾಮಂ ಸುಶೋಭಿತಮ್ ॥ ೬೩ ॥

---

೬೦. ಅವನು ಅಲ್ಲಿಗೆ ಬರಲು ಆತನ ಹೆಂಡತಿಯೂ ಊಟಕ್ಕೆ ತೆಗೆದು ಕೊಂಡು ಅಲ್ಲಿಗೆ ಬಂದಳು. ಆಕೆ ಸಂತುಷ್ಟವಾದ ಮನಸ್ಸಿನಿಂದ ಪತಿಯನ್ನು ಕುರಿತು, "ನಾನು ಬಡಿಸುತ್ತೇನೆ. ಊಟಮಾಡು. ನಿನ್ನ ಬ್ರಹ್ಮಹತ್ಯೆಯು ಹೋಯಿತೆಂದು ಕಾಣುತ್ತದೆ" ಎಂದು ಹೇಳಿದಳು.

೬೧. ಪ್ರಿಯೆಯ ಮಾತನ್ನು ಕೇಳಿ ಪ್ರಿಯನು "ನೀನು ಹೇಳಿದುದನ್ನು ಮತ್ತೆ ಹೇಳು! ನೀನು ಏನು ಹೇಳಿದೆ?" ಎಂದನು.

೬೨-೬೩. ಪತಿಯ ಮಾತನ್ನು ಕೇಳಿ ಪತ್ನಿಯು, "ಮುಂಚೆ ಬ್ರಹ್ಮಹತ್ಯೆ ಯಿಂದ ಕೂಡಿದ ನಿನ್ನನ್ನು ನಾನು ಮಾತನಾಡಿಸಿರಲಿಲ್ಲ. ಬ್ರಾಹ್ಮಣೋತ್ತಮನೇ, ಚಕ್ರತೀರ್ಥದ ಮಹಿಮೆಯಿಂದ ನೀನು ಆ ಪಾಪದಿಂದ ವಿಮುಕ್ತನಾಗಿದ್ದೀಯೆ. ಕಾಂತ! ಏಳು. ಬಹು ಸುಂದರವಾದ ಕಲ್ಪಗ್ರಾಮಕ್ಕೆ ಹೋಗೋಣ" ಎಂದಳು

ತಯೋಸಾರ್ಧಂ ಜಗಮಾಥ ಕಲ್ಪಗ್ರಾಮಂ ದ್ವಿಜೋತ್ತಮಃ ।
ಭದ್ರೇಶ್ವರನಿಮಿತ್ತಂ ಹಿ ದ್ರವ್ಯಂ ಚ ಕಥಿತಂ ಶುಭಂ ॥ ೬೪ ॥

ನಿತ್ಯಂ ಚ ಭುಂಜತೇ ಯತ್ರ ದ್ರವ್ಯಪಾತ್ರಸಮರ್ಪಿತಂ ॥ ೬೫ ॥

ದೃಷ್ಟ್ವಾ ಭದ್ರೇಶ್ವರಂ ದೇವಂ ಚಕ್ರತೀರ್ಥೇ ಫಲಂ ಲಭೇತ್ ।
ಕಲ್ಪಗ್ರಾಮಾಚ್ಛತಗುಣಂ ಚಕ್ರತೀರ್ಥಂ ವಸುಂಧರೇ ॥ ೬೬ ॥

ಅಹೋರಾತ್ರೋಪವಾಸೇನ ಮುಚ್ಯತೇ ಬ್ರಹ್ಮಹತ್ಯಯಾ ।
ಕಲ್ಪಗ್ರಾಮೇಣ ಕಿಂ ತಸ್ಯ ವಾರಾಣಸ್ಯಾಂ ಚ ವಾ ಶುಭೇ ॥ ೬೭ ॥

೬೩–೬೫. ಆ ಬ್ರಾಹ್ಮಣೋತ್ತಮನು ಆಕೆಯೊಡನೆ ಕಲ್ಪಗ್ರಾಮಕ್ಕೆ ಹೊರಟುಹೋದನು. ಅವನು ನಿತ್ಯವೂ ತನ್ನ ಪ್ರಿಯೆ ಪಾತ್ರೆಯಲ್ಲಿ ತಂದು ಕೊಟ್ಟ ಆಹಾರವನ್ನು ಯಾರ ಸನ್ನಿಧಿಯಲ್ಲಿ ಊಟಮಾಡುತ್ತಿದ್ದನೋ ಆ ಭದ್ರೇಶ್ವರನಿಗೆ ಶುಭದ್ರವ್ಯವನ್ನೂ ಅರ್ಪಿಸುವುದಾಗಿ ವಿಜ್ಞಾಪಿಸಿದನು.

೬೬. ವಸುಂಧರೇ, ಯಾತ್ರಿಕನು ಚಕ್ರತೀರ್ಥದಲ್ಲಿ ಭದ್ರೇಶ್ವರದೇವನ ದರ್ಶನವನ್ನು ಮಾಡಿ, ಆ ತೀರ್ಥದ ಫಲವನ್ನು ಪಡೆಯುವನು. ಚಕ್ರತೀರ್ಥವು ಕಲ್ಪಗ್ರಾಮದ ನೂರರಷ್ಟು ಗುಣವುಳ್ಳದು.

೬೭. ಆ ಚಕ್ರತೀರ್ಥದಲ್ಲಿ ಒಂದು ದಿನ ಉಪವಾಸಮಾಡುವುದರಿಂದ ಮನುಷ್ಯನು ಬ್ರಹ್ಮಹತ್ಯೆಯಪಾಪದಿಂದಲೂ ವಿಮುಕ್ತನಾಗುವನು. ಅಂತಹವನಿಗೆ ಕಲ್ಪಗ್ರಾಮದಿಂದಲಾಗಲಿ ಶುಭವಾದ ಕಾಶಿಯಿಂದಾಗಲಿ ಆಗಬೇಕಾದುದೇನು !

ಮಥುರಾಂ ತು ಸಮಾಸಾದ್ಯ ಯಃ ಕಶ್ಚಿನ್ಮ್ರಿಯತೇ ಭುವಿ ।
ಅಪಿ ಕೀಟಃ ಪತಂಗೀವಾ ಜಾಯತೇ ಸ ಚತುರ್ಭುಜಃ ॥ ೬೮ ॥

ಇತಿ ಶ್ರೀವರಾಹಪುರಾಣೇ ಮಥುರಾಮಾಹಾತ್ಮ್ಯೇ ಚಕ್ರತೀರ್ಥಪ್ರಭಾವೋ ನಾಮ ದ್ವಿಷಷ್ಟ್ಯಧಿಕ ಶತತಮೋಽಧ್ಯಾಯಃ

---

೬೮. ಭೂಮಿಯಲ್ಲಿ, ಮಥುರೆಗೆ ಹೋಗಿ ಅಲ್ಲಿ ಪ್ರಾಣಬಿಡುವ ಯಾವ ಮನುಷ್ಯನಾದರೂ, ಹುಳುವಾದರೂ, ಹಕ್ಕಿಯಾದರೂ ಚತುರ್ಭುಜರಾಗುವರು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಥುರೆಯಲ್ಲಿರುವ ಚಕ್ರತೀರ್ಥಪ್ರಭಾವ ವನ್ನು ತಿಳಿಸುವುದಕ್ಕಾಗಿ ಆ ತೀರ್ಥದಲ್ಲಿ ಸ್ನಾನಮಾಡಿದುದರಿಂದ ಬ್ರಹ್ಮ ಹತ್ಯೆಯನ್ನು ಕಳೆದುಕೊಂಡ ಕಾನ್ಯಕುಬ್ಜದ ಬ್ರಾಹ್ಮಣನ ಕಥೆಯನ್ನು ವಿವರವಾಗಿ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರರವತ್ತೆರಡನೆಯ ಅಧ್ಯಾಯ

॥ ಶ್ರೀಃ ॥

ತ್ರಿಷಷ್ಟ್ಯಧಿಕಶತತಮೋಽಧ್ಯಾಯಃ
ಕಪಿಲ ವರಾಹಮಾಹಾತ್ಮ್ಯಂ

॥ ಶ್ರೀವರಾಹ ಉವಾಚ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ವೈಕುಂಠತೀರ್ಥಮಾಸಾದ್ಯ ಯದ್ವೃತ್ತಂ ಹಿ ಪುರಾತನಂ ॥ ೧ ॥

ಮಿಥಿಲಾ ಯಾ ಪುರೀ ರಮ್ಯಾ ಜನಕೇನ ಚ ಪಾಲಿತಾ ।
ಮಿಥಿಲಾವಾಸಿನೋ ಲೋಕಾಸ್ತೀರ್ಥಯಾತ್ರಾಂ ಸಮಾಗತಾಃ ॥ ೨ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾಪಿ ವಸುಂಧರೇ ।
ಸ್ನಾತ್ವಾ ಸೌಕರವೇ ತೀರ್ಥೇ ಆಯಾತಾ ಮಧುರಾಂ ಪುರೀಂ ॥ ೩ ॥

ನೂರ ಅರವತ್ತಮೂರನೆಯ ಅಧ್ಯಾಯ
ಕಪಿಲ ವರಾಹ ಮಹಿಮೆ

೧. ಶ್ರೀವರಾಹ—ವಸುಂಧರೇ, ಇನ್ನು ವೈಕುಂಠತೀರ್ಥಕ್ಕೆ ಹೋದವರಲ್ಲಿ ನಡೆದ ಪುರಾತನವೃತ್ತಾಂತವೊಂದನ್ನು ಹೇಳುತ್ತೇನೆ. ಕೇಳು.

೨. ರಮ್ಯವಾದ ಮಿಥಿಲಾಪುರವನ್ನು ಜನಕಮಹಾರಾಜನು ಪರಿಪಾಲಿಸುತ್ತಿದ್ದನು. ಆಮಿಥಿಲೆಯಲ್ಲಿ ವಾಸಮಾಡುತ್ತಿದ್ದ ಜನರು ತೀರ್ಥಯಾತ್ರೆಗೆ ಹೊರಟರು.

೩. ವಸುಂಧರೇ, ಹಾಗೆ ಹೊರಟ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ ಶೂದ್ರರೂ ಸೌಕರವತೀರ್ಥದಲ್ಲಿ ಸ್ನಾನಮಾಡಿ ಮಧುರಾಪುರಿಗೆ ಬಂದರು.

ತೇಷಾಂ ಚ ಭಕ್ತಿರುತ್ಪನ್ನಾ ಮಥುರಾಂ ಪ್ರತಿ ಸುಂದರಿ ।
ವೈಕುಂಠತೀರ್ಥಮಾಸಾದ್ಯ ಸರ್ವೇ ತೇ ಮನುಜಾಃ ಸ್ಥಿತಾಃ ॥ ೪ ॥

ತೇಷಾಂ ತು ಬ್ರಾಹ್ಮಣಃ ಕಶ್ಚಿದ್ಬ್ರಹ್ಮಹತ್ಯಾಸುಚಿಹ್ನಿತಃ ।
ರುಧಿರಸ್ಯ ಚ ಧಾರಾ ಚ ಸ್ರವಂತೀ ತಸ್ಯ ಹಸ್ತತಃ ॥ ೫ ॥

ಪ್ರತ್ಯಕ್ಷಾ ದೃಶ್ಯತೇ ಸರ್ವೈಃಬ್ರಹ್ಮಹತ್ಯಾಸ್ವರೂಪಿಣೀ ।
ಸರ್ವತೀರ್ಥಪ್ಲುತಸ್ಯಾಪಿ ಬ್ರಾಹ್ಮಣಸ್ಯ ಹಿ ಸಾ ತದಾ ॥ ೬ ॥

ನ ಗತಾ ಪೂರ್ವಮೇವಾಸೀದ್ವೈಕುಂಠೇ ಸ್ನಾನಮಾಚರತ್ ।
ನ ಸಾ ವೈ ದೃಶ್ಯತೇ ಧಾರಾ ತತಸ್ತೇ ವಿಸ್ಮಯಂಗತಾಃ ॥ ೭ ॥

ಕಿಮೇತತ್ಕಿಮಿತಿಪ್ರಾಹುರ್ಧರಾಂ ಪ್ರತಿ ವಸುಂಧರೇ ॥ ೮ ॥

---

೪. ಸುಂದರೀ, ಅವರಿಗೆ ಮಥುರೆಯ ವಿಷಯದಲ್ಲಿ ಭಕ್ತಿಯುಂಟಾಯಿತು. ಆ ಯಾತ್ರಿಕರೆಲ್ಲರೂ ವೈಕುಂಠತೀರ್ಥದ ಸಮೀಪದಲ್ಲಿ ಬಂದು ನಿಂತರು.

೫. ಅವರಲ್ಲಿ ಒಬ್ಬ ಬ್ರಾಹ್ಮಣನು ಬ್ರಹ್ಮಹತ್ಯೆಯ ಪಾಪದ ಪೂರ್ಣಚಿಹ್ನೆಯುಳ್ಳವನಾಗಿದ್ದನು. ಆತನ ಕಯ್ಯಿಂದ ರಕ್ತದ ಧಾರೆ ಸುರಿಯುತ್ತಿದ್ದಿತು.

೬–೮. ಬ್ರಹ್ಮಹತ್ಯೆಯ ಸ್ವರೂಪವಾದ ಆ ರಕ್ತಧಾರೆ ಎಲ್ಲರಿಗೂ ಕಾಣಿಸುತ್ತಿದ್ದಿತು. ಆ ಬ್ರಾಹ್ಮಣನು ಇತರ ಸರ್ವತೀರ್ಥಗಳಲ್ಲೂ ಸ್ನಾನಮಾಡಿದರೂ ಅವನ ಆ ರಕ್ತಧಾರೆ ಹೋಗಲೇ ಇಲ್ಲ. ಪೂರ್ವದಂತೆಯೇ ಇದ್ದಿತು. ಅವನು ವೈಕುಂಠತೀರ್ಥದಲ್ಲಿ ಸ್ನಾನಮಾಡಿದನು. ಬಳಿಕ ಅದು ಕಾಣಲೇ ಇಲ್ಲ. ವಸುಂಧರೇ, ಅವರೆಲ್ಲರೂ ರಕ್ತಧಾರೆ ನಿಂತುದಕ್ಕೆ ಆಶ್ಚರ್ಯಗೊಂಡು ‘ ಇದೇನು ಇದೇನು ! ಎನ್ನುತ್ತಿದ್ದರು.

ದೇವೋ ಬ್ರಾಹ್ಮಣರೂಪೇಣ ಲೋಕಾನ್ ಸರ್ವಾನ್ ಹಿ ಪೃಚ್ಛತಿ ।
ಕೇನ ಕಾರಣದೋಷೇಣ ಧಾರಾ ತ್ಯಕ್ತ್ವಾ ಗತಾ ದ್ವಿಜಂ ॥ ೯ ॥

ತತ್ಸರ್ವಂ ಕಥಯಾಮಾಸುರ್ಬ್ರಾಹ್ಮಣಸ್ಯ ವಿಚೇಷ್ಟಿತಂ ।
ವೈಕುಂಠೇ ತು ನಿಮಗ್ನೋಯಂ ಬ್ರಹ್ಮಹತ್ಯಾಗತಾ ತತಃ ॥
ವಿಸ್ಮಯೋ ನಾತ್ರ ಕರ್ತವ್ಯಸ್ತೀರ್ಥಸ್ಯೇದಂ ಮಹತ್ಫಲಂ ॥ ೧೦ ॥

ಇತ್ಯುಕ್ತಸ್ತೈರ್ದೇವದೇವಸ್ತತ್ರೈವಾಂತರಧೀಯತ ।
ಏಷ ಪ್ರಭಾವಸ್ತೀರ್ಥಸ್ಯ ವೈಕುಂಠಸ್ಯ ವಸುಂಧರೇ ॥ ೧೧ ॥

ವೈಕುಂಠತೀರ್ಥೇ ಯಃ ಸ್ನಾತಿ ಮುಚ್ಯತೇ ಸರ್ವಪಾತಕೈಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥ ೧೨ ॥

---

೯. ದೇವನು ಬ್ರಾಹ್ಮಣರೂಪದಿಂದ ಬಂದು, 'ಯಾವ ಕಾರಣದಿಂದ ಬ್ರಾಹ್ಮಣನ ರಕ್ತಧಾರೆಯು ತಪ್ಪಿಹೋಯಿತು?' ಎಂದು ಅಲ್ಲಿನ ಜನರನ್ನೆಲ್ಲಾ ಕೇಳುತ್ತಿದ್ದನು.

೧೦. ಅವರು ಆ ಪಾಪಿ ಬ್ರಾಹ್ಮಣನ ಕಾರ್ಯಗಳೆಲ್ಲವನ್ನೂ ಹೇಳುತ್ತಾ "ಈತನು ವೈಕುಂಠತೀರ್ಥದಲ್ಲಿ ಮುಳುಗಿದನು. ಆದುದರಿಂದ ಬ್ರಹ್ಮಹತ್ಯೆಯು ಹೋಯಿತು. ಈ ವಿಚಾರದಲ್ಲಿ ವಿಸ್ಮಯಪಡಬೇಕಾದುದಿಲ್ಲ ಇದು ವೈಕುಂಠ ತೀರ್ಥದ ಮಹಾಫಲ" ಎಂದು ತಿಳಿಸಿದರು.

೧೧. ಅವರು ಹೀಗೆ ಹೇಳಲು, ದೇವದೇವನು ಅಲ್ಲೇ ಕಣ್ಮರೆಯಾದನು. ವಸುಂಧರೇ, ಇದು ವೈಕುಂಠತೀರ್ಥದ ಮಹಿಮೆ.

೧೨. ವೈಕುಂಠತೀರ್ಥದಲ್ಲಿ ಸ್ನಾನಮಾಡುವವನು ಸರ್ವಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಸೇರುವನು.

॥ *ಸೂತ ಉವಾಚ ॥

ಪುನರನ್ಯತ್ಪ್ರವಕ್ಷ್ಯಾಮಿ ಅಸಿಕುಂಡೇತಿಪುಣ್ಯದೇ ।
ನಾಮ್ನಾ ಗಂಧರ್ವಕುಂಡಂ ತು ತೀರ್ಥಾನಾಂ ತೀರ್ಥಮುತ್ತಮಂ ॥ ೧೩ ॥

ತತ್ರ ಸ್ನಾತೋ ನರೋ ದೇವಿ ಗಂಧರ್ವೈಃ ಸಹ ಮೋದತೇ ।
ತತ್ರಯೋ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೧೪ ॥

ವಿಂಶತಿರ್ಯೋಜನಾನಾಂತು ಮಾಥುರಂ ಮಮ ಮಂಡಲಂ ।
ಇದಂ ಪದ್ಮಂ ಮಹಾಭಾಗೇ ಸರ್ವೇಷಾಂ ಮುಕ್ತಿದಾಯಿ ಚ ॥ ೧೫ ॥

ಕರ್ಣಿಕಾಯಾಂ ಸ್ಥಿತೋ ದೇವಿ ಕೇಶವಃ ಕ್ಲೇಶನಾಶನಃ ।
ಕರ್ಣಿಕಾಯಾಂ ಮೃತಾ ಯೇ ತು ತೇಮರಾ ಮುಕ್ತಿಭಾಗಿನಃ ॥ ೧೬ ॥

ತತ್ರ ಮಧ್ಯೇ ಮೃತಾ ಯೇ ತು ತೇಷಾಂ ಮುಕ್ತಿರ್ವಸುಂಧರೇ ॥ ೧೭ ॥

---

೧೩. ಇನ್ನು ಬೇರೊಂದನ್ನು ಹೇಳುತ್ತೇನೆ. ಅತಿ ಪುಣ್ಯಪ್ರದವಾದ ಅಸಿ ಕುಂಡದಲ್ಲಿ ಗಂಧರ್ವಕುಂಡವೆಂಬ ಹೆಸರಿನದು ತೀರ್ಥಗಳಲ್ಲಿ ಉತ್ತಮವಾದುದು.

೧೪. ದೇವೀ, ಅಲ್ಲಿ ಸ್ನಾನಮಾಡಿದವನು ಗಂಧರ್ವರೊಡನೆ ಆನಂದಪಡು ವನು. ಅಲ್ಲಿ ಪ್ರಾಣಗಳನ್ನು ಬಿಡುವವನು ನನ್ನ ಲೋಕವನ್ನು ಸೇರುವನು.

೧೫. ಮಹಾಭಾಗ್ಯೇ, ನನ್ನ ಮಧುರಾಮಂಡಲವೆಂಬ ಇಪ್ಪತ್ತು ಯೋಜನ ವಿಶಾಲವಾದ ಈ ಕಮಲವು ಸರ್ವರಿಗೂ ಮುಕ್ತಿದಾಯಕವಾದುದು.

೧೬-೧೭. ದೇವೀ, ಈ ಕಮಲದ ಕರ್ಣಿಕೆಯಲ್ಲಿ ಕ್ಲೇಶಪರಿಹಾರಕನಾದ ಕೇಶವನಿರುವನು. ಕರ್ಣಿಕೆಯಲ್ಲಿ (ಕೇಶವನ ಸನ್ನಿಧಿಯಲ್ಲಿ) ಮೃತರಾಗುವವರು ಅಮರರು. ಅವರು ಮೋಕ್ಷಕ್ಕೆ ಪಾತ್ರರು. ವಸುಂಧರೇ, ಅದರ ಮಧ್ಯದಲ್ಲಿ ಮೃತರಾಗುವವರಿಗೆ ಮುಕ್ತಿಯೇ ಆಗುವುದು.

---

* ಅನುಚಿತವಾಕ್ಯ

ಪಶ್ಚಿಮೇನ ಹರಿಂ ದೇವಂ ಗೋವರ್ಧನನಿವಾಸಿನಂ ।
ದೃಷ್ಟ್ವಾ ತಂ ದೇವದೇವೇಶಂ ಕಿಂ ಮನಃ ಪರಿತಪ್ಯತೇ ॥ ೧೮ ॥
ಉತ್ತರೇಣ ತು ಗೋವಿಂದಂ ದೃಷ್ಟ್ವಾ ದೇವಂ ಪರಂ ಶುಭಂ ।
ನಾಸೌ ಪತತಿ ಸಂಸಾರೇ ಯಾವದಾಭೂತಸಂಪ್ಲವಂ ॥ ೧೯ ॥
ವಿಶ್ರಾಂತಿಸಂಜ್ಞಕೇ ದೇವಂ ಪೂರ್ವಪತ್ರೇ ವ್ಯವಸ್ಥಿತಂ ।
ಯಂ ದೃಷ್ಟ್ವಾ ತು ನರೋ ಯಾತಿ ಮುಕ್ತಿಂ ನಾಸ್ತ್ಯತ್ರ ಸಂಶಯಃ॥ ೨೦ ॥
ದಕ್ಷಿಣೇನ ತು ಮಾಂ ವಿದ್ಧಿ ಪ್ರತಿಮಾಂ ದಿವ್ಯರೂಪಿಣೀಂ ।
ಮಹಾಕಾಯಾಂ ಸುರೂಪಾಂಚ ಕೇಶವಾಕಾರ ಸನ್ನಿಭಾಂ ॥
ತಾಂ ದೃಷ್ಟ್ವಾ ಮನುಜೋ ದೇವಿ ಬ್ರಹ್ಮಣಾ ಸಹ ಮೋದತೇ ॥ ೨೧ ॥
ಕೃತೇ ಯುಗೇ ತು ರಾಜಾಸೀನ್ಮಾಂಧಾತಾ ನಾಮ ನಾಮತಃ ।
ತೇನಾಹಂ ತೋಷಿತೋ ದೇವಿ ಭಕ್ತಿಯುಕ್ತೇನ ಚೇತಸಾ ॥ ೨೨ ॥

---

೧೮. ಗೋವರ್ಧನಗಿರಿಯಲ್ಲಿ ನೆಲಸಿರುವ ದೇವದೇವೇಶನಾದ ಹರಿಯನ್ನು ಪಶ್ಚಿಮದಿಕ್ಕಿನಲ್ಲಿ ಸಂದರ್ಶಿಸಿದ ಬಳಿಕ ಮನಸ್ಸಿಗೆ ಪರಿತಾಪವೆಂಬುದುಂಟೆ !

೧೯. ಸರ್ವಶ್ರೇಷ್ಠನೂ, ಶುಭನೂ, ದೇವನೂ ಆದ ಗೋವಿಂದನನ್ನು ಉತ್ತರದಲ್ಲಿ ಸಂದರ್ಶಿಸುವವನು ಭೂತಪ್ರಳಯದವರೆಗೂ ಮತ್ತೆ ಸಂಸಾರದಲ್ಲಿ ಬೀಳುವುದಿಲ್ಲ

೨೦. ವಿಶ್ರಾಂತಿಯೆಂಬ ಹೆಸರಿನ ಪೂರ್ವದ ದಳದಲ್ಲಿ ನೆಲಸಿರುವ ದೇವನನ್ನು ಸಂದರ್ಶಿಸುವವನು ಮುಕ್ತಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

೨೧. ದಕ್ಷಿಣದಿಕ್ಕಿನಲ್ಲಿರುವ ದಿವ್ಯರೂಪದ, ಮಹಾದೇಹವೂ, ಸುರೂಪವೂ, ಕೇಶವಮೂರ್ತಿಯಂತೆ ಆಕಾರವೂ ಉಳ್ಳ ಪ್ರತಿಮೆಯನ್ನು ಶ್ರೀವರಾಹನಾದ ನಾನು ಎಂದು ತಿಳಿ. ದೇವೀ, ಆ ಮೂರ್ತಿಯನ್ನು ಸಂದರ್ಶಿಸಿ, ಮನುಷ್ಯನು ಬ್ರಹ್ಮನೊಡನೆ ಆನಂದಪಡುವನು.

೨೨. ದೇವೀ, ಕೃತಯುಗದಲ್ಲಿ ಮಾಂಧಾತನೆಂಬ ಹೆಸರಿನ ದೊರೆಯಿದ್ದನು. ಆತನು, ಭಕ್ತಿಯಿಂದ ಕೂಡಿದ ಮನಸ್ಸಿನಿಂದ ನನ್ನನ್ನು ಸಂತೋಷಪಡಿಸಿದನು.

ತಸ್ಯ ತುಷ್ಟೇನ ಹಿ ಮಯಾ ಪ್ರತಿಮೇಯಂ ಸಮರ್ಪಿತಾ ।
ತೇನೇಯಂ ಪೂಜಿತಾ ನಿತ್ಯಮಾತ್ಮಮುಕ್ತಿಮಭೀಪ್ಸತಾ ॥ ೨೩ ॥

+ಯದಾ ತು ಮಧುರಾಂ ಪ್ರಾಪ್ಯ ಲವಣೋಯಂ ನಿಪಾತಿತಃ ।
ತದೈವ ಪ್ರತಿಮಾದಿವ್ಯಾ ಮಧುರಾಯಾಂ ವ್ಯವಸ್ಥಿತಾ ॥ ೨೪ ॥

ಪುಣ್ಯೇಯಂ ಪ್ರತಿಮಾ ದಿವ್ಯಾ ತೈಜಸೀ ದಿವ್ಯರೂಪಿಣಿ ॥ ೨೫ ॥

ಕಪಿಲೋ ನಾಮ ವಿಪ್ರರ್ಷಿರ್ಮಮ ಭಕ್ತಿಪರಾಯಣಃ ।
ಮನಸಾನಿರ್ಮಿತಾ ತೇನ ವಾರಾಹೀ ಪ್ರತಿಮಾ ಶುಭಾ ॥
ಕಪಿಲೋ ಧ್ಯಾಯತೇ ನಿತ್ಯಮರ್ಚತಿ ಸ್ಮ ದಿನೇ ದಿನೇ ॥ ೨೬ ॥

ಇಂದ್ರೇಣಾರಾಧಿತೋ ದೇವಿ ಕಪಿಲೋ ಮುನಿಸತ್ತಮಃ ।
ತಸ್ಯಪ್ರೀತೋ ದದೌ ದೇವಂ ವರಾಹಂ ದಿವ್ಯರೂಪಿಣಂ ॥ ೨೭ ॥

---

೨೩. ಅವನಿಗೆ ಒಲಿದ ನಾನು, ಈ ವರಾಹಮೂರ್ತಿಯನ್ನು ಸಮರ್ಪಿಸಿದೆನು. ತನಗೆ ಮುಕ್ತಿಯನ್ನು ಬಯಸುವ ಆತನು ನಿತ್ಯವೂ ಈ ಮೂರ್ತಿಯನ್ನು ಪೂಜಿಸುತ್ತಿದ್ದನು.

೨೪–೨೫. ಶತ್ರುಘ್ನನು ಮಧುರೆಗೆ ಹೋಗಿ, ಲವಣಾಸುರನನ್ನು ಸಂಹರಿಸಿದಾಗ ಈ ದಿವ್ಯಪ್ರತಿಮೆಯು ಅವನಿಂದ ಮಧುರೆಯಲ್ಲಿ ಸ್ಥಾಪಿತವಾಯಿತು. ದಿವ್ಯರೂಪಿಣಿಯಾದ ಈ ಪ್ರತಿಮೆ ತೇಜೋಮಯವೂ, ಪವಿತ್ರವೂ, ದಿವ್ಯವೂ ಆದುದು.

೨೬. ನನ್ನ ಭಕ್ತಿಯಲ್ಲಿ ನಿರತನಾದ ಕಪಿಲನೆಂಬ ಬ್ರಹ್ಮರ್ಷಿಯು ಶುಭವಾದ ವರಾಹಮೂರ್ತಿಯನ್ನು ಮನಸ್ಸಿನಿಂದ ನಿರ್ಮಿಸಿದನು. ಆತನು ಈ ಮೂರ್ತಿಯನ್ನು ನಿತ್ಯವೂ ಧ್ಯಾನಿಸುತ್ತಲೂ, ಪೂಜಿಸುತ್ತಲೂ ಇದ್ದನು.

೨೭. ದೇವೀ, ಇಂದ್ರನಿಂದ ಆರಾಧಿತನಾದ ಮುನಿವರ್ಯನಾದ ಕಪಿಲನು ಪ್ರೀತನಾಗಿ, ದಿವ್ಯರೂಪದ ವರಾಹದೇವನನ್ನು ಇಂದ್ರನಿಗೆ ಅರ್ಪಿಸಿದನು.

\+ ತದಾ

ದೇವೇ ಲಬ್ಧೇ ವರಾರೋಹೇ ಶಕ್ರೋ ಹರ್ಷಸಮನ್ವಿತಃ ।
ಧ್ಯಾಯತಿಸ್ಮ ಸದಾ ದೇವಂ ಪೂಜಾಂ ಕೃತ್ವಾ ಹಿ ಭಕ್ತಿತಃ ॥ ೨೮ ॥

ಇಂದ್ರೇಣ ತು ತದಾ ಪ್ರಾಪ್ತಂ ದಿವ್ಯಂ ಜ್ಞಾನಮನುತ್ತಮಂ ॥ ೨೯ ॥

ತತಃ ಕಾಲೇನ ಮಹತಾ ರಾವಣೋ ನಾಮ ರಾಕ್ಷಸಃ ।
ಇಂದ್ರಲೋಕಂ ಗತಃ ಸೋಥ ಸ್ವರ್ಗಂ ಜೇತುಂ ಮಹಾಬಲಃ ॥ ೩೦ ॥

ಶಕ್ರೇಣ ಸಹ ಸಂಗಮ್ಯ ತತೋ ಯುದ್ಧಂ ಪ್ರವರ್ತಿತಂ ।
ರಾವಣೇನ ಜಿತಾ ದೇವಾಃ ಶಕ್ರಶ್ಚೈವ ಮಹಾಬಲಃ ॥ ೩೧ ॥

ಬಧ್ವಾ ಚೇದ್ರಂ ಮಹಾಬಾಹುಂ ಶಕ್ರಸ್ಯ ಭವನಂ ಗತಃ ।
ಪ್ರವಿಶ್ಯ ರಾವಣಸ್ತತ್ರ ಗೃಹೇ ರತ್ನವಿಭೂಷಿತೇ ॥
ದೃಷ್ಟ್ವಾ ಕಪಿಲವಾರಾಹಂ ಶಿರಸಾ ಧರಣೀಂ ಗತಃ ॥ ೩೨ ॥

೨೮–೨೯. ವರಾರೋಹೇ, ವರಾಹದೇವನ ಮೂರ್ತಿ ಲಭಿಸಲಾಗಿ ಇಂದ್ರನು ಸಂತೋಷವುಳ್ಳವನಾಗಿ, ಯಾವಾಗಲೂ ಭಕ್ತಿಯಿಂದ ಪೂಜಿಸಿ ಧ್ಯಾನಿಸುತ್ತಿದ್ದನು. ಅದರಿಂದ ಇಂದ್ರನು ಅತ್ಯುತ್ತಮವಾದ ದಿವ್ಯಜ್ಞಾನವನ್ನು ಪಡೆದನು.

೩೦. ಬಳಿಕ ಬಹುಕಾಲದಮೇಲೆ ರಾವಣನೆಂಬ ರಾಕ್ಷಸನು ಮಹಾ ಬಲವುಳ್ಳವನಾಗಿ, ಇಂದ್ರಲೋಕವಾದ ಸ್ವರ್ಗವನ್ನು ಜಯಿಸುವುದಕ್ಕೆ ಹೋದನು.

೩೧. ಬಳಿಕ ಇಂದ್ರನೊಡನೆ ರಾವಣನಿಗೆ ಯುದ್ಧವು ಆರಂಭವಾಯಿತು. ರಾವಣನು ದೇವತೆಗಳನ್ನೂ, ಮಹಾಬಲಶಾಲಿಯಾದ ಇಂದ್ರನನ್ನೂ ಜಯಿಸಿದನು.

೩೨. ಮಹಾಬಾಹುವಾದ ಇಂದ್ರನನ್ನು ಬಂಧಿಸಿ, ಅವನ ಅರಮನೆಯನ್ನು ಪ್ರವೇಶಿಸಿದ ರಾವಣನು ಅಲ್ಲಿ ರತ್ನಾಲಂಕೃತವಾದ ಗೃಹದಲ್ಲಿ ಕಪಿಲವರಾಹ ಮೂರ್ತಿಯನ್ನು ನೋಡಿ, ತಲೆಯನ್ನು ನೆಲಕ್ಕೆ ಬಾಗಿಸಿ ವಂದಿಸಿದನು.

ತೇನ ಸಮ್ಮೋಹಿತೋ ದೇವಿ ರಾವಣೋ ನಾಮ ರಾಕ್ಷಸಃ ॥ ೩೩ ॥
ತ್ರಾತುಮರ್ಹಸಿ ಮೇ ದೇವ ಧರಣೀಧರ ಮಾಧವ ।
ದಾಮೋದರ ಹೃಷೀಕೇಶ ಹಿರಣ್ಯಾಕ್ಷವಿದಾರಣ ॥ ೩೪ ॥

ವೇದಗರ್ಭ ನಮಸ್ತೇಽಸ್ತು ನಾರಾಯಣ ನಮೋಽಸ್ತುತೇ ।
ಕೂರ್ಮರೂಪ ನಮಸ್ತೇಽಸ್ತು ನಾರಾಯಣ ನಮೋಽಸ್ತುತೇ ॥ ೩೫ ॥

ಮತ್ಸ್ಯರೂಪಧರಂ ದೇವಂ ಮಧುಕೈಟಭನಾಶಿನಂ ।
ನಿರೀಕ್ಷಿತುಂ ನ ಶಕ್ನೋಮಿ ಪ್ರಷ್ಟುಂಚೈವ ಗುಣವ್ರತ ॥ ೩೬ ॥

ದೇವದೇವ ನಮಸ್ತುಭ್ಯಂ ಭಕ್ತಾನಾಮಭಯಪ್ರದ ।
ಮಮ ತ್ವಂ ಭಕ್ತಿನಮ್ರಸ್ಯ ಪ್ರಸಾದಂ ಕುರು ಸರ್ವದಾ ॥ ೩೭ ॥

---

೩೩. ದೇವೀ, ವರಾಹಮೂರ್ತಿಯಿಂದ ಸಮ್ಮೋಹಿತನಾದ ರಾವಣನೆಂಬ ಆ ರಾಕ್ಷಸನು ದೇವನನ್ನು ಹೀಗೆ ಸ್ತುತಿಸಿದನು.

೩೪. " ದೇವಾ, ಧರಣೀಧರಾ, ಮಾಧವಾ, ದಾಮೋದರಾ, ನನ್ನನ್ನು ನೀನು ಕಾಪಾಡಬೇಕು.

೩೫. ವೇದಗರ್ಭನೇ, ನಿನಗೆ ನಮಸ್ಕಾರ. ವಾಸುದೇವನೇ, ವಂದಿಸುತ್ತೇನೆ. ಕೂರ್ಮರೂಪಾ, ನಿನಗೆ ನಮಸ್ಕಾರ. ನಾರಾಯಣಾ, ನಿನಗೆ ವಂದನೆ.

೩೬. ಗುಣವ್ರತಾ, ಮತ್ಸ್ಯರೂಪಧರನೂ, ಮಧುಕೈಟಭನಾಶಕನೂ, ದೇವನೂ ಆದ ನಿನ್ನನ್ನು ನೋಡುವುದಕ್ಕೂ, ಹಾಡುವುದಕ್ಕೂ ನಾನು ಅಶಕ್ತನು

೩೭. ದೇವ ದೇವನೇ, ಭಕ್ತರಿಗೆ ಅಭಯಪ್ರದನೇ, ನಿನ್ನನ್ನು ವಂದಿಸುತ್ತೇನೆ. ಭಕ್ತಿಯಿಂದ ಬಾಗಿದ ನನಗೆ ಯಾವಾಗಲೂ ಪ್ರಸಾದವನ್ನು ಮಾಡು.

ಇತಿ ಸ್ತುತೋ ರಾವಣೇನ ದೇವದೇವೋ ಜಗತ್ಪತಿಃ ।
ಸೌಮ್ಯರೂಪೋಭವದ್ದೇವೋ ಲೋಕನಾಥೋ ಜನಾರ್ದನಃ ॥ ೩೮ ॥

ಸನ್ನಿಧಾನಮನುಪ್ರಾಪ್ಯ ಪುಷ್ಪಕಾರೋಹಣೋತ್ಸುಕಃ ।
ತದುದ್ಧರ್ತುಂ ನ ಶಕ್ನೋತಿ ರಾವಣೋ ವಿಸ್ಮಯಂ ಗತಃ ॥ ೩೯ ॥

ಶಂಕರೇಣ ಪುರಾ ಸಾರ್ಧಂ ಕೈಲಾಸಸ್ತು ಮಯೋದ್ಧೃತಃ ।
ದೇವ ತ್ವಂ ಸ್ವಲ್ಪಕಾಯೋಸಿ ನಾಹಮುದ್ಧರಣಕ್ಷಮಃ ॥ ೪೦ ॥

ಪ್ರಸೀದ ದೇವದೇವೇಶ ಸುರನಾಥ ನಮೋಸ್ತುತೇ ।
ಅಹಂ ತ್ವಾಂ ನೇತುಮಿಚ್ಛಾಮಿ ಪುರೀಂ ಲಂಕಾಮನುತ್ತಮಾಂ ॥ ೪೧ ॥

---

೩೮. ಹೀಗೆ ರಾವಣನಿಂದ ಸ್ತುತನಾದ ದೇವ ದೇವನೂ, ಜಗತ್ಪತಿಯೂ, ಲೋಕನಾಥನೂ ಆದ ಜನಾರ್ದನ ದೇವನು ಸೌಮ್ಯರೂಪವುಳ್ಳವನಾದನು.

೩೯. ಆ ದೇವನನ್ನು ಎತ್ತಿಕೊಂಡು, ವಿಮಾನವನ್ನೇರಲು ಕುತೂಹಲವುಳ್ಳವನಾದ ರಾವಣನು ದೇವನ ಸನ್ನಿಧಿಗೆ ಹೋಗಿ, ಅವನನ್ನು ಎತ್ತಲಾರದೆ. ವಿಸ್ಮಯವುಳ್ಳವನಾದನು.

೪೦ "ಪೂರ್ವದಲ್ಲಿ ಶಂಕರನ ಸಹಿತವಾಗಿ ಕೈಲಾಸಪರ್ವತವನ್ನು ನಾನು ಎತ್ತಿದೆನು. ದೇವ, ನೀನು ಸ್ವಲ್ಪಮೂರ್ತಿಯಾಗಿ ಇದ್ದೀಯೆ. ಆದರೂ ನಾನು ನಿನ್ನನ್ನು ಎತ್ತಲು ಅಶಕ್ತನಾಗಿದ್ದೇನೆ.

೪೧. ದೇವ, ದೇವೇಶ, ಪ್ರಸನ್ನನಾಗು. ದೇವರಕ್ಷಕಾ, ನಿನಗೆ ನಮಸ್ಕಾರ. ನಾನು ನಿನ್ನನ್ನು ಅತ್ಯುತ್ತಮವಾದ ಲಂಕಾಪುರಕ್ಕೆ ಎತ್ತಿಕೊಂಡು ಹೋಗಲು ಇಚ್ಛಿಸುತ್ತೇನೆ." ಎಂದನು.

॥ ಶ್ರೀವರಾಹ ಉವಾಚ ॥

ಅವೈಷ್ಣವೋಽಸಿ ರಕ್ಷಸ್ತ್ವಂ ಕುತೋ ಭಕ್ತಿಸ್ತವೇದೃಶೀ ।
ಕಪಿಲಸ್ಯ ವಚಃ ಶ್ರುತ್ವಾ ರಾವಣೋ ವಾಕ್ಯಮಬ್ರವೀತ್ ॥ ೪೨ ॥

ತ್ವದ್ದರ್ಶನಾತ್ಸಮುತ್ಪನ್ನಾ ಭಕ್ತಿರವ್ಯಭಿಚಾರಿಣೀ ।
ಮಹಾತ್ಮಂಸ್ತ್ವಾಂ ನಯಿಷ್ಯಾಮಿ ದೇವದೇವ ನಮೋಽಸ್ತು ತೇ ॥ ೪೩ ॥

ಭಕ್ತಿಮುದ್ವಹತಸ್ತಸ್ಯ ಲಘುವೇಷೋಽಭವತ್ತದಾ ।
ಪುಷ್ಪಕೇ ತು ಸಮಾರೋಪ್ಯ ತೇವಂ ತ್ರೈಲೋಕ್ಯವಿಶ್ರುತಂ ॥ ೪೪ ॥

ಆನಯಾಮಾಸ ಲಂಕಾಯಾಂ ಸ್ಥಾಪಯಿತ್ವಾ ಸ್ವಕೇ ಗೃಹೇ ।
ತದಾ ಸ್ಥಿತೋಽಹಂ ಲಂಕಾಯಾಂ ರಾವಣೇನ ಪ್ರಪೂಜಿತಃ ॥ ೪೫ ॥

---

೪೨. ಶ್ರೀವರಾಹ—"ನೀನು ರಾಕ್ಷಸ, ಅವೈಷ್ಣವನಾಗಿದ್ದೀಯೆ. ನಿನಗೆ ಇಂತಹ ಭಕ್ತಿಯೆಲ್ಲಿ ಬಂದಿತು ?" ಕಪಿಲವರಾಹನ ಮಾತನ್ನು ಕೇಳಿ, ರಾವಣನು ಈ ಮಾತನ್ನು ಹೇಳಿದನು.

೪೩. "ಮಹಾತ್ಮನೇ, ನಿನ್ನ ದರ್ಶನದಿಂದ ನನಗೆ ನಿನ್ನಲ್ಲಿ ನಿಶ್ಚಲವಾದ ಭಕ್ತಿಯುಂಟಾಯಿತು. ದೇವ ದೇವ, ನಿನ್ನನ್ನು ಎತ್ತಿಕೊಂಡು ಹೋಗುತ್ತೇನೆ. ನಿನಗೆ ನಮಸ್ಕಾರ."

೪೪–೪೫. ಅತಿಭಕ್ತಿಯುಳ್ಳವನಾದ ಆ ರಾವಣನಿಗೆ ದೇವನು ಆಗ ಲಘುವಾದ ವೇಷವುಳ್ಳವನಾದನು. ಅವನು ಮೂರುಲೋಕಗಳಲ್ಲೂ ಪ್ರಸಿದ್ಧನಾದ ಆ ವರಾಹದೇವನನ್ನು ಪುಷ್ಪಕವಿಮಾನದಲ್ಲಿ ಏರಿಸಿಕೊಂಡು, ಲಂಕೆಗೆ ಬಂದು, ತನ್ನ ಮನೆಯಲ್ಲಿ ಸ್ಥಾಪಿಸಿದನು. ಆಗ ನಾನು ಲಂಕೆಯಲ್ಲಿ ರಾವಣನಿಂದ ಪೂಜಿತನಾಗಿ ನಿಂತೆನು.

ಅಯೋಧ್ಯಾಧಿಪತೀ ರಾಮೋ ಹಂತುಂ ರಾಕ್ಷಸಪುಂಗವಂ ।
ಗತೋಽಸೌ ವಿಕ್ರಮೇಣೈವ ×ಹತೋ ರಾಕ್ಷಸಪುಂಗವಃ ॥ ೪೬ ॥

ವಿಭೀಷಣಶ್ಚ ಲಂಕಾಯಾ ಅಧಿಪತ್ಯೇಽಭಿಷೇಚಿತಃ ।
ವಿಭೀಷಣೇನ ರಾಮಸ್ಯ ಸರ್ವಸ್ವಂಚ ನಿವೇದಿತಂ ॥ ೪೭ ॥

॥ ಶ್ರೀರಾಮ ಉವಾಚ ॥

ಅನೇನ ನಾಸ್ತಿ ಮೇ ಕಾರ್ಯಂ ತವ ರಕ್ಷೋವಿಭೀಷಣ ।
ದೇವೋ ಮೇ ದೀಯತಾಂ ರಕ್ಷಃ ಶಕ್ರಲೋಕಾದ್ಯ ಆಗತಃ ॥ ೪೮ ॥

ಅಹನ್ಯಹನಿ ಪೂಜಾಮಿ ದೇವಂ ವಾರಾಹರೂಪಿಣಂ ।
ಅಯೋಧ್ಯಾಂ ಚೈವ ನೇಷ್ಯಾಮಿ ತ್ವಯಾ ದತ್ತಂ ಹಿ ರಾಕ್ಷಸ ॥ ೪೯ ॥

---

೪೬. ಅಯೋಧ್ಯಾಧಿಪತಿಯಾದ ಶ್ರೀರಾಮನು ಆ ರಾಕ್ಷಸೋತ್ತಮನನ್ನು ಕೊಲ್ಲುವುದಕ್ಕಾಗಿ ಲಂಕೆಗೆ ಹೋಗಿ, ಪರಾಕ್ರಮದಿಂದಲೇ ಅವನನ್ನು ಕೊಂದನು.

೪೭. ರಾಮನು ವಿಭೀಷಣನಿಗೆ ಲಂಕಾರಾಜ್ಯದಲ್ಲಿ ಅಭಿಷೇಕವನ್ನೂ ಮಾಡಿದನು. ವಿಭೀಷಣನು ರಾಮನಿಗೆ ಸರ್ವಸ್ವವನ್ನೂ ಒಪ್ಪಿಸಿದನು.

೪೮. "ರಾಕ್ಷಸಾ, ವಿಭೀಷಣಾ, ನಿನ್ನ ಈ ಸರ್ವಸ್ವದಿಂದ ನನಗೇನೂ ಕಾರ್ಯವಿಲ್ಲ. ಇಂದ್ರಲೋಕದಿಂದ ಬಂದಿರುವ ದೇವನನ್ನು ನನಗೆ ಕೊಡು.

೪೯. ರಾಕ್ಷಸಾ, ನೀನು ಬಿಜಮಾಡಿಸಿಕೊಡುವ ವರಾಹರೂಪಿಯಾದ ದೇವನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗಿ, ಪ್ರತಿದಿನವೂ ಪೂಜಿಸುತ್ತೇನೆ.

× ಹತ್ವಾರಾಕ್ಷಸಪುಂಗವಂ

ತತಃ ಸಮರ್ಪಯಾಮಾಸ ಕಪಿಲಂ ದಿವ್ಯರೂಪಿಣಂ ।
ಪುಷ್ಪಕೇ ತು ಸಮಾರೋಪ್ಯ ನೀತವಾನ್ನಗರೀಂ ಪ್ರತಿ ॥ ೫೦ ॥

ಅಯೋಧ್ಯಾಯಾಂ ಸ್ಥಾಪಯಿತ್ವಾ ಪೂಜಯಾಮಾಸ ತಂ ತದಾ ।
ಗತಂ ವರ್ಷಸಹಸ್ರಂ ತು ದಶೋತ್ತರಮತಃ ಪರಂ ॥ ೫೧ ॥

ಲವಣಸ್ಯ ವಧಾರ್ಥಂ ಹಿ ಶತ್ರುಘ್ನಂ ಪ್ರೇಷಯತ್ತದಾ ।
ಕೃತಪ್ರಣಾಮಃ ಶತ್ರುಘ್ನೋ ರಾಘವಾಯ ಮಹಾತ್ಮನೇ ॥ ೫೨ ॥

ಚತುರಂಗಬಲೋಪೇತೋ ಜಗಾಮ ಮಧುರಾಂ ಪ್ರತಿ ।
ಗತ್ವಾ ತು ರಾಕ್ಷಸಶ್ರೇಷ್ಠಂ ಲವಣಂ ರೌದ್ರರೂಪಿಣಂ ॥ ೫೩ ॥

ಘಾತಯಿತ್ವಾ ತು ಶತ್ರುಘ್ನಃ ಪ್ರವಿಶ್ಯ ಮಧುರಾಂ ಪುರೀಂ ॥ ೫೪ ॥

---

೫೦. ಬಳಿಕ ವಿಭೀಷಣನು ದಿವ್ಯರೂಪದ ಕಪಿಲ ವರಾಹಮೂರ್ತಿಯನ್ನು ಶ್ರೀರಾಮನಿಗೆ ಸಮರ್ಪಿಸಿದನು. ಆತನು ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಬಿಜಮಾಡಿಸಿಕೊಂಡು ಹೋದನು.

೫೧. ಆಗ ಅಯೋಧ್ಯಾನಗರದಲ್ಲಿ ಆ ದೇವನನ್ನು ಸ್ಥಾಪಿಸಿ, ರಾಮನು ಪೂಜಿಸುತ್ತಿದ್ದನು. ಬಳಿಕ ಒಂದುಸಾವಿರದ ಹತ್ತುವರ್ಷಗಳು ಕಳೆದುವು.

೫೨–೫೩. ಆಗ ಶ್ರೀರಾಮನು ಲವಣಾಸುರನ ವಧೆಗಾಗಿ ತಮ್ಮನಾದ ಶತ್ರುಘ್ನನನ್ನು ಕಳುಹಿಸಿದನು. ಆತನು ಮಹಾತ್ಮನಾದ ರಾಮನಿಗೆ ಪ್ರಣಾಮ ಮಾಡಿ, ಚತುರಂಗ ಸೈನ್ಯದೊಡನೆ ಮಧುರೆಗೆ ಹೊರಟು ಹೋದನು.

೫೪–೫೫. ಶತ್ರುಘ್ನನು ಅಲ್ಲಿ ರೌದ್ರರೂಪನಾದ ಲವಣಾಸುರನನ್ನು ಕೊಂದು, ಮಧುರಾಪುರಿಯನ್ನು ಹೊಕ್ಕು, ಮಹೌಜಸರೂ, ವೇದ ವೇದಾಂಗ

ಬ್ರಾಹ್ಮಣಾನ್ ಸ್ಥಾಪಯಾಮಾಸ ಮಯಾ ತುಲ್ಯಾನ್ಮಹೌಜಸಃ ।
ಷಡ್ವಿಂಶತಿಸಹಸ್ರಾಣಿ ವೇದವೇದಾಂಗಪಾರಗಾನ್ ॥ ೫೫ ॥

ಅನ್ಯಚೋ ಮಾಥುರೋ ಯತ್ರ ಚತುರ್ವೇದಸ್ತಥಾಪರಃ ।
ಏಕಸ್ಮಿನ್ ಭೋಜಿತೇ ವಿಪ್ರೇ ಕೋಟಿರ್ಭವತಿ ಭೋಜಿತಾಃ ॥ ೫೬ ॥

ಲವಣಸ್ಯ ಯಥಾವೃತ್ತಂ ಕಥಿತಂ ತೇ ವಸುಂಧರೇ ।
ಲವಣಸ್ಯ ವಧಂ ಶ್ರುತ್ವಾ ರಾಘವೋ ವಾಕ್ಯಮಬ್ರವೀತ್ ।
ವರಂ ವರಯ ಶತ್ರುಘ್ನ ಯತ್ತೇ ಮನಸಿ ರೋಚತೇ ॥ ೫೭ ॥

ರಾಘವಸ್ಯ ವಚಃ ಶ್ರುತ್ವಾ ಶತ್ರುಘ್ನೋ ವಾಕ್ಯಮಬ್ರವೀತ್ ।
ಯದಿ ತುಷ್ಟೋಽಸಿ ಮೇ ದೇವ ವರಾರ್ಹೋ ಯದಿ ವಾಪ್ಯಹಂ ॥ ೫೮ ॥

ದೀಯತಾಂ ಮಮ ದೇವೋಽಯಂ ಯದಿ ಮೇ ವರದೋ ಭವಾನ್ ॥ ೫೯ ॥

ಪಾರಂಗತರೂ, ನನಗೆ ಸಮಾನರೂ ಆದ ಇಪ್ಪತ್ತಾರುಸಾವಿರ ಜನ ಬ್ರಾಹ್ಮಣರನ್ನು ಅಲ್ಲಿ ನೆಲೆಗೊಳಿಸಿದನು.

೫೬. ಮಥುರೆಯಲ್ಲಿ ಮೊದಲು ವೇದಹೀನನಾದವನಿದ್ದೆಡೆಯಲ್ಲಿಲ್ಲಾ ಈಗ ಚತುರ್ವೇದ ಪಾರಂಗತನಾದ ಬ್ರಾಹ್ಮಣನಾದನು. ಅಲ್ಲಿಯ ಒಬ್ಬ ಬ್ರಾಹ್ಮಣನಿಗೆ ಭೋಜನಮಾಡಿಸಿದರೆ, ಕೋಟಿ ಸಂಖ್ಯೆಯ ಬ್ರಾಹ್ಮಣರಿಗ ಭೋಜನಮಾಡಿಸಿದಂತಾಗುವುದು.

೫೭. ವಸುಂಧರೇ, ಲವಣಾಸುರ ವೃತ್ತಾಂತವನ್ನು ಇದ್ದಂತೆ ನಿನಗೆ ಹೇಳಿದೆನು. ಲವಣಾಸುರ ವಧೆಯಾದುದನ್ನು ಕೇಳಿ, ರಾಮನು "ಶತ್ರುಘ್ನಾ, ನಿನ್ನ ಮನಸ್ಸಿಗೆ ಬೇಕಾದ ವರವನ್ನು ಕೇಳು. ಕೊಡುತ್ತೇನೆ." ಎಂದು ಹೇಳಿದನು

೫೮-೫೯. ರಾಘವನ ಆ ಮಾತನ್ನು ಕೇಳಿ, ಶತ್ರುಘ್ನನು, "ದೇವ, ನೀನು ನನ್ನಲ್ಲಿ ಸಂತುಷ್ಟನಾಗಿ ವರವನ್ನು ಕೊಡುವವನಾಗಿದ್ದು, ನಾನು ವರಕ್ಕೆ ಅರ್ಹನಾಗಿರುವೆನಾದರೆ, ನನಗೆ ಈ ವರಾಹದೇವನನ್ನು ಅನುಗ್ರಹಿಸು." ಎಂದನು.

ಶತ್ರುಘ್ನಸ್ಯ ವಚಃ ಶ್ರುತ್ವಾ ರಾಘವೋ ವಾಕ್ಯಮಬ್ರವೀತ್ ।
ನಯ ಶತ್ರುಘ್ನ ದೇವಂ ತ್ವಂ ದಿವ್ಯಂ ವಾರಾಹರೂಪಿಣಂ ॥ ೬೦ ॥

ಧನ್ಯಾಸೌ ಮಂಡಲೀ ಲೋಕೇ ಧನ್ಯಾಸಾ ಮಥುರಾ ಪುರೀ ।
ಧನ್ಯಾಸ್ತೇ ಮಾಥುರಾ ಲೋಕಾಃ ಪಶ್ಯಂತಿ ಕಪಿಲಂ ಸದಾ ॥ ೬೧ ॥

ದೃಷ್ಟಃ ಸ್ಪೃಷ್ಟಃ ಸದಾ ಧ್ಯಾತಃ ಸ್ನಾಪಿತಶ್ಚ ದಿನೇ ದಿನೇ ।
ಅನುಲಿಪ್ತಶ್ಚ ಶತ್ರುಘ್ನ ಸರ್ವಪಾಪಂ ವ್ಯಪೋಹತಿ ॥ ೬೨ ॥

ಪೂಜಿತಃ ಸ್ನಾಪಿತೋ ದೇವೋ ದೃಷ್ಟೋ ಯೈಸ್ತು ದಿನೇ ದಿನೇ ।
ಸರ್ವಂ ಹರತಿ ವೈ ಪಾಪಂ ಮೋಕ್ಷಂ ಚೈವ ಪ್ರಯಚ್ಛತಿ ॥ ೬೩ ॥

---

೬೦. ರಾಮನು ಶತ್ರುಘ್ನನ ಆ ಮಾತನ್ನು ಕೇಳಿ, ಹೀಗೆ ಹೇಳಿದನು. "ಶತ್ರುಘ್ನಾ, ವರಾಹರೂಪಿಯಾದ ದಿವ್ಯದೇವನನ್ನು ಬಿಜಮಾಡಿಸಿಕೊಂಡು ಹೋಗು.

೬೧. ಧನ್ಯವಾದ ಆ ಮಥುರಾಮಂಡಲವೂ, ಧನ್ಯವಾದ ಆ ಮಥುರಾ ಪುರಿಯೂ, ಸುಕೃತಿಗಳಾದ ಆ ಮಥುರೆಯ ಜನರೂ ಯಾವಾಗಲೂ ಕಪಿಲ ವರಾಹಮೂರ್ತಿಯನ್ನು ಸಂದರ್ಶಿಸುವರು.

೬೨. ಶತ್ರುಘ್ನನೇ, ಪ್ರತಿದಿನವೂ ಈ ದೇವನ ದರ್ಶನದಿಂದಲೂ, ಸ್ಪರ್ಶನದಿಂದಲೂ, ಧ್ಯಾನದಿಂದಲೂ ಮನುಷ್ಯನ ಸರ್ವಪಾಪವೂ ಹೊರಟು ಹೋಗುವುದು.

೬೩. ಯಾರು ಪ್ರತಿದಿನವೂ ಈ ದೇವನನ್ನು ಪೂಜಿಸುವರೋ ಸಂದರ್ಶಿಸುವರೋ, ಅಭಿಷೇಕಮಾಡುವರೋ ಅವರ ಪಾಪವನ್ನು ಅವನು ಪರಿಹರಿಸುವುದಲ್ಲದೆ ಅವರಿಗೆ ಮೋಕ್ಷವನ್ನೂ ಅನುಗ್ರಹಿಸುವನು."

ಇತ್ಯುಕ್ತ್ವಾ ರಾಘವಸ್ತಸ್ಮೈ ದೇವಂ ಪ್ರಾದಾದ್ವಸುಂಧರೇ ।
ದೇವಮಾದಾಯ ಶತ್ರುಘ್ನೋ ಜಗಾಮ ಮಥುರಾಂ ಪುರೀಂ ॥ ೬೪ ॥

ಬ್ರಾಹ್ಮಣಂ ಸ್ಥಾಪಯಿತ್ವಾ ತು ಆಗಚ್ಛನ್ಮಮ ಸನ್ನಿಧೌ ।
ತತ್ರ ಮಧ್ಯೇ ತು ಸಂಸ್ಥಾಪ್ಯ ಪೂಜಯಾಮಾಸ ರಾಘವಃ ।
ಅನೇನ ಕ್ರಮಯೋಗೇನ ಮಥುರಾಯಾಂ ಸ್ಥಿತಃ ಪ್ರಭುಃ ॥ ೬೫ ॥

ಗಯಾಯಾಂ ಪಿಂಡದಾನೇನ ಯತ್ಫಲಂ ÷ಜ್ಯೇಷ್ಠಪುಷ್ಕರೇ ।
ತತ್ಫಲಂ ಸಮವಾಪ್ನೋತಿ ಶ್ವೇತಂ ದೃಷ್ಟ್ವಾ ಸದಾ ನರಃ ॥ ೬೬ ॥

ವಿಶ್ರಾಂತಿಸಂಜ್ಞಕೇ ತದ್ವದ್ಗೋವಿಂದೇ ಚ ತಥಾ ಹರೌ ।
ಕೇಶವೇ ದೀರ್ಘವಿಷ್ಣೌ ಚ ತದೇವ ಫಲಮುಚ್ಯತೇ ॥ ೬೭ ॥

---

೬೪. ವಸುಂಧರೇ, ರಾಮನು ಹೀಗೆ ಹೇಳಿ, ವರಾಹದೇವನನ್ನು ಶತ್ರುಘ್ನನಿಗೆ ಅನುಗ್ರಹಿಸಿದನು. ಶತ್ರುಘ್ನನು ದೇವನನ್ನು ಬಿಜಮಾಡಿಸಿಕೊಂಡು ಮಧುರಾಪುರಕ್ಕೆ ಬಂದನು.

೬೫. ಬಂದು, ಅಲ್ಲಿ ನಗರಮಧ್ಯದಲ್ಲಿ, ವರಾಹಮೂರ್ತಿಯಾದ ನನ್ನನ್ನು ಸ್ಥಾಪಿಸಿ, ನನ್ನ ಸನ್ನಿಧಿಯಲ್ಲಿ ಬ್ರಾಹ್ಮಣನನ್ನು ಇಟ್ಟು ಶತ್ರುಘ್ನನು ಪೂಜಿಸಿದನು. ಈ ಕ್ರಮದಲ್ಲಿ ವರಾಹಪ್ರಭುವು ಮಧುರೆಯಲ್ಲಿ ನೆಲಸಿದನು.

೬೬. ಗಯೆಯಲ್ಲಿ (÷ಜ್ಯೇಷ್ಠಪುಷ್ಕರದಲ್ಲಿ) ಫಲ್ಗುತೀರ್ಥದಲ್ಲಿ ಪಿಂಡಪ್ರದಾನ ಮಾಡುವುದರಿಂದ ಮನುಷ್ಯನು ಪಡೆಯುವ ಫಲವನ್ನು ಶ್ವೇತ ವರಾಹಮೂರ್ತಿಯ ಸಂದರ್ಶನದಿಂದ ಯಾವಾಗಲೂ ಪಡೆಯುವನು.

೬೭. ವಿಶ್ರಾಂತಿಕ್ಷೇತ್ರದೇವನ, ಗೋವಿಂದನ, ಹರಿಯ, ಕೇಶವನ ಮತ್ತು ದೀರ್ಘವಿಷ್ಣುವಿನ ಸಂದರ್ಶನದಿಂದಲೂ ಶ್ವೇತ ವರಾಹದೇವ ದರ್ಶನದ ಫಲವನ್ನೇ ಪಡೆಯುವನು.

÷ ಜ್ಯೇಷ್ಠಪುಷ್ಕರ = ಸರೋವರವುಳ್ಳ ಒಂದು ಕ್ಷೇತ್ರ ; ಜ್ಯೇಷ್ಠಾ ನಕ್ಷತ್ರ ; ಅತಿ ಶ್ರೇಷ್ಠವಾದ ನೀರು.

ಉದಯೇ ಮಾಮಕಂ ತೇಜಃ ಸದಾ ವಿಶ್ರಾಂತಿ ಸಂಜ್ಞಕೇ ।
ಮಧ್ಯಾಹ್ನೇ ಮಾಮಕಂ ತೇಜೋ ದೀರ್ಘವಿಷ್ಣೌ ವ್ಯವಸ್ಥಿತಂ ।
ಕೇಶವೇ ಮಾಮಕಂ ತೇಜೋ ದಿನಭಾಗೇ ಚತುರ್ಥಕೇ ॥ ೬೮ ॥

ಏಷಾವಿದ್ಯಾ ಪುರಾ ದೇವಿ ನಿತ್ಯಕಾಲಂ ಸುಗೋಪಿತಾ ।
ಭಕ್ತಾ ತ್ವಂ ಮಮ ಶಿಷ್ಯಾ ಚ ಕಥಿತಾ ತೇ ವಸುಂಧರೇ ॥ ೬೯ ॥

ಇತಿ ಶ್ರೀ ವರಾಹಪುರಾಣೇ ಮಧುರಾಮಾಹಾತ್ಮ್ಯೇ ಕಪಿಲ ವರಾಹ
ಮಾಹಾತ್ಮ್ಯಂ ನಾಮ ತ್ರಿಷಷ್ಟ್ಯಧಿಕಶತತಮೋಽಧ್ಯಾಯಃ

---

೬೮. ದೇವೀ, ಪ್ರಾತಃಕಾಲದಲ್ಲಿ ಯಾವಾಗಲೂ ನನ್ನ ತೇಜಸ್ಸು ವಿಶ್ರಾಂತಿಕ್ಷೇತ್ರದಲ್ಲಿಯೂ, ಮಧ್ಯಾಹ್ನದಲ್ಲಿ ದೀರ್ಘವಿಷ್ಣುವಿನಲ್ಲಿಯೂ ಇರುವುದು. ಕೇಶವನಲ್ಲಿ ನನ್ನ ತೇಜಸ್ಸು ಹಗಲಿನ ನಾಲ್ಕನೆಯ ಜಾವ(ಭಾಗ)ದಲ್ಲಿ ಇರುವುದು.

೬೯. ದೇವೀ, ಪೂರ್ವದಲ್ಲಿ ಈ ವಿದ್ಯೆಯು ಯಾವಾಗಲೂ ಬಹು ರಹಸ್ಯವಾಗಿದ್ದಿತು. ವಸುಂಧರೇ, ನೀನು ನನ್ನ ಭಕ್ತಳೂ, ಶಿಷ್ಯಳೂ, ಆದುದರಿಂದ ನಿನಗೆ ಇದನ್ನು ಹೇಳಿದುದಾಯಿತು

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ವೈಕುಂಠತೀರ್ಥದ ಮಹಿಮೆಯನ್ನೂ ಮಧುರೆಯೆಂಬ ಪದ್ಮದ ಕರ್ಣಿಕೆಯಲ್ಲಿಯೂ, ನಾಲ್ಕು ದಿಕ್ಕಿನ ದಳಗಳಲ್ಲಿಯೂ ನೆಲಸಿರುವ ದೇವಮೂರ್ತಿಗಳ ವಿಚಾರವನ್ನೂ ಹೇಳುವನು. ಅನಂತರ ಆ ಮೂರ್ತಿಗಳಲ್ಲಿ ರಾವಣನಿಂದ ಪೂಜಿತನಾಗಿ ಲಂಕೆಯಲ್ಲಿದ್ದು ಬಳಿಕ ಶ್ರೀರಾಮ ನಿಂದ ಅಯೋಧ್ಯೆಯಲ್ಲಿ ಪೂಜಿತನಾಗಿದ್ದು ಆಮೇಲೆ ಶತ್ರುಘ್ನನಿಂದ ಮಧುರೆಯಲ್ಲಿ ಸ್ಥಾಪಿತನಾದ ಕೇಶವ ಅಥವಾ ವರಾಹಮೂರ್ತಿಯ ಮಹಿಮೆಯೇ ಮೊದಲಾದು ದನ್ನು ತಿಳಿಸುವನು.

ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರ ಅರವತ್ತಮೂರನೆಯ ಅಧ್ಯಾಯ

॥ ಶ್ರೀಃ ॥

ಚತುಷ್ಷಷ್ಟ್ಯಧಿಕಶತತಮೋಧ್ಯಾಯಃ
ಅನ್ನಕೂಟಪರಿಕ್ರಮಪ್ರಭಾವಃ

॥ ಶ್ರೀವರಾಹ ಉವಾಚ ॥

ಅಸ್ತಿ ಗೋವರ್ಧನಂ ನಾಮ ಕ್ಷೇತ್ರಂ ಪರಮದುರ್ಲಭಂ ।
ಮಥುರಾಪಶ್ಚಿಮೇ ಭಾಗೇ ಅದೂರಾದ್ಯೋಜನದ್ವಯಂ ॥ ೧ ॥

ಹ್ರದಂ ತತ್ರ ಮಹಾಭಾಗೇ ದ್ರುಮಗುಲ್ಮಲತಾಯುತಂ ।
ಚತ್ವಾರಿ ತತ್ರ ತೀರ್ಥಾನಿ ಪುಣ್ಯಾನಿ ಚ ಶುಭಾನಿ ಚ ॥ ೨ ॥

ನೂರ ಅರವತ್ತನಾಲ್ಕನೆಯ ಅಧ್ಯಾಯ
ಅನ್ನಕೂಟಪ್ರದಕ್ಷಿಣ ಪ್ರಭಾವ

೧. ಶ್ರೀವರಾಹ—ಮಥುರೆಯ ಪಶ್ಚಿಮದಿಕ್ಕಿನಲ್ಲಿ ಹತ್ತಿರದಲ್ಲಿಯೇ ಎಂದರೆ ಎರಡು ಯೋಜನದಲ್ಲಿ ಗೋವರ್ಧನವೆಂಬ ಪರಮ ದುರ್ಲಭವಾದ ಕ್ಷೇತ್ರವಿದೆ.

೨. ಮಹಾಭಾಗ್ಯೇ, ಅಲ್ಲಿರುವ ಮಡುವನ್ನು ಮರಬಳ್ಳಿಪೊದೆಗಳು ಸುತ್ತಿರುವವು. ಅಲ್ಲಿ, ಪವಿತ್ರವೂ, ಶುಭವೂ ಆದ ನಾಲ್ಕು ತೀರ್ಥಗಳಿವೆ.

ಐಂದ್ರಂ ಪೂರ್ವೇಣ ಪಾರ್ಶ್ವೇನ ಯಮತೀರ್ಥಂತು ದಕ್ಷಿಣೇ ।
ಪಶ್ಚಿಮೇ ವಾರುಣಂ ತೀರ್ಥಂ ಕೌಬೇರಂ ಚೌತ್ತರೇಣ ತು ॥
ತೇಷಾಂ ಮಧ್ಯೇ ಸ್ಥಿತೋ ಭದ್ರೇ ಕ್ರೀಡಯಿಷ್ಯೇ ಯದೃಚ್ಛಯಾ ॥ ೩ ॥

ತತ್ರ ವೈ ಶಕ್ರತೀರ್ಥೇ ತು ಸ್ನಾನಂ ಕುರ್ಯಾದ್ದೃಢವ್ರತಃ ।
ಮೋದತೇ ಶಕ್ರಲೋಕೇ ತು ಸರ್ವದ್ವಂದ್ವವಿವರ್ಜಿತಃ ॥ ೪ ॥

ದಕ್ಷಿಣೇ ಯಮತೀರ್ಥೇ ತು ಸ್ನಾನಂ ಕುರ್ಯಾದ್ಯಥಾವಿಧಿ ।
ಯಮಸ್ಯ ಭವನಂ ಗತ್ವಾ ಮೋದತೇ ಕೃತನಿಶ್ಚಯಃ ॥ ೫ ॥

ತತ್ರಾಥ ಮುಂಚತಿ ಪ್ರಾಣಾನ್ ಲೋಭಮೋಹವಿವರ್ಜಿತಃ ।
ಯಮಲೋಕಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೬ ॥

---

೩. ಆ ಕ್ಷೇತ್ರದ ಪೂರ್ವದ ಅಂಚಿನಲ್ಲಿ ಇಂದ್ರತೀರ್ಥವೂ, ದಕ್ಷಿಣದ ಅಂಚಿನಲ್ಲಿ ಯಮತೀರ್ಥವೂ, ಪಶ್ಚಿಮದಲ್ಲಿ ವರುಣತೀರ್ಥವೂ, ಉತ್ತರದಲ್ಲಿ ಕುಬೇರತೀರ್ಥವೂ ಇದೆ. ಭದ್ರೇ, ಅವುಗಳ ನಡುವೆ ಇದ್ದುಕೊಂಡು ನಾನು ಅಕಸ್ಮಾತ್ತಾಗಿ ವಿಹರಿಸುವೆನು.

೪. ಸುಖದುಃಖ ಶೀತೋಷ್ಣಾದಿ ಸರ್ವದ್ವಂದ್ವಗಳನ್ನೂ ಗಣಿಸದೆ ದೃಢವ್ರತನಾಗಿ ಆ ಶಕ್ರತೀರ್ಥದಲ್ಲಿ ಸ್ನಾನಮಾಡುವವನು ಇಂದ್ರಲೋಕದಲ್ಲಿ ಸಂತೋಷಪಡುವನು.

೫. ದಕ್ಷಿಣದಲ್ಲಿರುವ ಯಮತೀರ್ಥದಲ್ಲಿಯೂ ದೃಢಮನಸ್ಸಿನಿಂದ ವಿಧಿಯನ್ನನುಸರಿಸಿ ಸ್ನಾನಮಾಡುವವನು ಯಮನ ಗೃಹಕ್ಕೆ ಹೋಗಿ ಸಂತೋಷಪಡುವನು.

೬. ಬಳಿಕ ಲೋಭಮೋಹಗಳನ್ನು ಬಿಟ್ಟು, ಯಮಲೋಕವನ್ನು ಪರಿತ್ಯಜಿಸಿ ಆ ಯಮತೀರ್ಥದಲ್ಲಿ ಮೃತನಾದರೆ ಅವನು ನನ್ನ ಲೋಕವನ್ನು ಸೇರುವನು.

ತತ್ರೈವ ವಾರುಣಂ ತೀರ್ಥಮಾಸಾದ್ಯ ಸ್ನಾನಮಾಚರೇತ್ ।
ವಾರುಣಂ ಭವನಂ ಗತ್ವಾ ಮುಚ್ಯತೇ ಸರ್ವಕಿಲ್ಬಿಷಾತ್ ॥ ೭ ॥

ತತ್ರಾಥ ಮುಂಚತಿ ಪ್ರಾಣಾನ್ ಕಾಮಕ್ರೋಧವಿವರ್ಜಿತಃ ।
ವಾರುಣಂ ಲೋಕಮುತ್ಸೃಜ್ಯ ಮಮ ಲೋಕಂ ಸ ಗಚ್ಛತಿ ॥ ೮ ॥

ತತ್ರ ಮಧ್ಯೇಚ ಯಃ ಸ್ನಾತಿ ಕ್ರೀಡತೇ ಸ ಮಯಾ ಸಹ ।
ಅಥಾತ್ರ ಮುಂಚತಿ ಪ್ರಾಣಾನ್ಮಮ ಲೋಕಂ ಸ ಗಚ್ಛತಿ ॥ ೯ ॥

ಅನ್ನಕೂಟಂ ತತಃ ಪ್ರಾಪ್ಯ ತಸ್ಯ ಕುರ್ಯಾತ್ಪ್ರದಕ್ಷಿಣಂ ।
ನ ತಸ್ಯ ಪುನರಾವೃತ್ತಿರ್ದೇವಿ ಸತ್ಯಂ ಬ್ರವೀಮಿ ತೇ ॥ ೧೦ ॥

ಸ್ನಾತ್ವಾ ಮಾನಸಗಂಗಾಯಾಂ ದೃಷ್ಟ್ವಾ ಗೋವರ್ಧನೇ ಹರಿಂ ।
ಅನ್ನಕೂಟಂ ಪರಿಕ್ರಮ್ಯ ಕಿಂ ಪುನಃ ಪರಿಶೋಚತಿ ॥ ೧೧ ॥

---

೭. ಅಲ್ಲೇ ಇರುವ ವಾರುಣತೀರ್ಥಕ್ಕೆ ಹೋಗಿ ಸ್ನಾನಮಾಡಿದರೆ ವರುಣ ಲೋಕಕ್ಕೆ ಹೋಗಿ, ಸರ್ವಪಾಪಗಳಿಂದಲೂ ವಿಮುಕ್ತನಾಗುವನು.

೮. ಅಲ್ಲದೆ ಕಾಮಕ್ರೋಧಗಳನ್ನು ಬಿಟ್ಟು ಆ ತೀರ್ಥದಲ್ಲಿ ಪ್ರಾಣಗಳನ್ನು ಪರಿತ್ಯಜಿಸುವವನು ವರುಣಲೋಕವನ್ನು ಸೇರದೆ ನನ್ನ ಲೋಕವನ್ನು ಸೇರುವನು.

೯. ಆ ಕ್ಷೇತ್ರದ ಮಧ್ಯದಲ್ಲಿರುವ ತೀರ್ಥದಲ್ಲಿ ಸ್ನಾನಮಾಡುವವನು ನನ್ನೊಡನೆ ವಿನೋದಪಡುವನು. ಅಲ್ಲಿ ಪ್ರಾಣಗಳನ್ನು ತ್ಯಜಿಸುವವನು ನನ್ನ ಲೋಕವನ್ನು ಸೇರುವನು.

೧೦. ಬಳಿಕ ಅನ್ನಕೂಟ (ಶಿಖರ)ಕ್ಕೆ ಹೋಗಿ ಅದನ್ನು ಪ್ರದಕ್ಷಿಣಮಾಡ ಬೇಕು. ದೇವೀ, ನಿನಗೆ ಸತ್ಯವನ್ನು ಹೇಳುತ್ತೇನೆ. ಹಾಗೆ ಪ್ರದಕ್ಷಿಣಮಾಡು ವವನಿಗೆ ಪುನರ್ಜನ್ಮವಿಲ್ಲ.

೧೧. ಮಾನಸಗಂಗೆಯಲ್ಲಿ ಸ್ನಾನಮಾಡಿ ಗೋವರ್ಧನಕ್ಷೇತ್ರದಲ್ಲಿ ಹರಿ ಯನ್ನು ಸಂದರ್ಶಿಸಿ, ಅನ್ನಕೂಟವನ್ನು ಪ್ರದಕ್ಷಿಣಮಾಡಿದವನು ಮತ್ತೆ ದುಃಖಿ ಸುವನೇನು!

ಸೋಮವಾರೇ ತ್ವಮಾಯಾಂ ವೈ ಪ್ರಾಪ್ಯ ಗೋವರ್ಧನಂ ಗಿರಿಂ ।
ದತ್ವಾ ಪಿಂಡಂ ಪಿತೃಭ್ಯಶ್ಚ ರಾಜಸೂಯಫಲಂ ಭವೇತ್ ॥ ೧೨ ॥

ಗಯಾಯಾಂ ಪಿಂಡದಾನೇನ ಯತ್ಫಲಂ ಪ್ರಾಪ್ಯತೇ ನರೈಃ ।
ತತ್ಫಲಂ ಪ್ರಾಪ್ಯತೇ ತತ್ರ ನಾತ್ರ ಕಾರ್ಯಾ ವಿಚಾರಣಾ ॥ ೧೩ ॥

ಗೋವರ್ಧನಂ ಪರಿಕ್ರಮ್ಯ ದೃಷ್ಟ್ವಾ ದೇವಂ ಪರಂ ಹರಿಂ ।
ರಾಜಸೂಯಾಶ್ವಮೇಧಾನಾಂ ಫಲಂ ಪ್ರಾಪ್ನೋತ್ಯಸಂಶಯಂ ॥ ೧೪ ॥

॥ ಪೃಥಿವ್ಯುವಾಚ ॥

ಪರಿಕ್ರಮೋನ್ನಕೂಟಸ್ಯ ವಿಧಿನಾ ಕ್ರಿಯತೇ ಕಥಂ ।
ಪ್ರಭಾವಗುಣಮಾಹಾತ್ಮ್ಯಂ ತದ್ಭವಾನ್ ವಕ್ತುಮರ್ಹಸಿ ॥ ೧೫ ॥

---

೧೨. ಸೋಮವಾರದಿಂದ ಕೂಡಿದ ಅಮಾವಾಸ್ಯೆಯ ದಿನ ಗೋವರ್ಧನ ಗಿರಿಗೆ ಹೋಗಿ, ಪಿತೃಗಳಿಗೆ ಪಿಂಡವನ್ನು ಕೊಟ್ಟು ಮನುಷ್ಯನು ರಾಜಸೂಯ ಯಾಗದ ಫಲವನ್ನು ಪಡೆಯುವನು.

೧೩. ಈ ವಿಚಾರದಲ್ಲಿ ಹೆಚ್ಚಾಗಿ ವಿಮರ್ಶೆ ಬೇಕಿಲ್ಲ. ಮನುಷ್ಯರು ಗಯೆಯಲ್ಲಿ ಪಿಂಡಪ್ರದಾನಮಾಡುವುದರಿಂದ ಪಡೆಯುವ ಫಲವನ್ನೇ ಗೋವರ್ಧನ ಗಿರಿಯಲ್ಲಿ ಮಾಡುವುದರಿಂದಲೂ ಪಡೆಯುವರು.

೧೪. ಗೋವರ್ಧನಗಿರಿಯನ್ನು ಪ್ರದಕ್ಷಿಣಮಾಡಿ ಪರದೇವನಾದ ಹರಿಯನ್ನು ಸಂದರ್ಶಿಸುವುದರಿಂದ ಮನುಷ್ಯನು ರಾಜಸೂಯಾಶ್ವಮೇಧಯಾಗಗಳ ಫಲವನ್ನು ಸಂಶಯವಿಲ್ಲದೆ ಪಡೆಯುವನು.

೧೫. ಪೃಥಿವೀದೇವಿ—ಅನ್ನಕೂಟದ ಪ್ರದಕ್ಷಿಣವನ್ನು ಯಾವ ಕ್ರಮದಿಂದ ಮಾಡಬೇಕು? ಅದರ ಪ್ರಭಾವಗುಣಮಹಿಮೆಯನ್ನು ನೀನು ಹೇಳಬೇಕಾಗಿದೆ.

॥ ಶ್ರೀವರಾಹ ಉವಾಚ ॥

ಮಾಸಿ ಭಾದ್ರಪದೇ ಯಾ ತು ಶುಕ್ಲಾ ಚೈಕಾದಶೀ ಶುಭಾ ।
ಗೋವರ್ಧನೇ ಸೋಽಪವಾಸಃ ಕುರ್ಯಾತ್ತತ್ರ ಪ್ರದಕ್ಷಿಣಾಂ ॥ ೧೬ ॥

ಸ್ನಾತ್ವಾ ಮಾನಸಗಂಗಾಯಾಂ ಪ್ರಭಾತೇ ಉದಿತೇ ರವೌ ।
ಗೋವರ್ಧನಂ ಪ್ರಸಾದ್ಯೈವಂ ಹರಿಂ ಜಾಚಲಮೂರ್ಧನಿ ॥ ೧೭ ॥

ಪುಂಡರೀಕಂ ತತೋ ಗಚ್ಛೇತ್ಕುಂಡೇ ಸ್ನಾತ್ವಾ ವಿಧಾನತಃ ।
ದೇವಾನ್ ಪಿತ್ಂ್ನ ಸಮಭ್ಯರ್ಚ್ಯ ಪುಂಡರೀಕಮಥಾರ್ಚ್ಯ ಚ ॥ ೧೮ ॥

ಸರ್ವಪಾಪವಿನಿರ್ಮುಕ್ತಃ ಪ್ರಯಾತಿ ಭವನಂ ಹರೇಃ ॥ ೧೯ ॥

ಕುಂಡಂ ಚಾಪ್ಸರಸಂ ನಾಮ ಪ್ರಸನ್ನಸಲಿಲಾಶಯಂ ।
ತತ್ರ ಸ್ನಾನಂ ತರ್ಪಣಂ ಚ ಕೃತ್ವಾ ಫಲಮವಾಪ್ನುಯಾತ್ ॥ ೨೦ ॥

---

೧೬. ಶ್ರೀವರಾಹ—ಭಾದ್ರಪದಮಾಸದ ಶುಕ್ಲಪಕ್ಷದ ಏಕಾದಶಿಯಾದ ಶುಭದಿನದಲ್ಲಿ ಗೋವರ್ಧನದಲ್ಲಿ ಉಪವಾಸವಿದ್ದು ಪ್ರದಕ್ಷಿಣೆ ಮಾಡಬೇಕು.

೧೭-೧೯. ಏಕಾದಶಿಯ ರಾತ್ರಿ ಕಳೆದು ಸೂರ್ಯೋದಯವಾಗಲು ಮಾನಸ ಗಂಗೆಯಲ್ಲಿ ಸ್ನಾನಮಾಡಿ ಗೋವರ್ಧನಗಿರಿಶಿಖರದಲ್ಲಿರುವ ಹರಿಯನ್ನು ವಂದಿಸಿ, ಅವನ ಅನುಗ್ರಹವನ್ನು ಪಡೆದು, ಬಳಿಕ ಪುಂಡರೀಕಕ್ಷೇತ್ರಕ್ಕೆ ಹೋಗಬೇಕು. ಅಲ್ಲಿಯ ಕುಂಡದಲ್ಲಿ ವಿಧಿಪೂರ್ವಕವಾಗಿ ಸ್ನಾನಮಾಡಿ, ದೇವತೆಗಳನ್ನೂ, ಪಿತೃಗಳನ್ನೂ ಚೆನ್ನಾಗಿ ಪೂಜಿಸಿ, ಬಳಿಕ ಪುಂಡರೀಕವನ್ನೂ ಅರ್ಚಿಸುವುದರಿಂದ ಮನುಷ್ಯನು ಪಾಪಗಳೆಲ್ಲವನ್ನೂ ಕಳೆದುಕೊಂಡು ವಿಷ್ಣುನಿವಾಸವನ್ನು ಸೇರುವನು.

೨೦-೨೧. ಅಪ್ಸರಸಕುಂಡವೆಂಬುದು ನಿರ್ಮಲವಾದ ಜಲಾಶಯ. ಅಲ್ಲಿ ಸ್ನಾನವನ್ನೂ, ತರ್ಪಣವನ್ನೂ ಮಾಡಿ ಮನುಷ್ಯನು ಪಾಪವನ್ನು (ಕೊಡವಿ)

ರಾಜಸೂಯಾಶ್ವಮೇಧಾನಾಂ ಧೂತಪಾಪ್ಮಾ ನ ಸಂಶಯಃ ॥ ೨೦ ॥

ತೀರ್ಥಂ ಸಂಕರ್ಷಣಂ ನಾಮ್ನಾ ಬಲಭದ್ರೇಣ ರಕ್ಷಿತಂ।
ಗೋಹತ್ಯಾ ಸರ್ವಸಂಲಗ್ನಾ ಉತ್ತೀರ್ಣಾ ತತ್ರ ದೂರತಃ ॥ ೨೨ ॥

ಸ್ನಾನಾದ್ಗಚ್ಛತಿ ಸಾ ಕ್ಷಿಪ್ರಂ ನಾತ್ರಕಾರ್ಯಾ ವಿಚಾರಣಾ ॥ ೨೩ ॥

ಅನ್ನಕೂಟಸ್ಯ ಸಾನ್ನಿಧ್ಯೇ ತೀರ್ಥಂ ಶಕ್ರವಿನಿರ್ಮಿತಂ ।
ತತ್ರ ಕೃಷ್ಣೇನ ಪೂಜಾರ್ಥಂ ಇಂದ್ರಸ್ಯ ವಿಹತೋ ಮಖಃ ॥
ಮಹದಿಂದ್ರಸ್ಯ ಚೋತ್ಥಾನಂ ಭಕ್ಷ್ಯಭೋಜ್ಯ ಸಮನ್ವಿತಂ ॥ ೨೪ ॥

ಕೃತ್ವಾ ತುಷ್ಟಿಕರಾನ್ಸ್ವಕ್ವಾದಿಂದ್ರೇಣ ಸಹ ಸಂಕಥಾ ।
ಇಂದ್ರಸ್ಯ ವರ್ಷತೋಽತ್ಯಂತಂ ತಾಸಾಂ ಪೀಡಾಕರಂಜಲಂ ॥ ೨೫ ॥

ಕಳೆದುಕೊಂಡು ರಾಜಸೂಯಯಾಶ್ವಮೇಧಯಾಗಗಳ ಫಲವನ್ನು ಪಡೆಯು ವುದರಲ್ಲಿ ಸಂಶಯವಿಲ್ಲ.

೨೨-೨೩. ಸಂಕರ್ಷಣತೀರ್ಥವೆಂಬುದು ಬಲರಾಮನಿಂದ ರಕ್ಷಿತವಾದುದು. ಅವನ ದೇಹದಲ್ಲೆಲ್ಲಾ ಅಂಟಿದ್ದ ಗೋಹತ್ಯೆ ಆ ತೀರ್ಥದಲ್ಲಿ ಅವನನ್ನು ಬಿಟ್ಟು ದೂರಕ್ಕೆ ದಾಟಿತು ಆ ತೀರ್ಥದಲ್ಲಿ ಸ್ನಾನಮಾಡುವುದರಿಂದ ಗೋಹತ್ಯೆಯ ಪಾಪವು ಬೇಗನೆ ತೊಲಗುವುದು. ಇದರಲ್ಲಿ ವಿಚಾರ ಬೇಕಿಲ್ಲ.

೨೪. ಅನ್ನಕೂಟದ ಹತ್ತಿರದಲ್ಲಿ ಇಂದ್ರನಿರ್ಮಿತವಾದ ತೀರ್ಥವಿದೆ. ಅಲ್ಲಿ ಕೃಷ್ಣನು ಇಂದ್ರನ ಪೂಜಾರ್ಥವಾಗಿ ನಡೆಯುತ್ತಿದ್ದ ಭಕ್ಷ್ಯಭೋಜ್ಯಗಳಿಂದ ಕೂಡಿ, ಇಂದ್ರನಿಗೆ ತುಷ್ಟಿಕರವೂ, ಬಹು ಸಂತೋಷಕರವೂ ಆದ ಯಜ್ಞವನ್ನು ತಡೆದು ನಿಲ್ಲಿಸಿದನು.

೨೫-೨೬. ಇಂದ್ರನು ಕೋಪಿಸಿಕೊಂಡು ಅತಿಯಾಗಿ ಮಳೆಯನ್ನು ಸುರಿಸಿ ಗೋವುಗಳಿಗೆ ಪೀಡೆಯನ್ನುಂಟುಮಾಡಲು ಅವುಗಳ ರಕ್ಷಣೆಗಾಗಿ ಕೃಷ್ಣನು

ತಾಸಾಂ ಗವಾಂ ರಕ್ಷಣಾಯ ಧೃತೋ ಗಿರಿವರಸ್ತದಾ ।
ಸೋನ್ನಕೂಟ ಇತಿ ಖ್ಯಾತಃ ಸರ್ವತಃ ಶಕ್ರಪೂಜಿತಃ || ೨೬ ||

ದೇವಾ ದೇವ್ಯಸ್ತಥಾ ಗಾವೋ ಋಷಿಭಿಶ್ಚ ಸಮನ್ವಿತಾಃ ।
ಪೂಜಿತಾಸ್ತರ್ಪಿತಾಃ ಶ್ರೇಷ್ಠಾಃ ಕ್ರಮತೋ ವಿಷ್ಣುನಾ ಪುರಾ || ೨೭ ||

ತಸ್ಮಿನ್‌ಸ್ಥಾನೇ ತರ್ಪಣೇನ ಶತಕ್ರತುಫಲಂ ಲಭೇತ್ || ೨೮ ||

ತತಃ ಕದಂಬಖಂಡಾಖ್ಯಂ ಕುಂಡಂತು ವಿಮಲೋದಕಂ ।
ಸ್ನಾತ್ವಾ ಪಿತ್ರ್ಯಾಣ ಸಮಭ್ಯರ್ಚ ಬ್ರಹ್ಮಲೋಕಮವಾಪ್ನುಯಾತ್ || ೨೯ ||

ಗತೋ ಗಚ್ಛೇದ್ದೇವಗಿರಿಂ ಶತಬಾಹುಸಮುಚ್ಛ್ರಿತಂ ।
ಯತ್ರ ಸ್ನಾನಾದ್ದರ್ಶನಾಚ್ಚ ವಾಜಪೇಯಫಲಂ ಲಭೇತ್ || ೩೦ ||

ಉತ್ತಮವಾದ ಆ ಗೋವರ್ಧನಗಿರಿಯನ್ನೇ ಎತ್ತಿ ಧರಿಸಿದನು. ಎಲ್ಲಾ ಕಡೆಯಲ್ಲೂ ಇಂದ್ರನಿಂದ ಪೂಜಿತವಾದ ಅದು ಅನ್ನಕೂಟವೆಂದು ಪ್ರಸಿದ್ಧವಾಯಿತು.

೨೭–೨೮. ಅಲ್ಲಿ ವಿಷ್ಣುವು ಪೂರ್ವದಲ್ಲಿ ಋಷಿಗಳಿಂದ ಸಹಿತರಾದ ಶ್ರೇಷ್ಠರಾದ ದೇವತೆಗಳನ್ನೂ, ದೇವಿಯರನ್ನೂ, ಗೋವುಗಳನ್ನೂ ಕ್ರಮದಿಂದ ಪೂಜಿಸಿ ಸಂತೋಷಪಡಿಸಿದನು. ಆ ಸ್ಥಳದಲ್ಲಿ ತರ್ಪಣಮಾಡುವುದರಿಂದ ನೂರು ಯಜ್ಞಗಳ ಫಲವನ್ನು ಪಡೆಯಬಹುದು.

೨೯. ಆಮೇಲೆ ಕದಂಬಖಂಡವೆಂಬ ಕುಂಡವು ನಿರ್ಮಲೋದಕವುಳ್ಳದಾಗಿದೆ. ಅಲ್ಲಿ ಸ್ನಾನಮಾಡಿ ಪಿತೃಗಳನ್ನು ಚೆನ್ನಾಗಿ ಪೂಜಿಸುವುದರಿಂದ ಮನುಷ್ಯನು ಬ್ರಹ್ಮಲೋಕವನ್ನು ಸೇರುವನು.

೩೦. ಬಳಿಕ ನೂರು ತೋಳುಗಳಷ್ಟೆತ್ತರವಿರುವ ದೇವಗಿರಿಗೆ ಹೋಗಬೇಕು. ಅಲ್ಲಿಯ ಸ್ನಾನದೇವದರ್ಶನಗಳಿಂದ ವಾಜಪೇಯವೆಂಬ ಯಜ್ಞದ ಫಲವನ್ನು ಪಡೆಯಬಹುದು.

ಮಹಾದೇವಂ ತತೋ ದೃಷ್ಟ್ವಾ ಗತ್ವಾ ಧ್ಯಾತ್ವಾ ಫಲಂ ಲಭೇತ್ ।
ಕುಂಡೇ ಸ್ನಾತ್ವಾ ಪಿತೄಂಸ್ತರ್ಪ್ಯ ಕೃತಕೃತ್ಯೋ ದಿವಂ ವ್ರಜೇತ್ ॥ ೩೧ ॥

ಗಂಗಾಯಾಶ್ಚೋತ್ತರಂ ಯಾವದ್ದೇವದೇವಸ್ಯ ಚಕ್ರಿಣಃ ।
ಅರಿಷ್ಟೇನ ಸಮಂ ಯತ್ರ ಮಹದ್ಯುದ್ಧಂ ಪ್ರವರ್ತಿತಂ ॥ ೩೨ ॥

ಘಾತಯಿತ್ವಾ ತತಶ್ಚೇಮಂ ಅರಿಷ್ಟಂ ವೃಷರೂಪಿಣಂ ॥ ೩೩ ॥

ಕೋಪೇನ ಪಾರ್ಷ್ಣಿಘಾತೇನ ಮಹ್ಯಾಂ ತೀರ್ಥಂ ಪ್ರವರ್ತಿತಂ ।
ವೃಷಭಸ್ಯ ವಧಾ ಜ್ಞೇಯಂ ತೀರ್ಥಂ ಸುಮಹದದ್ಭುತಂ ॥ ೩೪ ॥

ಸ್ನಾತಸ್ತತ್ರ ತದಾ ಕೃಷ್ಣೋ ವೃಷಂ ಹತ್ವಾ ಮಹಾಸುರಂ ।
ವೃಷಹತ್ಯಾಸಮಾಯುಕ್ತಃ ಕೃಷ್ಣಶ್ಚಿಂತಾನ್ವಿತೋಽಭವತ್ ॥
ವೃಷೋ ಹತೋ ಮಯಾ ಚಾಯಮರಿಷ್ಟಃ ಪಾಪಪೂರುಷಃ ॥ ೩೫ ॥

---

೩೧. ಬಳಿಕ ಮಹಾದೇವಕ್ಷೇತ್ರಕ್ಕೆ ಹೋಗಿ, ಆ ದೇವನನ್ನು ಸಂದರ್ಶಿಸಿ, ಧ್ಯಾನಮಾಡುವುದರಿಂದ ಫಲವಾಗುವುದು. ಅಲ್ಲಿರುವ ಕುಂಡದಲ್ಲಿ ಸ್ನಾನಮಾಡಿ, ಪಿತೃಗಳಿಗೆ ತರ್ಪಣವನ್ನು ಮಾಡಿ, ಮನುಷ್ಯನು ಕೃತಕೃತ್ಯನಾಗಿ ಸ್ವರ್ಗವನ್ನು ಸೇರುವನು.

೩೨–೩೩. ಗಂಗಾನದಿಯ ಉತ್ತರತೀರದವರೆಗಿರುವ ಪ್ರದೇಶದಲ್ಲಿ, ಕೃಷ್ಣನಿಗೆ ಅರಿಷ್ಟನೆಂಬ ಕಂಸನಕಡೆಯ ರಾಕ್ಷಸನ ಸಂಗಡ ದೊಡ್ಡದಾದ ಯುದ್ಧವು ನಡೆಯಿತು. ಕೃಷ್ಣನು, ಗೂಳಿಯರೂಪದಿಂದಿದ್ದ ಆ ಅರಿಷ್ಟನನ್ನು ಕೊಂದನು.

೩೪. ಆ ಯುದ್ಧದಲ್ಲಿ ಕೋಪಗೊಂಡು ಕಾಲಿನಿಂದ ಹೊಡೆದುದರಿಂದ ಭೂಮಿಯಲ್ಲಿ ಹಳ್ಳವು ಬಿದ್ದು ನೀರು ಮೇಲುಕ್ಕಿತು. ಆದುದರಿಂದ ಅದ್ಭುತವಾದ ಆ ತೀರ್ಥವನ್ನು ವೃಷಭವಧಾ ತೀರ್ಥವೆಂದು ತಿಳಿಯಬೇಕು.

೩೫. ಪಾಪಪುರುಷನಾಗಿ ವೃಷಭರೂಪದಿಂದಿದ್ದ ಈ ಅರಿಷ್ಟನನ್ನು ಕೊಂದೆನು. ಆದರೂ ನಾನು ಗೋವನ್ನು ಕೊಂದಂತಾಯಿತು. ಎಂದು ಚಿಂತಾಪರನಾದ ಕೃಷ್ಣನು ಅವನನ್ನು ಕೊಂದ ಬಳಿಕ ಆ ತೀರ್ಥದಲ್ಲಿ ಸ್ನಾನವನ್ನು ಮಾಡಿದನು.

ತತ್ರ ರಾಧಾ ಸಮಾಶ್ಲಿಷ್ಯ ಕೃಷ್ಣಮಕ್ಲಿಷ್ಟಕಾರಿಣಂ ।
ಸ್ವನಾಮ್ನಾ ವಿದಿತಂ ಕುಂಡಂ ಕೃತಂ ತೀರ್ಥಮದೂರತಃ ॥ ೩೬ ॥

ರಾಧಾಕುಂಡಮಿತಿ ಖ್ಯಾತಂ ಸರ್ವಪಾಪಹರಂ ಶುಭಂ ॥ ೩೭ ॥

ಅರಿಷ್ಟರಾಧಾಕುಂಡಾಭ್ಯಾಂ ಸ್ನಾನಾತ್ಫಲಮವಾಪ್ನುಯಾತ್ ।
ರಾಜಸೂಯಾಶ್ವಮೇಧಾನಾಂ ನಾತ್ರ ಕಾರ್ಯಾ ವಿಚಾರಣಾ ॥ ೩೮ ॥

ಗೋನರಬ್ರಹ್ಮಹತ್ಯಾಯಾಃ ಪಾಪಂ ಕ್ಷಿಪ್ರಂ ವಿನಶ್ಯತಿ ॥ ೩೯ ॥

ತೀರ್ಥಂ ಹಿ ಮೋಕ್ಷರಾಜಾಖ್ಯಂ ನೃಣಾಂ ಮುಕ್ತಿಪ್ರದಾಯಕಂ ।
ಯಸ್ಯ ದರ್ಶನಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥ ೪೦ ॥

೩೬–೩೭. ಅಲ್ಲೇ, ಹತ್ತಿರದಲ್ಲೇ ತೊಂದರೆಯಿಲ್ಲದೆ ಉತ್ತಮಕಾರ್ಯಗಳನ್ನೇ ಮಾಡುವ ಕೃಷ್ಣನನ್ನು ರಾಧೆ ಚೆನ್ನಾಗಿ ಅಪ್ಪಿಕೊಂಡು ತನ್ನ ಹೆಸರಿನಿಂದ ಕಲ್ಪಿಸಿದ ಪ್ರಸಿದ್ಧವಾದ ತೀರ್ಥವಿದೆ ರಾಧಾಕುಂಡವೆಂದು ಪ್ರಸಿದ್ಧವಾದ ಆ ಶುಭತೀರ್ಥವು ಸರ್ವಪಾಪಗಳನ್ನೂ ಹೋಗಲಾಡಿಸುವುದು.

೩೮–೩೯. ಅರಿಷ್ಟರಾಧಾಕುಂಡಗಳಲ್ಲಿ ಸ್ನಾನಮಾಡುವುದರಿಂದ ಮನುಷ್ಯನು ರಾಜಸೂಯಾಶ್ವಮೇಧಯಜ್ಞಗಳ ಫಲವನ್ನು ಪಡೆಯುವನು. ಇದರಲ್ಲಿ ವಿಚಾರ ಮಾಡಬೇಕಾದುದಿಲ್ಲ. ಗೋಮನುಷ್ಯಬ್ರಹ್ಮಹತ್ಯೆಯ ಪಾಪವೂ ಬೇಗನೆ ನಾಶವಾಗುವುದು.

೪೦. ಮೋಕ್ಷರಾಜನೆಂಬ ತೀರ್ಥವು ಮನುಷ್ಯರಿಗೆ ಮುಕ್ತಿಯನ್ನುಂಟು ಮಾಡುವುದು. ಅದರ ದರ್ಶನಮಾತ್ರದಿಂದಲೇ ಮಾನವನು ಎಲ್ಲಾ ಪಾಪಗಳಿಂದಲೂ ವಿಮುಕ್ತನಾಗುವನು.

ಇಂದ್ರಧ್ವಜೋಚ್ಛ್ರಯಂ ಯತ್ರ ಪೂರ್ವಸ್ಯಾಂ ದಿಶಿ ವೈ ಕೃತಂ ।
ಇಂದ್ರಧ್ವಜಮಿತಿ ಖ್ಯಾತಂ ತೀರ್ಥಂ ಚೈವಾತಿಮುಕ್ತಿದಂ ॥
ತತ್ರ ಸ್ನಾತಾ ದಿವಂ ಯಾಂತಿ ಯೇ ಮೃತಾಸ್ತೇಽಪುನರ್ಭವಾಃ ॥ ೪೧ ॥

ತತೋ ಹರೌ ನಿವೇದ್ಯಾಶು ಯಾತ್ರಾಫಲಮನುತ್ತಮಂ ।
ಚಕ್ರತೀರ್ಥೇ ನರಃ ಸ್ನಾತ್ವಾ ಪಂಚತೀರ್ಥಾಖ್ಯಕುಂಡಕೇ ॥ ೪೨ ॥

ಸಮಾಪ್ಯ ತೀರ್ಥಯಾತ್ರಾಂಚ ರಾತ್ರೌ ಜಾಗರಣಂ ತಥಾ ।
ಗೋವರ್ಧನೇ ಚ ಕರ್ತವ್ಯಂ ಮಹಾಪಾತಕನಾಶನಂ ॥ ೪೩ ॥

ಏಕಾದಶ್ಯಾಂ ತದಾ ರಾತ್ರೌ ಕೃತ್ವಾ ಜಾಗರಣಂ ಶುಭಂ ।
ದ್ವಾದಶ್ಯಾಮುಷಸಿ ಸ್ನಾತ್ವಾ ಪಿಂಡಂ ನಿರ್ವಾಪ್ಯ ಶಕ್ತಿತಃ ॥ ೪೪ ॥

ಪಿತೄಣಾಂ ಮುಕ್ತಿದಂ ತೇಷಾಂ ಯ ಏವಂ ಕುರುತೇ ನರಃ ।
ಸರ್ವಪಾಪವಿನಿರ್ಮುಕ್ತಃ ಪರಂ ಬ್ರಹ್ಮಾಧಿಗಚ್ಛತಿ ॥ ೪೫ ॥

---

೪೧. ಪೂರ್ವದಿಕ್ಕಿನಲ್ಲಿ ಇಂದ್ರಧ್ವಜದಷ್ಟು ಎತ್ತರವಾದ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಇಂದ್ರಧ್ವಜವೆಂದು ಪ್ರಸಿದ್ಧವಾಗಿರುವ ತೀರ್ಥವು ಅತಿ ಮುಕ್ತಿಪ್ರದವಾದುದು. ಅಲ್ಲಿ ಸ್ನಾನಮಾಡಿದವರು ಸ್ವರ್ಗವನ್ನು ಸೇರುವರು. ಮೃತರಾದವರು ಪುನರ್ಜನ್ಮವಿಲ್ಲದವರಾಗುವರು.

೪೨–೪೩. ಬಳಿಕ ಯಾತ್ರಿಕನು, ತಾನು ಮಾಡಿದ ಯಾತ್ರೆಯ ಫಲವನ್ನು ಹರಿಯಲ್ಲಿ ಬೇಗ ಒಪ್ಪಿಸಿ, ಪಂಚತೀರ್ಥವೆಂಬ ಹೆಸರಿನ ಚಕ್ರತೀರ್ಥದಲ್ಲಿ ಸ್ನಾನಮಾಡಿ, ತೀರ್ಥಯಾತ್ರೆಯನ್ನು ಮುಗಿಸಿ, ರಾತ್ರೆ ಗೋವರ್ಧನದಲ್ಲಿ ಮಹಾಪಾತಕಗಳನ್ನು ನಾಶಮಾಡುವ ಜಾಗರಣೆಯನ್ನು ಮಾಡಬೇಕು.

೪೪–೪೫. ಮೊದಲೇ ಹೇಳಿರುವಂತೆ ಏಕಾದಶಿಯದಿನ ರಾತ್ರೆ ಶುಭಕರವಾದ ಜಾಗರಣೆಯನ್ನು ಮಾಡಿ, ದ್ವಾದಶಿಯದಿನ ಬೆಳಗಾಗುವ ಹೊತ್ತಿನಲ್ಲಿ ಸ್ನಾನವನ್ನು ಮಾಡಿ, ಪಿತೃಗಳಿಗೆ ಮುಕ್ತಿದಾಯಕವಾದ ಪಿಂಡಪ್ರದಾನ ತರ್ಪಣಾದಿಗಳನ್ನು ಯಥಾಶಕ್ತಿಯಾಗಿ ಮಾಡುವವನು, ಸರ್ವಪಾಪಗಳನ್ನೂ ಕಳೆದುಕೊಂಡವನಾಗಿ ಪರಬ್ರಹ್ಮನನ್ನು ಸೇರುವನು.

ಏತತ್ತೇ ಕಥಿತಂ ಭದ್ರೇ ಅನ್ನಕೂಟಪರಿಕ್ರಮಂ ।
ಯಥಾನುಕ್ರಮಯೋಗೇನ ತಥಾಷಾಢೇಪಿ ಚೋಚ್ಯತೇ ॥ ೪೬ ॥

ಯ ಏತಚ್ಛೃಣುಯಾದ್ಭಕ್ತ್ಯಾ ತೀರ್ಥಾನುಕ್ರಮಣಂ ಹರೇಃ ।
ಗೋವರ್ಧನಸ್ಯ ಮಾಹಾತ್ಮ್ಯಂ ಗಂಗಾಸ್ನಾನಫಲಂ ಭವೇತ್ ॥ ೪೭ ॥

ಇತಿ ಶ್ರೀ ವರಾಹಪುರಾಣೇ ಮಥುರಾಮಾಹಾತ್ಮ್ಯಾಂತರ್ಗತೇ ಗೋವರ್ಧನ ಮಾಹಾತ್ಮ್ಯೇ ಅನ್ನಕೂಟಪ್ರಭಾವೋ ನಾಮ ಚತುಃಷಷ್ಟ್ಯಧಿಕಶತತಮೋಧ್ಯಾಯಃ

---

೪೬. ಭದ್ರೇ, ಈ ಅನ್ನಕೂಟದ ಪ್ರದಕ್ಷಿಣ ವಿಧಾನವನ್ನು ಅನುಕ್ರಮವಾಗಿ ನಿನಗೆ ಹೇಳಿದುದಾಯಿತು. ಈ ಪ್ರದಕ್ಷಿಣೆಯನ್ನು ಭಾದ್ರಪದ ಮಾಸದಲ್ಲಿ ಮಾತ್ರವೇ ಅಲ್ಲದೆ ಆಷಾಢಮಾಸದಲ್ಲಿಯೂ ಮಾಡಬಹುದು.

೪೭. ಹರಿಯ ತೀರ್ಥಗಳ ಅನುಕ್ರಮವಾದ ಯಾತ್ರೆಯನ್ನೂ, ಗೋವರ್ಧನ ಕ್ಷೇತ್ರದ ಮಹಿಮೆಯನ್ನೂ ಭಕ್ತಿಯಿಂದ ಕೇಳುವವನಿಗೆ ಗಂಗಾಸ್ನಾನದ ಫಲ ವುಂಟಾಗುವುದು.

ಅಧ್ಯಾಯದ ಸಾರಾಂಶ—

ಶ್ರೀ ವರಾಹದೇವನು ಭೂದೇವಿಗೆ ಮಥುರೆಗೆ ಪಶ್ಚಿಮದಲ್ಲಿರುವ ಗೋವರ್ಧನಕ್ಷೇತ್ರಮಹಿಮೆಯನ್ನು ಎಂದರೆ ಆ ಕ್ಷೇತ್ರದ ನಾಲ್ಕು ಭಾಗಗಳಲ್ಲಿಯೂ ಕ್ರಮವಾಗಿ ಇರುವ ಇಂದ್ರಯಮ ವರುಣಕುಬೇರತೀರ್ಥಗಳ ಪ್ರಾಶಸ್ತ್ಯವನ್ನೂ, ಮಧ್ಯದಲ್ಲಿರುವ ಚಕ್ರತೀರ್ಥದ ಪ್ರಾಶಸ್ತ್ಯವನ್ನೂ, ಅನ್ನಕೂಟ ಅಥವಾ ಗೋವರ್ಧನಗಿರಿಯ ಪ್ರದಕ್ಷಿಣೆಯನ್ನು ಮಾಡುವ ವಿಧಾನವನ್ನೂ, ಕ್ಷೇತ್ರಯಾತ್ರಾ ಫಲವನ್ನೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಅರವತ್ತನಾಲ್ಕನೆಯ ಅಧ್ಯಾಯ

॥ ಶ್ರೀಃ ॥

ಪಂಚಷಷ್ಟ್ಯಧಿಕಶತತಮೋಽಧ್ಯಾಯಃ

॥ ಶ್ರೀವರಾಹ ಉವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಯಥಾವೃತ್ತಂ ಪ್ರತಿಷ್ಠಾನೇ ದಕ್ಷಿಣಾಪಥಮಂಡಲೇ ॥ ೧ ॥

ಸುಶೀಲೋ ನಾಮ ವೈಶ್ಯಸ್ತು ತಸ್ಮಿನ್ವಸತಿ ಪತ್ತನೇ ।
ಧನಧಾನ್ಯಸಮೃದ್ಧಸ್ತು ಬಹುಪುತ್ರಃ ಕುಟುಂಬವಾನ್ ॥ ೨ ॥

ನೂರ ಅರವತ್ತೈದನೆಯ ಅಧ್ಯಾಯ

೧. ಶ್ರೀವರಾಹ—ವಸುಂಧರೇ, ಇನ್ನು ಭರತಖಂಡದ ದಕ್ಷಿಣದೇಶದಲ್ಲಿರುವ ಪ್ರತಿಷ್ಠಾನ (ಪೈಠಣ) ದಲ್ಲಿ ನಡೆದ ವೃತ್ತಾಂತವೆಂದನ್ನು ಹೇಳುವೆನು. ಕೇಳು.

೨. ಆ ಪ್ರತಿಷ್ಠಾನಪುರದಲ್ಲಿ ಧನಧಾನ್ಯಸಮೃದ್ಧನೂ, ಹಲವರು ಮಕ್ಕಳುಳ್ಳ ಕುಟುಂಬಿಯೂ ಆದ ಸುಶೀಲನೆಂಬ ವೈಶ್ಯನು ವಾಸಮಾಡುತ್ತಿದ್ದನು.

ಕುಟುಂಬಭರಣಾಸಕ್ತೋ ನಿತ್ಯಕಾಲಂ ಹಿ ತಿಷ್ಠತಿ ।
ಸ್ನಾನಂ ದಾನಂ ಜಪಂ ಹೋಮಂ ದೇವಾರ್ಚಾಂ ನ ಕರೋತಿ ಸಃ ॥ ೩ ॥

ಕ್ರಯವಿಕ್ರಯಸಕ್ತಸ್ಯ ಕಾಲೋ ದೀರ್ಘೋ ಗತಸ್ತದಾ ।
ಕದಾಚಿದಪಿ ಪಾಪೋಽಸೌ ನ ಸಾಧು ಗಮನಂ ಗತಃ ॥ ೪ ॥

ನ ತೇನ ಧರ್ಮಶ್ರವಣಃ ಕದಾಚಿದಪಿ ಸಂಶ್ರುತಂ ।
ದೇವಾನಾಂ ಬ್ರಾಹ್ಮಣಾನಾಂ ಚ ಭಕ್ತಿಸ್ತಸ್ಯ ನ ವಿದ್ಯತೇ ॥ ೫ ॥

ಆತ್ಮೋದರನಿಮಿತ್ತಂ ಹಿ ಪಾಪಂ ಚ ಕುರುತೇ ಸದಾ ।
ಗಚ್ಛಂತಂ ಬಹುಕಾಲಂ ಚ ನ ತಂ ಬುಧ್ಯತಿ ಪಾಪಕೃತ್ ॥ ೬ ॥

ನ ತಸ್ಯ ಜಾಯತೇ ಬುದ್ಧಿರ್ದಾನಂ ದಾತುಂ ಕದಾಚನ ।
ತಸ್ಯೈವಂ ವಸತಸ್ತತ್ರ ಪ್ರತಿಷ್ಠಾನೇ ಪುರೋತ್ತಮೇ ॥ ೭ ॥

---

೩. ಅವನು ಯಾವಾಗಲೂ ಕುಟುಂಬಪೋಷಣೆಯಲ್ಲಿ ಆಸಕ್ತನಾಗಿ ಇರುತ್ತಿದ್ದನೇ ಹೊರತು ಸ್ನಾನದಾನ ಜಪಹೋಮದೇವಪೂಜಾದಿಗಳನ್ನಾವುದನ್ನೂ ಮಾಡುತ್ತಿರಲಿಲ್ಲ.

೪-೫. ಕೊಂಡುಮಾರುವುದರಲ್ಲಿ ಆಸಕ್ತನಾಗಿಯೇ ಅವನು ಬಹುಕಾಲವನ್ನು ಕಳೆದುಬಿಟ್ಟನು. ಆ ಪಾಪಿ ಎಂದೂ ಸಾಧುಗಳ ಮಾರ್ಗದಲ್ಲಿ ನಡೆಯಲಿಲ್ಲ. ಅವನು ಎಂದೂ ಧರ್ಮಬೋಧನೆಯನ್ನು ಕೇಳಲಿಲ್ಲ. ದೇವರಲ್ಲಿಯೂ ಬ್ರಾಹ್ಮಣರಲ್ಲಿಯೂ ಅವನಿಗೆ ಭಕ್ತಿಯಿರಲಿಲ್ಲ.

೬. ತನ್ನ ಹೊಟ್ಟೆಯಪಾಡಿಗಾಗಿ ಅವನು ಪಾಪವನ್ನೂ ಮಾಡುತ್ತಿದ್ದನು. ಆ ಪಾಪಕಾರಿ ಹೀಗೆ ಬಹುಕಾಲ ಕಳೆದರೂ ಗಮನಿಸಲಿಲ್ಲ.

೭-೮. ಆ ಪ್ರತಿಷ್ಠಾನಪುರದಲ್ಲಿ ಹೀಗೆ ವಾಸಮಾಡುತ್ತಿದ್ದ ಅವನಿಗೆ ಎಂದಿಗೂ ದಾನಮಾಡಬೇಕೆಂಬ ಬುದ್ಧಿಯುಂಟಾಗಲೇ ಇಲ್ಲ. ಹಣಗಾರನಾದರೂ

ಧನಯುಕ್ತೋಽಪಿ ಪಾಪೋಽಸೌ ನ ದದಾತಿ ಕದಾಚನ ।
ನೈವಾನ್ಯಮತಿದಾತಾರಂ ಶಕ್ನೋತಿ ಚ ನಿರೀಕ್ಷಿತುಂ ॥ ೮ ॥

ಸ ತು ಕಾಲೇನ ಮಹತಾ ಕುಟುಂಬಾಸಕ್ತಮಾನಸಃ ।
ಕದಾಚಿದ್ದೈವಯೋಗೇನ ಸಾಧ್ವೀಂ ಭಾರ್ಯಾಂ ಪ್ರಿಯಾನ್ಸುತಾನ್ ॥ ೯ ॥

ತ್ಯಕ್ತ್ವಾ ಜಗಾಮ ನಿಧನಂ ಪ್ರೇತತ್ವಂ ಸಮುಪಾಗತಃ ॥ ೧೦ ॥

ನಿರುದಕೇಷು ದೇಶೇಷು ವಿಚ್ಛಾಯೇಷು ವನೇಷು ಚ ।
ಪರಿಭ್ರಮನ್ ಕ್ಷುಧಾವಿಷ್ಟೋ ಮರುದೇಶಂ ಗತೋಽಪಿ ಸಃ ॥ ೧೧ ॥

ಕದಾಚಿದ್ದೈವಯೋಗೇನ ತತ್ರ ಸಾರ್ಥ ಉಪಾಗತಃ ।
ತಸ್ಯ ಮಧ್ಯೇತು ವಣಿಜೋ ಮಧುರಾಯಾಂ ವಿನಿಃಸೃತಾಃ ॥ ೧೨ ॥

ಆ ಪಾಪಿ ಯಾವಾಗಲೂ ದಾನಮಾಡಲಿಲ್ಲ. ಅತಿಯಾಗಿ ದಾನಮಾಡುವ ಉದಾರಿಯನ್ನು ನೋಡಲಾರದವನಾಗಿಯೂ ಇದ್ದನು.

೯–೧೦. ಕುಟುಂಬದಲ್ಲಿಯೇ ಆಸಕ್ತವಾದ ಮನಸ್ಸುಳ್ಳ ಅವನು ಬಹು ಕಾಲದಮೇಲೆ ಒಂದಾನೊಂದುದಿನ ದೈವಯೋಗದಿಂದ ಪತಿವ್ರತೆಯಾದ ಹೆಂಡತಿಯನ್ನೂ, ವಾತ್ಸಲ್ಯವುಳ್ಳ ಮಕ್ಕಳನ್ನೂ ಬಿಟ್ಟು ಸತ್ತು ಪ್ರೇತ (ಪಿಶಾಚ) ಜನ್ಮವನ್ನು ಪಡೆದನು.

೧೧. ಹಾಗೆ ಪಿಶಾಚನಾದ ಆ ವೈಶ್ಯನು ನೀರಿಲ್ಲದೆಡೆಗಳಲ್ಲಿಯೂ, ನೆರಳಿಲ್ಲದ ಅಡವಿಗಳಲ್ಲಿಯೂ, ಹಸಿವುಳ್ಳವನಾಗಿ ಅಲೆಯುತ್ತ, ಕಡೆಗೆ ಮರುಪ್ರದೇಶಕ್ಕೆ ಹೋಗಿ ಅಲ್ಲಿಯೇ ಬಹುಕಾಲ ವಾಸಮಾಡುತ್ತಿದ್ದನು.

೧೨. ಒಂದಾನೊಂದು ಕಾಲದಲ್ಲಿ ದೈವಯೋಗದಿಂದ ಆ ಮರುಭೂಮಿಗೆ ವರ್ತಕರ ಗುಂಪೊಂದು ಬಂದಿತು. ಆ ಗುಂಪಿನಲ್ಲಿ ಮಧುರೆಯಿಂದ ಹೊರಟುಬಂದ ವೈಶ್ಯರೂ ಇದ್ದರು.

ಗತೇ ಸಾರ್ಥೇ ತು ಸ ವಣಿಕ್ ತಂ ವೃಕ್ಷಂ ಸಮುಪಾಶ್ರಿತಃ ।
ತತ್ರೈವ ವಸತಿ ಪ್ರೇತೋ ರೌದ್ರರೂಪೋ ಭಯಾನಕಃ ॥ ೧೩ ॥

ದೀರ್ಘದಂಷ್ಟ್ರಃ ಸುವಿಕಟೋ ಹ್ರಸ್ವಬಾಹುರ್ವಿಭೀಷಣಃ ।
ಮಹಾಹನುರ್ವಿಶಾಲಾಕ್ಷೋ ಬಿಡಾಲಸದೃಶಾನನಃ ॥ ೧೪ ॥

ಅಥ ಕಾಲೇನ ಬಹುನಾ ದೈವಯೋಗೇನ ಭಾಮಿನಿ ।
ತತ್ರಾಜಗಾಮ ಕಶ್ಚಿತ್ತು ಕ್ರಯವಿಕ್ರಯಕಾರಕಃ ॥ ೧೫ ॥

ತಂ ದೃಷ್ಟ್ವಾ ದೂರಃ ಪ್ರೇತಶ್ಚಾತಿಹರ್ಷೇಣ ಸಂಯುತಃ ।
ತತ್ರಾ ಜಗಾಮ ನೃತ್ಯನ್ಸ ಇದಂ ವಚನಮಬ್ರವೀತ್ ॥ ೧೬ ॥

ಭಕ್ಷ್ಯಭೂತೋ ಮಮಾದ್ಯ ತ್ವಂ ಕ್ವ ಭವಾನ್ಯಾತುಮಿಚ್ಛತಿ ।
ಪ್ರೇತಸ್ಯ ವಚನಂ ಶ್ರುತ್ವಾ ಸೋಽತಿಭೀತೋ ದ್ರುತಂಗತಃ ॥ ೧೭ ॥

೧೩-೧೪. ಸುಂದರೀ, ಆ ವೈಶ್ಯರ ಗುಂಪು ಅಲ್ಲಿಗೆ ಬಂದಾಗ ಉಗ್ರ ರೂಪನೂ, ಭಯಂಕರನೂ, ಉದ್ದವಾದ ಹಲ್ಲುಳ್ಳವನೂ, ವಿಕಾರರೂಪನೂ, ಮೋಟುತೋಳೂ, ದೊಡ್ಡಕೆನ್ನೆಯೂ, ದೊಡ್ಡಕಣ್ಣೂ, ಬೆಕ್ಕಿನ ಮುಖವೂ ಉಳ್ಳ ಘೋರಪಿಶಾಚನೂ ಆದ ಆ ವೈಶ್ಯನು ಅಲ್ಲಿ ಒಂದು ಮರದಲ್ಲಿ ನೆಲಸಿದ್ದನು.

೧೫. ಭಾಮಿನಿ, ದೈವಯೋಗದಿಂದ ಬಹುಕಾಲದಿಂದ ಇದ್ದ ಆ ಪಿಶಾಚನ ಮರದ ಹತ್ತಿರಕ್ಕೆ ಆ ಗುಂಪಿನವನೊಬ್ಬನು ಬಂದನು.

೧೬. ಪಿಶಾಚನು ಆವನು ಬರುತ್ತಿರುವುದನ್ನು ದೂರದಿಂದಲೇ ನೋಡಿ ಸಂತೋಷಗೊಂಡು ಕುಣಿಯುತ್ತ ಅವನ ಹತ್ತಿರ ಬಂದು ಹೀಗೆಂದನು.

೧೭. "ಇಂದು ನೀನು ನನಗೆ ಆಹಾರವಾಗಿದ್ದೀಯೆ. ನೀನು ಎಲ್ಲಿಗೆ ಹೋಗುವುದು!" ಪಿಶಾಚನ ಮಾತನ್ನು ಕೇಳಿ ಹೆದರಿದ ಅವನು ಬೇಗನೆ ನಡೆದನು.

ಗಚ್ಛಂತಂ ತಂ ಗೃಹೀತ್ವಾ ಸ ಪ್ರೇತೋ ವಚನಮುಬ್ರವೀತ್ |
ಮಮ ತ್ವಂ ವಿಹಿತೋ ಭಕ್ಷ್ಯಃ ಸ್ವಯಂ ಪ್ರಾಪ್ತೋಸಿ ಮಾನವ || ೧೮ ||

ಮಾಂಸಂತೇ ಭಕ್ಷಯಿಷ್ಯಾಮಿ ಪಿಬಾಮಿ ತವ ಶೋಣಿತಂ |

ಇತ್ಯಾಕರ್ಣ್ಯ ವಚಸ್ತಸ್ಯ ಸ ವಣಿಗ್ವಾಕ್ಯಮುಬ್ರವೀತ್ |
ಕುಟುಂಬಭರಣಾರ್ಥಾಯ ಸಂಪ್ರಾಪ್ತೋ ದುರ್ಗಮಾಡವೀಂ || ೨೦ ||

ವೃದ್ಧಃ ಪಿತಾ ಮಮ ಗೃಹೇ ಮಾತಾ ಪತ್ನೀ ಪತಿವ್ರತಾ |
ಮಯಿ ಸಂಭಕ್ಷಿತೇ ರಕ್ಷಃ ಕುಟುಂಬಂ ಹಿ ಮರಿಷ್ಯತಿ || ೨೧ ||

ತತೋ ವಚನಮಾಕರ್ಣ್ಯ ಪ್ರೇತೋ ವಚನಮುಬ್ರವೀತ್ |
ಕಸ್ಮಾತ್ ಸ್ಥಾನಾತ್ಸಮಾಯಾತಃ ಸತ್ಯಂ ಬ್ರೂಹಿ ಮಹಾಮತೇ || ೨೨ ||

೧೮-೧೯. ಹಾಗೆ ಓಡುತ್ತಿರುವ ಅವನನ್ನು ಹಿಡಿದುಕೊಂಡು ಆ ಪ್ರೇತವು ' ಮನುಷ್ಯನೇ, ನನಗೆ ತಕ್ಕ ಆಹಾರವಾದ ನೀನು ನನ್ನ ಹತ್ತಿರಕ್ಕೆ ನೀನಾಗಿ ಬಂದಿರುವೆ. ನಿನ್ನ ಮಾಂಸವನ್ನು ತಿಂದು ರಕ್ತವನ್ನು ಕುಡಿಯುವೆನು " ಎಂದು ಹೇಳಿತು.

೨೦-೨೧. ಪಿಶಾಚನ ಆ ಮಾತನ್ನು ಕೇಳಿ ಆ ವೈಶ್ಯನು "ಕುಟುಂಬಭರಣಕ್ಕಾಗಿ ನಾನು ದುರ್ಗಮವಾದ ಕಾಡಿಗೆ ಬಂದಿದ್ದೇನೆ. ವೃದ್ಧರಾದ ತಾಯಿತಂದೆಗಳೂ, ಪತಿವ್ರತೆಯಾದ ನನ್ನ ಹೆಂಡತಿಯೂ ಮನೆಯಲ್ಲಿರುವರು. ರಾಕ್ಷಸನೇ ನನ್ನನ್ನು ನೀನು ತಿಂದರೆ ನನ್ನ ಕುಟುಂಬವೇ ಸಾಯುವುದು" ಎಂದನು.

೨೨. ಆ ಮಾತನ್ನು ಕೇಳಿ ಪಿಶಾಚನು "ಮಹಾಮತಿಯೇ, ನೀನು ಎಲ್ಲಿಂದ ಇಲ್ಲಿಗೆ ಬಂದೆ? ನಿಜವಾಗಿ ಹೇಳು" ಎಂದಿತು.

॥ ವಿಭುರುವಾಚ ॥

ಗೋವರ್ಧನೋ ಗಿರಿವರೋ ಯಮುನಾ ಚ ಮಹಾನದೀ ।
ತಯೋರ್ಮಧ್ಯೇ ಪುರೀ ರಮ್ಯಾ ಮಧುರಾ ಲೋಕವಿಶ್ರುತಾ ॥ ೨೩ ॥

ತಸ್ಯಾಂ ವಸಾಮ್ಯಹಂ ಪ್ರೇತ ಪಿತೃಪೈತಾಮಹೇ ಗೃಹೇ ।
ತತ್ರ ಮೇ ವಸತೋ ನಿತ್ಯಂ ಯದ್ದ್ರವ್ಯಂ ಪೂರ್ವಸಂಚಿತಂ ॥
ತತ್ಸರ್ವಂ ತಸ್ಕರೈರ್ನೀತಂ ಕ್ಷೀಣವಿತ್ತೋಭವಂತದಾ ॥ ೨೪ ॥

ಸ್ವಲ್ಪಂ ವಿತ್ತಂ ಗೃಹೀತ್ವಾಹಂ ಸಮಾಯಾತೋ ಮರುಸ್ಥಲಂ ।
ತವ ದೃಷ್ಟಿಪಥಂ ಯಾತೋ ಯತ್ಕಾರ್ಯಂ ತತ್ಕುರುಷ್ವಮೇ ॥ ೨೫ ॥

॥ ಪ್ರೇತ ಉವಾಚ ॥

ನ ತ್ವಾಂ ಖಾದಿತುಮಿಚ್ಛಾಮಿ ಕೃಪಾಮೇ ಜಾಯತೇ ತ್ವಯಿ ।
ಸಮಯೇನ ಹಿ ಮೋಕ್ಷ್ಯಾಮಿ ಕುರುಷ್ವ ವಚನಂ ಮಮ ॥ ೨೬ ॥

---

೨೩. ಆ ವೈಶ್ಯವಿಭು—ಗೋವರ್ಧನವೆಂಬ ಶ್ರೇಷ್ಠವಾದ ಗಿರಿಯು ಮತ್ತು ಯಮುನೆಯೆಂಬ ಮಹಾನದಿಯ ಮಧ್ಯದಲ್ಲಿ ಮಧುರೆಯೆಂಬ ರಮ್ಯವೂ ಲೋಕ ಪ್ರಸಿದ್ಧವೂ ಆದ ಪಟ್ಟಣವಿದೆ.

೨೪. ಪ್ರೇತ, ಆ ಮಧುರಾಪುರದಲ್ಲಿ ನಾನು ನಮ್ಮ ಅಪ್ಪಅಜ್ಜಂದಿರಿಂದ ಬಂದಿರುವ ಮನೆಯಲ್ಲಿ ವಾಸಮಾಡುತ್ತಿದ್ದೇನೆ. ಅಲ್ಲಿ ಯಾವಾಗಲೂ ವಾಸ ಮಾಡುತ್ತಿರುವ ನಾನು ಪೂರ್ವದಿಂದಲೂ ಕೂಡಿಟ್ಟಿದ್ದ ದ್ರವ್ಯವೆಲ್ಲವನ್ನೂ ಕಳ್ಳರು ಹೊತ್ತುಕೊಂಡುಹೋದರು. ಆದುದರಿಂದ ನಾನು ಬಡವನಾದೆನು.

೨೫. ಸ್ವಲ್ಪ ಹಣವನ್ನು ತೆಗೆದುಕೊಂಡು ವ್ಯಾಪಾರಾಟಕ್ಕಾಗಿ ಹೊರಟ ನಾನು ಈ ಮರುಭೂಮಿಗೆ ಬಂದು ನಿನ್ನ ಕಣ್ಣಿಗೆ ಬಿದ್ದೆನು. ನಿನಗೇನುಬೇಕೋ ಅದನ್ನು ಮಾಡು.

೨೬. ಪಿಶಾಚ—ನಿನ್ನನ್ನು ನಾನು ತಿನ್ನುವುದಿಲ್ಲ. ನಿನ್ನಮೇಲೆ ನನಗೆ ಕೃಪೆಯುಂಟಾಗುತ್ತದೆ. ಒಂದು ನಿಬಂಧನೆಯಿಂದ (ನಿಯಮದಿಂದ) ನಿನ್ನನ್ನು ಬಿಟ್ಟುಬಿಡುತ್ತೇನೆ. ನನ್ನ ಮಾತನ್ನು ನಡೆಯಿಸು.

ನಿವೃತ್ಯ ಗಚ್ಛ ಮಧುರಾಂ ಮಮ ಕಾರ್ಯಾರ್ಥಸಾಧಕಃ ।
ತತ್ರ ಗತ್ವಾ ತ್ವಯಾ ಕಾರ್ಯಂ ಯತ್ಕರ್ತವ್ಯಂ ವದಾಮಿ ತತ್ ॥ ೨೭ ॥

ಸ್ನಾನಂ ಕೃತ್ವಾ ತು ವಿಧಿವತ್ಕೂಪೇ ಚಾತುಸ್ಸಮುದ್ರಿಕೇ ।
ಪಿಂಡದಾನಂ ಕುರುಷ್ವ ತ್ವಂ ಮಮ ನಾಮ್ನಾ ಪ್ರಯತ್ನತಃ ॥ ೨೮ ॥

ಸ್ನಾನಸ್ಯ ಚ ಫಲಂ ದೇಹಿ ತತೋಽಗಚ್ಛ ಯಥಾಸುಖಂ ॥ ೨೯ ॥

ಪ್ರೇತವಾಕ್ಯಂ ತತಃ ಶ್ರುತ್ವಾ ವಿಭುರ್ವಚನಬ್ರವೀತ್ ।
ನಾಹಂ ಯಾಸ್ಯಾಮಿ ಮಧುರಾಂ ದ್ರವ್ಯಾಭಾವೇ ಕಥಂಚನ ॥ ೩೦ ॥

ಭಕ್ಷಯಸ್ವ ಶರೀರಂ ಮೇ ತತಸ್ತೃಪ್ತಿಮವಾಪ್ಸ್ಯಸಿ ॥ ೩೧ ॥

॥ ಪ್ರೇತ ಉವಾಚ ॥

ಗೃಹೇ ಬಹುಧನಂ ತೇಽಸ್ತಿ ತ್ವಂ ಗಚ್ಛ ಮಮ ಸತ್ಕುರು ।
ಆಸ್ತೇ ಧನಮಪರ್ಯಾಪ್ತಂ ಗಚ್ಛ ತ್ವಂ ಮಾವಿಲಂಬಯ ॥ ೩೨ ॥

---

೨೭. ನೀನು ಹಿಂದಿರುಗಿ ನನ್ನ ಕಾರ್ಯಸಾಧನೆಗಾಗಿ ಮಧುರೆಗೆ ಹೋಗು. ಅಲ್ಲಿ ಹೋಗಿ ನೀನು ಅವಶ್ಯವಾಗಿ ಮಾಡಬೇಕಾದ ಕಾರ್ಯವೇನೆಂಬುದನ್ನು ಹೇಳುತ್ತೇನೆ.

೨೮-೨೯. ನೀನು ಮಧುರೆಯ ಚಾತುಸ್ಸಮುದ್ರಿಕಕೂಪತೀರ್ಥದಲ್ಲಿ ವಿಧಿಗನುಸಾರವಾಗಿ ಸ್ನಾನಮಾಡಿ ಪ್ರಯತ್ನಪೂರ್ವಕವಾಗಿ ನನ್ನ ಹೆಸರಿನಿಂದ ಪಿಂಡಪ್ರದಾನವನ್ನು ಮಾಡು. ಸ್ನಾನದ ಫಲವನ್ನೂ ನನಗೆ ಕೊಡು. ಬಳಿಕ ನಿನಗೆ ಸುಖವಾದೆಡೆಗೆ ಹೋಗು.

೩೦-೩೧. ಪ್ರೇತನ ಮಾತನ್ನು ಕೇಳಿ, ಆ ವೈಶ್ಯವಿಭುವು "ದ್ರವ್ಯವಿಲ್ಲದೆ ನಾನು ಎಂದಿಗೂ ಮಧುರೆಗೆ ಹೋಗಲಾರೆನು. ನನ್ನ ಶರೀರವನ್ನು ತಿನ್ನು. ಬಳಿಕ ನಿನಗೆ ತೃಪ್ತಿಯಾಗುತ್ತದೆ" ಎಂದು ಹೇಳಿದನು.

೩೨. ಪಿಶಾಚಿ—ನಿನ್ನ ಮನೆಯಲ್ಲಿ ಬಹಳವಾಗಿ ಹಣವಿದೆ. ನೀನು ಹೋಗು. ನನಗೆ ಒಳ್ಳೆಯದನ್ನು ಮಾಡು. ಅಪರಿಮಿತವಾದ ಧನವಿದೆ. ನೀನು ಹೊರಡು. ತಡಮಾಡಬೇಡ.

॥ ವಿಭುರುವಾಚ ॥

ಗೃಹೇ ಮಮ ಧನಂ ನಾಸ್ತಿ ಯತ್ತ್ವಯಾ ಸಮುದೀರಿತಂ ।
ಗೃಹಶೇಷಂ ಮಮ ಧನಂ ನ ಚಾನ್ಯತ್ತತ್ರ ವಿದ್ಯತೇ ॥ ೩೩ ॥

ಪಿತೃಪೈತಾಮಹೀ ಕೀರ್ತಿರವಿಕ್ರೇಯಾ ಹಿ ಸಾ ಮಯಾ ॥ ೩೪ ॥

ಪ್ರೇತಃ ಪ್ರಹಸ್ಯ ಸಾನಂದಮಿದಂ ವಚನಮಬ್ರವೀತ್ ।
ಅಸ್ತಿ ಚೈವ ಧನಂ ಪ್ರೋಕ್ತಂ ಯನ್ಮಯಾ ತ್ವದ್ಗೃಹೇ ವಿಭೋ ॥ ೩೫ ॥

ಸುವರ್ಣಭಾರೋ ಗರ್ತಸ್ಥೋ ಗೃಹೇ ತಿಷ್ಠತಿ ಸಂಚಿತಃ ।
ನಿವರ್ತ ಗಚ್ಛ ಸಂತುಷ್ಟಃ ಸುಹೃದಾಂ ಪ್ರೀತಿವರ್ಧನ ।
ಏವಂ ದ್ರಕ್ಷ್ಯಾಮಿ ತೇ ಮಾರ್ಗಂ ಮಧುರಾ ಯೇನ ಗಮ್ಯತೇ ॥ ೩೬ ॥

ವಣಿಕ್ ಹೃಷ್ಟಮನಾ ಭೂತ್ವಾ ಪುನರ್ವಚನಮಬ್ರವೀತ್ ।
ಇಮಾಮವಸ್ಥಾಂ ಸಂಪ್ರಾಪ್ಯ ಕಥಂ ಜ್ಞಾನಸಮುದ್ಭವಃ ॥ ೩೭ ॥

ತತಃ ಸ ಕಥಯಾಮಾಸ ಯದ್ವೃತ್ತಂ ಹಿ ಪುರಾತನಂ ॥ ೩೮ ॥

೩೩–೩೪. ವೈಶ್ಯವಿಭು—ನೀನು ಹೇಳಿದಂತೆ ನನ್ನ ಮನೆಯಲ್ಲಿ ಹಣವಿಲ್ಲ ಮನೆಯೇ ನನಗೆ ಉಳಿದಿರುವ ಧನ. ಅಲ್ಲಿ ಬೇರೆ ಏನೂ ಇಲ್ಲ. ತಂದೆತಾತಂದಿರ ಆ ಕೀರ್ತಿ (ಮನೆ) ಯನ್ನು ನಾನು ಮಾರಬಾರದು.

೩೫–೩೬. ಪಿಶಾಚನು ನಕ್ಕು ಸಂತೋಷದಿಂದ ಮುಂದಿನ ಮಾತನಾಡಿತು. "ವಿಭುವೇ, ನಾನು ಹೇಳಿದಂತೆ ನಿನ್ನ ಮನೆಯಲ್ಲಿ ಧನವಿದೆ. ಹೂತಿಟ್ಟಿರುವ ಚಿನ್ನದ ಗಟ್ಟಿಯು ಹಗೇವಿನಲ್ಲಿದೆ. ಮಿತ್ರಾನಂದವರ್ಧನನೇ, ಸಂತುಷ್ಟನಾಗಿ ಹೋಗು. ಹೊರಡು. ಹೀಗೆಯೇ ನೀನು ಮಧುರೆಗೆ ಹೋಗುವ ದಾರಿಯನ್ನು ನೋಡುತ್ತಿರುವೆನು."

೩೭–೩೮. ವೈಶ್ಯನು ಸಂತೋಷವುಳ್ಳವನಾಗಿ ಮತ್ತೆ ಆ ಪಿಶಾಚಿಯನ್ನು "ಈ ಅವಸ್ಥೆಯನ್ನು ಪಡೆದೂ ನಿನಗೆ ಹೇಗೆ ಜ್ಞಾನವುಂಟಾಗಿದೆ?" ಎಂದು ಕೇಳಿದನು. ಬಳಿಕ ಅದು ಹಿಂದೆ ನಡೆದ ವೃತ್ತಾಂತವನ್ನು ಹೀಗೆ ಹೇಳಿತು.

ಪ್ರತಿಷ್ಠಾನೇ ಪುರವರೇ ವಿಷ್ಣೋರಾಯತನಂ ಮಹತ್ ।
ಪ್ರಭಾತಸಮಯೇ ತತ್ರ ವಿಷ್ಣೋರಾಯತನೇ ಶುಭೇ ॥
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಸ್ತತ್ರ ಸಮಾಗತಾಃ ॥ ೩೯ ॥

ವಾಚಕಸ್ತತ್ರ ಪಠತಿ ಕಥಾಂ ಪೌರಾಣಿಕೀಂ ಶುಭಾಂ ।
ಮಮ ಮಿತ್ರಂ ಚ ತತ್ರೈವ ನಿತ್ಯಕಾಲಂ ಚ ಗಚ್ಛತಿ ॥ ೪೦ ॥

ತಸ್ಮಿನ್‌ಕಾಲೇ ತು ಮಿತ್ರೇಣ ನೀತೋಹಂ ವಿಷ್ಣುಮಂದಿರಂ ।
ಅತ್ಯಾದರೇಣ ಮಹತಾ ಸಂತೋಷ್ಯ ಚ ಪುನಃ ಪುನಃ ॥
ಮಿತ್ರೇಣ ಸಹ ತತ್ರೈವ ತಸ್ಯ ಪಾರ್ಶ್ವೇ ವ್ಯವಸ್ಥಿತಃ ॥ ೪೧ ॥

ಶ್ರುತೋ ಮಯಾ ತತಃ ಕೂಪಃ ಪುಣ್ಯೋಯಂ ಪಾಪನಾಶನಃ ।
ಸಮುದ್ರಾಃ ಕಿಲ ತಿಷ್ಠಂತಿ ಚತ್ವಾರೋತ್ರ ಸಮಾಗತಾಃ ॥ ೪೨ ॥

ತಸ್ಯ ಕೂಪಸ್ಯ ಮಾಹಾತ್ಮ್ಯಂ ಶ್ರುತಂ ತತ್ರ ಮಹತ್ಫಲಂ ॥ ೪೩ ॥

---

೩೯. "ಪ್ರತಿಷ್ಠಾನ (ಪೈಠಣ) ವೆಂಬ ಉತ್ತಮವಾದ ಪಟ್ಟಣದಲ್ಲಿ ದೊಡ್ಡದಾದ ವಿಷ್ಣುದೇವಾಲಯವಿದೆ. ಶುಭವಾದ ಆ ವಿಷ್ಣುದೇವಾಲಯಕ್ಕೆ ಸೂರ್ಯೋದಯಕಾಲದಲ್ಲಿ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಬರುತ್ತಿದ್ದರು.

೪೦ ಪೌರಾಣಿಕನು ಅಲ್ಲಿ ಪುರಾಣದ ಶುಭಕಥೆಯನ್ನು ಹೇಳುತ್ತಿದ್ದನು. ನನ್ನ ಸ್ನೇಹಿತನೊಬ್ಬನು ನಿತ್ಯವೂ ಅಲ್ಲಿಗೆ ಹೋಗುತ್ತಿದ್ದನು

೪೧. ಆಗ ಒಂದುದಿನ ಅತ್ಯಾದರದಿಂದ ಸ್ನೇಹಿತನು ನನ್ನನ್ನೂ ಆ ವಿಷ್ಣುಮಂದಿರಕ್ಕೆ ಕರೆದುಕೊಂಡುಹೋದನು. ನಾನು ಅಲ್ಲಿ ಬಹು ಸಂತೋಷವುಳ್ಳವನಾಗಿ ಮತ್ತೆ ಮತ್ತೆ ಮಿತ್ರನೊಡನೆ ಅಲ್ಲಿ ಹೋಗಿ ಅವನ ಪಕ್ಕದಲ್ಲೇ ಇರುತ್ತಿದ್ದೆನು.

೪೨–೪೩. ಆಗ ಪುರಾಣದಲ್ಲಿ ಪವಿತ್ರವೂ, ಪಾಪನಾಶಕವೂ ಆದ ಈ ಚಾತುಸ್ಸಮುದ್ರಿಕಕೂಪದ ವಿಚಾರವನ್ನು ಕೇಳಿದೆನು ನಾಲ್ಕು ಸಮುದ್ರಗಳಗಳೂ ಆ ಕೂಪದಲ್ಲಿ ಬಂದು ನೆಲಸಿರುವುವೆಂಬುದನ್ನೂ, ಅದರ ಮಹಿಮೆಯನ್ನೂ, ಅದರಿಂದಾಗುವ ಮಹಾಫಲವನ್ನೂ ಕೇಳಿದೆನು.

ವಾಚಕಾಯ ತತೋ ದಾನಂ ದತ್ತಂ ಸರ್ವೈರ್ಮಹಾಜನೈಃ |
ಮಿತ್ರೇಣ ಪ್ರೇರಿತೋ ದಾನೇ ಮಯಾ ಮೌನಂ ಸಮಾಶ್ರಿತಂ || ೪೪ ||

ಮಿತ್ರೇಣ ಚ ಪುನಃ ಪ್ರೋಕ್ತಂ ಯಥಾಶಕ್ತ್ಯಾ ಪ್ರದೀಯತಾಂ |
ತದಾ ಮಿತ್ರಪ್ರಸಂಗೇನ ದತ್ತೋ ವೈ ಸ್ವರ್ಣಮಾಷಕಃ || ೪೫ ||

ತತಃ ಕಾಲೇನ ಮಹತಾ ಗತೋ ವೈವಸ್ವತಕ್ಷಯಂ |
ವೈವಸ್ವತನಿಯೋಗೇನ ತತೋಽಹಂ ಪೂರ್ವಕರ್ಮಭಿಃ || ೪೬ ||

ಪ್ರೇತತ್ವಂ ಸಮನುಪ್ರಾಪ್ತಃ ದುಸ್ತರಂ ದುರ್ಗಮಂ ಮಹತ್ || ೪೭ ||

ನ ದತ್ತಂ ನ ಹುತಂ ಚಾಪಿ ತೀರ್ಥಂ ನೈವಾವಗಾಹಿತಂ |
ನ ತರ್ಪಿತಾಸ್ತು ಪಿತರಃ ಪ್ರಾಪ್ತೋಽಹಂ ಪ್ರೇತತಾಂ ತತಃ || ೪೮ ||

---

೪೪. ಬಳಿಕ ಪುರಾಣವನ್ನು ಹೇಳುವವರಿಗೆ ಮಹಾಜನರೆಲ್ಲರೂ ಬೇಕಾದ ದಾನವನ್ನು ಕೊಟ್ಟರು. ನನ್ನ ಸ್ನೇಹಿತನು ನನ್ನನ್ನೂ ದಾನಕೊಡುವಂತೆ ಪ್ರೇರಿಸಿದರೂ ನಾನು ಸುಮ್ಮನೆ ಇದ್ದೆನು.

೪೫. ನನ್ನ ಮಿತ್ರನು ಮತ್ತೆ ಮತ್ತೆ "ನಿನ್ನ ಕೈಲಾದಷ್ಟು ಕೊಡು" ಎಂದು ಹೇಳಿದನು. ಆಗ ಮಿತ್ರನ ಮಾತಿನಿಂದ ನಾನೂ ಚಿನ್ನದ ಒಂದು ಚಿಕ್ಕ ನಾಣ್ಯವನ್ನು ಕೊಟ್ಟೆನು.

೪೬-೪೭. ಬಳಿಕ ಬಹುಕಾಲದಮೇಲೆ ನಾನು ಯಮಗೃಹಕ್ಕೆ ಹೋದೆನು. ಆಮೇಲೆ ನನ್ನ ಪೂರ್ವಕರ್ಮಗಳಿಂದ ಯಮನ ಅಪ್ಪಣೆಯಂತೆ ನಾನು ಅತಿ ದುರ್ಗಮವೂ ದುಸ್ತರವೂ ಆದ ಪಿಶಾಚಜನ್ಮವನ್ನು ಪಡೆದೆನು.

೪೮. ನಾನು ದಾನಮಾಡಲಿಲ್ಲ. ಹೋಮಮಾಡಲಿಲ್ಲ. ತೀರ್ಥದಲ್ಲಿ ಮುಳುಗಲೇ ಇಲ್ಲ. ಪಿತೃಗಳನ್ನು ತರ್ಪಣಾದಿಗಳಿಂದ ತೃಪ್ತಿಪಡಿಸಲಿಲ್ಲ. ಆದುದರಿಂದ ನಾನು ಈ ಪ್ರೇತಜನ್ಮವನ್ನು ಪಡೆದೆನು.

ಇತ್ಯೇತತ್ಕಥಿತಂ ಸರ್ವಂ ಯನ್ಮಾಂ ತ್ವಂ ಪರಿಪೃಚ್ಛಸಿ |
ಗಚ್ಛ ತ್ವಂ ಸಮ್ಮುಖಸ್ತತ್ರ ಯತ್ರ ಸಾ ಮಥುರಾಪುರೀ || ೪೯ ||

ಪ್ರೇತಸ್ಯ ವಚನಂ ಶ್ರುತ್ವಾ ವಿಭುರ್ವಚನಮಬ್ರವೀತ್ |
ಕಥಂ ಧಾರಯಸೇ ಪ್ರಾಣಾನ್ ವೃಕ್ಷಮೂಲಂ ಸಮಾಶ್ರಿತಃ || ೫೦ ||

|| ಪ್ರೇತ ಉವಾಚ ||

ಕಥಿತಂ ಹಿ ಮಯಾ ಪೂರ್ವಂ ಯದ್ವೃತ್ತಂ ಹಿ ಪುರಾತನಂ |
ವಾಚಕಾಯ ತು ಯದ್ದತ್ತಂ ಸುವರ್ಣಸ್ಯ ಚ ಮಾಷಕಂ || ೫೧ ||

ತದ್ದಾನಸ್ಯ ಪ್ರಭಾವೇಣ ನಿತ್ಯಂ ತೃಪ್ತೋಽಸ್ಮಿ ವೈ ವಿಭೋ || ೫೨ ||

ಅಕಾಮೇನ ಮಯಾ ದತ್ತಂ ತಸ್ಯೇದಂ ಕರ್ಮಣಃ ಫಲಂ |
ಪ್ರೇತಭಾವಂಗತಸ್ಯಾಪಿ ನ ಮೇ ಜ್ಞಾನಸ್ಯ ವಿಭ್ರಮಃ || ೫೩ ||

---

೪೯. ಹೀಗೆ ನೀನು ನನ್ನನ್ನು ಕೇಳುವುದೆಲ್ಲವನ್ನೂ ಹೇಳಿದೆನು. ಆ ಮಥುರೆಯು ಯಾವ ಕಡೆಯಿದೆಯೋ ಆ ಕಡೆಗೆ ಎದುರಾಗಿ ತಿರುಗಿ ನೀನು ಅಲ್ಲಿಗೆ ಹೋಗು."

೫೦. ಪಿಶಾಚನ ಮಾತನ್ನು ಕೇಳಿ ಆ ವೈಶ್ಯವಿಭುವು "ನೀನು ಮರದ ಬುಡದಲ್ಲಿದ್ದುಕೊಂಡು ಹೇಗೆ ಜೀವಿಸುತ್ತಿದ್ದೀಯೆ?" ಎಂದು ಕೇಳಿದನು.

೫೧-೫೨. ಪಿಶಾಚ—"ವಿಭೂ, ನಾನು ಹಿಂದೆ ನಡೆದ ನನ್ನ ವೃತ್ತಾಂತವನ್ನು ಹೇಳಿದೆನಷ್ಟೆ. ನಾನು ಪೌರಾಣಿಕನಿಗೆ ಸುವರ್ಣದ ನಾಣ್ಯವೊಂದನ್ನು ಕೊಟ್ಟಿನಲ್ಲವೆ! ಆ ದಾನದ ಪ್ರಭಾವದಿಂದ ನಾನು ಯಾವಾಗಲೂ ತೃಪ್ತನಾಗಿದ್ದೇನೆ.

೫೩. ನಾನು ಇಷ್ಟವಿಲ್ಲದೆ ಸ್ನೇಹಿತನ ಬಲಾತ್ಕಾರದಿಂದ ಸುವರ್ಣ ನಾಣ್ಯವನ್ನು ಕೊಟ್ಟಿನಾದರೂ ಆ ದಾನಕರ್ಮಕ್ಕೆ ಈ ಫಲವುಂಟಾಗಿದೆ. ಪಿಶಾಚಜನ್ಮವನ್ನು ಪಡೆದಿದ್ದರೂ ನನಗೆ ಜ್ಞಾನವು ವ್ಯತ್ಯಾಸವಾಗಿಲ್ಲ. ಹಿಂದಿನ ಜ್ಞಾಪಕವಿದೆ."

ತತಶ್ಚ ಸ ವಣಿಕ್ ಶ್ರೇಷ್ಠ ಆಗತೋ ಮಥುರಾಂ ಪುರೀಂ ।
ಕೃತಂ ತೇನ ಚ ತತ್ಸರ್ವಂ ಯಥಾಪ್ರೇತೇನ ಭಾಷಿತಂ ॥
ಪ್ರೇತತ್ರೋಽಸೌ ತೇನ ಕೃತ್ಯೇನ ಮುಕ್ತಿಂ ಪ್ರಾಪ್ಯ ದಿವಂಗತಃ ॥ ೫೪ ॥

ಏತತ್ತೇ ಕಥಿತಂ ಭೂಮೇ ಮಾಹಾತ್ಮ್ಯಂ ಮಥುರಾಭವಂ ।
ಚತುಸ್ಸಾಮುದ್ರಿಕೇ ಕೂಪೇ ಪಿಂಡದಾನೇ ಪರಾಂಗತಿಂ ॥ ೫೫ ॥

ತೀರ್ಥೇಽಚ್ಚೈವ ಗೃಹೇ ವಾಪಿ ದೇವಸ್ಥಾನೇಽಪಿ ಚತ್ವರೇ ।
ಯತ್ರ ತತ್ರ ಮೃತಾ ದೇವಿ ಮುಕ್ತಿಂ ಯಾಂತಿ ನ ಚಾನ್ಯಥಾ ॥ ೫೬ ॥

ಅನ್ಯತ್ರ ಹಿ ಕೃತಂ ಪಾಪಂ ತೀರ್ಥಮಾಸಾದ್ಯ ಗಚ್ಛತಿ ।
ತೀರ್ಥೇತು ಯತ್ಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ ॥ ೫೭ ॥

---

೫೪. ಬಳಿಕ ಆ ವೈಶ್ಯೋತ್ತಮನು ಮಥುರಾಪುರಿಗೆ ಬಂದು ಪಿಶಾಚ ಹೇಳಿದ್ದಂತೆಯೇ ಎಲ್ಲವನ್ನೂ ಮಾಡಿದನು. ಆ ಪುಣ್ಯಕರ್ಮದಿಂದ ಆ ಪಿಶಾಚ ಜನ್ಮವು ಹೋಗಿ ಅವನಿಗೆ ಸ್ವರ್ಗವು ಲಭಿಸಿತು.

೫೫. ಭೂದೇವೀ, ಚಾತುಸ್ಸಮುದ್ರಿಕವೆಂಬ ಆ ಬಾವಿಯಲ್ಲಿ ಪಿಂಡದಾನ ಮಾಡಿದುದರಿಂದ ಪರಮಗತಿಯನ್ನುಂಟುಮಾಡಿದ ಮಥುರೆಯ ಸಂಬಂಧವಾದ ಈ ಮಹಿಮೆಯನ್ನು ನಿನಗೆ ಹೇಳಿದುದಾಯಿತು.

೫೬. ದೇವೀ, ಮಥುರೆಯ ತೀರ್ಥದದಲ್ಲಾಗಲಿ, ಮನೆಯಲ್ಲಾಗಲಿ, ದೇವಾಲಯದಲ್ಲಾಗಲಿ, ದಾರಿಗಳು ಕೂಡುವ ಚೌಕದಲ್ಲಿಯೇ ಆಗಲಿ ಮೃತರಾದವರು ಮುಕ್ತಿಯನ್ನು ತಪ್ಪದೆ ಪಡೆಯುವರು.

೫೭. ಬೇರೆಡೆಯಲ್ಲಿ ಮಾಡಿದ ಪಾಪವು ಪುಣ್ಯತೀರ್ಥಗಳ ಯಾತ್ರೆಯಿಂದ ಹೋಗುವುದು. ಪುಣ್ಯತೀರ್ಥದಲ್ಲಿಯೇ ಮಾಡಿದ ಪಾಪವು ವಜ್ರಲೇಪದಂತೆ ಅಂಟಿಕೊಳ್ಳುವುದು.

ಮಥುರಾಯಾಂ ಕೃತಂ ಪಾಪಂ ತತ್ರೈವ ಚ ವಿನಶ್ಯತಿ ।
ಏಷಾಪುರೀ ಮಹಾಪುಣ್ಯಾ ಯಸ್ಯಾಂ ಪಾಪಂ ನವಿದ್ಯತೇ ॥ ೫೮ ॥

ಕೃತಘ್ನಶ್ಚ ಸುರಾಪಶ್ಚ ಚೌರಾ ಭಗ್ನವ್ರತಸ್ತಥಾ ।
ಮಥುರಾಂ ಪ್ರಾಪ್ಯ ಮನುಜೋ ಮುಚ್ಯತೇ ಸರ್ವಕಿಲ್ಬಿಷೈಃ ॥ ೫೯ ॥

ತಿಷ್ಠೇದ್ಯುಗಸಹಸ್ರಂತು ಪಾದೇನೈಕೇನ ಯಃ ಪುಮಾನ್ ।
ತಸ್ಯಾಧಿಕಂ ಭವೇತ್ಪುಣ್ಯಂ ಮಥುರಾಯಾಂ ನಿವಾಸಿನಃ ॥ ೬೦ ॥

ಪರದಾರರತಾ ಯೇ ಚ ಯೇ ನರಾ ಅಜಿತೇಂದ್ರಿಯಾಃ ।
ಮಥುರಾವಾಸಿನಃ ಸರ್ವೇ ತೇ ದೇವಾ ನರವಿಗ್ರಹಾಃ ॥ ೬೧ ॥

ಬಲಿಭಿಕ್ಷಾಪ್ರದಾತಾರಸ್ತೇ ಮೃತಾಃ ಕ್ರೋಧವರ್ಜಿತಾಃ ।
ತೀರ್ಥಸ್ನಾನರತಾ ಯೇ ಚ ದೇವಾಸ್ತೇ ನರಮೂರ್ತಯಃ ॥ ೬೨ ॥

---

೫೮. ಆದರೆ ಮಥುರೆಯಲ್ಲಿ ಮಾಡಿದ ಪಾಪವು ಅಲ್ಲಿಯೇ ನಾಶವಾಗುವುದು. ಪಾಪವಿಲ್ಲದ ಮಥುರಾಪುರವು ಮಹಾಪುಣ್ಯವಾದುದು.

೫೯. ಕೃತಘ್ನರೂ, ಮದ್ಯಪಾಯಿಯೂ, ಕಳ್ಳನೂ, ವ್ರತಗೆಟ್ಟವನೂ ಆದ ಮನುಷ್ಯನು ಕೂಡ ಮಥುರೆಗೆ ಹೋಗಿ ಪಾಪಗಳನ್ನೆಲ್ಲಾ ಕಳೆದುಕೊಳ್ಳುವನು.

೬೦. ಮನುಷ್ಯನು ಸಾವಿರ ಯುಗಗಳಕಾಲ ಒಂದೆ ಕಾಲಿನಲ್ಲಿ ನಿಂತು ತಪಸ್ಸನ್ನು ಮಾಡಿ ಪಡೆಯುವ ಪುಣ್ಯಕ್ಕಿಂತಲೂ ಹೆಚ್ಚಾದ ಪುಣ್ಯವು ಮಥುರೆಯಲ್ಲಿ ಸುಮ್ಮನೆ ವಾಸಮಾಡುವವನಿಗೆ ಬರುವುದು.

೬೧. ಪರಸ್ತ್ರೀಯಲ್ಲಿ ಆಸಕ್ತರಾಗಿಯೂ, ಅಜಿತೇಂದ್ರಿಯರಾಗಿಯೂ ಇದ್ದರೂ ಮಥುರೆಯಲ್ಲಿ ವಾಸಮಾಡುವವರೆಲ್ಲರೂ ಮನುಷ್ಯದೇಹವನ್ನು ಧರಿಸಿರುವ ದೇವತೆಗಳು.

೬೨. ಕೋಪವನ್ನು ಬಿಟ್ಟು ಮಥುರೆಯಲ್ಲಿ ಮೃತರಾಗುವವರೂ ತೀರ್ಥಸ್ನಾನಗಳಲ್ಲಿ ನಿರತರಾಗಿರುವವರೂ ಮನುಷ್ಯದೇಹಿಗಳಾದ ಬಲಿಗೆ ಭಿಕ್ಷವನ್ನು ಕೊಡುವ ದೇವತೆಗಳು.

ಯದನ್ಯೇಷಾಂ ಸಹಸ್ರೇಣ ಬ್ರಾಹ್ಮಣಾನಾಂ ಮಹಾತ್ಮನಾಂ |
ಏಕೇನ ಪೂಜಿತೇನ ಸ್ಯಾನ್ಮಾಥುರೇಣಾಖಿಲಂ ಹಿ ತತ್ || ೬೩ ||

ಅನ್ಯಗ್ರೈ ಮಾಥುರೋ ಯತ್ರ ಚತುರ್ವೇದಸ್ತಥಾಪರಃ |
ನ ಚ ವೇದೈಶ್ಚತುರ್ಭಿಸ್ಸ್ಯಾನ್ಮಾಥುರೇಣ ಸಮಃ ಕ್ವಚಿತ್ || ೬೪ ||

ಭವಂತಿ ಸರ್ವತೀರ್ಥಾನಿ ಪುಣ್ಯಾನ್ಯಾಯತನಾನಿ ಚ |
ಮಂಗಲಾನಿ ಚ ಸರ್ವಾಣಿ ಯತ್ರ ತಿಷ್ಠಂತಿ ಮಾಥುರಾಃ || ೬೫ ||

ಚತುರ್ವೇದಂ ಪರಿತ್ಯಜ್ಯ ಮಾಥುರಂ ಪೂಜಯೇತ್ಸದಾ |
ಸಿದ್ಧಾ ಭೂತಗಣಾಃ ಸರ್ವೇ ಯೇ ಚ ದೇವಗಣಾ ಭುವಿ || ೬೬ ||

ಮಧುರಾವಾಸಿನೋ ಲೋಕಾನ್ ಪಶ್ಯಂತಿ ಚ ಚತುರ್ಭುಜಾನ್ || ೬೭ ||

---

೬೩. ಬೇರೆ ಕಡೆಯಲ್ಲಿರುವ ಸಾವಿರಜನ ಮಹಾತ್ಮರಾದ ಬ್ರಾಹ್ಮಣರನ್ನು ಪೂಜಿಸುವುದರಿಂದಾಗುವ ಫಲವೆಲ್ಲವೂ ಮಧುರೆಯ ಒಬ್ಬ ಬ್ರಾಹ್ಮಣನನ್ನು ಪೂಜಿಸುವುದರಿಂದಾಗುವುದು.

೬೪. ವೇದಾಭ್ಯಾಸವನ್ನೇ ಮಾಡದ ಮಧುರೆಯ ಬ್ರಾಹ್ಮಣನೊಬ್ಬನೂ ನಾಲ್ಕು ವೇದಗಳನ್ನೂ ಚೆನ್ನಾಗಿ ತಿಳಿದಿರುವ ಬೇರೆ ಊರಿನ ಬ್ರಾಹ್ಮಣನೊಬ್ಬನೂ ಇರುವರೆನ್ನು ಇವರಿಬ್ಬರಲ್ಲಿ ನಾಲ್ಕು ವೇದಗಳಲ್ಲಿ ಪಾರಂಗತನಾದ ಬೇರೆ ಕಡೆಯ ಬ್ರಾಹ್ಮಣನು ವೇದವನ್ನು ಅರಿಯದ ಮಧುರೆಯ ಸಾಮಾನ್ಯಬ್ರಾಹ್ಮಣನಿಗೆ ಎಂದಿಗೂ ಸಮಾನನಾಗಲಾರನು.

೬೫. ಮಧುರೆಯುವರಿರುವ ಸ್ಥಳದಲ್ಲಿ ಸರ್ವತೀರ್ಥಗಳೂ, ಪುಣ್ಯನಿಲಯಗಳೂ, ಸರ್ವಮಂಗಳಗಳೂ ಇರುವುವು.

೬೬–೬೭. ಚತುರ್ವೇದಗಳನ್ನೂ ಅರಿತ ಇತರ ಸ್ಥಳದವನನ್ನು ಬಿಟ್ಟು ಮಧುರವಾಸಿಯಾದ ಸಾಮಾನ್ಯವನ್ನು ಯಾವಾಗಲೂ ಪೂಜಿಸಬೇಕು. ಸಿದ್ಧರೂ, ಭೂತಗಣಗಳೂ, ಭೂಮಿಯಲ್ಲಿರುವ ದೇವಗಣಗಳೆವರೂ ಮಧುರೆಯಲ್ಲಿ ವಾಸಮಾಡುವ ಜನರನ್ನು ಚತುರ್ಭುಜರೆಂದು ಅರಿತು ನೋಡುವರು.

ಮಧುರಾಯಾಂ ಯೇ ವಸಂತಿ ವಿಷ್ಣುರೂಪಾ ಹಿ ತೇ ನರಾಃ ।
ಜ್ಞಾನಿನಸ್ತಾನ್ಪಿ ಪಶ್ಯಂತಿ ಅಜ್ಞಾಃ ಪಶ್ಯಂತಿ ತಾನ್ನ ಚ ॥ ೬೮ ॥

ಇತಿ ಶ್ರೀವರಾಹಪುರಾಣೇ ಮಧುರಾಮಾಹಾತ್ಮ್ಯೇ ಕೂಪಪ್ರಭಾವೇ ಬ್ರಾಹ್ಮಣಮಾಹಾತ್ಮ್ಯಂನಾಮ ಪಂಚಷಷ್ಟ್ಯಧಿಕಶತತಮೋಽಧ್ಯಾಯಃ

---

೬೮. ಮಧುರೆಯಲ್ಲಿ ವಾಸಮಾಡುವ ಆ ಜನರು ವಿಷ್ಣುರೂಪರು. ಅವರನ್ನು ಹಾಗೆ ಜ್ಞಾನಿಗಳು ತಿಳಿಯುವರು. ಅಜ್ಞಾನಿಗಳು ತಿಳಿಯಲಾರರು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಧುರೆಯ ಮತ್ತು ಅಲ್ಲಿರುವ ಚಾತುಸ್ಸಮುದ್ರಿಕವೆಂಬ ತೀರ್ಥದ ಮಹಿಮೆಯನ್ನು ವಿವರಿಸುತ್ತ ಪಾಪಿಯಾಗಿದ್ದು ಮೃತನಾಗಿ ಪಿಶಾಚಜನ್ಮವನ್ನು ಪಡೆದು ಮರುಭೂಮಿಯಲ್ಲಿದ್ದ ಸುಶೀಲನೆಂಬ, ಪ್ರತಿಷ್ಠಾನಪುರದ ವೈಶ್ಯನು ತನ್ನ ಹತ್ತಿರ ಬಂದ ಮಧುರೆಯ ವೈಶ್ಯನೊಬ್ಬನಿಂದ ತನಗಾಗಿ ಮಧುರೆಯ ಚಾತುಸ್ಸಮುದ್ರಿಕ ಕೂಪತೀರ್ಥದಲ್ಲಿ ಸ್ನಾನ ಪಿಂಡಪ್ರದಾನಗಳನ್ನು ಮಾಡಿಸಿ ಅದರ ಮಹಿಮೆಯಿಂದ ಪಿಶಾಚಜನ್ಮವನ್ನು ಕಳೆದುಕೊಂಡು ಸ್ವರ್ಗವನ್ನು ಸೇರಿದ ಕಥೆಯನ್ನು ಹೇಳಿ, ಮಧುರೆಯಲ್ಲಿ ವಾಸಿಸುವ ಜನರ ಪ್ರಾಶಸ್ತ್ಯವನ್ನು ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಅರವತ್ತೈದನೆಯ ಅಧ್ಯಾಯ.

॥ ಶ್ರೀಃ ॥

ಷಟ್ಷಷ್ಟ್ಯಧಿಕಶತತಮೋಽಧ್ಯಾಯಃ

॥ ಧರಣ್ಯುವಾಚ ॥

ಶ್ರುತಾನಿ ತು ಮಹಾದೇವ ತೀರ್ಥಾನಿ ವಿವಿಧಾನಿ ತು ।
ಅಸಿಕುಂಡೇತಿ ಸಂಜ್ಞೇಯಂ ತನ್ಮೇ ತ್ವಂ ಕಥಯ ಪ್ರಭೋ ॥ ೧ ॥

॥ ಶ್ರೀವರಾಹ ಉವಾಚ ॥

ಸುಮತಿರ್ನಾಮ ರಾಜಾಸೀದ್ಧಾರ್ಮಿಕೋ ಲೋಕವಿಶ್ರುತಃ ।
ತೀರ್ಥಯಾತ್ರಾ ನಿಮಿತ್ತೇನ ಸ್ವರ್ಗಲೋಕಂ ಗತಃ ಪುರಾ ॥ ೨ ॥

ನೂರ ಅರವತ್ತಾರನೆಯ ಅಧ್ಯಾಯ

೧. ಭೂದೇವಿ—ಮಹಾದೇವ, ಬಗೆಬಗೆಯ ತೀರ್ಥಗಳನ್ನು ಕೇಳಿದುದಾಯಿತು. ಪ್ರಭುವೇ, ಅಸಿಕುಂಡವೆಂಬ ತೀರ್ಥದ ವಿಚಾರವನ್ನು ನನಗೆ ಹೇಳು.

೨. ಶ್ರೀವರಾಹ—ಹಿಂದೆ ಸುಮತಿಯೆಂಬ ಧಾರ್ಮಿಕನೂ, ಲೋಕ ಪ್ರಸಿದ್ಧನೂ ಆದ ದೊರೆಯಿದ್ದನು. ಆತನು ತೀರ್ಥಯಾತ್ರೆಯನ್ನು ಮಾಡಲು ಹೋಗಿ ಸತ್ತು ಸ್ವರ್ಗಲೋಕವನ್ನು ಸೇರಿದನು.

ಗತೇ ಸ್ವರ್ಗಂ ತು ಸ್ವಪತೌ ಪುತ್ರೋ ರಾಜ್ಯಂ ಚಕಾರ ಹ ।
ವಿಮತಿರ್ನಾಮ ನಾಮ್ನಾ ಚ ರಾಜ್ಯೇ ಪೈತಾಮಹೇ ಸ್ಥಿತಃ ॥ ೩ ॥

ರಾಜ್ಯಂ ಚ ಕುರ್ವತಸ್ತಸ್ಯ ಆಗತೋ ನಾರದಸ್ತದಾ ।
ವಿಷ್ಟರಂ ಪಾದ್ಯಮರ್ಘ್ಯಂ ಚ ತಸ್ಮೈ ದತ್ತಂ ಯಥೋಚಿತಂ ॥ ೪ ॥

ಪ್ರತಿಗೃಹ್ಯ ಚ ತತ್ಸರ್ವಂ ತಮುವಾಚ ಸ ನಾರದಃ ।
ಪಿತುರ್ಹ್ಯನೃಣತಾಂ ಗತ್ವಾ ಸ ಪುತ್ರೋ ಧರ್ಮಭಾಗ್ಭವೇತ್ ॥ ೫ ॥

ಇತ್ಯುಕ್ತ್ವಾ ನಾರದಸ್ತತ್ರ ತತ್ರೈವಾಂತರಧೀಯತ ॥ ೬ ॥

ನಾರದೇ ತು ಗತೇ ರಾಜಾ ಪಪ್ರಚ್ಛ ಸ್ವಾತ್ಮಮಂತ್ರಿಣಃ ।
ತದಾ ಕಿಮುಕ್ತಮೃಷಿಣಾ ನಾರದೇನ ಪಿತುಃ ಕೃತೇ ॥
ಆನೃಣ್ಯಮಿತಿ ಯದ್ವಾಕ್ಯಂ ಮಯಾ ಬುದ್ಧಂ ನ ಕಿಂಚನ ॥ ೭ ॥

---

೩. ಸುಮತಿರಾಜನು ಸ್ವರ್ಗಸ್ಥನಾಗಲು ಅವನ ಮಗನಾದ ವಿಮತಿ ಯೆಂಬುವನು ಅಜ್ಜನಿಂದ ಬಂದ ರಾಜ್ಯದಲ್ಲಿ ಅಭಿಷಿಕ್ತನಾಗಿ ದೊರೆತನ ಮಾಡುತ್ತಿದ್ದನು.

೪. ರಾಜ್ಯಭಾರಮಾಡುತ್ತಿದ್ದ ಆತನ ಸಮೀಪಕ್ಕೆ ಒಂದಾನೊಂದು ದಿನ ನಾರದಮುನಿ ಬಂದನು. ದೊರೆಯು ಆತನಿಗೆ ತಕ್ಕಂತೆ ಅರ್ಘ್ಯಪಾದ್ಯಾದಿಗಳನ್ನೂ ಪೀಠವನ್ನೂ ಕೊಟ್ಟನು.

೫–೬. ಅದೆಲ್ಲವನ್ನೂ ಪರಿಗ್ರಹಿಸಿ ನಾರದನು ವಿಮತಿಗೆ " ಪಿತೃಋಣವನ್ನು ತೀರಿಸುವ ಪುತ್ರನು ಧರ್ಮಭಾಗಿಯಾಗುವನು " ಎಂದು ಹೇಳಿ ಅಲ್ಲಿಯೇ ಕಣ್ಮರೆಯಾದನು.

೭. ನಾರದನು ಹೊರಟು ಹೋಗಲು ದೊರೆ ಮಂತ್ರಿಗಳನ್ನು " ನಾರದಋಷಿ ತಂದೆಗಾಗಿ ಆಗ ಹೇಳಿದುದೇನು ? ಋಣವನ್ನು ತೀರಿಸುವುದು ಎಂಬ ಮಾತು ನನಗೆ ಏನೂ ಅರ್ಥವಾಗಲಿಲ್ಲ " ಎಂದು ಕೇಳಿದನು.

ಮಂತ್ರಿಣಶ್ಚ ತತೋ ಜ್ಞಾತ್ವಾ ಪಿತುರ್ಮರಣಮೇವ ಚ ।
ತೀರ್ಥಯಾತ್ರಾನಿಮಿತ್ತಂ ಚ ತಸ್ಮೈ ರಾಜ್ಞೇ ನ್ಯವೇದಯನ್ ॥ ೮ ॥

ಅತ ಏವೋಕ್ತಮಾನೃಣ್ಯಂ ನಾರದೇನ ಪಿತುಸ್ತವ ॥ ೯ ॥
ಶ್ರುತ್ವಾ ವಾಕ್ಯಂ ತದಾ ರಾಜಾ ತೀರ್ಥಯಾತ್ರಾಂ ಚಕಾರ ಹ ।
ವಿಮತೇರ್ಬುದ್ಧಿರುತ್ಪನ್ನಾ ಗಚ್ಛಾಮೋ ಮಧುರಾಂ ಪುರೀಂ ॥ ೧೦ ॥

ಚತುರೋ ವಾರ್ಷಿಕಾನ್ಮಾಸಾನ್ಮಧುರಾಯಾಂ ವಸಾಮಹೇ ।
ಸರ್ವಾಣಿ ತತ್ರ ತೀರ್ಥಾನಿ ತಿಷ್ಠಂತಿ ವಿವಿಧಾನಿ ಚ ॥ ೧೧ ॥

ಆಗತೇ ತು ನೃಪೇ ತತ್ರ ತೀರ್ಥಾನ್ಯೂಚುಃ ಪರಸ್ಪರಂ ।
ಯುದ್ಧಂ ವಿಮತಿನಾ ಸಾರ್ಧಂ ಸ್ವಯಂ ಕರ್ತುಂ ನ ಶಕ್ನುಮಃ ॥ ೧೨ ॥

೮–೯. ಬಳಿಕ ಮಂತ್ರಿಗಳು ಯೋಚಿಸಿ, ಆತನ ತಂದೆಗೆ ಮರಣವು ತೀರ್ಥಯಾತ್ರೆಯಿಂದಾಯಿತೆಂಬುದನ್ನು ಜ್ಞಾಪಿಸಿಕೊಂಡು ಅದನ್ನು ದೊರೆಗೆ ವಿಜ್ಞಾಪಿಸಿ, "ಅದರಿಂದಲೇ ನಾರದನು ನಿನ್ನ ತಂದೆಯ ಋಣವನ್ನು ತೀರಿಸ ಬೇಕು ಎಂದು ಹೇಳಿದನು" ಎಂದರು.

೧೦–೧೧. ಆಗ ದೊರೆಯಾದ ತನ್ನ ತಂದೆಯು ತೀರ್ಥಯಾತ್ರೆಯನ್ನು ಮಾಡಿ ಮೃತನಾದನೆಂಬ ಮಾತನ್ನು ಕೇಳಿ, ವಿಮತಿರಾಜನಿಗೆ ತೀರ್ಥಗಳಿಗೆ ತಕ್ಕ ದಂಡನೆಯನ್ನು ಮಾಡಬೇಕೆಂಬ ಬುದ್ಧಿಯುಂಟಾಯಿತು. "ಮಧುರೆಗೆ ಹೋಗೋಣ; ವರ್ಷಾಕಾಲದ ನಾಲ್ಕುತಿಂಗಳೂ ಆ ಮಧುರೆಯಲ್ಲಿ ವಾಸ ಮಾಡೋಣ. ಆಗ ಅಲ್ಲಿಗೆ ಬಗೆಬಗೆಯ ಸರ್ವತೀರ್ಥಗಳೂ ಬಂದಿರುತ್ತವೆ. ಅವಕ್ಕೆಲ್ಲಾ ತಕ್ಕುದನ್ನು ಮಾಡಬಹುದು" ಎಂದನು.

೧೨–೧೩. ವಿಮತಿರಾಜನು ಹಾಗೆಯೇ ಮಧುರೆಗೆ ಬರಲಾಗಿ ತೀರ್ಥಗಳು ಪರಸ್ಪರವಾಗಿ "ವಿಮತಿಯೊಡನೆ ನಾವು (ನೇರವಾಗಿ) ಯುದ್ಧಮಾಡಲು

ಕಲ್ಪಗ್ರಾಮಂತು ಗಚ್ಛಾಮೋ ವರಾಹೋ ಯತ್ರ ತಿಷ್ಠತಿ ॥ ೧೩ ॥

ಗತಾನಿ ತತ್ರ ತೀರ್ಥಾನಿ ಕಲ್ಪಗ್ರಾಮಂ ವಸುಂಧರೇ ।
ತತ್ರ ವರಾಹರೂಪೇಣ ಸ್ಥಿತೋಽಹಂ ಚ ಯದೃಚ್ಛಯಾ ॥
ಯಾವನ್ನಿರೀಕ್ಷಯಾಮ್ಯಗ್ರಂ ತಾವತ್ತಿಷ್ಠಂತಿ ಸನ್ನಿಧೌ ॥ ೧೪ ॥

॥ ತೀರ್ಥಾನ್ಯೂಚುಃ ॥

ಜಯ ವಿಷ್ಣೋ ಜಯಾ ಚಿಂತ್ಯ ಜಯದೇವ ಜಯಾಚ್ಯುತ ।
ಜಯ ವಿಶ್ವೇಶ ಕರ್ತೇಶ ಜಯ ದೇವ ನಮೋಽಸ್ತುತೇ ॥ ೧೫ ॥

॥ ಶ್ರೀವರಾಹ ಉವಾಚ ॥

ತೀರ್ಥೈಃ ಸ್ತುತೋಽಹಂ ವಸುಧೇ ವಚನಂ ಚೇದಮಬ್ರವಂ ।
ವರಂ ವೃಣುತ ಭದ್ರಂ ವೋ ಯದ್ವೋ ಮನಸಿ ವರ್ತತೇ ॥ ೧೬ ॥

ಶಕ್ತರಾಗಿಲ್ಲ. ಆದದರಿಂದ ನಾವು ಶ್ರೀವರಾಹನಿರುವ ಕಲ್ಪಗ್ರಾಮಕ್ಕೆ ಹೋಗೋಣ" ಎಂದು ಮಾತನಾಡಿಕೊಂಡುವು.

೧೪. ವಸುಂಧರೇ, ಹಾಗೆಯೇ ಆ ತೀರ್ಥಗಳು ಕಲ್ಪಗ್ರಾಮಕ್ಕೆ ಬಂದುವು. ಅಲ್ಲಿ ನಾನು ಅಕಸ್ಮಾತ್ತಾಗಿ ವರಾಹರೂಪದಿಂದ ಇದ್ದೆನು. ನಾನು ಮುಂದುಗಡೆ ನೋಡುವಷ್ಟರಲ್ಲಿಯೇ ತೀರ್ಥಗಳು ನನ್ನ ಸನ್ನಿಧಿಯಲ್ಲಿಯೇ ಇದ್ದುವು.

೧೫. ತೀರ್ಥಗಳು—ಜಯ ವಿಷ್ಣೋ ಜಯಾ ಚಿಂತ್ಯ ಜಯ ದೇವ ಜಯಾಚ್ಯುತ । ಜಯ ವಿಶ್ವೇಶ ಕರ್ತೇಶ ಜಯ ದೇವ ನಮೋಽಸ್ತುತೇ ॥ ಎಂದು ನನ್ನನ್ನು ಸ್ತುತಿಸಿದುವು.

೧೬. ಭೂದೇವೀ, ತೀರ್ಥಗಳಿಂದ ಹೀಗೆ ಸ್ತುತನಾದ ನಾನು ಅವುಗಳಿಗೆ "ನಿಮಗೆ ಮಂಗಳವಾಗಲಿ. ನಿಮ್ಮ ಮನಸ್ಸಿನಲ್ಲಿರುವ ವರವನ್ನು ಕೇಳಿ" ಎಂದು ಹೇಳಿದೆನು.

॥ ತೀರ್ಥಾನ್ಯೂಚುಃ ॥
ವರಾಹ ಯದಿ ದೇವೇಶ ಅಭಯಂ ದಾತುಮರ್ಹಸಿ ।
ಸುಪಾಪಿನಾ ವಿಮತಿನಾ ಕೃತಸ್ತ್ರಾಸಃ ಸುದಾರುಣಃ ॥
ತನ್ನಿಯಚ್ಛಸ್ವ ಪಾಪಿಷ್ಠಂ ಯದಿ ಪಶ್ಯಸಿ ನಃ ಸುಖಂ ॥ ೧೭ ॥

॥ ಶ್ರೀವರಾಹ ಉವಾಚ ॥
ಹಿತಾಯ ಸರ್ವತೀರ್ಥಾನಾಂ ಹನಿಷ್ಯಾಮಿ ಮಹಾರಿಪುಂ ॥ ೧೮ ॥

ತತ್ರ ತೀರ್ಥನಿಯೋಗೇನ ಆಗತೋ ಮಥುರಾಂ ಪುರೀಂ ।
ತತ್ರಾಗತೇ ತು ವಸುಧೇ ಯುದ್ಧಂ ಕೃತ್ವಾ ತು ತೇನ ವೈ ।
ತದಾಸಿನಾ ತು ದಿವ್ಯೇನ ಸ ರಾಜಾ ಬಲದರ್ಪಿತಃ ॥
ಸೂದಿತೋ ಹಿ ಮಯಾ ದೇವಿ ಅಸ್ಯಗ್ರಂ ನಿಹಿತಂ ಭುವಿ ॥ ೧೯ ॥

---

೧೭. ತೀರ್ಥಗಳು—ವರಾಹಾ, ದೇವೇಶಾ, ಬಹುಪಾಪಿಯಾದ ವಿಮತಿಯಿಂದ ನಮಗೆ ಅತಿಘೋರವಾದ ಭಯವುಂಟಾಗಿದೆ. ನಮಗೆ ಅಭಯವನ್ನು ಕೊಡತಕ್ಕವನಾಗಿದ್ದು ನಮ್ಮ ಸುಖವನ್ನು ನೋಡುವೆಯಾದರೆ ಆ ಪಾಪಿಷ್ಠನನ್ನು ಕೊಲ್ಲು.

೧೮. ಶ್ರೀವರಾಹ—ಸರ್ವತೀರ್ಥಗಳ ಹಿತಕ್ಕಾಗಿ ಆ ಮಹಾವೈರಿಯನ್ನು ಕೊಲ್ಲುವೆನು.

೧೯. ಭೂಮೀ, ವಿಮತಿ ಮಥುರೆಗೆ ಬರಲಾಗಿ ಅವನೊಡನೆ ಯುದ್ಧಮಾಡಿ ಬಲದಿಂದ ಕೊಬ್ಬಿದ ಆ ದೊರೆಯನ್ನು ದಿವ್ಯವಾದ ಅಸಿ (ಕತ್ತಿ)ಯಿಂದ ನಾನು ಕೊಂದೆನು. ದೇವಿ, ಬಳಿಕ ಆ ಅಸಿ (ಕತ್ತಿ)ಯ ತುದಿಯನ್ನು ನೆಲದ ಮೇಲಿಟ್ಟೆನು.

ಅಸೇರಗ್ರೇಣತೂದ್ಧೃತ್ಯ ಮೃತ್ತಿಕಾಂ ವರವರ್ಣಿನಿ ।
ತತ್ರ ಕುಂಡಂ ಮಹದ್ದಿವ್ಯಂ ದೇವರ್ಷಿವಿಧಿನಿರ್ಮಿತಂ ॥
ಅಸಿಕುಂಡೇತಿ ಸಂಜ್ಞಾ ಚ ಪ್ರಾಪ್ತಾ ತೇನ ವಸುಂಧರೇ ॥ ೨೦ ॥

ತತ್ರಾಶ್ಚರ್ಯಂ ಪ್ರವಕ್ಷ್ಯಾಮಿ ಮನಃ ಕರ್ಣಸುಖಾವಹಂ ।
ಪಶ್ಯಂತಿ ಮನುಜಾಃ ಸಿದ್ಧಾಃ ಸರ್ವಪಾಪವಿವರ್ಜಿತಾಃ ॥ ೨೧ ॥

ದ್ವಾದಶ್ಯಾಂ ಚ ಚತುರ್ದಶ್ಯಾಂ ಶ್ರದ್ಧದಾನಾ ಜಿತೇಂದ್ರಿಯಾಃ ।
ಫಲಾನಿ ತಸ್ಯ ಪಶ್ಯಂತಿ ಲಭಂತೇ ಚ ಸುನಿಶ್ಚಿತಾಃ ॥ ೨೨ ॥

ತಸ್ಮಿನ್ಕಾಲೇ ಹ್ಯಹಂ ದೇವಿ ಮಧುರಾಯಾಂ ಸಮಾಗತಃ ।
ತತ್ರ ತಿಷ್ಠಾಮ್ಯಹಂ ಭದ್ರೇ ಪಶ್ಚಿಮಾಂ ದಿಶಮಾಶ್ರಿತಃ ॥ ೨೩ ॥

ತತ್ರ ಕೃತ್ವಾ ಚ ಹೈರಣ್ಯಾ ಮೂರ್ತಯಶ್ಚ ಚತುರ್ವಿಧಾಃ ।
ತೀರ್ಥೇ ವಾರಾಹಸಂಜ್ಞೇತು ಮಧುರಾಯಾಂ ವ್ಯವಸ್ಥಿತಾಃ ॥ ೨೪ ॥

---

೨೦. ಉತ್ತಮೇ, ಆ ಕತ್ತಿಯ ತುದಿಯಿಂದ ಭೂಮಿಯ ಮಣ್ಣನ್ನು ತೋಡಿ, ದೇವರ್ಷಿಬ್ರಹ್ಮರು ಅಲ್ಲಿ ಮಹಾದಿವ್ಯವಾದ ಕುಂಡವೊಂದನ್ನು ನಿರ್ಮಿಸಿದರು. ವಸುಂಧರೇ, ಆದುದರಿಂದ ಆ ಕುಂಡಕ್ಕೆ ಅಸಿಕುಂಡವೆಂಬ ಹೆಸರೇ ಬಂದಿತು.

೨೧. ದೇವೀ, ಮನಸ್ಸಿಗೂ ಕಿವಿಗೂ ಹಿತಕರವಾದ ಅಲ್ಲಿನ ಆಶ್ಚರ್ಯವನ್ನು ಹೇಳುತ್ತೇನೆ. ಅದನ್ನು ಪಾಪಗಳೆಲ್ಲವನ್ನೂ ಕಳೆದುಕೊಂಡಿರುವ ಅಥವಾ ಪಾಪವನ್ನೇ ಮಾಡದ ಸಿದ್ಧರಾದ ಮನುಷ್ಯರು ನೋಡುವರು.

೨೨. ಪೂರ್ಣವಾಗಿ ನಂಬಿಕೆಯುಳ್ಳ ಜಿತೇಂದ್ರಿಯರು ಆ ತೀರ್ಥದಲ್ಲಿ ದ್ವಾದಶಿಯದಿನವೂ, ಚತುರ್ದಶಿಯದಿನವೂ ಫಲಗಳನ್ನು ಕಂಡು, ಪಡೆಯುವರು.

೨೩. ದೇವೀ, ಭದ್ರೇ, ಆ ಕಾಲದಲ್ಲಿ ನಾನು ಮಧುರೆಗೆ ಬಂದು ಪಶ್ಚಿಮ ದಿಕ್ಕಿಗಭಿಮುಖನಾಗಿ ಅಲ್ಲಿರುವೆನು.

೨೪–೨೫. ನಾನು ಅಲ್ಲಿ ನಾಲ್ಕು ಸ್ವರ್ಣಮೂರ್ತಿಗಳ ರೂಪವನ್ನು ಧರಿಸುವೆನು. ಆ ನಾಲ್ಕು ಮೂರ್ತಿಗಳೂ ಆ ಮಧುರೆಯ ವಾರಾಹತೀರ್ಥ

ಸುದೃಢಾಃ ಸುದೃಶಃ ಸುಭ್ರೂರ್ಯಃ ಪಶ್ಯತಿ ಸಮುಚ್ಯತೇ || ೨೫ ||

ಏಕಾ ವರಾಹಸಂಜ್ಞಾ ಚ ತಥಾ ನಾರಾಯಣಸ್ಯ ಚ |
ವಾಮನಸ್ಯ ತೃತೀಯಾ ವೈ ಚತುರ್ಥೀ ರಾಘವಸ್ಯ ಚ || ೨೬ ||

ಏತಾಶ್ಚತಸ್ರೋ ಯಃ ಪಶ್ಯೇತ್ ಸ್ನಾತ್ವಾ ಕುಂಡೇಸಿ ಸಂಜ್ಞಿತೇ |
ಚತುಃ ಸಾಗರಪರ್ಯಂತಾ ಕ್ರಾಂತಾ ತೇನ ಧರಾ ಧ್ರುವಂ ||
ತೀರ್ಥಾನಾಂ ಮಾಥುರಾಣಾಂ ಚ ಸರ್ವೇಷಾಂ ಫಲಮಶ್ನುತೇ || ೨೭ ||

ತತ್ರ ಸರ್ವೇಷು ತೀರ್ಥೇಷು ಅಸಿಕುಂಡಂ ಮಹತ್ತರಂ |
ಯಾ ಸಂಖ್ಯಾ ಕಥಿತಾ ಪೂರ್ವಂ ತೀರ್ಥಾನಾಂ ದಕ್ಷಿಣೋತ್ತರೇ ||
ಅಸಿಕುಂಡಂ ಸಮಾರಭ್ಯ ತೀರ್ಥಾನುಕ್ರಮಣಿಕಾ ವರಾ || ೨೮ ||

ದಲ್ಲಿರುವುವು. ಸುಂದರೀ, ಬಹು ದೃಢವಾದುವೂ, ಸುಂದರವಾದುವೂ ಆದ ಆ ಮೂರ್ತಿಗಳನ್ನು ಸಂದರ್ಶಿಸುವವನು ಮುಕ್ತನಾಗುವನು.

೨೬. ಆ ನಾಲ್ಕು ಸುವರ್ಣಮೂರ್ತಿಗಳಲ್ಲಿ ಒಂದು ಶ್ರೀವರಾಹಮೂರ್ತಿ, ಎರಡನೆಯದು ನಾರಾಯಣಮೂರ್ತಿ, ಮೂರನೆಯದು ವಾಮನಮೂರ್ತಿ ನಾಲ್ಕನೆಯದು ಶ್ರೀರಾಮಮೂರ್ತಿ.

೨೭. ಯಾತ್ರಿಕನು, ಅಸಿಕುಂಡವೆಂಬುದರಲ್ಲಿ ಸ್ನಾನಮಾಡಿ, ಈ ನಾಲ್ಕು ಮೂರ್ತಿಗಳ ಸಂದರ್ಶನವನ್ನು ಮಾಡಿದರೆ, ಚತುಸ್ಸಾಗರಗಳವರೆಗಿರುವ ಭೂಮಿಯನ್ನೆಲ್ಲಾ ಸಂಚರಿಸಿದಂತಾಗುವುದು. ಅಲ್ಲಿ ಮಥುರೆಯ ಸರ್ವತೀರ್ಥಗಳ ಫಲವನ್ನೂ ಅನುಭವಿಸುವನು.

೨೮. ಮಥುರೆಯಲ್ಲಿರುವ ತೀರ್ಥಗಳಲ್ಲೆಲ್ಲಾ ಅಸಿಕುಂಡವು ಉತ್ತಮವಾದುದು. ಆದುದರಿಂದ ಅಸಿಕುಂಡದಿಂದ ಮೊದಲುಗೊಂಡು ದಕ್ಷಿಣೋತ್ತರಗಳಲ್ಲಿರುವುವೆಂದು ಮೊದಲು ಹೇಳಿರುವ ತೀರ್ಥಗಳ ಸಂಖ್ಯಾನುಕ್ರಮಣಿಕೆಯು ಉತ್ತಮವಾಗಿದೆ.

ಸುಪ್ತ್ವೋತ್ಥಿತೋಽಪಿ ದ್ವಾದಶ್ಯಾಮಸಿಕುಂಡಾಪ್ಲುತೋ ನರಃ ।
ಮೂರ್ತೀಃ ಪಶ್ಯತಿ ಯಸ್ತಾಸ್ತು ಬ್ರಹ್ಮಭೂಯಾಯ ಕಲ್ಪತೇ ॥ ೨೯ ॥

ನಾಸ್ತೀಹ ಪುನರಾವೃತ್ತಿರ್ಭವೇತ್ಕಾಲವಿಪರ್ಯಯೇ ॥ ೩೦ ॥

ಇತಿ ಶ್ರೀವರಾಹಪುರಾಣೇ ಅಸಿಕುಂಡಪ್ರಭಾವೋ ನಾಮ
ಷಟ್‌ಷಷ್ಟ್ಯಧಿಕಶತತಮೋಽಧ್ಯಾಯಃ

೨೯–೩೦. ಏಕಾದಶಿಯದಿನ ರಾತ್ರಿ ಜಾಗರಣೆಯನ್ನು ಮಾಡದೆ ನಿದ್ದೆಮಾಡಿದ ಮನುಷ್ಯನಾದರೂ, ದ್ವಾದಶಿಯದಿನ ಎದ್ದು ಅಸಿಕುಂಡದಲ್ಲಿ ಸ್ನಾನಮಾಡಿ, ಆ ನಾಲ್ಕು ಸುವರ್ಣಮೂರ್ತಿಗಳ ದರ್ಶನವನ್ನು ಮಾಡಿದನಾದರೆ ಅವನು ಬ್ರಹ್ಮಸಾಯುಜ್ಯಕ್ಕೆ ಅರ್ಹನಾಗುವನು. ಕಾಲವು ಬದಲಾಯಿಸಿದರೂ ಅವನಿಗೆ ಇಹಲೋಕದಲ್ಲಿ ಪುನರ್ಜನ್ಮವಿಲ್ಲ.

ಅಧ್ಯಾಯದ ಸಾರಾಂಶ—

ತೀರ್ಥಗಳನ್ನು ದ್ವೇಷಿಸುತ್ತಿದ್ದ ವಿಮತಿಯೆಂಬ ರಾಜನನ್ನು ಮಧುರೆಯ ತೀರ್ಥಗಳ ಪ್ರಾರ್ಥನೆಯಿಂದ ತಾನು ಸಂಹರಿಸಿ, ಕತ್ತಿಯ ಮೊನೆಯನ್ನು ಭೂಮಿಗೆ ತಾಕಿಸಲಾಗಿ ಅದರಿಂದ ಅಸಿಕುಂಡವೆಂಬ ತೀರ್ಥವುದಿಸಿತೆಂದು ಅದರ ಮಹಿಮೆಯನ್ನೆಲ್ಲಾ ಶ್ರೀವರಾಹನು ಭೂದೇವಿಗೆ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಅರವತ್ತಾರನೆಯ ಅಧ್ಯಾಯ.

॥ ಶ್ರೀಃ ॥

ಸಪ್ತಷಷ್ಟ್ಯಧಿಕಶತತಮೋಽಧ್ಯಾಯಃ

॥ ಶ್ರೀವರಾಹ ಉವಾಚ ॥

ಶೃಣು ದೇವಿ ಯಥಾ ಸಂಜ್ಞಾವಿಶ್ರಾಂತೇಃ ಕೀರ್ತಿತಾ ಪುರಾ ।
ರಾಕ್ಷಸೇನ ಪುರಾ ಪ್ರೋಕ್ತಾ ಬ್ರಾಹ್ಮಣಾಯ ಮಹಾತ್ಮನೇ ॥ ೧ ॥

॥ ಪೃಥಿವ್ಯುವಾಚ ॥

ಕಿಮರ್ಥಂ ರಾಕ್ಷಸೇನೋಕ್ತಾ ಸಂಜ್ಞಾ ವಿಶ್ರಾಂತಿ ಸಂಜ್ಞಿತಾ ।
ಕಿಮರ್ಥಂ ಪೃಷ್ಟವಾನ್ವಿಪ್ರಃ ಸರ್ವಂ ಕಥಯ ಮೇ ಪ್ರಭೋ ॥ ೨ ॥

ನೂರ ಅರವತ್ತೇಳನೆಯ ಅಧ್ಯಾಯ

೧. ಶ್ರೀವರಾಹ—ದೇವೀ, ವಿಶ್ರಾಂತಿತೀರ್ಥಕ್ಕೆ ಆ ಹೆಸರು ಪೂರ್ವದಲ್ಲಿ ಹೇಗೆ ಬಂದಿತೆಂಬುದನ್ನು ಒಬ್ಬ ರಾಕ್ಷಸನು ಮಹಾತ್ಮನಾದ ಬ್ರಾಹ್ಮಣನೊಬ್ಬನಿಗೆ ಹೇಳಿರುವನು. ಅದನ್ನು ಹೇಳುತ್ತೇನೆ. ಕೇಳು.

೨. ಭೂದೇವಿ—ಪ್ರಭುವೇ, ಬ್ರಾಹ್ಮಣನು ರಾಕ್ಷಸನನ್ನೇಕೆ ಕೇಳಿದನು ? ರಾಕ್ಷಸನು ಆ ತೀರ್ಥಕ್ಕೆ ವಿಶ್ರಾಂತಿ ಎಂಬ ಹೆಸರು ಬಂದುದನ್ನು ಹೇಳಿದುದೇತಕ್ಕೆ ? ಎಲ್ಲವನ್ನೂ ನನಗೆ ತಿಳಿಸು.

|| ಶ್ರೀವರಾಹ ಉವಾಚ ||

ಉಜ್ಜಯಿನ್ಯಾಮಭೂದ್ವಿಪ್ರಃ ಸದಾಚಾರ ವಿವರ್ಜಿತಃ |
ನ ಸ ಪೂಜಯತೇ ದೇವಾನ್ನ ಸ ಸಾಧೂನ್ನಮಸ್ಯತಿ || ೩ ||

ಪುಣ್ಯತೀರ್ಥಂ ಸಮಾಸಾದ್ಯ ನ ಚ ಸ್ನಾನಂ ಕರೋತಿ ಸಃ |
ವೇದವೇದಾಂಗರಹಿತಃ ಪರದಾರರತಃ ಸದಾ || ೪ ||

ಸಂಧ್ಯೇ ದ್ವೇ ಶಯನೇ ಚೈವ ನಿತ್ಯಂ ಮೂಢಃ ಸ ತಿಷ್ಠತಿ |
ನ ಸ ದೇವಮನುಷ್ಯಾಂಶ್ಚ ಪಿತೄನ್ ಪೂಜಯತೇ ಸದಾ || ೫ ||

ಪಾಪಾಚಾರರತೋ ನಿತ್ಯಂ ಪಾಪಸಂಗಃ ಸುದುರ್ಮತಿಃ |
ಗಾರ್ಹಸ್ಥ್ಯಧರ್ಮಮಾಶ್ರಿತ್ಯ ಮೋಹಿತೋ ವರ್ತತೇ ಸದಾ || ೬ ||

ಗಾರ್ಹಸ್ಥ್ಯಂ ಸರ್ವಧರ್ಮಾಣಾಂ ಶ್ರೇಷ್ಠಮುಕ್ತಂ ಸ್ವಯಂಭುವಾ |
ಯಾವಂತಿ ಜಂತವಃ ಸರ್ವೇ ಯಥಾಗೋಃ ಸರ್ವತಃ ಸ್ಥಿತಾಃ || ೭ ||

೩–೪. ಶ್ರೀವರಾಹ—ಉಜ್ಜಯಿನೀಪುರದಲ್ಲಿ ಸದಾಚಾರಗಳನ್ನು ಬಿಟ್ಟ ಬ್ರಾಹ್ಮಣನೊಬ್ಬನಿದ್ದನು. ಅವನು ದೇವರುಗಳನ್ನು ಪೂಜಿಸನು. ಸಾಧುಗಳನ್ನು ವಂದಿಸನು. ಪುಣ್ಯತೀರ್ಥಕ್ಕೆ ಹೋಗಿ ಸ್ನಾನಮಾಡನು. ವೇದ ವೇದಾಂಗ ಹೀನನಾಗಿ ಯಾವಾಗಲೂ ಪರನಾರಿಯರಲ್ಲಿ ಆಸಕ್ತನಾಗಿರುವನು.

೫. ಆ ಮೂಢನು ಸೂರ್ಯೋದಯ ಕಾಲದಲ್ಲಿಯೂ, ಸಂಜೆಯಲ್ಲಿಯೂ ನಿತ್ಯವೂ ಹಾಸಿಗೆಯಲ್ಲಿಯೇ ಇರುತ್ತಿದ್ದನು. ಅವನು ದೇವತೆಗಳನ್ನೂ, ಮನುಷ್ಯರನ್ನೂ, ಪಿತೃಗಳನ್ನೂ ಯಾವಾಗಲೂ ಪೂಜಿಸುತ್ತಿರಲಿಲ್ಲ.

೬. ಅವನು ಗೃಹಸ್ಥಧರ್ಮವನ್ನನುಸರಿಸಿದರೂ ಬಹು ದುರ್ಬುದ್ಧಿಯುಳ್ಳವನೂ, ಮೋಹಿತನೂ, ದುಷ್ಟಸಹವಾಸವುಳ್ಳವನೂ ಆಗಿ ಯಾವಾಗಲೂ ಪಾಪಕಾರ್ಯದಲ್ಲಿಯೇ ಆಸಕ್ತನಾಗಿರುತ್ತಿದ್ದನು.

೭–೮. ಧರ್ಮಗಳಲ್ಲೆಲ್ಲಾ ಗೃಹಸ್ಥಧರ್ಮವು ಶ್ರೇಷ್ಠವಾದುದೆಂದು ಬ್ರಹ್ಮನು ಹೇಳಿರುವನು. ಜಂತುಗಳೆಲ್ಲವೂ ಹೇಗೆ ಭೂಮಿಯು ಎಲ್ಲಾ ಕಡೆಯನ್ನೂ

ಯಥಾ ಮಾತರಮಾಶ್ರಿತ್ಯ ಸರ್ವೇ ಜೀವಂತಿ ಜಂತವಃ |
ಏವಂ ಗಾರ್ಹಸ್ಥ್ಯಮಾಶ್ರಿತ್ಯ ಸರ್ವೇ ಜೀವಂತಿ ಜಂತವಃ ॥ ೮ ॥

ತತಃ ಸ ಚೌರ್ಯಂ ಕುರ್ವಾಣಃ ಪಾಪೈಃ ಸಹ ನರಾಧಮಃ |
ಸ ಚ ರಾತ್ರೌ ದ್ರವನ್ ಲೋಕಾನ್ ಲಬ್ಧೋಽಸೌ ರಾಜರಕ್ಷಿಭಿಃ ॥ ೯ ॥

ಪಲಾಯಮಾನಃ ಸ ಪರಮಂಧಕೂಪೇಽಪತತ್ತದಾ ॥ ೧೦ ॥

ಮೃತೋಽಸೌಪತಿತಸ್ತತ್ರ ರಾಕ್ಷಸತ್ವಮುಪಾಗತಃ ।
ಅಂಧಕೂಪೇ ಸ ಪತಿತೋ ಘೋರರೂಪೋಽವಸತ್ತದಾ ॥ ೧೧ ॥

ಕದಾಚಿದಥಕಾರ್ಯೇಷು ಮಹಾನ್ ಸಾರ್ಥ ಉಪಾಗತಃ |
ತೇಷಾಂ ಮಧ್ಯೇ ದ್ವಿಜಃ ಕಶ್ಚಿದ್ರಕ್ಷಾಂ ಕೃತ್ವಾ ವಸುಂಧರೇ ॥ ೧೨ ॥

ಆಶ್ರಯಿಸಿರುವುವೋ, ಮತ್ತು ಎಲ್ಲಾ ಜಂತುಗಳೂ ತಾಯಿಯನ್ನು ಆಶ್ರಯಿಸಿ ಹೇಗೆ ಜೀವಿಸುವುವೋ ಹಾಗೆಯೇ ಅವು ಗೃಹಸ್ಥಧರ್ಮವನ್ನೂ ಆಶ್ರಯಿಸಿಯೇ ಜೀವಿಸುವುವು.

೯–೧೦ ಆ ನರಾಧಮನಾದ ಬ್ರಾಹ್ಮಣನು ಪಾಪಿಗಳೊಡನೆ ಸೇರಿಕೊಂಡು ಕಳ್ಳತನವನ್ನು ಮಾಡುತ್ತ ಅದಕ್ಕಾಗಿ ರಾತ್ರಿಯಲ್ಲಿ ಅಲೆಯುತ್ತ ಇದ್ದನು. ಒಂದು ದಿನ ರಾಜಸೇವಕರಾದ ನಗರದ ಕಾವಲುಗಾರರಿಗೆ ಸಿಕ್ಕಿಬಿದ್ದ ಅವನು ತಪ್ಪಿಸಿಕೊಂಡು ಓಡುತ್ತ ಕತ್ತಲೆಯಲ್ಲಿ ಬಾವಿಗೆ ಬಿದ್ದು ಬಿಟ್ಟನು.

೧೧. ಬಾವಿಯಲ್ಲಿ ಬಿದ್ದ ಅವನು ಅಲ್ಲೇ ಸತ್ತು ರಾಕ್ಷಸಜನ್ಮವನ್ನು ಪಡೆದನು. ಕತ್ತಲೆಯ ಬಾವಿಯಲ್ಲಿ ಬಿದ್ದು ರಾಕ್ಷಸನಾದ ಅವನು ಘೋರ ರೂಪನಾಗಿಯೂ ಇದ್ದನು.

೧೨–೧೩. ಬಳಿಕ ಒಂದಾನೊಂದು ಕಾಲದಲ್ಲಿ ಅಲ್ಲಿಗೆ ದೊಡ್ಡದಾದ ಜನರ ಗುಂಪೊಂದು ಕಾರ್ಯಾರ್ಥವಾಗಿ ಬಂದಿತು. ವಸುಂಧರೇ, ಆ ಗುಂಪಿನ ನಡುವೆ ಬ್ರಾಹ್ಮಣನೊಬ್ಬನು ರಕ್ಷೋಘ್ನಮಂತ್ರದಿಂದ ರಕ್ಷೆಯನ್ನು ಮಾಡಿ ಗುಂಪನ್ನು

ರಕ್ಷೋಘ್ನೇನ ಚ ಮಂತ್ರೇಣ ಸರ್ವಂ ಸಾರ್ಥಂ ಚ ರಕ್ಷತಿ ।
ತತ್ರಾಗತ್ಯ ಚ ರಕ್ಷಸ್ತು ಬ್ರಾಹ್ಮಣಂ ವಾಕ್ಯಮಬ್ರವೀತ್ ॥ ೧೩ ॥

॥ ರಾಕ್ಷಸ ಉವಾಚ ॥

ಅಹಂ ದಾಸ್ಯಾಮಿ ತೇ ವಿಪ್ರ ಯತ್ತೇ ಮನಸಿ ವರ್ತತೇ ।
ಬಹುಕಾಲೇನ ಸಂಪ್ರಾಪ್ತಂ ಭೋಜನಂ ಚ ಯಥೇಪ್ಸಿತಂ ॥ ೧೪ ॥

ಉತ್ತಿಷ್ಠ ವಿಪ್ರ ಗಚ್ಛ ತ್ವಂ ಅನ್ಯತ್ರ ಶಯನಂ ಕುರು ।
ಯೇನಾಹಂ ಭಕ್ಷಯೇ ಸಾರ್ಥಂ ಯಾವತ್ತೃಪ್ತಿರ್ಭವೇನ್ಮಮ ॥ ೧೫ ॥

ರಾಕ್ಷಸಸ್ಯ ವಚಃ ಶ್ರುತ್ವಾ ವಿಪ್ರೋ ವಚನಬ್ರವೀತ್ ।
ಏಕಃ ಸಾರ್ಥಂ ಪ್ರಯಾತೋಽಹಂ ನೋತ್ಸೃಜಾಮಿ ಕಥಂಚನ ॥ ೧೬ ॥

ತಸ್ಮಾದ್ರಾಕ್ಷಸ ಗಚ್ಛ ತ್ವಂ ಸಾರ್ಥಂ ಮಮ ಪರಿಗ್ರಹಂ ।
ನಿರೀಕ್ಷಿತುಂ ನ ಶಕ್ತೋಽಸಿ ಮಮ ಮಂತ್ರಬಲೇನ ಹಿ ॥ ೧೭ ॥

ಕಾಪಾಡುತ್ತಿದ್ದನು. ಆ ರಾಕ್ಷಸನು ಆ ಗುಂಪಿನ ಹತ್ತಿರ ಬಂದು ಬ್ರಾಹ್ಮಣನನ್ನು ಕುರಿತು ಈ ಮಾತನ್ನು ಹೇಳಿದನು.

೧೪–೧೫. ರಾಕ್ಷಸ—'ಬ್ರಾಹ್ಮಣನೇ, ನಿನ್ನ ಮನಸ್ಸಿಗೆ ಬೇಕಾದುದನ್ನು ನಾನು ನಿನಗೆ ಕೊಡುವೆನು. ಬ್ರಾಹ್ಮಣಾ, ಏಳು. ನೀನು ಬೇರೆ ಕಡೆಯಲ್ಲಿ ಮಲಗು ಹೋಗು. ಬಹುಕಾಲದಮೇಲೆ ನನಗೆ ಇಷ್ಟವಾದ ಭೋಜನವು ದೊರೆತಿದೆ. ನೀನು ಇಲ್ಲಿಂದ ಹೊರಟು ಹೋದರೆ ಈ ಗುಂಪನ್ನು ನನಗೆ ತೃಪ್ತಿಯಾಗುವವರೆಗೂ ತಿನ್ನುವೆನು

೧೬–೧೭. ರಾಕ್ಷಸನ ಮಾತನ್ನು ಕೇಳಿ ಬ್ರಾಹ್ಮಣನು "ಗುಂಪಿಗೆ ಸೇರಿದ ನಾನೊಬ್ಬನು ಎಂದಿಗೂ ಗುಂಪನ್ನು ಬಿಡುವುದಿಲ್ಲ. ಆದುದರಿಂದ ರಾಕ್ಷಸಾ, ನೀನು ಹೊರಟು ಹೋಗು. ನಾನು ನನ್ನ ಮಂತ್ರಶಕ್ತಿಯಿಂದ ಹಿಡಿದಿರುವ ಈ ಗುಂಪನ್ನು ನೀನು ನೋಡಲೂ ಆರೆ, ಹೋಗು" ಎಂದು ಹೇಳಿದನು.

॥ ರಾಕ್ಷಸ ಉವಾಚ ॥

ಮಮ ಭಕ್ಷ್ಯೇ ಹತೇ ವಿಪ್ರ ದೋಷಸ್ತವ ಭವಿಷ್ಯತಿ ।
ದಯಾಂ ಕುರು ತ್ವಂ ವಿಪ್ರರ್ಷೇ ಭೋಜನಂ ಮಮದೀಯತಾಂ ॥ ೧೮ ॥

ತತೋಽಪೃಚ್ಛದಸೌವಿಪ್ರೋ ರಾಕ್ಷಸಂ ದಾರುಣಂ ಪ್ರತಿ ।
ಕೇನ ತ್ವಂ ಕರ್ಮದೋಷೇಣ ರಾಕ್ಷಸತ್ವಮುಪಾಗತಃ ॥ ೧೯ ॥

ತತಶ್ಚ ಕಥಯಾಮಾಸ ಯಥಾವೃತ್ತಂ ಪುರಾತನಂ ।
ಅನಾಚಾರಾದಿಹೇತೋಶ್ಚ ರಾಕ್ಷಸತ್ವಮುಪಾಗತಃ ॥ ೨೦ ॥

ಆತ್ಮಾನಂ ಕಥಯಾಮಾಸ ವಿಪ್ರಾಗ್ರೇ ಸ ಯಥಾತಥಂ ।
ತಸ್ಯ ದುಃಖೇನ ಸಂಯುಕ್ತೋ ವಿಪ್ರೋಽಸೌ ವಾಕ್ಯಮಬ್ರವೀತ್ ॥ ೨೧ ॥

---

೧೮. ರಾಕ್ಷಸ—ಬ್ರಾಹ್ಮಣನೇ, ನನಗೆ ಆಹಾರವನ್ನು ತಪ್ಪಿಸಿದರೆ ನಿನಗೆ ದೋಷವುಂಟಾಗುವುದು ಬ್ರಹ್ಮರ್ಷಿಯೇ, ನೀನು ನನ್ನಲ್ಲಿ ದಯೆಮಾಡು. ನನಗೆ ಭೋಜನವನ್ನು ಕೊಡು.

೧೯. ಬಳಿಕ ಆ ಬ್ರಾಹ್ಮಣನು ಭಯಂಕರವಾದ ಆ ರಾಕ್ಷಸನನ್ನು "ಯಾವ ಕರ್ಮದೋಷದಿಂದ ನೀನು ರಾಕ್ಷಸಜನ್ಮವನ್ನು ಪಡೆದೆ ?" ಎಂದು ಕೇಳಿದನು.

೨೦–೨೧. ಬಳಿಕ ರಾಕ್ಷಸನು ಆ ಬ್ರಾಹ್ಮಣನಿಗೆ, ತಾನು ಯಾರೆಂಬುದನ್ನೂ, ತನಗೆ ಅನಾಚಾರಾದಿ ದೋಷಗಳಿಂದ ಹೇಗೆ ರಾಕ್ಷಸತ್ವವು ಬಂದಿತೆಂಬುದೇ ಮೊದಲಾದ ಹಿಂದಿನ ವೃತ್ತಾಂತವೆಲ್ಲವನ್ನೂ ಇದ್ದಂತೆಯೇ ಹೇಳಿದನು. ಅದನ್ನು ಕೇಳಿ, ಅವನ ದುಃಖದಲ್ಲಿ ಭಾಗಿಯಾಗಿ ಆ ಬ್ರಾಹ್ಮಣನು ಮುಂದಿನ ಮಾತನ್ನಾಡಿದನು.

॥ ವಿಪ್ರ ಉವಾಚ ॥

ಮಿತ್ರತ್ವೇ ವರ್ತಸೇ ರಕ್ಷಸ್ತವ ದಾಸ್ಯಾಮಿ ಕಿಂ ವದ ।
ಆತ್ಮನಾ ಚೋಪಕಾರೇಣ ಪ್ರಿಯಂ ಕಿಂ ಕರವಾಣಿ ತೇ ॥ ೨೨ ॥

॥ ರಾಕ್ಷಸ ಉವಾಚ ॥

ದದಾಸಿ ಯದಿ ತದ್ವಿಪ್ರ ಯನ್ಮೇ ಮನಸಿ ವರ್ತತೇ ।
ಮಧುರಾಯಾಂ ಚ ಯತ್ಸ್ನಾನಂ ಕೃತಂ ವಿಶ್ರಾಂತಿಸಂಜ್ಞಕೇ ॥ ೨೩ ॥

ತಚ್ಚ ಸ್ನಾನಫಲಂ ದೇಹಿ ಯೇನ ಮುಕ್ತಿಂ ವ್ರಜಾಮ್ಯಹಂ ।
ತೇನ ದುಃಖೇನ ಸಂಯುಕ್ತೋ ವಿಪ್ರೋ ವಾಕ್ಯಮಥಾಬ್ರವೀತ್ ॥ ೨೪ ॥

॥ ವಿಪ್ರ ಉವಾಚ ॥

ಕಥಂ ಜಾನಾಸಿ ರಕ್ಷಸ್ತ್ವಂ ತೀರ್ಥಂ ವಿಶ್ರಾಂತಿಸಂಜ್ಞಕಂ ।
ಕಥಂ ಚ ಸಂಜ್ಞಾ ತಸ್ಯಾ ಭೂತ್ಕಥಯ ತ್ವಂ ಹಿ ರಾಕ್ಷಸ ॥ ೨೫ ॥

---

೨೨. ಬ್ರಾಹ್ಮಣ—' ರಾಕ್ಷಸನೇ, ನೀನು ನನ್ನ ಮಿತ್ರನಾಗಿದ್ದೀಯೆ. ನಾನು ನಿನಗೆ ಏನನ್ನು ಕೊಡಲಿ ? ದೇಹಸಹಾಯದಿಂದ ಉಪಕಾರಮಾಡಿ ನಿನಗೆ ಯಾವ ಹಿತವನ್ನು ಮಾಡಲಿ ? ಹೇಳು. ''

೨೩–೨೪. " ವಿಪ್ರನೇ, ನನ್ನ ಮನಸ್ಸಿನಲ್ಲಿರುವುದನ್ನು ನೀನು ಕೊಡುವೆಯಾದರೆ ಮಧುರೆಯಲ್ಲಿ ವಿಶ್ರಾಂತಿಯೆಂಬ ತೀರ್ಥದಲ್ಲಿ ನೀನು ಸ್ನಾನಮಾಡಿರುವೆಯಲ್ಲಾ ಆ ಸ್ನಾನದ ಫಲವನ್ನು ನನಗೆ ಕೊಡು. ಆದರಿಂದ ನಾನು ಮುಕ್ತಿಯನ್ನು ಪಡೆಯುವೆನು. '' ರಾಕ್ಷಸನಲ್ಲಿ ಅನುತಾಪವುಳ್ಳ ಆ ಬ್ರಾಹ್ಮಣನು ಬಳಿಕ ಹೇಳಿದನು.

೨೫. ಬ್ರಾಹ್ಮಣ—" ರಾಕ್ಷಸನೇ, ವಿಶ್ರಾಂತಿಯೆಂಬ ಹೆಸರಿನ ತೀರ್ಥವನ್ನು ನೀನು ಹೇಗೆ ಬಲ್ಲೆ ? ಆ ತೀರ್ಥಕ್ಕೆ ಆ ಹೆಸರು ಹೇಗೆ ಬಂದಿತು ಎಂಬುದನ್ನು ಹೇಳು. ''

॥ ರಾಕ್ಷಸ ಉವಾಚ ॥

ಪುರೀ ಉಜ್ಜಯಿನೀ ನಾಮ್ನಾ ತಸ್ಯಾಂ ವಾಸೋ ಹಿ ಮೇ ಸದಾ ।
ತಸ್ಮಿಂಶ್ಚಿದಥಕಾಲೇನ ಗತೋಽಹಂ ವಿಷ್ಣುಮಂದಿರಂ ॥ ೨೬ ॥

ತಸ್ಯಾಗ್ರೇ ತಿಷ್ಠತೇ ವಿಪ್ರೋ ವಾಚಕೋ ವೇದಪಾರಗಃ ।
ವಿಶ್ರಾಂತಿ ತೀರ್ಥಮಾಹಾತ್ಮ್ಯಂ ಶ್ರಾವಯನ್ಸ ದಿನೇ ದಿನೇ ॥ ೨೭ ॥

ತಸ್ಯ ಶ್ರವಣಮಾತ್ರೇಣ ಮಮ ಭಕ್ತಿರ್ಹೃದಿ ಸ್ಥಿತಾ ॥ ೨೮ ॥

ಸಾ ಸಂಜ್ಞಾ ಚ ಶ್ರುತಾ ತತ್ರ ವಿಶ್ರಾಂತೇಶ್ಚ ಮಯಾನಘ ।
ವಾಸುದೇವೋ ಮಹಾಬಾಹುರ್ಜಗತ್ಸ್ವಾಮೀ ಜನಾರ್ದನಃ ।
ವಿಶ್ರಾಮಂ ಕುರುತೇ ತತ್ರ ತೇನ ವಿಶ್ರಾಂತಿಸಂಜ್ಞಿತಾ ॥ ೨೯ ॥

---

೨೬. ರಾಕ್ಷಸ—' ಉಜ್ಜಯಿನಿಯೆಂಬ ಹೆಸರಿನ ಪಟ್ಟಣವಿದೆ. ನಾನು ಯಾವಾಗಲೂ ಅಲ್ಲಿ ವಾಸಮಾಡುತ್ತಿದ್ದೆನು. ಕಾಲವು ಕಳೆಯುತ್ತಿರಲು ಒಂದುದಿನ ನಾನು ವಿಷ್ಣುಮಂದಿರಕ್ಕೆ ಹೋಗಿದ್ದೆನು.

೨೭–೨೮. ಪ್ರತಿನಿತ್ಯವೂ ವಿಶ್ರಾಂತಿತೀರ್ಥದ ಮಹಿಮೆಯನ್ನು ಜನರಿಗೆ ಹೇಳುವ ವೇದಪಾರಂಗತನಾದ ಪೌರಾಣಿಕಬ್ರಾಹ್ಮಣನು ದೇವರೆದುರಿಗೆ ನಿಂತಿದ್ದನು. ಅವನು ಹೇಳಿದುದನ್ನು ಕೇಳಿದ ಮಾತ್ರದಲ್ಲಿಯೇ ನನಗೆ ಮನಸ್ಸಿನಲ್ಲಿ ಭಕ್ತಿಯು ನೆಲಸಿತು

೨೯. ಪಾಪರಹಿತಾ, ಮಹಾಬಾಹುವೂ, ಜಗತ್ಸ್ವಾಮಿಯೂ, ವಸುದೇವ ಪುತ್ರನೂ ಆದ ಕೃಷ್ಣನು ಆ ತೀರ್ಥದಲ್ಲಿ ವಿಶ್ರಾಂತಿಗೊಳ್ಳುವುದರಿಂದ ಅದಕ್ಕೆ ವಿಶ್ರಾಂತಿತೀರ್ಥವೆಂದು ಹೆಸರು ಬಂದಿರುವುದೆಂಬುದನ್ನು ನಾನು ದೇವಾಲಯದಲ್ಲಿ ಪುರಾಣಿಕರಿಂದಲೇ ಕೇಳಿದೆನು. ''

ರಾಕ್ಷಸಸ್ಯ ವಚಃ ಶ್ರುತ್ವಾ ವಿಪ್ರೋ ವಚನಮಬ್ರವೀತ್ ।
ಏಕಸ್ನಾನಸ್ಯ ಹಿ ಫಲಂ ತವ ದತ್ತಂ ಚ ರಾಕ್ಷಸ ।
ವಿಪ್ರೇ ಚೇತ್ಯುಕ್ತಮಾತ್ರೇ ಚ ಮೋಕ್ಷಾವಾಸಮವಾಪ ಸಃ ॥ ೩೦ ॥

ಇತಿ ಶ್ರೀ ವರಾಹಪುರಾಣೇ ಮಥುರಾಮಾಹಾತ್ಮ್ಯೇ ವಿಶ್ರಾಂತಿಮಾಹಾತ್ಮ್ಯಂ ನಾಮ ಸಪ್ತಷಷ್ಟ್ಯಧಿಕಶತತಮೋಽಧ್ಯಾಯಃ

---

೩೦. ರಾಕ್ಷಸನ ಮಾತನ್ನು ಕೇಳಿ, ಆ ಬ್ರಾಹ್ಮಣನು, "ರಾಕ್ಷಸನೇ, ವಿಶ್ರಾಂತಿತೀರ್ಥದಲ್ಲಿ, ನಾನು ಮಾಡಿದ ಒಂದು ಸ್ನಾನದ ಫಲವನ್ನು ನಿನಗೆ ಕೊಟ್ಟಿದ್ದೇನೆ" ಎಂದು ಹೇಳಿದನು ಬ್ರಾಹ್ಮಣನು ಹಾಗೆ ಹೇಳಿದ ಮಾತ್ರದಲ್ಲಿಯೇ ಆ ರಾಕ್ಷಸನು ಮೋಕ್ಷನಿವಾಸವನ್ನು ಸೇರಿದನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಥುರೆಯಲ್ಲಿರುವ ವಿಶ್ರಾಂತಿತೀರ್ಥಕ್ಕೆ ಆ ಹೆಸರು ಬರಲು, ವಾಸುದೇವನು ಅಲ್ಲಿ ವಿಶ್ರಾಂತಿಗೊಳ್ಳುವುದೇ ಕಾರಣವೆಂದೂ, ರಾಕ್ಷಸಜನ್ಮವನ್ನು ಪಡೆದಿದ್ದ ಬ್ರಾಹ್ಮಣನೊಬ್ಬನು ಮಥುರೆಯ ಶ್ರೋತ್ರಿಯ ಬ್ರಾಹ್ಮಣನೊಬ್ಬನಿಗೆ ಹೇಳಿ, ಆತನಿಂದ ಆ ವಿಶ್ರಾಂತಿತೀರ್ಥಸ್ನಾನದ ಫಲವನ್ನು ಬೇಡಿ, ಪಡೆದು, ಅದರಿಂದ ತನ್ನ ರಾಕ್ಷಸತ್ವವನ್ನು ಕಳೆದುಕೊಂಡು, ಮೋಕ್ಷವನ್ನೂ ಪಡೆದನೆಂದೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಅರವತ್ತೇಳನೆಯ ಅಧ್ಯಾಯ.

॥ ಶ್ರೀಃ ॥

ಅಷ್ಟಷಷ್ಟ್ಯಧಿಕಶತತಮೋಽಧ್ಯಾಯಃ

॥ ಧರಣ್ಯುವಾಚ ॥

ಮಥುರಾಂ ರಕ್ಷತೇ *ಯೋಽಸೌ ಕ್ಷೇತ್ರಪಾಲೋ ವ್ಯವಸ್ಥಿತಃ ।
ತೇನ ದೃಷ್ಟೇನ ಯತ್ಪುಣ್ಯಂ ಕಥಯಸ್ವಾಖಿಲಂ ಪ್ರಭೋ ॥ ೧ ॥

॥ ಶ್ರೀವರಾಹ ಉವಾಚ ॥

ದೃಷ್ಟ್ವಾ ಭೂತಪತಿಂ ದೇವಂ ವರದಂ ಪಾಪನಾಶನಂ ।
ತಸ್ಯ ದರ್ಶನಮಾತ್ರೇಣ ಮಥುರಾಯಾಂ ಫಲಂ ಲಭೇತ್ ॥ ೨ ॥

ನೂರ ಅರವತ್ತೆಂಟನೆಯ ಅಧ್ಯಾಯ

೧. ಭೂದೇವಿ—ಪ್ರಭುವೇ, ಕ್ಷೇತ್ರಪಾಲನಾಗಿ ಮಥುರೆಯನ್ನು ರಕ್ಷಿಸುವ ಆ ಈಶ್ವರನ ಸಂದರ್ಶನದಿಂದ ಯಾವ ಪುಣ್ಯವು ಬರುವುದೆಂಬುದೇ ಮೊದಲಾದುದೆಲ್ಲವನ್ನೂ ಹೇಳು.

೨. ಶ್ರೀವರಾಹ—ಭೂತಪತಿಯೂ, ವರಗಳನ್ನು ಕೊಡುವವನೂ ಆದ ಆ ದೇವನ ದರ್ಶನಮಾತ್ರದಿಂದ ಪಾಪವು ನಾಶವಾಗುವುದಲ್ಲದೆ ಮಥುರೆಯ ಯಾತ್ರೆಯ ಫಲವು ಪೂರ್ಣವಾಗಿ ಆಗುವುದು.

---

* ಕೋಽಸೌ

ಪುರಾ ವರ್ಷಸಹಸ್ರಂತು ತಪಸ್ತಪ್ತಂ ಸುದಾರುಣಂ ।
ಪೂರ್ಣೇ ವರ್ಷಸಹಸ್ರೇತು ಮಯಾ ಸಂತೋಷಿತೋ ಹರಃ ॥ ೩ ॥

ವರಂ ವರಯ ಭದ್ರಂತೇ ಯಸ್ತೇ ಮನಸಿ ವರ್ತತೇ ॥ ೪ ॥

॥ ಈಶ್ವರ ಉವಾಚ ॥

ಸರ್ವಗಸ್ತ್ವಂ ಹಿ ದೇವೇಶ ಮಯಾ ಜ್ಞಾತಂ ಸುನಿಶ್ಚಿತಂ ।
ಮಥುರಾಯಾಂ ಚ ಮೇ ಸ್ಥಾನಂ ಸದಾ ದೇವ ಪ್ರದೀಯತಾಂ ॥ ೫ ॥

ದೇವದೇವ ವಚಃ ಶ್ರುತ್ವಾ ಹರಿರ್ವಚನಮಬ್ರವೀತ್ ।
ಮಥುರಾಯಾಂ ಚ ದೇವ ತ್ವಂ ಕ್ಷೇತ್ರಪಾಲೋ ಭವಿಷ್ಯಸಿ ॥ ೬ ॥

ತ್ವಯಿ ದೃಷ್ಟೇ ಮಹಾದೇವ ಮಮ ಕ್ಷೇತ್ರಫಲಂ ಭವೇತ್ ।
ಅನ್ಯಥಾನಾಪ್ನುಯಾತ್ಸಿದ್ಧಿಮೇವಮೇತನ್ನ ಸಂಶಯಃ ॥ ೭ ॥

೩–೪. ಪೂರ್ವದಲ್ಲಿ ಈಶ್ವರನು ಸಾವಿರವರ್ಷಕಾಲ ಅತ್ಯುಗ್ರವಾದ ತಪಸ್ಸನ್ನು ಮಾಡಿದನು. ಸಾವಿರವರ್ಷಗಳು ಪೂರ್ಣವಾಗಲು ನಾನು ಈಶ್ವರನನ್ನು "ನಿನಗೆ ಮಂಗಳವಾಗಲಿ; ನಿನ್ನ ಮನಸ್ಸಿನಲ್ಲಿರವ ವರವನ್ನು ಕೇಳು." ಎಂದು ಹೇಳಿ ಸಂತೋಷಪಡಿಸಿದೆನು.

೫. ಈಶ್ವರನು—ದೇವೇಶಾ, ನೀನು ಸರ್ವಗತನಾಗಿರುವೆಯೆಂಬುದನ್ನು ನಾನು ನಿಜವಾಗಿ ಚೆನ್ನಾಗಿ ತಿಳಿದಿರುವೆನು. ದೇವ, ಮಥುರೆಯಲ್ಲಿ ನನಗೂ ಯಾವಾಗಲೂ ಇರುವಂತೆ ಸ್ಥಳವನ್ನು ಕೊಡು.

೬–೭. ದೇವದೇವನ ಮಾತನ್ನು ಕೇಳಿ, ಹರಿಯಾದ ನಾನು ಆತನಿಗೆ "ದೇವ, ನೀನು ಮಥುರೆಯಲ್ಲಿ ಕ್ಷೇತ್ರಪಾಲಕನಾಗುವೆ. ಮಹಾದೇವ, ನಿನ್ನ ದರ್ಶನವನ್ನು ಮಾಡಿದರೆ ನನ್ನ ಕ್ಷೇತ್ರದ ಫಲವುಂಟಾಗುವುದು. ಇಲ್ಲವಾದರೆ ಯಾತ್ರಿಕರು ಸಿದ್ಧಿಯನ್ನು ಪಡೆಯುವುದಿಲ್ಲವೆಂಬುದರಲ್ಲಿ ಸಂಶಯವಿಲ್ಲ" ಎಂದು ಹೇಳಿದೆನು.

ಯೇನ ಯದ್ಯಾದೃಶಂ ಪುಣ್ಯಂ ಕೃತಂ ತೀರ್ಥೇ ಪ್ರಯತ್ನತಃ |
ಭಜತೇ ಮನುಜಃ ಸಿದ್ಧಿಮಾತ್ಮಭಾವೇನ ತಾದೃಶೀಂ |
ಮಮಕ್ಷೇತ್ರ ಪ್ರವೇಶೇ ಚ ಭೂಮಿಃ ಸಂಸಾರನಾಶಿನೀ || ೮ ||

ಇಂದ್ರಸ್ಯೇವ ಪುರೀ ರಮ್ಯಾ ಯಥಾ ನಾಕೇಮರಾವತೀ |
ಜಂಬೂದ್ವೀಪೇ ತಥೋತ್ಕೃಷ್ಟಾ ಮಥುರಾ ಮಮ ವಲ್ಲಭಾ || ೯ ||

ವಿಂಶತಿರ್ಯೋಜನಾನಾಂ ಹಿ ಮಾಥುರಂ ಮಮ ಮಂಡಲಂ |
ಪದೇ ಪದೇಶ್ವಮೇಧಾನಾಂ ಫಲಂ ನಾತ್ರ ವಿಚಾರಣಾ || ೧೦ ||

ನ ಮಯಾ ಕಥಿತಂ ದೇವಿ ಬ್ರಹ್ಮಣಶ್ಚ ಮಹಾತ್ಮನಃ |
ರುದ್ರಸ್ಯ ನ ಮಯಾ ಪೂರ್ವಂ ಕಥಿತಂ ಚ ವಸುಂಧರೇ || ೧೧ ||

---

೮. ತೀರ್ಥದಲ್ಲಿ ಯಾರು ಎಂತಹ ಪುಣ್ಯವನ್ನು ಪ್ರಯತ್ನದಿಂದ ಮಾಡಿದರೂ ಅವರ ಭಾವನೆಗನುಸಾರವಾಗಿ ಸಿದ್ಧಿಯನ್ನು ಪಡೆಯುವರು. ನನ್ನ ಕ್ಷೇತ್ರವನ್ನು ಪ್ರವೇಶಿಸುವಾಗ ಆ ಭೂಮಿಯೇ ಅವರ ಮುಂದಿನ ಜನ್ಮಸಂಸಾರವನ್ನು ನಾಶಮಾಡುವುದು.

೯. ಸ್ವರ್ಗಲೋಕದಲ್ಲಿ ಮನೋಹರವಾದ ಅಮರಾವತೀಪುರವು ಇಂದ್ರನಿಗೆ ಹೇಗೋ ಹಾಗೆ ಜಂಬೂದ್ವೀಪದಲ್ಲಿ ಉತ್ಕೃಷ್ಟವಾದ ಮಥುರಾಪುರವು ನನಗೆ ಪ್ರಿಯವಾದುದು.

೧೦. ಇಪ್ಪತ್ತುಯೋಜನ ವಿಸ್ತಾರವಾದ ನನ್ನ ಮಥುರಾಮಂಡಲವು ಯಾತ್ರಿಕನಿಗೆ ಹೆಜ್ಜೆಹೆಜ್ಜೆಗೂ ಅಶ್ವಮೇಧಫಲವನ್ನು ಕೊಡುವುದು. ಇದರಲ್ಲಿ ವಿಚಾರವು ಬೇಕಿಲ್ಲ.

೧೧. ದೇವಿ, ಮಹಾತ್ಮನಾದ ಬ್ರಹ್ಮನಿಗೂ ಇದನ್ನು ನಾನು ಹೇಳಿಲ್ಲ. ವಸುಂಧರೇ, ಪೂರ್ವದಲ್ಲಿ ರುದ್ರನಿಗೂ ನಾನು ಹೇಳಿರಲಿಲ್ಲ.

ಮಯಾ ಸುಗೋಪಿತಂ ಪೂರ್ವಂ ಗುಹ್ಯಾದ್ಗುಹ್ಯತರಂ ಪರಂ ।
ಅತ್ರ ಕ್ಷೇತ್ರೇ ಪುರೀ ರಮ್ಯಾ ಸರ್ವರತ್ನವಿಭೂಷಿತಾ ॥ ೧೨ ॥

ತಸ್ಯಾಂ ತಿಷ್ಠಂತಿ ತೀರ್ಥಾನಿ ತಾನಿ ವಕ್ಷ್ಯಾಮಿ ತಚ್ಛೃಣು ।
ಷಷ್ಟಿಕೋಟಿಸಹಸ್ರಾಣಿ ಷಷ್ಟಿಕೋಟಿ ಶತಾನಿ ಚ ॥
ತೀರ್ಥಸಂಖ್ಯಾ ಚ ವಸುಧೇ ಮಧುರಾಯಾಂ ಮಯೋದಿತಾ ॥ ೧೩ ॥

ಗೋವರ್ಧನಂ ತಥಾಕ್ರೂರಂ ದ್ವೇ ಕೋಟೀದಕ್ಷಿಣೋತ್ತರೇ ।
ಪ್ರಸ್ಕಂದನಂ ಚ ಭಾಂಡೀರಂ ಕುರುಕ್ಷೇತ್ರ ಸಮಾನಿಷಟ್ ॥ ೧೪ ॥

ಪುಣ್ಯಾತ್ಪುಣ್ಯತರಂ ಶ್ರೇಷ್ಠಮೇತದ್ವಿಶ್ರಾಂತಿಸಂಜ್ಞಕಂ ।
ಅಸಿಕುಂಡಂ ಸ ವೈಕುಂಠಂ ಕೋಟಿತೀರ್ಥೋತ್ತಮಂ ಸ್ಮೃತಂ ॥ ೧೫ ॥

---

೧೨. ಭೂಮಿಯಲ್ಲಿರುವ ಕ್ಷೇತ್ರಗಳಲ್ಲಿ ಸರ್ವರತ್ನಾಲಂಕೃತವೂ, ಶ್ರೇಷ್ಠವೂ ಆದ ಮಧುರಾಪುರಿಯ ವಿಚಾರವನ್ನು ಪೂರ್ವದಲ್ಲಿ ನಾನು ಬಹು ರಹಸ್ಯವಾಗಿ ಬಚ್ಚಿಟ್ಟಿದ್ದೆನು.

೧೩. ಭೂಮೀ, ಅಲ್ಲಿರುವ ತೀರ್ಥಗಳನ್ನು ಹೇಳುತ್ತೇನೆ ಕೇಳು. ಮಧುರೆಯಲ್ಲಿರುವ ತೀರ್ಥಗಳ ಸಂಖ್ಯೆಯನ್ನೂ ನಾನು ಹೇಳಿದ್ದೇನೆ. ಅಲ್ಲಿರುವ ತೀರ್ಥಗಳು ಅರವತ್ತಾರುಕೋಟಿಸಾವಿರ.

೧೪–೧೫. ಗೋವರ್ಧನಾಕ್ರೂರತೀರ್ಥಗಳು ಎರಡುಕೋಟಿ. ದಕ್ಷಿಣೋತ್ತರಗಳಲ್ಲಿರುವ ಪ್ರಸ್ಕಂದನ ಭಾಂಡೀರಗಳೆಂಬ ಕುರುಕ್ಷೇತ್ರಕ್ಕೆ ಸಮಾನವಾದ ತೀರ್ಥಗಳು ಆರುಕೋಟಿ. ಪುಣ್ಯಗಳಲ್ಲಿ ಅತಿಪುಣ್ಯವೂ, ಶ್ರೇಷ್ಠವೂ ಆದ ವಿಶ್ರಾಂತಿತೀರ್ಥವೂ ಅಸಿಕುಂಡವೂ, ವೈಕುಂಠತೀರ್ಥವೂ, ಕೋಟಿ ಉತ್ತಮ ತೀರ್ಥಗಳೆನಿಸುವುವು.

ಅವಿಮುಕ್ತಂ ಸೋಮತೀರ್ಥಂ ಯಮುನಂ ತಿಂದುಕಂ ತತಃ ।
ಚಕ್ರತೀರ್ಥಂ ತಥಾಕ್ರೂರಂ ದ್ವಾದಶಾದಿತ್ಯ ಸಂಜ್ಞಿತಂ ॥ ೧೬ ॥

ಏತತ್ಪುಣ್ಯಂ ಪವಿತ್ರಂ ಚ ಮಹಾಪಾತಕನಾಶನಂ ॥ ೧೭ ॥

ಕುರುಕ್ಷೇತ್ರಾಚ್ಛತಗುಣಂ ಮಥುರಾಯಾಂ ನ ಸಂಶಯಃ ।
ಯೇ ಪಠಂತಿ ಮಹಾಭಾಗಾಃ ಶೃಣ್ವಂತಿ ಚ ಸಮಾಹಿತಾಃ ॥ ೧೮ ॥

ಮಥುರಾಯಾಸ್ತು ಮಾಹಾತ್ಮ್ಯಂ ತೇ ಯಾಂತಿ ಪರಮಂ ಪದಂ ।
ಕುಲಾನಿ ತೇ ತಾರಯಂತಿ ದ್ವೇ ಶತೇ *ವಂಶಯೋರ್ದ್ವಯೋಃ ॥ ೧೯ ॥

ಏತನ್ಮರಣಕಾಲೇ ತು ಯಃ ಸ್ಮರೇತ್ಪ್ರಯತೋ ನರಃ ।
ಸ ಗಚ್ಛೇತ್ಪರಮಾಂ ಸಿದ್ಧಿಮಿಹ ಸಂಸಾರನಾಶಿನೀಂ ॥ ೨೦ ॥

೧೬-೧೭. ಅವಿಮುಕ್ತತೀರ್ಥ, ಸೋಮತೀರ್ಥ, ಯಮುನತೀರ್ಥ, ತಿಂದುಕತೀರ್ಥ, ಚಕ್ರತೀರ್ಥ, ಅಕ್ರೂರತೀರ್ಥ, ದ್ವಾದಶಾದಿತ್ಯತೀರ್ಥ, ಇವು ಪವಿತ್ರಗಳೂ, ಮಹಾಪಾತಕನಾಶಕಗಳೂ ಆದುವು.

೧೮-೧೯. ಮಥುರೆಯಲ್ಲಿ ಕುರುಕ್ಷೇತ್ರದ ನೂರರಷ್ಟು ಪುಣ್ಯವುಂಟಾಗುವುದರಲ್ಲಿ ಸಂಶಯವಿಲ್ಲ. ಮಥುರೆಯ ಮಹಿಮೆಯನ್ನು ಹೇಳುವ ಮತ್ತು ಸಮಾಧಾನದಿಂದ ಕೇಳುವ ಮಹಾಭಾಗ್ಯಶಾಲಿಗಳು ಪರಮಪದವನ್ನು ಪಡೆಯುವರು. ಅಲ್ಲದೆ ಅವರು ಮಾತೃವರ್ಗದ ಮತ್ತು ಪಿತೃವರ್ಗದ ಎರಡು ನೂರು ತಲೆಯವರನ್ನೂ ಉತ್ತಾರಣಗೊಳಿಸುವರು.

೨೦. ಇದನ್ನು ಮರಣಕಾಲದಲ್ಲಿ ಪ್ರಯತ್ನಪೂರ್ವಕವಾಗಿ ಸ್ಮರಿಸುವ ಮನುಷ್ಯನು ಸಂಸಾರವನ್ನು ನಾಶಗೊಳಿಸುವ (ತಪ್ಪಿಸುವ) ಪರಮಸಿದ್ಧಿಯನ್ನು ಪಡೆಯುವನು.

---

* ವಿಂಶ

ಏತತ್ತೇ ಕಥಿತಂ ದೇವಿ ಸರ್ವಪಾತಕನಾಶನಂ ।
ತೀರ್ಥಾನಾಂಚೈವ ಮಾಹಾತ್ಮ್ಯಂ ಕಿಮನ್ಯಚ್ಛ್ರೋತುಮಿಚ್ಛಸಿ ॥ ೨೧ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಮಥುರಾಮಾಹಾತ್ಮ್ಯೇ ಅಷ್ಟಷಷ್ಟ್ಯಧಿಕಶತತಮೋಧ್ಯಾಯಃ

---

೨೧. ದೇವೀ, ಸರ್ವಪಾತಕಗಳನ್ನೂ ನಾಶಮಾಡುವ ಈ ತೀರ್ಥಗಳ ಮಹಿಮೆಯನ್ನು ಹೇಳಿದುದಾಯಿತು. ಬೇರೆ ಯಾವುದನ್ನು ಕೇಳಲು ಬಯಸುವೆ?

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ, ಮಥುರಾಕ್ಷೇತ್ರಪಾಲಕನಾದ ಈಶ್ವರನ ಸಂದರ್ಶನದಿಂದಾಗುವ ಪುಣ್ಯವನ್ನೂ, ಆತನಿಗೆ ತಾನು ಕೊಟ್ಟ ವರವನ್ನೂ, ಮಥುರಾಮಂಡಲದಲ್ಲಿರುವ ತೀರ್ಥಗಳ ಸಂಖ್ಯೆಯಾತ್ರಾಫಲಾದಿಗಳನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಅರವತ್ತೆಂಟನೆಯ ಅಧ್ಯಾಯ

|| ಶ್ರೀಃ ||

ಏಕೋನಸಪ್ತತ್ಯಧಿಕಶತತಮೋಧ್ಯಾಯಃ

|| ಶ್ರೀವರಾಹ ಉವಾಚ ||

ಮಥುರಾಯಾಃ ಪರಂ ಕ್ಷೇತ್ರಂ ತ್ರೈಲೋಕ್ಯೇ ನ ಚ ವಿದ್ಯತೇ ।
ತಸ್ಯಾಂ ವದಾಮ್ಯಹಂ ದೇವಿ ಮಥುರಾಯಾಂ ಚ ಸರ್ವದಾ || ೧ ||

ಸರ್ವೇಷಾಮೇವ ತೀರ್ಥಾನಾಂ ಮಥುರಾ ಚ ಪರಂ ಮಹತ್ ।
ಕೃಷ್ಣೇನ ಕ್ರೀಡಿತಂ ತತ್ರ ತಚ್ಛುದ್ಧಂ ಹಿ ಪದೇಪದೇ || ೨ ||

ಚಕ್ರಸ್ಥಿತಂ ಹಿ ತತ್ಸರ್ವಂ ಕೃಷ್ಣಸ್ಯೈವ ಪದೇ ನ ತು ।
ತತ್ರ ಮಧ್ಯಂತು ತತ್ಸ್ಥಾನಮರ್ಧಚಂದ್ರೇ ಪ್ರತಿಷ್ಠಿತಂ || ೩ ||

ನೂರ ಅರವತ್ತೊಂಭತ್ತನೆಯ ಅಧ್ಯಾಯ

೧. ಶ್ರೀವರಾಹ—ದೇವೀ, ಮಥುರೆಗಿಂತ ಉತ್ತಮವಾದ ಕ್ಷೇತ್ರವು ಮೂರು ಲೋಕಗಳಲ್ಲೂ ಯಾವುದೂ ಇಲ್ಲ. ನಾನು ಆ ಮಥುರೆಯಲ್ಲಿಯೇ ಯಾವಾಗಲೂ ವಾಸಮಾಡುವೆನು.

೨-೪. ಸರ್ವತೀರ್ಥಗಳಲ್ಲೂ ಮಥುರೆಯೇ ಪರಮೋತ್ಕೃಷ್ಟವಾದುದು. ಅದು ಕೃಷ್ಣನು ಆಡಿದೆಡೆ. ಅದು ಹೆಜ್ಜೆ ಹೆಜ್ಜೆಗೂ ಪವಿತ್ರವಾದುದು. ಆ ಸ್ಥಳವೆಲ್ಲವೂ ಕೃಷ್ಣನ ಪಾದದ ಚಕ್ರರೇಖೆಯ ಗುರುತುಳ್ಳದು. ಅದರಲ್ಲೂ

ತತ್ರೈವ ವಾಸಿನೋ ಲೋಕಾ ಮುಕ್ತಿಂ ಯಾಂತಿ ನ ಸಂಶಯಃ ॥ ೪ ॥

ಕೃಷ್ಣಸ್ಯ ದಕ್ಷಿಣಾ ಕೋಟಿರುತ್ತರಾಕೋಟಿಮಧ್ಯತಃ । ?
ತಯೋರ್ಮಧ್ಯೇ ಸ್ಥಿತೋ ದೇವ ಆಕಾರಾತ್ಸೋಮಚಕ್ರತಾ ॥ ೫ ॥

ತೌ ದೇವೌ ಕ್ಷೇತ್ರಫಲದೌ ಸ್ನಾನದಾನಾದಿಕರ್ಮಣಿ ।
ತಸ್ಮಾದ್ಧಿ ಮರಣಂ ಚಾತ್ರ ದ್ವೇ ಕೋಟೀ ಸರ್ವಕರ್ಮಸು ? ॥ ೬ ॥

ಅರ್ಧಚಂದ್ರೇ ತು ಯಃ ಸ್ನಾನಂ ಕರೋತಿ ನಿಯತಾಶನಃ ।
ತೇನ ವೈ ಚಾಕ್ಷಯಾ ಲೋಕಾಃ ಪ್ರಾಪ್ತಾಶ್ಚೈವ ನ ಸಂಶಯಃ ॥ ೭ ॥

ದಕ್ಷಿಣಸ್ಯಾಂ ಸಮಾರಭ್ಯ ಉತ್ತರಸ್ಯಾಂ ಸಮಾಪಯೇತ್ ।
ಯಜ್ಞೋಪವೀತವಾತ್ರೇಣ ತ್ರಾಯಂತೇ ಚ ಕುಲಂ ಬಹು ॥ ೮ ॥

ಮಧುರೆಯ ಮಧ್ಯಭಾಗವು ಅರ್ಧಚಂದ್ರಕ್ಷೇತ್ರದಲ್ಲಿದೆ; ಅಲ್ಲಿ ವಾಸಿಸುವ ಜನರು ಸಂಶಯವಿಲ್ಲದೆ ಮೋಕ್ಷವನ್ನು ಪಡೆಯುವರು.

೫–೬. ಚಂದ್ರಮಂಡಲಾಕಾರವಾಗಿರುವ ದಕ್ಷಿಣೋತ್ತರಕೋಟಿಗಳ ನಡುವೆ ಮಹಾದೇವನು ನೆಲಸಿರುವನು. ಸ್ನಾನದಾನಾದಿ ಸರ್ವಕರ್ಮಗಳಿಗೂ ಆ ದೇವರಿಬ್ಬರೂ ಕ್ಷೇತ್ರಫಲವನ್ನು ಕೊಡುವರು.

೭. ಆಹಾರದಲ್ಲಿ ನಿಯಮವುಳ್ಳವನಾಗಿ ಅರ್ಧಚಂದ್ರತೀರ್ಥದಲ್ಲಿ ಸ್ನಾನ ಮಾಡುವವನು ಸಂಶಯವಿಲ್ಲದೆ ನಾಶವಿಲ್ಲದ ಲೋಕಗಳನ್ನು ಪಡೆಯುವನು.

೮. ಯಾತ್ರೆಯನ್ನು ಅರ್ಧಚಂದ್ರಕ್ಷೇತ್ರದ ದಕ್ಷಿಣದ ಕೊನೆಯಲ್ಲಿ ಆರಂಭಿಸಿ, ಉತ್ತರದ ಕೊನೆಯಲ್ಲಿ ಮುಗಿಸಬೇಕು. ಯಜ್ಞೋಪವೀತಾಕಾರವಾಗಿ ಯಾತ್ರೆಮಾಡುವುದರಿಂದ ಬಹುಕುಲಗಳು ಉದ್ಧಾರವಾಗುವುವು.

॥ ಪೃಥಿವ್ಯುವಾಚ ॥

ಯಜ್ಞೋಪವೀತ+ಯಾತ್ರಾಯಾ ವಿಧಾನಂ ಕೀದೃಶಂ ಪ್ರಭೋ ।
ಯಥಾ×ಯಾನಂ ಹಿ ಕರ್ತವ್ಯಂ ತತ್ಸರ್ವಂ ವಕ್ತುಮರ್ಹಸಿ ॥ ೯ ॥

॥ ಶ್ರೀವರಾಹ ಉವಾಚ ॥

ಯಜ್ಞೋಪವೀತಸ್ಯ ವಿಧಿಂ ಶೃಣುಷ್ವ ವರವರ್ಣಿನಿ ।
ದಕ್ಷಿಣಸ್ಯಾಂ ಸಮಾರಭ್ಯ ಉತ್ತರಸ್ಯಾಂ ಸಮಾಪಯೇತ್ ॥ ೧೦ ॥

ಯಜ್ಞೋಪವೀತಸ್ಯ ವಿಧಿರೇಷ ಏವಪ್ರಕೀರ್ತಿತಃ ।
ಮನುಜಾ ಯೇನ ವಿಧಿನಾ ಮುಕ್ತಿಂ ಯಾಂತಿ ನ ಸಂಶಯಃ ।
ಅನೇನ ವಿಧಿನಾ ಚೈವ ಉತ್ತರಸ್ಯಾಂ ಸಮಾಪಯೇತ್ ॥ ೧೧ ॥

ಗೃಹಾನ್ನಿಸ್ಸೃತ್ಯ ಮೌನೇನ ಯಾವತ್ ಸ್ನಾನಂ ಸಮಾಚರೇತ್ ।
ಪೂಜಾಂ ಕೃಷ್ಣಸ್ಯ ಕೃತ್ವಾ ವೈ ತತೋ ಬ್ರೂಯಾದ್ವಸುಂಧರೇ ॥ ೧೨ ॥

---

೯. ಪ್ರಭುವೇ, ಯಜ್ಞೋಪವೀತಯಾತ್ರೆಯ ವಿಧಾನವು ಹೇಗೆ? ಅದನ್ನು ಹೇಗೆ ಮಾಡುವುದು? ಅದೆಲ್ಲವನ್ನೂ ನೀನು ಹೇಳಬೇಕು.

೧೦. ಶ್ರೀವರಾಹ—ಉತ್ತಮೇ, ಯಜ್ಞೋಪವೀತದ ವಿಧಿಯನ್ನು ಕೇಳು. ಯಾತ್ರೆಯನ್ನು ದಕ್ಷಿಣದಲ್ಲಿ ಆರಂಭಿಸಿ ಉತ್ತರದಲ್ಲಿ ಮುಗಿಸಬೇಕು ಇದೇ ಯಜ್ಞೋಪವೀತದ ವಿಧಿಯೆನಿಸುವುದು.

೧೧. ಮನುಷ್ಯರು ಯಾವ ವಿಧಿಯಿಂದ ಮಾಡುವುದರಿಂದ ಸಂಶಯವಿಲ್ಲದೆ ಮುಕ್ತಿಯನ್ನು ಪಡೆಯುವರೋ ಆ ಯಜ್ಞೋಪವೀತ ವಿಧಿಯಂತೆ ಉತ್ತರದಲ್ಲಿ ಯಾತ್ರೆಯನ್ನು ಮುಗಿಸಬೇಕು.

೧೨. ವಸುಂಧರೇ, ಯಾತ್ರಿಕನು ಮನೆಯಿಂದ ಮೌನವಾಗಿ ಹೊರಟು ಸ್ನಾನಮಾಡಿ, ಕೃಷ್ಣನನ್ನು ಪೂಜಿಸಿ, ಬಳಿಕ ಮಾತನಾಡಬೇಕು.

+ ಮಾತ್ರಾಯ X ಮಾನಂ

ಸ್ನಾನೇ ಸಮಾಪ್ತೇ ವಿಧಿವದ್ದೇವದೇವಸ್ಯ ಚೈವ ಹಿ ।
ಕೃಷ್ಣಸ್ಯ ಕೃತ್ವಾ ತು ಮುಖಂ ಸ್ನಾನಾದೀನಿ ಯಥಾಕ್ರಮಂ ॥ ೧೩ ॥

ಗಾಂ ವೈ ಪಯಸ್ವಿನೀಂ ದತ್ವಾ ಹಿರಣ್ಯಂ ವಸು ಚೈವ ಹಿ ।
ಬ್ರಾಹ್ಮಣಾನ್ಭೋಜಯೇತ್ ಪಶ್ಚಾದ್ವಿಧಿರೇಷ ಉದಾಹೃತಃ ॥ ೧೪ ॥

ತಥಾ ಶಯನಮುದ್ದಿಶ್ಯ ಏವಮೇವಂತು ಕಾರಯೇತ್ ।
ನ ತಸ್ಯ ಪುನರಾವೃತ್ತಿರ್ಮಮ ಲೋಕೇ ಮಹೀಯತೇ ॥ ೧೫ ॥

ಅರ್ಧಚಂದ್ರೇ ಮೃತಾ ದೇವಿ ಮಮ ಲೋಕಂ ವ್ರಜಂತಿ ತೇ ॥ ೧೬ ॥

ಅನ್ಯತ್ರ ತುಮೃತಾ ಯೇ ಚ ಅರ್ಧಚಂದ್ರಕೃತಕ್ರಿಯಾಃ ।
ತೇಽಪಿ ಸ್ವರ್ಗಂ ಗಮಿಷ್ಯಂತಿ ದಾಹಾದಿಕರಣೈರ್ಯುತಾಃ ॥ ೧೭ ॥

೧೩–೧೪. ಯಾತ್ರಿಕನು ವಿಧಿಪೂರ್ವಕವಾಗಿ ಸ್ನಾನಮಾಡಿ ಬಳಿಕ ದೇವ ದೇವನಾದ ಕೃಷ್ಣನಿಗೆ ಸ್ನಾನಾದಿಗಳಿಂದ ಯಥಾಕ್ರಮವಾಗಿ ಪೂಜೆಯನ್ನು ಮಾಡಿ. ಕರೆಯುವ ಹಸುವನ್ನೂ, ದ್ರವ್ಯವನ್ನೂ, ಸುವರ್ಣರತ್ನಗಳನ್ನೂ ದಾನಮಾಡಿ, ಬಳಿಕ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು. ಇದೇ ಯಜ್ಞೋಪವೀತಯಾತ್ರೆಯ ವಿಧಿ.

೧೫–೧೬. ಯಾತ್ರಿಕನು, ಮಲಗುವಾಗಲೂ ಹೀಗೆಯೇ ಮಾಡಬೇಕು. ಅವನಿಗೆ ಪುನರ್ಜನ್ಮವಿಲ್ಲ. ಅವನು ನನ್ನ ಲೋಕದಲ್ಲಿ ವಾಸಿಸುವನು ದೇವೀ, ಅರ್ಧಚಂದ್ರಕ್ಷೇತ್ರದಲ್ಲಿ ಮೃತರಾದವರು ನನ್ನ ಲೋಕವನ್ನು ಸೇರುವರು.

೧೭. ಬೇರೆ ಕಡೆಯಲ್ಲಿ ಮೃತರಾದವರ ದೇಹವನ್ನು ಅರ್ಧಚಂದ್ರಕ್ಷೇತ್ರದಲ್ಲಿ ದಹಿಸಿದರೂ, ಅರ್ಧಚಂದ್ರಕ್ಷೇತ್ರದಲ್ಲಿ ಉತ್ತರಕ್ರಿಯೆಯನ್ನು ಮಾಡಿದರೂ ಆ ಮೃತರು ಸ್ವರ್ಗವನ್ನು ಸೇರುವರು.

ಯಾವದಸ್ಥೀನ್ಯರ್ಧಚಂದ್ರಂ ಯಸ್ಯ ತಿಷ್ಠಂತಿ ದೇಹಿನಃ ।
ತಾವತ್ಸ್ವಪುಣ್ಯಕರ್ತಾ ಚ ಸ್ವರ್ಗಲೋಕೇ ಮಹೀಯತೇ ॥ ೧೮ ॥

ಅರ್ಧಚಂದ್ರೇ ವಿಶೇಷೋಽಸ್ತಿ ತೀರ್ಥೇ ವಿಶ್ರಾಂತಿಸಂಜ್ಞಕೇ ।
ದಾಹಾದಿಕರಣೇ ತತ್ರ ಗರ್ದಭೋಽಪಿ ಚತುರ್ಭುಜಃ ॥ ೧೯ ॥

ಗರ್ತೇಶ್ವರೋಽಥ ಭೂತೇಶೋ ದ್ವೇ ಕೋಟೀ ತು ವಸುಂಧರೇ ।
ಮಧ್ಯೇ ಸದೈವ ತಿಷ್ಠಾಮಿ ನ ತ್ಯಜಾಮಿ ಕದಾಚನ ॥ ೨೦ ॥

ಮಾಥುರಾಣಾಂ ಚ ಯದ್ರೂಪಂ ತದ್ರೂಪಂ ಮೇ ವಸುಂಧರೇ ।
ಮಾಥುರೇಣ ತು ತೃಪ್ತೇನ ತೃಪ್ತೋಽಹಂ ನಾತ್ರಸಂಶಯಃ ॥ ೨೧ ॥

ಶೃಣು ದೇವಿ ಯಥಾವೃತ್ತಂ ಗರುಡಸ್ಯ ಮಹಾತ್ಮನಃ ।
ಮಧುರಾಮಾಗತೋ ಯೋಽಸೌ ಕೃಷ್ಣದರ್ಶನಕಾಂಕ್ಷಯಾ ॥ ೨೨ ॥

---

೧೮. ಮನುಷ್ಯರ ಅಸ್ಥಿಗಳು ಎಷ್ಟುಕಾಲ ಅರ್ಧಚಂದ್ರಕ್ಷೇತ್ರದಲ್ಲಿರುವವೋ ಅಷ್ಟುಕಾಲ, ಸುಕೃತಿಗಳಾದ ಆ ಮನುಷ್ಯರು ಸ್ವರ್ಗಲೋಕದಲ್ಲಿ ವಾಸಿಸುವರು.

೧೯. ಅರ್ಧಚಂದ್ರಕ್ಷೇತ್ರದ ವಿಶ್ರಾಂತಿತೀರ್ಥದಲ್ಲಿ ಒಂದು ವಿಶೇಷವಿದೆ. ಅಲ್ಲಿ ದಹನಾದಿ ಸಂಸ್ಕಾರವನ್ನು ಪಡೆದ ಕತ್ತೆಯೂ ಚತುರ್ಭುಜನಾಗುವುದು.

೨೦–೨೧. ವಸುಂಧರೇ, ಗರ್ತೇಶ್ವರ ಮತ್ತು ಭೂತೇಶ್ವರಕ್ಷೇತ್ರಗಳು ಎರಡು ಕಡೆಗಳಲ್ಲಿವೆ. ನಾನು ಮಧ್ಯದಲ್ಲಿ ಯಾವಾಗಲೂ ಇರುವೆನು. ಎಂದೂ ಆ ಸ್ಥಳವನ್ನು ಬಿಡುವುದಿಲ್ಲ. ವಸುಂಧರೇ, ಮಧುರೆಯ ನಿವಾಸಿಗಳ ರೂಪವನ್ನೇ ನಾನು ಧರಿಸಿ ಅಲ್ಲಿರುವೆನು. ಮಧುರೆಯವನು ತೃಪ್ತನಾದರೆ, ನಾನೂ ತೃಪ್ತನಾಗುವುದರಲ್ಲಿ ಸಂಶಯವಿಲ್ಲ.

೨೨–೨೩. ದೇವೀ, ಮಹಾತ್ಮನಾದ ಗರುಡನಿಗೆ ಅಲ್ಲಿ ಹೇಗಾಯ್ತೆಂಬುದನ್ನು ಕೇಳು. ಶ್ರೀಕೃಷ್ಣನನ್ನು ನೋಡಬೇಕೆಂದು ಮಧುರೆಗೆ ಬಂದ ಅವನಿಗೆ

ಮಥುರಾಯಾಂ ಸ್ಥಿತಂ ದೇವಂ ಭಿನ್ನರೂಪಂ ನ ಪಶ್ಯತಿ ।
ತದಾ ಗತೋಽಸೌ ವಸುಧೇ ದೇವಸ್ಯಾಗ್ರೇ ವಿಹಂಗಮಃ ।
ಕೃಷ್ಣಸ್ಯ ದರ್ಶನಾರ್ಥಾಯ ದಿವ್ಯಂ ಸ್ತೋತ್ರಮುದೀರಯತ್ ॥ ೨೩ ॥

॥ ಗರುಡ ಉವಾಚ ॥

ವಿಶ್ವರೂಪ ಜಯಾದಿತ್ಯ ಜಯ ವಿಷ್ಣೋ ಜಯಾಚ್ಯುತ ।
ಜಯ ಕೇಶವ ಈಶಾನ ಜಯ ಕೃಷ್ಣ ನಮೋಽಸ್ತುತೇ ॥
ಜಯ ಮೂರ್ತ ಜಯಾಚಿಂತ್ಯ ಜಯ *ಲೋಕವಿಭೂಷಣ ॥ ೨೪ ॥

ಇತ್ಯೇವಂ ಸಂಸ್ತುತೋ ದೇವೋ ಗರುಡೇನ ಮಹಾತ್ಮನಾ ।
ಗರುಡಸ್ಯ ಪುರಸ್ತತ್ರ ಸ್ಥಿತೋ ದೇವಃ ಶರೀರವಾನ್ ।
ಸಾಂತ್ವಯಾಮಾಸ ಗರುಡಂ ಪ್ರೀತಿಪೂರ್ವಮುವಾಚ ಹ ॥ ೨೫ ॥

ಕಿಂ ಕುರ್ಯಾತ್ ಸ್ತೋತ್ರಮೇತನ್ಮೇ ಕಿಂ ವಾ ತವ ಚಿಕೀರ್ಷಿತಂ ।
ಮಥುರಾಗಮಕೃತ್ಯೇ ತೇ ಸರ್ವಂ ಬ್ರೂಹಿ ಮಮಾಗ್ರತಃ ॥ ೨೬ ॥

ಮಥುರೆಯಲ್ಲಿದ್ದ ಕೃಷ್ಣನು ಬೇರೆಯಾಗಿ ಕಾಣಿಸಲಿಲ್ಲ. ಅಲ್ಲಿನವರೆಲ್ಲರೂ ಕೃಷ್ಣನಂತೆಯೇ ಇದ್ದರು. ಭೂಮೀ, ಆಗ ಗುರುಡನು ದೇವನ ಸನ್ನಿಧಿಗೆ ಹೋಗಿ ಕೃಷ್ಣನ ಸಂದರ್ಶನಾರ್ಥವಾಗಿ ದಿವ್ಯವಾದ ಸ್ತುತಿಯನ್ನು ಮಾಡಿದನು.

೨೪–೨೫ ಗರುಡ—ವಿಶ್ವರೂಪ ಜಯಾದಿತ್ಯ ಜಯ ವಿಷ್ಣೋ ಜಯಾಚ್ಯುತ । ಜಯ ಕೇಶವ ಈಶಾನ ಜಯ ಕೃಷ್ಣ ನಮೋಽಸ್ತುತೇ ॥ ಜಯ ಮೂರ್ತ ಜಯಾಚಿಂತ್ಯ ಜಯ ಲೋಕವಿಭೂಷಣ ॥ ಮಹಾತ್ಮನಾದ ಗರುಡನಿಂದ ಹೀಗೆ ಸ್ತೋತ್ರ ಮಾಡಿಸಿಕೊಂಡ ದೇವನು ಅಲ್ಲಿ ಅವನೆದುರಿಗೆ ಪ್ರತ್ಯಕ್ಷನಾಗಿ ನಿಂತು ಸಮಾಧಾನ ಪಡಿಸಿ, ಪ್ರೀತಿಪೂರ್ವಕವಾಗಿ ಹೀಗೆ ಮಾತನಾಡಿದನು.

೨೬. "ಈ ಸ್ತೋತ್ರವು ನನಗೇಕೆ ? ನೀನು ಮಾಡಬೇಕೆಂದಿರುವುದೇನು ? ಅಥವಾ ನಿನಗೆ ನನ್ನಿಂದಾಗಬೇಕಾದುದೇನು ? ನೀನು ಮಥುರೆಗೆ ಬಂದುದೇಕೆ ? ಎಲ್ಲವನ್ನೂ ನನ್ನೆದುರಿಗೆ ಹೇಳು."

---

* ಲೋಭ (ಬೊಂ.) ಲೋಮ (ಕ.)

॥ ಗರುಡ ಉವಾಚ ॥

ಮಧುರಾಮಾಗತಶ್ಚಾಹಂ ತವ ದರ್ಶನಕಾಂಕ್ಷಯಾ ।
ಆಗತೇ ತು ಮಯಾ ದೇವ ನ ದೃಷ್ಟಂ ತವ ರೂಪಕಂ ॥
ಮಾಥುರೈರೇವ ಲೋಕೈಸ್ತು ಸಮಂ ದೃಷ್ಟಂ ಹಿ ರೂಪಕಂ ॥ ೨೭ ॥

ಏಕೀಭೂತಮಹಂ ಸರ್ವಂ ದೃಷ್ಟ್ವಾ ಮಾಂ ಮೋಹ ಆವಿಶತ್ ।
ತಸ್ಮಾತ್ ಸ್ತುತಿಸ್ತು ದೇವೇಶ ಕೃತಾನುಗ್ರಹ ಕಾಮ್ಯಯಾ ॥ ೨೮ ॥

ಗರುಡಸ್ಯ ವಚಃ ಶ್ರುತ್ವಾ ಪ್ರಹಸ್ಯ ಮಧುಸೂದನಃ ।
ಉವಾಚ ಶ್ಲಕ್ಷ್ಣಯಾ ವಾಚಾ ಗರುಡಂ ಪ್ರತಿ ಭಾಮಿನಿ ॥ ೨೯ ॥

॥ ಶ್ರೀಕೃಷ್ಣ ಉವಾಚ ॥

ಮಾಥುರಾಣಾಂ ಚ ಯದ್ರೂಪಂ ತದ್ರೂಪಂ ಮೇ ವಿಹಂಗಮ ।
ಯೇ ಪಾಪಾಸ್ತೇ ನ ಪಶ್ಯಂತಿ ಮದ್ರೂಪಾ ಮಾಥುರಾ ದ್ವಿಜಾಃ ॥ ೩೦ ॥

---

೨೭. ಗರುಡ– ದೇವ, ನಾನು ನಿನ್ನ ಸಂದರ್ಶನಾಪೇಕ್ಷೆಯಿಂದ ಮಧುರೆಗೆ ಬಂದೆನು. ಇಲ್ಲಿಗೆ ಬಂದ ನನಗೆ ನಿನ್ನ ದಿವ್ಯರೂಪವು ಕಾಣಿಸಲೇ ಇಲ್ಲ. ಮಧುರೆಯಲ್ಲಿರುವ ಜನರ ರೂಪದಂತೆಯೇ ನಿನ್ನ ರೂಪವೂ ಕಾಣಿಸಿತು.

೨೮. ಎಲ್ಲರ ರೂಪವೂ ಒಂದೇ ಆಗಿರುವುದನ್ನು ನೋಡಿ, ನನಗೆ ಮೋಹವೇ ಉಂಟಾಯಿತು. ದೇವೇಶಾ, ಆದುದರಿಂದ ನಿನ್ನ ಅನುಗ್ರಹವನ್ನು ಅಪೇಕ್ಷಿಸಿ ಸ್ತೋತ್ರಮಾಡಿದೆನು.

೨೯. ಸುಂದರೀ, ಗರುಡನ ಮಾತನ್ನು ಕೇಳಿ ಕೃಷ್ಣನು ನಕ್ಕು ಗರುಡನಿಗೆ ಮೃದುವಾದ ನುಡಿಗಳಿಂದ ಹೇಳಿದನು.

೩೦. ಶ್ರೀಕೃಷ್ಣ–ಗರುಡಾ, ಮಧುರೆಯಲ್ಲಿರುವವರಿಗೆ ಯಾವ ರೂಪವಿದೆಯೋ ಅದೇ ರೂಪವು ನನಗೂ ಆಗಿದೆ. ಪಾಪಿಗಳು ನೋಡರು. ಮಧುರೆಯ ದ್ವಿಜರೆಲ್ಲರೂ ನನ್ನ ರೂಪವುಳ್ಳವರಾಗಿರುವರು.

ಏವಮುಕ್ತ್ವಾ ತತಃ ಕೃಷ್ಣಸ್ತತ್ರೈವಾಂತರಧೀಯತ ।
ಗರುಡೋಽಪಿ ತತಃ ಸ್ಥಾನಾದ್ಗತೋ ದೇವಿ ಯಥಾಸುಖಂ ॥ ೩೧ ॥

ಏತತ್ತೇ ಕಥಿತಂ ದೇವಿ ಮಾಥುರಾಣಾಂ ತು ರೂಪಕಂ ।
ಯೇಷಾಂ ಪೂಜಿತಮಾತ್ರೇಣ ತುಷ್ಟೋಽಹಂ ಚೈವ ಸರ್ವದಾ ॥ ೩೨ ॥

ಮಥುರಾಯಾಂ ಮೃತಾ ಯೇ ಚ ಮುಕ್ತಿಂ ಯಾಂತಿ ನ ಚಾನ್ಯಥಾ ।
ಅಪಿ ಕೀಟಃ ಪತಂಗೋ ವಾ ತಿರ್ಯಗ್ಯೋನಿಂ ಗತೋಽಪಿ ವಾ ॥ ೩೩ ॥

ಚತುರ್ಭುಜಾಸ್ತು ತೇ ಸರ್ವೇ ಭವಂತೀತಿ ವಿನಿಶ್ಚಿತಂ ॥ ೩೪ ॥

ಯಃ ಪಶ್ಯೇತ್ಪದ್ಮನಾಭಂ ತು ದ್ವಾದಶ್ಯಾಮಾಶ್ವಿನಸ್ಯ ತು ।
ಏಕದೇಹಧರೌ ದೇವೌ ಶಿವಕೇಶವರೂಪಿಣೌ ॥ ೩೫ ॥

ಏಕಾದಶ್ಯಾಂ ಚೋಪವಾಸೀ ಕೃತಶೌಚಃ ಸಮಾಹಿತಃ ।
ಕಾಲಿಂದ್ಯಾಂ ತು ನರಃ ಸ್ನಾತ್ವಾ ಮುಚ್ಯತೇ ಯೋನಿಸಂಕಟಾತ್ ॥ ೩೬ ॥

---

೩೧. ಕೃಷ್ಣನು ಹೀಗೆ ಹೇಳಿ, ಬಳಿಕ ಅಲ್ಲೇ ಕಣ್ಮರೆಯಾದನು. ದೇವೀ, ಗರುಡನೂ ಆ ಸ್ಥಳದಿಂದ ಸುಖವಾಗಿ ಹೊರಟು ಹೋದನು.

೩೨. ದೇವೀ, ಮಥುರೆಯವರ ರೂಪದ ಈ ವಿಚಾರವನ್ನು ನಿನಗೆ ಹೇಳಿದೆನು. ಮಥುರೆಯವರನ್ನು ಪೂಜಿಸಿದಮಾತ್ರದಲ್ಲಿ ನಾನೂ ಯಾವಾಗಲೂ ಸಂತುಷ್ಟನಾಗುವೆನು.

೩೩–೩೪. ಮಥುರೆಯಲ್ಲಿ ಮೃತರಾಗುವವರು ಸಂದೇಹವಿಲ್ಲದೆ ಮುಕ್ತಿಯನ್ನೇ ಪಡೆಯುವರು. ಅಲ್ಲಿ ಪ್ರಾಣಬಿಡುವ ತಿರ್ಯಗ್ಜಂತು, ಪಕ್ಷಿ, ಹುಳು, ಎಲ್ಲವೂ ಚತುರ್ಭುಜವುಳ್ಳವಾಗುವುವೆಂಬುದು ನಿಶ್ಚಯ.

೩೫–೩೬. ಆಶ್ವಯುಜಮಾಸದ ಏಕಾದಶಿಯದಿನ, ಶುದ್ಧನೂ, ಶಾಂತನೂ, ಆಗಿ ಉಪವಾಸಮಾಡಿ, ದ್ವಾದಶಿಯದಿನ ಯಮುನಾನದಿಯಲ್ಲಿ ಸ್ನಾನಮಾಡಿ ಪದ್ಮನಾಭನನ್ನೂ, ಏಕದೇಹವನ್ನು ಧರಿಸಿರುವ ಶಿವಕೇಶವರನ್ನೂ ಸಂದರ್ಶಿಸುವವನು ಜನನಸಂಕಟದಿಂದ ವಿಮುಕ್ತನಾಗುವನು.

ಚೈತ್ರಸ್ಯ ಶುಕ್ಲದ್ವಾದಶ್ಯಾಮುಪೋಷ್ಯ ಸ್ನಾನಮಾಚರೇತ್ ।
ಚಿಂತಾವಿಷ್ಣುಂ ಸಮಭ್ಯರ್ಚ್ಯ ಕೃತ್ವಾ ವೈ ಜಾಗರಂ ನಿಶಿ ।
ಯಃ ಕರೋತಿ ಸ ಮುಚ್ಯೇತ ನಾತ್ರ ಕಾರ್ಯಾವಿಚಾರಣಾ ॥ ೩೭ ॥

ಏಕಾಂ ÷ಪಶ್ಯಂಸ್ತತೋ ದೇವೀಂ ಯಶೋದಾಂ ದೇವಕೀಂ ತಥಾ ।
ಮಹಾವಿದ್ಯೇಶ್ವರೀಂ ದೇವೀಂ ಮುಚ್ಯತೇ ಬ್ರಹ್ಮಹತ್ಯಯಾ ॥ ೩೮ ॥

ಯಾ ಧಾರಾ ಧರ್ಮರಾಜಸ್ಯ ಮಧುರಾಯಾಶ್ಚ ಪಶ್ಚಿಮೇ ।
ಸ್ನಾನಂ ಕರೋತಿ ತಸ್ಯಾಂ ತು ಗ್ರಹದೋಷೈರ್ನ ಲಿಪ್ಯತೇ ॥ ೩೯ ॥

ಯಂ ಯಂ ದೇವಮಭಿಧ್ಯಾಯೇದ್ಭಕ್ತಿಯುಕ್ತೇನ ಚೇತಸಾ ।
ವಿಶ್ರಾಂತಿ ಸಂಜ್ಞಕಂ ದೃಷ್ಟ್ವಾ ದೀರ್ಘವಿಷ್ಣುಂ ಚ ಕೇಶವಂ ॥ ೪೦ ॥

ಸರ್ವೇಷಾಂ ದರ್ಶನಂ ಪುಣ್ಯಂ ಪೂಜನಾತ್ತು ಫಲಂ ಲಭೇತ್ ॥ ೪೧ ॥

---

೩೭. ಚೈತ್ರಶುಕ್ಲ ಏಕಾದಶಿಯದಿನ ಉಪವಾಸಮಾಡಿ, ರಾತ್ರೆ ಜಾಗರಣೆಯನ್ನು ಮಾಡಿ, ದ್ವಾದಶಿಯದಿನ ಸ್ನಾನಮಾಡಿ, ಚಿಂತಾವಿಷ್ಣುವನ್ನು ಚೆನ್ನಾಗಿ ಪೂಜಿಸುವವನು ಮುಕ್ತನಾಗುವನು. ಇದರಲ್ಲಿ ವಿಮರ್ಶೆ ಬೇಕಿಲ್ಲ.

೩೮. ಯಶೋದಾದೇವಿಯೊಬ್ಬಳನ್ನು ಮೊದಲು ನೋಡಿ, ಬಳಿಕ ದೇವಕೀದೇವಿಯನ್ನೂ, ಮಹಾವಿದ್ಯೇಶ್ವರೀದೇವಿಯನ್ನೂ, ಸಂದರ್ಶಿಸುವುದರಿಂದ ಮನುಷ್ಯನು ಬ್ರಹ್ಮಹತ್ಯೆಯ ಪಾಪವನ್ನು ಕಳೆದುಕೊಳ್ಳುವನು.

೩೯. ಮಧುರೆಯ ಪಶ್ಚಿಮದಲ್ಲಿರುವ ಧರ್ಮರಾಜಧಾರೆಯಲ್ಲಿ ಸ್ನಾನ ಮಾಡುವವನಿಗೆ ಗ್ರಹದೋಷಗಳು ಸಂಭವಿಸುವುದಿಲ್ಲ.

೪೦–೪೧. ಭಕ್ತಿಯುತವಾದ ಮನಸ್ಸಿನಲ್ಲಿ ಸರ್ವದೇವರನ್ನು ಧ್ಯಾನಿಸುವುದರಿಂದಲೂ, ಸಂದರ್ಶಿಸುವುದರಿಂದಲೂ, ಪೂಜಿಸುವುದರಿಂದಲೂ ದೊರೆಯುವ ಪುಣ್ಯಫಲವು ವಿಶ್ರಾಂತಿತೀರ್ಥವನ್ನು ನೋಡಿ ದೀರ್ಘವಿಷ್ಣುವೆಂಬ ಕೇಶವನನ್ನು ಸಂದರ್ಶಿಸಿ ಪೂಜಿಸುವುದರಿಂದ ದೊರೆಯುವುದು.

÷ ಸಂಶಾಂತತೋ

ಇತಿ ಜಪವಿಧಿಹೋಮಕಾಲೇ ಸ ಸಮ್ಯಕ್ ।
ಸತತಮಭಿಸಮೀಕ್ಷ್ಯ ಬ್ರಹ್ಮಣಾ ಯತ್ಪ್ರಯುಕ್ತಂ ।
ಸಕಲಗುಣಗಣಾನಾಮಾಸ್ಪದಂ ಬ್ರಹ್ಮಸಂಜ್ಞಂ ।
ಜನನಮರಣಹೀನಂ ವಿಷ್ಣುಮೇವಾಭಿಯಾತಿ ॥ ೪೨ ॥

ಇತಿ ಶ್ರೀವರಾಹಪುರಾಣೇ ಪ್ರಾಗಿತಿಹಾಸೇ ಮಥುರಾಮಾಹಾತ್ಮ್ಯಂ
ನಾಮ ಏಕೋನ ಸಪ್ತತ್ಯಧಿಕಶತತಮೋಽಧ್ಯಾಯಃ

---

೪೨. ಯಾತ್ರಿಕನು ಹೀಗೆ ಜಪ ಹೋಮ ಧ್ಯಾನಾದಿಗಳನ್ನು ಮಾಡುವ ಕಾಲದಲ್ಲಿ ಬ್ರಹ್ಮನು ಹೇಗೆ ವಿಧಿಸಿರುವನೆಂಬುದನ್ನು ಚೆನ್ನಾಗಿ ಯಾವಾಗಲೂ ಗಮನಿಸಿ ನಡೆಯುವುದರಿಂದ ಸಕಲಗುಣಗಣನಿಲಯನೂ, ಪರಬ್ರಹ್ಮನೆಂಬ ಹೆಸರುಳ್ಳವನೂ, ಜನನಮರಣರಹಿತನೂ ಆದ ವಿಷ್ಣುಸನ್ನಿಧಿಯನ್ನೇ ಸೇರುವನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಥುರೆಯ ಮಹಿಮೆಯನ್ನೂ, ಅಲ್ಲಿರುವ ಅರ್ಧಚಂದ್ರಕ್ಷೇತ್ರದ ಪ್ರಾಶಸ್ತ್ಯವನ್ನೂ, ಆದರ ಯಾತ್ರಾಕ್ರಮ ಫಲಾದಿಗಳನ್ನೂ, ಮಥುರೆಯಲ್ಲಿರುವ ದೇವದೇವಿಯರ ಸಂದರ್ಶನವಿಧಾನ ಫಲಗಳನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರರವತ್ತೊಂಭತ್ತನೆಯ ಅಧ್ಯಾಯ.

|| ಶ್ರೀಃ ||

ಸಪ್ತತ್ಯಧಿಕಶತತಮೋಽಧ್ಯಾಯಃ

|| ಶ್ರೀವರಾಹ ಉವಾಚ ||

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಮಥುರಾಯಾಂ ಪುರಾ ವೃತ್ತಂ ಗೋಕರ್ಣಸ್ಯ ಮಹಾತ್ಮನಃ || ೧ ||

ವಸುಕರ್ಣಃ ಪಿತಾ ತಸ್ಯ ವೈಶ್ಯೋ ಧನಸಮೃದ್ಧಿಮಾನ್ ।
ತಸ್ಯ ಭಾರ್ಯಾ ಸುಶೀಲಾ ತು ನಾಮ್ನಾ ಗುಣಸಮನ್ವಿತಾ || ೨ ||

ಭರ್ತುಃ ಪ್ರಿಯಂಕರೀ ಸಾಧ್ವೀ ನ ಪ್ರಸೂತಾ ವಯೋಽಧಿಕಾ ।
ವಿಲಲಾಪ ಚ ಸುಶ್ರೋಣೀ ಚೈಕಾಂತೇ ದೀನಮಾನಸಾ ॥
ಸರಸ್ವತೀ ಸಂಗಮೇಽಥ ಸ್ತ್ರಿಯೋ ದೃಷ್ಟ್ವಾ ಪ್ರಜಾವತೀಃ || ೩ ||

ನೂರ ಎಪ್ಪತ್ತನೆಯ ಅಧ್ಯಾಯ

೧. ಶ್ರೀವರಾಹ—ವಸುಂಧರೇ, ಇನ್ನೂ ಬೇರೊಂದು ವಿಷಯವನ್ನು ಎಂದರೆ ಮಥುರೆಯಲ್ಲಿ ಪೂರ್ವದಲ್ಲಿ ನಡೆದ ಗೋಕರ್ಣನೆಂಬ ಮಹಾತ್ಮನ ವಿಚಾರವನ್ನು ಹೇಳುತ್ತೇನೆ. ಕೇಳು.

೨. ಗೋಕರ್ಣನ ತಂದೆಯು ಬಹಳ ಐಶ್ವರ್ಯವಂತನಾದ ವಸುಕರ್ಣನೆಂಬ ವೈಶ್ಯನು. ಸುಶೀಲೆಯೆಂಬ ಗುಣವತಿಯು ವಸುಕರ್ಣನ ಹೆಂಡತಿ; ಗೋಕರ್ಣನತಾಯಿ.

೩. ಪತಿಗೆ ಹಿತಕಾರಿಣಿಯೂ, ಪತಿವ್ರತೆಯೂ ಆದ ಅವಳಿಗೆ ವಯಸ್ಸು ಹೆಚ್ಚಾದರೂ ಮಕ್ಕಳಾಗಲಿಲ್ಲ. ಒಂದುದಿನ ಆ ಸುಂದರಿಯು ಸರಸ್ವತೀ ಸಂಗಮದಲ್ಲಿ ಮಕ್ಕಳುಳ್ಳವರಾದ ಕೆಲವರು ಹೆಂಗಸರನ್ನು ನೋಡಿ, ದೀನಮನಳಾಗಿ ರಹಸ್ಯದಲ್ಲಿ ಅತ್ತಳು.

ವೃಕ್ಷಮೂಲೇ ತು ತತ್ರೈವ ಮುನಿರೇಕಃ ಸಮಾಸ್ಥಿತಃ |
ತಸ್ಯಾ ವಿಲಪಿತಂ ಶ್ರುತ್ವಾ ತನ್ನೈಃಸ ಕರುಣ ಹೃದಿಂ || ೪ ||

ಜಾತಹಾರ್ದಃ ಪ್ರಿಯಂ ಚೇಷ್ಟಂ ತನ್ನೈಃ ಸ್ತ್ರಿಯಮಥಾಬ್ರವೀತ್ || ೫ ||

ಕಾತ್ವಂಕಸ್ಯಾಸಿ ಸುಭಗೇ ಕಿಮರ್ಥಂ ರೋದಿಷಿ ಸ್ವಯಂ |
ಇತಿ ತಸ್ಯ ವಚಃ ಶ್ರುತ್ವಾ ಸಾ ಸ್ತ್ರೀ ಋಷಿಮಥಾಬ್ರವೀತ್ || ೬ ||

ಸಾಪತ್ಯಾಸ್ತು ಸ್ತ್ರಿಯೋ ದೃಷ್ಟ್ವಾಃ ಕ್ರೀಡಂತ್ಯೋ ಬಾಲಕೈಃ ಸಹ |
ಮಮ ತನ್ನಾಸ್ತಿ ಹಿ ಮುನೇ ದುರ್ಭಗಾಯಾಃ ಪ್ರಜಾಸುಖಂ || ೭ ||

ಉವಾಚ ಮುನಿಶಾರ್ದೂಲಸ್ತಾಂ ಸ್ತ್ರಿಯಂ ಪುತ್ರಗರ್ದ್ಧಿನೀಂ |
ದೇವತಾಯಾಃ ಪ್ರಸಾದೇನ ತವ ಪುತ್ರೋ ಭವಿಷ್ಯತಿ || ೮ ||

೪–೫. ಅಲ್ಲಿಯೇ ಮರದ ಬುಡದಲ್ಲಿ ಕುಳಿತಿದ್ದ ಋಷಿಯೊಬ್ಬನು ಕರುಣೆಯಿಂದ ಮೆತ್ತಗೆ ಅವಳು ಅಳುವುದನ್ನು ಕೇಳಿ, ಹೃದಯದಲ್ಲಿ ಮರುಕಗೊಂಡು ಬಳಿಕ ಆಕೆಯನ್ನು ಕುರಿತು, ಮೆತ್ತಗೆ ಪ್ರಿಯವೂ, ಇಷ್ಟವೂ ಆಗಿರುವ ಮಾತನಾಡಿದನು.

೬. "ಸುಂದರೀ, ನೀನು ಯಾರು? ಯಾರವಳು? ಏತಕ್ಕಾಗಿ ನಿನ್ನಷ್ಟಕ್ಕೆ ನೀನೇ ಅಳುತ್ತೀಯೆ?" ಋಷಿಯ ಈ ಮಾತನ್ನು ಕೇಳಿ, ಆ ವನಿತೆ ಋಷಿಗೆ ಹೀಗೆ ಹೇಳಿದಳು.

೭. "ಮಕ್ಕಳನ್ನು ಪಡೆದ ಸ್ತ್ರೀಯರು ತಮ್ಮ ಬಾಲರೊಡನೆ ಆಡುತ್ತಿರುವುದನ್ನು ನೋಡಿದೆನು. ಮುನಿಯೇ, ದುರ್ಭಾಗ್ಯಳಾದ ನನಗೆ ಆ ಸಂತಾನ ಸೌಖ್ಯವು ಇಲ್ಲವಲ್ಲಾ!"

೮. ಆ ಮುನಿಶ್ರೇಷ್ಠನು ಮಕ್ಕಳಲ್ಲಿ ಆಸೆಯುಳ್ಳ ಆಕೆಗೆ ಮುಂದಿನ ಮಾತನ್ನು ಹೇಳಿದನು. "ದೇವರ ಅನುಗ್ರಹದಿಂದ ನಿನಗೆ ಮಗನು ಹುಟ್ಟುವನು.

ಶಿವಸ್ಯಾಯತನಂ ಪುಣ್ಯಂ ಗೋಕರ್ಣೇತಿ ಚ ವಿಶ್ರುತಂ ।
ಸಮಾರಾಧಯ ದೇವೇಶಂ ಪತ್ಯಾ ಸಹ ಯಶಸ್ವಿನಿ ॥ ೯ ॥

ಸ್ನಾನದೀಪೋಪಹಾರೇಣ ಸ್ತೋತ್ರೈರ್ನಾನಾವಿಧೈರ್ಜಪೈಃ ॥ ೧೦ ॥

ಇತ್ಯುಕ್ತಾ ಸಾ ಚ ಸುಶ್ರೋಣೀ ಪ್ರಣಿಪತ್ಯ ಪ್ರಸಾದ್ಯ ತಂ ।
ಭರ್ತ್ರೇ ಸಾ ಕಥಯಾಮಾಸ ಯದುಕ್ತಂ ಮುನಿನಾ ಪ್ರಿಯಂ ॥ ೧೧ ॥

ಸ ತದ್ವಚನಮಾಕರ್ಣ್ಯ ಪ್ರೀತಿಯುಕ್ತಂ ಸುಸಂಯುತಂ ।
ಜಗಾದೋಚ್ಚೈಃ ಪ್ರಿಯಾಂ ದೇವಿ ಭದ್ರಂ ಜಾತೋ ಮನೋರಥಃ ॥೧೨॥

ಮಮಾಪ್ಯೇತನ್ಮತಂ ದೇವಿ ಯದುಕ್ತಮೃಷಿಣಾ ತತಃ ।
ಇತಿ ಪ್ರಿಯಾಂ ಸಮಾಭಾಷ್ಯ ಪ್ರಿಯಯಾ ಚ ತಥಾಕರೋತ್ ॥ ೧೩ ॥

೯–೧೦. ಗೋಕರ್ಣವೆಂದು ಪ್ರಸಿದ್ಧವೂ, ಪುಣ್ಯವೂ ಆದ ಶಿವದೇವಾಲಯ ವಿದೆ. ಕೀರ್ತಿವಂತೇ, ನೀನು ಪತಿಯೊಡನೆ ಆ ಗೋಕರ್ಣೇಶ್ವರನನ್ನು ಅಭಿಷೇಕ ದೀಪೋಪಹಾರಾದಿಗಳಿಂದಲೂ, ನಾನಾವಿಧವಾದ ಸ್ತೋತ್ರಗಳಿಂದಲೂ, ಜಪಗಳಿಂದಲೂ ಚೆನ್ನಾಗಿ ಆರಾಧಿಸು."

೧೧. ಋಷಿಯು ಹಾಗೆನಲು ಆ ಸುಂದರಿ ಆತನಿಗೆ ವಂದಿಸಿ ಸಂತೋಷಪಡಿಸಿ ಹೊರಟು ಹೋಗಿ, ತನ್ನ ಪತಿಗೆ ಮುನಿಯು ಹೇಳಿದ ಆ ಪ್ರಿಯವಾರ್ತೆಯನ್ನು ತಿಳಿಸಿದಳು.

೧೨. ಪತಿಯಾದ ವಸುಕರ್ಣನು ಪ್ರೀತಿಯುಕ್ತವೂ, ಶುಭಕರವೂ ಆದ ಆ ಮಾತನ್ನು ಕೇಳಿ ಪ್ರಿಯೆಯನ್ನು ಕುರಿತು, "ದೇವೀ, ಮಂಗಳದ ನನ್ನ ಇಷ್ಟಾರ್ಥವು ನೆರವೇರಿತು." ಎಂದು ಗಟ್ಟಿಯಾಗಿ ಹೇಳಿದನು.

೧೩. ಅಲ್ಲದೆ "ದೇವೀ, ಋಷಿ ಹೇಳಿದುದು ನನಗೂ ಇಷ್ಟವಾಗಿದೆ." ಎಂದು ಪ್ರಿಯೆಯೊಡನೆ ಚೆನ್ನಾಗಿ ಮಾತನಾಡಿ ಅವಳೊಡನೆ ಋಷಿ ಹೇಳಿದಂತೆಯೇ ದೇವಸೇವೆಯನ್ನು ಮಾಡಿದನು.

ಸರಸ್ವತ್ಯಾಃ ಸಂಗಮೇ ತೌ ಸ್ನಾತ್ವಾ ಗೋಕರ್ಣಮರ್ಚತುಃ ।
ಪುಷ್ಪದೀಪೋಪಹಾರಂ ತು ಚಕ್ರಾತೇ ತೌ ದಿನೇ ದಿನೇ ॥ ೧೪ ॥

ಏವಂ ತಯೋರ್ದಶಾಬ್ದಾನಿ ಗತಾನಿ ಸುತಹೇತವೇ ।
ತತಃ ಪ್ರಸನ್ನೋ ಭಗವಾನುಮಾಪತಿರುವಾಚ ಹ ॥ ೧೫ ॥

ಭವಿಷ್ಯತಿ ಯುವಾಂ ಪುತ್ರೋ ರೂಪವಾನ್ ಗುಣಸಂಯುತಃ ।
ಸಸ್ಯಸಂತತಿವದ್ವೃಶ್ಯಃ ಸಂತಾನೋ ಯಸ್ಯ ವೈ ಬಹು ॥
ದೇವತಾನಾಂ ಪ್ರಸಾದೇನ ಖಲು ತಸ್ಯ ಭವಿಷ್ಯತಿ ॥ ೧೬ ॥

ಇತ್ಯುಕ್ತೌ ತೌ ತು ದೇವೇನ ಸ್ನಾನಂ ಕೃತ್ವಾ ಸರಸ್ವತೀಂ ।
ಪ್ರಭಾತೇ ದೇವದೇವಾಯ ದದೌ ದ್ರವ್ಯಮನಂತಕಂ ॥
ಬ್ರಾಹ್ಮಣೇಭ್ಯೋ ದದೌ ಭೋಜ್ಯಂ ವಸ್ತ್ರಾದ್ಯಂ ಬಹುದಕ್ಷಿಣಂ ॥ ೧೭ ॥

---

೧೪. ಅವರು ಪ್ರತಿದಿನವೂ ಸರಸ್ವತೀ ಸಂಗಮದಲ್ಲಿ ಸ್ನಾನವನ್ನು ಮಾಡಿ, ಪುಷ್ಪದೀಪೋಪಹಾರಾದಿಗಳಿಂದ ಗೋಕರ್ಣೇಶ್ವರನನ್ನು ಪೂಜಿಸುತ್ತಿದ್ದರು.

೧೫. ಹಾಗೆ ಅವರು ಪುತ್ರನನ್ನು ಪಡೆಯಲು ಹತ್ತುವರ್ಷಗಳ ಕಾಲವನ್ನು ದೇವಸೇವೆಯಲ್ಲಿ ಕಳೆದರು. ಬಳಿಕ ತೃಪ್ತನಾಗಿ ಒಲಿದ ಪಾರ್ವತೀಪತಿಯು ಅವರಿಗೆ ಹೀಗೆ ಹೇಳಿದನು.

೧೬. "ನಿಮಗೆ ರೂಪವಂತನೂ, ಗುಣವಂತನೂ ಆದ ಪುತ್ರನುದಿಸುವನು. ದೇವತೆಗಳ ಅನುಗ್ರಹದಿಂದ ಅವನ ಸಂತಾನವು ಬಹಳವಾಗಿ ಬೆಳೆದು ಸಸ್ಯ ಸಮೂಹದಂತೆ ಕಾಣುವುದಾಗುವುದು."

೧೭. ದೇವನು ಹಾಗೆನಲು ಆ ದಂಪತಿಗಳು ಬೆಳಗ್ಗೆ ಸರಸ್ವತೀನದಿಯಲ್ಲಿ ಸ್ನಾನಮಾಡಿ, ದೇವ ದೇವನಿಗೆ ಅನಂತವಾಗಿ ದ್ರವ್ಯವನ್ನು ಅರ್ಪಿಸಿ, ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ, ಬಹು ದಕ್ಷಿಣೆಯೊಡನೆ ವಸ್ತ್ರಾದಿಗಳನ್ನು ದಾನ ಮಾಡಿದರು.

ತತಸ್ತಸ್ಯಾಂ ಸುಶೀಲಾಯಾಂ ಗರ್ಭಾದಾನಮುಪಿಂದತ ।
ತತಃ ಪ್ರವವೃಧೇ ಗರ್ಭಃ ಶುಕ್ಲಪಕ್ಷೇ ಯಥಾಶಶೀ ॥ ೧೮ ॥

ಸುಷುವೇ ದಶಮೇ ಮಾಸಿ ಪುತ್ರಂ ಬಾಲಂ ಶಶಿಪ್ರಭಂ ॥ ೧೯ ॥

ಗೋಸಹಸ್ರಂ ತದಾ ದತ್ವಾ ಸಸುವರ್ಣಂ ಸವಸ್ತ್ರಕಂ ।
ಬಹುಶಃ ಸರ್ವವರ್ಣೇಭ್ಯಃ ಪುತ್ರಜನ್ಮಮಹೋತ್ಸವೇ ॥ ೨೦ ॥

ಜಾತಕರ್ಮ ತಥಾ ಚೈವ ನಾಮಕರ್ಮ ಚಕಾರ ಚ ।
ಗೋಕರ್ಣಂ ನಾಮ ತಸ್ಯೈವ ಪಿತಾ ಚಕ್ರೇ ನಿರೂಪ್ಯ ಚ ॥ ೨೧ ॥

ಏವಮನ್ನಪ್ರಾಶನಂ ಚ ಚೂಡೋಪನಯನಂ ತಥಾ ।
ಅತಃ ಪರಂ ಚ ಗೋದಾನಂ ವೈವಾಹಿಕಮನುತ್ತಮಂ ॥ ೨೨ ॥

೧೮–೧೯. ಬಳಿಕ ಆ ಸುಶೀಲೆ ಗರ್ಭಿಣಿಯಾದಳು. ಗರ್ಭವು ಶುಕ್ಲಪಕ್ಷದ ಚಂದ್ರನಂತೆ ಬೆಳೆಯಲು ಹತ್ತನೆಯ ತಿಂಗಳಲ್ಲಿ ಚಂದ್ರನಂತೆ ಕಾಂತಿವಂತನಾದ ಮಗನನ್ನು ಹೆತ್ತಳು.

೨೦–೨೧. ಆ ವಸುಕರ್ಣನು ಆ ಪುತ್ರಜನ್ಮಮಹೋತ್ಸವದಲ್ಲಿ ಸರ್ವ ವರ್ಣದವರಿಗೂ ಸುವರ್ಣವಸ್ತ್ರಗಳೊಡನೆ ಸಾವಿರ ಹಸುಗಳನ್ನು ದಾನಮಾಡಿ, ಆ ಮಗನಿಗೆ ಜಾತಕರ್ಮವನ್ನೂ, ಸರಿಯಾಗಿ ಆಲೋಚಿಸಿ ಗೋಕರ್ಣನೆಂಬ ನಾಮಕರಣವನ್ನೂ ಮಾಡಿದನು.

೨೨. ಕಾಲಕ್ರಮದಲ್ಲಿ ಹಾಗೆಯೇ ಆ ಪುತ್ರನಿಗೆ ಅನ್ನಪ್ರಾಶನವೂ, ಚೌಲೋಪನಯನಗಳೂ, ಆಮೇಲೆ ಗೋದಾನವ್ರತವೂ, ಉತ್ತಮವಾದ ವಿವಾಹವೂ ಆದುವು.

ದಾನಂ ಕು ದದತಸ್ತಸ್ಯ ದೇವತಾಂ ಪೂಜಯಿಷ್ಯತಃ ।
ಕೃತಾನಿ ಬಹುಮುಖ್ಯಾನಿ ಮಂಗಲಾನಿ ಯಥಾವಿಧಿ ॥ ೨೩ ॥

ತತಃ ಪ್ರವಿಷ್ಟೇ ತಾರುಣ್ಯೇ ತ್ವಪ್ರಜಂ ವೀಕ್ಷ್ಯ ಪುತ್ರಕಂ ।
ಪುನರ್ವಿವಾಹಯಾಮಾಸ ಭಾರ್ಯಾಣಾಂ ಚ ಚತುಷ್ಟಯಂ ॥ ೨೪ ॥

ವಯೋರೂಪಗುಣೋಪೇತಾಸ್ತಸ್ಯ ಭಾರ್ಯಾಃ ಸುಲೋಚನಾಃ ।
ಅಪ್ರಜಾ ಏವ ತೇ ಸರ್ವಾ ನಾಭವತ್ಪುತ್ರಿಣೀ ಕ್ವಚಿತ್ ॥ ೨೫ ॥

ತೇನೈವ ಧರ್ಮ ಆರಬ್ಧಃ ಪ್ರಜಾರ್ಥೋ ದೇವಸೇವನಂ ।
ವಾಪೀ ಕೂಪತಟಾಕಾನಿ ದೇವತಾಯತನಾನಿ ಚ ॥ ೨೬ ॥

---

೨೩. ದಾನವನ್ನು ಕೊಡುತ್ತಲೂ, ದೇವರನ್ನು ಪೂಜಿಸುತ್ತಲೂ ಇದ ಆತನು ಬಹು ಮುಖ್ಯವಾದ ಮಂಗಳಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ಮಾಡಿದನು.

೨೪ ಗೋಕರ್ಣನಿಗೆ ತಾರುಣ್ಯವು ಬಂದರೂ ಮಕ್ಕಳಾಗದಿರುವುದನ್ನು ನೋಡಿ, ತಂದೆಯಾದ ವಸುಕರ್ಣನು ಮತ್ತೆ ನಾಲ್ವರು ಯುವತಿಯರನ್ನು ತಂದು ಮಗನಿಗೆ ವಿವಾಹಮಾಡಿದನು.

೨೫. ಸುಂದರನೇತ್ರೆಯರೂ, ವಯೋರೂಪಗುಣಯುತೆಯರೂ ಆದ ಆ ಹೆಂಡತಿಯರಲ್ಲಿಯೂ ಒಬ್ಬಳೂ ಪುತ್ರವತಿಯಾಗಲಿಲ್ಲ. ಎಲ್ಲರೂ ಬಂಜೆಯರೇ ಆಗಿದ್ದರು.

೨೬. ಗೋಕರ್ಣನೂ ಸಂತಾನಾರ್ಥವಾಗಿ ಧರ್ಮವಮಾಡಲಾರಂಭಿಸಿದನು. ದೇವರ ಸೇವೆಯನ್ನು ಮಾಡುತ್ತ, ಕೆರೆಕೊಳಬಾವಿಗಳನ್ನೂ ದೇವಾಲಯುಗಳನ್ನೂ ಕಟ್ಟಿಸಿದನು.

ಪ್ರಪಾ ಮಾಲಾಶ್ಚ ನಿತ್ಯಾನ್ನಂ ಭೋಜನಂ ವರ್ತನಾನಿ ಚ ।
ಅನಿತ್ಯತಾಂ ತತೋ ಮತ್ವಾ ಚಂಚಲಾಸ್ಥಿರಜೀವಿತಂ ॥
ವಿನಿಯೋಗಃ ಕೃತಸ್ತೇನ ಸರ್ವದಾ ಸರ್ವಕರ್ಮಸು ॥ ೨೭ ॥

ಗೋಕರ್ಣಸ್ಯ ಸಮೀಪೇ ತು ಪಶ್ಚಿಮೇ ಚಕ್ರಪಾಣಿನಃ ।
ಪ್ರಾಸಾದಂಕಾರಯಾಮಾಸ ಪಂಚಾಯತನಕಂ ಹರೇಃ ॥ ೨೮ ॥

ಆರಾಮಸ್ತತ್ರ ವಿಸ್ತೀರ್ಣಃ ಪುಷ್ಪಜಾತ್ಯಸ್ತಥೈವ ಚ ।
ಆಮ್ರಜಂಬೀರನಾರಂಗಂ ಬೀಜಪೂರಃ ಸ ದಾಡಿಮಃ ॥ ೨೯ ॥

ಪ್ರಾಕಾರಂ ಕಾರಯಾಮಾಸ ಪರಿಖಾಮಂಡಲೀಯುಕಂ ।
ಪ್ರಾವರ್ತನಂ ಚ ಕೂಪೇಷು ಯೇನ ಸಿಂಚೇತ್ರ್ವಾಟಿಕಾಂ ॥ ೩೦ ॥

---

೨೭. ಅರವಟ್ಟಿಗೆಗಳನ್ನೂ, ನಿತ್ಯವೂ ಅನ್ನವನ್ನು ಹಾಕುವ ಭೋಜನಶಾಲೆ (ಛತ್ರ)ಗಳನ್ನೂ, ವೃತ್ತಿಗಳನ್ನೂ ಏರ್ಪಡಿಸಿದನು. ಐಶ್ವರ್ಯದ ಅನಿತ್ಯತೆಯನ್ನೂ ಚಂಚಲವಾದ ಜೀವನದ ಅಸ್ಥಿರತೆಯನ್ನೂ ಅರಿತು, ಆತನು ಯಾವಾಗಲೂ ಸರ್ವಪುಣ್ಯಕರ್ಮಗಳಲ್ಲೂ ತನ್ನ ತನುಮನಧನಗಳನ್ನು ಉಪಯೋಗಿಸುತ್ತಿದ್ದನು.

೨೮. ಗೋಕರ್ಣಕ್ಷೇತ್ರದ ಹತ್ತಿರ ಅದರ ಪಶ್ಚಿಮದಲ್ಲಿ ಚಕ್ರಪಾಣಿಯಾದ ವಿಷ್ಣುವಿನ ಪಂಚಾಯತನ ದೇವಾಲಯವನ್ನು ಕಟ್ಟಿಸಿದನು.

೨೯. ಆ ದೇವಾಲಯದ ಸಮೀಪದಲ್ಲಿಯೇ ವಿಸ್ತಾರವಾದ ಉಪವನ (ತೋಟ)ವನ್ನೂ ಮಾಡಿಸಿದನು. ಆ ತೋಟದಲ್ಲಿ ನಾನಾಜಾತಿಯ ಹೂಗಿಡಗಳೂ ಮಾವು, ನಿಂಬೆ, ಕಿತ್ತಳೆ, ಸೀಬೆ, ದಾಳಿಂಬೆ ಇವೇ ಮೊದಲಾದ ಮರಗಿಡಗಳೂ ಇದ್ದುವು.

೩೦. ದೇವಾಲಯಕ್ಕೆ ಸುತ್ತಲೂ ಹೊರಗೆ ಇರುವಂತೆ ಪ್ರಾಕಾರವನ್ನೂ ಕಟ್ಟಿಸಿದನು. ತೋಟಕ್ಕೆ ನೀರು ಹಾಕಲನುಕೂಲವಾಗುವಂತೆ ಬಾವಿಗಳಲ್ಲಿ ಜಲಯಂತ್ರಗಳನ್ನೂ ಇಡಿಸಿದ್ದನು.

ಪುಷ್ಪಾಣಿ ಚ ವಿಚಿನ್ವಂತಿ ಸರ್ವಾಸ್ತಾ ವರಯೋಷಿತಃ |
ಸ್ನಾನಂ ಪೂಜಾದಿಕಂ ತದ್ವನ್ಮಾರ್ಜನಂ ದೀಪಕರ್ಮ ಚ || ೩೧ ||

ಕುರ್ವಂತಿ ದೇವತಾಗಾರೇ ತಾಃ ಸರ್ವಾಃ ಶುಭಲೋಚನಾಃ |
ಪತಿವ್ರತಾ ಮಹಾಭಾಗಾಶ್ಚತುರೋ ಭಗಿನೀರ್ಯಥಾ ||
ನಿತ್ಯಕಾಲಂ ಪತೇರ್ವಾಕ್ಯೇ ಸ್ಥಿತಾಃ ಕುರ್ವಂತ್ಯಹರ್ನಿಶಂ || ೩೨ ||

ಮಾಲಕಾರಸ್ತಥಾನಿತ್ಯಂ ವಿಟಪಾಂಶ್ಚ ಪ್ರಸಿಂಚತಿ |
ಪಾಲಯಾಮಾಸ ವಿಧಿವದ್ವಿಧಿ ದೃಷ್ಟೇನ ಕರ್ಮಣಾ || ೩೩ ||

ಜಾತಾಃ ಸುಪುಷ್ಪವಂತಶ್ಚ ದ್ರುಮಾಃ ಫಲಸಮನ್ವಿತಾಃ |
ನಿತ್ಯಕಾಲಂ ತ್ವರ್ಪಯಂತಃ ಫಲಾನಾಂ ಸುಮಹೋತ್ಸವಂ || ೩೪ ||

೩೧–೩೨. ಉತ್ತಮವನಿತೆಯರಾದ ಗೋಕರ್ಣನ ಪತ್ನಿಯರೆಲ್ಲರೂ ದೇವರಿಗಾಗಿ ಹೂಗಳನ್ನು ಕೊಯ್ಯುವರು. ದೇವರಿಗೆ ಅಭಿಷೇಕ ಪೂಜಾದಿಗಳನ್ನೂ ಮಾಡುವರು. ದೇವಸ್ಥಾನವನ್ನು ಗುಡಿಸಿ, ಸಾರಿಸಿ ನಿರ್ಮಲವಾಗಿಡುವರು. ದೇವಾಯದಲ್ಲಿ ದೀಪವನ್ನು ಹತ್ತಿಸುವರು. ಶುಭನೇತ್ರೆಯರೂ, ಪತಿವ್ರತೆಯರೂ, ಮಹಾಭಾಗ್ಯೆಯರೂ, ಪರಸ್ಪರ ಅಕ್ಕತಂಗಿಯರಂತೆ ಇರುವವರೂ ಆದ ಆ ನಾಲ್ವರೂ ಪತಿಯ ಮಾತಿನಂತೆ ಹಗಲೂ ರಾತ್ರಿಯೂ ದೇವಾಲಯದಲ್ಲಿ ದೇವನ ಸೇವಾಕಾರ್ಯವನ್ನು ಮಾಡುವರು.

೩೩. ಹೂವಾಡಿಗರು ನಿತ್ಯವೂ ಆ ತೋಟದ ಮರಗಿಡಗಳಿಗೆ ನೀರು ಹಾಕುತ್ತ ಮರಗಿಡಗಳನ್ನು ಬೆಳೆಸುವ ವಿಧಿಯನ್ನು ಅನುಸರಿಸಿ ಅವುಗಳನ್ನು ಪಾಲಿಸುವರು.

೩೪. ಮರಗಳು ಯಾವಾಗಲೂ ಒಳ್ಳೆಯ ಹೂಗಳಿಂದಲೂ, ಹಣ್ಣು ಕಾಯಿಗಳಿಂದಲೂ ತುಂಬಿರುವುವು. ಹಣ್ಣುಕಾಯಿಗಳ ಸಮೃದ್ಧಿಯ ಸಂತೋಷಕ್ಕೆ ಎಂದೂ ಕೊನೆಯೇ ಇರಲಿಲ್ಲ.

ದೀಯತೇ ಭುಜ್ಯತೇ ಸರ್ವೈರ್ಯಥಾ ಶಕ್ರಸ್ತಥಾ ಸದಾ ।
ಏವಂತು ವಸತಸ್ತಸ್ಯ ಮಧುರಾಯಾಂ ಸ್ಥಿತಸ್ಯ ಚ ॥
ಧನಸ್ಯ ಸಂಕ್ಷಯೋ ಜಾತಃ ಪ್ರತ್ಯಹಂ ದದತಃ ಸತಃ ॥ ೩೫ ॥

ಶೇಷಮಾತ್ರೇ ಧನೇ ತಸ್ಯ ಚಿಂತಾಭೂನ್ಮಹತೀ ತದಾ ।
ಮಾತಾಪಿತ್ರೋಃ ಕುಟುಂಬಸ್ಯ ಭರಣೀಯಸ್ಯ ಭೋಜನಂ ॥ ೩೬ ॥

ಕಥಂ ಬ್ರೂಹಿ ಕರಿಷ್ಯಾಮಿ ಮಹಾಕಷ್ಟಂ ತು ಸೋಽಬ್ರವೀತ್ ॥ ೩೭ ॥

ಇತಿ ನಿಶ್ಚಿತ್ಯ ಮನಸಾ ವಣಿಗ್ಭಾವಂ ಹೃದಿ ಸ್ಥಿರಂ ।
ಕೃತ್ವಾ ಸಾರ್ಥಮುಪಾಮಂತ್ರ್ಯ ನಿರ್ಗತಃ ಪೂರ್ವಮಂಡಲಂ ॥ ೩೮ ॥

ತತ್ರ ಕ್ರೀತ್ವಾ ಸುಪಣ್ಯಾನಿ ಉತ್ತರಾಪಥಗಾನಿ ಚ ।
ಯಾತಾಯಾತಂ ತತಃ ಕೃತ್ವಾ ಲಾಭಾಲಾಭವಿಚಕ್ಷಣಃ ॥ ೩೯ ॥

---

೩೫. ಗೋಕರ್ಣನ ಮನೆಯವರೆಲ್ಲರೂ ಯಾವಾಗಲೂ ದಾನಮಾಡುವರು. ಇಂದ್ರನಂತೆ ತಾವೂ ಭೋಗಿಸುವರು. ಮಧುರೆಯಲ್ಲಿದ್ದುಕೊಂಡು ಹಾಗೆ ನಿತ್ಯವೂ ದಾನಮಾಡುತ್ತ ವಾಸಮಾಡುತ್ತಿದ್ದ ಆ ಗೋಕರ್ಣನ ಹಣವು ಬಹಳವಾಗಿ ವೆಚ್ಚವಾಗಿ ಹೋಯಿತು.

೩೬–೩೭. ಹಣವು ಸ್ವಲ್ಪವೇ ಉಳಿದಿರಲು ಆಗ ಅತನಿಗೆ ಬಹು ಚಿಂತೆಯುಂಟಾಯಿತು. ತಾಯಿತಂದೆಗಳಿಗೂ, ಪೋಷಿಸಬೇಕಾದ ತನ್ನ ಕುಟುಂಬಕ್ಕೂ ಊಟಕ್ಕೆ ಏನುಮಾಡುವುದು! ಮಹಾಕಷ್ಟವಾಗಿದೆ ಎಂದು ಕೊಂಡನು.

೩೮. ಮನಸ್ಸಿನಲ್ಲಿ ವಾಣಿಜ್ಯವನ್ನು ಮಾಡಬೇಕೆಂದು ನಿಶ್ಚಯಿಸಿ, ಹೃದಯವನ್ನು ಸ್ಥಿರಮಾಡಿಕೊಂಡು, ವೈಶ್ಯರ ಗುಂಪನ್ನು ಕರೆದು ಅವರೊಡನೆ ಪೂರ್ವಮಂಡಲಕ್ಕೆ ಹೊರಟನು.

೩೯–೪೧. ಅಲ್ಲಿ ದೊರೆಯುವ ಒಳ್ಳೆಯ ವಸ್ತುಗಳನ್ನು ಕೊಂಡು, ಲಾಭಾಲಾಭಗಳ ವಿಚಾರವಲ್ಲಿ ಚತುರನಾದ ಅವನು ಉತ್ತರದೇಶಕ್ಕೆ ಹೋಗಿ

ಕ್ರೀತ್ವಾ ಕ್ರೇಯಾನಿ ವಸ್ತೂನಿ ಲಾಭಾಲಾಭಂ ವಿಚಾರ್ಯ ಚ ॥
ಉತ್ತರಾಪಥದೇಶಾತ್ತು ಸಾರ್ಥಂ ಸ ಬಹುವಿಸ್ತರಂ ॥ ೪೦ ॥

ಮಣಿರತ್ನಂ ಹ್ಯಶ್ವರತ್ನಂ ಪಟ್ಟರತ್ನಂ ಸಮರ್ಘಕಂ ।
ಗೃಹೀತ್ವಾ ತು ಸಮಾಗಚ್ಛನ್ಮಧುರಾಯಾಂ ಗೃಹಂ ಪ್ರತಿ ॥ ೪೧ ॥

ಏಕದಾ ಸಾರ್ಥಸಂಭಾರೋ ವಿಶ್ರಾಂತುಮುಪಚಕ್ರಮೇ ।
ಸಾನೌ ಪರ್ವತಸಾಮೀಪ್ಯೇ ಪ್ರಭೂತ ಯವಸೋದಕೇ ॥
ನದ್ಯಾಸ್ತೀರೇ ಸುಪ್ರದೇಶೇ ಆವಾಸಾಂಶ್ಚ ಪ್ರಚಕ್ರಿರೇ ॥ ೪೨ ॥

ನಿವೇಶ್ಯ ಭಾಂಡಂ ತತ್ರೈವ ಅಶ್ವನಾಂ ಯವಸಾದಿಕಂ ।
ಸಮಾದಿಶ್ಯೇತಿಕೃತ್ಯಂ ಚ ಭೃತ್ಯೈಃ ಕತಿಪಯೈರ್ವೃತಃ ॥ ೪೩ ॥

ಸಮಾರುರೋಹ ತಂ ಶೈಲಂ ಬಹುಕಂದರಶೋಭಿತಂ ॥ ೪೪ ॥

ಅಲ್ಲಿ ಮಾರಿ, ಅಲ್ಲಿ ಸುಲಭವಾಗಿ ದೊರೆಯುವ ವಸ್ತುಗಳನ್ನು ವಿಚಾರಿಸಿ, ಕೊಳ್ಳಬೇಕಾದ ವಸ್ತುಗಳನ್ನು ಕೊಂಡು, ಅಲ್ಲಿಂದ ಬಹಳ ದೊಡ್ಡ ಗುಂಪಿನೊಡನೆ ಬೇಕಾದಷ್ಟು ಉತ್ತಮವಾದ ಮಣಿಗಳನ್ನೂ, ಒಳ್ಳೆಯ ಕುದುರೆಗಳನ್ನೂ ಉತ್ತಮ ವಸ್ತ್ರಗಳನ್ನೂ ತೆಗೆದುಕೊಂಡು ಮಥುರೆಗೆ ಮನೆಗೆ ಬರಲು ಹೊರಟನು.

೪೨. ಒಂದಾನೊಂದು ದಿನ ಮೂಟೆಗಳನ್ನು ಹೊರುವ ವಾಹನಗಳಿಂದ ಕೂಡಿದ ಆ ಗುಂಪು ತಂಗಬೇಕಾಯಿತು. ಆದುದರಿಂದ ಪರ್ವತದ ಸಮೀಪದಲ್ಲಿ ತಪ್ಪಲಿನಲ್ಲಿ ಹೆಚ್ಚಾಗಿ ಹುಲ್ಲೂ, ನೀರೂ ಇರುವ ನದಿಯತೀರದ ಒಳ್ಳೆಯ ಎಡೆಯಲ್ಲಿ ಎಲ್ಲರೂ ನಿಂತರು.

೪೩–೪೪. ಅಲ್ಲಿಯೇ ಮೂಟೆಗಳನ್ನಿಳಿಸಿ, ಕುದುರೆಗಳಿಗೆ ಹುಲ್ಲು ಮೊದಲಾದುದನ್ನು ಕೊಡುವಂತೆ ಹೇಳಿ, ಗೋಕರ್ಣನು ಕೆಲವರು ಸೇವಕರೊಡನೆ ಹಲವು ಗುಹೆಗಳಿಂದೊಪ್ಪುವ ಆ ಬೆಟ್ಟವನ್ನು ಏರಿದನು.

ಕ್ರೀಡಾರ್ಥಂ ವಿಹರಂಸ್ತತ್ರ ಸೋಽಪಶ್ಯತ್ ಸ್ಥಾನಮುತ್ತಮಂ ।
ಪ್ರಸನ್ನಸಲಿಲೋಪೇತಂ ನಾರಂಗೈಶ್ಚ ವಿಭೂಷಿತಂ ॥ ೪೫ ॥

ಫಲವಂತಶ್ಚ ವೃಕ್ಷಾಶ್ಚ ಪುಷ್ಪಾಣಿ ಸುರಭೀಣಿ ಚ ।
ಪಾಷಾಣಸಂಧೌ ತತ್ರ ಸ್ಥೈರ್ಮಾಲಾಕಾರೈಸ್ತು ರೋಪಿತಂ ॥ ೪೬ ॥

ತತ್ರಾರುಹ್ಯ ದರೀದ್ವಾರಂ ಯಾವದ್ದೃಷ್ಟಿರ್ನಿಪಾತ್ಯತೇ ।
ತಾವದಭ್ಯಾಗತಾದೀನಿ *ಸ್ವಾಗತಾದಿ ಶೃಣೋತಿ ಚ ॥ ೪೭ ॥

ಶ್ರುತ್ವಾಪಿ ಶಬ್ದಪ್ರಭವಂ ಕಿಮೇತದಿತಿ ನಿಶ್ಚಯಂ ।
ಕರಿಷ್ಯಂಸ್ತತ್ರ ಚೈಕಾಂತೇ ದೃಷ್ಟಃ ಪಂಜರಗಃ ಶುಕಃ ॥ ೪೮ ॥

---

೪೫. ಆತನು ಅಲ್ಲಿ ಕ್ರೀಡಾರ್ಥವಾಗಿ ಸಂಚರಿಸುತ್ತ, ನಿರ್ಮಲೋದಕದಿಂದ ಕೂಡಿ, ಕಿತ್ತಳೆಯ ಮರಗಳಿಂದಲಂಕೃತವಾದ ಉತ್ತಮಪ್ರದೇಶವನ್ನು ಕಂಡನು.

೪೬. ಅಲ್ಲಿ, ಕಲ್ಲುಗಳ ನಡುವೆ ಹಣ್ಣುಕಾಯಿಗಳುಳ್ಳ ಮರಗಳನ್ನೂ, ಸುವಾಸನೆಯ ಹೂಗಳನ್ನೂ ಅಲ್ಲಿರುವ ಹೂವಾಡಿಗರು ಬೆಳೆಸಿದ್ದರು.

೪೭. ಗೋಕರ್ಣನು ಅಲ್ಲಿ ಏರಿ ನೋಡಲಾಗಿ ಹರಿದ್ವಾರದವರೆಗೂ ಕಾಣಿಸುತ್ತಿದ್ದಿತು. ಅಷ್ಟರಲ್ಲಿಯೇ ಅಭ್ಯಾಗತರೇ ಮೊದಲಾದವರಿಗೆ ಸುಖಾಗವು ನಾದಿಗಳನ್ನು ಹೇಳುವ ಮಾತುಗಳು ಅವನಿಗೆ ಕೇಳಿಸಿದುವು.

೪೮. ಹಾಗೆ ಧ್ವನಿಯುಂಟಾದುದನ್ನು ಕೇಳಿ ಅದೇನೆಂಬುದನ್ನು ನಿರ್ಣಯಿಸಿ ತಿಳಿಯಲು ಪ್ರಯತ್ನಿಸಿ, ಏಕಾಂತದಲ್ಲಿ ಪಂಜರದಲ್ಲಿದ್ದ ಗಿಳಿಯೊಂದನ್ನು ಕಂಡನು.

---

* ಸ್ವಗತಾದಿ

ತೇನೋಕ್ತಂ ಭೋಃ ಇಹಾಗಚ್ಛ ಆತಿಥ್ಯಂ ಕರವಾಣಿ ತೇ ।
ಪಾದ್ಯಂ ಗೃಹಾಣ ಭೋಃ ಪಾಂಥ ಆಸನಂ ತೇ ಇದಂ ಶುಭಂ ॥ ೪೯ ॥

ಫಲಾನೀಮಾನಿ ಸ್ವಾದೂನಿ ಮಧುಮಾಂಸೋದಕಾನಿ ಚ ।
ಯಥೇಷ್ಟಂ ಯಾವತೀಚ್ಛಾ ಚ ತಾವದ್ಗೃಹ್ಣಂತ್ವಿಮೇ ನರಾಃ ॥ ೫೦ ॥

ಆಗತ್ಯ ಪಿತರೌಮುಷ್ಯಂ ವಿಶೇಷಂ ತೌ ಕರಿಷ್ಯತಃ ।
ಅತಿಥೇರಾಗತಸ್ಯೇಹ ಪೂಜಾಯಾ ವಿಮುಖೋ ಭವೇತ್ ॥ ೫೧ ॥

ಗೃಹಸ್ಥಸ್ತಸ್ಯ ಪಿತರೋ ವಸಂತಿ ನರಕೇ ಧ್ರುವಂ ।
ಪೂಜಿತೇ ಪೂಜಿತಾಃ ಸ್ವರ್ಗೇ ಮೋದಂತೇ ಕಾಲಮಕ್ಷಯಂ ॥ ೫೨ ॥

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರವ್ರಜತೇ ಯದಿ ।
ಆತ್ಮನೋ ದುಷ್ಕೃತಂ ತಸ್ಮೈ ದತ್ವಾ ತತ್ಸುಕೃತಂ ಹರೇತ್ ॥ ೫೩ ॥

೪೯–೫೦. ಆ ಗಿಳಿ ಹೀಗೆ ಹೇಳಿತು. ಅಯ್ಯಾ, ಇಲ್ಲಿ ಬಾ. ನಿನಗೆ ಆತಿಥ್ಯವನ್ನು ಮಾಡುತ್ತೇನೆ. ದಾರಿಗನೇ, ಕಾಲಿಗೆ ನೀರನ್ನು ತೆಗೆದುಕೊ. ನಿನಗೆ ಇದು ಶುಭವಾದ ಪೀಠ. ಇವು ರುಚಿಯಾದ ಹಣ್ಣುಕಾಯಿಗಳು ಮಧುಮಾಂಸೋದಕಗಳು. ಈ ಮನುಷ್ಯರೂ ಬೇಕಾದುದನ್ನು ತಮ್ಮ ಇಷ್ಟವು ಪೂರ್ತಿಯಾಗುವಂತೆ ತೆಗೆದುಕೊಳ್ಳಲಿ.

೫೧–೫೨. ತಾಯಿತಂದೆಗಳು ಬಂದು ವಿಶೇಷಸತ್ಕಾರವನ್ನು ಮಾಡುವರು. ಈ ಲೋಕದಲ್ಲಿ ತನ್ನೆಡೆಗೆ ಬಂದ ಅತಿಥಿಯ ಪೂಜೆಯನ್ನು ಮಾಡದೆ ಅಲಕ್ಷ್ಯಮಾಡುವವನ ಪಿತೃಗಳು ನರಕದಲ್ಲಿ ಸ್ಥಿರವಾಗಿರುವರು. ಅತಿಥಿಯನ್ನು ಪೂಜಿಸಿದರೆ ಅವನ ಪಿತೃಗಳೂ ಪೂಜಿತರಾಗಿ ಸ್ವರ್ಗದಲ್ಲಿ ಅಕ್ಷಯ ಸುಖವನ್ನು ಅನುಭವಿಸುವರು.

೫೩. ಒಬ್ಬನ ಮನೆಗೆ ಬಂದ ಅತಿಥಿಯು ಆದರವನ್ನು ಪಡೆಯದೆ ನಿರಾಶನಾಗಿ ಹೊರಟು ಹೋಗುವಾಗ ಆ ಮನೆಯವನಿಗೆ ತನ್ನ ಪಾಪವನ್ನು ಕೊಟ್ಟು ಅವನ ಪುಣ್ಯವನ್ನು ತೆಗೆದುಕೊಂಡು ಹೋಗುವನು.

ತಸ್ಮಾತ್ಸರ್ವಪ್ರಯತ್ನೇನ ಪೂಜ್ಯೋ ವೈ ಗೃಹಮೇಧಿನಾ ।
ಕಾಲೇ ಪ್ರಾಪ್ತಸ್ತ್ವಕಾಲೇವಾ ಯಥಾ ವಿಷ್ಣುಸ್ತಥೈವ ಸಃ ॥ ೫೪ ॥

ಏವಂ ವಿಧಾಃ ಶುಭಾವಾಚೋ ವೈಶ್ಯೋ ಧರ್ಮೋಪದೇಶಕಾತ್ ।
ಶ್ರುತ್ವಾ ಶುಕಾತ್ಸ ಸರ್ವಸ್ಮೈ ಮುದಿತೋಽಬ್ರವೀತ್ ॥ ೫೫ ॥

ಋಷಿಃ ಕಸ್ತ್ವಂ ಪುರಾಣಜ್ಞಃ ಕಿಂ ವಾ ದೇವೋಥ ಗುಹ್ಯಕಃ ।
ತವ ಪ್ರಸನ್ನರೂಪಸ್ಯ ಯಸ್ಯೇಯಂ ವಾಗಮಾನುಷೀ ॥ ೫೬ ॥

ಕಸ್ತ್ವಂ ಕಥಯ ಮೇ ಸತ್ಯಮುತ್ಸಾಹಶ್ಚಾತಿಥಿ ಪ್ರಿಯಃ ।
ಧನ್ಯಃ ಸ ಮಾನುಷೋ ಯಸ್ಯ ನಿತ್ಯಂ ಸನ್ನಿಹಿತೋ ಭವಾನ್ ॥ ೫೭ ॥

ಇತ್ಯುಕ್ತಃ ಸ ಶುಕಃ ಸರ್ವಂ ಶಶಂಸಾತ್ಮಪುರಾಕೃತಂ ।
ಶೃಣು ರೌದ್ರಂ ಯಥಾ ಪೂರ್ವೇ ಮಯಾ ಕೃತಮಬುದ್ಧಿನಾ ॥ ೫೮ ॥

---

೫೪. ಆದುದರಿಂದ ಗೃಹಸ್ಥನಾದವನು ಸರ್ವಪ್ರಯತ್ನದಿಂದಲೂ ಸಕಾಲ ಅಕಾಲವೆನ್ನದೆ, ಯಾವಾಗ ಬಂದರೂ ಅತಿಥಿಯನ್ನು ವಿಷ್ಣುವಿನಂತೆ ಪೂಜಿಸಬೇಕು.

೫೫. ಆ ಗೋಕರ್ಣವೈಶ್ಯನು ಧರ್ಮೋಪದೇಶಕನಾದ ಆ ಗಿಳಿಯಿಂದ ಈ ವಿಧವಾದ ಶುಭವಾಕ್ಯಗಳನ್ನು ಕೇಳಿ, ಸಂತೋಷಗೊಂಡು, ತನ್ನ ಜತೆಯುವರೆಲ್ಲರಿಗಾಗಿ ತಾನು ಹೀಗೆ ಹೇಳಿದನು.

೫೬–೫೭. "ಪ್ರಸನ್ನವಾದ ರೂಪವೂ, ಅಮಾನುಷವಾದ ವಾಣಿಯೂ ಉಳ್ಳ ನೀನು ಯಾರು ? ಪುರಾಣವನ್ನರಿತ ಋಷಿಯೋ ? ದೇವನೋ ? ಅಥವ ಒ ಗುಹ್ಯಕನೋ ? ಅತಿಥಿಪ್ರಿಯನೂ, ಉತ್ಸಾಹರೂಪನೂ ಆದ ನೀನು ಯಾರೆಂಬುದನ್ನು ಸತ್ಯವಾಗಿ ನನಗೆ ಹೇಳು. ನೀನು ಸರ್ವದಾ ಯಾರ ಹತ್ತಿರದಲ್ಲಿರುವೆಯೋ ಆ ಮನುಷ್ಯನು ಪುಣ್ಯಶಾಲಿ."

೫೮–೫೯. ಗೋಕರ್ಣನು ಹೀಗೆನಲು ಆ ಗಿಳಿಯು ತನ್ನ ಹಿಂದಿನ ವೃತ್ತಾಂತವೆಲ್ಲವನ್ನೂ ಹೇಳಿತು. "ಪೂರ್ವದಲ್ಲಿ ಬುದ್ಧಿಯಿಲ್ಲದ ನಾನು

ಶುಕಸ್ಯ ವಿಪ್ರಿಯಂ ಯಾದೃಕ್ ಮಹರ್ಷೇಸ್ತು ತಪಸ್ಯತಃ ॥ ೫೯ ॥

ಸುಮೇರೋರುತ್ತರೇ ಪಾರ್ಶ್ವೇ ಮಹರ್ಷಿಗಣಸೇವಿತೇ ।
ತಪಶ್ಚಕಾರ ವಿಪುಲಂ ಶುಕೋ ವ್ಯಾಸಸುತೋ ಮಹಾನ್ ॥ ೬೦ ॥

ಶ್ರೋತುಕಾಮಾಃ ಪುರಾಣಾನಿ ಸೇತಿಹಾಸಾನಿ ನೈಗಮಾಃ ।
ಋಷಯಸ್ತತ್ರ ಚಾಜಗ್ಮುರಸಿತೋ ದೇವಲಸ್ತಥಾ ॥ ೬೧ ॥

ಮಾರ್ಕಂಡೇಯೋ ಭರದ್ವಾಜೋ ಯವಕ್ರೀತಸ್ತತೋ ಭೃಗುಃ ।
ಅಂಗಿರಾಸ್ತೈತ್ತಿರೇಯೋಭ್ಯಃ ಕಾಣ್ವೋ ಮೇಧಾತಿಥಿಃ ಕೃತಃ ॥ ೬೨ ॥

ತಂತುಃ ಸುತಂತುರಾದಿತ್ಯೋ ವಸುಮಾನೇಕತೋ ದ್ವಿತಃ ।
ವಾಮದೇವಶ್ಚಾಶ್ವಶಿರಾಸ್ತ್ರಿಶೀರ್ಷೋ ಗೌತಮೋ ದರಃ ॥ ೬೩ ॥

ಅನ್ಯೇ ಚ ಸಿದ್ಧಾ ದೇವಾಶ್ಚ ಪನ್ನಗಾ ಗುಹ್ಯಕಾಸ್ತಥಾ ।
ಶುಕಂ ಸಮ್ಮುಖಯಾಮಾಸುಃ ಪಪ್ರಚ್ಛುರ್ಧರ್ಮ ಸಂಹಿತಾಂ ॥ ೬೪ ॥

ತಪಸ್ಸನ್ನು ಮಾಡುತ್ತಿದ್ದ ಶುಕಮಹರ್ಷಿಗೆ ಎಂತಹ ಕ್ರೂರವಾದ ಅಪಕಾರವನ್ನು ಮಾಡಿದೆನೆಂಬುದನ್ನು ಕೇಳು.

೬೦. ಸುಮೇರುಪರ್ವತದ ಉತ್ತರಪಾರ್ಶ್ವದಲ್ಲಿ ಮಹರ್ಷಿಗಣವು ನೆಲಸಿರುವ ಆಶ್ರಮದಲ್ಲಿ ವ್ಯಾಸಮಹರ್ಷಿಗಳ ಪುತ್ರನೂ, ಮಹಾತ್ಮನೂ ಆದ ಶುಕಮಹರ್ಷಿ ಬಹಳವಾಗಿ ತಪಸ್ಸನ್ನು ಮಾಡುತ್ತಿದ್ದನು.

೬೧-೬೪. ಇತಿಹಾಸಗಳಿಂದ ಕೂಡಿದ ಪುರಾಣಗಳನ್ನು ಕೇಳುವುದಕ್ಕಾಗಿ ಉಪನಿಷತ್ತುಗಳನ್ನರಿತವರಾದ ಅಸಿತ, ದೇವಲ, ಮಾರ್ಕಂಡೇಯ, ಭರದ್ವಾಜ, ಯವಕ್ರೀತ, ಭೃಗು, ಅಂಗಿರಸ್ಸು, ತೈತ್ತಿರೀಯೋಭ್ಯ, ಕಾಣ್ವ, ಮೇಧಾತಿಥಿ, ಕೃತ, ತಂತು, ಸುತಂತು, ಆದಿತ್ಯ, ವಸುಮಂತ, ಏಕತ, ದ್ವಿತ, ವಾಮದೇವ, ಅಶ್ವಶಿರ, ತ್ರಿಶೀರ್ಷ, ಗೌತಮ, ದರ ಎಂಬ ಋಷಿಗಳೂ, ಇತರ ಸಿದ್ಧರೂ, ದೇವತೆಗಳೂ, ನಾಗರೂ, ಗುಹ್ಯಕರೂ, ಶುಕಮಹಾಮುನಿಯ ಎದುರಿಗೆ ಬಂದು ಧರ್ಮ ಸಂಹಿತೆಯನ್ನು ಕೇಳುತ್ತಿದ್ದರು.

ಅಹಂತು ವಾಮದೇವಸ್ಯ ಶಿಷ್ಯೋ ನಾಮ್ನಾ ಶುಕೋದರಃ ।
ಭ್ರಷ್ಟಃ ಶ್ರದ್ಧಾನ್ವಿತೋ ಬಾಲ್ಯಾತ್ಸನೀತ್ಯಾಮಗ್ರತಶ್ಚರನ್ ।
ಊಹಾಪೋಹಕರಂ ಪ್ರಶ್ನಂ ವಾರಂವಾರಂ ಚ ಪೃಷ್ಟವಾನ್ ॥ ೬೫ ॥

ಅನ್ಯಾಯವಾದಿನಂ ಮಾಂ ಚ ಗುರುರ್ನಿತ್ಯಂ ನಿಷೇಧತಿ ।
ಗುರೂಣಾಮಗ್ರತೋ ವಾಕ್ಯಂ ಕಥಾಯಾಂ ವದತಾಂ ಸಹ ॥ ೬೬ ॥

ಪೂರ್ವಪಕ್ಷಾಶ್ಚ ಸಿದ್ಧಾಂತಾಃ ಪರಸ್ಪರ ಜಿಗೀಷವಃ ।
ಅಂತರೇ ಚಾಂತರಾಕ್ಷೇಪಂ ಪುನರ್ನೈವಮುವೋಚಥಾಃ ॥ ೬೭ ॥

ಏವಂ ನಿಷೇಧಿತಶ್ಚಾಹಂ ಗುರುಣಾ ಮುನಿಸತ್ತಮೈಃ ।
ನ ಕೃತಂ ಯನ್ಮಯಾ ವಾಕ್ಯಂ ತೇನಾಹಂ ಶಪಿತಸ್ತದಾ ॥ ೬೮ ॥

ಶುಕೇನ ಕೋಪಾಚ್ಛಾಪೋ ಮೇ ದತ್ತೋಽಯಂ ಜಲ್ಪಕೋವಟುಃ ।
ಯಥಾನಾಮಾ ತ್ವಯಂ ಪಕ್ಷೀ ಶುಕೋ ಭವತಿ ನಾನ್ಯಥಾ ॥ ೬೯ ॥

---

೬೫. ವಾಮದೇವರ ಶಿಷ್ಯನಾದ ಶುಕೋದರನೆಂಬ ನಾನಾದರೋ ಬಾಲ್ಯದಿಂದ ಆಸಕ್ತಿಯುಳ್ಳವನಾಗಿ ಬಾರಿ ಬಾರಿಗೂ ಯೋಚಿಸಲಾಗದಂತೆ ನೀತಿಯಿಲ್ಲದೆ ಪ್ರಶ್ನೆಗಳನ್ನು ಕೇಳುತ್ತಿದ್ದೆನು.

೬೬. ಕಥೆಯಲ್ಲಿ ವಾಕ್ಯಗಳನ್ನು ಹೇಳುವ ಗುರುಗಳೆದುರಿಗೆ ಅನ್ಯಾಯವಾಗಿ ವಾದಿಸುತ್ತಿದ್ದ ನನಗೆ ಅವರು ಹಾಗೆ ಮಾಡಬಾರದೆಂದು ನಿತ್ಯವೂ ಹೇಳುತ್ತಿದ್ದರು.

೬೭–೬೮. "ಪರಸ್ಪರ ಜಯಿಸಲಿಚ್ಛೆಯುಳ್ಳವರಾಗಿ ಪೂರ್ವ ಪಕ್ಷಸಿದ್ಧಾಂತಗಳನ್ನು ಮಾಡುವರೆದುರಿಗೆ ಮಾತ್ರ ನೀನು ಹೀಗೆ ಆಕ್ಷೇಪಣೆಯನ್ನು ಎಂದೂ ಹೇಳಲೇ ಇಲ್ಲ" ಎಂದು ಗುರುಗಳೂ ಇತರ ಮುನಿವರ್ಯರೂ ನನ್ನನ್ನು ತಡೆದರೂ ನಾನು ಅವರ ಮಾತನ್ನು ನಡೆಯಿಸದೆ ಇರಲಾಗಿ ಗುರುಗಳು ನನ್ನನ್ನು ಶಪಿಸಿದರು

೬೯. ಆ ಶುಕಮುನಿ 'ಗಿಣಿಯಂತೆ ಹರಟೆಯ ಮಲ್ಲನಾದ ಈ ವಟುವು ಶುಕೋದರನೆಂಬ ಹೆಸರಿಗೆ ತಕ್ಕವನಾಗಿದ್ದಾನೆ. ಇವನು ನಿಜವಾಗಿ ಗಿಳಿಯಾಗುವನು. ತಪ್ಪದು' ಎಂದು ಕೋಪದಿಂದ ನನಗೆ ಶಾಪವನ್ನು ಕೊಟ್ಟರು.

ಇತ್ಯುಕ್ತಮಾತ್ರೇ ವಚನೇ ತತ್ರೈವಾಹಂ ಶುಕೋದರಃ ।
ಶುಕತ್ವಂ ತತ್‌ಕ್ಷಣಾತ್ ಪ್ರಾಪ್ತಃ ಕ್ಷಮಸ್ವೇತ್ಯೂಚುರೋಜಸಾ ॥ ೭೦ ॥

ಮುನಯಸ್ತಂ ಮಹಾತ್ಮಾನಂ ಶುಕಂ ತತ್ತ್ವಾರ್ಥವಿತ್ತಮಂ ॥ ೭೧ ॥

ನಾನ್ಯಥಾ ನಾನ್ಯಥಾ ಚೋಕ್ತಂ ಕದಾಚಿತ್ಸಂಭವಿಷ್ಯತಿ ।
ಆಗಾಮಿಕಾಲೇ ದಾಸ್ಯಾಮಿ ವರಮಸ್ಮೈ ಶುಕಾಯ ಭೋ ॥ ೭೨ ॥

ಯುಷ್ಮಾಕಮುಪರೋಧೇನ ಯಥಾರೂಪೋ ವಿಹಂಗಮಃ ।
ಅಯಂ ಭವಿಷ್ಯತಿ ಸದಾ ಸದ್ಭಾವಹಿತಭಾವನಃ ॥ ೭೩ ॥

ಪುರಾಣತತ್ತ್ವವೇತ್ತಾ ಚ ಸರ್ವಶಾಸ್ತ್ರಾರ್ಥಪಾರಗಃ ।
ಮಥುರಾಯಾಂ ಮೃತಃ ಪಶ್ಚಾದ್ಬ್ರಹ್ಮಲೋಕಂ ಗಮಿಷ್ಯತಿ ॥ ೭೪ ॥

೭೦–೭೧. ಗುರುವು ಹಾಗೆ ಹೇಳಿದೊಡನೆಯೇ ಶುಕೋದರನಾದ ನಾನು ಶುಕತ್ವ (ಗಿಳಿಯ ಜನ್ಮ)ವನ್ನು ಪಡೆದೆನು. ಇತರ ಋಷಿಗಳು–ಮಹಾತ್ಮನೂ ತತ್ತ್ವಾರ್ಥಜ್ಞರಲ್ಲಿ ಉತ್ತಮನೂ ಆದ ಆ ಶುಕಮುನಿಯನ್ನು 'ಕ್ಷಮಿಸಬೇಕು. ಕ್ಷಮಿಸಬೇಕು.' ಎಂದು ಬಲವಾಗಿ ಬೇಡಿದರು.

೭೨–೭೪. ಶುಕಮುನಿಯು 'ಆಗಲಾರದು ಹೇಳಿದುದು ಎಂದಿಗೂ ತಪ್ಪುವುದಿಲ್ಲ. ಆದರೆ ನಿಮ್ಮ ಬಲಾತ್ಕಾರದಿಂದ ಈ ಗಿಳಿಗೆ ಮುಂದೆ ಒಳ್ಳೆಯ ದಾಗುವಂತೆ ವರವನ್ನು ಕೊಡುತ್ತೇನೆ. ಈತನು ಪಕ್ಷಿರೂಪದಿಂದಿದ್ದರೂ ಯಾವಾಗಲೂ ಒಳ್ಳೆಯ ಮತ್ತು ಲೋಕಹಿತವಾದ ಭಾವನೆಗಳುಳ್ಳವನೂ, ಪುರಾಣತತ್ತ್ವಜ್ಞನೂ, ಸರ್ವಶಾಸ್ತ್ರಾರ್ಥಪಾರಂಗತನೂ ಆಗಿದ್ದು, ಮಥುರೆಯಲ್ಲಿ ಮೃತನಾಗಿ ಬಳಿಕ ಬ್ರಹ್ಮಲೋಕವನ್ನು ಸೇರುವನು' ಎಂದನು.

ಏವಂ ಶಾಪಂ ವರಂ ಗೃಹ್ಯ ತಸ್ಮಾದ್ದೀನೋ ಹ್ಯಹಂ ದ್ರುತಂ ।
ಮಧುರಾಮಧುರೋಚ್ಚಾರಂ ಕುರ್ವನ್ನಿತ್ಯಮತಂದ್ರಿತಃ ॥
ನಿತ್ಯೋದ್ವಿಗ್ನಶ್ಚನೋ ಗಾತ್ರೇ ಹಿಮಾದ್ರೌ ತು ಗುಹಾಂ ವಸನ್ ॥ ೭೫ ॥

ಪ್ರಾಪ್ತೋಽಹಂ ಶಬರೇಣೈವ ಯೇನಾಹಂ ಪಂಜರೇ ಧೃತಃ ।
ಶಬರಸ್ತು ಸಭಾರ್ಯೋ ವೈ ಕ್ರೀಡತೇ ಸ ಮಯಾ ಸಹ ॥ ೭೬ ॥

ಮುನೇಃ ಪ್ರಸಾದಾನ್ಮೇ ಜ್ಞಾನಂ ನ ಜಹಾತಿ ಕದಾಚನ ।
ಭುಜ್ಯತೇ ಹ್ಯವಶೇನೈವ ಕೃತಂ ಯೇನ ಯಥಾ ಚ ಯತ್ ॥ ೭೭ ॥

ಸ್ವಸ್ಥೋ ಭವ ಮಹಾಭಾಗ ಮಾ ಸ್ಮ ಶೋಕೇ ಮನಃ ಕೃಥಾಃ ।
ಇತ್ಯುಕ್ತಃ ಸ ತು ಗೋಕರ್ಣಃ ತದಾ ತೇನ ಶುಕೇನ ಚ ॥ ೭೮ ॥

ತಸ್ಯ ತದ್ವಚನಂ ಹೃದ್ಯಂ ಶುಕಮೋಕ್ಷಪ್ರದಾಯಕಂ ।
ಯಾ ಸಾ ಮುಕ್ತಿಪ್ರದಾ ರಮ್ಯಾ ಮಧುರಾ ಪಾಪನಾಶಿನೀ ॥ ೭೯ ॥

---

೭೫. ಹಾಗೆ ಶುಕಮುನಿಯಿಂದ ಬೇಗನೆ ಶಾಪವನ್ನೂ ವರವನ್ನೂ ಪಡೆದ ದೀನನಾದ ನಾನು ಯಾವಾಗಲೂ ಆಲಸ್ಯವಿಲ್ಲದೆ ಮಧುರೆಯೆಂಬ ಇಂಪಾದ ಹೆಸರನ್ನು ಹೇಳಿಕೊಳ್ಳುತ್ತ ಹಿಮಗಿರಿಯ ಗುಹೆಯಲ್ಲಿ ವಾಸಮಾಡುತ್ತ ಈ ನನ್ನ ದೇಹದಲ್ಲಿ ಯಾವಾಗಲೂ ಬೇಸರಗೊಂಡಿರುವೆನು.

೭೬. ನನ್ನನ್ನು ಬೇಡನು ಹಿಡಿದು ಪಂಜರದಲ್ಲಿಟ್ಟಿರುವನು. ಹೆಂಡತಿಯೊಡಗೂಡಿದ ಆ ಬೇಡನು ನನ್ನ ಸಂಗಡ ಸಂತೋಷದಿಂದ ಆಡುವನು.

೭೭–೭೮. ಆ ಮುನಿಯ ಪ್ರಸಾದದಿಂದ ನನಗೆ ಎಂದೂ ಜ್ಞಾನವು ತಪ್ಪದೆ ಇದೆ. ಅಬುದ್ಧಿಪೂರ್ವಕವಾಗಿ ಮಾಡಿದುದಕ್ಕೂ ತಕ್ಕುದನ್ನು ಅನುಭವಿಸಬೇಕು. ಮಹಾಭಾಗ್ಯನೇ, ಸಮಾಧಾನವುಳ್ಳವನಾಗು; ನನಗಾಗಿ ದುಃಖಕ್ಕೆ ಮನಗೊಡಬೇಡ" ಎಂದು ಆ ಗಿಳಿಯು ಗೋಕರ್ಣನಿಗೆ ಆಗ ಹೇಳಿತು.

೭೯–೮೦. ಗೋಕರ್ಣನು ಗಿಳಿಗೆ ಮೋಕ್ಷಪ್ರದಾಯಕವೂ, ಮನೋಹರವೂ ಆದ ಆ ಮಾತನ್ನು ಕೇಳಿ, ಗಿಳಿಯನ್ನು ಕುರಿತು, ಭದ್ರನೇ, ನೀನು ಹೇಳಿದ ಮುಕ್ತಿಪ್ರದಾಯಕವೂ, ರಮ್ಯವೂ, ಪಾಪನಾಶಕವೂ ಆದ ಆ ಮಧುರೆಯಲ್ಲಿಯೇ

ತಸ್ಯಾಂ ವಸಾಮ್ಯಹಂ ಭದ್ರ ವಾಣಿಜ್ಯಾರ್ಥಮಿಹಾಗತಃ ।
ಪುನರಿಚ್ಛಾಮಹೇ ತತ್ರ ಭಾಂಡಂ ಗೃಹ್ಯ ಯಥಾಸುಖಂ ॥ ೮೦ ॥

ಮಥುರಾವಾಸಿನಂ ಶ್ರುತ್ವಾ ಗೋಕರ್ಣಂ ಸ ಶುಕಸ್ತದಾ ।
ಪುತ್ರಂ ಸಂಸ್ಥಾಪ್ಯ ಜಾತ್ಮಾನಂ ಗೋಕರ್ಣಸ್ಯ ಯಥೇಪ್ಸಿತಂ ॥ ೮೧ ॥

ಏವಂ ಚ ವದತಸ್ತಸ್ಯ ಶಬರೀ ಶಯನೋತ್ಥಿತಾ ।
ದರ್ಪಾನ್ನಿರ್ಗತ್ಯ ತು ಬಹಿರ್ದದರ್ಶಾಸನಸಂಸ್ಥಿತಂ ॥ ೮೨ ॥

ಭೃತ್ಯೈಃ ಪರಿವೃತಂ ಚಾರುದರ್ಶನೀಯ ಸ್ವರೂಪಕಂ । ॥ ೮೩ ॥

ನಿರೀಕ್ಷ್ಯ ಬಹುಶಸ್ತತ್ರ ಶುಕೋ ವಚನಮಬ್ರವೀತ್ ।
ಪ್ರಿಯಾತಿಥಿಂ ಚ ಸಂಪ್ರಾಪ್ತಂ ಮಾತಃ ಪೂಜ್ಯತಮಂ ಶುಚಿಂ ॥ ೮೪ ॥

ನಾನು ವಾಸಮಾಡುವೆನು. ವಾಣಿಜ್ಯಕ್ಕಾಗಿ ಇಲ್ಲಿಗೆ ಬಂದೆನು. ಹೇರು (ಮೂಟೆ) ಗಳನ್ನು ತೆಗೆದುಕೊಂಡು ತಿರುಗಿ ಸುಖವಾಗಿ ಅಲ್ಲಿಗೆ ಹೋಗಲು ಬಯಸುವೆನು" ಎಂದನು.

೮೧. ಗೋಕರ್ಣನು ಮಥುರೆಯ ನಿವಾಸಿಯೆಂಬುದನ್ನು ಕೇಳಿ ಆ ಗಿಳಿ ಆಗ ತನ್ನನ್ನು ಗೋಕರ್ಣನ ಇಷ್ಟದಂತೆ ಅವನಿಗೆ ಮಗನಾಗಿ ಒಪ್ಪಿಸಿತು.

೮೨-೮೩. ಗಿಳಿ ಹೀಗೆ ಮಾತನಾಡುತ್ತಿರುವಾಗ, ಹಾಸಿಗೆಯಲ್ಲಿ ಮಲಗಿದ್ದು ಎದ್ದ ಬೇಡಿತಿಯು ದರ್ಪದಿಂದ ಹೊರಗೆ ಬಂದು, ಅಲ್ಲಿ ಸೇವಕರಿಂದ ಪರಿವೃತನಾಗಿ ಪೀಠದಲ್ಲಿ ಕುಳಿತಿರುವ ದರ್ಶನೀಯರೂಪನಾದ ಆ ಗೋಕರ್ಣನನ್ನು ಕಂಡಳು.

೮೪-೮೫. ಗಿಳಿ ಹಲವುಸಾರಿ ಅಲ್ಲಿ ನೋಡಿ, " ಅಮ್ಮಾ, ಪ್ರಿಯಾತಿಥಿಯಾಗಿ ಬಂದಿರುವ ಪೂಜ್ಯತಮನೂ, ಶುದ್ಧನೂ ಆದ ಈತನನ್ನು ತಕ್ಕಂತೆ

ಕುರು ಪೂಜಾಂ ಯಥಾರ್ಹಂ ಚ ಗೋಕರ್ಣಸ್ಯ ವರಾತಿಥೇಃ ।
ಶುಕಸ್ಯ ವಚನಾದ್ಯಾವತ್ ಪೂಜಾರ್ಥಮುಪಕಲ್ಪಿತಂ ॥
ನ ದದಾತಿ ತತಸ್ತತ್ರ ವನಾಚ್ಛಬರ ಆಗತಃ ॥ ೮೫ ॥

ತಸ್ಯಾಗ್ರೇ ತು ಪುನಸ್ತೇನ ಶುಕೇನಾತಿಥಿ ಪೂಜನಂ ।
ಶಂಸಿತಂ ಸ ತಥೇತ್ಯುಕ್ತ್ವಾ ಕೃತ್ವಾ ಪೂಜಾಂ ಪ್ರಣಮ್ಯ ಚ ॥ ೮೬ ॥

ಫಲಾನಿ ಮಾಂಸಯುಕ್ತಾನಿ ಮಧೂನಿ ಸುರಭೀಣಿ ಚ ।
ಸಂಪಾದ್ಯ ಸಂವಿದಂ ಕೃತ್ವಾ ವದ ಕಿಂ ಕರವಾಣಿತೇ ॥ ೮೭ ॥

ಇತ್ಯುಕ್ತಃ ಶಬರೇಣಾಥ ಗೋಕರ್ಣೋ ವಾಕ್ಯಮಬ್ರವೀತ್ ।
ನಾನ್ಯತ್ಕಿಂಚಿದಥೋ ದೇಯಂ ಯದಿ ಕಿಂಚಿದ್ದದಾಸಿ ಚ ॥ ೮೮ ॥

ಶುಕೋಯಂ ಪಂಜರಸ್ಥಶ್ಚ ಪುತ್ರಾರ್ಥಂ ಮೇ ಪ್ರದೀಯತಾಂ ।
ಮಧುರಾಯಣಾಂ ಗಮಿಷ್ಯಾಮಿ ಕೃತಾರ್ಥಃ ಪಿತುರಂತಿಕೇ ॥ ೮೯ ॥

ಪೂಜಿಸು" ಎಂದು ಹೇಳಿತು. ಗಿಳಿ ಹೇಳಿದಂತೆ ಉತ್ತಮಾತಿಥಿಯಾದ ಆ ಗೋಕರ್ಣನ ಪೂಜೆಗೆ ಬೇಕಾದುದೆಲ್ಲವೂ ಸಿದ್ಧವಾಯಿತು. ಪೂಜಿಸುವಷ್ಟರಲ್ಲೇ ಬೇಡನೂ ವನದಿಂದ ಅಲ್ಲಿ ಬಂದನು.

೮೬–೮೭. ಬೇಡನೆದುರಿಗೂ ಗಿಳಿ ಮತ್ತೆ ಅತಿಥಿಪೂಜೆಯನ್ನು ಪ್ರಶಂಸಿಸಿತು. ಬೇಡನು ಹಾಗೆಯೇ ಆಗಲೆಂದು ಹೇಳಿ, ಗೋಕರ್ಣನನ್ನು ಪೂಜಿಸಿ, ನಮಸ್ಕರಿಸಿ, ಫಲಗಳನ್ನೂ, ಮಾಂಸದೊಡನೆ ಸುವಾಸನೆಯುಳ್ಳ ಮಧುವನ್ನೂ ತಂದುಕೊಟ್ಟು ಮಾತನಾಡಿ "ನಿನಗೆ ನನ್ನಿಂದಾಗಬೇಕಾದುದೇನು? ಹೇಳು" ಎಂದನು.

೮೮–೮೯. ಬೇಡನು ಹಾಗೆನಲು ಗೋಕರ್ಣನು "ಬೇರೆ ಏನನ್ನಾದರೂ ಕೊಡುವುದಾದರೆ ಸ್ವಲ್ಪವನ್ನು ಕೊಡುತ್ತೀಯೆ. ಪಂಜರದಲ್ಲಿರುವ ಈ ಗಿಳಿಯನ್ನು ನನಗೆ ಮಗನಾಗಿರುವಂತೆ ಕೊಡು. ಕೃತಕೃತ್ಯನಾಗಿ ಮಧುರೆಗೆ ತಂದೆಯ ಸಮೀಪಕ್ಕೆ ಹೋಗುತ್ತೇನೆ." ಎಂದು ಹೇಳಿದನು.

ಇತ್ಯುಕ್ತವಾತ್ರೇ ವಚನೇ ಶಬರೋ ವಾಕ್ಯಮಬ್ರವೀತ್ ।
ಅಸ್ಮಾಕಂ ಯಮುನಾಸ್ನಾನಂ ಸಂಗಮೇ ಯಮುನಾಂಭಸಃ ॥ ೯೦ ॥

ಸರಸ್ವತ್ಯಾಃ ಫಲೇ ಚೈವ ದತ್ತೇ ದಾಸ್ಯಾಮಿ ತೇ ಶುಕಂ ॥ ೯೧ ॥

ಶಬರೇಣೈವಮುಕ್ತಸ್ತು ಗೋಕರ್ಣಃ ಪ್ರತ್ಯಭಾಷತ ।
ಸರಸ್ವತ್ಯಾಃ ಸಂಗಮೇ ಚ ಯತ್ಫಲಂ ಲಭತೇ ನರಃ ॥
ಸ್ನಾನೇನ ಕಿಂ ಫಲಂ ತಸ್ಯ ಯದಿ ಜಾನಾಸಿ ತದ್ವದ ॥ ೯೨ ॥

॥ ಶಬರ ಉವಾಚ ॥

ಶುಕೇನಾನೇನ ಮೇ ಸರ್ವಂ ಮಥುರಾಯಾಶ್ಚ ಯತ್ಫಲಂ ।
ಯತ್ಫಲಂ ಸಂಗಮಸ್ಯೋಕ್ತಂ ಶೃಣುಯಾದ್ದ್ವಾದಶೀವ್ರತಂ ॥ ೯೩ ॥

ವಿಯೋನಿಸ್ಥೋ ರಾಕ್ಷಸೋ ವಾ ತಿರ್ಯಗ್ಯೋನಿಂ ಗತೋಽಪಿ ವಾ ।
ಸಮುದ್ದಿಶ್ಯ ವ್ರತಂ ಕುರ್ಯಾತ್ಸ ಗಚ್ಛೇತ್ಪರಮಾಂ ಗತಿಂ ॥ ೯೪ ॥

೯೦-೯೧. ಹಾಗೆ ಹೇಳಿದೊಡನೆಯೇ ಬೇಡನು "ನೀನು ನಮಗೆ ಯಮುನಾನದಿಯ ಮತ್ತು ಯಮುನಾಸರಸ್ವತಿಗಳ ಸಂಗಮದ ಸ್ನಾನದ ಫಲವನ್ನು ಕೊಡುವುದಾದರೆ ನಿನಗೆ ನಾನು ಈ ಗಿಳಿಯನ್ನು ಕೊಡುವೆನು" ಎಂದು ಹೇಳಿದನು.

೯೨. ಬೇಡನು ಹಾಗೆನಲು ಗೋಕರ್ಣನು "ಸರಸ್ವತಿಯ ಸಂಗಮದಲ್ಲಿಯೂ, ಯಮುನೆಯಲ್ಲಿಯೂ ಸ್ನಾನಮಾಡುವುದರಿಂದ ಮನುಷ್ಯನು ಯಾವ ಫಲವನ್ನು ಪಡೆಯುವನೆಂಬುದನ್ನು ನೀನು ತಿಳಿದಿರುವೆಯಾದರೆ ಹೇಳು" ಎಂದನು.

೯೩-೯೪. ಬೇಡ—"ಈ ಗಿಳಿ ನನಗೆ ಹೇಳಿರುವ ಮಥುರೆಯ ಫಲವನ್ನೂ, ಸರಸ್ವತೀ ಸಂಗಮದ ಫಲವನ್ನೂ, ದ್ವಾದಶೀವ್ರತದ ಫಲವನ್ನೂ ಕೇಳು. ವಿಜಾತೀಯನಾಗಿದ್ದರೂ, ರಾಕ್ಷಸನಾಗಿದ್ದರೂ, ತಿರ್ಯಗ್ಜನ್ಮದಲ್ಲಿದ್ದರೂ, ಉದ್ದೇಶಪೂರ್ವಕವಾಗಿ ಅಲ್ಲಿ ಸ್ನಾನವನ್ನೂ, ದ್ವಾದಶೀವ್ರತವನ್ನೂ ಮಾಡುವವರು ಪರಮಗತಿಯನ್ನು ಪಡೆಯುವರು.

ಸಂಗಮಸ್ಯ ಫಲಂ ತಸ್ಯ ದೃಷ್ಟ್ವಾ ಗೋಕರ್ಣನಿೇಶ್ವರಂ ।
ನಾಸೌ ಯಮಪುರಂ ಯಾತಿ ವಿಷ್ಣುಲೋಕಂ ಚ ಗಚ್ಛತಿ ॥ ೯೫ ॥

ಏವಂ ಮಯಾ ಶ್ರುತಂ ತಸ್ಯ ಸಂಗಮಸ್ಯ ಮಹಾಫಲಂ ॥ ೯೬ ॥

ಇತಿ ಶ್ರೀವರಾಹಪುರಾಣೇ ಗೋಕರ್ಣಸರಸ್ವತೀಮಾಹಾತ್ಮ್ಯೇ
ಸಪ್ತತ್ಯಧಿಕಶತತಮೋಽಧ್ಯಾಯಃ

೯೫-೯೬. ಯಮುನಾಸರಸ್ವತೀ ಸಂಗಮದಲ್ಲಿ ಸ್ನಾನಮಾಡುವುದರಿಂದಲೂ, ಗೋಕರ್ಣೇಶ್ವರನ ದರ್ಶನಮಾಡುವುದರಿಂದಲೂ ಮನುಷ್ಯನು ಯಮಪುರಕ್ಕೆ ಹೋಗದೆ ವಿಷ್ಣುಲೋಕಕ್ಕೆ ಹೋಗುವನು. ಆ ಸಂಗಮದ ಮಹಾಫಲವನ್ನು ನಾನು ಹೀಗೆ ಕೇಳಿದ್ದೇನೆ.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಸರಸ್ವತೀನದಿಯ ಮತ್ತು ಗೋಕರ್ಣೇಶ್ವರನ ಮಹಿಮೆಯನ್ನು ವಿವರಿಸುವನು.— ಮಧುರೆಯ ವಸುಕರ್ಣನೆಂಬ ವೈಶ್ಯನು ಮಕ್ಕಳಿಲ್ಲದವನಾಗಿದ್ದು ಒಬ್ಬ ಮಹರ್ಷಿಯ ಉಪದೇಶದಂತೆ ಪತ್ನಿಯೊಡನೆ ಸರಸ್ವತಿಯಲ್ಲಿ ಸ್ನಾನಮಾಡಿ, ಗೋಕರ್ಣೇಶ್ವರನನ್ನು ಪೂಜಾದಿಗಳಿಂದ ಸೇವಿಸಿ, ಅವನ ಅನುಗ್ರಹದಿಂದ ಪುತ್ರನನ್ನು ಪಡೆದು, ಆತನಿಗೆ ಗೋಕರ್ಣನೆಂದೇ ನಾಮಕರಣಮಾಡುವನು. ಗೋಕರ್ಣನೂ ಮಕ್ಕಳನ್ನು ಪಡೆಯಲು ಬಗೆಬಗೆಯಾದ ದಾನಧರ್ಮಾದಿಗಳನ್ನು ಮಾಡುವನು. ಹಣವೆಲ್ಲವೂ ವೆಚ್ಚವಾಗಲು ವಾಣಿಜ್ಯಕ್ಕಾಗಿ ಪರಸ್ಥಳಕ್ಕೆ ಹೋಗಿ ಬರುವಾಗ ದಾರಿಯಲ್ಲಿ ಬಂದು ಬೆಟ್ಟದ ತಪ್ಪಲಿನಲ್ಲಿ ತಂಗಿದ್ದು ಸಂಚಾರಾರ್ಥವಾಗಿ ಬೆಟ್ಟದ ಮೇಲಕ್ಕೆ ಹೋಗಲಾಗಿ, ಅಲ್ಲಿ ವೇದಾಶಾಸ್ತ್ರಪುರಾಣತತ್ವಜ್ಞನಾದ ಒಂದು ಗಿಳಿಯನ್ನು ಕಂಡು, ಅದರ ರಕ್ಷಕನಾದ ಬೇಡನಿಂದ ಉಪಚಾರವನ್ನು ಪಡೆದು, ಆ ಗಿಳಿಯನ್ನು ತನಗೆ ಕೊಡಬೇಕೆಂದು ಕೇಳಲು ಸರಸ್ವತೀಸಂಗಮದ ಸ್ನಾನಫಲವನ್ನು ಕೊಟ್ಟರೆ ಗಿಳಿಯನ್ನು ಕೊಡುವುದಾಗಿ ಹೇಳಿದ ಶಬರನಿಗೂ ಆತನಿಗೂ ಸರಸ್ವತೀನದಿಯ ಸ್ನಾನಾದಿಗಳ ವಿಚಾರದಲ್ಲಿ ಮಾತು ನಡೆಯುವುದು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತನೆಯ ಅಧ್ಯಾಯ.

॥ ಶ್ರೀಃ ॥

ಏಕಸಪ್ತತ್ಯಧಿಕಶತತಮೋಧ್ಯಾಯಃ

॥ ಶ್ರೀವರಾಹ ಉವಾಚ ॥

ಶುಕಂ ಗೃಹ್ಯ ತತಃ ಸ್ಥಾನಾತ್ ಪ್ರಸ್ಥಿತೋ ಮಧುರಾಂ ಪುರೀಂ ।
ಪ್ರವಿಶ್ಯ ಗೃಹ್ಯ ತತ್ಪುಣ್ಯಂ ಮಾತಾಪಿತ್ರೋಸ್ತ್ವದರ್ಪಿತಂ ॥
ಶುಕಸ್ಯ ಚರಿತಂ ಸರ್ವಂ ನಿವೇದ್ಯ ಚ ಮಹಾಮತಿಃ ॥ ೧ ॥

ಏವಂ ನಿವಸತಸ್ತಸ್ಯ ಬಹುವರ್ಷಾಣಿ ತತ್ರ ವೈ ।
ಸುಖಂ ಪ್ರಾಪ್ತಂ ಮತಂಚಾಪಿ ವ್ಯವಹಾರೇ ಚ ಪೂಜನೇ ॥ ೨ ॥

ಏವಂ ನಿವಸತಸ್ತಸ್ಯ ದ್ರವ್ಯಂ ಶೇಷಮಜಾಯತ ।
ಪುನಸ್ತತ್ರೈವ ಗಮನೇ ವಣಿಗ್ಭಾವೇ ಮತಿರ್ಗತಾ ॥ ೩ ॥

ನೂರ ಎಪ್ಪತ್ತೊಂದನೆಯ ಅಧ್ಯಾಯ

೧. ಶ್ರೀವರಾಹ—ಬಹು ಬುದ್ಧಿವಂತನಾದ ಗೋಕರ್ಣನು ಬಳಿಕ ಗಿಳಿಯನ್ನು ತೆಗೆದುಕೊಂಡು, ಆ ಗಿರಿಯಿಂದ ಹೊರಡು ಮಧುರಾಪುರಕ್ಕೆ ಹೋಗಿ ಮನೆಯನ್ನು ಸೇರಿ, ತಾಯಿತಂದೆಗಳಿಗೆ ತಾನು ಪಡೆದುತಂದ ಪುಣ್ಯವನ್ನು ಅರ್ಪಿಸಿ, ಆ ಗಿಳಿಯ ಚರಿತ್ರೆಯೆಲ್ಲವನ್ನೂ ತಿಳಿಸಿದನು.

೨. ಬಳಿಕ ಮಧುರೆಯಲ್ಲಿಯೇ ಹಲವು ವರ್ಷಗಳು ವಾಸಮಾಡುತ್ತಿದ್ದ ಆ ಗೋಕರ್ಣನಿಗೆ ವ್ಯವಹಾರದಲ್ಲೂ, ಗೌರವದಲ್ಲೂ ಬೇಕಾದ ಸುಖವುಂಟಾಯಿತು.

೩. ಹಾಗೆಯೇ ಇರುತ್ತಿರಲು ಅವನ ದ್ರವ್ಯವು ವೆಚ್ಚವಾಗಿ ಸ್ವಲ್ಪವೇ ಉಳಿದಿದ್ದಿತು. ಆದುದರಿಂದ ಅವನು ಮತ್ತೆ ವಾಣಿಜ್ಯಕ್ಕಾಗಿ ಹೋಗಲು ಮನಸ್ಸು ಮಾಡಿದನು.

ಸಮುದ್ರಯಾನೇ ರತ್ನಾನಿ ಮಹಾಮೌಲ್ಯಾನಿ ಸಾಧುಭಿಃ ।
ಆನಯಿಷ್ಯೇ ಬಹೂನ್ಯತ್ರ ಸಾರ್ಧಂ ರತ್ನಪರೀಕ್ಷಕೈಃ ॥ ೪ ॥

ಏವಂ ನಿಶ್ಚಿತ್ಯ ಮನಸಾ ಮಹಾಸಾರ್ಥಪುರಃ ಸರಃ ।
ಸಮುದ್ರಯಾಯಿಭಿರ್ಲೋಕೈಃ ಸಂವಿದಂ ಪ್ರೋಚ್ಯ ನಿರ್ಗತಃ ॥ ೫ ॥

ಪೇಯಾಹಾರ ಸಮಾಹಾರಂ ಕೃತ್ವಾ ಕೃತ್ಯವಿದಾರ್ಥಕಂ ।
ಶುಕಂ ಗೃಹೀತ್ವಾ ಪ್ರಸ್ಥಾನಮಕರೋತ್ಪುಣ್ಯವಾಸರೇ ॥ ೬ ॥

ಮಾತಾಪಿತ್ರೋಃ ಶುಭಾ ವಾಚೋ ಗೃಹೀತ್ವಾ ದೇವತಾಗೃಹೇ ।
ಭಾರ್ಯಾಣಾಂ ದೇವಕಾರ್ಯಂ ಚ ವಾಟಿಕಾಯಾಶ್ಚ ಪೋಷಣಂ ॥ ೭ ॥

ಪಿತುಃ ಶುಶ್ರೂಷಣಂ ಚೋಕ್ತ್ವಾ ಸರ್ವಂ ಯೂಯಂ ಕರಿಷ್ಯಥ ।
ಯಥಾಯೋಗಂ ಯಥಾಕಾಲಂ ಯಥಾಕೃತ್ಯಂ ಯಥಾ ಚ ಯತ್ ॥ ೮ ॥

೪–೫. ' ಸಾಧುಗಳಾದ ರತ್ನಪರೀಕ್ಷಕರೊಡನೆ ಸಮುದ್ರದಮೇಲೆ ಪ್ರಯಾಣಮಾಡಿ, ಬಹಳ ಬೆಲೆಯುಳ್ಳ ರತ್ನಗಳನ್ನು ಹೆಚ್ಚಾಗಿ ತರುತ್ತೇನೆ' ಎಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು, ದೊಡ್ಡದಾಗಿ ವಣಿಜಸಂಘದೊಡನೆಯೂ, ಸಮುದ್ರಯಾನಮಾಡುವ ಜನರೊಡನೆಯೂ ನಿಶ್ಚಯವಾಗಿ ಮಾತನಾಡಿಕೊಂಡು ಹೊರಟನು.

೬. ಕರ್ತವ್ಯವನ್ನು ಅರಿತವನಾದ ಗೋಕರ್ಣನು ಆಹಾರ ಪಾನೀಯಗಳನ್ನೂ, ಹಣವನ್ನೂ ಸಂಗ್ರಹಿಸಿ ತೆಗೆದುಕೊಂಡು ಗಿಳಿಯನ್ನೂ ಕರೆದುಕೊಂಡು ಶುಭದಿನದಲ್ಲಿ ಪ್ರಯಾಣಮಾಡಿದನು.

೭–೧೦. ಹೊರಡುವುದಕ್ಕೆ ಮೊದಲು ತಾಯಿತಂದೆಗಳ ಶುಭವಾಕ್ಯಗಳನ್ನೂ ಆಶೀರ್ವಾದವನ್ನೂ ಪರಿಗ್ರಹಿಸಿ, ಪತ್ನಿಯರಿಗೆ ದೇವಾಲಯದಲ್ಲಿ ಮಾಡಬೇಕಾದ ದೇವಕಾರ್ಯಗಳನ್ನೂ, ತೋಟದ ರಕ್ಷಣೆಯನ್ನೂ, ತಾಯಿತಂದೆಗಳ ಸೇವೆಯನ್ನೂ ಹೇಳಿ, " ಎಲ್ಲವನ್ನೂ ನೀವೇ ಮಾಡುವಿರಿ. ಆದರೆ ಎಲ್ಲವನ್ನೂ

ಭವತೀಭಿಶ್ಚ ಕೃತ್ಯಂ ಮೇ ಕರಣೀಯಂ ಯಥಾತಥಾ ।
ಸಂದಿಶ್ಯ ಭಾರ್ಯಾಃ ಸುಶ್ರೋಣಿರ್ದೇವಂ ದೃಷ್ಟ್ವಾ ಪ್ರಸಾದ್ಯ ಚ ॥ ೯ ॥

ಭಾರ್ಯಾಭಿಃ ಸಮನುಜ್ಞಾತೋ ಯಾನಪಾತ್ರಂ ಗತಸ್ತದಾ ॥ ೧೦ ॥

ಶುಕೇನ ಸಹ ಸಂಪ್ರಾಪ್ತೋ ಮಹಾಂತಂ ಲವಣಾರ್ಣವಂ ।
ಪೋತಾರೂಢಾಸ್ತತಃ ಸರ್ವೇ ಪೋತವಾಹೈರುಪೋಹಿತಾಃ ॥ ೧೧ ॥

ಅಪಾರೇದುಸ್ತರೇ ಗಾಧೇ ಯಾಂತಿ ವೇಗೇನ ನಿತ್ಯಶಃ ।
ಅಥ ದೈವವಶಾದ್ವಾಯುರ್ವಿಲೋಮಃ ಸಮಜಾಯತ ॥ ೧೨ ॥

ದುರ್ವಾತೇನ ತದಾ ನಿತ್ಯಂ ಬಲಾತ್ಪೋತ ಉಪೋಹಿತಃ ।
ಪೋತವಾಹಾಸ್ತತಃ ಸರ್ವೇ ವಿಸಂಜ್ಞಾ ಮೋಹಿತಾಃ ಕೃಶಾಃ ॥ ೧೩ ॥

ತಕ್ಕರೀತಿಯಲ್ಲಿ ಸಂಗತವಾಗಿ ನಾನು ಮಾಡುವಂತೆ ಅಥವಾ ನನಗೆ ಮಾಡುವಂತೆ ನೀವು ಮಾಡಬೇಕು." ಎಂದು ಸುಂದರಿಯರಾದ ಅವರಿಗೆ ಹೇಳಿ, ದೇವನ ಸಂದರ್ಶನವನ್ನು ಮಾಡಿ, ವಂದಿಸಿ, ಹೆಂಡತಿಯರಿಂದಲೂ ಅನುಮತಿಯನ್ನು ಪಡೆದು ಬಳಿಕ ಹಡಗನ್ನೇರಿದನು.

೧೧. ಗೋಕರ್ಣನು ಹಡಗಿನಲ್ಲಿ ಗಿಳಿಯೊಡನೆ ಲವಣಮಹಾಸಾಗರವನ್ನು ಸೇರಿದನು. ನಾವಿಕರು ಹಡಗನ್ನೇರಿದವರನ್ನೆಲ್ಲಾ ಕರೆದುಕೊಂಡು ಹೋದರು.

೧೨. ಹಡಗು ನಿತ್ಯವೂ ಅಪಾರವೂ, ಅಗಾಧವೂ, ದುಸ್ತರವೂ ಆದ ಸಾಗರದಲ್ಲಿ ವೇಗದಿಂದ ಹೋಗುತ್ತಿದ್ದಿತು. ಕೆಲವು ದಿನಗಳಲ್ಲಿ ಗಾಳಿ ಪ್ರತಿಕೂಲವಾಗಿ ಬೀಸುವುದಾಯಿತು.

೧೩. ಪ್ರತಿಕೂಲವಾದ ಬಿರುಗಾಳಿ ಆಗ ನಿತ್ಯವೂ ಹಡಗನ್ನು ಬಲಾತ್ಕಾರದಿಂದ ಬೇರೆಕಡೆಗೆ ತಳ್ಳಿಕೊಂಡು ಹೋಗುತ್ತಿದ್ದಿತು. ನಾವಿಕರೆಲ್ಲರೂ ಭ್ರಾಂತರಾಗಿ ಏನೂ ತೋರದೆ ಕೃಶರಾದರು.

ಹಾ ಕಷ್ಟಂ ಹಿ ಕಥಂ ಕಿಂಚ ಕುತ್ರ ಗಚ್ಛಾಮಹೇ ವಯಂ ।
ತೇಷಾಂ ತು ವಚನಂ ಶ್ರುತ್ವಾ ಜ್ಞಾತ್ವಾ ದುರ್ವಾತಪೀಡನಂ ॥ ೧೪ ॥

ಆಕ್ಷಿಪದ್ಭಾಗ್ಭಿರುಗ್ರಾಭಿರನ್ಯೋನ್ಯಂ ಶಂಕ್ಯ ಮೂರ್ಛಿತಾಃ ॥ ೧೫ ॥

ಜಲ್ಪಂತಿ ಕೋತ್ರ ಪಾಪಿಷ್ಠಃ ಸಮಾರೂಢೋ ನಿರಾಕೃತಃ ।
ತಸ್ಯ ಪಾತಕಸಂಸ್ಪರ್ಶಾನ್ಮೃತಾಃ ಸರ್ವೇ ನ ಸಂಶಯಃ ॥ ೧೬ ॥

ಏವಂ ವಿಲಪತಾಂ ತೇಷಾಂ ಚತ್ವಾರೋಪಿ ಸಮುಭ್ಯಯುಃ ।
ಮಾಸಾಸ್ತತ್ರೈವ ವಾಣಿಜ್ಯಂ ಷಣ್ಮಾಸಾತ್ಸಿಧ್ಯತೇ ಫಲಂ ॥ ೧೭ ॥

ನಿರ್ಭರ್ತ್ಸನಂ ತತಸ್ತೇಷಾಮನ್ಯೋನ್ಯಮಭಿಜಲ್ಪನಂ ।
ಶ್ರುತ್ವಾ ಶುಕಸ್ಯ ಗೋಕರ್ಣಃ ಶಶಂಸಾತ್ಮವಿನಿಂದನಂ ॥ ೧೮ ॥

೧೪–೧೫. 'ಅಯ್ಯೋ ! ಕಷ್ಟ ಗತಿಯೇನು ? ನಾವು ಎಲ್ಲಿಗೆ ಹೇಗೆ ಹೋಗೋಣ !' ಎಂಬವರ ಮಾತನ್ನು ಕೇಳಿಯೂ, ಕೆಟ್ಟಗಾಳಿಯ ತೊಂದರೆಯನ್ನು ತಿಳಿದೂ, ಪರಸ್ಪರವಾಗಿ ಆಕ್ಷೇಪಿಸುತ್ತಿರುವ ಕ್ರೂರವಾಕ್ಯಗಳನ್ನು ಕೇಳಿಯೂ ಭಯಪಟ್ಟು ಕೆಲವರು ಮೂರ್ಛಿತರಾದರು.

೧೬. ಕೆಲವರು 'ಯಾರೋ ನಿರಾಕೃತನಾದ ಪಾಪಿಯು ಈ ಹಡಗನ್ನು ಏರಿರುವನು. ಅವನ ಪಾಪಸಂಪರ್ಕದಿಂದ ನಾವೆಲ್ಲರೂ ಸತ್ತೆವು. ಸಂದೇಹವಿಲ್ಲ !' ಎಂದು ಹೇಳುತ್ತಿದ್ದರು.

೧೭–೧೮. ಅವರು ಹಾಗೆ ಅಳುತ್ತಿರಲು ಅಲ್ಲೇ ನಾಲ್ಕುತಿಂಗಳುಗಳು ಕಳೆದುಹೋದುವು. 'ವಾಣಿಜ್ಯದ ಫಲವು ಆರು ತಿಂಗಳಲ್ಲಿ ಸಿದ್ಧಿಸುತ್ತದೆ' ಎಂದು ಹೇಳಿ, ಅವರ ಪರಸ್ಪರವಾಗ್ವಾದವನ್ನು ತಿರಸ್ಕರಿಸುತ್ತಿದ್ದ ಗಿಳಿಯ ಮಾತನ್ನು ಕೇಳಿ, ಗೋಕರ್ಣನು ತನ್ನನ್ನೇ ನಿಂದಿಸಿಕೊಂಡನು.

ಅಪುತ್ರಸ್ಯ ಗತಿರ್ನಾಸ್ತಿ ಇತಿ ಸರ್ವಸ್ಯ ನಿಶ್ಚಿತಂ ।
ಏಷಾಂ ಮಧ್ಯೇ ಹ್ಯಹಂ ಪಾಪಸ್ತೇನ ತಪ್ಸ್ಯಾಮಿ ಪುತ್ರಕ ॥ ೧೯ ॥

ಯದತ್ರ ಯುಕ್ತಂ ಕಾಲೇಽಸ್ಮಿನ್ ವಿಷಮೇ ಸಮುಪಸ್ಥಿತೇ ।
ವದ ಸ್ವಾಧ್ಯಾಯಷಾಡ್ಗುಣ್ಯಂ ಕೃಚ್ಛ್ರೇ ತ್ವಂ ಕಾರ್ಯವಿತ್ತಮಃ ॥ ೨೦ ॥

॥ ಶುಕ ಉವಾಚ ॥

ಮಾ ಜೋಷಮಾಸ್ವ ಭೈಸ್ತಾತ ಅಸ್ಮಿನ್ಕಾಲೇ ಯಥೋಚಿತಂ ।
ಅಹಂ ಕರಿಷ್ಯೇ ತತ್ಸರ್ವಂ ಮಾ ವಿಷಾದೇ ಮನಃ ಕೃಥಾಃ ॥ ೨೧ ॥

ಏವಮಾಶ್ವಾಸ್ಯ ಪಿತರಂ ಸಮುಡ್ಡೀಯ ತತೋ ದ್ರುತಂ ।
ಧ್ರುವಾಖ್ಯಾಂ ದಿಶಮುದ್ವೀಕ್ಷ್ಯ ಉತ್ತರಾಭಿಮುಖೋ ಯಯೌ ॥ ೨೨ ॥

---

೧೯. "ಪುತ್ರನೇ (ಗಿಳೀ), 'ಮಗನಿಲ್ಲದವನಿಗೆ ಗತಿಯಿಲ್ಲ' ವೆಂಬುದು ಎಲ್ಲರ ನಿಶ್ಚಯವಾಗಿದೆ. ಈ ನಾವೆಯಲ್ಲಿರುವವರಲ್ಲಿ ನಾನೇ ಮಗನಿಲ್ಲದ ಪಾಪಿ. ಆದುದರಿಂದ ನನ್ನಿಂದ ಎಲ್ಲರಿಗೂ ತೊಂದರೆಯೆಂದು ಸಂಕಟಪಡುತ್ತೇನೆ.

೨೦. ಕಷ್ಟದಲ್ಲಿ ಮಾಡಬೇಕಾದ ಕಾರ್ಯವನ್ನು ಅರಿತವರಲ್ಲಿ ಉತ್ತಮನಾದ ನೀನು, ಕಷ್ಟವೊದಗಿರುವ ಈ ಕಾಲದಲ್ಲಿ ಏನುಮಾಡುವುದು ಉಚಿತವೆಂಬುದನ್ನು ನಿನ್ನ ಶಾಸ್ತ್ರಾಭ್ಯಾಸಬಲದಿಂದ ಷಡ್ಗುಣಯುಕ್ತವಾಗಿರುವಂತೆ ಹೇಳು." ಎಂದನು.

೨೧. ಗಿಣಿ—ತಂದೆ, ಹೆದರಬೇಡ. ಸುಖದಿಂದ ಸುಮ್ಮನಿರು. ಈಗ ಮಾಡಬೇಕಾದುದನ್ನೆಲ್ಲಾ ನಾನು ಮಾಡುವೆನು. ದುಃಖಕ್ಕೆ ಮನಗೊಡದಿರು.

೨೨. ಗಿಳಿ ಹೀಗೆ ತಂದೆಯಾದ ಗೋಕರ್ಣನನ್ನು ಸಮಾಧಾನಪಡಿಸಿ, ಬಳಿಕ ಬೇಗನೆ ಮೇಲೆಹಾರಿ, ಧ್ರುವನಕ್ಷತ್ರವಿರುವ ದಿಕ್ಕನ್ನು ನೋಡಿ, ಉತ್ತರಾಭಿಮುಖವಾಗಿ ಹೊರಟು ಹೋಯಿತು.

ನೀಚಗತ್ಯಾ ರಕ್ಷಯನ್ತ್ಯೈ ಸುತರಂ ದುಸ್ತರಂ ಜಲಂ |
ಸಾನೌ ಪರ್ವತಸಾವಿರ್ರಾಪ್ಯೇ ಯೋಜನೇನ ವರಂ ಗಿರಿಂ ॥ ೨೩ ॥

ರೋಮಾಂಚಿತತನುರ್ಜಾತಃ ಶುಕೋ ವೀಕ್ಷ್ಯ ಮಹಾಗಿರಿಂ |
ಕ್ರಮಿತ್ವೋರ್ಧ್ವಂ ಚ ಯಾತ್ಯಗ್ರಂ ತಾವದ್ದೇವಾಲಯಂ ಶುಭಂ ॥ ೨೪ ॥

ದೃಷ್ಟ್ವಾಂ ಚ ವಿಷ್ಣ್ವಾಯತನಂ ತೇಜಸಾ ಚೋಪಶೋಭಿತಂ |
ದಿಕ್ಷು ಸರ್ವಾಸ್ವಟಿತ್ವೈವಂ ನಿಲಿಲ್ಯೇ ದೇವಮಂದಿರೇ ॥ ೨೫ ॥

ವತ್ಸಾಯಂ ಕೋತ್ರಸಂಚಾರೀ ಕದಾ ಕಿಂತು ಪಿತಾಮಮ |
ವಿತರಿಷ್ಯತಿ ನೋ ಕಾಲಂ ದುರತಂ ಸುಕೃತಿರ್ಯಥಾ ॥ ೨೬ ॥

೨೩–೨೪. ಗಿಳಿ ಕೆಳಗಡೆಯೇ ಹಾರಿಹೋಗುತ್ತ ದುಸ್ತರವಾದ ನೀರನ್ನು ಒಂದು ಯೋಜನದಲ್ಲೇ ಸುಲಭವಾಗಿ ದಾಟಿ, ಪರ್ವತದ ತಪ್ಪಲಿನಲ್ಲಿ ಸೇರಿ, ಅಲ್ಲಿಂದ ಉತ್ತಮವಾದ ದೊಡ್ಡ ಪರ್ವತವೊಂದನ್ನು ನೋಡಿ, ದೇಹದಲ್ಲಿ ರೋಮಾಂಚನವುಳ್ಳದಾಯಿತು. ವೇಗದಿಂದ ಮುಂದೆ ಹೋಗಲು ಶುಭವಾದ ದೇವಾಲಯ.

೨೫. ಕಾಂತಿಯಿಂದೊಪ್ಪುವ ಆ ವಿಷ್ಣುದೇವಾಲಯವನ್ನು ನೋಡಿ ಅದನ್ನು ಎಲ್ಲಾ ದಿಕ್ಕುಗಳಲ್ಲೂ ಪ್ರದಕ್ಷಿಣವಾಗಿ ಸುತ್ತಿ ಬಳಿಕ ಆ ದೇವಾಲಯದ ಒಳಗೆ ಹೋಗಿ ಮರೆಯಲ್ಲಿದ್ದಿತು.

೨೬–೨೭. "ಅಪ್ಪಾ, ಇಲ್ಲಿ ಸಂಚರಿಸುವವರಾರು! ಪುಣ್ಯಶಾಲಿಯು ದುರಂತನಾದ ಯಮನಿಂದ ಪಾರಾಗುವಂತೆ ನಮ್ಮ ತಂದೆ ಈ ಕಷ್ಟಕಾಲದಿಂದ

ಕ್ಷಣಮೇಕಂ ತಥಾಚ್ಚೈನಂ ತಸ್ಯ ಚಿಂತಾನ್ವಿತಸ್ಯ ಹಿ ।
ಸೌವರ್ಣಪಾತ್ರಹಸ್ತಾ ಚ ದೇವೀ ದೇವಂ ಸಮರ್ಚಯೇತ್ ।
ನಮೋ ನಾರಾಯಣಾಯೋಕ್ತ್ವಾ ನಿಷಸಾದ ವರಾಸನೇ ॥ ೨೭ ॥

ನಿಮೇಷಾಂತರಮಾತ್ರೇಣ ವಯೋರೂಪಸಮನ್ವಿತಾಃ ।
ಅಸಂಖ್ಯಾತಾಃ ಸಮಾಯಾತಾಃ ಯಥಾದೇವೀ ತಥೈವ ತಾಃ ॥ ೨೮ ॥

ಗೀತಂ ವಾದ್ಯಂ ಚ ನೃತ್ಯಂ ಚ ಯಥಾಸೌಖ್ಯಂ ವಿಧೃತ್ಯ ಚ ।
ಗತಾಸ್ತಾ ದೇವತಾಃ ಸರ್ವಾಃ ಯಥಾಸ್ಥಾನಮನುತ್ತಮಂ ॥ ೨೯ ॥

ದೇವತಾದಕ್ಷಿಣೇ ಭಾಗೇ ಪಕ್ಷಿಣಾಂ ಚ ಜಟಾಯುಷಾಂ ।
ಲಕ್ಷಾಣ್ಯನೇಕಯೂಥಾನಿ ಬೃಹಂತಿ ಬಹುಸಂಘಶಃ ॥ ೩೦ ॥

ಎಂದು ಹೇಗೆ ಪಾರಾಗುವನು?!' ಎಂದು ಕ್ಷಣಕಾಲ ಚಿಂತಿಸುತ್ತಿರುವಲ್ಲಿ ಸುವರ್ಣದ ಪೂಜಾಪಾತ್ರೆಯನ್ನು ಕಯ್ಯಲ್ಲಿ ಹಿಡಿದುಕೊಂಡಿದ್ದ ದೇವಿಯೊಬ್ಬಳು ಆ ವಿಷ್ಣುದೇವನನ್ನು ಪೂಜಿಸಿದಳು. ಬಳಿಕ 'ನಮೋ ನಾರಾಯಣಾಯ (ನಾರಾಯಣನಿಗೆ ನಮಸ್ಕಾರ)' ಎಂದು ಹೇಳಿ ಉತ್ತಮವಾದ ಪೀಠದಲ್ಲಿ ಕುಳಿತುಕೊಂಡಳು.

೨೮–೨೯. ಆಮೇಲೆ ನಿಮಿಷಮಾತ್ರದಲ್ಲಿ ದೇವಿಯಂತೆಯೇ ಲೆಕ್ಕವಿಲ್ಲದಷ್ಟು ಜನ ಸುಂದರಿಯರಾದ ಯುವತಿಯರು ಅಲ್ಲಿಗೆ ಬಂದರು. ಅವರೆಲ್ಲರೂ ದೇವನನ್ನು ಪೂಜಿಸಿ, ಗೀತವಾದ್ಯ ನೃತ್ಯಗಳಿಂದ ಆನಂದವಾಗುವಂತೆ ವಿಹರಿಸಿ, ಉತ್ತಮವಾದ ತಮ್ಮೆಡೆಗೆ ಹೊರಟು ಹೋದರು.

೩೦. ದೇವರ ಬಲಗಡೆಯಲ್ಲಿ ಜಟಾಯುಪಕ್ಷಿಗಳು ಹಲವು ದೊಡ್ಡ ಗುಂಪಾಗಿ ಪರಸ್ಪರ ಮೈತ್ರಿಯಿಂದ ಇರುವುದು ಕಾಣಿಸಿತು.

ಶುಕೋ ಲೇಖ್ಯಸಮಸ್ತೇಷಾಂ ಮಧ್ಯೇ ಕೃತ್ವಾ ತು ಸಂವಿದಂ ।
ಸ್ವಭಾಷಾಂ ಪುರತಃ ಕೃತ್ವಾ ಶರಣಂ ತಮಯಾಚತ ॥ ೩೧ ॥

ತೇ ಸಮಾಶ್ವಾಸ್ಯ ತಂ ಪ್ರಾಹುಃ ಕಥಮಸ್ಮಿನ್ ಭವಾನ್ ಗತಃ ।
ವಾರಿರಾಶಿರ್ದುರಾಧರ್ಷಃ ಸಮುದ್ರೋ ಝುಷಸಂಕುಲಃ ॥ ೩೨ ॥

ಶುಕಸ್ತಾನ್ ಪ್ರತ್ಯುವಾಚಾಥ ಪಿತಾ ಮೇ ಪೋತಸಂಸ್ಥಿತಃ ।
ದುರ್ಗವಾತಾದ್ದುರ್ಗಮಸ್ಥೋ ವಿಷಮೇ ಸಮುಪಸ್ಥಿತೇ ॥ ೩೩ ॥

ತಸ್ಯ ತ್ರಾಣಮಭೀಪ್ಸನ್ಸ್ವೈ ಹ್ಯಾಗತೋತ್ರ ವರಂಗಿರಿಂ ।
ಕುರುಧ್ವಂ ತಸ್ಯ ಮೇ ತ್ರಾಣಂ ಯಥಾಸುಖಮವಾಪ್ಯತೇ ॥ ೩೪ ॥

---

೩೧ ಆ ಗಿಳಿಯು ಅವುಗಳ ನಡುವೆ ಒಂದು ಲೇಖನ ಅಥವಾ ಚಿತ್ರದಂತೆ ಹೋಗಿ, ತನ್ನ ಮಾತನ್ನು ಆರಂಭಿಸಿ, ಸಂಭಾಷಣಮಾಡಿ, ಅವುಗಳಿಂದ ರಕ್ಷಣೆಯನ್ನು ಬೇಡಿತು

೩೨. ಅವು ಅದನ್ನು ಸಮಾಧಾನಗೊಳಿಸಿ, " ಮೀನುಗಳಿಂದ ತುಂಬಿರುವ ಈ ಸಾಗರವು ದಾಟಲು ಕಷ್ಟವಾಗಿದೆ. ಆದರೂ ನೀನು ಇಲ್ಲಿಗೆ ಹೇಗೆ ಬಂದೆ ? " ಎಂದು ಕೇಳಿದುವು.

೩೩–೩೪. ಬಳಿಕ ಗಿಳಿ ಅವುಗಳನ್ನು ಕುರಿತು, " ಹಡಗಿನಲ್ಲಿರುವ ನನ್ನ ತಂದೆಗೆ ವಿರೋಧವಾದ ಬಿರುಗಾಳಿಯಿಂದ ಕಷ್ಟವೊದಗಿ ಪ್ರಯಾಣಮಾಡಲಾರದೆ ಸಂಕಟದಲ್ಲಿರುವನು. ಅವನ ರಕ್ಷಣೆಯನ್ನು ಬಯಸಿ ಈ ವರಗಿರಿಗೆ ಬಂದೆನು. ನನ್ನ ತಂದೆಯಾದ ಅವನು ಸುಖವನ್ನು ಪಡೆಯುವಂತೆ ನೀವು ರಕ್ಷಣೆಯನ್ನು ಮಾಡಿರಿ " ಎಂದು ಬೇಡಿತು.

|| ಪಕ್ಷಿಣ ಊಚುಃ ||

ಏಹಿ ಪುತ್ರ ಸುಕಾರ್ಯಂತೇ ಮಾರ್ಗಂ ದ್ರಕ್ಷ್ಯಾಮಹೇ ವಯಂ ।
ಪ್ರೋತಾಭ್ಯಾಸಗತಿಂ ಯಾಸಿ ಪಿತುಸ್ತ್ವ ಗತಿಂ ಪ್ರತಿ || ೩೫ ||

ಮನ್ಯೈವ ಪಾದವಿನ್ಯಾಸೇ ಕ್ರಮಯಿಷ್ಯೇ ಯಥಾಜಲಂ ।
ತೇನ ತೇ ಪೃಷ್ಠತೋ ಮಹ್ಯಂ ಸಹಿತಾ ಸಂತರಿಷ್ಯತೇ || ೩೬ ||

ಮಮ ಚಂಚ್ವಾವಗಾಹೇನ ನಕ್ಷ್ಯಂತಿ ಜಲಜಂತವಃ || ೩೭ ||

ಏತತ್ಪಿತುಃ ಸಮಕ್ಷಂ ಹಿ ಶಂಸರ್ಸ ಕ್ಷಿಪ್ರಂ ನದೀಪತಿಂ ।
ತಾರಯಾಮಾಸ ವೇಗೇನ ಗತ್ವಾ ಪೃಷ್ಠಂ ಜಟಾಯುಷಃ || ೩೮ ||

---

೩೫. ಹಕ್ಕಿಗಳು—ಮಗನೇ, ಬಾ. ನಿನ್ನ ಕೆಲಸವು ಒಳ್ಳೆಯದು. ನಿನ್ನ ತಂದೆಯ ರಕ್ಷಣೆ ಅಥವಾ ಗಮನಕ್ಕಾಗಿ ನಾವು ದಾರಿಯನ್ನು ನೋಡುತ್ತೇವೆ. ನೀನು ಹಡಗಿನ ಸಮೀಪಕ್ಕೆ ಹೋಗುವೆ.

೩೬–೩೭. ಅವುಗಳಲ್ಲಿ ಒಂದು ಜಟಾಯುವು “ ನಾನು ಹೆಜ್ಜೆಯನ್ನಿಟ್ಟು, ನೀರಿನಮೇಲೆ ಮುಂದೆ ಮುಂದೆ ಬರುತ್ತಿರುವಾಗ ನನ್ನ ಹಿಂದೆಯೇ ನನ್ನ ಹೆಜ್ಜೆಯಲ್ಲಿ ನಡೆದು ನಿನ್ನ ತಂದೆ ಸಾಗರವನ್ನು ದಾಟುವನು. ನಾನು ಕೊಕ್ಕನ್ನು ನೀರಲ್ಲಿ ಮುಳುಗಿಸುವುದರಿಂದ ಜಲಜಂತುಗಳು ನಮ್ಮನ್ನು ನಾಶ ಮಾಡುವುದಿಲ್ಲ. ” ಎಂದು ಹೇಳಿತು.

೩೮. ಗಿಳಿ ಜಟಾಯುವಿನೊಡನೆ ಹಡಗಿನಲ್ಲಿದ್ದ ತಂದೆಯಾದ ಗೋಕರ್ಣನ ಹತ್ತಿರಕ್ಕೆ ಬೇಗನೆ ಹೋಗಿ ಅವನಿಗೆ ಆ ಮಾತನ್ನು ಹೇಳಿ, ಜಟಾಯುವಿನ ಹಿಂದೆ ನಡೆಯುವಂತೆ ಮಾಡಿ, ಸಮುದ್ರವನ್ನು ದಾಟಿಸಿತು.

ಸ ಯಯೌ ಪರ್ವತಂ ಶೀಘ್ರಂ ಕ್ವಚಿನ್ನಾಭಿಸಮಂ ಜಲಂ ।
ಹೃತ್ಕಂಠಂ ಚೈವ ಗಂಭೀರಂ ಸುಖೇನ ಸುಕೃತೀ ಯಥಾ ॥ ೩೯ ॥

ಸ್ತೋಕಾಂತರೇ ತತಃ ಸೋಥ ದೇವಾಗಾರಮನುತ್ತಮಂ ।
ಸರೋವರಂ ಚ ಪದ್ಮಾಢ್ಯಂ ಮಣಿರತ್ನವಿಭೂಷಿತಂ ॥ ೪೦ ॥

ಸ್ನಾತ್ವಾ ದೇವಾನ್ ಪಿತ್ರ್ಯಾಂಶ್ಚೈವ ತರ್ಪಯಿತ್ವಾ ಯಥಾಸುಖಂ ।
ಪುಷ್ಪಾಣ್ಯಾದಾಯ ದೇವಂಚ ಪೂಜಯಿತ್ವಾ ಸ ಕೇಶವಂ ॥ ೪೧ ॥

ಪಂಚಾಯತನಕಂ ಚೈವ ಖಚಿತಂ ರತ್ನಸಂಚಯೈಃ ।
ದೃಷ್ಟ್ವಾ ನಿಲಿಲ್ಯೇ ಚೈಕಾಂತೇ ಶುಕಸ್ಯಾನುಮತೇ ಸ್ಥಿತಃ ॥ ೪೨ ॥

---

೩೯. ಗೋಕರ್ಣನು, ಸುಕೃತಿಯಾದವನು ಸಂಸಾರಸಾಗರವನ್ನು ದಾಟುವಂತೆ ಕೆಲವೆಡೆಗಳಲ್ಲಿ ಹೊಕ್ಕಳವರೆಗೆ ನೀರು ಬರುವಷ್ಟು ಆಳವೂ, ಮತ್ತೆ ಕೆಲವುಕಡೆ ಎದೆ ಮತ್ತು ಕತ್ತಿನವರೆಗೆ ಬರುವಷ್ಟು ಆಳವೂ ಆದ ಸಮುದ್ರವನ್ನು ಸುಖದಿಂದ ದಾಟಿ, ಗಿಳಿ ಮೊದಲು ಹೋಗಿದ್ದ ಪರ್ವತಕ್ಕೆ ಹೋದನು.

೪೦. ಬಳಿಕ ಗೋಕರ್ಣನು ಸ್ವಲ್ಪದೂರದಲ್ಲಿಯೇ ರತ್ನಾಲಂಕೃತವಾದ ಅತಿಶ್ರೇಷ್ಠವಾದ ದೇವಾಲಯವನ್ನೂ, ಕಮಲಗಳಿಂದ ತುಂಬಿದ ಸರೋವರವನ್ನೂ ಕಂಡನು.

೪೧–೪೨. ಆ ಸರೋವರದಲ್ಲಿ ಅವನು ಸ್ನಾನಮಾಡಿ, ಸುಖದಿಂದ ದೇವತೆಗಳನ್ನೂ, ಪಿತೃಗಳನ್ನೂ ತರ್ಪಣಾದಿಗಳಿಂದ ತೃಪ್ತಿಪಡಿಸಿ, ಹೂಗಳನ್ನು ಕೊಯ್ದುಕೊಂಡು, ಕೇಶವದೇವನನ್ನು ಪೂಜಿಸಿ, ರತ್ನಖಚಿತವೂ, ವಿಸ್ತಾರವೂ, ಆದ ಆ ದೇವಾಲಯವನ್ನು (ಅಥವಾ ಪಂಚಾಯತನಮೂರ್ತಿಯನ್ನು) ನೋಡಿ, ಗಿಳಿ ಹೇಳಿದಂತೆ ಮರೆಯಲ್ಲಿ ನಿಂತಿದ್ದನು.

ಕ್ಷಣೇನ ತಾ ಯಥಾಪೂರ್ವಂ ದೇವತಾಶ್ಯಾಗತಾಃ ಪುನಃ ।
ನರ್ತಯಿತ್ವಾ ಯಥಾಯೋಗ್ಯಂ ತಾಸಾಂ ಜ್ಯೇಷ್ಠಾಬ್ರವೀದಿದಂ ॥ ೪೩ ॥

ಸ್ವಾಗತಸ್ಯ ಕ್ಷುಧಾರ್ತಸ್ಯ ಬ್ರಹ್ಮಿಷ್ಠಸ್ಯ ಮಹಾತ್ಮನಃ ।
ಭೋಜನಾರ್ಥಂ ಫಲಂ ದಿವ್ಯಂ ಪಾನಾರ್ಥಂ ತೋಯಮುತ್ತಮಂ ॥ ೪೪ ॥

ಗೋಕರ್ಣಸ್ಯ ಪ್ರಯಚ್ಛಧ್ವಂ ಯೇನ ತೃಪ್ತಿಸ್ತ್ರಿಮಾಸಿಕೀ ।
ಯಥಾ ಶೋಕೋ ಯಥಾ ಪಾಪಂ ಯಥಾ ಮೋಹಃ ಪ್ರಣಶ್ಯತಿ ॥ ೪೫ ॥

ತಥಾ ಕೃತ್ವಾ ತಮೂಚುಸ್ತಾ ಅಭಯಂ ತೇಸ್ತು ಮಾ ಶುಚಃ ।
ವಸ ಸ್ವರ್ಗೋಪಮೇ ಸ್ಥಾನೇ ಯಾವತ್ಸಿದ್ಧಿರ್ಭವೇತ್ತದಾ ॥ ೪೬ ॥

ಗತಸ್ತಾಃ ಪುನರೇವಂ ಚ ನಿತ್ಯಮೇವ ದಿನೇ ದಿನೇ ।
ವಸತೇ ಸ ಸುಖಂ ತತ್ರ ಮಧುರಾಯಾಂ ಯಥಾ ತಥಾ ॥ ೪೭ ॥

---

೪೩. ಸ್ವಲ್ಪಕಾಲದಲ್ಲೇ ಹಿಂದಿನಂತೆ ಆ ದೇವಿಯರು ಮತ್ತೆ ಅಲ್ಲಿಗೆ ಬಂದರು. ಅವರು ತಕ್ಕಂತೆ ನರ್ತನಮಾಡಿದ ಬಳಿಕ ಅವರಲ್ಲಿ ಹಿರಿಯುವಳು ಇತರರಿಗೆ ಹೀಗೆ ಹೇಳಿದಳು.

೪೪–೪೫ "ಸುಖಾಗತನೂ, ಹಸಿವಿನಿಂದ ಪೀಡಿತನೂ, ಪರಮಾತ್ಮ ಭಕ್ತನೂ, ಮಹಾತ್ಮನೂ ಆದ ಗೋಕರ್ಣನಿಗೆ ಮೂರುತಿಂಗಳಕಾಲ ತೃಪ್ತಿ ಯಾಗುವಂತೆಯೂ, ಅವನ ದುಃಖವೂ, ಪಾಪವೂ, ಮೋಹವೂ ನಾಶವಾಗು ವಂತೆಯೂ ತಿನ್ನಲು ಹಣ್ಣುಕಾಯಿಗಳನ್ನೂ, ಕುಡಿಯಲು ಒಳ್ಳೆಯ ನೀರನ್ನೂ ಕೊಡಿ."

೪೬. ಅವರು, ಅವಳು ಹೇಳಿದಂತೆಯೇ ಮಾಡಿ, "ನೀನು ಭಯಪಡ ಬಾರದು ದುಃಖಿಸಬೇಡ. ಸ್ವರ್ಗದಂತಿರುವ ಈ ಎಡೆಯಲ್ಲಿ ನಿನಗೆ ಸಿದ್ಧಿಯಾಗು ವವರೆಗೂ ಇರು" ಎಂದು ಅವನಿಗೆ ಹೇಳಿದರು.

೪೭. ಬಳಿಕ ಆ ದೇವಿಯರು ಹೊರಟು ಹೋದರು. ನಿತ್ಯವೂ ಹಾಗೆಯೇ ದೇವಾಲಯದಲ್ಲಿ ಅವರಿಂದ ಪೂಜೆಯೂ, ನೃತ್ಯಾದಿಗಳೂ ನಡೆಯುತ್ತಿದ್ದುವು. ಗೋಕರ್ಣನು ಮಧುರೆಯಂತೆಯೇ ಅಲ್ಲಿಯೂ ಸುಖದಿಂದ ವಾಸಿಸುತ್ತಿದ್ದನು.

ಪೋತಸ್ತಸ್ಮಾದುತ್ತತಾರ ಸುವಾತೇನೋಪವಾಹಿತಃ ।
ರತ್ನಾಕರಃ ಶುಭೋ ಯತ್ರ ಭಾವಿತ್ವಾದ್ದೈವ ಯೋಗತಃ ॥ ೪೮ ॥

ರತ್ನಾನಿ ಬಹುಮೌಲ್ಯಾನಿ ಆಹೃತಾನಿ ಬಹೂನ್ಯಥ ।
ಯಾವತ್ಪರೀಕ್ಷಣಾರ್ಥಂ ಚ ಗೋಕರ್ಣಂ ರತ್ನಕೋವಿದಂ ॥
ನಿರೀಕ್ಷ್ಯತೇಽಸ್ಯ ಸಂವಾಸೋ ನ ದೃಷ್ಟಶ್ಚುಕ್ರುಶುಸ್ತತಃ ॥ ೪೯ ॥

ಕುತೋಽಸೌ ಗತವಾನ್ಭದ್ರೋ ಮೃತೋ ನಷ್ಟೋ ಜಲೇಪ್ಲುತಃ ।
ವ್ರೀಡಾಯುತೋ ನಿಮಗ್ನೋಽಯಂ ನಿಶ್ಚಿತಂ ಮಕರಾಲಯೇ ॥ ೫೦ ॥

ಪಿತುರಸ್ಯ ವಯಂ ಸರ್ವೇ ಪುತ್ರವದ್ವಿಚರಾಮಹೇ ।
ಯಥಾಭಾಗಂ ಚ ರತ್ನಾನಾಂ ಭಾಗಂ ದಾಸ್ಯಮಹೇ ಪರಂ ॥ ೫೧ ॥

ಏಷ ಧರ್ಮಃ ಸದಾಸ್ಮಾಕಮೇಕಸಾರ್ಥಾಗಮೇನ ಹಿ ॥ ೫೨ ॥

---

೪೮. ಇತ್ತ ಹಡಗು, ಅನುಕೂಲವಾದ ಗಾಳಿ ತಳ್ಳಲಾಗಿ ದೈವ ಯೋಗದಿಂದ ಮುಂದೆ ಒಳ್ಳೆಯದಾಗಬೇಕಾಗಿದ್ದುದರಿಂದ ಶುಭವಾದ ರತ್ನದ ಗಣಿಯಿದ್ದೆಡೆಗೇ ಹೋಗಿ ಸೇರಿತು.

೪೯. ಹಡಗಿನಲ್ಲಿದ್ದವರು ಹೆಚ್ಚಾದ ಬೆಲೆಯುಳ್ಳ ಬೇಕಾದಷ್ಟು ರತ್ನಗಳನ್ನು ತಂದು ಹಡಗಿಗೆ ತುಂಬಿಕೊಂಡು ಬಳಿಕ ಅದನ್ನು ಪರೀಕ್ಷಿಸಲು ರತ್ನಪರೀಕ್ಷೆಯಲ್ಲಿ ನಿಪುಣನಾದ ಗೋಕರ್ಣನನ್ನು ಹಡಗಿನಲ್ಲಿ ಹುಡುಕಿ, ಅವನಿರುವುದನ್ನು ಕಾಣದೆ ಅವನಿಗಾಗಿ ಅತ್ತರು.

೫೦. "ಅಯ್ಯೋ ಆ ಮಂಗಳಕರನು ಎಲ್ಲಿ ಹೋದನೋ ! ನೀರಲ್ಲಿ ಮುಳುಗಿ ಸತ್ತುಹೋದನು ! ಅವನು ನಾಚಿಕೊಂಡು ನಿಶ್ಚಿಂತನಾಗಿ ಸಮುದ್ರದಲ್ಲಿ ಮುಳುಗಿ ಹೋದನು.

೫೧-೫೨. ಅವನ ತಂದೆಗೆ ನಾವೆಲ್ಲರೂ ಮಕ್ಕಳಂತೆ ನಡೆದುಕೊಳ್ಳೋಣ, ನಮಗೆ ದೊರೆತಿರುವ ರತ್ನಗಳಲ್ಲಿ ಅವನಿಗೆ ಬರಬೇಕಾದುದಕ್ಕಿಂತಲೂ ಹೆಚ್ಚು ಭಾಗವನ್ನೇ ಅವರ ತಂದೆಗೆ ಕೊಡೋಣ. ಯಾವಾಗಲೂ ಒಂದು ಸಂಘವಾಗಿ ಬಂದ ನಮಗೆ ಇದು ಧರ್ಮವಾಗಿದೆ." ಎಂದು ಮಾತನಾಡಿಕೊಂಡರು.

ಏವಂ ವಸನ್ಸ ಗೋಕರ್ಣೋ ದ್ವೀಪಸ್ಥಃ ಶೋಕವಿಹ್ವಲಃ ।
ಶುಕಂ ಪ್ರೋವಾಚ ದೀನಾತ್ಮಾ ಮಾತಾಪಿತ್ರೋಃ ಕೃತೇತದಾ ॥ ೫೩ ॥

ಶುಕೇನ ಮಂತ್ರಮಾಲೋಚ್ಯ ತ್ವಾತ್ಪಿತುರೇವಂ ನಿವೇದಿತಂ ।
ಅಹಂ ಪಕ್ಷೀ ಲಘುತನುರ್ಭವಂತಂ ನೇತುಮಕ್ಷಮಃ ॥ ೫೪ ॥

ಯಾತಾಸ್ಮಿ ಮಧುರಾಂ ಮಾರ್ಗೇ ಸಮುದ್ರೇ ಜಲಮಾಲಿನಿ ।
ಪಿತ್ರೋರ್ವಾರ್ತಾಂ ತವಾಖ್ಯಾಸ್ಯೇ ತ್ವದೀಯಾಂಚ ತಯೋರಹಂ ॥
ಆವಶ್ಯಂ ಚ ಗಮಿಷ್ಯೇಹಂ ಅನುಜ್ಞಾ ತು ಪ್ರದೀಯತಾಂ ॥ ೫೫ ॥

ಸತ್ಯಮುಕ್ತಂ ತತಸ್ತೇನ ಗೋಕರ್ಣೇನ ಶುಕಂ ಪ್ರತಿ ।
ಗಚ್ಛ ತ್ವಂ ಪುತ್ರ ಮಧುರಾಮವಸ್ಥಾಂ ಮಾಮಕೀಮಿಮಾಂ ॥
ತ್ವಯಾ ವಿನಾ ನ ಶಕ್ನೋಮಿ ಶೀಘ್ರಮಾಗಮನಂ ಕುರು ॥ ೫೬ ॥

---

೫೩. ಅತ್ತಕಡೆ, ದ್ವೀಪದಲ್ಲಿ ವಾಸಮಾಡುತ್ತಿದ್ದ ಗೋಕರ್ಣನು ದುಃಖಪೀಡಿತನೂ, ದೀನಾತ್ಮನೂ ಆಗಿ ಗಿಳಿಯೊಡನೆ ತನ್ನ ತಾಯಿತಂದೆಗಳ ವಿಚಾರವಾಗಿ ಮಾತನಾಡಿದನು.

೫೪–೫೫. ಗಿಳಿಗೆ ಸರಿಯಾದ ಮಂತ್ರಾಲೋಚನೆಯು ತಿಳಿಯದುದರಿಂದ ಅದು ತಂದೆಯಾದ ಗೋಕರ್ಣನಿಗೆ " ನಾನು ಚಿಕ್ಕಹಕ್ಕಿ, ನಿನ್ನನ್ನು ಮೇಲೆ ಏರಿಸಿಕೊಂಡು ಹೋಗಲಶಕ್ತನು. ಸಮುದ್ರದಮೇಲೆ ಮಧುರೆಗೆ ಹೋಗುತ್ತೇನೆ. ನಿನ್ನ ಮಾತನ್ನು ನಿನ್ನ ತಾಯಿತಂದೆಗಳಿಗೂ ಅವರ ಮಾತನ್ನು ತಂದು ನಿನಗೂ ಹೇಳುವೆನು. ಅವಶ್ಯವಾಗಿ ಹೋಗುವೆನು. ನನಗೆ ಅಪ್ಪಣೆಯನ್ನು ಕೊಡು." ಎಂದು ಬಿನ್ನಯಿಸಿತು.

೫೬. ಬಳಿಕ ಗೋಕರ್ಣನು ಗಿಳಿಗೆ–" ಮಗನೇ, ನೀನು ಮಧುರೆಗೆ ಹೋಗಿ ನನ್ನ ಈ ಸ್ಥಿತಿಯನ್ನು ತಾಯಿತಂದೆಗಳಿಗೆ ಹೇಳು. ನಿನ್ನನ್ನು ಬಿಟ್ಟು ನಾನಿರಲಾರೆನು. ಆದುದರಿಂದ ನೀನು ಬೇಗನೆ ಹಿಂದಿರುಗಿ ಬಾ." ಎಂದು ನಿಷ್ಕರ್ಷೆಯಾಗಿ ಹೇಳಿದನು.

ಇತ್ಯುಕ್ತಃ ಸ ತಥೇತ್ಯುಕ್ತ್ವಾ ಪ್ರೋತಾರೂಢಃ ಖಗೋತ್ತಮಃ ।
ಕಾಲೇನ ಮಧುರಾಂ ಪ್ರಾಪ್ತಃ ಸರ್ವಂ ಪಿತ್ರೇ ನ್ಯವೇದಯತ್ ॥ ೫೭ ॥

ಶ್ರುತ್ವಾ ತೌ ವಿಷಮಾವಸ್ಥಂ ಮೃತಂ ಹೃದಿ ನಿವೇಶ್ಯ ಚ ।
ರುದಿತ್ವಾ ಸುಚಿರಂ ಕಾಲಂ ಶುಕೇ ಸ್ನೇಹೋ ನಿವೇಶಿತಃ ॥ ೫೮ ॥

ಅಸ್ಮಾಕಂ ಜೀವನಾರ್ಥಾಯ ತ್ವಯಾ ಕಾರ್ಯಂ ವಿಹಂಗಮ ।
ಕಥಾಭಿರನುಕೂಲಾಭಿರ್ಧರ್ಮದರ್ಶಿಭಿರೇವ ಚ ॥ ೫೯ ॥

ಶುಕೇನ ಪಂಜರಸ್ಥೇನ ಕಥಾಲಾಪೇನ ವಿದ್ಯಯಾ ।
ಪುತ್ರಶೋಕಾಭಿಸಂತಪ್ತೌ ತಥೈವಾನೇನ ಸಾಂತ್ವಿತೌ ॥ ೬೦ ॥

---

೫೭. ಗೋಕರ್ಣನು ಹಾಗೆ ಹೇಳಲು ಒಳ್ಳೆಯದಾದ ಗಿಳಿ ಹಾಗೆಯೇ ಆಗಲೆಂದು ಹೇಳಿ ಹೊರಟು ಮಧುರೆಗೆ ತಕ್ಕ ಕಾಲದಲ್ಲಿ ಸೇರಿ, ಎಲ್ಲವನ್ನೂ ಅವನ ತಂದೆಗೆ ತಿಳಿಸಿತು.

೫೮. ತಾಯಿತಂದೆಗಳಾದ ಅವರು ಗೋಕರ್ಣನು ಕಷ್ಟದ ಸ್ಥಿತಿಯಲ್ಲಿರುವುದನ್ನು ಕೇಳಿ, ಅವನು ಸತ್ತುಹೋದನೆಂದೇ ಮನಸ್ಸಿನಲ್ಲಿಟ್ಟುಕೊಂಡು, ಬಹಳ ಹೊತ್ತು ಅತ್ತು ಬಳಿಕ ಗಿಳಿಯಲ್ಲಿ ವಾತ್ಸಲ್ಯವನ್ನಿಟ್ಟರು.

೫೯. "ಗಿಳಿ, ನಾವು ಜೀವಿಸಿರುವುದಕ್ಕಾಗಿ ನೀನು ಧರ್ಮ ಬೋಧಕವಾಗಿಯೂ, ಕೇಳಲು ಹಿತವಾಗಿಯೂ ಇರುವ ಕಥೆಗಳನ್ನು ನಮಗೆ ಹೇಳಬೇಕು." ಎಂದರು.

೬೦. ಆ ಗಿಳಿ ಪಂಜರದಲ್ಲಿದ್ದುಕೊಂಡು, ಅವರು ಹೇಳಿದಂತೆಯೇ ಪುತ್ರಶೋಕಪೀಡಿತರಾದ ಅವರನ್ನು ತನ್ನ ವಿದ್ಯೆಯಿಂದ ಕಥೆ ಹೇಳಿ ಸಮಾಧಾನ ಪಡಿಸುತ್ತಿದ್ದಿತು.

ಅಥ ಸಾರ್ಥಃ ಸಮಾಯಾತೋ ರತ್ನಪೂರ್ಣೋ ಯಥೋದಧಿಃ ।
ಸಸುಕರ್ಣಸ್ಯ ಪುತ್ರಾರ್ಥಂ ಅಕರೋತ್ ಸ ಜನೋ ಮಹಾ ॥ ೬೧ ॥

ಸರ್ವೈಸ್ತೈರ್ವಿಂಶತಿಃ ಸಂಖ್ಯಾ ಏಕೈಕೇನ ಸಮುದ್ರಗೈಃ ।
ರತ್ನೈಃ ಸಮರ್ಚಿತೋತ್ಯರ್ಥಂ ಪರ್ವತಃ ಕುಸುಮೋತ್ಕರೈಃ ॥ ೬೨ ॥

ಪ್ರಸಾದ್ಯ ಸರ್ವೇ ಸಂಪೂಜ್ಯ ಪ್ರೇಷಿತಾಸ್ತೇ ಗೃಹಂ ಯಯುಃ ॥ ೬೩ ॥

ಏವಂ ತೇ ನ್ಯವಸಂಸ್ತತ್ರ ಯಾವತ್ಕಾಲಂ ಸುಖೇನ ತು ।
ಶುಶ್ರೂಷಮಾಣಾಸ್ತಂ ವೈಶ್ಯಂ ಯಥಾಸ್ವಪಿತರಂ ತಥಾ ॥ ೬೪ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಗೋಕರ್ಣಮಾಹಾತ್ಮ್ಯೇ
ಏಕಸಪ್ತತ್ಯಧಿಕಶತತಮೋಽಧ್ಯಾಯಃ

೬೧–೬೨. ಬಳಿಕ ಹಡಗಿನಲ್ಲಿ ಹೋಗಿದ್ದ ವಣಿಜರ ಗುಂಪು ರತ್ನಪೂರ್ಣವಾದ ಸಮುದ್ರದಂತೆ ಮಥುರೆಗೆ ಬಂದಿತು. ವಾಣಿಜ್ಯಕ್ಕೆ ಸಮುದ್ರದ ಮೇಲೆ ಹೋಗಿದ್ದ ಒಳ್ಳೆಯ ಮನುಷ್ಯನೊಬ್ಬೊಬ್ಬನೂ ತನ್ನ ಪಾಲಿಗೆ ಬಂದಿದ್ದ ರತ್ನಗಳಲ್ಲಿ ಇಪ್ಪತ್ತು ರತ್ನಗಳಿಂದ ವಸುಕರ್ಣನನ್ನು ಗೋಕರ್ಣನ ಪರವಾಗಿ ಪರ್ವತವನ್ನು ಹೂಗಳಿಂದ ಪೂಜಿಸುವಂತೆ ಪೂಜಿಸಿದನು.

೬೩. ಎಲ್ಲರೂ ಪೂಜಿಸಿ, ಸಂತೋಷಪಡಿಸಿ, ಅವನಿಂದ ಕಳುಹಿಸಿಕೊಂಡು ತಂತಮ್ಮ ಮನೆಗೆ ಹೊರಟು ಹೋದರು.

೬೪. ಆಮೇಲೂ ಗೋಕರ್ಣನ ಜತೆಯು ಅವರೆಲ್ಲರೂ ವೈಶ್ಯನಾದ ಆ ವಸುಕರ್ಣನನ್ನು ತಮ್ಮ ತಂದೆಯಂತೆ ಉಪಚರಿಸುತ್ತ ಯಾವಾಗಲೂ ಸುಖದಿಂದ ಮಥುರೆಯಲ್ಲಿ ವಾಸಮಾಡುತ್ತಿದ್ದರು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಗಿಳಿ ಮತ್ತು ಗೋಕರ್ಣನ ಮುಂದಿನ ಕಥೆಯನ್ನು ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

ದ್ವಿಸಪ್ತತ್ಯಧಿಕಶತತಮೋಧ್ಯಾಯಃ

॥ ಶ್ರೀವರಾಹ ಉವಾಚ ॥

ಗೋಕರ್ಣಸ್ತು ತಥಾ ಚಕ್ರೇ ತಸ್ಮಿನ್ನಾಯತನೇ ಶುಭೇ ।
ಪ್ರಥಮೇಹ್ನಿ ಯಥಾ ಕೃತ್ಯಮೇವಮೇವ ತ್ರಯೋದಶ ॥ ೧ ॥

ತಾ ದೇವ್ಯೋ ನೃತ್ಯಗೀತೇಷು ಕುಶಲಾಶ್ಚಾಂಗನಾ ಭವನ್ ।
ಸುರೂಪಾಶ್ಚ ಸ್ವಲಂಕಾರಾ ರಮಯಂತಿ ದಿನೇ ದಿನೇ ॥
ಗೋಕರ್ಣಃ ಸರ್ವಭಾವೇನ ಗೃಹಂ ವಿಸ್ಮೃತವಾನಸೌ ॥ ೨ ॥

ತಥೈಕದಾ ಸ ಗೋಕರ್ಣಸ್ತಾ ದೇವ್ಯಶ್ಚ ಹತೌಜಸಃ ।
ವಿವರ್ಣವದನಾ ದೀನಾ ಭಗ್ನಾಲಂಕಾರವಾಸಸಃ ॥ ೩ ॥

ನೂರ ಎಪ್ಪತ್ತೆರಡನೆಯ ಅಧ್ಯಾಯ

೧. ಶ್ರೀವರಾಹ–ಗೋಕರ್ಣನು ಆ ಶುಭದೇವಾಲಯದಲ್ಲಿ ಮೊದಲನೆಯ ದಿನದಂತೆಯೇ ಹದಿಮೂರು ದಿನಗಳು ಸೇವಾದಿಗಳನ್ನು ಮಾಡಿದನು.

೨. ರೂಪವತಿಯರೂ, ನೃತ್ಯಗೀತಗಳಲ್ಲಿ ಕುಶಲರೂ ಚೆನ್ನಾಗಿ ಸಿಂಗರಿಸಿಕೊಂಡವರೂ ಆದ ದೇವಿಯರು ನಿತ್ಯವೂ ದೇವನನ್ನು ಸೇವಿಸಿ, ಗೋಕರ್ಣನನ್ನೂ ಆದರಿಸಿ ಸಂತೋಷಪಡಿಸುತ್ತಿದ್ದರು. ಆ ಗೋಕರ್ಣನು ಎಲ್ಲಾ ವಿಚಾರಗಳಲ್ಲೂ ತನ್ನ ಮನೆಯನ್ನು ಮರೆತನು.

೩–೪. ಬಳಿಕ ಒಂದುದಿನ ಆ ಗೋಕರ್ಣನೂ, ಆ ದೇವಿಯರೂ ತೇಜೋಹೀನರೂ, ವಿವರ್ಣಮುಖರೂ, ದೀನರೂ, ಒಳ್ಳೆಯ ಉಡಿಗೆ ತೊಡಿಗೆಗಳಿಲ್ಲದವರೂ,

ಕೃಶಾಂಗಾ ಲುಂಚಿತಶಿರಃಕೇಶಪಕ್ಷ್ಮನಖಾದಯಃ ।
ದೃಶ್ಯಂತೇ ವಿಕೃತಾಕಾರಾಃ ಸವ್ರಣಾ ರುಧಿರಸ್ರವಾಃ ॥ ೪ ॥

ತಾ ದೃಷ್ಟ್ವಾsತೀವ ದುಃಖಾರ್ತಶ್ಚಕ್ರೇ ಮನಸಿ ವೇದನಾಂ ।
ಅಪುತ್ರಸ್ಯ ಗತಿರ್ನಾಸ್ತಿ ಸ್ವರ್ಗೋ ನೈವ ಚ ನೈವ ಚ ॥ ೫ ॥

ಮಮ ಸಂಗಾದಿಮಾ ದೇವ್ಯೋ ದಶಮೀಂ ಚ ದಶಾಂ ಗತಾಃ ।
ಏವಂ ಜ್ಞಾತ್ವಾ ಸ ಪಪ್ರಚ್ಛ ತಾಸಾಂ ರೂಪವಿಪರ್ಯಯಂ ॥ ೬ ॥

ಕಥಯಧ್ವಂ ಮಹಾಭಾಗಾಃ ಕಿಮೇತದ್ರೂಪವ್ಯತ್ಯಯಂ ॥ ೭ ॥

॥ ದೇವ್ಯ ಊಚುಃ ॥

ಅಪ್ರಷ್ಟವ್ಯಂ ಮಹಾಭಾಗೆ ದೈವಃ ಸರ್ವೇಷು ಕಾರಣಂ ।
ಕಾಲಾತ್ಮಕಃ ಸ ಭಗವಾನ್ಭುಜ್ಯತೇ ಸುಕೃತಂ ಯತಃ ॥ ೮ ॥

ಕೃಶಾಂಗರೂ, ಬೋಳಾದ ತಲೆ, ಕಣ್ಣೆವೆ, ಉಗುರು ಮೊದಲಾದುವುಗಳುಳ್ಳವರೂ ರಕ್ತವು ಸೋರುತ್ತಿರುವ ವ್ರಣಗಳುಳ್ಳವರೂ, ವಿಕಾರವಾದ ರೂಪವುಳ್ಳವರೂ ಆಗಿ ಕಾಣಿಸಿದರು.

೫-೭. ಗೋಕರ್ಣನು ಅತಿದುಃಖಪೀಡಿತರಾದ ಅವರನ್ನು ನೋಡಿ, ಮನಸ್ಸಿನಲ್ಲಿ ಬಹು ಸಂತಾಪವುಳ್ಳವನಾಗಿ " ಪುತ್ರನಿಲ್ಲದವನಿಗೆ ಗತಿಯಿಲ್ಲ. ಸ್ವರ್ಗವಂತೂ ಇಲ್ಲವೇ ಇಲ್ಲ. ಆದುದರಿಂದ ಪಾಪಿಯಾದ ನನ್ನ ಸಹವಾಸದಿಂದ ಈ ದೇವಿಯರೂ ಮರಣಾವಸ್ಥೆಯನ್ನು ಹೊಂದಿರುವರು " ಎಂದು ತಿಳಿದುಕೊಂಡು " ಪೂಜ್ಯೆಯರೇ, ನಿಮ್ಮ ಈ ವಿಕಾರರೂಪವೇನು ? ಹೇಳಿರಿ " ಎಂದು ಅವರ ರೂಪವು ಬದಲಾಗಲು ಕಾರಣವನ್ನು ಕೇಳಿದನು.

೮. ದೇವಿಯರು—ಮಹಾಭಾಗ್ಯನೇ, ಇದನ್ನು ಕೇಳಬಾರದು. ಯಾರಿಂದ ಸುಕೃತಫಲವನ್ನು ಅನುಭವಿಸುವೆವೋ ಕಾಲಾತ್ಮನಾದ ಆ ಭಗವಂತನಾದ ದೇವರೇ ಎಲ್ಲಕ್ಕೂ ಕಾರಣ.

ಸ ಏವ ನಿತ್ಯಕಾಲಂ ಚ ಪೃಚ್ಛತಿ ಸ್ಮ ತದುತ್ತರಂ ।
ದುಃಖಾರ್ತಸ್ಯ ಸುದೀನಸ್ಯ ನ ಜಲ್ಪಂತ್ಯತಿ ದುಃಖಿತಾಃ ॥ ೯ ॥

ನಿಶ್ಚಯಾರ್ಥಂ ಪುನಃ ಸೋಥ ಗೋಕರ್ಣಸ್ತಾಃ ಪ್ರಣಮ್ಯ ಚ ।
ಪೃಚ್ಛತ್ಯಾಗ್ರಹರೂಪೇಣ ನಿಶ್ಚಯಂ ವಿಂದತೇ ಯಥಾ ॥ ೧೦ ॥

ಯದಿ ಗೋಪ್ಯಂ ಮಮಾರ್ತಸ್ಯ ವೈರೂಪ್ಯಂ ಕಥಯಿಷ್ಯಥ ।
ಅಗಾಧೇ ದುಸ್ತರೇ ಪ್ರಾಣಾಂಸ್ತ್ಯಕ್ಷ್ಯಾಮ್ಯದ್ಯ ಸುದುಃಖಿತಃ ॥ ೧೧ ॥

ಏವಮುಕ್ತೇ ತದಾ ತಾಸಾಂ ಮಧ್ಯೇ ಏಕಾಬ್ರವೀದಿದಂ ।
ದುಃಖಂ ತಸ್ಯ ಸಮಾಖ್ಯೇಯಂ ಯೋವಿನಾಶಯತೇ ರುಜಂ ॥ ೧೨ ॥

ಶೃಣುವತ್ಸ ವದಿಷ್ಯೇಹಂ ವಿರೂಪಕರಣಂ ಯಥಾ ।
ಅಸ್ಮಾಕಂ ಚ ಸಮುತ್ಪನ್ನಮೇಕ ಚಿತ್ತೋವಧಾರಯ ॥ ೧೩ ॥

---

೯. ಆ ಗೋಕರ್ಣನು ನಿತ್ಯವೂ ಅವರನ್ನು ಪ್ರಶ್ನಿಸಿ ಅದೇ ಉತ್ತರವನ್ನು ಕೇಳುತ್ತಿದ್ದನು. ದುಃಖಪೀಡಿತನೂ, ಅತಿದೀನನೂ ಆಗಿ ಕೇಳುತ್ತಿದ್ದರೂ, ಅತಿದುಃಖಿತರಾದ ಅವರು ಅವನಿಗೆ ಹೇಳುತ್ತಿರಲಿಲ್ಲ.

೧೦. ಗೋಕರ್ಣನು ನಿಜಾಂಶವನ್ನು ತಿಳಿಯುವುದಕ್ಕಾಗಿ ಅವರಿಗೆ ಪ್ರಣಾಮಮಾಡಿಯೂ, ಕೆಲವುವೇಳೆ ಆಗ್ರಹದಿಂದಲೂ ಮತ್ತೆ ಮತ್ತೆ ಅವರನ್ನು ಪ್ರಶ್ನಿಸುತ್ತಲೇ ಇದ್ದನು.

೧೧. "ಆರ್ತನಾದ ನನಗೆ ನಿಮ್ಮ ವಿರೂಪಕ್ಕೆ ಕಾರಣವನ್ನು ಹೇಳಿರಿ. ನೀವು ಹೇಳದೆ ಮರೆಸುವುದಾದರೆ ಅತಿದುಃಖಿತನಾದ ನಾನು ಅಗಾಧವೂ, ದುಸ್ತರವೂ ಆದ ಸಾಗರದಲ್ಲಿ ಬಿದ್ದು ಈಗ ಪ್ರಾಣಬಿಡುವೆನು" ಎಂದನು.

೧೨–೧೩. ಗೋಕರ್ಣನು ಹಾಗೆ ಹೇಳಲು ಆಗ ಅವರ ಮಧ್ಯದಲ್ಲೊಬ್ಬಳು ಈ ಮಾತನ್ನು ಹೇಳಿದಳು. "ಯಾರು ರೋಗ (ಶೋಕ)ವನ್ನು ಹೋಗಲಾಡಿಸ ಬಲ್ಲನೋ ಅವನೊಡನೆ ದುಃಖವನ್ನು ಹೇಳಿಕೊಳ್ಳಬೇಕು. ಮಗುವೇ, ನಮಗೆ ಈ ವೈರೂಪ್ಯವು ಹೇಗೆ ಉಂಟಾಯಿತೆಂಬುದನ್ನು ನಾನು ಹೇಳುತ್ತೇನೆ. ಒಂದೇ ಮನಸ್ಸಿನಿಂದ ಕೇಳು."

ಅಸ್ತೀ ಮಧುಪುರೀ ರಮ್ಯಾ ನೃಣಾಂ ಮುಕ್ತಿಪ್ರದಾಯಿನೀ ।
ಅಯೋಧ್ಯಾಧಿಪತಿರ್ವೀರಶ್ಚತುರಂಗ ಬಲಾನ್ವಿತಃ ॥ ೧೪ ॥

ಚಾತುರ್ಮಾಸ್ಯಂ ತೀರ್ಥಸೇವೀ ಸ ಗತೋ ಭಕ್ತಿಪೂರ್ವಕಂ ॥ ೧೫ ॥

ವಿಷ್ಣೋರ್ದೇವಸ್ಯ ಚಾಗಾರಂ ಪಂಚಸಂಖ್ಯಾಸಮನ್ವಿತಂ ।
ಆರಾಮವಾಟಿಕಾಃ ಶುಭ್ರಾಃ ಪ್ರಾಕಾರವರವೇಷ್ಟಿತಾಃ ॥ ೧೬ ॥

ಕೂಪಾಪ್ರಾವರ್ತಕೋಪೇತಾಃ ಪುಷ್ಪಜಾತ್ಯಃ ಸುವಾಸಿತಾಃ ।
ಫಲವಂತೋ ದ್ರುಮಾಸ್ತಸ್ಮಿನ್ ಸರ್ವರ್ತುಃ ಸುಮನೋಹರಾಃ ॥ ೧೭ ॥

ತಸ್ಯಾಭ್ಯಾಶೇ ಸ ರಾಜರ್ಷಿಶ್ಚಕಾರಾ ವಾಸಮುತ್ತಮಂ ।
ಸೇವಕೈರ್ನಾಶಿತಃ ಸರ್ವ ಆರಾಮಃ ಸಫಲದ್ರುಮಃ ॥ ೧೮ ॥

೧೪-೧೫. ಮನುಷ್ಯರಿಗೆ ಮುಕ್ತಿದಾಯಕವೂ, ರಮ್ಯವೂ ಆದ ಮಧುರಾ ಪುರಿಯೆಂಬುದೊಂದಿದೆ. ಅಯೋಧ್ಯಾಧಿಪನನಾದ ವೀರನೊಬ್ಬನು ಚತುರಂಗ ಸೈನ್ಯದೊಡನೆ ಚಾತುರ್ಮಾಸ್ಯದಲ್ಲಿ ತೀರ್ಥಸೇವೆಗಾಗಿ ಭಕ್ತಿಪೂರ್ವಕವಾಗಿ ಆ ಮಧುರೆಗೆ ಬಂದನು.

೧೬. ಅಲ್ಲಿ ಐದು ವಿಷ್ಣುದೇವಾಲಯಗಳೂ, ಸುತ್ತಲೂ ಉತ್ತಮ ಪ್ರಾಕಾರದಿಂದ ಸುತ್ತಿರುವ ನಿರ್ಮಲವಾದ ಉದ್ಯಾನವನಗಳೂ ಇದ್ದುವು.

೧೭. ಆ ಉದ್ಯಾನವನದಲ್ಲಿ ಜಲಯಂತ್ರಗಳಿಂದ ಕೂಡಿದ ಬಾವಿಗಳೂ, ಸುವಾಸನೆಯುಳ್ಳ ಅನೇಕ ಜಾತಿಯ ಹೂಗಳೂ, ಎಲ್ಲಾ ಋತುಗಳಲ್ಲಿಯೂ ಫಲಿಸುವ ಬಹು ಮನೋಹರವಾಗಿರುವ ಮರಗಳೂ ಇದ್ದುವು.

೧೮-೧೯ ಅಯೋಧ್ಯೆಯಿಂದ ಬಂದ ಆ ರಾಜರ್ಷಿ ಆ ಉದ್ಯಾನ ವನದ ಸಮೀಪದಲ್ಲಿ ಬೀಡುಮಾಡಿದನು. ಪಾಪಬುದ್ಧಿಗಳಾದ ಆತನ ಸೇವಕರು,

ಪ್ರಾಕಾರಪರಿಖಾ ಚೈವ ಸ್ಥಂಡಿಲಪ್ರತಿಮಾ ಕೃತಾ ।
ಬಹುಧಾ ವಾರ್ಯಮಾಣೈಸ್ತು ಪಾಪಬುದ್ಧಿಸಮಾಶ್ರಿತೈಃ ॥ ೧೯ ॥

ಏವಂ *ಯೇನ ಕೃತಂ ತತ್ರ ಸೋಽಪಿ ದೈವವಶಂಗತಃ ।
ಪಂಜರಸ್ಥೋ ಯಥಾಸಿಂಹಃ ಕೋಽಸ್ಮಾಂಸ್ತ್ರಾತಾ ಭವೇದಿತಿ ॥ ೨೦ ॥

ವಿಧಾಯಾಂಜಲಿನಾ ವಕ್ತ್ರಮಶ್ರುಕ್ಲಿನ್ನಸ್ತನಾಂತರಾ ।
ರುರೋದೋಚ್ಚೈಃ ಸ್ವರಂ ದೀನಾ ಹಾ ಕಷ್ಟಮಿತಿ ಜಲ್ಪತೀ ॥ ೨೧ ॥

ಸರ್ವಾಸಾಂರುದತೀನಾಂ ಚ ಕುರರೀಣಾಮಿವ ಸ್ವನಃ ।
ಶ್ರೂಯತೇ ಬಹುಧಾಕಾರೋ ಗೋಕರ್ಣೋಽಪ್ಯತಿದುಃಖಿತಃ ॥ ೨೨ ॥

ಬೇಡವೆಂದು ಎಷ್ಟು ತಡೆದರೂ ಆ ತೋಟದ ಎಲ್ಲಾ ಫಲವೃಕ್ಷಗಳನ್ನೂ ಹಾಳುಮಾಡಿದರು. ಪ್ರಾಕಾರವನ್ನೂ, ಕಂದಕವನ್ನೂ ನೆಲಸಮಮಾಡಿದರು.

೨೦–೨೧. 'ಯಾರು ಹಾಗೆ ಅಲ್ಲಿ ಉದ್ಯಾನವನಪ್ರಾಕಾರಾದಿಗಳನ್ನು ಮಾಡಿದನೋ ಅತನೂ ಪಂಜರದಲ್ಲಿ ಸಿಕ್ಕಿದ ಸಿಂಹದಂತೆ ದೈವವಶನಾದನು. ಇನ್ನು ನಮ್ಮನ್ನು ಕಾಪಾಡುವರಾರು ?' ಎಂದು ದೀನಳಾಗಿ ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡು 'ಅಯ್ಯೋ ಕಷ್ಟ' ಎಂದು ಹೇಳುತ್ತ ಕಣ್ಣೀರಿನಿಂದ ಸ್ತನದೆಡೆಯೆಲ್ಲಾ ನೆನೆಯುವಂತೆ ಗಟ್ಟಿಯಾಗಿ ಅತ್ತಳು.

೨೨. ಆಗ ದೇವಿಯರೆಲ್ಲರೂ ಅಳಲಾಗಿ ಹೆಣ್ಣುಕುರವ ಹಕ್ಕಿಗಳ ಧ್ವನಿಯಂತೆ ಅವರ ರೋದನಧ್ವನಿಯು ದೊಡ್ಡದಾಗಿ ಕೇಳಿಸಿತು. ಅದರಿಂದ ಗೋಕರ್ಣನೂ ಬಹಳವಾಗಿ ದುಃಖವುಳ್ಳವನಾದನು.

---

* ತೇನ

ಏಕೈಕಸ್ಯಾಸ್ತು ಚಕ್ರೇ ಸೌ ಮೂರ್ಧ್ನಾ ಪಾದಾಭಿವಂದನಂ ।
ಪ್ರಾಂಜಲಿರ್ದೀನಯಾ ವಾಚಾ ಸಾಂತ್ವಯಾಮಾಸ ತಾಃ ಶನೈಃ ॥ ೨೩ ॥

ಪ್ರಾಪ್ತಸಂಜ್ಞಾಸ್ತು ತಾಃ ಸರ್ವಾಃ ಗೋಕರ್ಣೋಽಪ್ಯಾಹ ಸುಸ್ವನಃ ।
ಭವಿತಾ ಯದಿ ತತ್ರಾಹಂ ರಾಜಾನಂ ತಂ ನಿವಾರಯಂ ॥
ಕಿಂ ಕರಿಷ್ಯಾಮಿ ದೈವೇನ ಸಮರ್ಥೋಽಪ್ಯವಸಾದಿತಃ ॥ ೨೪ ॥

ಐಕ್ಯಭಾವೇವೇನ ತಾಃ ಸರ್ವಾಃ ಪಪ್ರಚ್ಛುರ್ವಣಿಜಂ ಪ್ರತಿ ॥ ೨೫ ॥

ಕಸ್ತ್ವಂ ಕಥಯ ಕಸ್ಮಾಚ್ಚ ಸ್ಥಾನಾದ್ಯತ್ತ್ವಮಿಹಾಗತಃ ॥ ೨೬ ॥

॥ ಗೋಕರ್ಣ ಉವಾಚ ॥

ಗೋಕರ್ಣೋಽಹಂ ಸುಚಾರ್ವಾಸ್ಯಃ ಸುಕಪೋಲೋ +ಸುಲೋಚನಃ ।
ಪೂರ್ವಂ ದೃಷ್ಟ್ವಾ ಭವತ್ಯೋ ವೈ ಚಾರ್ವಂಗ್ಯಶ್ಚಾರುಲೋಚನಾಃ ॥ ೨೭ ॥

---

೨೩. ಗೋಕರ್ಣನು ಆ ದೇವಿಯರಲ್ಲಿ ಒಬ್ಬೊಬ್ಬಳಿಗೂ ಕಾಲಿಗೆ ತಲೆಬಾಗಿ ವಂದಿಸಿ, ಕೈಮುಗಿದುಕೊಂಡು ದೀನಧ್ವನಿಯಿಂದ ಅವರನ್ನು ಮೆಲ್ಲಗೆ ಸಂತೈಸಿದನು.

೨೪. ಮೂರ್ಛೆಯಿಂದೆಚ್ಚರಗೊಂಡ ಅವರೆಲ್ಲರನ್ನೂ ಕುರಿತು ಗೋಕರ್ಣನು ಒಳ್ಳೆಯ ಮಾತಿನಿಂದ "ನಾನು ಅಲ್ಲಿದ್ದೆನಾದರೆ ತೋಟವನ್ನು ಹಾಳುಮಾಡಿದ ಆ ದೊರೆಯನ್ನು ತಡೆಯುತ್ತಿದ್ದೆನು. ಏನುಮಾಡಲಿ ! ತಪ್ಪಿಸಲು ಶಕ್ತನಾಗಿದ್ದರೂ ದೂರನಾದೆನು " ಎಂದನು.

೨೫–೨೬. ಗೋಕರ್ಣನು ಹಾಗೆ ಹೇಳಿದೊಡನೆಯೇ ಅವರೆಲ್ಲರೂ ಚೇತರಿಸಿಕೊಂಡು ಒಟ್ಟಾಗಿ ಆತನನ್ನು "ನೀನು ಯಾರು ? ಎಲ್ಲಿಂದ ಇಲ್ಲಿಗೆ ಏತಕ್ಕಾಗಿ ಬಂದೆ ? ಹೇಳು " ಎಂದು ಕೇಳಿದರು.

೨೭–೨೮. ಗೋಕರ್ಣ—ನಾನು ಬಹು ಸುಂದರವಾದ ಮುಖ, ಕೆನ್ನೆ, ಕಣ್ಣು ಉಳ್ಳವನಾಗಿದ್ದ ಗೋಕರ್ಣನು. ನೀವು ಮೊದಲು ಸುಂದರಾಂಗಿಯರೂ

\+ ಶುಭ್ರವೀಕ್ಷಯಾ (ಬೊಂ.)

ಇದಾನೀಂ ಮಲಿನಾ ಜಾತಾಃ ಮಮ ಶೋಕವಿವರ್ಧನಾಃ ।
ಕಥಯಧ್ವಂ ಮಮಾತ್ಮಾನಮತ್ರಹೇತುಮನಂತರಂ ॥ ೨೮ ॥

ಜ್ಯೇಷ್ಠಾ ಸೋವಾಚ ತಸ್ಯಾಗ್ರೇ ಪುಷ್ಪಜಾತ್ಯಾ ಸ್ವಲಂಕೃತಾಃ ।
ವಯಮಾರಾಮಸಂಸ್ಥಾಶ್ಚ ಸ್ವಾಮಿನಾ ಪರಿಪಾಲಿತಾಃ ॥ ೨೯ ॥

ಹೃದ್ಯವೇಷಾಃ ಸುಚಾರ್ವಂಗ್ಯಃ ಪುಷ್ಪವೃದ್ಧಿರತಾಃ ಸದಾ ।
ಪೂರ್ವಂ ದೃಷ್ಟಾಃ ಸುರೂಪಾಶ್ಚ ವಿಪರ್ಯಯಮಥೋ ಶೃಣು ॥ ೩೦ ॥

ರಾಜಲೋಕೈಃ ಪೀಡಿತಾಶ್ಚ ಛೇದನೋನ್ಮೂಲನೇನ ಚ ।
ಪೀಡಿತಾ ಭೃಶಮುದ್ವಿಗ್ನಾಸ್ತೇನೇದಾನೀಂ ಸ ಕಲ್ಮಷಾಃ ॥ ೩೧ ॥

ಪುಷ್ಪಮಾಲಾವಿಹೀನಾಶ್ಚ ಮೂಲಸ್ಕಂಧಾವಶೇಷಿತಾಃ ।
ಏವಂ ವಿಧಾಶ್ಚ ಸಂಭೂತಾ ನಷ್ಟಸಂಜ್ಞಾಃ ಸ್ಥಿತಾವಯಂ ॥ ೩೨ ॥

ಮನೋಹರನೇತ್ರೆಯರೂ ಆಗಿ ಕಾಣಿಸುತ್ತಿದ್ದಿರಿ. ಈಗ ಮಲಿನರಾಗಿ ನನ್ನ ದುಃಖವನ್ನು ಹೆಚ್ಚಿಸುವವರಾದಿರಿ. ಇನ್ನು ನಿಮ್ಮ ಈ ಅವಸ್ಥೆಗೆ (ನನ್ನನ್ನೇ ಕಾರಣನನ್ನಾಗಿ) ನಾನೇ, ಕಾರಣನೆಂಬುದನ್ನು ಹೇಳಿರಿ.

೨೯–೩೦. ಆಗ ಗೋಕರ್ಣನೆದುರಿಗೆ ಪುಷ್ಪಜಾತಿಗೆ ಅಲಂಕಾರಪ್ರಾಯಳಾದ ಆ ಹಿರಿಯಳು ಹೀಗೆ ಹೇಳಿದಳು. ಉದ್ಯಾನವನದಲ್ಲಿದ್ದ ನಾವು ಸ್ವಾಮಿಯಿಂದ ರಕ್ಷಿತರಾಗಿ ಮನೋಹರವಾದ ವೇಷವೂ, ಬಹಳ ಚೆಲುವಾದ ಅಂಗವೂ ಉಳ್ಳವರಾಗಿ ಪುಷ್ಪವೃದ್ಧಿಯಲ್ಲಿ ನಿರತರಾಗಿ ಮೊದಲು ಯಾವಾಗಲೂ ಸುಂದರ ರೂಪರಾಗಿ ಕಾಣುತ್ತಿದ್ದೆವು. ಇನ್ನು ವಿಕಾರಕ್ಕೆ ಕಾರಣವನ್ನು ಕೇಳು.

೩೧–೩೨. ರಾಜಸೇವಕರು ಕತ್ತರಿಸಿಯೂ, ಬೇರುಸಹಿತ ಕಿತ್ತೂ ನಮ್ಮನ್ನು ಪೀಡಿಸಿದುದರಿಂದ ಬಹು ದುಃಖಗೊಂಡವರಾಗಿ ಈಗ ಮಲಿನರೂ, ಹೂಮಾಲೆಗಳಿಲ್ಲದವರೂ, ಬುಡಕಾಂಡಗಳುಳಿದಿರುವವರೂ ಆಗಿ ಈ ಸ್ಥಿತಿಗೆ ಬಂದು ಮೂರ್ಛೆಗೊಂಡಿರುವೆವು.

ಯೋ ದೇವಸ್ತತ್ರ ಪಾಷಾಣೋ ಮೃತ್ಪಿಂಡೇಷ್ಟಕೆ ಯಂತ್ರಿತಃ ।
ಸೋತ್ರ ಸತ್ವಮಯಃ ಸಾಕ್ಷೀ ತಸ್ಯ ಪುಣ್ಯಸ್ಯ ಕರ್ಮಣಿ ॥ ೩೩ ॥

ಪುಣ್ಯಂ +ಸೂದಕಪೂರ್ಣೋಯಂ ತಸ್ಯಾರಾಮಸ್ಯ ಸೇಚಕಂ ।
ಸರಶ್ಚೋತ್ಪಲಪೂರ್ಣಂ ಚ ಕಲಹಂಸೈರ್ಯುತಂ ಸದಾ ॥ ೩೪ ॥

ಯೇ ಚ ವೃಕ್ಷಾಃ ಫಲೋಪೇತಾಃ ತೇ ಸೌವರ್ಣಾಶ್ಚ ಸತ್ತಮ ।
ಏತಾ ರಕ್ಷಂತಿ ಸತತಮಾರಾಮಂ ಸುಖದಂ ನೃಣಾಂ ॥
ತಸ್ಯಾ ನಾಶಾದ್ಯಥಾನೋತ್ರ ಜಾತೇಯಂ ಚ ವಿರೂಪತಾ ॥ ೩೫ ॥

॥ ಗೋಕರ್ಣ ಉವಾಚ ॥

ಆರಾಮಕರ್ತುಃ ಕಿಂಚಾತ್ರ ಫಲಂ ಭವತಿ ಯಾದೃಶಂ ।
ಕರಣಾತ್ಕೂಪದೇವಾನಾಂ ತಸ್ಯ ಪುಣ್ಯಫಲಂ ವದ ॥ ೩೬ ॥

---

೩೩. ಆತನ ಪುಣ್ಯಕರ್ಮಕ್ಕೆ ಮಣ್ಣುಹೆಂಟೆಗಳಿಂದಲೂ, ಇಟ್ಟಿಗೆಗಳಿಂದಲೂ ಮುಚ್ಚಿಹೋಗಿ ಅಲ್ಲಿ ಕಲ್ಲಿನಂತಿರುವ ಸತ್ವಮಯನಾದ ದೇವನೇ ಸಾಕ್ಷಿ.

೩೪–೩೫. ಸತ್ಪುರುಷೋತ್ತಮನೇ, ಒಳ್ಳೆಯ ನೀರಿಂದ ತುಂಬಿ ಪವಿತ್ರವಾಗಿ ಆ ಉದ್ಯಾನವನಕ್ಕೆ ನೀರನ್ನು ಕೊಡುವುದಾಗಿಯೂ, ನೈದಿಲೆಗಳಿಂದಲೂ, ಕಲಹಂಸಗಳಿಂದಲೂ ಪೂರ್ಣವಾಗಿ ಸದಾ ಒಪ್ಪುವುದಾಗಿಯೂ ಇರುವ ಸರೋವರವೂ, ಸುವರ್ಣಯುತಗಳಾಗಿ ಫಲಿಸಿರುವ ವೃಕ್ಷಗಳೂ ಜನರಿಗೆ ಸುಖಕರವಾದ ಆ ತೋಟವನ್ನು ಯಾವಾಗಲೂ ಕಾಪಾಡುತ್ತಿದ್ದುವು. ಅವುಗಳ ನಾಶದಿಂದ ನಮಗೆ ಈ ವಿರೂಪವುಂಟಾಯಿತು.

೩೬. ಗೋಕರ್ಣ—"ಆರಾಮವನ್ನು ಮಾಡಿಸುವವನಿಗೆ ಯಾವ ಫಲವುಂಟಾಗುವುದು ? ಮತ್ತು ಬಾವಿ, ದೇವಾಲಯ ಇವುಗಳನ್ನು ಕಟ್ಟಿಸುವುದರಿಂದ ಬರುವ ಪುಣ್ಯಫಲವೇನು ?" ಹೇಳು.

+ ಸೋದಕ.

॥ ಜ್ಯೇಷ್ಠೋವಾಚ ॥

ಇಷ್ಟಾಪೂರ್ತಂ ದ್ವಿಜಾತೀನಾಂ ಪ್ರಥಮಂ ಧರ್ಮಸಾಧನಂ ।
ಇಷ್ಟೇನ ಲಭತೇ ಸ್ವರ್ಗಂ ಪೂರ್ತೇ ಮೋಕ್ಷಂ ಚ ವಿಂದತಿ ॥ ೩೭ ॥

ವಾಪೀಕೂಪತಟಾಕಾನಿ ದೇವತಾಯತನಾನಿ ಚ ।
ಪತಿತಾನ್ಯುದ್ಧರೇದ್ಯಸ್ತು ಸ ಪೂರ್ತಫಲಮಶ್ನುತೇ ॥ ೩೮ ॥

ಭೂಮಿದಾನೇನ ಯೇ ಲೋಕಾ ಗೋದಾನೇನ ಚ ಕೀರ್ತಿತಾಃ ।
ತೇ ಲೋಕಾಃ ಪ್ರಾಪ್ಯತೇ ಪುಂಭಿಃ ಪಾದಪಾನಾಂ ಪ್ರರೋಹಣೇ ॥ ೩೯ ॥

ಅಶ್ವತ್ಥಮೇಕಂ ಪಿಚುಮಂದಮೇಕಂ
ನ್ಯಗ್ರೋಧಮೇಕಂ ದಶಪುಷ್ಪಜಾತೀಃ ।
ದ್ವೇ ದ್ವೇ ತಥಾ ದಾಡಿಮಮಾತುಲಿಂಗೇ
ಪಂಚಾಮ್ರರೋಪೀ ನರಕಂ ನ ಯಾತಿ ॥ ೪೦ ॥

---

೩೭. ದೇವಿಯರಲ್ಲಿ ಹಿರಿಯಳು— ದ್ವಿಜರಿಗೆ ಇಷ್ಟಾಪೂರ್ತವು ಎಂದರೆ ಯಜ್ಞಾದಿಕರ್ಮವೂ, ಕೆರೆ ಮೊದಲಾದುವುಗಳನ್ನು ಕಟ್ಟಿಸುವುದೂ ಮೊದಲನೆಯ ಧರ್ಮಸಾಧನ. ಯಜ್ಞಾದಿ (ಇಷ್ಟ)ಕರ್ಮದಿಂದ ಸ್ವರ್ಗವನ್ನೂ, ಕೆರೆ, ದೇವಾಲಯ ಮೊದಲಾದುವುಗಳನ್ನು ಕಟ್ಟಿಸುವ (ಪೂರ್ತ) ಕರ್ಮದಿಂದ ಮೋಕ್ಷವನ್ನೂ ಪಡೆಯುವನು.

೩೮. ಕೆರೆ, ಕೊಳ, ಬಾವಿಗಳನ್ನೂ, ದೇವಾಲಯಗಳನ್ನೂ, ಕಟ್ಟಿಸುವವನೂ ಜೀರ್ಣೋದ್ಧಾರಮಾಡುವವನೂ ಪೂರ್ತಕರ್ಮದ ಫಲವನ್ನುಅನುಭವಿಸುವನು.

೩೯. ಮನುಷ್ಯರಿಗೆ ಭೂದಾನದಿಂದಲೂ, ಗೋದಾನದಿಂದಲೂ ದೊರೆಯುವ ಲೋಕಗಳು ಮರಗಿಡಗಳನ್ನು ಬೆಳೆಸುವುದರಿಂದಲೂ ದೊರೆಯುವುವು.

೪೦. ಒಂದು ಅರಳಿಯಮರವನ್ನೋ, ಒಂದು ಬೇವಿನಮರವನ್ನೋ ಒಂದು ಆಲದ ಮರವನ್ನೋ ಹತ್ತು ಜಾತಿಯ ಹೂಗಿಡಗಳನ್ನೋ, ಎರಡೆರಡು ದಾಳಿಂಬೆ ಅಥವಾ ಮಾದಲದ ಗಿಡಗಳನ್ನೋ ಅಥವಾ ಐದು ಮಾವಿನ ಮರಗಳನ್ನೋ ಬೆಳೆಯಿಸುವವನು ನರಕಕ್ಕೆ ಹೋಗುವುದಿಲ್ಲ.

ಯಥಾ ಸುಪುತ್ರಃ ಕುಲಮುದ್ಧರೇದ್ಧಿ
ಯಥಾತಿಕೃಚ್ಛ್ರಾನ್ನಿಯಮಪ್ರಯತ್ನಾತ್ ।
ತಥಾತ್ರವೃಕ್ಷಾಃ ಫಲಪುಷ್ಪಭೂತಾಃ
ಸ್ವಂ ಸ್ವಾಮಿನಂ ನರಕಾದುದ್ಧರಂತಿ ॥ ೪೧ ॥

*॥ ಗೋಕರ್ಣ ಉವಾಚ ॥

ಇಂಧನಾರ್ಥಂ ಯದಾನೀತಂ ಅಗ್ನಿಹೋತ್ರಂ ತದುಚ್ಯತೇ ।
ಛಾಯಾ ವಿಶ್ರಾಮಪಥಿಕೈಃ ಪಕ್ಷಿಣಾಂ ನೀಲಯೇನ ಚ ॥ ೪೨ ॥

ಪತ್ರ ಮೂಲತ್ವಗಾದ್ಯೈಶ್ಚ ಔಷಧಾರ್ಥಂತು ದೇಹಿನಾಂ ।
ಉಪಕುರ್ವಂತಿ ವೃಕ್ಷಸ್ಯ ಪಂಚಯಜ್ಞಃ ಸ ಉಚ್ಯತೇ ॥ ೪೩ ॥

---

೪೧. ಸುಪುತ್ರನಾದವನು ಅತಿಕಷ್ಟವಾದ ನಿಯಮಗಳಿಂದ ಪ್ರಯತ್ನಪೂರ್ವಕವಾಗಿ ತನ್ನ ಕುಲವನ್ನುದ್ಧರಿಸುವಂತೆ ಈ ಲೋಕದಲ್ಲಿ ಬೆಳೆಸಿದ ಫಲಪುಷ್ಪವೃಕ್ಷಗಳು ತಮ್ಮನ್ನು ಬೆಳೆಸಿದ ಸ್ವಾಮಿಯನ್ನು ನರಕಕ್ಕೆ ಬೀಳದಂತೆ ಉದ್ಧಾರಮಾಡುವುವು.

೪೨–೪೩. ಗೋಕರ್ಣ—ಮರಗಳಿಂದ ಸೌದೆಯನ್ನು ತಂದು ಉರಿಸುವುದು ಅಗ್ನಿಹೋತ್ರವೆನಿಸುವುದು. ಮರಗಳ ನೆಳಲಿನಲ್ಲಿ ದಾರಿಗಳು ವಿಶ್ರಾಂತಿಯನ್ನು ಪಡೆಯುವರು. ಮರಗಳು ಪಕ್ಷಿಗಳಿಗೆ ವಾಸಕ್ಕೆಡೆಯಾಗಿರುವುವು. ಮರಗಳ ಎಲೆ, ಬೇರು, ತೊಗಟೆ ಮೊದಲಾದುವು ಪ್ರಾಣಿಗಳಿಗೆ ಔಷಧಕ್ಕಾಗಿ ಉಪಯೋಗವಾಗುವುವು. ಹೀಗೆ ಮರದಿಂದಾಗುವ ಉಪಕಾರವು ವೃಕ್ಷವು ಅಥವಾ ವೃಕ್ಷವನ್ನು ಬೆಳೆಸುವವನು ಮಾಡುವ ಪಂಚಯಜ್ಞವೆನಿಸುವುದು.

---

* ಅನವಶ್ಯವಾದ ವಾಕ್ಯ

ಗೃಹಕೃತ್ಯಾನಿ ಕಾಷ್ಠಾನಿ ಕ್ಷುದ್ರಜಂತುಗೃಹಾಸ್ತಥಾ ।
ಯತ್ರ ನಿರ್ವರ್ತನಂ ಪ್ರೋಕ್ತಂ ಭಿಕ್ಷಾ ಪತ್ರೈಃ ಸಮಾಕೃತಾ ॥ ೪೪ ॥

ಫಲಂತಿ ವತ್ಸರೇ ಮಧ್ಯೇ ದ್ವಿವಾರಂ ಶಕುನಾದಯಃ ।
ಸಾಂವತ್ಸರಂ ಪಿತುರ್ಮಾತುರುಪಕಾರಂ ಫಲೈಃ ಕೃತಂ ॥ ೪೫ ॥

ಏವಂ ಪುತ್ರ ಸಮಾರೋಪಾ ಏವಂ ತತ್ವವಿದೋ ವಿದುಃ ॥ ೪೬ ॥

॥ ಶ್ರೀವರಾಹ ಉವಾಚ ॥

ಏವಮುಕ್ತಸ್ತಯಾ ದೇವ್ಯಾ ಮಾಲತ್ಯಾ ಪುಷ್ಪಜಾತಯಾ ।
ಹಾ ಕಷ್ಟಂ ಕಥಮಿತ್ಯೇವಂ ಮುಮೋಹ ಚ ಪಪಾತ ಹ ॥ ೪೭ ॥

ತಾಭಿರಾಶ್ವಾಸಿತೋ ಧೀಮಾನ್ಸಸಂಜ್ಞೋ ವಾರಿಣೋಕ್ಷಿತಃ ।
ಆತ್ಮಾನಂ ಕಥಯಾಸ್ಮಾಕಂ ಯಸ್ಮಾಚ್ಚ ತ್ವಮುಪಾಗತಃ ॥ ೪೮ ॥

---

೪೪. ಮರಗಳ ಕಾಂಡಪ್ರಕಾಂಡಗಳು ಮನೆಗಳಿಗೆ ಉಪಯೋಗವಾಗುವುವು. ಅಲ್ಪಜಂತುಗಳ ವಾಸಗೃಹಗಳಾಗುವುವು ಮರಗಳಿಂದ ಬಂಡಿ, ಪಲ್ಲಕ್ಕಿ ಮೊದಲಾದ ವಾಹನಗಳಾಗುವುವು. ಆದುದರಿಂದ ಮರಗಳಿಂದ ಲೋಕಕ್ಕೆ ಉತ್ತಮವಾದ ಸೇವೆಯಾಗುವುದು.

೪೫–೪೬. ಪಕ್ಷಿಗಳೇ ಮೊದಲಾದುವು ವರ್ಷಕ್ಕೆರಡುಸಾರಿ ಮೊಟ್ಟೆಯಿಟ್ಟು ಮರಿಗಳನ್ನು ಮಾಡುವುವು. ಮರಗಳು ವರ್ಷವೆಲ್ಲಾ ಆ ಮರಿಗಳ ತಾಯಿ ತಂದೆಗಳಿಗೆ ಫಲಗಳಿಂದ ಉಪಕಾರಮಾಡುವುವು. ಪುತ್ರನೇ, ಆದುದರಿಂದ ವೃಕ್ಷಗಳನ್ನು ಬೆಳೆಸುವುದು ಉತ್ತಮವೆಂದು ತತ್ವಜ್ಞರು ತಿಳಿದಿರುವರು.

೪೭. ಶ್ರೀವರಾಹ—ಪುಷ್ಪಜಾತಳಾದ ಆ ಮಾಲತೀ (ಜಾಜಿ)ದೇವಿಯು ಹಾಗೆ ಹೇಳಲು ಗೋಕರ್ಣನು, " ಆಹಾ ! ಎಂತಹ ಕಷ್ಟ ! " ಎಂದು ಹೇಳಿ ಮೂರ್ಛೆಗೊಂಡು ಬಿದ್ದುಬಿಟ್ಟನು.

೪೮. ಆ ದೇವಿಯರು ಅವನಮೇಲೆ ನೀರನ್ನು ಚಿಮುಕಿಸಿ, ಎಚ್ಚರಗೊಳ್ಳುವಂತೆ ಮಾಡಿ, ಬುದ್ಧಿವಂತನಾದ ಅವನನ್ನು ಸಮಾಧಾನಪಡಿಸಿ, " ನೀನು ಯಾರು ? ಎಲ್ಲಿಂದ ಏತಕ್ಕಾಗಿ ಇಲ್ಲಿಗೆ ಬಂದೆ ? ನಮಗೆ ಹೇಳು " ಎಂದರು.

|| ಗೋಕರ್ಣ ಉವಾಚ ||

ವೃದ್ಧೌ ಚ ಮಾತಾಪಿತರೌ ಸಾಧುಭಾರ್ಯಾ ಚತುಷ್ಟಯಂ ।
ಮಧುರಾಯಾಂ ಮನ್ಯೈನ್ಯೈತದುದ್ಯಾನಂ ದೇವತಾಗೃಹಂ || ೪೯ ||

ಯದಿ ತತ್ರ ಗತಶ್ಚಾಹಂ ಪಿತೃರಾಜ್ಞೋಽಸ್ತು ಸನ್ನಿಧೌ ।
ಇಮಾಮಾಪದಮಾಪನ್ನಾ ಯೂಯಂ ತದ್ವೈ ನಿವೇದಯೇ || ೫೦ ||

ಜ್ಯೇಷ್ಠಾ ಪ್ರೋವಾಚ ನೇಷ್ಯಾಮಿ ಯದಿ ತೇ ರೋಚತೇಽನಘ ।
ಅದ್ಯೈವ ಮಧುರಾಂ ದೇವೀಮವೇಕ್ಷ್ಯಾವೋಧಿಗಮ್ಯತಾಂ || ೫೧ ||

ವಿಮಾನಪ್ರತಿಮಾಕಾರಂ ಯಾನಮಾರುಹ್ಯ ಸತ್ವರಃ ।
ದಿವ್ಯಾನೀಮಾನಿ ರತ್ನಾನಿ ಭೂಷಣಾನಿ ಫಲಾನಿ ಚ || ೫೨ ||

ಗೃಹ್ಣೀಷ್ವೋಪಾಯನಂ ರಾಜ್ಞೇ ತಸ್ಮೈ ತ್ವಂ ದೇಹ್ಯನರ್ಘ್ಯಕಂ || ೫೩ ||

---

೪೯. ಗೋಕರ್ಣ—ಮಧುರೆಯಲ್ಲಿ ವೃದ್ಧರಾದ ನನ್ನ ತಾಯಿತಂದೆಗಳೂ, ಒಳ್ಳೆಯವರಾದ ನಾಲ್ವರು ಹೆಂಡತಿಯರೂ ಇರುವರು. ನೀವು ಹೇಳುವ ಆ ಉದ್ಯಾನವನವೂ, ದೇವಾಲಯವೂ ನನ್ನದೇ.

೫೦. ನಾನು ಮಧುರೆಗೆ ಹೋದರೆ, ನೀವು ಇಂತಹ ಆಪತ್ತನ್ನು ಪಡೆದಿರುವಿರೆಂಬುದನ್ನು ತಂದೆಯ ಮತ್ತು ರಾಜನ ಸನ್ನಿಧಿಯಲ್ಲಿ ಅರಿಕೆ ಮಾಡುವೆನು.

೫೧. ಆ ದೇವಿಯರಲ್ಲಿ ಹಿರಿಯಳು ಹೇಳಿದಳು—"ದೋಷರಹಿತನೇ, ನಿನಗೆ ಇಷ್ಟವಾದರೆ ಈಗಲೇ ಕರೆದುಕೊಂಡು ಹೋಗುವೆನು. ಮಧುರಾ ದೇವಿಯನ್ನು ನೋಡೋಣ. ಹೊರಡು.

೫೨–೫೩. ತ್ವರೆಯಿಂದ ವಿಮಾನಕ್ಕೆ ಸಮವಾದ ಆಕಾರವುಳ್ಳ ಈ ಯಾನವನ್ನು ಏರಿ, ಈ ದಿವ್ಯರತ್ನಗಳನ್ನೂ, ಭೂಷಣಗಳನ್ನೂ, ಫಲಗಳನ್ನೂ ಕಾಣಿಕೆಯಾಗಿ ತೆಗೆದುಕೊ. ಅನರ್ಘ್ಯವಾದ ಇದನ್ನು ನೀನು ಆ ರಾಜನಿಗೆ ಕೊಡು."

ಆರುಹ್ಯ ಸ ತಥೇತ್ಯುಕ್ತ್ವಾ ನಮಸ್ಕೃತ್ಯ ಹರಿಂ ಚ ತಾಃ ।
ಉತ್ಪಪಾತ ತತಃ ಸ್ಥಾನಾದ್ಯತ್ರ ರಾಜಾ ವ್ಯವಸ್ಥಿತಃ ॥
ರಾಜ್ಞೇ ನಿವೇದಯಾಮಾಸ ರತ್ನಾನಿ ಸುಬಹೂನಿ ಚ ॥ ೫೪ ॥

ರಾಜಾದರ್ಶನಮಾತ್ರೇಣ ಸಂತುಷ್ಟಃ ಸೋಬ್ರವೀದಿದಂ ।
ಸ್ವಾಗತಂ ತೇ ಮಹಾಭಾಗ ಸಂಮಾನ್ಯ ಪರಿಪೂಜ್ಯ ಚ ।
ಅರ್ಧಾಸನೇ ಕೃತಃ ಪ್ರೀತ್ಯಾ ರತ್ನದೋ ಧನದೋಯಥಾ ॥ ೫೫ ॥

ಅಸ್ಮಾತ್‌ಸ್ಥಾನಾದಿದಾನೀಂ ಚ ಅಪಸರ್ಪ್ಯ ಕ್ಷಣಾಂತರೇ ।
ಆಶ್ಚರ್ಯಂ ದರ್ಶಯಿಷ್ಯಾಮಿ ಕಥಯಿಷ್ಯಾಮಿ ಚಾಪಿಭೋಃ ॥ ೫೬ ॥

ಸ ತಥೇತಿ ಪ್ರತಿಶ್ರುತ್ಯ ಸೇನಾಪತಿಮುವಾಚ ಹ ।
ಮುಹೂರ್ತಾರ್ಧಾದ್ಯಥಾ ಯಾತಿ ಸೈನ್ಯಂ ತಚ್ಚ ತಥಾಕುರು ॥ ೫೭ ॥

---

೫೪. ಗೋಕರ್ಣನು ‘ಹಾಗೆಯೇ ಆಗಲಿ’ ಎಂದು ಹರಿಯನ್ನೂ, ಆ ದೇವಿಯರನ್ನೂ ನಮಸ್ಕರಿಸಿ, ಆ ಸ್ಥಳದಿಂದ ಯಾನವನ್ನೇರಿ, ರಾಜನಿದ್ದೆಡೆಗೆ ಆಕಾಶಮಾರ್ಗದಲ್ಲಿ ಹೊರಟು ಹೋಗಿ ಆತನಿಗೆ ರತ್ನಗಳನ್ನು ಬೇಕಾದಹಾಗೆ ಅರ್ಪಿಸಿದನು.

೫೫. ಆ ದೊರೆಯು ನೋಡಿದೊಡನೆಯೇ ಸಂತುಷ್ಟನಾಗಿ, “ಮಹಾಭಾಗ್ಯನೇ, ನಿನಗೆ ಸುಖಾಗಮನವೆ?” ಎಂದು ಕೇಳಿ, ಗೌರವಿಸಿ, ಪೂಜಿಸಿ. ರತ್ನಗಳನ್ನು ಕೊಟ್ಟ ಆ ಗೋಕರ್ಣನನ್ನು ಕುಬೇರನಂತೆ ತನ್ನ ಅರ್ಧಾಸನದಲ್ಲಿ ಕುಳ್ಳಿರಿಸಿಕೊಂಡನು.

೫೬. ಗೋಕರ್ಣನು “ರಾಜನೇ, ಈಗ ಈ ಸ್ಥಳವನ್ನು ಬಿಟ್ಟು ಹೊರಟು. ಕ್ಷಣಮಾತ್ರದಲ್ಲಿಯೇ ಆಶ್ಚರ್ಯವನ್ನು ನಿನಗೆ ತೋರಿಸಿ, ಆ ವಿಚಾರವನ್ನೂ ಹೇಳುವೆನು.” ಎಂದನು.

೫೭–೫೮. ದೊರೆಯು ಹಾಗೆಯೇ ಆಗಲೆಂದು ಉತ್ತರ ಹೇಳಿ, ಸೇನಾಪತಿಗೆ “ಅರ್ಧಮುಹೂರ್ತದಲ್ಲಿ ಸೈನ್ಯವು ಇಲ್ಲಿಂದ ಹೊರಟು ಹೋಗುವಂತೆ ಮಾಡು

ಕ್ಷಿಪ್ರಂ ತತ್ಪ್ರತಿಪದ್ಯಸ್ವ ನ ಕಾಲೋತ್ಯಭ್ಯಗಾದ್ಯಥಾ ।
ಕೃತಂ ತೇನ ತಥಾ ಸರ್ವಂ ಯಥಾ ರಾಜ್ಞಾ ಹಿ ಭಾಷಿತಂ ॥ ೫೮ ॥

ತಾ ದೇವ್ಯೋ ದಿವ್ಯರೂಪಾಶ್ಚ ವಿಮಾನಕೃತರೂಪಕಾಃ ।
ಸಾಧು ಸಾಧ್ವಿತಿ ಗೋಕರ್ಣಂ ಪ್ರಶಶಂಸುಃ ಪುನಃಪುನಃ ॥ ೫೯ ॥

ವರಂ ದತ್ವಾ ಯಥಾಕಾಮಂ ಸ್ವಸ್ತೀತ್ಯುಕ್ತ್ವಾ ದಿವಂ ಯಯುಃ ॥ ೬೦ ॥

ಗೋಕರ್ಣಸ್ತು ತದಾಚಷ್ಟೇ ತತ್ಸರ್ವಂ ನೃಪತೇಃ ಸುಖೀ ।
ಸರ್ವಂ ತಚ್ಚಾತ್ಮಚರಿತಂ ಪೂರ್ತಧರ್ಮಸ್ಯ ಯತ್ಫಲಂ ॥ ೬೧ ॥

ರಾಜ್ಞಾ ತಸ್ಮೈ ಪ್ರದತ್ತಾಶ್ಚ ಗ್ರಾಮಾಶ್ಚೈವ ಪುರಾಣಿ ಚ ।
ವಸ್ತ್ರಾಣಿ ಚ ಗಜಾಶ್ಚೈವ ವಾಜಿನೋನ್ಯದ್ಧನಂ ಬಹು ॥ ೬೨ ॥

ಕಾಲವು ಮೀರದಂತೆ ಬೇಗನೆ ಅದನ್ನು ಮಾಡು" ಎಂದು ಹೇಳಿದನು. ಸೇನಾಪತಿ ದೊರೆಯು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

೫೯-೬೦. ವಿಮಾನಾಕಾರದ ದಿವ್ಯರೂಪರಾದ ಆ ದೇವಿಯರು 'ಸಾಧು, ಸಾಧು (ಭಾಪು, ಭಾಪು)' ಎಂದು ಗೋಕರ್ಣನನ್ನು ಮತ್ತೆ ಮತ್ತೆ ಹೊಗಳಿದರು. ಅಲ್ಲದೆ ಬೇಕಾದ ವರವನ್ನು ಕೊಟ್ಟು, 'ಶುಭವಾಗಲಿ' ಎಂದು ಹೇಳಿ, ಸ್ವರ್ಗಕ್ಕೆ ಹೊರಟು ಹೋದರು.

೬೧. ಸುಖವುಳ್ಳವನಾದ ಗೋಕರ್ಣನು ಆಗ ಆತ್ಮಚರಿತ್ರೆಯೆಲ್ಲವನ್ನೂ ದೇವಾಲಯಾರಾಮಾದಿಗಳ ನಿರ್ಮಾಣಧರ್ಮದಿಂದ ಫಲವೇನೆಂಬುದನ್ನೂ ದೊರೆಗೆ ಹೇಳಿದನು.

೬೨. ದೊರೆಯು ಗೋಕರ್ಣನಿಗೆ ಗ್ರಾಮಗಳನ್ನೂ, ಪಟ್ಟಣಗಳನ್ನೂ, ವಸ್ತ್ರಗಳನ್ನೂ, ಆನೆ ಕುದುರೆಗಳನ್ನೂ, ಬೇರೆ ಬಹು ಧನವನ್ನೂ ಕೊಟ್ಟನು.

ಆಶ್ಚರ್ಯಂ ಪರಮಂ ಧರ್ಮಮಾರಾಸ್ಯ ಮಹತ್ಫಲಂ ।
ಶ್ರುತ್ವಾ ಸರ್ವಂಚಕಾರಾಸೌ ಸಾರ್ವಭೌಮೋ ಮಹೀಪತಿಃ ॥ ೬೩ ॥

ಇತಿ ಶ್ರೀವರಾಹಪುರಾಣೇ ಗೋಕರ್ಣಮಾಹಾತ್ಮ್ಯೇ
ದ್ವಿಸಪ್ತತ್ಯಧಿಕಶತತಮೋಽಧ್ಯಾಯಃ

---

೬೩. ಸಾರ್ವಭೌಮನಾದ ಆ ದೊರೆ, ಉದ್ಯಾನವನನಿರ್ಮಾಣಾದಿಯಾದ ಆಶ್ಚರ್ಯಕರವಾದ ಪರಮಧರ್ಮವನ್ನೂ, ಅದರ ಮಹಾಫಲವನ್ನೂ ಕೇಳಿ, ತಾನೂ ಅದೆಲ್ಲವನ್ನೂ ಮಾಡಿದನು.

ಅಧ್ಯಾಯದ ಸಾರಾಂಶ—

ಶ್ರೀವರಾದೇವನು ಭೂದೇವಿಗೆ ಗೋಕರ್ಣನ ಮತ್ತು ಆತನಿಂದ ಜೀರ್ಣೋದ್ಧಾರವಾದ ಮಧುರೆಯ ಉಪವನದ ಕಥೆಯನ್ನು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತೆರಡನೆಯ ಅಧ್ಯಾಯ

॥ ಶ್ರೀಃ ॥

ತ್ರಯಃಸಪ್ತತ್ಯಧಿಕಶತತಮೋಽಧ್ಯಾಯಃ

॥ ಶ್ರೀವರಾಹ ಉವಾಚ ॥

ತತ್ರ ಸ್ಥಿತ್ವಾ ಯಥಾನ್ಯಾಯಂ ಗೋಕರ್ಣಃ ಸರ್ವಮಂಗಲಂ ।
ಶುಕಂ ಚ ಮಾತಾಪಿತರೌ ಸಾಧುಭಾರ್ಯಾ ಚತುಷ್ಟಯಂ ॥
ಸಂಮಾನ್ಯ ಪೂಜಯಾಮಾಸ ಯಥಾವಿಭವಶಕ್ತಿತಃ ॥ ೧ ॥

ಮಧುರಾವಾಸಿಭಿರ್ಲೋಕೈರುದ್ಯಾನಂ ಕಾರಯಂಸ್ತದಾ ।
ಸ್ವಯಂ ಚ ಕೃತವಾಂಸ್ತತ್ರ ಅವಿಘ್ನಸ್ಯ ಮಹಾಮಖಂ ॥ ೨ ॥

ಭಕ್ಷ್ಯಭೋಜ್ಯೈ ಬ್ರಾಹ್ಮಣೇಭ್ಯೋ ದದೌ ದಾನಾನಿ ನಿತ್ಯಶಃ ।
ಗೀತವಾದಿತ್ರಮಾಂಗಲ್ಯಂ ಪುತ್ರವೃದ್ಧೌ ಯಥೋಚಿತಂ ॥ ೩ ॥

ನೂರ ಎಪ್ಪತ್ತಮೂರನೆಯ ಅಧ್ಯಾಯ

೧. ಶ್ರೀವರಾಹ—ಗೋಕರ್ಣನು ಮಧುರೆಯಲ್ಲಿ ನಿಂತು ಸರ್ವಮಂಗಳ ಸ್ವರೂಪದ ಗಿಳಿಯನ್ನೂ, ತಾಯಿತಂದೆಗಳನ್ನೂ, ಉತ್ತಮರಾದ ನಾಲ್ವರು ಹೆಂಡತಿಯರನ್ನೂ ಉಚಿತವಾದ ರೀತಿಯಲ್ಲಿ ಗೌರವಿಸಿ, ತನ್ನ ಐಶ್ವರ್ಯಕ್ಕನು ಗುಣವಾಗಿ ದೇವಾದಿಗಳನ್ನು ಪೂಜಿಸಿದನು.

೨. ಮಧುರೆಯಲ್ಲಿ ವಾಸಿಸುವ ಜನರಿಂದ ಉದ್ಯಾನವನವನ್ನು ಮಾಡಿಸಿದನು. ತಾನೂ ವಿಘ್ನವಿಲ್ಲದಂತಾಗಲು ಅಲ್ಲಿ ದೊಡ್ಡ ಯಜ್ಞವನ್ನು ಮಾಡಿದನು.

೩–೪. ಬ್ರಾಹ್ಮಣರಿಗೆ ನಿತ್ಯವೂ ಭಕ್ಷ್ಯಭೋಜ್ಯಗಳನ್ನೂ, ದಾನಗಳನ್ನೂ ಕೊಡುತ್ತಿದ್ದನು. ಅಲ್ಲಿನ ಜನರು ಮಹಾತ್ಮನಾದ ಗೋಕರ್ಣನಿಗೆ, ತಮಗೆ

ತತ್ಸರ್ವಂ ಕೃತವಾಲ್ಲೋಕೋ ಗೋಕರ್ಣಸ್ಯ ಮಹಾತ್ಮನಃ ॥ ೪ ॥

ಏಕೈಕಂ ಚ ಪರಿಷ್ವಜ್ಯ ಪ್ರಣಿಪತ್ಯ ಯಥಾಕ್ರಮಂ ।
ಮಾತಾಪಿತ್ರೋಃ ಪ್ರಣಮ್ಯಾಥ ಶಿರಸಾ ಪಾದಪಂಕಜೇ ॥
ಶುಕಂ ಹೃದಿ ಸಮಾಲೋಕ್ಯ ಪ್ರರುರೋದ ಸ ವೈ ವಣಿಕ್ ॥ ೫ ॥

ಯಸ್ಯ ಪ್ರಸಾದಾಜ್ಜೀವಶ್ಚ ಧರ್ಮಶ್ಚಾನುತ್ತಮಾ ಗತಿಃ ।
ವಿಶಿಷ್ಟೇನ ಮಯಾ ಪ್ರಾಪ್ತಃ ರಾಜ್ಞೋ ಲಾಭಃ ಸುಪುಷ್ಕಲಃ ॥ ೬ ॥

ಶುಕೆ ಪುತ್ರಾನ್ಮಯಾಪ್ರಾಪ್ತಮಿಹಲೋಕೇ ಪರತ್ರ ಚ ।
ಏವಂ ವಸನ್ಸುಖಂ ತತ್ರ ಗೋಕರ್ಣಃ ಸಹ ಬಂಧುಭಿಃ ॥ ೭ ॥

ಶುಕನಾಮ್ನಾ ಕೃತಂ ತೇನ ಶಿವಸ್ಯಾಯತನಂ ಮಹತ್ ।
ಶುಕೇಶ್ವರಂ ಪ್ರತಿಷ್ಠಾಪ್ಯ ದಿವ್ಯಂ ಸತ್ರಂ ಚಕಾರ ಹ ॥ ೮ ॥

ಮಗನು ಹುಟ್ಟಿದರೆ ಮಾಡುವಂತೆ ಗೀತವಾದ್ಯಾದಿ ಮಂಗಳಗಳೆಲ್ಲವನ್ನೂ ತಕ್ಕಂತೆ ಮಾಡಿದರು.

೫. ಗೋಕರ್ಣನು ಅವರಲ್ಲಿ ಪ್ರತಿಯೊಬ್ಬನನ್ನೂ ಯಥಾಕ್ರಮವಾಗಿ ಆಲಿಂಗಿಸಿ ನಮಸ್ಕರಿಸಿ ತಾಯಿತಂದೆಗಳ ಪಾದಕಮಲದಲ್ಲಿ ತಲೆಯನ್ನಿಟ್ಟು, ಪ್ರಣಾಮಮಾಡಿ, ಗಿಳಿಯನ್ನು ಎದೆಯಲ್ಲಪ್ಪಿಕೊಂಡು ಗಟ್ಟಿಯಾಗಿ ಅತ್ತನು.

೬. "ಶಿಷ್ಟನಾದ ನಾನು ಈ ಗಿಳಿಯ ಪ್ರಸಾದದಿಂದ ಜೀವವನ್ನೂ, ಧರ್ಮವನ್ನೂ, ಅತ್ಯುತ್ತಮವಾದ ಗತಿಯನ್ನೂ, ದೊರೆಯಿಂದ ಬೇಕಾದಷ್ಟು ಲಾಭವನ್ನೂ ಪಡೆದೆನು.

೭–೮. ಗಿಳಿಯೆಂಬ ಈ ಪುತ್ರನಿಂದ ನನಗೆ ಇಹಪರಸೌಖ್ಯಗಳುಂಟಾಗುವಂತಾಯಿತು." ಎಂದು ಹೇಳಿ, ಬಂಧುಗಳೊಡನೆ ಅಲ್ಲಿ ಸುಖದಿಂದ ವಾಸಿಸುತ್ತ ಆ ಶುಕನ ಹೆಸರಿನಿಂದ ದೊಡ್ಡದಾದ ಶಿವದೇವಾಲಯವನ್ನು ಕಟ್ಟಿಸಿ ಶುಕೇಶ್ವರನನ್ನು ಪ್ರತಿಷ್ಠೆಮಾಡಿ ದಿವ್ಯವಾದ ಸತ್ರವನ್ನೂ ಮಾಡಿದನು.

ಬ್ರಾಹ್ಮಣಾನಾಂ ಶತೇ ದ್ವೇ ಚ ಮಿಷ್ಟಾನ್ನವರಭೋಜನೇ ।
ಶುಕಸತ್ರಮಿತಿಖ್ಯಾತಂ ಮೃತೋ ಮುಕ್ತಿಮುಪಾಪ ಸಃ ॥ ೯ ॥

ವಿಮಾನವರಮಾರುಹ್ಯ ಸ್ವರ್ಗಲೋಕಂಗತಃ ಶುಕಃ ॥ ೧೦ ॥

ಶುಕಪ್ರದಾನೇ ಗೋಕರ್ಣಃ ಫಲಂ ಸ್ನಾನಸ್ಯ ಸಂಗಮಾತ್ ।
ಶ್ರಾದ್ಧಂ ಸುವರ್ಣ್ಯಗೋದಾನಂ ಕೃತ್ವಾ ತಸ್ಮೈ ದದೌ ಚ ಸಃ ॥ ೧೧ ॥

ಶಬರಾಯ ಸಭಾರ್ಯಾಯ ತೇನ ಸ್ವರ್ಗಂ ಗತಂ ಚ ಹ ।
ಶುಕೋದರೇಣ ಸಹಿತೋ ವಿಮಾನವರಮಾಸ್ಥಿತಃ ॥ ೧೨ ॥

ಏತತ್ತೇ ಕಥಿತಂ ಸರ್ವಂ ಮಥುರಾಯಾಂ ಮಹತ್ಫಲಂ ।
ಸರಸ್ವತೀ ಸಂಗಮಸ್ಯ ಗೋಕರ್ಣಸ್ಯ ಶಿವಸ್ಯ ಚ ॥ ೧೩ ॥

೯-೧೦. ಆ ಸತ್ರದಲ್ಲಿ ಎರಡುನೂರು ಜನ ಬ್ರಾಹ್ಮಣರಿಗೆ ಮೃಷ್ಟಾನ್ನದ ಉತ್ತಮಭೋಜನವಾಗುತ್ತಿದ್ದಿತು. ಆ ಸತ್ರವು ಶುಕಸತ್ರವೆಂದು ಪ್ರಸಿದ್ಧವಾಯಿತು. ಗಿಳಿಯು ಮೃತನಾಗಿ ಆ ಜನ್ಮದಿಂದ ವಿಮುಕ್ತನಾಗಿ ಉತ್ತಮವಾದ ವಿಮಾನ ವನ್ನೇರಿ ಸ್ವರ್ಗಲೋಕಕ್ಕೆ ಹೊರಟು ಹೋಯಿತು.

೧೧-೧೨. ಗೋಕರ್ಣನು ಸರಸ್ವತೀ ಸಂಗಮದಲ್ಲಿ ಸ್ನಾನಮಾಡಿ, ಶ್ರಾದ್ಧವನ್ನೂ, ಸುವರ್ಣದೊಡನೆ ಗೋದಾನವನ್ನೂ ಮಾಡಿ, ಆ ಫಲವನ್ನು ತನಗೆ ಗಿಳಿಯನ್ನು ಬೇಡನಿಗೂ ಅವನಹೆಂಡತಿಗೂ ಕೊಟ್ಟನು. ದರಿಂದ ಹೆಂಡತಿ ಯೊಡಗೂಡಿದ ಬೇಡನು ಶುಕೋದರನೊಡನೆ ಉತ್ತಮವಾದ ವಿಮಾನವನ್ನು ಏರಿದನು.

೧೩. ಭೂದೇವೀ, ಮಥುರೆಯಲ್ಲಿರುವ ಸರಸ್ವತೀ ಸಂಗಮದ ಮತ್ತು ಗೋಕರ್ಣೇಶ್ವರನ ಈ ಮಹಾಫಲವಿಚಾರವನ್ನೆಲ್ಲಾ ನಿನಗೆ ಹೇಳಿದೆನು.

ಗೋಕರ್ಣಸ್ಯ ತು ಸಂತಾನಮಕ್ಷಯಂ ಧರ್ಮತೋಽವ್ಯಯಂ ।
ಸಂಭೂತಂ ಸ ಸುಖಂ ಭುಕ್ತ್ವಾ ತತೋ ಮೋಕ್ಷಮವಾಪ್ನುಯಾತ್॥೧೪॥

ಇತಿ ಶ್ರೀವರಾಹಪುರಾಣೇ ಗೋಕರ್ಣಮಾಹಾತ್ಮ್ಯೇ
ತ್ರಯಃಸಪ್ತತ್ಯಧಿಕಶತತಮೋಽಧ್ಯಾಯಃ

---

೧೪. ಗೋಕರ್ಣನ ಸಂತಾನವು ಅಕ್ಷಯವೂ, ಸಂತತವಾಗಿ ಧರ್ಮಯುತವೂ ಆಯಿತು. ಗೋಕರ್ಣನು ಸುಖವನ್ನು ಅನುಭವಿಸಿ, ಬಳಿಕ ಮೋಕ್ಷವನ್ನು ಪಡೆದನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ, ಗೋಕರ್ಣನು ಮಧುರೆಗೆ ಬಂದು, ಬಳಿಕ ಮಾಡಿದ ಉದ್ಯಾನವನ ದೇವಾಲಯ ಸತ್ರನಿರ್ಮಾಣಾದಿಧರ್ಮಕಾರ್ಯಗಳ ವಿಚಾರವನ್ನೂ ಗಿಳಿಯ ಮತ್ತು ಆತನ ಮುಂದಿನ ಚರಿತ್ರೆಯನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತಮೂರನೆಯ ಅಧ್ಯಾಯ.

|| ಶ್ರೀಃ ||

ಚತುಃಸಪ್ತತ್ಯಧಿಕಶತತಮೋಽಧ್ಯಾಯಃ

|| ಶ್ರೀವರಾಹ ಉವಾಚ ||

ಪುನರನ್ಯತ್ರಪ್ರವಕ್ಷ್ಯಾಮಿ ಮಹಾಪಾತಕನಾಶನಂ ।
ಸಂಗಮಸ್ಯ ಪ್ರಭಾವಂ ಹಿ ಪಾಪಿನಾಮಪಿ ಮುಕ್ತಿದಂ || ೧ ||

ಅತ್ರೈವ ಶ್ರೂಯತೇ ಪೂರ್ವಂ ಬ್ರಾಹ್ಮಣಃ ಸಂಶಿತವ್ರತಃ ।
ಮಹಾನಾಮೇತಿವಿಖ್ಯಾತಃ ಸ್ಥಿತೋಽಸೌ ವನಮಾಶ್ರಿತಃ || ೨ ||

ಸ್ವಾಧ್ಯಾಯಯುಕ್ತೋ ಹೋಮೇ ಚ ನಿತ್ಯಯುಕ್ತಃ ಸ ಯೋಗವಿತ್ ।
ಜಪಹೋಮಪರೋ ನಿತ್ಯಂ ಸ್ವಕಾಲಂ ಕ್ಷಪತೇ ಚ ಸಃ || ೩ ||

ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ

೧. ಶ್ರೀವರಾಹ—ಭೂದೇವೀ, ಮಹಾಪಾತಕನಾಶಕವೂ, ಪಾಪಿಗಳಿಗೂ ಮುಕ್ತಿಯನ್ನುಂಟುಮಾಡುವುದೂ ಆದ ಸಂಗಮಪ್ರಭಾವವೆಂಬ ಬೇರೊಂದು ವಿಚಾರವನ್ನು ಹೇಳುತ್ತೇನೆ.

೨. ಮಥುರೆಯ ಸಮೀಪದಲ್ಲೇ ವನದಲ್ಲಿ ಪೂರ್ವದಲ್ಲಿ ತೀಕ್ಷ್ಣವ್ರತಿಯಾದ ಮಹಾನಾಮನೆಂಬ ಪ್ರಸಿದ್ಧನಾದ ಬ್ರಾಹ್ಮಣನಿದ್ದನು.

೩. ಯೋಗಜ್ಞನಾದ ಆತನು ಯಾವಾಗಲೂ ವೇದಶಾಸ್ತ್ರಾಭ್ಯಾಸದಲ್ಲಿಯೂ ಜಪ ಹೋಮಾದಿನಿತ್ಯಕರ್ಮದಲ್ಲಿಯೂ ನಿರತನಾಗಿ ತನ್ನ ಕಾಲವನ್ನು ಕಳೆಯುತ್ತಿದ್ದನು.

ಏವಂ ಕರ್ಮಾಣಿ ಕುರ್ವನ್ಸ ಬ್ರಹ್ಮಲೋಕಜಿಗೀಷಯಾ |
ಬಹೂನ್ಯಬ್ದಾನ್ಯತೀತಾನಿ ಬ್ರಾಹ್ಮಣಸ್ಯ ವನೇ ತದಾ || ೪ ||

ತಸ್ಯ ಬುದ್ಧಿರಿಯಂ ಜಾತಾ ತೀರ್ಥಾಭಿಗಮನಂ ಪ್ರತಿ |
ಪುನಸ್ತೀರ್ಥಜಲೈರೇತತ್ ಕ್ಷಾಲಯಾಮಿ ಕಲೇವರಂ || ೫ ||

ಪ್ರಯಾತೋ ವಿಧಿವತ್ಸಾಕ್ಷಾತ್ ಸೂರ್ಯಸ್ಯೋದಯನಂ ಪ್ರತಿ |
ಅಸಿಕುಂಡಾದಿತಃ ಕೃತ್ವಾ ದಕ್ಷಿಣಾಂ ಕೋಟಿಕಾಂ ತತಃ || ೬ ||

ತಥಾಚೋತ್ತರಕೋಟ್ಯಾಂ ತು ತಥಾ ಮನ್ಮಾಥುರಂ ಚ ಯತ್ |
ಕ್ರಮೇಣ ಸರ್ವತೀರ್ಥಾನಿ ಸ್ನಾತ್ವಾ ಮಾಮಪಿ ಪುಷ್ಕರಂ || ೭ ||

ಗತ್ವಾ ಸರ್ವಾಣಿ ತೀರ್ಥಾನಿ ಸ್ನಾತ್ವಾ ಪೂತೋ ಭವಾಮ್ಯಹಂ |
ಇತಿ ಕೃತ್ವಾ ಚ ಮಥುರಾ ನಿರ್ಜಗಾಮ ಸ ತು ದ್ವಿಜಃ || ೮ ||

---

೪. ಬ್ರಹ್ಮಲೋಕವನ್ನು ಪಡೆಯಬೇಕೆಂದು ಹೀಗೆ ಆ ಬ್ರಾಹ್ಮಣನು ಕರ್ಮಗಳನ್ನಾಚರಿಸುತ್ತ ವನದಲ್ಲಿಯೇ ಹಲವು ವರ್ಷಗಳನ್ನು ಕಳೆದನು.

೫. ಬಳಿಕ ಆತನು "ಈ ದೇಹವನ್ನು ಮತ್ತೆ ತೀರ್ಥೋದಕಗಳಿಂದ ತೊಳೆಯಬೇಕು." ಎಂದುಕೊಂಡು ತೀರ್ಥಯಾತ್ರೆಗೆ ಹೋಗಲು ಮನಸ್ಸನ್ನು ಮಾಡಿದನು.

೬-೮. ಬಳಿಕ ಆತನು ಮಥುರೆಗೆ ಹೋಗಿ ಸಾಕ್ಷಾತ್ ವಿಧಿಪೂರ್ವಕವಾಗಿ ಸೂರ್ಯೋದಯಕಾಲಕ್ಕೆ ಸರಿಯಾಗಿ ದಕ್ಷಿಣದ ಕಡೆಯಲ್ಲಿರುವ ಅಸಿಕುಂಡದಿಂದ ಆರಂಭಿಸಿ, ಉತ್ತರದ ಕೊನೆಯವರೆಗೆ ಮಥುರೆಯಲ್ಲಿರುವ ಸರ್ವತೀರ್ಥಗಳಲ್ಲೂ ಕ್ರಮವಾಗಿ ಸ್ನಾನಮಾಡಿ, ನನ್ನನ್ನು ಸಂದರ್ಶಿಸಿ ಪುಷ್ಕರತೀರ್ಥಕ್ಕೂ ಹೋಗಿ, "ಸರ್ವತೀರ್ಥಗಳಲ್ಲಿಯೂ ಸ್ನಾನಮಾಡಿ ಪವಿತ್ರನಾದೆನು" ಎಂದುಕೊಂಡು, ಮಥುರೆಯಿಂದ ಹಿಂದಿರುಗಿ ಹೊರಟನು.

ಕೃತಪೂಜಾ ನಮಸ್ಕಾರಃ ಅಧ್ವಾನಂ ಪ್ರತ್ಯಪದ್ಯತ ।
ಅಧ್ವಪ್ರಪನ್ನೋ ಹ್ಯದ್ರಶತ್ಪಂಚಪ್ರೇತಾನ್ಸುಭೀಷಣಾ‌ನ್ ॥ ೯ ॥

ಅರಣ್ಯೇ ಕಂಟಕವ್ಯಾತೇ ನಿರ್ಜನೇ ಶಬ್ದವರ್ಜಿತೇ ।
ತಾ‌ನ್ ದೃಷ್ಟ್ವಾ ವಿಕೃತಾಕಾರಾನತಿತೀವ್ರಭಯಂಕರಾ‌ನ್ ॥ ೧೦ ॥

ಈಷದುತ್ತ್ರಸ್ತಹೃದಯೋಽತಿಷ್ಠದುನ್ಮೀಲ್ಯ ಚಕ್ಷುಷೀ ।
ಆಲಂಬ್ಯ ಸ ತತೋ ಧೈರ್ಯಂ ತ್ರಾಸಮುತ್ಸೃಜ್ಯ ದೂರತಃ ॥ ೧೧ ॥

ಪಪ್ರಚ್ಛ ಮಧುರಾಲಾಪಃ ಕೇ ಯೂಯಂ ರೌದ್ರಮೂರ್ತಯಃ ।
ಭವಂತಃ ಕರ್ಮಣಾ ಕೇನ ದುಷ್ಕೃತೇನ ಭಯಾವಹಾಃ ॥ ೧೨ ॥

ವಿಕಸ್ಥಾನಾತ್ಸದಾ ಯೂಯಂ ಪ್ರಸ್ಥಿತಾಃ ಕುತ್ರ ವಾ ಸದಾ ॥ ೧೩ ॥

---

೯. ಮಧುರೆಯಲ್ಲಿ ಮಾಡಬೇಕಾದ ಪೂಜಾನಮಸ್ಕಾರಗಳನ್ನು ಮಾಡಿ, ಹೊರಟು ದಾರಿಯಲ್ಲಿ ಹೋಗುತ್ತ ಆ ಬ್ರಾಹ್ಮಣನು ಅತಿಭಯಂಕರರಾದ ಐವರು ಪಿಶಾಚರನ್ನು ಕಂಡನು.

೧೦-೧೩. ಮುಳ್ಳುಗಳಿಂದಡಿದು, ನಿರ್ಜನವೂ, ನಿಶ್ಶಬ್ದವೂ ಆಗಿರುವ ಕಾಡಿನಲ್ಲಿ ಅತ್ಯಂತಭೀಕರರೂ, ವಿಕಾರಾಕಾರರೂ, ಆದ ಆ ಪಿಶಾಚರನ್ನು ನೋಡಿ ಮನಸ್ಸಿನಲ್ಲಿ ಸ್ವಲ್ಪ ಹೆದರಿ, ಬಳಿಕ ಧೈರ್ಯವನ್ನವಲಂಬಿಸಿ, ಕಣ್ಣುಗಳನ್ನು ತೆರೆದು, ಭಯವನ್ನು ದೂರತಳ್ಳಿ ನಿಂತು, ಇಂಪಾದ ಧ್ವನಿಯಿಂದ “ ರೌದ್ರಮೂರ್ತಿಗಳಾದ ನೀವು ಯಾರು ? ನೀವು ಯಾವ ದುಷ್ಕರ್ಮದಿಂದ ಭಯಂಕರರಾಗಿರುವಿರಿ ? ನೀವು ಒಂದೆಡೆಯಿಂದ ಸದಾ ಮತ್ತೊಂದೆಡೆಗೆ ಎಲ್ಲಿಗೆ ಹೋಗುವಿರಿ ? ” ಎಂದು ಕೇಳಿದನು.

|| ಪ್ರೇತಾ ಊಚುಃ ||

ಕ್ಷುತ್ಪಿಪಾಸಾತುರಾ ನಿತ್ಯಂ ಬಹುದುಃಖಸಮನ್ವಿತಾಃ ।
ದುರ್ಬುಧ್ಯಾ ಚ ವೃತಾಃ ಸರ್ವೇ ಹೀನಜ್ಞಾನಾ ವಿಚೇತಸಃ || ೧೪ ||

ನ ಜಾನೀಮೋ ದಿಶಂಕಾಂಚಿದ್ವಿದಿಶಂಚಾಪಿ ಚಾಧ್ವನಿ ।
ನಾಂತರಿಕ್ಷಂ ಮಹೀಂ ಚಾಪಿ ಜಾನಿಮೋ ದಿವಸಂ ತಥಾ || ೧೫ ||

ಯದೇತದ್ದುಃಖಮಾಪನ್ನಂ ಸುಖೋದರ್ಕಫಲಂ ಭವೇತ್ ।
ಅಪ್ರಕಾಮಮಿದಂ ಭಾತಿ ಭಾಸ್ಕರೋದಯನಂ ಪ್ರತಿ || ೧೬ ||

ಅಹಂ ಪರ್ಯುಷಿತೋನಾಮ ಪರಃ ಸೂಚೀಮುಖಸ್ತತಃ ।
ಶೀಘ್ರಗೋ ರೋಧಕಶ್ಚೈವ ಪಂಚಮೋ ಲೇಖಕಸ್ತಥಾ || ೧೭ ||

---

೧೪. ಪ್ರೇತಗಳು—ದುರ್ಬುದ್ಧಿಯಿಂದ ಕೂಡಿದವರೂ, ಜ್ಞಾನಹೀನರೂ, ವಿಚೇತನರೂ ಆದ ನಾವೆಲ್ಲರೂ ಯಾವಾಗಲೂ ಹಸಿವು ಬಾಯಾರಿಕೆಯಿಂದ ಪೀಡಿತರಾಗಿ ದುಃಖವುಳ್ಳವರಾಗಿರುವೆವು.

೧೫. ನಾವು ದಾರಿಯಲ್ಲಿ ದಿಕ್ಕುಗಳನ್ನಾಗಲಿ, ವಿದಿಕ್ಕುಗಳನ್ನಾಗಲಿ ಅರಿಯೆವು. ನಮಗೆ ಆಕಾಶವಾಗಲಿ, ಭೂಮಿಯಾಗಲಿ, ಹಗಲಾಗಲಿ ತಿಳಿಯುವುದಿಲ್ಲ.

೧೬. ನಮಗೆ ಈ ದುಃಖವೊದಗಿರುವುದರಿಂದ ಮುಂದೆ ಸುಖಕರವಾದ ಫಲವೇ ಆದೀತು. ಸೂರ್ಯೋದಯವಾಗಿದ್ದರೂ ನಮಗೆ ಬೆಳಕು ಸಾಲದುದಾಗಿ ಕಾಣುವುದು.

೧೭. ನನಗೆ ಪರ್ಯುಷಿತನೆಂದು ಹೆಸರು. ಇವನಿಗೆ ಸೂಚೀಮುಖನೆಂದು ಹೆಸರು. ಅವನು ಶೀಘ್ರಗನೆಂಬ ಹೆಸರಿನವನು. ಮತ್ತೊಬ್ಬನ ಹೆಸರು ರೋಧಕನೆಂದು. ಐದನೆಯವನು ಲೇಖಕನೆಂಬ ಹೆಸರುಳ್ಳವನು.

|| ಬ್ರಾಹ್ಮಣ ಉವಾಚ ||

ಪ್ರೇತಾನಾಂ ಕರ್ಮಜಾತಾನಾಂ ನಾಮ್ನಾಂ ವೈ ಸಂಭವಃ ಕುತಃ |
ಕಿಂತತ್ಕಾರಣ ಮೇತದ್ಧಿ ಯೂಯಂ ಸರ್ವೇ ಸನಾಮಕಾಃ || ೧೮ ||

|| ಪ್ರೇತ ಉವಾಚ ||

ಅಹಂ ಸ್ವಾದು ಸದಾಶ್ನಾಮಿ ದದ್ಮಿ ಪರ್ಯುಷಿತಂ ದ್ವಿಜೇ |
ಏತತ್ಕಾರಣಮುದ್ದಿಶ್ಯ ನಾಮ ಪರ್ಯುಷಿತಂ ದ್ವಿಜ || ೧೯ ||

ಸೂಚಿತಾ ಬಹವೋನೇನ ವಿಪ್ರಾಶ್ಚಾನ್ನಾದಿಕಾಂಕ್ಷಿಣಃ |
ಏತತ್ಕಾರಣಮುದ್ದಿಶ್ಯ ಪರಃ ಸೂಚೀಮುಖಸ್ತತಃ || ೨೦ ||

ಸಮರ್ಥಿತೋ ದ್ವಿಜೇನೈವ ಶೀಘ್ರಂ ಯಾತಿ ಯತೋಹಿ ಸಃ |
ಏತತ್ಕಾರಣಮುದ್ದಿಶ್ಯ ಶೀಘ್ರಗಸ್ತೇನ ಸೋಚ್ಯತೇ || ೨೧ ||

---

೧೮. ಬ್ರಾಹ್ಮಣ—ದುಷ್ಕರ್ಮದಿಂದ ಹುಟ್ಟಿದ ಪ್ರೇತಗಳಿಗೆ ಹೆಸರುಗಳು ಬಂದುದು ಹೇಗೆ ? ನೀವೆಲ್ಲರೂ ಹೆಸರುಗಳುಳ್ಳವರಾಗಿರುವುದಕ್ಕೆ ಕಾರಣವೇನು ?

೧೯. ಪಿಶಾಚಿ—ಬ್ರಾಹ್ಮಣನೇ, ನಾನು ನಿತ್ಯವೂ ರುಚಿಯಾದ ಹೊಸ ಆಹಾರವನ್ನು ತಿಂದು, ಮಿಕ್ಕ ತಂಗಳನ್ನು ಬ್ರಾಹ್ಮಣನಿಗೆ ಕೊಡುತ್ತಿದ್ದೆನು. ಆ ಕಾರಣದಿಂದ ನನಗೆ ಪರ್ಯುಷಿತನೆಂಬ ಹೆಸರು ಬಂದಿತು.

೨೦. ಇವನು ಅನ್ನಾದಿಗಳನ್ನು ಅಪೇಕ್ಷಿಸುವ ಹಲವರು ಬ್ರಾಹ್ಮಣರನ್ನು ಸೂಚಿಸುತ್ತಿದ್ದನು. ಆ ಕಾರಣಕ್ಕಾಗಿ ಇವನಿಗೆ ಸೂಚೀಮುಖನೆಂಬ ಹೆಸರಾಯಿತು.

೨೧. ಅವನು ಸಮರ್ಥನಾಗಿ ಬ್ರಾಹ್ಮಣನೊಡನೆ ಶೀಘ್ರವಾಗಿ ಹೋಗುವುದರಿಂದ ಅವನಿಗೆ ಶೀಘ್ರಗನೆಂಬ ಹೆಸರಾಗಿದೆ.

ಏಕೋ ಗೃಹಸ್ಯ ಮಧ್ಯೇಶು ಭುಂಕ್ತೇ ದ್ವಿಜಭಯೇನ ಹಿ ।
ಸಮಾರುಹ್ಯೋದ್ವಿಗ್ನಮನಾ ರೋಧಕಸ್ತೇನ ಚೋಚ್ಯತೇ ॥ ೨೨ ॥

ಮೌನೇನಾಪಿ ಸ್ಥಿತೋ ನಿತ್ಯಂ ಯಾಚಿತೋಽಪಿ ಲಿಖೇನ್ಮಹೀಂ ।
ಅಸ್ಮಾಕಮಪಿ ಪಾಪಿಷ್ಠೋ ಲೇಖಕಸ್ತೇನ ನಾಮ ವೈ ॥ ೨೩ ॥

ಮದೇನ ಲೇಖಕೋ ಯಾತಿ ರೋಧಕಸ್ತು ಹ್ಯವಾಕ್ಶಿರಾಃ ।
ಶೀಘ್ರಗಃ ಪಂಗುತಾಂ ಪ್ರಾಪ್ತಃ ಪರಂ ಸೂಚೀಮುಖಸ್ತತಃ ॥ ೨೪ ॥

ಉಷಿತಃ ಕೇವಲಗ್ರೀವೋ ಲಂಬೋಷ್ಠೋ ವೈ ಮಹೋದರಃ ।
ಬೃಹದ್ವೃಷಣತುಷ್ಕಾಂಗಃ ಪಾಪಾದೇವ ಪ್ರಜಾಯತೇ ॥ ೨೫ ॥

---

೨೨. ಅವನೊಬ್ಬನೇ ಮನೆಯ ಮಧ್ಯದಲ್ಲಿ ಬ್ರಾಹ್ಮಣರಾರಾದರೂ ಬಂದಾರೆಂಬ ಹೆದರಿಕೆಯಿಂದ ಖಿನ್ನನಾಗಿ ಬಾಗಿಲುಗಳನ್ನೆಲ್ಲಾ ಹಾಕಿಕೊಂಡು ಊಟಮಾಡುತ್ತಿದ್ದನು. ಆದುದರಿಂದ ಅವನಿಗೆ ರೋಧಕನೆಂಬ ಹೆಸರಾಯಿತು.

೨೩. ಯಾರಾದರೂ ಏನನ್ನಾದರೂ ಬೇಡಿದರೂ ಮಾತನಾಡದೆ ಸುಮ್ಮನೆ ಇರುತ್ತಿದ್ದನಲ್ಲದೆ ನೆಲವನ್ನು (ಕಾಲ)ಬೆರಳಿನಿಂದ ಕೆರೆ (ಬರೆ)ಯುತ್ತಿದ್ದನು. ಆದುದರಿಂದ ನಮ್ಮೆಲ್ಲರಿಗಿಂತಲೂ ಪಾಪಿಷ್ಠನಾದ ಅವನಿಗೆ ಲೇಖಕನೆಂದು ಹೆಸರಾಯಿತು.

೨೪–೨೫. ಲೇಖಕನು ಮದದಿಂದ ನಡೆಯುವನು. ರೋಧಕನು ತಲೆಕೆಳಗಾಗಿರುವನು. ಶೀಘ್ರಗನು ಕುಂಟನಾದನು. ಸೂಚೀಮುಖನು ಬರಿಯ ಕತ್ತು, ಜೋಲುದುಟಿಯೂ ಉಳ್ಳವನಾದನು. ಪರ್ಯುಷಿತನು ಮಹೋದರನೂ, ಬೃಹದ್ವೃಷಣನೂ, ಒಣಮೈಯುಳ್ಳವನೂ ಆದನು. ಪಾಪದಿಂದಲೇ ಹೀಗಾದುದು.

ಏತತ್ತೇ ಸರ್ವಮಾಖ್ಯಾತಂ ಆತ್ಮವೃತ್ತಾಂತ ಸಂಭವಂ |
ಯದಿ ತೇ ಶ್ರವಣೇ ಶ್ರದ್ಧಾ ಪೃಚ್ಛ ಚಾನ್ಯದ್ಯದಿಚ್ಛಸಿ || ೨೬ ||

|| ಬ್ರಾಹ್ಮಣ ಉವಾಚ ||

ಯೇ ಜೀವಾ ಭುವಿ ತಿಷ್ಠಂತಿ ಸರ್ವ ಆಹಾರಜೀವಿನಃ |
ಯುಷ್ಮಾಕಮಪಿ ಚಾಹಾರಂ ಶ್ರೋತುಮಿಚ್ಛಾಮಿ ತತ್ತ್ವತಃ || ೨೭ ||

|| ಪ್ರೇತಾ ಊಚುಃ ||

ಶೃಣು ಚಾಹಾರಮಸ್ಮಾಕಂ ಸರ್ವಭೂತದಯಾಪರ |
ಯಚ್ಛ್ರುತ್ವಾ ನಿಂದಸೇ ನಿತ್ಯಂ ಭೂಯೋ ಭೂಯಶ್ಚ ನಿತ್ಯಶಃ || ೨೮ ||

ಶ್ಲೇಷ್ಮಮೂತ್ರಪುರೀಷೇಣ ಯೋಷಿತಾಂ ಚ ಸಮಂತತಃ |
ಗೃಹಾಣಿ ತ್ಯಕ್ತಶೌಚಾನಿ ಪ್ರೇತಾ ಭುಜಂತಿ ತತ್ರ ವೈ || ೨೯ ||

---

೨೬. ಬ್ರಾಹ್ಮಣನೇ, ನಿನಗೆ ನಮ್ಮ ಈ ವೃತ್ತಾಂತವೆಲ್ಲವನ್ನೂ ಹೇಳಿದುದಾಯಿತು. ನಿನಗೆ ಇನ್ನೂ ಕೇಳಲು ಆಸಕ್ತಿಯಾದರೆ ಬೇರೆ ಯಾವುದು ಬೇಕೋ ಅದನ್ನು ಕೇಳು.

೨೭. ಬ್ರಾಹ್ಮಣ—ಭೂಮಿಯಲ್ಲಿರುವ ಪ್ರಾಣಿಗಳೆಲ್ಲವೂ ಆಹಾರದಿಂದ ಜೀವಿಸುವುವು. ನಿಮ್ಮ ಆಹಾರವಾವುದೆಂಬುದನ್ನು ನಿಜವಾಗಿ ಕೇಳಿ ತಿಳಿಯಲು ಅಪೇಕ್ಷಿಸುವೆನು.

೨೮. ಪಿಶಾಚಗಳು—ಸರ್ವಪ್ರಾಣಿದಯಾಪರನೇ, ನಮ್ಮ ಆಹಾರವನ್ನು ಕೇಳು. ಅದನ್ನು ಕೇಳಿ ನೀನು ನಿತ್ಯವೂ ಮತ್ತೆ ಮತ್ತೆ ನಮ್ಮನ್ನು ನಿಂದಿಸುವೆ.

೨೯. ಪಿಶಾಚಗಳು ಅಶುದ್ಧವಾದ ಮನೆಗಳ ಸುತ್ತಲೂ ಇದ್ದುಕೊಂಡು ಸ್ತ್ರೀಯರ ಶ್ಲೇಷ್ಮಮಲಮೂತ್ರಗಳನ್ನು ತಿನ್ನುತ್ತವೆ.

ಬಲಿಮಂತ್ರವಿಹೀನಾನಿ ದಾನಹೀನಾನಿ ಯಾನಿ ಚ ।
ಗುರವೋ ನೈವ ಪೂಜ್ಯಂತೇ ಸ್ತ್ರೀಜಿತಾನಿ ಗೃಹಾಣಿ ಚ ॥ ೩೦ ॥

ಯಾನಿ ಪ್ರಕೀರ್ಣ ಭಾಂಡಾನಿ ಪ್ರಕೀರ್ಣೋಚ್ಛೇಷಣಾನಿ ಚ ।
ನಿತ್ಯಂ ಚ ಕಲಹೋ ಯತ್ರ ಪ್ರೇತಾ ಭುಂಜಂತಿ ತತ್ರ ವೈ ॥ ೩೧ ॥

ಅಪಾತ್ರೇ ಪ್ರತಿದತ್ತಾನಿ ವಿಧಿಹೀನಾನಿ ಯಾನಿ ಚ ।
ನಿಂದಿತಾನಾಂ ದ್ವಿಜಾತೀನಾಂ ಜುಗುಪ್ಸಿತಕುಲೋದ್ಭವೇ ॥ ೩೨ ॥

ಜಾತಾನಾಂ ವಿಹಿತಾನಾಂ ಚ ದುಷ್ಕೃತಂ ಕರ್ಮಕುರ್ವತಾಂ ।
ತೇಭ್ಯೋ ದತ್ತಂ ತದಸ್ಮಾಕಮುಪತಿಷ್ಠತಿ ಭೋಜನೇ ॥
ಏತತ್ಪಾಪಕರಂ ಚಾನ್ಯದ್ಭೋಜನಂ ದುಷ್ಟಕರ್ಮಿಣಾಂ ॥ ೩೩ ॥

ನಿರ್ವಿಣ್ಣಾಃ ಪ್ರೇತಭಾವೇನ ಪೃಚ್ಛಾಮಃ ಸುದೃಢವ್ರತ ।
ಪ್ರೇತೋ ಯಥಾ ನ ಭವತಿ ತಥಾ ಬ್ರೂಹಿ ತಪೋಧನ ॥ ೩೪ ॥

೩೦–೩೧. ದೇವಪೂಜೆಯೂ, ಮಂತ್ರವೂ, ಗುರುಪೂಜೆಯೂ ಇಲ್ಲದೆಯೇ ಇರುವ ಸ್ತ್ರೀವಶವಾದ ಮನೆಗಳಲ್ಲೂ ಪಾತ್ರೆಪದಾರ್ಥಗಳನ್ನೂ, ಎಂಜಲನ್ನೂ ಎಲ್ಲೆಲ್ಲೂ ಹರಡಿರುವ ಮನೆಗಳಲ್ಲಿಯೂ, ನಿತ್ಯವೂ ಜಗಳಗಳು ನಡೆಯುವ ಮನೆಗಳಲ್ಲಿಯೂ ಪಿಶಾಚಗಳು ತಿನ್ನುತ್ತವೆ.

೩೨–೩೩. ಅಪಾತ್ರದಲ್ಲೂ, ನಿಂದಿತರಾದ ದ್ವಿಜರಿಗೂ, ದುಷ್ಕುಲದಲ್ಲಿ ಹುಟ್ಟಿದವನಿಗೂ ಸತ್ಕುಲದಲ್ಲಿ ಹುಟ್ಟಿದ್ದರೂ ದುಷ್ಕರ್ಮಗಳನ್ನು ಮಾಡುವವರಿಗೂ ಕೊಡುವ ದಾನವು ನಮಗೆ ಭೋಜನಕ್ಕಾಗಿ ಸೇರುತ್ತದೆ. ದುಷ್ಟಕರ್ಮಿಗಳಾದ ಪ್ರೇತಗಳಿಗೆ ಇದು ಹೆಚ್ಚಾಗಿ ಪಾಪವನ್ನುಂಟುಮಾಡುವ ಮತ್ತೊಂದು ರೀತಿಯ ಭೋಜನ.

೩೪. ಅತಿ ದೃಢವಾದ ವ್ರತವುಳ್ಳವನೇ, ಈ ಪಿಶಾಚಜನ್ಮದಿಂದ ದುಃಖಪಟ್ಟು ಸಾಕಾಗಿ ನಿನ್ನನ್ನು ಕೇಳುತ್ತೇವೆ. ತಪೋಧನನೇ, ಮನುಷ್ಯರು ಪಿಶಾಚಜನ್ಮವನ್ನು ಪಡೆಯದೆ ಇರುವುದು ಹೇಗೆಂಬುದನ್ನು ಹೇಳು.

|| ಬ್ರಾಹ್ಮಣ ಉವಾಚ ||

ಏಕರಾತ್ರತ್ರಿರಾತ್ರೇಣ ಕೃಚ್ಛ್ರ ಚಾಂದ್ರಾಯಣಾದಿಭಿಃ |
ವ್ರತೈರಭ್ಯುದ್ಯತಃ ಪೂಜೋ ನ ಪ್ರೇತೋ ಜಾಯತೇ ನರಃ || ೩೫ ||

ಮಿಷ್ಟಾನ್ನಪಾನದಾತಾ ಚ ಸತತಂ ಶ್ರದ್ಧಯಾನ್ವಿತಃ |
ಯತೀನಾಂ ಪೂಜಕೋ ನಿತ್ಯಂ ನ ಪ್ರೇತೋ ಜಾಯತೇ ನರಃ || ೩೬ ||

ತ್ರೀನಧ್ಭಿಃ ಪಂಚ ಚೈಕಂವಾ ಪ್ರತಿನಿತ್ಯಂ ತು †ಪೋಷಯೇತ್ |
ಸರ್ವಭೂತದಯಾಲುಶ್ಚ ನ ಪ್ರೇತೋ ಜಾಯತೇ ನರಃ || ೩೭ ||

ದೇವಾತಿಥಿಷು ಪೂಜಾಸು ಗುರುಪೂಜಾಸು ನಿತ್ಯಶಃ |
ರತೋ ವೈ ಪಿತೃಪೂಜಾಯಾಂ ನ ಪ್ರೇತೋ ಜಾಯತೇ ನರಃ || ೩೮ ||

---

೩೫. ಒಂದುರಾತ್ರಿ ಅಥವಾ ಮೂರುರಾತ್ರಿಯ ಕೃಚ್ಛ್ರ ಚಾಂದ್ರಾಯಣಾದಿ ವ್ರತಗಳನ್ನು ಮಾಡಿ ಪವಿತ್ರನಾದ ಮನುಷ್ಯನು ಪಿಶಾಚಜನ್ಮವನ್ನು ಪಡೆಯುವುದಿಲ್ಲ.

೩೬. ಯಾವಾಗಲೂ ಆಸಕ್ತಿಯಿಂದ ಮೃಷ್ಟಾನ್ನಪಾನಗಳನ್ನು ದಾನ ಮಾಡುವವನೂ, ನಿತ್ಯವೂ ಯತಿಗಳನ್ನು ಪೂಜಿಸುವವನೂ ಪಿಶಾಚನಾಗುವುದಿಲ್ಲ.

೩೭. ಐದು, ಮೂರು, ಅಥವಾ ಕಡೆಯಪಕ್ಷ ಒಂದು †ಮರವನ್ನು ನೀರುಹಾಕಿ ಪೋಷಿಸುವವನೂ, ಸರ್ವಪ್ರಾಣಿಗಳಲ್ಲಿಯೂ ದಯಾಪರನಾಗಿರುವವನೂ ಪಿಶಾಚನಾಗುವುದಿಲ್ಲ.

೩೮. ದೇವಾತಿಥಿಪೂಜೆಯಲ್ಲಿಯೂ ಗುರುಪೂಜೆಯಲ್ಲಿಯೂ ಪಿತೃಪೂಜೆಯಲ್ಲಿಯೂ ನಿತ್ಯವೂ ಆಸಕ್ತನಾಗಿರುವವನು ಪ್ರೇತಜನ್ಮವನ್ನು ಪಡೆಯನು.

---

† ಶ್ಲೋಕದಲ್ಲಿ ಪೋಷ್ಯವಾವುದೆಂಬುದು ತಿಳಿಯುವುದಿಲ್ಲ.

ಜಿತಕ್ರೋಧೋ ಹ್ಯಮಾತ್ಸರ್ಯಸ್ತೃಷ್ಣಾ ಸಂಗವಿವರ್ಜಿತಃ |
ಕ್ಷಮಾಯುಕ್ತೋ ದಾನಶೀಲೋ ನ ಪ್ರೇತೋ ಜಾಯತೇ ನರಃ || ೩೯ ||

ಏಕಾದಶೀಂ ಸಿತಾಂ ಕೃಷ್ಣಾಂ ಸಪ್ತಮೀಂ ವಾ ಚತುರ್ದಶೀಂ |
ಉಪವಾಸಪರೋ ನಿತ್ಯಂ ನ ಸ ಪ್ರೇತೋಽಭಿಜಾಯತೇ || ೪೦ ||

ಗಾಂ ಬ್ರಾಹ್ಮಣಂ ಚ ತೀರ್ಥಾನಿ ಪರ್ವತಾಂಶ್ಚ ನದೀಸ್ತಥಾ |
ದೇವಾಂಶ್ಚ ವಂದತೇ ನಿತ್ಯಂ ನ ಪ್ರೇತೋ ಜಾಯತೇ ಹಿ ಸಃ || ೪೧ ||

|| ಪ್ರೇತಾ ಊಚುಃ ||

ತ್ವತ್ತಸ್ತುಚ್ಛ್ರುತಮಸ್ಮಾಭಿರ್ಯೋ ನ ಪ್ರೇತೋಽಭಿಜಾಯತೇ |
ಪ್ರೇತಸ್ತು ಜಾಯತೇ ಕೇನ ತದ್ವದ ತ್ವಂ ಮಹಾಮುನೇ || ೪೨ ||

---

೩೯. ಕೋಪವನ್ನೂ, ಮಾತ್ಸರ್ಯವನ್ನೂ, ಅತ್ಯಾಸೆಯನ್ನೂ ಬಿಟ್ಟು ಕ್ಷಮೆಯುಳ್ಳವನಾಗಿ, ದಾನಶೀಲನಾಗಿರುವವನು ಪಿಶಾಚಿಯಾಗುವುದಿಲ್ಲ.

೪೦. ಪ್ರತಿಯೊಂದು ಶುಕ್ಲಕೃಷ್ಣಪಕ್ಷದ ಏಕಾದಶಿಯಲ್ಲಿಯೂ, ಕೃಷ್ಣಪಕ್ಷದ ಸಪ್ತಮಿ ಅಥವಾ ಚತುರ್ದಶಿಯಲ್ಲಿಯೂ ಉಪವಾಸಮಾಡುವ ಮನುಷ್ಯನು ಪಿಶಾಚಜನ್ಮವನ್ನು ಪಡೆಯುವುದಿಲ್ಲ.

೪೧. ಗೋವುಗಳನ್ನೂ, ಬ್ರಾಹ್ಮಣರನ್ನೂ, ತೀರ್ಥಗಳನ್ನೂ, ಪರ್ವತಗಳನ್ನೂ, ನದಿಗಳನ್ನೂ, ದೇವರನ್ನೂ ನಿತ್ಯವೂ ವಂದಿಸುವ ಮನುಷ್ಯನು ಪಿಶಾಚನಾಗುವುದಿಲ್ಲ.

೪೨. ಪಿಶಾಚಗಳು—ಎಂತಹವರು ಪಿಶಾಚರಾಗುವುದಿಲ್ಲವೆಂಬುದನ್ನು ನಿನ್ನಿಂದ ನಾವು ಕೇಳಿದುದಾಯಿತು. ಮಹಾಮುನಿಯೇ, ಯಾವ ಕಾರಣದಿಂದ ಪಿಶಾಚಜನ್ಮವು ಮನುಷ್ಯರಿಗೆ ಬರುವುದೆಂಬುದನ್ನೂ ಹೇಳು.

|| ವಿಪ್ರ ಉವಾಚ ||

ಶೂದ್ರಾನ್ನೇನ ತು ಭುಕ್ತೇನ ಬ್ರಾಹ್ಮಣೋ ಮ್ರಿಯತೇ ಯದಿ ।
ತೇನೈವ ಚೋದರಸ್ಥೇನ ಸ ಪ್ರೇತೋ ಜಾಯತೇ ಧ್ರುವಂ || ೪೩ ||

ನಗ್ನಕಾಪಾಲಿಪಾಷಂಡ ಸಂಗತಾಸನ ಭೋಜನೈಃ ।
ಮನುಷ್ಯಃ ಪ್ರೇತತಾಂ ಯಾತಿ ಸ್ಪರ್ಶೇನ ಸುತರಾಂ ತಥಾ ||
ಪೂರ್ವಪುಣ್ಯಂ ವಿನಶ್ಯೇತ್ತು ಪ್ರೇತೋ ಭವತಿ ನಿತ್ಯಶಃ || ೪೪ ||

ಪಾಷಂಡಾಶ್ರಮಸಂಸ್ಥಶ್ಚ ಮದ್ಯಪಃ ಪಾರದಾರಿಕಃ ।
ವೃಥಾಮಾಂಸರತೋ ನಿತ್ಯಂ ಸ ಚ ಪ್ರೇತೋಽಭಿಜಾಯತೇ || ೪೫ ||

ದೇವಸ್ವಂ ಬ್ರಾಹ್ಮಣಸ್ವಂ ಚ ಗುರೋರ್ದ್ರವ್ಯಂ ಹರೇತ್ತು ಯಃ ।
ಕನ್ಯಾಂ ದದಾತಿ ಶುಲ್ಕೇನ ಸ ಚ ಪ್ರೇತೋಽಭಿಜಾಯತೇ || ೪೬ ||

---

೪೩. ಬ್ರಾಹ್ಮಣ—ಬ್ರಾಹ್ಮಣನು ಶೂದ್ರಾನ್ನವನ್ನು ತಿಂದು ಅದು ಹೊಟ್ಟೆಯಲ್ಲಿರುವಾಗ ಮೃತನಾದರೆ ಅವನು ತಪ್ಪದೆ ಪಿಶಾಚಜನ್ಮವನ್ನು ಪಡೆಯುವನು.

೪೪. ನಗ್ನಕಾಪಾಲಿಪಾಷಂಡರ ಜತೆಯಲ್ಲಿ ಒಂದೇ ಪೀಠದಲ್ಲಿ ಕುಳಿತುಕೊಳ್ಳುವುದರಿಂದಲೂ, ಊಟಮಾಡುವುದರಿಂದಲೂ, ಅವರ ಸ್ಪರ್ಶದಿಂದಲೂ, ಮನುಷ್ಯನು ಮೃತನಾದ ಬಳಿಕ ನಿಜವಾಗಿಯೂ ಪಿಶಾಚನಾಗುವನು. ಅವನ ಪೂರ್ವಪುಣ್ಯವೂ ಹಾಳಾಗುವುದು.

೪೫. ನಾಸ್ತಿಕರ ನಿವಾಸದಲ್ಲಿರುವವನೂ, ಮದ್ಯಪಾಯಿಯೂ, ಪರಸ್ತ್ರೀ ಸಂಗಮಮಾಡುವವನೂ, ಸುಮ್ಮನೆ ಯಾವಾಗಲೂ ಮಾಂಸದಲ್ಲಿ ಆಸಕ್ತಿಯುಳ್ಳವನೂ ಮೃತನಾದ ಬಳಿಕ ಪಿಶಾಚನಾಗಿ ಜನಿಸುವನು.

೪೬. ದೇವರ ಸ್ವತ್ತನ್ನೂ, ಬ್ರಾಹ್ಮಣಸ್ವತ್ತನ್ನೂ, ಗುರುವಿನ ದ್ರವ್ಯವನ್ನೂ ಅಪಹರಿಸುವವನೂ, ಶುಲ್ಕವನ್ನು ತೆಗೆದುಕೊಂಡು ಕನ್ನೆಯನ್ನು ವಿವಾಹಮಾಡಿ ಕೊಡುವವನೂ ಮೃತನಾದ ಬಳಿಕ ಪಿಶಾಚನಾಗುವನು.

ಮಾತರಂ ಪಿತರಂ ಭ್ರಾತೃಭಗಿನ್ಯೌ ಚ ಸ್ತ್ರಿಯಂ ಸುತಂ ।
ಅದುಷ್ಟಾನ್ಯಸ್ತ್ಯಜೇತ್ಸೋಽಪಿ ಪ್ರೇತೋ ಭವತಿ ಚ ಧ್ರುವಂ ॥ ೪೭ ॥

ಅಯಾಜ್ಯಯಾಜನಾಚ್ಚೈವ ಯಾಜ್ಯಾನಾಂ ಪರಿವರ್ಜನಾತ್ ।
ರತೋ ವಾ ಶೂದ್ರಸೇವಾಯಾಂ ಸ ಪ್ರೇತೋ ಜಾಯತೇ ನರಃ ॥ ೪೮ ॥

ಬ್ರಹ್ಮಹಾ ಚ ಕೃತಘ್ನಶ್ಚ ಗೋಘ್ನೋ ವೈ ಪಂಚಪಾತಕೀ ।
ಭೂಮಿಕನ್ಯಾಪಹರ್ತಾ ಚ ಸ ಪ್ರೇತೋ ಜಾಯತೇ ನರಃ ॥ ೪೯ ॥

ಗುರೋರ್ಧರ್ಮೋಪದೇಷ್ಟುಶ್ಚ ನಿತ್ಯಂ ಹಿತಮಭೀಪ್ಸತಃ ।
ನ ಕರೋತಿ ವಚಸ್ತಸ್ಯ ಸ ಪ್ರೇತೋ ಜಾಯತೇ ನರಃ ॥ ೫೦ ॥

---

೪೭ ತಾಯಿತಂದೆಗಳನ್ನೂ, ಸಹೋದರ ಸಹೋದರಿಯರನ್ನೂ, ಹೆಂಡತಿಯನ್ನೂ, ಮಗನನ್ನೂ ದೋಷರಹಿತರಾಗಿದ್ದರೂ ಪರಿತ್ಯಜಿಸುವವನು ನಿಜವಾಗಿಯೂ ಪಿಶಾಚಜನ್ಮವನ್ನು ಪಡೆಯುವನು.

೪೮. ಯಜ್ಞವನ್ನು ಮಾಡಲು ಅನರ್ಹನಾದವನಿಂದ ಯಜ್ಞವನ್ನು ಮಾಡಿಸುವವನೂ, ಅರ್ಹನಾದವನು ಮಾಡಿಸಲು ಕರೆದರೂ ಹೋಗದೆ ತಿರಸ್ಕರಿಸುವವನೂ, ಶೂದ್ರಸೇವೆಯಲ್ಲಿ ನಿರತನಾದವನೂ ಸತ್ತಬಳಿಕ ಪಿಶಾಚಜನ್ಮವನ್ನು ಪಡೆಯುವನು.

೪೯. ಬ್ರಹ್ಮಹತ್ಯೆಮಾಡುವವನೂ, ಕೃತಘ್ನನೂ, ಗೋಹತ್ಯೆಮಾಡುವವನೂ, +ಪಂಚಪಾತಕಿಯೂ, ಭೂಮಿಯನ್ನೂ, ಕನ್ನೆಯನ್ನೂ ಅಪಹಾರಮಾಡುವವನೂ ಮುಂದೆ ಪಿಶಾಚನಾಗುವನು.

೫೦. ಯಾವಾಗಲೂ ಹಿತವನ್ನು ಬಯಸುವ ಧರ್ಮೋಪದೇಶಕನಾದ ಗುರುವಿನ ಮಾತನ್ನು ನಡೆಯಿಸದಿರುವವನು ಮೃತನಾದ ಬಳಿಕ ಪಿಶಾಚಜನ್ಮವನ್ನು ಪಡೆಯುವನು.

+ ಪಂಚಪಾತಕಗಳು = ಸುವರ್ಣಸ್ತೇಯ, ಸುರಾಪಾನ, ಗುರುಪತ್ನೀಗಮನ ಬ್ರಹ್ಮಹತ್ಯೆ, ಈ ಪಾತಕಗಳನ್ನು ಮಾಡಿದವನ ಸಹವಾಸ.

ಅಸದ್ಭ್ಯಃ ಪ್ರತಿಗೃಹ್ಣಾತಿ ನಾಸ್ತಿಕೇಭ್ಯೋ ವಿಶೇಷತಃ ।
ಸ ಪಾಪೋ ಜಾಯತೇ ಪ್ರೇತ ಆಹಾರಾದಿ ವಿವರ್ಜಿತಃ ॥ ೫೧ ॥

॥ ಪ್ರೇತಾ ಊಚುಃ ॥

ಯ ಏತತ್ಕರ್ಮ ಕುರ್ವಂತಿ ಮೂಢಾಃಧರ್ಮ ಪರಾಯಣಾಃ ।
ವಿರುದ್ಧಕಾರಿಣಃ ಪಾಪಾಸ್ತೇಷಾಂಕಾಂಚಿದ್ಗತಿಂ ವದ ॥ ೫೨ ॥

॥ ಬ್ರಾಹ್ಮಣ ಉವಾಚ ॥

ಯೇ ಧರ್ಮವಿಮುಖಾ ಮೂಢಾ ದಯಾದಾನವಿವರ್ಜಿತಾಃ ।
ತೇಷಾಂ ಗತಿರ್ಭವೇದೇಕಾ ಮಥುರಾಯಾಂ ತು ಸಂಗಮೇ ॥ ೫೩ ॥

ಶ್ರವಣದ್ವಾದಶೀಯೋಗೇ ಮಾಸಿ ಭಾದ್ರಪದೇ ತಥಾ ।
ಸ್ನಾನಂ ತತ್ರ ದೇವಂತು ಪೂಜಯೇಜ್ಜುಹುಯಾತ್ತಥಾ ॥ ೫೪ ॥

---

೫೧. ಕೆಟ್ಟ ಮನುಷ್ಯರಿಂದಲೂ, ನಾಸ್ತಿಕರಿಂದಲೂ ದಾನವನ್ನು ತೆಗೆದುಕೊಳ್ಳುವವನು ಮೃತನಾದಮೇಲೆ ಆಹಾರಾದಿಗಳಿಲ್ಲದ ಪಿಶಾಚನಾಗುವನು.

೫೨. ಪ್ರೇತಗಳು—ಅಧರ್ಮದಲ್ಲಿ ಆಸಕ್ತರೂ, ಮೂಢರೂ, ವಿರೋಧವಾಗಿಯೇ ಆಚರಿಸುವವರೂ, ಪಾಪಿಗಳೂ ಆಗಿ ನೀನು ಹೇಳಿದ ದುಷ್ಕಾರ್ಯಗಳನ್ನು ಮಾಡುವವರಿಗೆ ಪಿಶಾಚಜನ್ಮವನ್ನು ತಪ್ಪಿಸಿಕೊಳ್ಳುವುದಕ್ಕೆ ಯಾವುದಾದರೂ ಒಂದು ಮಾರ್ಗವನ್ನು ಹೇಳು.

೫೩–೫೫. ಬ್ರಾಹ್ಮಣ—ದಯಾದಾನಗಳನ್ನು ಬಿಟ್ಟು, ಧರ್ಮಪರಾಙ್ಮುಖರಾದ ಮೂಢರಿಗೆ ಪಿಶಾಚಜನ್ಮವನ್ನು ತಪ್ಪಿಸಿಕೊಳ್ಳಲು ಒಂದೇ ಒಂದು ಮಾರ್ಗವಿದೆ. ಭಾದ್ರಪದಮಾಸದಲ್ಲಿ ಶ್ರವಣನಕ್ಷತ್ರದಿಂದ ಕೂಡಿದ ದ್ವಾದಶಿಯದಿನ ಮಥುರೆಯ ಸರಸ್ವತೀ ಯಮುನಾಸಂಗಮದಲ್ಲಿ ಸ್ನಾನಮಾಡಿ, ಪಿತೃತರ್ಪಣವನ್ನೂ

ಸುವರ್ಣಮನ್ನಂ ವಸ್ತ್ರಂ ಚ ಛತ್ರೋಪಾನತ್ಸುಸಂಯುತಮ್ ।
ತತ್ರ ಸ್ನಾತ್ವಾ ಪಿತೄಂಸ್ತರ್ಪ್ಯ ದತ್ವಾ ಕರಕಮೇವ ಚ ॥ ೫೫ ॥

ನ ತೇ ಪ್ರೇತಾ ಭವಿಷ್ಯಂತಿ ಮಾರ್ಗಸ್ಥೋ ಯೋ ನಮಸ್ಯತೇ ।
ವಿಮಾನವರಮಾರುಹ್ಯ ವಿಷ್ಣುಲೋಕಂ ಸ ಗಚ್ಛತಿ ॥ ೫೬ ॥

ತತ್ರ ತೀರ್ಥೇ ನರಃ ಸ್ನಾತೋ ಹೃಷ್ಟಪುಷ್ಟೋ ಯಥಾಶ್ರುತಃ ।
ಧ್ಯಾತಶ್ಚ ಕೀರ್ತಿತೋ ವಾಪಿ ತೇನ ಗಂಗಾವಗಾಹಿತಾ ॥ ೫೭ ॥

ತೀರ್ಥಸ್ಯೈವ ತು ಮಾಹಾತ್ಮ್ಯಂ ಪ್ರೇತೋ ಭೂತ್ವಾ ಶೃಣೋತಿಯಃ ।
ತಸ್ಯಾಕ್ಷಯಪದಂ ವಿಷ್ಣೋರ್ಭವತೀತಿ ಮಯಾ ಶ್ರುತಮ್ ॥ ೫೮ ॥

ಮಾಡಿ, ವಾಮನದೇವನನ್ನು ಸುವರ್ಣವಸ್ತ್ರ, ಅನ್ನ, ಛತ್ರಿ, ಪಾದುಕೆ, ಕಮಂಡಲು ಮೊದಲಾದುವನ್ನು ಅರ್ಪಿಸಿ ಪೂಜಿಸಿ, ಬಳಿಕ ದಾನವನ್ನೂ ಹೋಮವನ್ನೂ ಮಾಡಬೇಕು.

೫೬. ಹಾಗೆ ಮಾಡುವವರು ಪಿಶಾಚರಾಗುವುದಿಲ್ಲ. ಅವರೂ, ಹಾಗೆ ಸಂಗಮದಲ್ಲಿ ಪೂಜಾದಿಗಳನ್ನು ಮಾಡುವುದನ್ನು ದಾರಿಯಲ್ಲಿ ಹೋಗುತ್ತ ನೋಡಿ ವಂದಿಸಿದವನೂ ಉತ್ತಮವಾದ ವಿಮಾನವನ್ನೇರಿ ವಿಷ್ಣುಲೋಕವನ್ನು ಸೇರುವರು.

೫೭. ಆ ಯಮುನಾಸಂಗಮತೀರ್ಥದಲ್ಲಿ ಸ್ನಾನಮಾಡಿ ಹೃಷ್ಟನೂ, ಪುಷ್ಟನೂ ಆದವನನ್ನು, ಧ್ಯಾನಿಸುವವನೂ, ಸ್ತೋತ್ರಮಾಡುವವನೂ, ಅವನ ಹೆಸರನ್ನು ಕೇಳುವವನೂ ಗಂಗೆಯಲ್ಲಿ ಸ್ನಾನಮಾಡಿದವನಂತೆ ಪುಣ್ಯಭಾಗಿಯಾಗುವನು.

೫೮. ಪ್ರೇತನಾಗಿರುವ ಯಾರು ಈ ಸಂಗಮತೀರ್ಥದ ಮಹಿಮೆಯನ್ನು ಕೇಳುವನೋ ಅವನಿಗೆ ವಿಷ್ಣುವಿನ ಅಕ್ಷಯಪದವು ದೊರೆಯುವುದೆಂದು ನಾನು ಕೇಳಿರುವೆನು.

॥ ಪ್ರೇತಾ ಊಚುಃ ॥

ಅಸ್ಮಾಕಂ ವದ ಕಲ್ಯಾಣ ವ್ರತಸ್ಯಾಸ್ಯ ವಿಧಿಂ ಪರಂ ।
ಯೇನ ವೈ ಕ್ರಿಯಮಾಣೇನ ಪ್ರೇತತ್ವಾತ್ತು ವಿಮುಚ್ಯತೇ ॥ ೫೯ ॥

॥ ಬ್ರಾಹ್ಮಣ ಉವಾಚ ॥

ಏವಮೇವ ವ್ರತಸ್ಯಾಸ್ಯ ವಿಧಾನಂ ಕರ್ಮಸಂಹಿತಂ ।
ಪುರಾಣಂ ಕಥಿತಂ ರಾಜ್ಞೇ ಮಾಂಧಾತ್ರೇ ಪೃಚ್ಛತೇ ಪುರಾ ॥ ೬೦ ॥

ವಸಿಷ್ಠೇನ ಮಹಾಭಾಗಾಃ ಶೃಣುಧ್ವಂ ಕಥಯಾಮ್ಯಹಂ ।
ಪ್ರೇತಾನಾಂ ಮೋಕ್ಷಣಂ ಪುಣ್ಯಂ ಗತಿಪ್ರವರದಾಯಕಂ ॥ ೬೧ ॥

ಮಾಸಿ ಭಾದ್ರಪದೇ ಶುದ್ಧಾ ದ್ವಾದಶೀ ಶ್ರವಣಾನ್ವಿತಾ ।
ತಸ್ಯಾಂ ದತ್ತಂ ಹುತಂ ಸ್ನಾನಂ ಸರ್ವಂ ಲಕ್ಷಗುಣಂ ಭವೇತ್ ॥ ೬೨ ॥

---

೫೯. ಪ್ರೇತಗಳು—ಮಂಗಳಕರನೇ, ಯಾವುದನ್ನು ಮಾಡಿ, ಪ್ರೇತ (ಪಿಶಾಚ)ತ್ವವನ್ನು ತಪ್ಪಿಸಿಕೊಳ್ಳಬಹುದೋ ಆ ವಾಮನದೇವನ ಉತ್ತಮವಾದ ವ್ರತದ ವಿಧಾನವನ್ನು ನಮಗೆ ಹೇಳು.

೬೦–೬೧. ಬ್ರಾಹ್ಮಣ—ಮಹಾಭಾಗ್ಯರೇ, ಹಿಂದೆ ಹೀಗೆಯೇ ಮಾಂಧಾತ್ರ ಚಕ್ರವರ್ತಿ ಕೇಳಲಾಗಿ ವಸಿಷ್ಠಮಹರ್ಷಿ ಈ ವ್ರತದ ವಿಧಾನವನ್ನು ಸರಿಯಾಗಿ ಪುರಾಣವಾಗಿ ಹೇಳಿದ್ದನು. ಪ್ರೇತಗಳಿಗೆ ಆ ಜನ್ಮವನ್ನು ತಪ್ಪಿಸಿ ಉತ್ತಮಗತಿಯನ್ನುಂಟುಮಾಡುವ ಪುಣ್ಯವಾದ ಅದನ್ನು ಹೇಳುತ್ತೇನೆ. ಕೇಳಿ.

೬೨. ಭಾದ್ರಪದಮಾಸದ ಶುಕ್ಲಪಕ್ಷದ ಶ್ರವಣನಕ್ಷತ್ರದಿಂದ ಕೂಡಿದ ದ್ವಾದಶಿಯಲ್ಲಿ ಅಲ್ಲಿ ಮಾಡುವ ಸ್ನಾನದಾನ ಹೋಮಗಳೆಲ್ಲವೂ ಲಕ್ಷದಷ್ಟು ಗುಣವುಳ್ಳವುಗಳಾಗುವುವು.

ಸಂಗಮೇ ಚ ಪುನಃ ಸ್ನಾತ್ವಾ ಪೂಜಯಿತ್ವಾ ತು ವಾಮನಂ ।
ಕಲಶಂ ವಿಧಿನಾ ದತ್ವಾ ತಸ್ಯ ಪುಣ್ಯಫಲಂ ಶೃಣು ॥ ೬೩ ॥

ಕಪಿಲಾನಾಂ ಶತಂ ದತ್ವಾ ಹಿರಣ್ಯೋಪಸ್ಕರಾಂಚಿತಂ ।
ತೇ ಯತ್ಫಲಮವಾಪ್ನೋತಿ ತದ್ದ್ವಾದಶ್ಯಾಮ ಖಂಡಿತಂ ॥ ೬೪ ॥

ರಾಕ್ಷಸತ್ವಂ ನ ಗಚ್ಛೇತ್ತು ಶ್ರವಣದ್ವಾದಶೀವ್ರತಾತ್ ।
ಸ್ವರ್ಗೇ ಚ ವಸತೇ ತಾವದ್ಯಾವದಿಂದ್ರಾಶ್ಚತುರ್ದಶ ॥ ೬೫ ॥

ತತಃ ಸ್ವರ್ಗಾತ್ಪರಿಭ್ರಷ್ಟೋ ಬ್ರಾಹ್ಮಣೋ ವೇದಪಾರಗಃ ।
ಜಾತಿಸ್ಮರೋ ಮಹಾಯೋಗೀ ಮೋಕ್ಷಮಾರ್ಗಪರಾಯಣಃ ॥
ಧ್ಯಾನಯುಕ್ತೇನ ಭಾವೇನ ಮುಕ್ತೋ ಯಾತ್ಯಪುನರ್ಭವಂ ॥ ೬೬ ॥

---

೬೩. ಯಮುನಾಸಂಗಮದಲ್ಲಿ ಸ್ನಾನಮಾಡಿ, ವಾಮನದೇವನನ್ನು ಪೂಜಿಸಿ, ವಿಧಿಪೂರ್ವಕವಾಗಿ ಕಲಶವನ್ನು ದಾನಮಾಡುವುದರಿಂದಾಗುವ ಪುಣ್ಯ ಫಲವನ್ನು ಕೇಳು.

೬೪. ಸ್ವರ್ಣಾಲಂಕೃತಗಳೂ, ಸುವರ್ಣದಕ್ಷಿಣಾಸಹಿತಗಳೂ ಆದ ನೂರು ಗೋವುಗಳನ್ನು ದಾನಮಾಡಿ ಮನುಷ್ಯನು ಪಡೆಯುವ ಪೂರ್ಣಫಲವನ್ನು ಯಮುನಾಸಂಗಮದಲ್ಲಿ ಶ್ರವಣದ್ವಾದಶಿಯದಿನ ಮಾಡುವ ಸ್ನಾನಕಲಶದಾನ ಗಳಿಂದ ಪಡೆಯುವನು.

೬೫. ಶ್ರವಣದ್ವಾದಶಿಯ ವ್ರತವನ್ನಾಚರಿಸುವುದರಿಂದ ಪಾಪಿಯೂ ರಾಕ್ಷಸಜನ್ಮವನ್ನು ಪಡೆಯದಿರುವನು. ಅಲ್ಲದೆ ಹದಿನಾಲ್ಕುಜನ ಇಂದ್ರರು (ಸ್ವರ್ಗವನ್ನು) ಆಳುವವರೆಗೂ ಅವನು ಸ್ವರ್ಗದಲ್ಲಿ ವಾಸಿಸುವನು.

೬೬. ಬಳಿಕ ಸ್ವರ್ಗದಿಂದ ಹೊರಟು, ವೇದಪಾರಂಗತನೂ, ಹಿಂದಿನ ಜನ್ಮಸ್ಮರಣೆಯುಳ್ಳವನೂ, ಮಹಾಯೋಗಿಯೂ ಆದ ಬ್ರಾಹ್ಮಣನಾಗಿ ಭೂಮಿಯಲ್ಲುದಿಸಿ, ಮುಕ್ತಿಮಾರ್ಗಾಸಕ್ತನಾಗಿ, ಧ್ಯಾನನಿರತನಾಗಿ ಪುನರ್ಜನ್ಮ ವಿಲ್ಲದ ಮೋಕ್ಷವನ್ನು ಪಡೆಯುವನು.

ಕನಕಂಚ ಸುಸಂಪೀತಂ ಸಾನ್ನಂ ರತ್ನ ಸಮನ್ವಿತಂ ॥ ೬೭ ॥

ಯಥಾಲಾಭೋಪಪನ್ನೇನ ಸೌವರ್ಣೋ ವಾಮನಃ ಕೃತಃ ।
ಉಪಾನಚ್ಛತ್ರಸಂಯುಕ್ತೋ ವಿಧಿಮಂತ್ರ ಪುರಸ್ಸರಃ ॥ ೬೮ ॥

ಕೃತ್ವಾ ಚ ವಿಧಿವತ್ತಸ್ಯ ಸ್ನಾನಪೂಜಾದಿಕಂ ನರಃ ।
ಮಂತ್ರೈಸ್ತಥಾವಿಧ್ಯೈರ್ಹೋಮ್ಯೈರ್ಬ್ರಾಹ್ಮಣಂ ಚೋಪಪಾದಯೇತ್॥ ೬೯ ॥

ಆಗಚ್ಛ ವರದಾನಂತ ಶ್ರೀಪತೇ ಮದನುಗ್ರಹಾತ್ ।
ಸರ್ವಗೋಪಿ ನಿಜಾಂಶೇನ ಸ್ಥಾನಮೇತದಲಂಕುರು ॥ ೭೦ ॥

(ಆವಾಹನಂ)

ಯತ್ತ್ವಂ ನಕ್ಷತ್ರರೂಪೇಣ ದ್ವಾದಶ್ಯಾಂ ನಭಸಿ ಸ್ಥಿತಃ ।
ತನ್ನಕ್ಷತ್ರಮಹಂ ವಂದೇ ಮನೋವಾಂಛಿತ ಸಿದ್ಧಯೇ ॥ ೭೧ ॥

(ನಕ್ಷತ್ರಂ)

೬೭–೬೯. ಅಪರಂಜಿಯಿಂದ ರತ್ನ ಖಚಿತವಾದ ವಾಮನಮೂರ್ತಿಯನ್ನು ತನ್ನ ಶಕ್ತಿಗನುಸಾರವಾದ ಪರಿಮಾಣದಲ್ಲಿ ಮಾಡಿಸಿ, ವಿಧಿಮಂತ್ರಪೂರ್ವಕವಾಗಿ ಪಾದುಕಾಛತ್ರಿಗಳೊಡಗೂಡಿರುವಂತೆ ಮಾಡಿ, ವಿಧಿಯಂತೆ ಆ ಮೂರ್ತಿಗೆ ಸ್ನಾನ ಪೂಜಾದಿಗಳನ್ನು ಮಾಡಿ, ವಿಧ್ಯುಕ್ತಮಂತ್ರಗಳಿಂದ ಹೋಮವನ್ನೂ ಮಾಡಿ, ಬ್ರಾಹ್ಮಣನನ್ನೂ ಸಿದ್ಧಪಡಿಸಿಕೊಳ್ಳಬೇಕು.

೭೦. ' ವರದಾ, ಅನಂತಾ, ಶ್ರೀಪತೀ, ಇಲ್ಲಿಗೆ ದಯಮಾಡಿಸು. ನೀನು ಸರ್ವಗತನಾಗಿದ್ದರೂ ನನಗೆ ಅನುಗ್ರಹಮಾಡುವುದಕ್ಕಾಗಿ ನಿನ್ನ ಅಂಶದಿಂದ ಈ ಸ್ಥಾನವನ್ನಲಂಕರಿಸು ' ಎಂದು ದೇವನನ್ನು ಆವಾಹಿಸಬೇಕು.

೭೧. " ನೀನು ಈ ದ್ವಾದಶಿಯದಿನ ಆಕಾಶದಲ್ಲಿ ಯಾವ ನಕ್ಷತ್ರರೂಪದಿಂದಿರುವೆಯೋ ಆ ನಕ್ಷತ್ರವನ್ನು ನಾನು ಮನಸ್ಸಿನ ಇಷ್ಟಾರ್ಥಸಿದ್ಧಿಗಾಗಿ ನಮಸ್ಕರಿಸುತ್ತೇನೆ " ಎಂದು ನಕ್ಷತ್ರವಂದನೆ.

ನಮಃ ಕಮಲನಾಭಾಯ ಕಮಲಾಲಯ ಕೇಶವ ।
ಅಮೂರ್ತೇ ಸರ್ವತೋವ್ಯಾಪಿನ್ನಾರಾಯಣ ನಮೋಽಸ್ತುತೇ ॥ ೭೨ ॥
(ಸ್ನಾನಂ)

ಸರ್ವವ್ಯಾಪಿ ಜಗದ್ಯೋನೇ ನಮಃ ಸರ್ವಮಯಾಚ್ಯುತ ।
ಶ್ರವಣದ್ವಾದಶೀಯೋಗೇ ಪೂಜಾಂ ಗೃಹ್ಣೀಷ್ವಕೇಶವ ॥ ೭೩ ॥
(ಪೂಜಾ)

ಧೂಪೋಽಯಂ ದೇವದೇವೇಶ ಶಂಖಚಕ್ರಗಧಾದರ ।
ಅಚ್ಯುತಾನಂತ ಗೋವಿಂದ ವಾಸುದೇವ ನಮೋಽಸ್ತುತೇ ॥ ೭೪ ॥
(ಧೂಪಂ)

ತೇಜಸಾ ಸರ್ವಲೋಕಾಶ್ಚ ವಿವೃತಾಃ ಸಂತು ತೇವ್ಯಯಾಃ ।
ತ್ವಂ ಹಿ ಸರ್ವಗತಂ ತೇಜೋ ಜನಾರ್ದನ ನಮೋಽಸ್ತುತೇ ॥ ೭೫ ॥
(ದೀಪಂ)

---

೭೨. "ಲಕ್ಷ್ಮೀನಿವಾಸನೇ, ಕೇಶವಾ, ನಿರಾಕಾರನಾಗಿ ಸರ್ವವ್ಯಾಪಿಯಾಗಿರುವವನೇ, ನಾರಾಯಣಾ, ಪದ್ಮನಾಭನೇ, ನಿನಗೆ ನಮಸ್ಕಾರ" ಎಂದು ಅಭಿಷೇಕಮಾಡಬೇಕು.

೭೩. 'ಸರ್ವವ್ಯಾಪಕನೇ, ಜಗತ್ಕಾರಣನೇ, ಸರ್ವಮಯನೇ, ಅಚ್ಯುತಾ. ಕೇಶವಾ, ನಿನಗೆ ನಮಸ್ಕಾರ, ಶ್ರವಣನಕ್ಷತ್ರದಿಂದ ಕೂಡಿದ ಈ ದ್ವಾದಶಿಯಲ್ಲಿ ಈ ಪೂಜೆಯನ್ನು ಪರಿಗ್ರಹಿಸು' ಎಂದು ಪೂಜಿಸಬೇಕು.

೭೪. 'ದೇವ ದೇವೇಶ, ಶಂಖಚಕ್ರಗಧಾಧರ, ಅಚ್ಯುತಾ, ಅನಂತಾ. ಗೋವಿಂದಾ, ವಾಸುದೇವ, ನಿನಗೆ ನಮಸ್ಕಾರ. ಇದು ಧೂಪ' ಎಂದು ಧೂಪವನ್ನು ಹಾಕಬೇಕು.

೭೫. "ನಿನ್ನ ತೇಜಸ್ಸಿನಿಂದ ಸರ್ವಲೋಕಗಳೂ ನಾಶರಹಿತಗಳಾಗಿ ವಿಸ್ತಾರವುಳ್ಳವಾಗಲಿ. ನೀನೇ ಸರ್ವವ್ಯಾಪಕವಾದ ತೇಜಸ್ಸಾಗಿರುವೆ. ಜನಾರ್ದನನೇ, ನಿನಗೆ ನಮಸ್ಕಾರ" ಎಂದು ಹೇಳಿ, ದೀಪವನ್ನು ದರ್ಶಿಸಬೇಕು.

×ಅದಿತೇರ್ಗರ್ಭಮಾದಾಯ ವೈರೋಚನಿಸಮಾಯ ಚ ।
ತ್ರಿಭಿಃ ಕ್ರಮೈರ್ಜಿತಾಲೋಕಾ ವಾಮನಾಯ ನಮೋಽಸ್ತುತೇ ॥ ೭೬ ॥
(ನೈವೇದ್ಯಂ)

ದೇವಾನಾಂ ಸಮ್ಮತಶ್ಚಾಪಿ ಯೋಗಿನಾಂ ಪರಮಾಗತಿಃ ।
ಜಲಶಾಯೀ ಜಗದ್ಯೋನೇ ಅರ್ಘ್ಯಂ ಮೇ ಪ್ರತಿಗೃಹ್ಯತಾಂ ॥ ೭೭ ॥
(ಅರ್ಘ್ಯಂ)

ಹವ್ಯಭುಗ್ಹವ್ಯಕರ್ತಾ ತ್ವಂ ಹೋತಾಹವ್ಯಂ ತ್ವಮೇವ ಚ ।
ಸರ್ವಮೂರ್ತೇ ಜಗದ್ಯೋನೇ ನಮಸ್ತೇ ಕೇಶವಾಯ ಚ ॥ ೭೮ ॥
(ಇತಿ ಸ್ವಾಹಾಹೋಮಃ)

---

೭೬. × 'ಬಲಿಬಂಧನಕ್ಕಾಗಿ ಅದಿತಿಯ ಗರ್ಭದಲ್ಲುದಿಸಿ, ಮೂರಡಿಯಿಂದ ಆಕ್ರಮಿಸಿ, ಲೋಕಗಳನ್ನು ಜಯಿಸಿದ ವಾಮನನಾದ ನಿನಗೆ ನಮಸ್ಕಾರ' ಎಂದು ನೈವೇದ್ಯವನ್ನರ್ಪಿಸಬೇಕು.

೭೭. "ನೀನು ದೇವತೆಗಳಿಗೆ ಇಷ್ಟನಾದವನೂ, ಯೋಗಿಗಳಿಗೆ ಪರಮ ಗತಿಯೂ ಆಗಿರುವೆ. ಜಲಶಯನಾ, ಜಗತ್ಕರ್ತಾ, ನಾನು ಅರ್ಪಿಸುವ ಅರ್ಘ್ಯವನ್ನು ಸ್ವೀಕರಿಸು," ಎಂದು ಅರ್ಘ್ಯ.

೭೮. ಹೋಮಮಾಡಿದುದನ್ನು ಭುಜಿಸುವವನೂ, ಹೋಮದ್ರವ್ಯವನ್ನು ಸೃಷ್ಟಿಸುವವನೂ, ಹೋಮಮಾಡುವವನೂ, ಹೋಮದ್ರವ್ಯವೂ ನೀನೇ ಸರ್ವಮೂರ್ತೀ, ಜಗತ್ಕರ್ತಾ, ಕೇಶವಾ, ನಿನಗೆ ನಮಸ್ಕಾರ ಎಂದು ಸ್ವಾಹಾ ಹೋಮ.

× ೮೧ ನೆಯದು ನೈವೇದ್ಯಕ್ಕೂ, ೭೬ ನೆಯದು ಕರಕಧ್ಯಾನಕ್ಕೂ ಉಚಿತವೆಂದು ತೋರುತ್ತದೆ.

ಹಿರಣ್ಯಮನ್ನಂತ್ವಂ ದೇವ ಜಲವಸ್ತ್ರಮಯೋ ಭವಾನ್ ।

(ದಕ್ಷಿಣಾಂ)

ಉಪಾನಚ್ಛತ್ರದಾನೇನ ಪ್ರೀತೋ ಭವ ಜನಾರ್ದನ ॥ ೭೯ ॥

ಪರ್ಜನ್ಯೋ ವರುಣಃ ಸೂರ್ಯಃ ಸಲಿಲಂ ಕೇಶವಃ ಶಿವಃ ।

ಅಗ್ನಿರ್ವೈಶ್ರವಣೋ ದೇವಃ ಪಾಪಂ ಹರತು ಮೇಽವ್ಯಯಃ ॥ ೮೦ ॥

(ವಾಮನಸ್ತುತಿಂ)

×ಅನ್ನಂ ಪ್ರಜಾಪತಿರ್ವಿಷ್ಣುರುದ್ರಚಂದ್ರೇಂದ್ರಭಾಸ್ಕರಾಃ ।

ಅನ್ನಂ ತ್ವಷ್ಟಾಯಮೋಽಗ್ನಿಶ್ಚ ಪಾಪಂ ಹರತು ಮೇಽವ್ಯಯಃ ॥ ೮೧ ॥

(ಕರಕದಾನಂ)

---

೭೯. 'ದೇವಾ, ದ್ರವ್ಯವೂ, ಅನ್ನವೂ ನೀನೇ ಜಲಮಯನೂ ವಸ್ತ್ರಮಯನೂ ನೀನೇ' ಎಂದು ದಕ್ಷಿಣೆಯನ್ನೂ, ಜನಾರ್ದನಾ, ಪಾದುಕಾಛತ್ರದಾನದಿಂದ ಪ್ರೀತನಾಗು' ಎಂದು ಛತ್ರಿ, ಪಾದರಕ್ಷೆ ಮೊದಲಾದುವುಗಳನ್ನೂ ಅರ್ಪಿಸಬೇಕು..

೮೦. "ಇಂದ್ರನೂ, ವರುಣನೂ, ಸೂರ್ಯನೂ, ಜಲವೂ, ಕೇಶವನೂ, ಶಿವನೂ, ಅಗ್ನಿಯೂ ಕುಬೇರನೂ ಆದ ನಾಶರಹಿತನಾದ ದೇವನೇ, ನನ್ನ ಪಾಪವನ್ನು ಪರಿಹರಿಸು. ಎಂದು ವಾಮನನನ್ನು ಸ್ತುತಿಸಬೇಕು.

೮೧. ×'ಅನ್ನವೇ ಬ್ರಹ್ಮವಿಷ್ಣು ಮಹೇಶ್ವರರು. ಚಂದ್ರೇಂದ್ರಸೂರ್ಯರು ಅನ್ನವೇ ತ್ವಷ್ಟೃ ಅನ್ನವೇ ಯಮಾಗ್ನಿಗಳು ಹೀಗೆ ಸರ್ವರೂಪನೂ ನಾಶರಹಿತನೂ ಆದ ದೇವನು ನನ್ನ ಪಾಪವನ್ನು ಹೋಗಲಾಡಿಸಲಿ' ಎಂದು ಕಮಂಡಲವನ್ನು ಅರ್ಪಿಸಬೇಕು.

× ಹಿಂದಿನ ಪುಟದ ಟಿಪ್ಪಣಿಯೇ ಇಲ್ಲೂ ಅನ್ವಹಿಸುತ್ತದೆ.

ವಾಮನೋಬುದ್ಧಿದಾತಾ ಚ ದ್ರವ್ಯಸ್ಥೋವಾಮನಃ ಸ್ವಯಂ ।
ವಾಮನಸ್ತಾರಕೋಭಾಭ್ಯಾಂ ವಾಮನಾಯ ನಮೋಸ್ತುತೇ ॥ ೮೨ ॥
(ಯಜಮಾನಃ)

ವಾಮನಂ ಪ್ರತಿಗೃಹ್ಣಾಮಿ ವಾಮನೋಮೇ ಪ್ರಯಚ್ಛತಿ ।
ವಾಮನಸ್ತಾರಕೋಭಾಭ್ಯಾಂ ವಾಮನಾಯ ನಮೋನಮಃ ॥ ೮೩ ॥
(ದ್ವಿಜಃ ಪ್ರತಿಗೃಹೀತಾ)

ಕಪಿಲಾಂಗೇಷು ತಿಷ್ಠಂತಿ ಭುವನಾನಿ ಚತುರ್ದಶ ।
ದತ್ವಾ ಕಾಮದುಘಾಂ ಲೋಕಾ ಭವಂತಿ ಸಫಲಾ ನೃಣಾಂ ॥ ೮೪ ॥
(ಗೋದಾನಂ)

---

೮೨. 'ವಾಮನದೇವನೇ, ನೀನೇ ಬುದ್ಧಿದಾತೃವು, ದ್ರವ್ಯದಲ್ಲೂ ವಾಮನನಾದ ನೀನೇ ನೆಲಸಿರುವವನು, ವಾಮನನೇ, ನೀನೇ ದಾನಕೊಡುವವನಿಗೂ, ತೆಗೆದುಕೊಳ್ಳುವವನಿಗೂ ಉತ್ತಾರಕನು. ವಾಮನನಾದ ನಿನಗೆ ನಮಸ್ಕಾರ.' ಎಂದು ಯಜಮಾನನು ಹೇಳಬೇಕು.

೮೩. 'ವಾಮನದೇವನನ್ನು ಪರಿಗ್ರಹಿಸುತ್ತೇನೆ. ವಾಮನದೇವನೇ ನನಗೆ ಕೊಡುತ್ತಿದ್ದಾನೆ. ವಾಮನದೇವನೇ ನಮ್ಮಿಬ್ಬರಿಗೂ ಉತ್ತಾರಕನು ; ವಾಮನದೇವನಿಗೆ ನಮಸ್ಕಾರ ನಮಸ್ಕಾರ' ಎಂದು ವಾಮನಮೂರ್ತಿಯನ್ನು ಪರಗ್ರಹಿಸುವ ಬ್ರಾಹ್ಮಣನು ಹೇಳಬೇಕು.

೮೪. 'ಕಪಿಲವರ್ಣದ ಹಸುವಿನ ಅವಯವಗಳಲ್ಲಿ ಹದಿನಾಲ್ಕು ಲೋಕಗಳೂ ಇರುವುವು. ಇಷ್ಟಾರ್ಥಪ್ರದವಾದ ಗೋವನ್ನು ದಾನಮಾಡುವ ಜನರು ಮನುಷ್ಯರಲ್ಲಿ ಸಫಲರು' ಎಂದು ಗೋದಾನವನ್ನು ಮಾಡಬೇಕು.

ಮಮ ಪಾಪಚ್ಛಿದೇ ತುಭ್ಯಂ ದೇವಗರ್ಭಾ ಸುಪೂಜಿತಾ ।
ಮಯಾ ವಿಸರ್ಜಿತೋ ದೇವ ಸ್ಥಾನಮನ್ಯದಲಂಕುರು ॥ ೮೫ ॥
(ವಿಸರ್ಜನಂ)

ಏವಂ ವಿದ್ವಾಂಸ್ತು ದ್ವಾದಶ್ಯಾಂ ಯೋನರಃ ಶ್ರದ್ಧಯಾನ್ವಿತಃ ।
ಯತ್ರ ತತ್ರ ನಭಸ್ಯೇ ತು ಕೃತ್ವಾ ಫಲವಾಪ್ನುಯಾತ್ ॥ ೮೬ ॥

+॥ ಬ್ರಾಹ್ಮಣ ಉವಾಚ ॥

ಯಸ್ತು ಸಾರಸ್ವತೇ ತೀರ್ಥೇ ಯಮುನಾಯಾಶ್ಚ ಸಂಗಮೇ ।
ಕರೋತಿ ವಿಧಿನಾನೇನ ತಸ್ಯ ಪುಣ್ಯಂ ಶತೋತ್ತರಂ ॥ ೮೭ ॥

ಮಯಾಪಿ ಶ್ರದ್ಧಯಾ ಚೈತತ್ಕಾಲಂ ತೀರ್ಥಸ್ಯ ಸೇವನಂ ।
ಕ್ಷೇತ್ರಸನ್ಯಾಸರೂಪೇಣ ಕೃತಂ ಭಕ್ತಿಸಮನ್ವಿತಂ ॥ ೮೮ ॥

ತೇನ ಯೂಯಂ ನ ಶಕ್ತಾ ಮಾಂ ಬಾಧಿತುಂ ಪಾಪಕರ್ಮಿಣಃ ॥ ೮೯ ॥

---

೮೫. ‘ದೇವ, ದೇವತೆಗಳನ್ನು ಗರ್ಭದಲ್ಲಿ ಧರಿಸಿರುವವಳೂ, ಸುಪೂಜಿತಳೂ ಆದ ಈ ಗೋವನ್ನು ನನ್ನ ಪಾಪವನ್ನು ಹೋಗಲಾಡಿಸುವ ನಿನಗೆ ಕೊಟ್ಟಿರುವೆನು. ನಾನು ನಿನ್ನನ್ನು ಕಳುಹಿಸಿಕೊಡುತ್ತೇನೆ. ಬೇರೆಯಾದ ನಿನ್ನ ಸ್ಥಳವನ್ನಲಂಕರಿಸು’ ಎಂದು ಬ್ರಾಹ್ಮಣನನ್ನು ಕಳುಹಿಸಬೇಕು.

೮೬. ವಿದ್ವಾಂಸನಾದ ಮನುಷ್ಯನು ಆಸಕ್ತಿಯುಳ್ಳವನಾಗಿ ಭಾದ್ರಪದ ಮಾಸದ ದ್ವಾದಶಿಯಲ್ಲಿ ಈಗ ಹೇಳಿದ ವಾಮನವ್ರತವನ್ನು ಎಲ್ಲಿ ಮಾಡಿದರೂ ಫಲವನ್ನು ಪಡೆಯುವನು.

೮೭. ಆದರೆ ಈ ವ್ರತವನ್ನು ಯಮುನಾಸಂಗಮದಲ್ಲೂ ಸರಸ್ವತೀ ತೀರ್ಥದಲ್ಲೂ ವಿಧಿಪೂರ್ವಕವಾಗಿ ಮಾಡಿದರೆ ಪುಣ್ಯವು ನೂರರಷ್ಟು ಹೆಚ್ಚಾಗುವುದು.

೮೮–೮೯. ನಾನೂ ಈಗ ಕ್ಷೇತ್ರಸನ್ಯಾಸಿಯಂತೆ ಆಸಕ್ತಿಯಿಂದ ಭಕ್ತಿ ಪೂರ್ವಕವಾಗಿ ತೀರ್ಥಸೇವೆಯನ್ನು ಮಾಡಿ ಬಂದೆನು. ಆದುದರಿಂದಲೇ ಪಾಪಕರ್ಮಿಗಳಾದ ನೀವು ನನ್ನನ್ನು ಬಾಧಿಸಲಾರರಿ.

+ ಅನುಚಿತವಾಕ್ಯ.

ಶ್ರವಣದ್ವಾದಶೀಯೋಗೇ ವ್ರತಂ ತಿಥಿಸಮನ್ವಿತಂ ।
ತಾವದ್ವ್ರತಂ ತು ಕರ್ತವ್ಯಂ ಯಾವದೇಕಂ ಕ್ಷಯಂ ವ್ರಜೇತ್ ॥ ೯೦ ॥

ತೀರ್ಥಸ್ಯೈವ ಪ್ರಭಾವೋ ಹಿ ಪ್ರತ್ಯಕ್ಷಮಿಹ ದೃಶ್ಯತೇ ।
ಶ್ರವಣಾದ್ಯೋ ಗತಿಃ ಸಾಕ್ಷಾತ್ಸಾಧು ಲಕ್ಷ್ಯಾಮಿ ಚಾಧುನಾ ॥ ೯೧ ॥

॥ ಶ್ರೀವರಾಹ ಉವಾಚ ॥

ಏವಂ ಬ್ರುವತಿ ವಿಪ್ರೇ ತು ಆಕಾಶೇ ದುಂದುಭಿಸ್ವನಃ ।
ಪುಷ್ಪವೃಷ್ಟಿರ್ಭುವ್ಯಪತದ್ದೇವೈರ್ಮುಕ್ತಾ ಸಹಸ್ರಶಃ ॥ ೯೨ ॥

ಪ್ರೇತಾನಾಂ ತು ವಿಮಾನಾನಿ ಆಗತಾನಿ ಸಮಂತತಃ ।
ದೇವದೂತ ಉವಾಚೇದಂ ಪ್ರೇತಾನಾಂ ಶೃಣ್ವತಾಂ ತದಾ ॥ ೯೩ ॥

---

೯೦. ಶ್ರವಣನಕ್ಷತ್ರವೂ, ದ್ವಾದಶೀತಿಥಿಯೂ ಸೇರಿದಾಗ ಅವೆರಡೂ (ಒಂದೂ ಲುಪ್ತವಾಗದೆ) ಸೇರಿರುವವರೆಗೂ ವ್ರತವನ್ನು ಮಾಡುತ್ತಲೇ ಇರಬೇಕು.

೯೧. ಯಮುನಾಸರಸ್ವತೀತೀರ್ಥಪ್ರಭಾವವು ಈಗ ಇಲ್ಲಿಯೇ ಪ್ರತ್ಯಕ್ಷವಾಗಿ ಕಾಣಿಸುತ್ತದೆ. ಶ್ರವಣದ್ವಾದಶಿಯ ಪ್ರಭಾವದಿಂದ ನಿಮಗೆ ಈ ಒಳ್ಳೆಯ ಗತಿಯು ಆಗುವುದನ್ನು ಎದುರಿಗೆ ನೋಡುವೆನು.

೯೨. ಶ್ರೀವರಾಹ—ಬ್ರಾಹ್ಮಣನು ಹಾಗೆ ಹೇಳುತ್ತಿರಲು ಆಕಾಶದಲ್ಲಿ ದೇವದುಂದುಭಿ ಧ್ವನಿಯಾಯಿತು, ದೇವತೆಗಳು ಸಾವಿರಗಟ್ಟಲೆಯಾಗಿ ಸುರಿಸಿದ ಹೂಗಳ ಮಳೆಯು ಅಲ್ಲಿ ಭೂಮಿಯಮೇಲೆ ಸುರಿಯಿತು.

೯೩. ಆ ಪಿಶಾಚರ ಸುತ್ತಲೂ ವಿಮಾನಗಳು ಬಂದುನಿಂತುವು. ದೇವದೂತರು ಆ ಪ್ರೇತಗಳು ಕೇಳುವಂತೆ ಆಗ ಹೀಗೆ ಹೇಳಿದರು.

ಅಸ್ಯ ವಿಪ್ರಸ್ಯ ಸಂಭಾಷಾತ್ಪುಣ್ಯ ಸತ್ಕೀರ್ತಿತೇನ ಚ ।
ಪ್ರೇತಭಾವ ವಿಮುಕ್ತಾಃ ಸ್ಥ ತೀರ್ಥಸ್ಯ ಶ್ರವಣಾದಪಿ ॥ ೯೪ ॥

ತಸ್ಮಾತ್ಸರ್ವಪ್ರಯತ್ನೇನ ಸತಾ ಸಂಭಾಷಣಂ ವರಂ ।
ಕರ್ತವ್ಯಸ್ತೀರ್ಥಭಾವಶ್ಚ ವ್ರತಭಾವಶ್ಚ ಮಾನಸೇ ॥ ೯೫ ॥

ತೀರ್ಥಾಭಿಷೇಕಿ ಪುರುಷಾದ್ಯಥಾ ತೇಷಾಂ ದುರಾತ್ಮನಾಂ ।
ಪ್ರೇತಾನಾಮಕ್ಷಯಃ ಸ್ವರ್ಗಃ ಸರಸ್ವತ್ಯಾಶ್ಚ ಸಂಗಮಾತ್ ॥ ೯೬ ॥

ಪ್ರಾಪ್ತಂ ತೀರ್ಥಪ್ರಭಾವಸ್ಯ ಶ್ರವಣಾನ್ಮುಕ್ತಿದಂ ಫಲಂ ।
ತಿಲಕಂ ಸರ್ವಧರ್ಮಾಣಾಂ ಪಂಚ ಪ್ರೇತತ್ವಮುಕ್ತಿದಂ ॥ ೯೭ ॥

ಯಃ ಪಠೇತ್ಪರಯಾ ಭಕ್ತ್ಯಾ ಶೃಣುಯಾದ್ಭಕ್ತಿತತ್ಪರಃ ।
ಕರೋತಿ ಶ್ರದ್ಧಯಾ ಯುಕ್ತಃ ನ ಪ್ರೇತೋ ಜಾಯತೇ ನರಃ ॥ ೯೮ ॥

---

೯೪. 'ನೀವು ಈ ಬ್ರಾಹ್ಮಣನೊಡನೆ ಮಾತನಾಡಿದುದರಿಂದಲೂ, ಧರ್ಮವಿಚಾರವನ್ನೂ ತೀರ್ಥವಿಚಾರವನ್ನೂ ಕೇಳಿದುದರಿಂದಲೂ ಪಿಶಾಚಜನ್ಮದಿಂದ ವಿಮುಕ್ತರಾಗಿರುವಿರಿ.'

೯೫-೯೬. ದೇವೀ, ಆದುದರಿಂದ ಸರ್ವಪ್ರಯತ್ನದಿಂದಲೂ ಸತ್ಪುರುಷರೊಡನೆ ಸಂಭಾಷಣಮಾಡುವುದು ಉತ್ತಮ. ಅಲ್ಲದೆ ಸರಸ್ವತೀ ಸಂಗಮತೀರ್ಥದಲ್ಲಿ ಸ್ನಾನಮಾಡಿದ ಮನುಷ್ಯನಿಂದ ದುರಾತ್ಮರಾದ ಆ ಪಿಶಾಚಗಳಿಗೆ ಅಕ್ಷಯವಾದ ಸ್ವರ್ಗವು ಲಭಿಸಿತೆಂದು ಆ ತೀರ್ಥದ ಮಹಿಮೆಯನ್ನೂ, ವ್ರತದ ಮಹಿಮೆಯನ್ನೂ ಮನಸ್ಸಿನಲ್ಲಿ ಭಾವಿಸಿಕೊಳ್ಳಬೇಕು.

೯೭-೯೮. ತೀರ್ಥದ ಪ್ರಭಾವವನ್ನು ಕೇಳಿದುದರಿಂದಲೇ ಮುಕ್ತಿಫಲವು ಲಭಿಸಿತು. ಪಂಚಪಿಶಾಚಗಳಿಗೆ ಮುಕ್ತಿಯನ್ನುಂಟುಮಾಡಿದ ಸರ್ವಧರ್ಮಗಳಿಗೂ ತಿಲಕಪ್ರಾಯವಾದ ಈ ವಿಚಾರವನ್ನು ಆಸಕ್ತಿಯಿಂದ ಹೇಳುವವನೂ, ಕೇಳುವವನೂ ಪಿಶಾಚಜನ್ಮವನ್ನು ಪಡೆಯುವುದಿಲ್ಲ.

ಪಿಶಾಚಸಂಜ್ಞಾಕಂ ನಾಮ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಯಸ್ಯ ಶ್ರವಣಮಾತ್ರೇಣ ನ ಪ್ರೇತೋ ಜಾಯತೇ ನರಃ ॥ ೯೯ ॥

ಇತಿ ಶ್ರೀ ವರಾಹಪುರಾಣೇ ಮಥುರಾಮಾಹಾತ್ಮ್ಯೇ ಸರ್ವತೀರ್ಥೇ ಯಮುನಾಸಂಗಮಪ್ರಭಾವೋ ನಾಮ ಚತುಃಸಪ್ತತ್ಯಧಿಕಶತತಮೋಽಧ್ಯಾಯಃ

---

೯೯. ಪಿಶಾಚತೀರ್ಥವೆಂಬುದು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿದೆ ಆದರ ವಿಚಾರವನ್ನು ಕೇಳಿದ ಮಾತ್ರದಲ್ಲಿಯೇ ಮನುಷ್ಯನು ಮುಂದೆ ಪಿಶಾಚ ಜನ್ಮವಿಲ್ಲದವನಾಗುವನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಥುರೆಯ ಮಹಿಮೆಯಲ್ಲಿ ಯಮುನಾಸಂಗಮಪ್ರಭಾವವನ್ನು ತಿಳಿಸುವನು. ನಿದರ್ಶನಕ್ಕಾಗಿ ಮಹಾನಾಮನೆಂಬ ಬ್ರಾಹ್ಮಣನು ಯಮುನಾಸಂಗಮಾದಿತೀರ್ಥಗಳಲ್ಲಿ ಸ್ನಾನಮಾಡಿ, ತನ್ನ ಆಶ್ರಮಕ್ಕೆ ಹೋಗುತ್ತಿರುವಾಗ ಐದು ಮಹಾಪಿಶಾಚಗಳು ಸಂಧಿಸಿ, ಅವನನ್ನು ಏನೂ ಮಾಡಲಾರದೆ ಪ್ರಶ್ನಿಸಿದ ಆತನಿಗೆ ' ತಮ್ಮ ದುಸ್ಥಿತಿಯನ್ನು ಹೇಳಿಕೊಂಡವು. ಅವನು ಪಿಶಾಚಜನ್ಮವು ಬಾರದಿರಲು ಮನುಷ್ಯರು ಮಾಡಬೇಕಾದ ಕಾರ್ಯಗಳನ್ನೂ, ಪಿಶಾಚಜನ್ಮಕ್ಕೆ ಕಾರಣಗಳನ್ನೂ, ಧರ್ಮಹೀನರಾದ ಮೂಢರೂ ಪಿಶಾಚಜನ್ಮವು ಬಾರದಂತೆ ಮಾಡಿಕೊಳ್ಳಲು ಮಥುರೆಯ ಯಮುನಾಸಂಗಮದಲ್ಲಿ ಭಾದ್ರಪದ ಶುಕ್ಲಶ್ರವಣ ದ್ವಾದಶಿಯಲ್ಲಿ ಸ್ನಾನವನ್ನೂ, ವಾಮನದೇವ ಪೂಜಾ ವ್ರತಾದಿಗಳನ್ನೂ ಮಾಡಬೇಕೆಂಬುದನ್ನೂ, ಆ ವ್ರತವಿಧಾನವನ್ನೂ ಅವಕ್ಕೆ ಹೇಳಿದನು. ಅದನ್ನು ಕೇಳಿದ ಮಾತ್ರದಲ್ಲಿಯೇ ಪಿಶಾಚಗಳಿಗೆ ಆ ಜನ್ಮವು ಹೋಗಿ ದೇವವಿಮಾನವು ಲಭಿಸಿತು. ಎಂಬುದನ್ನೂ ಈ ವಿಚಾರ ಶ್ರವಣ ಫಲವನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

ಪಂಚಸಪ್ತತ್ಯಧಿಕಶತತಮೋಧ್ಯಾಯಃ

॥ ಶ್ರೀವರಾಹ ಉವಾಚ ॥

ಶೃಣು ಚಾನ್ಯದ್ವರಾರೋಹೇ ಕೃಷ್ಣಗಂಗಾಸಮುದ್ಭವಂ ।
ಯಮುನಾಸ್ರೋತಸಿ ಸ್ನಾತ್ವಾ ಕೃಷ್ಣದ್ವೈಪಾಯನೋ ಮುನಿಃ ॥ ೧ ॥

ಧ್ಯಾತ್ವಾ ಮನಸಿ ಗಂಗಾಂ ತಾಂ ಕಾಲಿಂದೀಂ ಪಾಪ ಹಾರಿಣೀಂ ।
ನಿತ್ಯಂಚಕರ್ಮ ಕುರುತೇ ತತ್ರ ತೀರ್ಥಜಲಾಪ್ಲುತಿಂ ॥ ೨ ॥

ಸೋಮವೈಕುಂಠಯೋರ್ಮಧ್ಯೇ ಕೃಷ್ಣಗಂಗೇತಿ ಕಥ್ಯತೇ ।
ಯತ್ರಾತಪ್ಯತ ಸ ವ್ಯಾಸೋ ಮಥುರಾಯಾಂ ಸ್ಥಿತೋಽಮಲಃ ॥ ೩ ॥

ನೂರ ಎಪ್ಪತ್ತೈದನೆಯ ಅಧ್ಯಾಯ

೧-೨ ಶ್ರೀವರಾಹ—ವರಾರೋಹೇ, ಕೃಷ್ಣಗಂಗಾಕ್ಷೇತ್ರದಲ್ಲಿ ನಡೆದ ಬೇರೊಂದು ವಿಚಾರವನ್ನು ಕೇಳು. ವ್ಯಾಸಮುನಿ ಪಾಪಹಾರಿಣಿಯಾದ ಆ ಗಂಗೆಯನ್ನೂ ಯಮುನೆಯನ್ನೂ ಧ್ಯಾನಿಸುತ್ತ ಯಮುನಾಪ್ರವಾಹದಲ್ಲಿ ನಿತ್ಯವೂ ಸ್ನಾನಮಾಡಿ ಕರ್ಮಗಳನ್ನು ಆಚರಿಸುತ್ತಿದ್ದನು.

೩. ಪರಿಶುದ್ಧಾತ್ಮನಾದ ಆ ವ್ಯಾಸನು ಮಥುರೆಯಲ್ಲಿದ್ದು, ತಪಸ್ಸನ್ನು ಮಾಡಿದೆಡೆಯಾದ, ಸೋಮವೈಕುಂಠತೀರ್ಥಗಳ ನಡುವೆ ಇರುವ ಪ್ರದೇಶಕ್ಕೆ ಕೃಷ್ಣಗಂಗೆಯೆಂದೂ ಹೆಸರು.

ತತ್ರಾಶ್ರಮಪದಂ ದಿವ್ಯಂ ಮುನಿಪ್ರವರಸೇವಿತಂ ।
ಆಗಚ್ಛಂತಿ ಸದಾ ತತ್ರ ಚಾತುರ್ಮಾಸ್ಯಮುಪಾಸಿತುಂ ।
ಮುನಯೋ ವೇದತತ್ವಜ್ಞಾ ಜ್ಞಾನಿನಃ ಸಂಶಿತವ್ರತಾಃ ॥ ೪ ॥

ಶ್ರೌತಸ್ಮಾರ್ತಪುರಾಣೇಷು ಸಂದೇಹೋ ಯಸ್ಯ ಕಸ್ಯಚಿತ್ ॥ ೫ ॥

ವ್ಯಾಸೋಽಪನೋದಯಾಮಾಸ ನಾನಾವಾಕ್ಯೈಃ ಸತಾಂಗತಿಃ ॥ ೬ ॥

ಕಾಲಂಜರೇ ಮಹಾದೇವಂ ತತ್ರ ತೀರ್ಥಪತಿಂ ಶಿವಂ ।
ಯಸ್ಯ ಸಂದರ್ಶನಾದೇವ ಕೃಷ್ಣಗಂಗಾಫಲಂ ಭವೇತ್ ॥ ೭ ॥

ತತ್ರ ಸ್ಥಿತೋ ದ್ವಾದಶಾಬ್ದವ್ರತೀ ಸಂಗವಿವರ್ಜಿತಃ ।
ಪಕ್ಷಾಹಾರೀ ಚ ಫಲಭುಗ್ದರ್ಶೇ ವೈ ಪೌರ್ಣಮಾಸಿಕೇ ॥ ೮ ॥

ಗತ್ವಾ ಹಿಮಾಲಯಂಚಾಸೌ ಬದರೀಮಭಿತೋ ಗತಃ ।
ವ್ಯಾಸಶ್ಚರ್ಯಾಪರಸ್ತತ್ರ ಧ್ಯಾನಯೋಗಪರಾಯಣಃ ॥ ೯ ॥

---

೪. ವೇದತತ್ವಜ್ಞರೂ, ಜ್ಞಾನಿಗಳೂ ತೀಕ್ಷ್ಣವ್ರತಿಗಳೂ ಆದ ಋಷಿಗಳು ಮುನಿವರ್ಯರಿಂದ ಸೇವಿತವಾದ ಆ ಕೃಷ್ಣಗಂಗಾ ದಿವ್ಯಾಶ್ರಮಕ್ಕೆ ಚಾತುರ್ಮಾಸ್ಯ ವ್ರತವನ್ನಾಚರಿಸಲು ಪ್ರತಿವರ್ಷವೂ ಬರುವರು.

೫-೬. ಸಜ್ಜನರಿಗೆ ಆಶ್ರಯನಾದ ವ್ಯಾಸಮುನಿ ಅಲ್ಲಿ ಬಂದವರಿಗಾರಿಗಾದರೂ ಶ್ರುತಿಸ್ಮೃತಿಪುರಾಣವಿಚಾರಗಳಲ್ಲಿ ಸಂದೇಹವುಂಟಾಗಿದ್ದರೆ ಅದನ್ನು ಹಲವು ವಾಕ್ಯಗಳಿಂದ ಪರಿಹರಿಸುತ್ತಿದ್ದನು.

೭. ಅಲ್ಲಿ ಕಾಲಿಂಜರ್‌ನಲ್ಲಿರುವ ತೀರ್ಥಪತಿಯೂ ಮಹಾದೇವನೂ ಆದ ಶಿವನನ್ನು ಸಂದರ್ಶಿಸಿದ ಮಾತ್ರದಲ್ಲೇ ಕೃಷ್ಣಗಂಗಾಯಾತ್ರೆಯ ಫಲವು ಲಭಿಸುವುದು.

೮-೯. ಆಲ್ಲಿ ವ್ಯಾಸಮುನಿ ಸಂಗವರ್ಜಿತನಾಗಿ ಪಕ್ಷಕ್ಕೊಂದುಸಾರಿ ಫಲಾಹಾರವನ್ನು ಮಾಡುತ್ತಾ ಪೂರ್ಣಿಮಾಮಾವಾಸ್ಯೆಗಳಲ್ಲಿಮಾತ್ರ ಹಿಮಾಲಯದಲ್ಲಿರುವ ಬದರಿಕಾಶ್ರಮಕ್ಕೆ ಯಾತ್ರಾರ್ಥವಾಗಿ ಹೋಗಿಬರುತ್ತಾ ಧ್ಯಾನಯೋಗಾಸಕ್ತನಾಗಿ ಹನ್ನೆರಡುವರ್ಷಕಾಲ ವ್ರತನಿಷ್ಠನಾಗಿದ್ದನು.

ತ್ರಿಕಾಲದರ್ಶೀ ಶುದ್ಧಾತ್ಮಾ ಸಿದ್ಧತ್ವಂ ಪ್ರಾಪ್ಯ ಯೋತ್ರಭುಃ ।
ತಸ್ಯಾಶ್ರಮಪದಸ್ಥಸ್ಯ ಯದ್ದೃಷ್ಟಂ ಜ್ಞಾನಚಕ್ಷುಷಾ ॥ ೧೦ ॥

ಪ್ರತ್ಯಕ್ಷಂ ಕೃಷ್ಣತೀರ್ಥೇ ತು ಪಾಂಚಾಲ್ಯಕುಲತಂತುನಾ ॥ ೧೧ ॥

ಪಾಂಚಲ್ಯೋಽಥ ದ್ವಿಜಃ ಕಶ್ಚಿನ್ನಾಮ್ನಾ ವಸುರಿತಿ ಶ್ರುತಃ ।
ದುರ್ಭಿಕ್ಷಪೀಡಿತೋತ್ಯಂತಂ ಸಭಾರ್ಯೋ ದಕ್ಷಿಣಾಂಗತಃ ॥ ೧೨ ॥

ಶಿವನದ್ಯಾ ದಕ್ಷಿಣೇ ತು ಕೂಲೇ ಸ ವರಪತ್ತನೇ ।
ನಿವಾಸಮಕರೋತ್ತತ್ರ ಬ್ರಾಹ್ಮಣೀಂ ವೃತ್ತಿಮಾಶ್ರಿತಃ ॥
ತತ್ರಸ್ಥಸ್ಯ ತದಾ ಪಂಚ ಪುತ್ರಾಃ ಕನ್ಯಾಭವಂಸ್ತದಾ ॥ ೧೩ ॥

ಬ್ರಾಹ್ಮಣಾಯ ಚ ದತ್ವಾ ಸಾ ಧನಧಾನ್ಯಸಮನ್ವಿತಾ ।
ಸ ದ್ವಿಜಃ ಕಾಲಸಂಪನ್ನಃ ಸಭಾರ್ಯಸ್ತತ್ರ ಸಂಸ್ಥಿತಃ ॥ ೧೪ ॥

೧೦–೧೧. ತ್ರಿಕಾಲದರ್ಶಿಯೂ ಶುದ್ಧಾತ್ಮನೂ ಆದ ಆ ವ್ಯಾಸಪ್ರಭುವು ಅಲ್ಲೇ ಸಿದ್ಧಿಯನ್ನು ಪಡೆದನು. ಜ್ಞಾನದೃಷ್ಟಿಯುಳ್ಳ ಆ ಮುನಿಯು ಅಲ್ಲಿರುವಾಗ ಕೃಷ್ಣತೀರ್ಥದಲ್ಲಿ ಪ್ರತ್ಯಕ್ಷವಾಗಿ ನೋಡಿದ ಪಾಂಚಾಲದೇಶದ ಬ್ರಾಹ್ಮಣರ ವಿಚಾರವನ್ನು ಈಗ ಹೇಳುತ್ತೇನೆ.

೧೨. ಪಾಚಾಲದೇಶದ ವಸುವೆಂಬ ಹೆಸರಿನ ಬ್ರಾಹ್ಮಣನೊಬ್ಬನು ಅಲ್ಲಿ ವೀರಕ್ಷಾಮದಿಂದ ಪೀಡಿತನಾಗಿ ಹೆಂಡತಿಯೊಡನೆ ದಕ್ಷಿಣದೇಶಕ್ಕೆ ಹೋದನು.

೧೩. ಆತನು ಅಲ್ಲಿ ಶಿವನದಿಯ ದಕ್ಷಿಣತೀರದಲ್ಲಿರುವ ವರಪುರದಲ್ಲಿ ಬ್ರಾಹ್ಮಣವೃತ್ತಿಯನ್ನೇ ಅನುಸರಿಸಿ ವಾಸಮಾಡುತ್ತಿದ್ದನು ಅಲ್ಲಿ ಆತನಿಗೆ ಐವರು ಗಂಡುಮಕ್ಕಳೂ ಒಬ್ಬ ಮಗಳೂ ಜನಿಸಿದರು.

೧೪. ಆ ಕನ್ಯೆಯನ್ನು ಸಕಾಲದಲ್ಲಿ ಬ್ರಾಹ್ಮಣನೊಬ್ಬನಿಗೆ ವಿವಾಹಮಾಡಿ ಕೊಟ್ಟು ಧನಧಾನ್ಯಗಳನ್ನು ಆತನಿಗೆ ದಾನಮಾಡಿದನು. ಬಳಿಕ ದಾನಮಾಡಿದ ಆ ಬ್ರಾಹ್ಮಣನೂ ಆತನ ಹೆಂಡತಿಯೂ ಮೃತರಾದರು. ಅಳಿಯನೂ ಮೃತನಾದನು. ಮಗಳು ಬಾಲವಿತಂತುವಾದಳು.

ಕನ್ಯಾಸ್ಥೀನಿ ತು ಸಂಗೃಹ್ಯ ಮಥುರಾಮಾಜಗಾಮ ಹ ।
ಶ್ರುತ್ವಾ ಪುರಾಣೇ ಪತಿತಂ ಅರ್ಧಚಂದ್ರೇಽಸ್ಥಿ ಪಾತನಂ ॥ ೧೫ ॥

ನಿತ್ಯಂ ಸ್ವರ್ಗೇ ವಸತಿ ಸ ಯಸ್ಯಾಸ್ಥಿ ಹ್ಯರ್ಧಚಂದ್ರಕೇ ॥ ೧೬ ॥

ತೀರ್ಥಯಾತ್ರಾಪ್ರಸಂಗೇನ ಲೋಕೈಃ ಪ್ರಚಲಿತಾ ಬಹಿಃ ।
ತೇನ ಸಾರ್ಥೇನ ಸಾ ಕನ್ಯಾ ಮಥುರಾಯಾಂ ಜಗಾಮ ಚ ॥ ೧೭ ॥

ಕನಿಷ್ಠಾ ಭಗಿನೀ ತೇಷಾಂ ಬಾಲರಂಡಾ ಬಭೂವ ಹ ।
ಸುರೂಪಾ ಸುಕುಮಾರಾಂಗೀ ನೀಲಕುಂಚಿತಮೂರ್ಧಜಾ ॥
ಕದಲೀಕಾಂಡಸಂಕಾಶೇ ತಸ್ಯಾ ಊರೂ ಸುಮಾಂಸಲೇ ॥ ೧೮ ॥

ಸುಶ್ಲಿಷ್ಟಾಂಗುಲಿಪಾದಾ ತು ನಖಾಸ್ತಾಮ್ರೋಜ್ಜ್ವಲಾಃ ಶುಭಾಃ ।
ಗಂಭೀರಾ ದಕ್ಷಿಣಾವರ್ತ ನಾಭಿಸ್ತ್ರಿವಲಿಶೋಭಿತಾ ॥ ೧೯ ॥

೧೫–೧೬. "ಮಥುರೆಯ ಅರ್ಧಚಂದ್ರಕ್ಷೇತ್ರದಲ್ಲಿ ಅಸ್ಥಿಯನ್ನು ಹಾಕಬೇಕು. ಯಾರಅಸ್ಥಿಯು ಅರ್ಧಚಂದ್ರದಲ್ಲಿರುವುದೋ ಅವರು ಸದಾ ಸ್ವರ್ಗದಲ್ಲಿ ವಾಸಿಸುವರು" ಎಂಬುದನ್ನು ಪುರಾಣದಲ್ಲಿ ಕೇಳಿದ ಆ ಬಾಲೆ ಅವರ ಅಸ್ಥಿಗಳನ್ನು ತೆಗೆದುಕೊಂಡು ಮಥುರೆಗೆ ಹೊರಟಳು.

೧೭. ಆಕೆಯು ತೀರ್ಥಯಾತ್ರೆಗಾಗಿ ಹೊರಟಿದ್ದ ಜನರ ಗುಂಪಿನೊಡನೆ ನಡೆದು ಮಥುರೆಯನ್ನು ಸೇರಿದಳು.

೧೮–೧೯. ಬಾಲವಿತಂತುವಾದ ಅವಳು ಸ್ಫುರದ್ರೂಪಿಯೂ ಸುಕುಮಾರಾಂಗಿಯೂ ಕಪ್ಪಾದಗುಂಗುರುಕೂದಲುಳ್ಳವಳೂ ಬಾಳೆಯಕಂಬದಂತೆ ದುಂಡಾದ ತೊಡೆಗಳುಳ್ಳವಳೂ, ಸಂದುಬಿಡದ ಬೆರಳುಗಳೂ ಕೆಂಪಾಗಿ ಹೊಳೆಯುವ ಉಗುರುಗಳೂ ಉಳ್ಳವಳೂ ಗಂಭೀರವಾಗಿ ಪ್ರದಕ್ಷಿಣವಾದ ಸುಳಿಪೊಕ್ಕುಳುಳ್ಳವಳೂ, ತ್ರಿವಳಿಗಳಿಂದೊಪ್ಪುವಳೂ ಆಗಿದ್ದಳು.

ಕ್ಷಾಮೋದರೀ ಸಮಕುಕ್ಷಿಃ ಪೀನೋನ್ನತಪಯೋಧರಾ ।
ಕಂಬುಗ್ರೀವಾ ಸಂವೃತಾಸ್ಯಾ ಸುದತೀ ಸ್ವಧರಾಹನುಃ ॥ ೨೦ ॥

ಸುನಖೀ ಸ್ವಕ್ಷಿಣೀ ಸುಭ್ರೂಃ ಸುಪ್ರಮಾಣಾಸುಭಾಷಿಣೀ ।
ತೇನ ತೇನೈವ ಸಂಪೂರ್ಣಾರೂಪೇಣ ಚ ತಿಲೋತ್ತಮಾ ॥ ೨೧ ॥

ಯಂ ಯಂ ಪಶ್ಯತಿ ಚಾರ್ವಗೀ ಯಸ್ತಾಂಚೈವ ಪ್ರಪಶ್ಯತಿ ।
ಸ ಸ ಚಿತ್ರ ಇವ ನ್ಯಸ್ತೋ ವಿಚೇತಾ ಜಾಯತೇ ನರಃ ॥ ೨೨ ॥

ಏವಂ ವಿಧಾ ತತ್ರ ತತ್ರ ತೀರ್ಥಸ್ನಾನಪರಾಯಣಾ ।
ದೃಷ್ಟಾ ವೇಶ್ಯಾಸಮೂಹೇನ ಪಾಗಲ್ಭ್ಯೇನ ತದಾ ಕ್ವಚಿತ್ ॥ ೨೩ ॥

ಕಾನ್ಯಕುಬ್ಜಾಧಿಪೋ ರಾಜಾ ಕ್ಷತ್ರಧರ್ಮೇ ವ್ಯವಸ್ಥಿತಃ ।
ತಸ್ಯ ಸತ್ರಂ ಸರ್ವಕಾಲಂ ದೇವಗರ್ತೇಶ್ವರೇ ಶಿವೇ ॥ ೨೪ ॥

೨೦-೨೧. ಅಲ್ಲದೆ ಆ ಬಾಲೆ ಕೃಶೋದರಿಯೂ, ಸಮಕುಕ್ಷಿಯೂ ಸ್ಥೂಲೋನ್ನತಸ್ತನಿಯೂ, ಶಂಖದಂತಿರುವ ಕೊರಳುಳ್ಳವಳೂ, ಚಿಕ್ಕಬಾಯೂ ಸುಂದರವಾದ ಹಲ್ಲು ತುಟಿ ಕೆನ್ನೆ ಕಣ್ಣು ಹುಬ್ಬು ಮುಖಗಳೂ ಉಳ್ಳವಳೂ, ಪ್ರಮಾಣಕ್ಕೆ ಸರಿಯಾಗಿ ಬೆಳೆದಿರುವಳೂ ಇಂಪಾಗಿ, ಮಾತನಾಡುವವಳೂ ಆಗಿ ಸರ್ವಾಂಗಸುಂದರಿಯಾಗಿ ತಿಲೋತ್ತಮೆಯಾಗಿದ್ದಳು.

೨೨. ಅವಳು ಯಾವ ಪುರುಷನನ್ನು ನೋಡುವಳೋ ಅಥವಾ ಅವಳನ್ನು ಯಾರು ನೋಡುವರೋ ಅವರೆಲ್ಲರೂ ವಿಸ್ಮಿತರಾಗಿ ಚಿತ್ರಪ್ರತಿಮೆಗಳಂತೆ ಆಗುವರು.

೨೩. ಹೀಗಿರುವ ಆ ಬಾಲೆ ಮಧುರೆಯಲ್ಲಿ ಬೇರೆಬೇರೆಯ ತೀರ್ಥಗಳ ಸ್ನಾನದಲ್ಲಿ ಆಸಕ್ತಳಾಗಿರುತ್ತ ಒಂದೆಡೆಯಲ್ಲಿ ಚತುರೆಯರಾದ ವೇಶ್ಯೆಯರ ಕಣ್ಣಿಗೆ ಬಿದ್ದಳು.

೨೪. ಕ್ಷತ್ರಿಯಧರ್ಮವನ್ನು ಪರಿಪಾಲಿಸುತ್ತಿದ್ದ ಕನ್ಯಕುಬ್ಜದ ದೊರೆಯ ಬಹುಧನಾಢ್ಯವಾದ ಸತ್ರವು ಮಧುರೆಯ ಮಂಗಳಕರವಾದ ಗರ್ತೇಶ್ವರಕ್ಷೇತ್ರದಲ್ಲಿ ಯಾವಾಗಲೂ ನಡೆಯುತ್ತಿದ್ದಿತು.

ಪ್ರವರ್ತತೇ ಸುವಿತ್ತಾಢ್ಯಂ ಪ್ರೇಕ್ಷಣೀಯಂ ಮನೋರಮಂ ।
ವಾದಿತ್ರಾಣಿ ಚ ಗೀತಾನಿ ಶಕ್ರಸ್ಯ ಭವನೇ ಯಥಾ ॥ ೨೫ ॥
ತಸ್ಯ ದೇವಸ್ಯ ಯಾ ವೇಶ್ಯಾಸ್ತಾಭಿಃ ಸಾ ಪ್ರತಿಲೋಭಿತಾ ॥ ೨೬ ॥
ಗೀತನೃತ್ಯಾದಿಷು ರತಾ ತಾಸಾಂ ಧರ್ಮನುಪಾಗತಾ ।
ಅಲ್ಪೈಸ್ತುದಿವಸೈಃ ಸಾಧ್ವೀ ಅಸಾಧ್ವೀಭಿಃ ಪರೀವೃತಾ ॥ ೨೭ ॥
ಏವಂ ವಸತಿ ಸಾ ಬಾಲಾ ದೇವಸ್ಯಾಸ್ಯ ಪರಿಗ್ರಹಾ ।
ಯಥಾಸುಖಂ ಸಮೇತಾಭಿರ್ವಿಹರಂತೀ ದಿನೇ ದಿನೇ ॥ ೨೮ ॥

ಇತಿ ಶ್ರೀ ವರಾಹಪುರಾಣೇ ಮಥುರಾಮಾಹಾತ್ಮ್ಯೇ ಕೃಷ್ಣಗಂಗಾ ಕಾಲಿಂಜರಪ್ರಭಾವೇ ಪಂಚಸಪ್ತತ್ಯಧಿಕಶತತಮೋಽಧ್ಯಾಯಃ

---

೨೫. ಮನೋಹರವಾದ ಆ ಸತ್ರವು ದರ್ಶನೀಯವಾಗಿದ್ದಿತು. ಅಲ್ಲಿ ನೃತ್ಯಗೀತವಾದ್ಯಗಳು ಇಂದ್ರಭವನದಲ್ಲಿ ನಡೆಯುವಂತೆ ನಡೆಯುತ್ತಿದ್ದವು.

೨೬–೨೭ ಆ ದೇವನ ಸೇವೆಯನ್ನು ಮಾಡುತ್ತಿದ್ದ ವೇಶ್ಯಯರು ಆ ಆ ಬಾಲೆಗೆ ಬೋಧಿಸಿ ಆಸೆಯನ್ನುಂಟುಮಾಡಿದರು. ಗೀತನೃತ್ಯಾದಿಗಳಲ್ಲಿ ಆಸಕ್ತಳಾಗಿ ಆ ಬಾಲೆಯೂ ಆ ವೇಶ್ಯೆಯರಂತೆಯೇ ಆದಳು. ಪತಿವ್ರತೆಯಾಗಿದ್ದ ಆ ತರುಣಿ ಕೆಲವು ದಿನಗಳಲ್ಲೇ ಅಸಾಧ್ವಿಯರೊಡನೆ ಸೇರಿಹೋದಳು.

೨೮. ಆ ತರುಣಿ ಹೀಗೆ ಆ ದೇವನ ಸೇವೆಯ ಪರಿವಾರದಲ್ಲಿ ಸೇರಿ, ಜತೆಯವರೊಡನೆ ಬೇಕಾದಹಾಗೆ ಯಾವಾಗಲೂ ವಿಹರಿಸುತ್ತಿದ್ದಳು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಥುರೆಯ ಕೃಷ್ಣಗಂಗಾಕ್ಷೇತ್ರದಲ್ಲಿ ವ್ಯಾಸಮುನಿ ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದುದನ್ನೂ, ಆ ಕ್ಷೇತ್ರಕ್ಕೆ ದಕ್ಷಿಣದೇಶದಿಂದ ಬಂದ ಸುಂದರಿಯಾದ ಬಾಲವಿತಂತುವೊಬ್ಬಳು ವೇಶ್ಯೆಯರೊಡನೆ ಸೇರಿ ಹೇಗೆ ಅಸಾಧ್ವಿಯಾದಳೆಂಬುದನ್ನೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತೈದನೆಯ ಅಧ್ಯಾಯು.

॥ ಶ್ರೀಃ ॥

ಷಟ್ಸಪ್ತತ್ಯಧಿಕಶತತಮೋಽಧ್ಯಾಯಃ

॥ ಶ್ರೀವರಾಹ ಉವಾಚ ॥

ಪಂಚಾನಾಂತು ಕನಿಷ್ಠೋಽಯಂ ಪಂಚಮೋ ಬ್ರಾಹ್ಮಣಾತ್ಮಜಃ ।
ವಾಣಿಜ್ಯಭಾಂಡಮಾದಾಯ ಸಮೂಹಸ್ಯ ಪ್ರಸಂಗತಃ ।
ಸಾರ್ಥೇನ ನಿಷ್ಕ್ರಿತಃ ಸೋಽಥ ಧನವಾನ್ರೂಪವಾಂಸ್ತತಃ ॥ ೧ ॥

ಕ್ರಮೇಣ ತೇ ಸರ್ವದೇಶಾನ್ವಿಷಯಾನ್ಪರ್ವತಾನ್ನದೀಃ ॥ ೨ ॥

ಆಕ್ರಮ್ಯ ತತ್ರ ಸಂಪ್ರಾಪ್ತಾ ಯತ್ರ ಸಾ ಮಧುರಾಪುರೀ ।
ಆವಾಸಂ ಕಾರಯಾಮಾಸುಃ ಪ್ರಭೂತಯವಸೇಂಧನೇ ॥ ೩ ॥

ನೂರ ಎಪ್ಪತ್ತಾರನೆಯ ಅಧ್ಯಾಯ

೧. ಶ್ರೀವರಾಹ—ಹಿಂದೆ ಹೇಳಿದ ಪಾಂಚಾಲದೇಶದ ಬ್ರಾಹ್ಮಣನಾದ ವಸುವಿನ ಐವರು ಗಂಡುಮಕ್ಕಳಲ್ಲಿ ಐಶ್ವರ್ಯವಂತನೂ, ರೂಪವಂತನೂ ಆದ ಕಿರಿಯವನು ವಾಣಿಜ್ಯಕ್ಕೆ ಬೇಕಾದ ಧನವನ್ನೂ ಪದಾರ್ಥಗಳನ್ನೂ ತೆಗೆದುಕೊಂಡು, ತಂದೆಯಿರುವಾಗಲೇ ವಣಿಜರಗುಂಪಿನೊಡನೆ ಹೊರಟುಹೋಗಿದ್ದನು.

೨-೩. ಆ ವಣಿಜರ ಗುಂಪಿನವರು ಸರ್ವದೇಶಗಳನ್ನೂ, ಪರ್ವತನದಿಗಳನ್ನೂ ಸಂಚರಿಸಿ, ಕಾಲಕ್ರಮದಲ್ಲಿ ಮಧುರೆಯ ಸಮೀಪಕ್ಕೆ ಬಂದರು. ಅವರು ಬೇಕಾದಷ್ಟು ಹುಲ್ಲೂ, ಸೌದೆಯೂ ಇರುವ ಆ ಎಡೆಯಲ್ಲಿಯೇ ಬೀಡುಬಿಟ್ಟರು

ತಸ್ಮಿನ್‌ಸ್ಥಾನೇ ಸ ಪಾಂಚಾಲಃ ಪ್ರಾಪ್ತಸ್ತು ಪುರುಷೈಃ ಸಹ ।
ತಸ್ಮಿನ್‌ಸ್ತೀರ್ಥವರೇ ಸ್ನಾತ್ವಾ ವಸ್ತ್ರಾಲಂಕಾರಭೂಷಿತಃ ॥ ೪ ॥

ಐಶ್ವರ್ಯಮದಭಾವೇನ ಯಾನೇನ ಮಹತಾ ತದಾ ।
ದೇವತಾದರ್ಶನಂ ಕೃತ್ವಾ ದತ್ವಾ ದಾನಾನ್ಯನೇಕಶಃ ॥ ೫ ॥

ಕೌತುಕಾರ್ಥಂ ತತೋ ಗತ್ವಾ ದೇವಂ ಗರ್ತೇಶ್ವರಂ ತದಾ ।
ತಿಲೋತ್ತಮಾಯಾಸ್ತದ್ರೂಪಂ ದೃಷ್ಟ್ವಾ ಮೋಹವಶಂಗತಃ ॥ ೬ ॥

ಧಾತ್ರೇಯಿಕಾಯಾಸ್ತಸ್ಯಾಶ್ಚ ಬಹುಮಾನಪುರಸ್ಸರಂ ।
ವಸ್ತ್ರಾಣಿ ಬದ್ಧರೂಪಾಣಿ ಕಟಿಕಾನಾಂ ಶತಾನಿ ಚ ॥ ೭ ॥

ಹಾರಾನ್ ರತ್ನಮಯಾಂಸ್ತದ್ವದ್ದದೌ ಲೋಭವಿಮೋಹಿತಃ ।
ದದಾವಗುರುಸಾರಂಚ ಸಕರ್ಪೂರಂ ಸಚಂದನಂ ॥ ೮ ॥

---

೪ ಆ ಪಾಂಚಾಲಪುತ್ರನು ಬೆಳಗ್ಗೆ ತನ್ನ ಜನರೊಡನೆ ಅಲ್ಲಿಯ ಉತ್ತಮತೀರ್ಥದಲ್ಲಿ ಸ್ನಾನಮಾಡಿ, ವಸ್ತ್ರಾಲಂಕಾರ ಭೂಷಿತನಾದನು.

೫-೬. ಐಶ್ವರ್ಯಮದವುಳ್ಳ ಆತನು ಬೇಕಾದಷ್ಟು ವಾಹನಗಳೊಡನೆ ಹೋಗಿ ದೇವರದರ್ಶನವನ್ನು ಮಾಡಿ, ಬೇಕಾದಹಾಗೆ ದಾನಮಾಡಿ ಕುತೂಹಲದಿಂದ ಗರ್ತೇಶ್ವರ ದೇವಾಲಯಕ್ಕೆ ಹೋಗಿ, ಅಲ್ಲಿದ್ದ ಆ ತಿಲೋತ್ತಮೆಯ ಆ ಸೌಂದರ್ಯವನ್ನು ನೋಡಿ ಮೋಹಪರವಶನಾದನು.

೭-೮. ಮೋಹಗೊಂಡ ಅವನು ಅವಳನ್ನು ಪಡೆಯುವ ಆಸೆಯಿಂದ ಅವಳ ದಾದಿಗೂ, ಅವಳಿಗೂ ಬಹುಮಾನಪೂರ್ವಕವಾಗಿ ವಸ್ತ್ರಗಳನ್ನೂ, ನೂರಾರು ಚಿನ್ನದ ಬಳೆಗಳನ್ನೂ ರತ್ನಹಾರಗಳನ್ನೂ ಕೊಟ್ಟನು. ಪಚ್ಚಕರ್ಪೂರ ಗಂಧವೊಡನೆ ಅಗರು ಅತ್ತರುಗಳನ್ನೂ ಕೊಟ್ಟನು.

ತೆಸ್ಯಾ ಗೃಹವರೇ ತತ್ರ ವಸತಿಸ್ಮ ದಿನೇ ದಿನೇ ।
ಪ್ರಹರಾರ್ಧೇ ದಿನೇ ಜಾತೇ ತತಃ ಸ್ವಶಿಬಿರಂ ಯಯೌ ॥ ೯ ॥

ಸ್ನಾತ್ವಾ ತೀರ್ಥೇ ಸಮೀಪೇ ಚ ಕೃಷ್ಣಗಂಗೋದ್ಭವೇ ಸದಾ ।
ಏವಂ ನಿತ್ಯಂ ಪ್ರಸಕ್ತೋ ಹಿ ಕರೋತಿ ದ್ರವ್ಯಗರ್ವಿತಃ ॥ ೧೦ ॥

ಏವಂತು ಕುರ್ವತಸ್ತಸ್ಯ ಮಾಸ ಷಟ್ಕಂ ತತೋ ಗತಂ ।
ಅಥೈಕದಾ ಸಮಾಯಾತಃ ಸ್ನಾತುಂ ತತ್ರ ಸುಮಂತುನಾ ॥ ೧೧ ॥

ಸ್ವಾಶ್ರಮಸ್ಥೇನ ದೃಷ್ಟಃ ಸ ಕ್ರಿಮಿಯುಕ್ತಃ ಸಮಾಗತಃ ।
ಕ್ರಿಮಯೋ ರೋಮ ಕೂಪೇಭ್ಯಃ ಪತಮಾನಾ ಅನೇಕಶಃ ॥ ೧೨ ॥

---

೯. ಬಳಿಕ ಅವನು ಪ್ರತಿದಿನವೂ ಆ ತಿಲೋತ್ತಮೆಯ ಮನೆಯಲ್ಲೇ ವಾಸಮಾಡುತ್ತ ಬೆಳಗಾದ ಒಂದು ಜಾವದ (೩ ಗಂಟೆ)ಮೇಲೆ ತನ್ನ ಶಿಬಿರಕ್ಕೆ ಬರುತ್ತಿದ್ದನು.

೧೦. ಆತನು (ಶಿಬಿರದ) ಹತ್ತಿರದಲ್ಲೇ ಇದ್ದ ಕೃಷ್ಣಗಂಗಾತೀರ್ಥದಲ್ಲೇ ನಿತ್ಯವೂ ಸ್ನಾನಮಾಡಿ, ಧನದ ಗರ್ವವುಳ್ಳವನಾಗಿ ಹಿಂದಿನಂತೆಯೇ ನಡೆಯುತ್ತಿದ್ದನು.

೧೧–೧೨. ಅವನು ಹಾಗೆಯೇ ನಡೆಯುತ್ತಿರಲು ಆರುತಿಂಗಳ ಕಾಲವು ಕಳೆದುಹೋಯಿತು. ಬಳಿಕ ಸ್ನಾನಮಾಡಲು ತೀರ್ಥಕ್ಕೆ ಬಂದ ಅವನು ಸುಮಂತುವೆಂಬ ಉತ್ತಮಾಶ್ರಮಿಗೆ ಕ್ರಿಮಿಗಳಿಂದ ಕೂಡಿದ ದೇಹವುಳ್ಳವನಾಗಿ ಕಾಣಿಸಿದನು. ಅವನ ರೋಮಕೂಪಗಳಿಂದ ಕ್ರಿಮಿಗಳು ಅನೇಕವಾಗಿ ಉದಿರುತ್ತಿದ್ದುವು.

ಯಾವತ್ಸ್ನಾನಂ ಸ ಕುರುತೇ ಪತತೇ ರಾಶಿಮಾತ್ರಕಃ ।
ಸ್ನಾನೇ ಕೃತೇ ನಶ್ಯತಿ ಚ ಸುರೂಪಶ್ಚಾಭಿಜಾಯತೇ ॥ ೧೩ ॥

ಏವಂ ಸುಮಂತುನಾ ದೃಷ್ಟಮಾಶ್ಚರ್ಯಂ ಬಹುವಾಸರಂ ।
ಸುಮಂತುಸ್ತರ್ಕಯಾಮಾಸ ಕೋಽಯಂ ಕಸ್ಯಾತ್ಮಜೋ ಯುವಾ ॥ ೧೪ ॥

ಇತಿ ಚಿಂತಾಸಮಾಯುಕ್ತಸ್ತಮಪೃಚ್ಛದ್ವಿಶಂಕಿತಃ ॥ ೧೫ ॥

ಕಸ್ತ್ವಂ ಕಸ್ಯಾಸಿ ಸುಭಗ ಕಾ ಜಾತಿಃ ಕಶ್ಚ ತೇ ಪಿತಾ ।
ಕಿಂಕರೋಽಷಿ ದಿವಾರಾತ್ರೌ ಬ್ರೂಹಿ ತ್ವಂ ಪೃಚ್ಛತೋ ಮಮ ॥ ೧೬ ॥

॥ ಪಾಂಚಾಲ ಉವಾಚ ॥

ಪಾಂಚಾಲೋ ಬ್ರಾಹ್ಮಣಸುತೋ ವಾಣಿಜ್ಯಂಚ ಸಮಾಶ್ರಿತಃ ।
ದಕ್ಷಿಣಾಪಥದೇಶಾಚ್ಚ ಮಥುರಾಯಾಂ ಸಮಾಗತಃ ॥ ೧೭ ॥

---

೧೩. ಅವನು ತೀರ್ಥದಲ್ಲಿ ಸ್ನಾನಮಾಡುವ ತನಕ ಅವನ ಮೈಯಿಂದ ಹುಳುಗಳು ರಾಶಿಯಾಗುವಂತೆ ಉದಿರುತ್ತಲೇ ಇದ್ದು, ಸ್ನಾನಮಾಡುತ್ತಲೂ ನಿಂತುಹೋಗಿ ಅವನು ಸುಂದರರೂಪನಾಗುತ್ತಿದ್ದನು.

೧೪. ಸುಮಂತುವು ಆ ಆಶ್ಚರ್ಯವನ್ನು ಹಲವುದಿನಗಳು ನೋಡುತ್ತಲೇ ಇದ್ದು, ಈ ಯುವಕನು ಯಾರು ? ಯಾರಮಗನಿರಬಹುದು ? ಎಂದು ಆಲೋಚಿಸತೊಡಗಿದನು.

೧೫–೧೬. ಹಾಗೆ ಚಿಂತಿಸಿದ ಆ ಸುಮಂತುವು ಶಂಕೆಗೊಂಡು " ಸುಂದರನೇ, ನೀನು ಯಾರು ? ಯಾರವನು ? ನಿನ್ನ ಜಾತಿಯಾವುದು ? ನಿನ್ನ ತಂದೆ ಯಾರು ? ನೀನು ಹಗಲೂರಾತ್ರಿಯೂ ಮಾಡುವುದೇನು ? ಕೇಳುತ್ತಿರುವ ನನಗೆ ಎಲ್ಲವನ್ನೂ ಹೇಳು" ಎಂದನು.

೧೭. ಬ್ರಾ–ನಾನು ಪಾಂಚಾಲದೇಶದವನು. ಬ್ರಾಹ್ಮಣಪುತ್ರನು. ವಾಣಿಜ್ಯ ವೃತ್ತಿಯನ್ನವಲಂಬಿಸಿರುವೆನು. ದಕ್ಷಿಣದೇಶದಿಂದ ಮಥುರೆಗೆ ಬಂದಿರುವೆನು.

ನಿಶಾಮುಷಿತ್ವಾ ಶಿಬಿರೇ ಪ್ರಾತಸ್ತೀರ್ಥಂ ಸಮಾಶ್ರಿತಃ ।
ಸ್ನಾತ್ವಾ ಮಾಹೇಶ್ವರಂ ದೃಷ್ಟ್ವಾ ತ್ರಿಗರ್ತೇಶ್ವರ ಸಂಜ್ಞಿತಂ ।
ಕಾಲಿಂಜರಂ ಭವತ್ಪಾದೌ ಗಚ್ಛಾಮಿ ಶಿಬಿರಂ ತತಃ ॥ ೧೮ ॥

॥ ಸುಮಂತ್ರುರುವಾಚ ॥

ಆಶ್ಚರ್ಯಂ ತವ ದೇಹೇಽಸ್ಮಿನ್ನಿತ್ಯಂ ಪಶ್ಯಾಮಿ ನಿಃಸೃತಂ ।
ಅಸ್ನಾನೇ ಕ್ರಿಮಿಸಂಪೂರ್ಣಂ ಸ್ನಾತೇ ನಿರ್ಮಲವರ್ಚಸಂ ॥ ೧೯

ಅಸ್ತಿ ಕಿಂಚಿನ್ಮಹತ್ಪಾಪಂ ತವ ಪ್ರಚ್ಛನ್ನಸಂಭವಂ ।
ಅಸ್ಯಾಂ ತೀರ್ಥಪ್ರಭಾವೇಣ ಸ್ನಾನಾದ್ಗಚ್ಛತಿ ದೂರತಃ ॥ ೨೦ ॥

ಕಾಲಿಂಜರಸ್ಯ ಸಂಸ್ಪರ್ಶಾಚ್ಛುದ್ಧಂ ದೇಹಂಚ ದೃಶ್ಯತೇ ।
ನಿರೂಪ್ಯ ಕಥಯಾಸ್ಮಾಕಂ ಯತ್ತೇ ಪ್ರಚ್ಛನ್ನಕಿಲ್ಬಿಷಂ ॥ ೨೧ ॥

---

೧೮. ರಾತ್ರೆ ಶಿಬಿರವಲ್ಲಿದ್ದು, ಬೆಳಗ್ಗೆ ತೀರ್ಥಕ್ಕೆ ಬಂದು ಸ್ನಾನಮಾಡಿ. ಕಾಲಿಂಜರದ ತ್ರಿಗರ್ತೇಶ್ವರನೆಂಬ ಹೆಸರಿನ ಮಹೇಶ್ವರನನ್ನೂ ನಿಮ್ಮ ಪಾದಗಳನ್ನೂ ಸಂದರ್ಶಿಸಿ, ಬಳಿಕ ಮತ್ತೆ ಶಿಬಿರಕ್ಕೆ ಹೋಗುವೆನು.

೧೯. ಸುಮಂತು—ನಿನ್ನ ದೇಹದಲ್ಲಿ ನಿತ್ಯವೂ ಸ್ನಾನಮಾಡುವುದಕ್ಕೆ ಮುಂಚೆ ಕ್ರಿಮಿಗಳು ತುಂಬಿದ್ದು ಸುರಿಯುವ ಮತ್ತು ಸ್ನಾನಮಾಡುತ್ತಲೂ ನಿರ್ಮಲವಾದ ತೇಜಸ್ಸುಂಟಾಗುವ ಆಶ್ಚರ್ಯವನ್ನು ನೋಡುತ್ತಿದ್ದೇನೆ.

೨೦. ನಿನಗೆ ರಹಸ್ಯವಾಗಿ ಸಂಭವಿಸಿರುವ ಮಹಾಪಾಪವು ಯಾವುದೋ ಇದೆ. ಅದು ಈ ತೀರ್ಥದ ಪ್ರಭಾವದಿಂದ ಸ್ನಾನಮಾಡುತ್ತಲೂ ದೂರವಾಗುವುದು.

೨೧–೨೨ ಕಾಲಿಂಜರಕ್ಷೇತ್ರಸಂಪರ್ಕದಿಂದ ದೇಹವು ಶುದ್ಧವಾಗಿ ಕಾಣುತ್ತದೆ. ಆಲೋಚಿಸಿ ನೋಡಿ ನಿನ್ನಲ್ಲಿರುವ ಗುಪ್ತವಾದ ಪಾಪವೇನೆಂಬುದನ್ನು

ತೀರ್ಥಮಾಹಾತ್ಮ್ಯಭಾವಂಚ ದೃಷ್ಟ್ವಾ ಪೃಚ್ಛಾಮಿತೇ ಹಿತಂ ॥ ೨೨ ॥

ಇತಿ ತಸ್ಯ ಮುನೇಃ ಶ್ರುತ್ವಾ ತ್ರಿಕಾಲಜ್ಞಸ್ಯ ಭಾಷಿತಂ ।
ಕಿಂಚಿನ್ನೋವಾಚ ಪೃಷ್ಟೋಽಪಿ ಏವಮೇವ ಗತಃಪುನಃ ॥ ೨೩ ॥

ತಸ್ಯಾಮಾಸೀತ್ಸ ಏಕಾಂತೇ ತಾಂತು ಪಪ್ರಚ್ಛ ಸಾದರಂ ॥ ೨೪ ॥

ಕಾ ತ್ವಂ ಕಸ್ಯಾಸಿ ಸುಭಗೇ ಕಶ್ಚ ದೇಶಃ ಪ್ರಿಯಂವದೇ ।
ಕಿಂ ತತ್ಕಾರಣಮುದ್ದಿಶ್ಯ ವಸಸ್ಯತ್ರ ಸುಖಂ ಸದಾ ॥ ೨೫ ॥

ಇತಿ ನಿರ್ಬಂಧತಃ ಪೃಷ್ಟಾ ಕಿಂಚಿನ್ನೋವಾಚ ತಂಪ್ರತಿ ।
ಪುನಃ ಪುನಶ್ಚ ಪಪ್ರಚ್ಛ ಸಾ ಪ್ರೋವಾಚ ನ ಕಿಂಚನ ॥ ೨೬ ॥

ನಮಗೆ ಹೇಳು. ಈ ತೀರ್ಥದ ಮಹಿಮೆಯ ಸ್ವರೂಪವನ್ನು ನೋಡಿ, ನಿನ್ನ ಹಿತಕ್ಕಾಗಿ ಕೇಳುತ್ತಿದ್ದೇನೆ.

೨೩. ತ್ರಿಕಾಲಜ್ಞಾನಿಯಾದ ಆ ಮುನಿ ಹೀಗೆ ಹೇಳಿದುದನ್ನು ಕೇಳಿ, ಆತನು ಯಾವ ಉತ್ತರವನ್ನೂ ಹೇಳದೆ ಸುಮ್ಮನೆ ಹೊರಟು ಹೋದನು

೨೪–೨೫. ಆದರೆ ಆ ಯುವಕನು ಆ ತಿಲೋತ್ತಮೆಯೊಡನೆ ಏಕಾಂತದಲ್ಲಿದ್ದು ಆಕೆಯನ್ನು “ ಸುಂದರೀ, ನೀನು ಯಾರು ? ಯಾರವಳು? ಪ್ರಿಯಂವದೇ, ನಿಮ್ಮದೇಶವಾವುದು ? ಯಾವ ಕಾರಣದಿಂದ ಇಲ್ಲಿ ಯಾವಾಗಲೂ ಸುಖದಿಂದ ವಾಸಮಾಡುತ್ತಿರುವೆ ? ” ಎಂದು ಆದರದಿಂದ ಕೇಳಿದನು.

೨೬. ಆತನು ಹೀಗೆ ನಿರ್ಬಂಧದಿಂದ ಪ್ರಶ್ನಿಸಿದರೂ ಆಕೆ ಅವನಿಗೆ ಏನನ್ನೂ ಹೇಳಲಿಲ್ಲ. ಅವನು ಮತ್ತೆ ಕೇಳಿದನು. ಆದರೂ ಆಕೆ ಯಾವ ಮಾತನ್ನೂ ಆಡಲಿಲ್ಲ.

ಕಿಂಚಿತ್ಕಾಲಂ ಸಮಾಸ್ಥಾಯ ತೇನೋಕ್ತಂ ಹಿ ಪ್ರಿಯಾಂಪ್ರತಿ ।
ತ್ಯಕ್ಷ್ಯಾಮಿ ಹಿ ಪ್ರಿಯಾನ್ಪ್ರಾಣಾನ್ಯದಿ ಸತ್ಯಂ ನ ವಕ್ಷ್ಯಸಿ ॥ ೨೭ ॥

ನಿರ್ಬಂಧಂ ತಸ್ಯ ತದ್ಜ್ಞಾತ್ವಾ ದುಃಖೇನೋವಾಚ ತಂಪ್ರತಿ ।
ಪಿತರೌ ಭ್ರಾತರಶ್ಚೈತಿ ದೇಶಂ ಜ್ಞಾತಿಂ ತತಃ ಕುಲಂ ॥ ೨೮ ॥

ಪಾಂಚಾಲನಗರೀ ರಮ್ಯಾ ಗಂಗಾಯಾಶ್ಚೋತ್ತರೇ ತಟೇ ।
ತಸ್ಯಾಂ ತೌ ಪಿತರೌ ಮಹ್ಯಂ ವಸತಶ್ಚ ಯದೃಚ್ಛಯಾ ॥
ದುರ್ಭಿಕ್ಷಪೀಡಿತೇ ರಾಷ್ಟ್ರೇ ಗತೌ ತೌ ದಕ್ಷಿಣಾಪಥಂ ॥ ೨೯ ॥

ನರ್ಮದಾದಕ್ಷಿಣೇ ಕೂಲೇ ಬ್ರಾಹ್ಮಣಾನಾಂ ಪುರೋತ್ತಮೇ ।
ತಸ್ಮಿನ್‌ಸ್ಥಾನೇ ಪಿತುರ್ಮಹ್ಯಂ ಪಂಚಪುತ್ರಾ ಮಯಾಸಹ ॥ ೩೦ ॥

---

೨೭. ಸ್ವಲ್ಪಕಾಲ ಸುಮ್ಮನಿದ್ದು ಆತನು ಮತ್ತೆ "ನೀನು ನಿಜವನ್ನು ಹೇಳದಿದ್ದರೆ ನಾನು ಪ್ರಿಯವಾದ ಪ್ರಾಣಗಳನ್ನು ತ್ಯಜಿಸುವೆನು" ಎಂದು ಪ್ರಿಯೆಗೆ ಹೇಳಿದನು.

೨೮. ಆತನ ಆ ನಿರ್ಬಂಧವನ್ನು ಕಂಡು, ದುಃಖದಿಂದ ಆತನಿಗೆ ತನ್ನ ತಾಯಿತಂದೆಗಳನ್ನೂ, ಸಹೋದರರನ್ನೂ, ದೇಶವನ್ನೂ, ಬಂಧುಗಳನ್ನೂ, ಕುಲವನ್ನೂ ಹೇಳಿದಳು.

೨೯. "ಗಂಗಾನದಿಯ ಉತ್ತರತೀರದಲ್ಲಿ ರಮ್ಯವಾದ ಪಾಂಚಾಲನಗರವಿದೆ. ಆ ಪಟ್ಟಣದಲ್ಲಿ ನನ್ನ ತಾಯಿತಂದೆಗಳು ವಾಸಮಾಡುತ್ತಿದ್ದರು. ಅಕಸ್ಮಾತ್ತಾಗಿ ಆ ದೇಶದಲ್ಲಿ ಕ್ಷಾಮದ ತೊಂದರೆಯುಂಟಾಗಲಾಗಿ ಅವರು ದಕ್ಷಿಣದೇಶಕ್ಕೆ ಹೊರಟು ಹೋದರು.

೩೦. ಅಲ್ಲಿ ನರ್ಮದಾನದಿಯ ದಕ್ಷಿಣತೀರದಲ್ಲಿ ಬ್ರಾಹ್ಮಣರು ಹೆಚ್ಚಾಗಿರುವ ಉತ್ತಮವಾದ ಒಂದು ಪಟ್ಟಣದಲ್ಲಿ ವಾಸಮಾಡುತ್ತಿದ್ದ ನಮ್ಮ ತಾಯಿತಂದೆಗಳಿಗೆ ಐವರು ಗಂಡುಮಕ್ಕಳೂ, ನಾನೂ ಜನಿಸಿದೆವು.

ಜಾತಾಸ್ತೇಷಾಮಹಂ ಷಷ್ಠೀ ಕನಿಷ್ಠಾ ವಿಧವಾಽಭವಂ ।
ಯೋಽಸೌ ಕನಿಷ್ಠಕೋ ಭ್ರಾತಾ ಮಮ ಜ್ಯೇಷ್ಠಶ್ಚ ಪಂಚಮಃ ॥ ೩೧ ॥

ಬಾಲ ಏವ ಗತೋ ದೇಶಂ ಧನತೃಷ್ಣಾಪ್ರಲೋಭಿತಃ ॥ ೩೨ ॥

ತಸ್ಮಿನ್‌ಗತೇಽಥ ಪಿತರೌ ಕಾಲಧರ್ಮಮುಪೇಯತುಃ ।
ತೀರ್ಥೇಽಸ್ಮಿನ್ನಸ್ಥಿಪಾತಾರ್ಥಮಹಂ ಸಾರ್ಥೈಃ ಸಹಾಗತಾ ॥ ೩೩ ॥

ಅತ್ರ ಸ್ನಾನಪರಾ ನಿತ್ಯಂ ದೇವಬ್ರಾಹ್ಮಣವಂದನಂ ।
ಕುರ್ವಂತೀ ವಶಮಾಪನ್ನಾ ಆಸಾಂ ಯಸ್ಯಾ ಮನೋದೃಶಂ ॥ ೩೪ ॥

ಆಶ್ರಿತಾ ಕುಲಟಾಧರ್ಮಂ ಕುಲನಾಶೋ ಮಯಾಕೃತಃ ।
ಕುಲದ್ವಯೇ ಚ ಪುರುಷಾ ಏಕವಿಂಶತಿಸಂಖ್ಯಯಾ ॥
ನೀತಾ ನರಕಮತ್ಯುಗ್ರಂ ಮಯಾ ಪಾಪಿಷ್ಠಯಾಭೃಶಂ ॥ ೩೫ ॥

೩೧-೩೨ ನಮ್ಮ ಸಹೋದರರಲ್ಲಿ ಆರನೆಯವಳೂ, ಎಲ್ಲರಿಗೂ ಕಿರಿಯವಳೂ ಆಗಿ ಜನಿಸಿದೆನು. ವಿಧವೆಯೂ ಆದೆನು. ಮಕ್ಕಳಲ್ಲಿ ಐದನೆಯವನೂ ನನಗೆ ಅಣ್ಣನೂ ಆದವನು ಹಣದ ಆಸೆಯಿಂದ ಬಾಲ್ಯದಲ್ಲೇ ವಾಣಿಜ್ಯಕ್ಕಾಗಿ ದೇಶ ಸಂಚಾರಮಾಡಲು ಹೋದನು.

೩೩. ನಮ್ಮ ಕಿರಿಯಣ್ಣನಾದ ಆತನು ಹೊರಟು ಹೋದ ಬಳಿಕ ನಮ್ಮ ತಾಯಿತಂದೆಗಳು ಸ್ವರ್ಗಸ್ಥರಾದರು. ಇಲ್ಲಿನ ತೀರ್ಥದಲ್ಲಿ ಅವರ ಅಸ್ಥಿಯನ್ನು ಹಾಕುವುದಕ್ಕಾಗಿ ನಾನು ಯಾತ್ರಿಕರೊಡನೆ ಇಲ್ಲಿಗೆ ಬಂದೆನು.

೩೪-೩೫. ಇಲ್ಲಿ ನಿತ್ಯವೂ ಸ್ನಾನಮಾಡುವುದರಲ್ಲಿ ಆಸಕ್ತಳಾಗಿ ಬ್ರಾಹ್ಮಣರನ್ನು ವಂದಿಸುತ್ತ ಇರುತ್ತಿರಲು ನನ್ನನ್ನು ಈ ಜಾರವೃತಿಗೆ ಬರುವಂತೆ ಮಾಡಿದ ಆ ವೇಶ್ಯೆಯರ ವಶಕ್ಕೆ ಸಿಕ್ಕಿಕೊಂಡೆನು. ಅಯ್ಯೋ ! ನಾನು ಕುಲವನ್ನು ನಾಶಮಾಡಿದೆನು. ಎರಡುಕುಲಗಳಲ್ಲೂ ಇಪ್ಪತ್ತೊಂದುತಲೆಯವರನ್ನು ಅತಿ ಪಾಪಿಷ್ಠೆಯಾದ ನಾನು ಅತ್ಯುಗ್ರವಾದ ನರಕದಲ್ಲಿ ಬೀಳಿಸಿದೆನು.

ಏವಂ ಸಾ ತಸ್ಯ ತತ್ಸರ್ವಂ ಕಥಯಿತ್ವಾ ತಿಲೋತ್ತಮಾ |
ರುರೋದ ಸುಸ್ವರಂ ದೀನಾ ಸ್ಮೃತ್ವಾ ಪೂರ್ವಂ ಕುಲಂ ವರಂ || ೩೬ ||

ವಿಲಪ್ಯ ಬಹುಧಾ ರಾತ್ರೌ ಸಂಸ್ಮೃತ್ಯ ಸ್ವಂ ವಿಚೇಷ್ಟಿತಂ || ೩೭ ||

ತಸ್ಯಾ ವಿಲಪಿತಂ ಶ್ರುತ್ವಾ ಸ್ತ್ರೀಜನಃ ಸ ತದಾಗತಃ |
ಸಾಂತ್ವಯಾಮಾಸ ತಾಂ ಬಾಲಾಂ ಕಿಂಭದ್ರೇ ರುದಿತಂ ತವ || ೩೮ ||

ಏತಚ್ಛ್ರುತ್ವಾ ಸ ಪಾಂಚಾಲ್ಯೋ ಮೂರ್ಛಿತೋ ಧರಣೀಂ ಗತಃ |
ತಾಃ ಸ್ತ್ರಿಯಸ್ತಾಂ ಸಮಾಶ್ವಾಸ್ಯ ಪಾಂಚಾಲ್ಯಂ ಪರಿವಾರ್ಯ ಚ || ೩೯ ||

ತೈಸ್ತೈರುಪಾಯೈರ್ವಿವಿಧೈರ್ಜೀವಯಿತ್ವಾ ಚ ತಂ ನರಂ |
ಲಬ್ಧ ಪ್ರಾಣಂತು ತಂ ದೃಷ್ಟ್ವಾ ಪಪ್ರಚ್ಛುರ್ಮೋಹಕಾರಣಂ || ೪೦ ||

---

೩೬. ಆ ತಿಲೋತ್ತಮೆ ಹೀಗೆ ಎಲ್ಲವನ್ನೂ ಆತನಿಗೆ ಹೇಳಿ ಹಿಂದಿನ ತಮ್ಮ ಉತ್ತಮವಾದ ಕುಲವನ್ನು ಜ್ಞಾಪಿಸಿಕೊಂಡು ದೀನತೆಯಿಂದ ಗಟ್ಟಿಯಾಗಿ ಅತ್ತಳು.

೩೭–೩೮. ಆಕೆ ತನ್ನ ದುರ್ವರ್ತನೆಯನ್ನು ಸ್ಮರಿಸಿಕೊಂಡು ರಾತ್ರಿ ಹಲವು ಬಗೆಯಾಗಿ ಅಳುತ್ತಿರಲು, ಅದನ್ನು ಕೇಳಿ ಅವಳ ಜತೆಯ ಹೆಂಗಸರು ಅವಳ ಹತ್ತಿರಕ್ಕೆ ಬಂದು, 'ಭದ್ರೇ, ಏತಕ್ಕಾಗಿ ಅಳುತ್ತೀಯೆ?' ಎಂದು ಕೇಳಿ ಸಮಾಧಾನ ಮಾಡಿದರು.

೩೯–೪೦. ಆ ಪಾಂಚಾಲ ಬ್ರಾಹ್ಮಣನು ತಿಲೋತ್ತಮೆ ಹೇಳಿದುದನ್ನು ಕೇಳಿ ಮೂರ್ಛೆಗೊಂಡು, ನೆಲದಮೇಲೆ ಬಿದ್ದನು. ಆ ಹೆಂಗಸರು ತಿಲೋತ್ತಮೆಯನ್ನು ಸಂತೈಸಿ, ಬಳಿಕ ಆ ಬ್ರಾಹ್ಮಣನನ್ನು ಸುತ್ತುಗಟ್ಟನಿಂತು, ಬಗೆ ಬಗೆಯ ಉಪಾಯಗಳಿಂದ ಅವನನ್ನು ಬದುಕಿಸಿ, ಚೇತರಿಸಿಕೊಂಡುದನ್ನು ನೋಡಿ, ಅವನ ಮೂರ್ಛೆಗೆ ಕಾರಣವನ್ನು ಕೇಳಿದರು.

ತತಸ್ತೇನ ಸ್ವವೃತ್ತಾಂತಂ ಕಥಿತಂ ಚ ಕುಲಂ ಮಹತ್ ।
ತಿಲೋತ್ತಮಾ ಸಹಾಯಾನಾಂ ಸ್ತ್ರೀಣಾಮಗ್ರೇ ಸವಿಸ್ತರಂ ॥ ೪೧ ॥

ತತಃ ಸ ವಿಮನಾ ಜಾತೋ ಅಗಮ್ಯಾಗಮನೇನ ಚ ।
ಪ್ರಾಯಶ್ಚಿತ್ತೇ ಮತಿರಭೂನ್ನಿರ್ವಿಣ್ಣಸ್ಯ ದುರಾತ್ಮನಃ ॥ ೪೨ ॥

ಬ್ರಹ್ಮಹಾ ಚ ಸುರಾಪಶ್ಚ ಬ್ರಾಹ್ಮಣೋ ಯದಿ ಜಾಯತೇ ।
ಪ್ರಾಯಶ್ಚಿತ್ತಂ ವಿನಿರ್ದಿಷ್ಟಂ ಮುನಿಭಿರ್ದೇಹನಾಶನಂ ॥ ೪೩ ॥

ಮಾತರಂ ಗುರುಪತ್ನೀಂಚ ಸ್ವಸಾರಂ ಪುತ್ರಿಕಾಂ ವಧೂಂ ।
ಗತ್ವಾ ತು ಪ್ರವಿಶೇದಗ್ನಿಂ ನಾನ್ಯಾ ಶುದ್ಧಿರ್ವಿಧೀಯತೇ ॥ ೪೪ ॥

---

೪೧. ಬಳಿಕ ಆತನು ವೃತ್ತಾಂತ ಸಹಿತವಾಗಿ ತನ್ನ ಮಹಾಕುಲವನ್ನು ವಿವರವಾಗಿ, ತಿಲೋತ್ತಮೆಯ ಜತೆಯ ಆ ಹೆಂಗಸರಿಗೆ ಹೇಳಿದನು.

೪೨. ಅಲ್ಲದೆ ಆತನು ಅಗಮ್ಯಾಗಮನದಿಂದ ವ್ಯಸನಗೊಂಡ ಮನವುಳ್ಳವನಾದನು. ಹಾಗೆ ದುಃಖಿತನಾದ ಆ ದುರಾತ್ಮನಿಗೆ ತನ್ನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂಬ ಬುದ್ಧಿಯುಂಟಾಯಿತು.

೪೩. ಬ್ರಾಹ್ಮಣನು ಬ್ರಹ್ಮಹತ್ಯೆಯನ್ನಾಗಲಿ ಸುರಾಪಾನವನ್ನಾಗಲಿ ಮಾಡಿದರೆ ಅವನಿಗೆ ದೇಹನಾಶವು ಪ್ರಾಯಶ್ಚಿತ್ತವೆಂದು ಋಷಿಗಳು ಹೇಳಿರುವರು.

೪೪. ತಾಯಿ, ಗುರುವಿನ ಹೆಂಡತಿ, ಸಹೋದರಿ, ಮಗಳು, ಸೊಸೆ ಇವರ ಸಂಗಮವನ್ನು ಮಾಡಿದವನು ಅಗ್ನಿಪ್ರವೇಶವನ್ನು ಮಾಡಬೇಕು. ಬೇರೆಯಾದ ಶುದ್ಧಿಯನ್ನು ವಿಧಿಸಿಲ್ಲ.

ಬ್ರಹ್ಮಘ್ನಶ್ಚ ಸುರಾಪಶ್ಚ ಸ್ತ್ರೀಘ್ನಶ್ಚ ಗುರುತಲ್ಪಗಃ ।
ಅಗಮ್ಯಾಗಮನಂ ಕೃತ್ವಾ ಏಷಾಂ ಸ ಸಮತಾಮಿಯಾತ್ ॥
ಇತಿ ಶ್ರುತ್ವಾ ತು ಪಾಂಚಾಲೀ ಜ್ಯೇಷ್ಠಭ್ರಾತರಮೇವ ತಂ ॥ ೪೫ ॥

ದ್ವಿಜೇಭ್ಯಃ ಪ್ರದದೌ ಸರ್ವಮಂಗಲಗ್ನಂ ವಿಭೂಷಣಂ ।
ರತ್ನಂ ವಸ್ತ್ರಂ ಧನಂ ಧಾನ್ಯಂ ಯತ್ಕಿಂಚಿತ್ತತ್ರ ಸಂಸ್ಥಿತಂ ॥ ೪೬ ॥

ತತ್ಸರ್ವಂ ಬ್ರಾಹ್ಮಣೇಭ್ಯಶ್ಚ ದತ್ವಾ ಶೇಷಂ ದದೌ ಧನಂ ।
ಕಾಲಿಂಜರಸ್ಯ ಭೂಷಾರ್ಥಮಾರಾಮಾರ್ಥಂ ವಿಶೇಷತಃ ॥ ೪೭ ॥

ಕೃಷ್ಣಗಂಗೋದ್ಭವೇ ತೀರ್ಥೇ ಚಿತಾಂ ಕೃತ್ವಾ ವಿಧಾನತಃ ।
ಆತ್ಮನಶ್ಚ ವಿಶುದ್ಧ್ಯರ್ಥಂ ಪ್ರಜಜ್ವಾಲ ಹುತಾಶನಂ ॥ ೪೮ ॥

ಇತಿ ನಿಶ್ಚಿತ್ಯ ತತ್ರೈವ ಸ್ನಾತ್ವಾ ದೇವಂ ಪ್ರಣಮ್ಯ ಚ ।
ಪಂಚಾಲೋಽಪಿ ವಿಧಾನೇನ ನಮಸ್ಕೃತ್ಯ ಮುನಿಂ ಗುರುಂ ॥ ೪೯ ॥

---

೪೫. ಆ ಪಾಂಚಾಲಬ್ರಾಹ್ಮಣಪುತ್ರಿ ಆಗಮ್ಯಾಗಮನವನ್ನು ಮಾಡಿದವನು ಬ್ರಹ್ಮಹತ್ಯೆ, ಸುರಾಪಾನ, ಸ್ತ್ರೀವಧೆ, ಗುರುಪತ್ನೀಗಮನ ಇವುಗಳನ್ನು ಮಾಡಿದವರಿಗೆ ಸಮಾನನಾದ ಪಾಪಿಯಾಗುವನೆಂಬುದನ್ನೂ ಆತನೇ ತನ್ನ ಅಣ್ಣನೆಂಬುದನ್ನೂ ಅರಿತಳು.

೪೬–೪೭. ಬಳಿಕ ಆಕೆ ತನ್ನ ಮೈಮೇಲಿದ್ದ ಒಡವೆಗಳನ್ನೂ, ತನ್ನಲ್ಲಿದ್ದ ರತ್ನವಸ್ತ್ರಧನಧಾನ್ಯಾದಿಗಳನ್ನೂ ಬ್ರಾಹ್ಮಣರಿಗೆ ಕೊಟ್ಟು, ಕಾಲಿಂಜರಕ್ಷೇತ್ರದ ಅಲಂಕಾರಕ್ಕಾಗಿಯೂ, ಅಲ್ಲಿ ಉದ್ಯಾನವನನಿರ್ಮಾಣಕ್ಕಾಗಿಯೂ ವಿಶೇಷ ಧನವನ್ನೂ ಕೊಟ್ಟಳು.

೪೮–೫೦. ಬಳಿಕ ಆಕೆ ಕೃಷ್ಣಗಂಗಾತೀರ್ಥದ ಸಮೀಪದಲ್ಲಿ ವಿಧಿಪೂರ್ವಕವಾಗಿ ಚಿತೆಯನ್ನು ಸಿದ್ಧಪಡಿಸಲು ತನ್ನ ಶುದ್ಧಿಗಾಗಿಯೂ ಬೆಂಕಿಯನ್ನು ಹತ್ತಿಸಿದಳೆಂದು ನಿರ್ಣಯಿಸಿ, ಆ ಪಾಂಚಾಲಬ್ರಾಹ್ಮಣನೂ ಆ ತೀರ್ಥದಲ್ಲಿ ಸ್ನಾನಮಾಡಿ, ದೇವರಿಗೆ ನಮಸ್ಕಾರಮಾಡಿ, ಮುನಿಯೂ

ಸುಮಂತುಂಚ ಮಹಾಭಾಗಮುಪವಿಶ್ಯಾಗ್ರತಶ್ಚ ಸಃ ॥ ೫೦ ॥

ಮರಣಾಯೋಪಯೋಗ್ಯಾನಿ ಕೃತ್ವಾ ಕರ್ಮಾಣಿ ತತ್ರ ಚ ।
ಮಾಥುರಾನ್ ಸ ಸಮಾಹೂಯ ದತ್ವಾ ದಾನಾನಿ ಸರ್ವಶಃ ॥ ೫೧ ॥

ಕ್ರೀತ್ವಾ ಗ್ರಾಮಾಂಶ್ಚ ತತ್ರೈವ ಬ್ರಾಹ್ಮಣೇಭ್ಯೋ ದದೌ ತದಾ ॥ ೫೨ ॥

ಈಶಾವಾಸ್ಯಂ ಜಪಂ ದಿವ್ಯಂ ಜಾಪಕೇಭ್ಯಃ ಶೃಣೋತಿ ಚ ।
ತೇಭ್ಯೋಽಪಿ ಪ್ರದದೌ ದ್ರವ್ಯಂ ಸತ್ರಾರ್ಥಂ ಚ ವಿಭಾಗಶಃ ॥
ಔರ್ಧ್ವದೇಹಿಕ ಭಾಗಾರ್ಥಂ ಕಲ್ಪಯಿತ್ವಾ ಯಥಾವಿಧಿ ॥ ೫೩ ॥

ಸ್ನಾತ್ವಾ ತೀರ್ಥೇಚ ಕೃಷ್ಣಸ್ಯ ದೇವಂ ದೃಷ್ಟ್ವಾ ಪ್ರಣಮ್ಯ ಚ ।
ಕಾಲಿಂಜರಸ್ಯ ಪೂಜಾರ್ಥಂ ಸತ್ರಾರ್ಥಂ ಪರಿಕಲ್ಪ್ಯ ಚ ॥ ೫೪ ॥

ಗುರುವೂ ಆದ ಸುಮಂತುವಿಗೂ ನಮಸ್ಕರಿಸಿ, ಅವನೆದುರಿಗೆ ಕುಳಿತುಕೊಂಡನು.

೫೧–೫೨. ಪಾಂಚಾಲನು ಅಲ್ಲಿ ಮರಣಕ್ಕೆ ಮೊದಲು ಮಾಡಬೇಕಾದ ಕರ್ಮಗಳನ್ನು ಮಾಡಿ, ಹಲವು ಗ್ರಾಮಗಳನ್ನು ಕೊಂಡು ಕೊಂಡು, ಮಥುರೆಯ ಬ್ರಾಹ್ಮಣರನ್ನು ಕರೆಯಿಸಿ, ಅಲ್ಲೇ ಆ ಗ್ರಾಮಗಳನ್ನೂ, ಬೇರೆಯ ವಸ್ತುಗಳನ್ನೂ ಅವರಿಗೆ ದಾನಮಾಡಿದನು.

೫೩. ಜಪಮಾಡುವರಿಂದ ದಿವ್ಯವಾದ ಈಶಾವಾಸ್ಯೋಪನಿಷನ್ಮಂತ್ರವನ್ನು ಹೇಳಿಸಿ ಕೇಳಿ, ಅವರಿಗೆ ಧನವನ್ನು ಕೊಟ್ಟು ಸತ್ರಕ್ಕಾಗಿಯೂ ತನಗೆ ಉತ್ತರ ಕ್ರಿಯೆಗೂ, ಯಥಾವಿಧಿಯಾಗಿ ದ್ರವ್ಯವನ್ನು ವಿಭಾಗಿಸಿ ಕ್ಲೃಪ್ತಮಾಡಿಟ್ಟನು.

೫೪–೫೫. ಕೃಷ್ಣತೀರ್ಥದಲ್ಲಿ ಸ್ನಾನವನ್ನು ಮಾಡಿ, ದೇವನ ಸಂದರ್ಶನ ಪ್ರಣಾಮಗಳನ್ನು ಮಾಡಿ, ಕಾಲಿಂಜರದಲ್ಲಿ ದೇವಾಲಯವನ್ನು ಕಟ್ಟಿಸಿ, ಪೂಜೆಗೂ

ದೇವಾಲಯಂಚ ತತ್ರೈವ ಕೃತ್ವಾ ಸಂದಿಶ್ಯ ಸಾರ್ಥಕಾನ್ ।
ಸುಮಂತೋಃ ಪ್ರವರಸ್ಯಾಥ ಪಾದೌ ಜಗ್ರಾಹ ಧರ್ಮವಿತ್ ॥ ೫೫ ॥

ದೇವ ಜ್ಞಾನಂಚ ತೇ ದಿವ್ಯಮದ್ಭುತಂ ಲೋಮಹರ್ಷಣಂ ।
ಅಗಮ್ಯಾಗಮನಾದೇವ ಪಾಪಂ ಜಾತಂ ಮಮ ಪ್ರಭೋ ॥ ೫೬ ॥

ಆಗತೋಽಹಂ ಯದಾರಭ್ಯ ಮಥುರಾಯಾಂ ತತೋ ಗುರೋ ।
ಭಗಿನ್ಯಾ ಸಹ ಸಂಯೋಗೇ ಜಾತೋಽಯಂ ಕುಲನಾಶಕಃ ॥ ೫೭ ॥

ತ್ವಯಾ ನಿರ್ಮಲದೃಷ್ಟ್ಯಾಚ ವೀಕ್ಷಿತೋಽಹಂ ಪುರಾ ಮುನೇ ।
ಕ್ರಿಮಯೋ ಮಮ ಗಾತ್ರಾತ್ತು ನಿರ್ಗಚ್ಛಂತೋ ಹಿ ನಿತ್ಯದಾ ॥ ೫೮ ॥

ಕೃಷ್ಣಗಂಗಾಪ್ರಭಾವೇಣ ಪುನರ್ನಿರ್ಮಲತಾಂ ಗತಂ ।
ತತ್ಸರ್ವಂ ಹಿ ತ್ವಯಾ ದೃಷ್ಟಂ ಪೃಷ್ಟಶ್ಚಾಹಂ ಪುನಃ ಪುನಃ ॥ ೫೯ ॥

ಸತ್ರಕ್ಕೂ ಏರ್ಪಡಿಸುವಂತೆ ತನ್ನ ಜತೆಯವರಿಗೆ ಹೇಳಿ, ಧರ್ಮಜ್ಞನಾದ ಆತನು ಶ್ರೇಷ್ಠನಾದ ಸುಮಂತುವಿನ ಪಾದಗಳನ್ನು ಹಿಡಿದುಕೊಂಡನು.

೫೬. “ಸ್ವಾಮೀ, ತಮ್ಮ ಜ್ಞಾನವು ಅದ್ಭುತವಾಗಿ ರೋಮಾಂಚವನ್ನುಂಟು ಮಾಡುವುದಾಗಿದೆ. ಪ್ರಭುವೇ, ನನಗೆ ಅಗಮ್ಯಾಗಮನದಿಂದಲೇ ಪಾಪ ವುಂಟಾಯಿತು.

೫೭. ಗುರುವೇ, ನಾನು ಮಥುರೆಗೆ ಬಂದ ಬಳಿಕ ಕುಲನಾಶಕವಾದ ಸಹೋದರೀಸಮಾಗಮವು ನನಗೆ ಘಟಿಸಿತು.

೫೮–೫೯. ಮುನಿವರ್ಯರೇ, ತಾವು ನಿರ್ಮಲದೃಷ್ಟಿಯಿಂದ ನನ್ನನ್ನು ಮುಂಚೆಯೇ ನೋಡಿದಿರಿ. ನನ್ನ ದೇಹದಿಂದ ನಿತ್ಯವೂ ಸುರಿಯುತ್ತಿದ್ದ ಕ್ರಿಮಿಗಳು ಕೃಷ್ಣಗಂಗಾಪ್ರಭಾವದಿಂದ ನಾಶವಾಗಿ ನನ್ನ ದೇಹವು ಮತ್ತೆ ನಿರ್ಮಲ ವಾಗುತ್ತಿತ್ತು. ತಾವು ಅದೆಲ್ಲವನ್ನೂ ನೋಡಿ, ನನ್ನನ್ನು ಮತ್ತೆ ಮತ್ತೆ ಕೇಳಿದಿರಿ.

ತತ್ಸತ್ಯಂ ಮಮ ಸಂಜಾತಮಗಮ್ಯಾಗಮಪಾತಕಂ ।
ತತ್ಪಾಪಸ್ಯ ವಿಶುದ್ಧ್ಯರ್ಥಂ ದೇಹತ್ಯಾಗಂ ಕರೋಮಿ ವೈ ॥ ೬೦ ॥

ಅನುಜ್ಞಾಂ ದೇಹಿ ಭೋ ಸ್ವಾಮಿಂಸ್ತವ ಪಾದೌ ನಮಾಮ್ಯಹಂ ॥ ೬೧ ॥

ವಿಶ್ರಾವ್ಯ ತಸ್ಯ ತತ್ಪಾಪಂ ಚಿತಾಂ ದೀಪ್ಯ ಘೃತೋಕ್ಷಿತಾಂ ।
ಪ್ರವೇಷ್ಟುಕಾಮಂ ತತ್ರಾಗ್ನೌ ಖೇ ಪ್ರೋವಾಚಾಶರೀರಿಣೀ ॥
ಮೈವಂಕಾರ್ಷೀಃ ಸಾಹಸಂಚ ವಿಪಾಪ್ಮಾನೌ ಯುವಾಂ ಯತಃ ॥ ೬೨ ॥

ಕಸ್ಮಾದ್ವಾ ಕಸ್ಯಸಂತ್ರಾಸಾನ್ಮರಣೇ ಕೃತನಿಶ್ಚಯೌ ।
ಯತ್ರಕೃಷ್ಣಸ್ಯ ಸಂಚಾರಃ ಕ್ರೀಡಿತಂ ಚ ಯಥಾಸುಖಂ ॥
ಚಕ್ರಾಂಕಿತಪದಾ ತೇನ ಸ್ಥಾನಂ ಬ್ರಹ್ಮಸಮಂ ಶುಭಂ ॥ ೬೩ ॥

---

೬೦. ನೀವು ಹೇಳಿದಂತೆ ನನಗೆ ಅಗಮ್ಯಾಗಮನ ಪಾತಕವು ನಿಜವಾಯಿತು. ಆ ಪಾಪದ ನಾನು ಅಗ್ನಿಯಲ್ಲಿ ದೇಹವನ್ನು ತ್ಯಜಿಸುತ್ತೇನೆ.

೬೧. ಸ್ವಾಮೀ, ತಮ್ಮ ಪಾದಗಳಿಗೆ ನಮಸ್ಕರಿಸುತ್ತೇನೆ ನನಗೆ ಅಪ್ಪಣೆಯನ್ನು ಕೊಡಿ" ಎಂದನು.

೬೨. ಅವನ ಆ ಪಾಪವನ್ನು ಕೇಳಿ, ತುಪ್ಪವನ್ನು ಹಾಕಿ ಚಿತೆಯನ್ನು ಉರಿಗೊಳಿಸಿ ಅದರಲ್ಲಿ ಪ್ರವೇಶಿಸಲು ಇಚ್ಛಿಸುತ್ತಿರುವ ಅವನನ್ನು ಕುರಿತು ಅಶರೀರ ವಾಣಿ ಹೀಗೆ ಹೇಳಿತು "ನೀವು ಪಾಪರಹಿತರಾಗಿರುವುದರಿಂದ ಸಾಹಸವನ್ನು ಮಾಡಬೇಡಿ.

೬೩. ಏಕೆ ಯಾವ ಭಯದಿಂದ ನೀವು ಪ್ರಾಣಬಿಡಲು ನಿಶ್ಚಯಿಸಿರುವಿರಿ? ಶ್ರೀಕೃಷ್ಣನು ತನ್ನ ಚಕ್ರಾಂಕಿತವಾದ ಪಾದದಿಂದ ಸಂಚರಿಸಿ ಸುಖವಾಗಿ ಆಡಿದೆಡೆಯಾದ ಈ ಶುಭಸ್ಥಳವು ಬ್ರಹ್ಮಸಮಾನವಾದುದು.

ಅನ್ಯತ್ರ ಹಿ ಕೃತಂ ಪಾಪಂ ತೀರ್ಥಮಾಸಾದ್ಯ ಗಚ್ಛತಿ ।
ತೀರ್ಥೇ ಚ ಯತ್ಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ ॥ ೬೪ ॥

ದ್ವಾವೇತೌ ಚ ಯಥಾವಶ್ಯಂ ಗಂಗಾಸಾಗರಸಂಗಮೇ ।
ಸಕೃದೇವ ನರಃ ಸ್ನಾತ್ವಾ ಮುಚ್ಯತೇ ಬ್ರಹ್ಮಹತ್ಯಯಾ ॥ ೬೫ ॥

ಪೃಥಿವ್ಯಾಂ ಯಾನಿ ತೀರ್ಥಾನಿ ಸರ್ವಾಣ್ಯೇವಾಭಿಷೇಚನಾತ್ ।
ತತ್ಪಂಚತೀರ್ಥಸ್ನಾನೇನ ಸಮನ್ನಾಸ್ತ್ಯತ್ರ ಸಂಶಯಃ ॥ ೬೬ ॥

ಏಕಾದಶ್ಯಾಂಚ ವಿಶ್ರಾಂತೌ ದ್ವಾದಶ್ಯಾಂ ಸೌಕರೇ ತಥಾ ।
ತ್ರಯೋದಶ್ಯಾಂ ನೈಮಿಷೇ ಚ ಪ್ರಯಾಗೇ ಚ ಚತುರ್ದಶೀಂ ॥ ೬೭ ॥

ಕಾರ್ತಿಕ್ಯಾಂ ಪುಷ್ಕರೇ ಚೈವ ಕಾರ್ತಿಕಸ್ಯ ಸಿತಾಸಿತೇ ।
ಕಾಲೇಷ್ವೇಷು ನರಃ ಸ್ನಾತ್ವಾ ಸರ್ವಪಾಪಂ ವ್ಯಪೋಹತಿ ॥ ೬೮ ॥

೬೪–೬೫. 'ಬೇರೆಡೆಯಲ್ಲಿ ಮಾಡಿದ ಪಾಪವು ತೀರ್ಥಕ್ಕೆ ಬರುವುದರಿಂದ ನಾಶವಾಗುವುದು. ತೀರ್ಥದಲ್ಲೇ ಮಾಡಿದ ಪಾಪವು ವಜ್ರಲೇಪವಾಗುವುದು. ಎಂಬೀ ಎರಡು ವಾಕ್ಯಗಳು ಬೇರೆ ತೀರ್ಥಗಳ ವಿಷಯದಲ್ಲಿ ನಿಜವಾದುವು. ಆದರೆ ಮನುಷ್ಯನು ಗಂಗಾಸಾಗರಸಂಗಮದಲ್ಲಿ ಒಂದುಸಾರಿ ಮಾತ್ರ ಸ್ನಾನ ಮಾಡಿದರೂ (ಅಲ್ಲೇಮಾಡಿದ) ಬ್ರಹ್ಮಹತ್ಯೆಯ ಪಾಪವನ್ನೂ ಕಳೆದುಕೊಳ್ಳುವನು.

೬೬. ಭೂಮಿಯಲ್ಲಿರುವ ಸರ್ವತೀರ್ಥಗಳಲ್ಲೂ ಸ್ನಾನಮಾಡಿದರೂ, ಮುಂದೆ ಹೇಳುವ ಪಂಚತೀರ್ಥಗಳ ಸ್ನಾನಕ್ಕೆ ಸಮವಲ್ಲವೆಂಬುದರಲ್ಲಿ ಸಂದೇಹವು ಇಲ್ಲ.

೬೭–೬೮. ಕಾರ್ತಿಕಮಾಸದ ಶುಕ್ಲಕೃಷ್ಣಪಕ್ಷಗಳ ಏಕಾದಶಿಯದಿನ ವಿಶ್ರಾಂತಿತೀರ್ಥದಲ್ಲೂ, ದ್ವಾದಶಿಯದಿನ ಸೌಕರವತೀರ್ಥದಲ್ಲೂ, ತ್ರಯೋದಶಿಯ ದಿನ ನೈಮಿಷಾರಣ್ಯದ ತೀರ್ಥದಲ್ಲೂ, ಚತುರ್ದಶಿಯದಿನ ಪ್ರಯಾಗದಲ್ಲೂ, ಪೌರ್ಣಮಿಯದಿನ ಪುಷ್ಕರಕ್ಷೇತ್ರದಲ್ಲೂ ಸ್ನಾನಮಾಡುವುದರಿಂದ ಸರ್ವಪಾಪಗಳನ್ನೂ ಕಳೆದುಕೊಳ್ಳುವನು.

ಮಥುರಾಯಾಂಚ ತೀರ್ಥೇಭ್ಯೋ ವಿಶ್ರಾಂತಃ ಪಂಚತೀರ್ಥಕೇ ।
ಅಸಿಕುಂಡೇ ಸರಸ್ವತ್ಯಾಂ ತಥಾ ಕಾಲಿಂಜರಸ್ಯ ಚ ॥ ೬೯ ॥

ಪಂಚತೀರ್ಥಾಭಿಷೇಕಾಚ್ಚ ಯತ್ಫಲಂ ಲಭತೇ ನರಃ ।
ಕೃಷ್ಣಗಂಗಾದಶಗುಣಂ ಲಭತೇ ಚ ದಿನೇ ದಿನೇ ॥ ೭೦ ॥

ಜ್ಞಾನತೋಽಜ್ಞಾನತೋ ವಾಪಿ ಯತ್ಪಾಪಂ ಸಮುಪಾರ್ಜಿತಂ ।
ಸುಕೃತಂ ದುಷ್ಕೃತಂಚಾಪಿ ಮಥುರಾಯಾಂ ಪ್ರಣಶ್ಯತಿ ॥ ೭೧ ॥

ವರಾಹೇಣ ಪುರಾಚೇದಂ ಪೃಥಿವ್ಯೈ ಕಥಿತಂ ಶುಭಂ ।
ತೀರ್ಥಾನಾಂಗುಣಮಾಹಾತ್ಮ್ಯಂ ಮಹಾಪಾತಕನಾಶನಂ ॥ ೭೨ ॥

ಸರ್ವದೇವಮಯೋ ಯೋಽಸೌ ಸರ್ವವೇದಮಯಸ್ತಥಾ ॥ ೭೩ ॥

೬೯-೭೦. ಆ ಪಂಚತೀರ್ಥಗಳಲ್ಲೂ, ಮಥುರೆಯಲ್ಲಿದ್ದು ಅಸಿಕುಂಡ ಸರಸ್ವತೀ ಕಾಲಿಂಜರ ತೀರ್ಥಗಳಲ್ಲೂ ಸ್ನಾನಮಾಡುವುದರಿಂದ ಪಡೆಯುವ ಪುಣ್ಯಫಲದ ಹತ್ತರಷ್ಟು ಫಲವನ್ನು ಕೃಷ್ಣಗಂಗಾತೀರ್ಥದಲ್ಲಿ ಸ್ನಾನಮಾಡುವುದರಿಂದ ಪ್ರತಿದಿನವೂ ಪಡೆಯಬಹುದು.

೭೧. ಜ್ಞಾನದಿಂದಾಗಲಿ, ಅಜ್ಞಾನದಿಂದಲಾಗಲಿ ಬೇರೆಡೆಯಲ್ಲಿ ಸಂಪಾದಿಸಿದ ಪಾಪವೂ ಮಥುರೆಯಲ್ಲಿ ಮಾಡುವ ದುಷ್ಕರ್ಮಗಳೂ ಮಥುರೆಯಲ್ಲಿ ನಾಶವಾಗುವುವು.

೭೨-೭೩. ಸರ್ವದೇವಮಯನೂ, ಸರ್ವವೇದಮಯನೂ ಆದ ಶ್ರೀ ವರಾಹನು ಪೂರ್ವದಲ್ಲಿ ಮಹಾಪಾತಕನಾಶಕವೂ, ಶುಭವೂ ಆದ ಈ ತೀರ್ಥಗುಣಗಳ ಮಹಿಮೆಯನ್ನು ಭೂದೇವಿಗೆ ಹೇಳಿದನು.

ಅನಂತಶ್ಚಾಪ್ರಮೇಯಶ್ಚ ಯಸ್ಯ ಚಾಂತೋ ನ ವಿದ್ಯತೇ ।
ಯಸ್ಯ ಶ್ರೋತ್ರೈಕದೇಶೇ ತು ಆಕಾಶೋ ಲೇಶಮಾತ್ರಕಃ ॥ ೭೪ ॥

ವಿಲೀನೋ ಜ್ಞಾಯತೇ ನೈವ ತಸ್ಯ ದೇವಸ್ಯ ಕಾ ಕಥಾ ।
ತಥಾ ನಯನಯೋಃ ಪ್ರಾಂತೇ ತೇಜೋ ಲೀನಂ ನ ದೃಶ್ಯತೇ ॥ ೭೫ ॥

ನಿಃಶ್ವಾಸೇ ಚ ವಿಲೀನೋಽಸೌ ವಾಯುರ್ನಷ್ಟೋ ನ ದೃಶ್ಯತೇ ।
ಖುರಾಗ್ರೇಷು ತಥಾ ಲೀನಾಃ ಸಮುದ್ರಾಃ ಸಪ್ತ ಚ ಪ್ರಭೋಃ ॥ ೭೬ ॥

ದೃಶ್ಯಂತೇ ಸ್ವೇದಸಂಕಾಶಾ ನಾಮಮಾತ್ರಾ ಯಥಾ ಪುರಾ ॥ ೭೭ ॥

ರೋಮಕೂಪಾಂತರೇ ಲಗ್ನಾ ಸಶೈಲವನಕಾನನಾ ।
ನಷ್ಟಾ ಪೃಥ್ವೀ ನ ಲಭ್ಯೇತ ತಸ್ಮಾದ್ದೇವಾತ್ತು ಕೋಽಧಿಕಃ ॥ ೭೮ ॥

೭೪–೭೫. ಆ ದೇವನು ಅನಂತನೂ, ಅಪ್ರಮೇಯನೂ ಆಗಿರುವನು. ಆತನ ಕಿವಿಯ ಒಂದು ಭಾಗದಲ್ಲಿ ಅಲ್ಪವಾದ ಈ ಆಕಾಶವು ಲೀನವಾಗಿ ಕಾಣಿಸದೆಯೇ ಹೋಗುವಾಗ ಆ ದೇವನು ಎಷ್ಟು ದೊಡ್ಡವನೆಂಬುದನ್ನು ಹೇಳಲಾಗುವುದೇ ! ಆತನ ಕಡೆಗಣ್ಣುಗಳಲ್ಲಿ ಲೀನವಾದ ಸೂರ್ಯಾದಿಗಳ ತೇಜಸ್ಸೂ ಕಾಣಿಸುವುದಿಲ್ಲ. ಎಂದರೆ ಆತನ ನೇತ್ರದ ಕಾಂತಿಯು ಸೂರ್ಯಾದಿಗಳ ತೇಜಸ್ಸಿಗಿಂತಲೂ ಅತ್ಯಧಿಕವಾದುದು.

೭೬–೭೭. ಆತನ ನಿಶ್ವಾಸದಲ್ಲಿ ಐಕ್ಯವಾಗಿ ಮರೆಸಿಹೋಗಿ, ವಾಯುವು ನಷ್ಟವಾದಂತಾಗಿ ಕಾಣಿಸದೆ ಹೋಗುವುದು. ಆ ಪ್ರಭುವಿನ ಗೊರಸುಗಳ ತುದಿಯಲ್ಲಿ ಪೂರ್ವದಲ್ಲಿ ಅಡಗಿದ ಸಪ್ತಸಮುದ್ರಗಳು ಬೆವರುನೀರಿನಂತೆ ಹೆಸರಿಗೆ ಮಾತ್ರ ಕಾಣಿಸುತ್ತಿದ್ದುವು.

೭೮. ಆತನ ರೋಮಕೂಪಗಳ ನಡುವೆ ಸಿಕ್ಕಿದ ಪರ್ವತವನಾದಿಗಳಿಂದ ಸಹಿತವಾದ ಈ ಭೂಮಿ ಕಾಣಿಸದಂತಾಗುವುದು. ಆ ದೇವನಿಗಿಂತ ಅಧಿಕನಾದವನಾವನಿರುವನು !

ಸೋತ್ರ ತೀರ್ಥಪರಿತ್ರಾಣಂ ಕುರ್ವನ್ ದೇವಃ ಸ್ವಯಂಪ್ರಭುಃ ।
ವರಾಹಃ ಸಂಸ್ಥಿತಃ ಸಾಕ್ಷಾತ್ಪುರಾಣಂ ಯೇನ ಸೂಚಿತಂ ।
ಪೃಥಿವ್ಯಾಃ ಸರ್ವಸಂದೇಹಾನ್ ಸ್ಫೋಟಯಾಮಾಸ ಯೋಽವ್ಯಯಃ॥ ೭೯ ॥

ತಸ್ಯ ಸಂದರ್ಶನಾದೇವ ಸರ್ವಪಾಪವಿವರ್ಜಿತಃ ।
ತತ್ಕ್ಷಣಾದೇವ ಜಾಯೇತ ನಾತ್ರ ಕಾರ್ಯಾ ವಿಚಾರಣಾ ॥ ೮೦ ॥

ನವಮ್ಯಾಂ ಜ್ಯೇಷ್ಠಶುಕ್ಲಸ್ಯ ಸ್ನಾತ್ವಾ ಗಂಗೋದಕೇ ನರಃ ।
ಸೂಕರೇತು ತ್ರಿರಾತ್ರಂಚ ಮಾನವೋ ದೀಪದಃ ಸಕೃತ್ ।
ದತ್ವಾ ದಾನಂ ಯಥಾಶಕ್ತಿ ಸರ್ವಪಾಪೈಃ ಪ್ರಮುಚ್ಯತೇ ॥ ೮೧ ॥

ಕಾಲಿಂಜರೇಚ ದ್ವಾದಶ್ಯಾಂ ಸ್ನಾತ್ವಾ ಸಂಪೂಜ್ಯ ದೇವತಾಂ ॥ ೮೨ ॥

ದ್ವಾದಶಾದಿತ್ಯಸಂಕಾಶೋ ವಿಮಾನೇ ಚ ಸಮಾಸ್ಥಿತಃ ।
ವಿಷ್ಣುನಾ ಸಮನುಜ್ಞಾತೋ ವಿಷ್ಣುಲೋಕೇ ಮಹೀಯತೇ ॥ ೮೩ ॥

---

೭೯. ಪುರಾಣವನ್ನು ತಾನೇ ಹೇಳಿ, ಭೂದೇವಿಯ ಸರ್ವಸಂದೇಹಗಳನ್ನೂ ಹೋಗಲಾಡಿಸಿದ, ನಾಶರಹಿತನಾದ ಆ ವರಾಹದೇವನು ಪ್ರತ್ಯಕ್ಷವಾಗಿದ್ದು, ತಾನೇ ಇಲ್ಲಿ ತೀರ್ಥರಕ್ಷಣೆಯನ್ನು ಮಾಡುವನು.

೮೦. ಆತನ ಸಂದರ್ಶನಮಾತ್ರದಿಂದ ಒಡನೆಯೇ ಮನುಷ್ಯನು ಸರ್ವ ಪಾಪಗಳನ್ನೂ ಕಳೆದುಕೊಳ್ಳುವನು. ಈ ವಿಚಾರದಲ್ಲಿ ವಿಮರ್ಶೆಯು ಬೇಕಿಲ್ಲ.

೮೧ ಜ್ಯೇಷ್ಠಮಾಸದ ಶುಕ್ಲಪಕ್ಷದ ನವಮಿಯದಿನ ಮನುಷ್ಯನು ಕೃಷ್ಣಗಂಗಾ ತೀರ್ಥದಲ್ಲಿ ಸ್ನಾನವನ್ನು ಮಾಡಿ, ಸೂಕರಕ್ಷೇತ್ರದಲ್ಲಿ ಮೂರು ರಾತ್ರಿಗಳು ಒಂದುಸಾರಿ ದೀಪವನ್ನು ಹತ್ತಿಸಿ, ಶಕ್ತಿಯಿರುವಷ್ಟು ದಾನವನ್ನು ಮಾಡುವುದರಿಂದ ಪಾಪಗಳೆಲ್ಲವನ್ನೂ ಕಳೆದುಕೊಳ್ಳುವನು.

೮೨–೮೩. ದ್ವಾದಶಿಯದಿನ ಕಾಲಿಂಜರಕ್ಷೇತ್ರದಲ್ಲಿ ಸ್ನಾನವನ್ನು ಮಾಡಿ, ದೇವನನ್ನು ಪೂಜಿಸುವವನು ದ್ವಾದಶಾದಿತ್ಯ ತೇಜಸ್ಸುಳ್ಳವನಾಗಿ ವಿಮಾನದಲ್ಲಿ ಕುಳಿತು ವಿಷ್ಣುವಿನಿಂದ ಅನುಜ್ಞೆಯನ್ನು ಪಡೆದು, ವಿಷ್ಣುಲೋಕಕ್ಕೆ ಹೋಗಿ ನೆಲಸುವನು."

॥ ವರಾಹ ಉವಾಚ ॥

ಏವಂ ಸುಖದಶಬ್ದೇನ ದೇವವಾಣ್ಯಾ ಪ್ರಚೋದಿತಃ ।
ಪಾಂಚಾಲಸಂಜ್ಞಕಸ್ತತ್ರ ಸುಮಂತುಂ ಪರ್ಯಪೃಚ್ಛತ ॥ ೮೪ ॥

ಅಸ್ಮದ್ಗುರುಃ ಪಿತಾ ತ್ವಂಚ ಬ್ರೂಹಿ ಕಿಂಕರವಾಣಿ ವೈ ।
ಪಾವಕಾಲಂಭನಂ ಮೇ ಸ್ಯಾದುತಾಹೋ ತೀರ್ಥಸೇವನಂ ॥ ೮೫ ॥

ತ್ರಿರಾತ್ರಂ ಕೃಚ್ಛ್ರಪಾರಾಕಂ ಚಾಂದ್ರಾಯಣಮಥಾಪಿ ವಾ ।
ತವ ಪಾದಾಂಕಿತೇ ವಾಪಿ ಸ್ಥಿತ್ವಾ ಮೋಕ್ಷಮವಾಪ್ನುಯಾಂ ॥ ೮೬ ॥

ಆಕಾಶಭಾರತೀ ಯತ್ತು ತತ್ಸತ್ಯಂ ನಾನೃತಂ ಕ್ವಚಿತ್ ।
ಮಯಾ ಪ್ರತ್ಯಕ್ಷತಃ ಪೂರ್ವಂ ತವ ಗಾತ್ರೇಷು ಪಾತಕಂ ।
ದಿನೇ ದಿನೇ ಚ ಸ್ನಾನಾತ್ಪ್ರಾಕ್ ಪ್ರತಿಗಚ್ಛತಿ ನಿತ್ಯಶಃ ॥ ೮೭ ॥

೮೪–೮೬. ಶ್ರೀ ವರಾಹ—ಹೀಗೆಂದು ದೇವವಾಣಿಯ ಇಂಪಾದ ಮಾತಿನಿಂದ ಪ್ರೇರಿತನಾದ ಆ ಪಾಂಚಾಲನು ಅಲ್ಲಿದ್ದ ಸುಮಂತುವನ್ನು "ನನಗೆ ಗುರುವೂ ತಂದೆಯೂ ನೀನೇ, ಈಗ ನಾನು ಏನುಮಾಡಲಿ ? ಹೇಳು. ನಾನು ಅಗ್ನಿಪ್ರವೇಶವನ್ನು ಮಾಡಲೇ ? ಅಥವಾ ತೀರ್ಥಸೇವೆಯನ್ನು ಮಾಡಲೇ ಅಥವಾ ನಿನ್ನ ಪಾದದ ಗುರುತುಳ್ಳ ಈ ಪ್ರದೇಶದಲ್ಲಿದ್ದು ಕೃಚ್ಛ್ರಪಾರಾಕಚಾಂದ್ರಾಯಣ ವ್ರತವನ್ನು ಮಾಡಿ ಮೋಕ್ಷವನ್ನು ಪಡೆಯಲೇ ?" ಎಂದು ಕೇಳಿದನು.

೮೭, ಸುಮಂತುವು "ಆಕಾಶವಾಣಿಯು ಹೇಳಿದುದು ಸತ್ಯವಾದುದು. ಅದೆಂದಿಗೂ ಸುಳ್ಳಾಗದು. ಹಿಂದೆ ನಿನ್ನ ದೇಹದಲ್ಲಿ ತೀರ್ಥಸ್ನಾನವನ್ನು ಮಾಡುವುದಕ್ಕಿಂತ ಮೊದಲು ಪ್ರತಿದಿನವೂ ಕಾಣುತ್ತಿದ್ದ ಪಾಪವು ನನ್ನೆದುರಿಗೆ ಸ್ನಾನಮಾಡುವುದರಿಂದ ಹೊರಟು ಹೋಗುತ್ತಿದ್ದಿತು.

ಆಶ್ರಮೇ ತ್ವಂ ಸ್ಥಿತಶ್ಚಾತ್ರ ನಿರ್ಮಲಶ್ಚ ಶಶೀ ಯಥಾ ।
ತಿಷ್ಠೋಽಪರಮಿತಃ ಪಾಪಾದ್ಯಾವತ್ಕಾಲಂಚ ಜೀವಸಿ ॥ ೮೮ ॥

ಇಯಂತು ಭಗಿನೀ ಪಾಪಾದುಪಾವೃತ್ತಾ ಸತೀ ಪರಂ ।
ಸಗತಿಶ್ಚ ವಿಪಾಪಾ ಚ ಭವಿಷ್ಯತಿ ನ ಸಂಶಯಃ ॥ ೮೯ ॥

॥ ಶ್ರೀವರಾಹ ಉವಾಚ ॥

ಏವಂ ಪ್ರಭಾವಸ್ತೀರ್ಥಸ್ಯ ಮಥುರಾಯಾಂ ವಸುಂಧರೇ ॥ ೯೦ ॥

ಕೃಷ್ಣಗಂಗೋದ್ಭವಸ್ಯಾಪಿ ತಥಾ ಕಾಲಿಂಜರಸ್ಯ ಚ ।
ಸೂಕರಸ್ಯ ಚ ಮಾಹಾತ್ಮ್ಯಂ ಯಥಾ ತೇ ವರ್ಣಿತಂ ಪುರಾ ॥ ೯೧ ॥

ಯಃ ಶೃಣೋತಿ ವರಾರೋಹೇ ಶ್ರದ್ಧಯಾ ಪರಯಾ ಯುತಃ ।
ಪಠತಿ ಪ್ರಾತರೇವಾಪಿ ನ ಸ ಪಾಪೇನ ಲಿಪ್ಯತೇ ॥ ೯೨ ॥

---

೮೮. ನೀನು ಈ ಆಶ್ರಮದಲ್ಲೇ ಇದ್ದು ಪಾಪರಹಿತನಾಗಿ ಚಂದ್ರನಂತೆ ನಿರ್ಮಲನಾಗಿ ಯಾವಾಗಲೂ ಜೀವಿಸುತ್ತಿರು.

೮೯. ಈ ನಿನ್ನ ಸಹೋದರಿಯೂ ಇಲ್ಲಿಯ ಸ್ನಾನಾದಿಗಳಿಂದ ಪಾಪದಿಂದ ವಿಮುಕ್ತಳಾಗಿ ಸಾಧ್ವಿಯಾಗಿ ಒಳ್ಳೆಯ ಗತಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ '' ಎಂದನು.

೯೦–೯೧ ವಸುಂಧರೇ, ಮಥುರೆಯಲ್ಲಿರುವ ಕೃಷ್ಣಗಂಗೋದ್ಭವ ಕಾಲಿಂಜರ ಕ್ಷೇತ್ರತೀರ್ಥಗಳ ಮತ್ತು ಹಿಂದೆಯೇ ನಿನಗೆ ವರ್ಣಿಸಿರುವ ಸೂಕರಕ್ಷೇತ್ರತೀರ್ಥದ ಮಹಿಮೆಯು ಈ ಬಗೆಯಾದುದು.

೯೨–೯೪. ವರಾರೋಹೇ, ಅತ್ಯಾಸಕ್ತಿಯುಳ್ಳವರಾಗಿ ಈ ವಿಚಾರವನ್ನು ಬೆಳಗ್ಗೆ ಹೇಳುವವರೂ ಕೇಳುವವರೂ ಪಾಪವನ್ನು ಅಂಟಿಸಿಕೊಳ್ಳುವುದಿಲ್ಲ.

ಸಪ್ತಜನ್ಮಕೃತಂ ಪಾಪಂ ತಸ್ಯ ಸರ್ವಂ ವ್ಯಪೋಹತಿ ।
ಫಲಂಚ ಗೋಶತಸ್ಯಾಪಿ ದತ್ತಸ್ಯ ಸಮವಾಪ್ನುಯಾತ್ ॥ ೯೩ ॥

ಅಮೃತತ್ವಂಚ ಲಭತೇ ಸ್ವರ್ಗಲೋಕಂಚ ಗಚ್ಛತಿ ॥ ೯೪ ॥

ಇತಿ ಶ್ರೀವರಾಹಪುರಾಣೇ ಕೃಷ್ಣಗಂಗೋದ್ಭವಮಾಹಾತ್ಮ್ಯಂ ನಾಮ ಷಟ್‌ಸಪ್ತತ್ಯಧಿಕಶತತಮೋಽಧ್ಯಾಯಃ

ಅಲ್ಲದೆ ಅವರು ಹಿಂದೆ ಏಳು ಜನ್ಮಗಳಲ್ಲಿ ಮಾಡಿದ ಪಾಪವೆಲ್ಲವೂ ಹೊರಟು ಹೋಗುವುದು. ನೂರು ಗೋವುಗಳನ್ನು ದಾನಮಾಡಿದ ಫಲವನ್ನೂ ಪಡೆಯುವರು. ಅಮೃತತ್ವವನ್ನು ಪಡೆದು ಸ್ವರ್ಗಲೋಕವನ್ನು ಸೇರುವರು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಥುರೆಯ ಕೃಷ್ಣಗಂಗೋದ್ಭವ ಮಹಿಮೆಯನ್ನು ವಿವರಿಸುತ್ತ "ವಾಣಿಜ್ಯಕ್ಕಾಗಿ ದೇಶಸಂಚಾರಕ್ಕೆ ಹೋಗಿದ್ದು ಮಥುರೆಗೆ ಬಂದ ಪಾಂಚಾಲಬ್ರಾಹ್ಮಣ ಯುವಕನು, ಬಾಲ್ಯದಲ್ಲೇ ವಿತಂತುವಾಗಿ ಅಲ್ಲಿಗೆ ಯಾತ್ರಿಗಾಗಿ ಬಂದು ವೇಶ್ಯೆಯರ ಜತೆಯಲ್ಲಿ ಸೇರಿದ್ದ ತನ್ನ ತಂಗಿಯನ್ನೇ ಅರಿಯದೆ ಮೋಹಿಸಿ ಅವಳ ಸಮಾಗಮಮಾಡಿದನು. ಅವರಿಬ್ಬರಿಗೂ ಅಗ್ನಿಪ್ರಾಯಶ್ಚಿತ್ತಾರ್ಹವಾದ ಮಹಾಪಾಪವುಂಟಾಯಿತು. ಅಗ್ನಿಪ್ರವೇಶಕ್ಕೆ ಸಿದ್ಧರಾದ ಅವರು ಕೃಷ್ಣಗಂಗೋದ್ಭವ ತೀರ್ಥಸ್ನಾನಾದಿಗಳಿಂದಲೇ ತಮ್ಮ ಆ ಪಾಪವು ಪರಿಹಾರವಾಗಿದೆಯೆಂಬುದನ್ನು ಅಶರೀರವಾಣಿಯಿಂದಲೂ ಸುಮಂತುಮುನಿಯ ಮಾತಿನಿಂದಲೂ ತಿಳಿದು, ಅಗ್ನಿಪ್ರವೇಶಮಾಡದೇ ಆ ಕ್ಷೇತ್ರದಲ್ಲೇ ಪವಿತ್ರಾತ್ಮರಾಗಿದ್ದು ಸದ್ಗತಿಯನ್ನು ಪಡೆದರು" ಎಂದು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತಾರನೆಯ ಅಧ್ಯಾಯ.

॥ ಶ್ರೀಃ ॥

ಸಪ್ತಸಪ್ತತ್ಯಧಿಕಶತತಮೋಽಧ್ಯಾಯಃ

॥ ಶ್ರೀವರಾಹ ಉವಾಚ ॥

ಶೃಣು ಚಾನ್ಯದ್ವರಾರೋಹೇ ಕೃಷ್ಣಸ್ಯಾನ್ಯದ್ವಿಚೇಷ್ಟಿತಂ ।
ದ್ವಾರಕಾಂ ವಸಮಾನಸ್ಯ ಸಾಂಬಶಾಪಾದಿಕಂ ಶೃಣು ॥ ೧ ॥

ಸುಖಾಸೀನಸ್ಯ ಕೃಷ್ಣಸ್ಯ ಪುತ್ರದಾರಸುತೈಃ ಸಹ ।
ಆಗತೋ ನಾರದಸ್ತತ್ರ ಯದೃಚ್ಛಾಗಮನೋ ಮುನಿಃ ॥ ೨ ॥

ಪಾದ್ಯಮರ್ಘ್ಯಂಚಾಸನಂ ಚ ಮಧುಪರ್ಕಂ ಸಭಾಜನಂ ।
ಗಾಂಚ ದತ್ವಾ ಯಥಾನ್ಯಾಯಂ ಕೃತಂ ಸಂವಾದಮುತ್ತಮಂ ॥ ೩ ॥

ನೂರ ಎಪ್ಪತ್ತೇಳನೆಯ ಅಧ್ಯಾಯ

೧. ಶ್ರೀವರಾಹ—ವರಾರೋಹೇ, ಭೂದೇವಿ, ದ್ವಾರಕೆಯಲ್ಲಿ ವಾಸ ಮಾಡುತ್ತಿದ್ದು ತನ್ನ ಮಗನಾದ ಸಾಂಬನಿಗೆ ಶಾಪವನ್ನು ಕೊಟ್ಟುದೇ ಮೊದಲಾದ ಶ್ರೀಕೃಷ್ಣನ ಕಾರ್ಯವನ್ನು ಹೇಳುತ್ತೇನೆ. ಕೇಳು.

೨–೩. ಒಂದು ದಿನ ಪತ್ನೀ ಪುತ್ರರೊಡನೆ ಸುಖದಿಂದ ಕುಳಿತಿದ್ದ ಕೃಷ್ಣನ ಹತ್ತಿರಕ್ಕೆ ನಾರದಮುನಿ ಅಕಸ್ಮಾತ್ತಾಗಿ ಬಂದನು. ಕೃಷ್ಣನು ಆ ಮುನಿಗೆ ಅರ್ಘ್ಯಪಾದ್ಯಾಸನಗಳನ್ನೂ, ಪಾತ್ರೆಯೊಡನೆ ಮಧುಪರ್ಕವನ್ನೂ, ಗೋದಾನ ವನ್ನೂ ವಿಧಿಪೂರ್ವಕವಾಗಿ ಕೊಟ್ಟು, ಸಂತೋಷದಿಂದ ಅವನೊಡನೆ ಮಾತ ನಾಡುತ್ತಿದ್ದನು.

ಏಕಾಂತೇ ಪ್ರಾಪ್ಯ ಕೃಷ್ಣಂ ಚ ವಿಜ್ಞಾಪ್ತಿಮಕರೋತ್ಪ್ರಭುಃ ।
ಕೃಷ್ಣ ಕಿಂಚಿದ್ವಕ್ತುಕಾಮಸ್ತತ್ವಂ ಶೃಣು ಮಹಾಮತೇ ॥ ೪ ॥

ಸಾಂಬನಾಮಾ ತವ ಯುವಾ ಪುತ್ರೋ ವಾಗ್ಮೀ ತು ರೂಪವಾನ್ ।
ಸ್ಪೃಹಣೀಯಃ ಸದಾ ಕಾಂತಃ ಸ್ತ್ರೀಜನಸ್ಯ ಸುರೇಶ್ವರಃ ॥ ೫ ॥

ಏತಾಸ್ತು ವರನಾರ್ಯೋ ವೈ ಕ್ರೀಡಾರ್ಥಂ ಹಿ ಪುರೇಶ್ವರಃ ।
ದೇವಯೋನ್ಯೋ ದದೌ ತುಭ್ಯಂ ಸಹಸ್ರಾಣಿ ಚ ಷೋಡಶ ॥ ೬ ॥

ಸಾಂಬಂ ದೃಷ್ಟ್ವಾ ಚ ಸರ್ವಾಸಾಂ ಕ್ಷುಭ್ಯತೇ ಚ ಮನಃ ಪ್ರಭೋ ।
ಏತತ್ತು ಬ್ರಹ್ಮಲೋಕೇಽಚ ಗೀಯತೇ ದೈವತೈಃ ಸ್ವಯಂ ॥ ೭ ॥

ತ್ವತ್ಪ್ರಿಯಾರ್ಥಂ ಸಮಾಯಾತಃ ಕಥಿತುಂ ತೇ ಸುರೋತ್ತಮ ।
ಶ್ರೂಯತೇ ಚಾರ್ಥವಿದ್ರೂಪಃ ಶ್ಲೋಕೋ ದ್ವೈಪಾಯನೇನ ವೈ ॥ ೮ ॥

---

೪. ನಾರದಮುನಿ ಕೃಷ್ಣನೊಡನೆ ಏಕಾಂತವಾದೆಡೆಗೆ ಹೋಗಿ ಅವನಿಗೆ ಮುಂದಿರುವಂತೆ ವಿಜ್ಞಾಪಿಸಿದನು. "ಮಹಾಮತಿಯಾದ ಕೃಷ್ಣನೇ, ನಿನಗೆ ಸ್ವಲ್ಪ ಹೇಳಬೇಕೆಂದಿದ್ದೇನೆ. ಅದನ್ನು ನೀನು ಕೇಳು.

೫. ಸಾಂಬನೆಂಬ ನಿನ್ನ ಪುತ್ರನು ಯುವಕನೂ, ವಾಗ್ಮಿಯೂ, ರೂಪವಂತನೂ, ಮನೋಹರನೂ ಆಗಿ, ದೇವೇಂದ್ರನಂತೆ ಸ್ತ್ರೀಯರು ಕಾಮದಿಂದ ಬಯಸತಕ್ಕವನಾಗಿರುವನು.

೬-೭. ಪ್ರಭೂ, ದೇವಾಂಗನೆಯರಾದ ಈ ಹದಿನಾರುಸಾವಿರ ವರನಾರಿಯರನ್ನು ನಿನ್ನ ಕ್ರೀಡಾರ್ಥವಾಗಿ ಪೂರ್ವದಲ್ಲಿ ಈಶ್ವರನು ನಿನಗೆ ಕೊಟ್ಟನು. ಸಾಂಬನನ್ನು ನೋಡಿ ಇವರೆಲ್ಲರ ಮನಸ್ಸೂ ಕದಡಿ ಚಂಚಲವಾಗಿದೆ. ಇದನ್ನು ಬ್ರಹ್ಮಲೋಕದಲ್ಲಿ ದೇವತೆಗಳು ತಾವಾಗಿ ಹೇಳುತ್ತಿರುವರು.

೮. ದೇವೋತ್ತಮನೇ, ನಿನ್ನ ಹಿತಕ್ಕಾಗಿ ನಿನಗೆ ಇದನ್ನು ಹೇಳಲು ಇಲ್ಲಿಗೆ ಬಂದೆನು. ವ್ಯಾಸಮುನಿ ಹೇಳಿರುವ ಅರ್ಥವತ್ತಾದ ಈ ಶ್ಲೋಕವನ್ನು ಕೇಳಿದ್ದೇವೆ.

ಕ್ರಿಯಾತಃ ಸ್ವರ್ಗವಾಸೋಽಸ್ತಿ ನರಕಸ್ತದ್ವಿಪರ್ಯಯಾತ್ ।
ಪುಣ್ಯರೂಪಂತು ಯತ್ಕರ್ಮ ದಿಶೋ ಭೂಮಿಂಚ ಸಂಸ್ಪೃಶೇತ್ ॥ ೯ ॥

ಯಾವತ್ಸ ಶಬ್ದೋ ಭವತಿ ತಾವತ್ಪುರುಷ ಉಚ್ಯತೇ ।
ಪುರುಷಶ್ಚಾವಿನಾಶೀ ಚ ಕಥ್ಯತೇ ಶಾಶ್ವತೋಽವ್ಯಯಃ ॥ ೧೦ ॥

ನರಕೇ ಪುರುಷಃ ಪ್ರೋಕ್ತೋ ವಿಪರೀತೋ ಮನೀಷಿಭಿಃ ॥ ೧೧ ॥

ತಸ್ಮಾತ್ಸಾಂಬಂ ಸಮಾಹೂಯ ತಥಾ ದೇವೀಗಣಂಚ ತಂ ।
ಆಸನೇಷೂಪವಿಷ್ಟಾನಾಂ ತಾಸಾಂ ಕ್ಷೋಭಂಚ ತತ್ವತಃ ।
ಲಕ್ಷಯಿಷ್ಯಾಮ್ಯಹಂ ಸರ್ವಂ ಸತ್ಯಂಚಾಸತ್ಯಮೇವ ಚ ॥ ೧೨ ॥

ತಾವತ್ಸಭ್ಯಾಸನಾನ್ಯೇವ ಸ್ವಾಸ್ತೀರ್ಯ ಚ ವಿಭಾಗಶಃ ।
ಸರ್ವಾಸ್ತಾಸ್ತು ಸಮಾಹೂಯ ಆಸನೇ ಚೋಪವೇಶ್ಯಚ ॥ ೧೩ ॥

---

೯. ಸತ್ಕರ್ಮದಿಂದ ಸ್ವರ್ಗವಾಸವೂ ಅದಕ್ಕೆ ವಿರುದ್ಧವಾದ ದುಷ್ಕರ್ಮದಿಂದ ನರಕವೂ ಉಂಟಾಗುವುದು. ಪುಣ್ಯರೂಪವಾದ ಕರ್ಮವು ಭೂಮ್ಯಾಕಾಶಗಳನ್ನೆಲ್ಲಾ ವ್ಯಾಪಿಸುವುದು.

೧೦–೧೧. ಮನುಷ್ಯನು ಎಲ್ಲಿಯವರಿಗೂ ಒಳ್ಳೆಯ ಹೆಸರುಳ್ಳವನಾಗಿರುವನೋ ಅಲ್ಲಿಯವರೆಗೆ ಪುರುಷನೆನಿಸಿಕೊಳ್ಳುವನು. ಪುರುಷನು ವಿನಾಶವಿಲ್ಲದವನು ಶಾಶ್ವತನು, ಅವ್ಯಯನು ಎನಿಸಿಕೊಂಡಿರುವನು. ನರಕದಲ್ಲಿರುವವನು ಇದಕ್ಕೆ ವಿರುದ್ಧನೆಂದು ವಿದ್ವಾಂಸರು ಹೇಳುವರು" ಎಂದನು.

೧೨. ಕೃಷ್ಣನು 'ಸಾಂಬನನ್ನೂ ದೇವಿಯರ ಆ ಗುಂಪನ್ನೂ ಕರೆಯಿಸಿ ಪೀಠಗಳಲ್ಲಿ ಕೂರಿಸಿ, ಅವರ ಮನದ ಚಂಚಲತೆಯು ನಿಜವೋ ಸುಳ್ಳೋ ಎಂಬುದನ್ನು ಸರಿಯಾಗಿ ನಾನು ನೋಡುವೆನು' ಎಂದುಕೊಂಡನು.

೧೩. ಬಳಿಕ ಸಭೆಗೆ ತಕ್ಕ ಆಸನಗಳನ್ನು ಬೇರೆಬೇರೆಯಾಗಿ ಸರಿಯಾಗಿ ಸಿದ್ಧಪಡಿಸಿ ಆ ದೇವಿಯರೆಲ್ಲರನ್ನೂ ಕರೆಯಿಸಿ ಪೀಠಗಳಲ್ಲಿ ಕುಳ್ಳಿರಿಸಿ, ಸಾಂಬನನ್ನೂ ಕರೆಯಿಸಿದನು.

ಪಶ್ಚಾತ್ಸಾಂಬಃ ಸಮಾಯಾತಸ್ತಸ್ಯಾಗ್ರೇ ಕರಸಂಪುಟಂ ।
ಕೃತ್ವಾಸ್ಥಿತೋ ಮುಹೂರ್ತಂತು ಕಿಮಾಜ್ಞಾಪಯಸಿ ಪ್ರಭೋ ॥ ೧೪ ॥

ದೃಷ್ಟ್ವಾ ರೂಪಮತೀವಾಸ್ಯ ಸಾಂಬಸ್ಯೈವ ವರಸ್ತ್ರಿಯಃ ।
ಚುಕ್ಷುಭುಃ ಸಕಲಾ ದೇವ್ಯಃ ಕೃಷ್ಣಸ್ಯೈವ ತು ಪಶ್ಯತಃ ॥ ೧೫ ॥

ಉತ್ತಿಷ್ಠತ ಪ್ರಿಯಾಃ ಸರ್ವಾ ಗಚ್ಛತ ಸ್ವನಿವೇಶನಂ ।
ಕೃಷ್ಣವಾಕ್ಯಾತ್ತದಾ ದೇವ್ಯೋ ಜಗ್ಮುಃ ಸ್ವಂ ಸ್ವಂ ನಿವೇಶನಂ ॥ ೧೬ ॥

ಸಾಂಬಸ್ತತ್ರೈವ ಸಂತಸ್ಥೌ ವೇಪಮಾನಃ ಕೃತಾಂಜಲಿಃ ।
ಸ ಕೃಷ್ಣೋ ನಾರದಂ ವೀಕ್ಷ್ಯ ಲಜ್ಜಯಾವಾಙ್ಮುಖೋಽಭವತ್ ॥ ೧೭ ॥

ಕೃಷ್ಣಸ್ತು ಕಥಯಾಮಾಸ ನಾರದಾಯ ಸವಿಸ್ತರಂ ।
ಸ್ತ್ರೀಸ್ವಭಾವಂ ಚರಿತ್ರಂಚ ಆಶ್ಚರ್ಯಂ ಪಾಪಕಾರಕಂ ॥ ೧೮ ॥

---

೧೪. ಸಭೆಗೆ ಬಂದ ಸಾಂಬನು ಕೃಷ್ಣನೆದುರಿಗೆ ಕೈಮುಗಿದುಕೊಂಡು ಸ್ವಲ್ಪ ಹೊತ್ತು ನಿಂತು "ಪ್ರಭುವೇ ! ನನಗೇನನ್ನು ಆಜ್ಞಾಪಿಸುವೆ?" ಎಂದು ಕೇಳಿದನು.

೧೫. ಆ ಸಾಂಬನ ಅತಿಶಯವಾದ ಸೌಂದರ್ಯವನ್ನು ನೋಡಿ, ಉತ್ತಮಾಂಗನೆಯರಾದ ಆ ದೇವಿಯರೆಲ್ಲರೂ ಕೃಷ್ಣನೆದುರಿನಲ್ಲಿಯೇ ಮನೋ ವಿಕಾರವುಳ್ಳವರಾದರು.

೧೬. ಕೃಷ್ಣನು, "ಪ್ರಿಯೆಯರೇ, ಎಲ್ಲರೂ ಏಳಿರಿ. ನಿಮ್ಮ ನಿಮ್ಮ ಮನೆಗೆ ಹೋಗಿರಿ" ಎಂದನು. ಕೃಷ್ಣನ ಮಾತಿನಂತೆ ದೇವಿಯರೆಲ್ಲರೂ ಆಗ ತಮ್ಮ ತಮ್ಮ ಮನೆಗೆ ಹೊರಟುಹೋದರು.

೧೭. ಸಾಂಬನು ಅಲ್ಲಿಯೇ ನಡುಗುತ್ತ ಕೈಮುಗಿದುಕೊಂಡು ನಿಂತಿದ್ದನು. ಕೃಷ್ಣನು ನಾರದನನ್ನು ನೋಡಿ, ನಾಚಿಕೆಯಿಂದ ಮುಖವನ್ನು ತಗ್ಗಿಸಿಕೊಂಡನು.

೧೮. ಬಳಿಕ ಕೃಷ್ಣನು ನಾರದನಿಗೆ ಸ್ತ್ರೀಯರ ಸ್ವಭಾವ, ಪಾಪಕಾರಕವಾದ ಚರಿತ್ರೆ ಮೊದಲಾದ ಆಶ್ಚರ್ಯವನ್ನು ವಿಸ್ತಾರವಾಗಿ ಹೇಳಿದನು.

ಕ್ಷಣೋ ನಾಸ್ತಿ ರಹೋ ನಾಸ್ತಿ ನಾಸ್ತಿ ಕೃತ್ಯೇ ವಿಭಾವನಾ |
ತೇನ ನಾರದ ನಾರೀಣಾಂ ಸತೀತ್ವಮುಪಜಾಯತೇ || ೧೯ ||

ಏಕವಾಸಾಸ್ತಥಾ ಗೌರೀ ಶ್ಯಾಮಾ ವಾ ವರವರ್ಣಿನೀ |
ಮಧ್ಯಂ ಗತಾ ಪ್ರಗಲ್ಭಾ ಚ ವಯೋಽತೀತಾಸ್ತಥಾ ಸ್ತ್ರಿಯಃ || ೨೦ ||

ಸುರೂಪಂ ಪುರುಷಂ ದೃಷ್ಟ್ವಾ ಸ್ಮರಂತಿ ಮುನಿಸತ್ತಮ |
ಸ್ವಭಾವ ಏಷ ನಾರೀಣಾಂ ಸಾಂಬಸ್ಯ ಶೃಣು ಕಾರಣಂ || ೨೧ ||

ಅತೀವ ಮಾನೀ ತೇಜಸ್ವೀ ಧಾರ್ಮಿಕೋಽತಿಗುಣಾನ್ವಿತಃ |
ರೂಪಕಾರಣಮುದ್ದಿಶ್ಯ ಗತಃ ಕ್ಷೋಭಂ ಕಥಂಚನ || ೨೨ ||

ನಾರದಸ್ತ್ವೇವಮೇವಂಚ ಪ್ರತಿಪೂಜ್ಯ ಹರೇರ್ವಚಃ |
ಅಂತರಜ್ಞ ಉವಾಚೇದಂ ಸಾಂಬಶಾಪಕರಂ ತಥಾ || ೨೩ ||

---

೧೯. "ನಾರಿಯರಿಗೆ ಕಾರ್ಯಮಾಡುವುದರಲ್ಲಿ ಕಾಲವಿಲ್ಲ, ರಹಸ್ಯವಿಲ್ಲ, ಸರಿಯಾದ ಆಲೋಚನೆಯಿಲ್ಲ ನಾರದನೇ, ಆದುದರಿಂದಲೇ ಅವರು ಸತಿಯರೆನಿಸಿ ಕೊಂಡಿರುವರು.

೨೦-೨೧. ಏಕವಸ್ತ್ರಳಾಗಲಿ, ಋತುವಾಗದವಳಾಗಲಿ, ಹದಿನಾರುವರ್ಷದ ಪ್ರಾಯದವಳಾಗಲಿ, ಉತ್ತಮ ಸ್ತ್ರೀಯಾಗಲಿ, ಮಧ್ಯವಯಸ್ಸಿನವಳಾಗಲಿ, ಪ್ರೌಢೆ ಯಾಗಲಿ, ವೃದ್ಧೆಯೇ ಆಗಿರಲಿ, ಸ್ತ್ರೀಯರು ಸುಂದರಪುರುಷರನ್ನು ನೋಡಿ ಮನಗರಗುವರು. ಮುನಿವರ್ಯನೇ, ಇದು ನಾರಿಯರ ಸ್ವಭಾವ. ಇನ್ನು ಸಾಂಬನ ಕಾರಣವನ್ನು ಕೇಳು.

೨೨. ಸಾಂಬನು ಅತಿಮಾನವುಳ್ಳವನೂ, ತೇಜಸ್ವಿಯೂ, ಧಾರ್ಮಿಕನೂ, ಅತಿಗುಣಶಾಲಿಯೂ ಆಗಿರುವನು. ಅವನ ರೂಪಾತಿಶಯವನ್ನು ನೋಡಿ, ಅವರಿಗೆ ಅದರ ಶಕ್ತಿಯಿಂದ ಹೇಗೋ ಮನಸ್ಸು ಕಲಕಿತು" ಎಂದನು.

೨೩. ನಾರದನು 'ಅದೇನೋ ಹಾಗೇಯೇ ಸರಿ' ಎಂದು ಕೃಷ್ಣನ ಮಾತನ್ನೇ ಗೌರವಿಸಿ, ಅಂತರಜ್ಞನಾಗಿ ಸಾಂಬನಿಗೆ ಶಾಪವು ಬರುವುದಕ್ಕೆ ತಕ್ಕಹಾಗೆ ಮುಂದಿನ ಮಾತನ್ನು ಹೇಳಿದನು.

ಯಥಾ ಏಕೇನ ಚಕ್ರೇಣ ರಥಸ್ಯ ನ ಗತಿರ್ಭವೇತ್ ।
ಪುರುಷಾಸ್ವಾದನಾಚ್ಛೈವಂ ಕ್ಷರಂತಿ ಸತತಂ ಸ್ತ್ರಿಯಃ ॥ ೨೪ ॥

ಪುಂಸಃ ಸುದೃಷ್ಟಿಪಾತೇನ ಕೃತಕೃತ್ಯಾ ಭವಂತಿ ತಾಃ ।
ಪ್ರದ್ಯುಮ್ನಂ ವೀಕ್ಷ್ಯ ನಾರ್ಯಸ್ತು ಲಜ್ಜಾಮಾಪುಃ ಸುಪುಷ್ಕಲಾಂ ॥ ೨೫ ॥

ಸಾಂಬಂ ದೃಷ್ಟ್ವೈವ ತಾಃ ಸರ್ವಾಃ ಅನಂಗೇನ ಪ್ರಪೀಡಿತಾಃ ।
ಉದ್ದೀಪನವಿಭಾವೋಽಯಂ ತಾಸಾಂ ಗಂಧಾದಿಕಂ ಯಥಾ ॥ ೨೬ ॥

ತಸ್ಮಾತ್ಸಾಂಬಸ್ತು ದುಷ್ಟಾತ್ಮಾ ತವ ಸ್ತ್ರೀಣಾಂ ವಿನಾಶಕೃತ್ ।
ಸತ್ಯಲೋಕೇ ಪ್ರವಾದೋ ಯಸ್ತವ ಜಾತೋ ದುರತ್ಯಯಃ ॥ ೨೭ ॥

ಮಯಾ ಶ್ರುತಸ್ತು ಲೋಕೇಭ್ಯೋ ಬ್ರಹ್ಮರ್ಷಿಭ್ಯೋ ಮುಹುರ್ಮುಹುಃ ॥

---

೨೪. "ಒಂದು ಚಕ್ರದಿಂದ ರಥವು ಹೇಗೆ ನಡೆಯಲಾರದೋ, ಹಾಗೆಯೇ ಬರಿಯ ಸ್ತ್ರೀಸಹಜಸ್ವಭಾವವೊಂದರಿಂದಲೇ ನೀನು ಹೇಳಿದಂತೆ ಮನವು ಕದಡಲಾರದು. ಪುರುಷನ ರುಚಿಯಿಂದಲೇ ಯಾವಾಗಲೂ ಸ್ತ್ರೀಯರು ಮನಗರಗುವರು.

೨೫–೨೬. ಪುರುಷನ ಕಾಮಯುತವಾದ ಒಳ್ನೋಟದಿಂದ ಸ್ತ್ರೀಯರು ಕೃತಕೃತ್ಯರಾಗುವರು ಎಂದರೆ ತಾವೂ ಕಾಮಿಗಳಾಗುವರು. ಪ್ರದ್ಯುಮ್ನನನ್ನು ನೋಡಿ ಆ ಸ್ತ್ರೀಯರೇ ಬಹಳವಾಗಿ ನಾಚಿಕೊಂಡರು. ಸಾಂಬನನ್ನು ನೋಡಿದ ಮಾತ್ರದಲ್ಲೇ ಅವರೆಲ್ಲರೂ ಕಾಮಪೀಡಿತರಾದರು. ಗಂಧಾದಿಗಳು ಹೇಗೋ ಹಾಗ ಪುರುಷನ ಕಾಮಪೂರಿತವಾದ ದೃಷ್ಟಿಯೂ ಸ್ತ್ರೀಯರಿಗೆ ಕಾಮೋದ್ದೀಪನ ಕಾರಣವಾಗುವುದು.

೨೭–೨೮. ಆದ-ದರಿಂದ ದುಷ್ಟಾತ್ಮನಾದ ಸಾಂಬನೇ ನಿನ್ನ ಸ್ತ್ರೀಯರ ವಿನಾಶಕಾರಣನು. ಸತ್ಯಲೋಕದಲ್ಲಿ ನಿನ್ನ ವಿಷಯದಲ್ಲಿ ಉಂಟಾಗಿರುವ ದುರ್ನಿವಾರ್ಯವಾದ ಪ್ರವಾದವನ್ನು ಬ್ರಹ್ಮರ್ಷಿಜನರಿಂದ ನಾನು ಹಲವುಬಾರಿ ಕೇಳಿದೆನು.

ಸಾಂಬತ್ಯಾಗಾತ್ತ್ವಮಾಪ್ನುರ್ಹ ತ್ವಮಯಶಃ ಕುಲನಾಶಕಂ ।
ತ್ವಮಿಹಾರ್ಹಸ್ಯಮೋಯಾತ್ಮನ್ನಯಾ ಸು ಕಥಿತಂ ಹಿತಂ ।
ಇತ್ಯುಕ್ತ್ವಾ ವಚನಂ ತತ್ರ ನಾರದೋ ಮೌನಮಾಸ್ಥಿತಃ ॥ ೨೯ ॥

ಕೃಷ್ಣಃ ಶಶಾಪ ಸಾಂಬಂತು ವಿರೂಪಸ್ತ್ವಂ ಭವಿಷ್ಯಸಿ ।
ಶಾಪಯುಕ್ತಃ ಸ ಸಾಂಬಸ್ತು ಕುಷ್ಠಯುಕ್ತೋಽಭವತ್ ಕ್ಷಣಾತ್ ॥ ೩೦ ॥

ಶರೀರಾತ್ತು ಗಲದ್ರಕ್ತಂ ಪೂತಿಗಂಧಯುತಂ ಸದಾ ।
ಪಶುವತ್ಕರ್ತಿತೋ ಯಸ್ತು ತದ್ವದ್ದೇಹೋಽಸ್ಯ ದೃಶ್ಯತೇ ॥ ೩೧ ॥

ತತಸ್ತು ನಾರದೇನೈವ ಸಾಂಬಶಾಪವಿನಾಶಕಃ ।
ಸಮಾದಿಷ್ಟೋ ಮಹಾನ್ಧರ್ಮ ಆದಿತ್ಯಾರಾಧನಂ ಪ್ರತಿ ॥ ೩೨ ॥

---

೨೯. ಅಮೇಯಾತ್ಮನೇ ನೀನು ಸಾಂಬನನ್ನು ತ್ಯಜಿಸಿ, ಕುಲನಾಶಕವಾದ ಈ ಅಪವಾದವನ್ನು ಹೋಗಲಾಡಿಸಿಕೊಳ್ಳುವುದು ಅರ್ಹವಾಗಿದೆ. ನಾನು ನಿನಗೆ ಹಿತವನ್ನು ಹೇಳಿದುದಾಯಿತು." ಎಂದು ಆ ನಾರದನು ಸುಮ್ಮನಾದನು.

೩೦. ಕೃಷ್ಣನು ಆ ಸಾಂಬನನ್ನು "ನೀನು ವಿರೂಪನಾಗುವೆ." ಎಂದು ಶಪಿಸಿದನು. ಶಾಪಗ್ರಸ್ತನಾದ ಆ ಸಾಂಬನು ಕ್ಷಣಕಾಲದಲ್ಲಿ ಕುಷ್ಠರೋಗವುಳ್ಳವನಾದನು.

೩೧. ಶರೀರದಿಂದ ಯಾವಾಗಲೂ ಸೋರುವ ರಕ್ತವು ದುರ್ಗಂಧವುಳ್ಳುದಾಗಿದ್ದಿತು. ಕತ್ತರಿಸಿದ ಪಶುವಿನ ದೇಹದಂತೆ ಸಾಂಬನ ದೇಹವು ಕಾಣಿಸುತ್ತಿದ್ದಿತು.

೩೨ ಬಳಿಕ ನಾರದನೇ ಸಾಂಬನ ಶಾಪವಿಮೋಚನಕರವಾದ ಆದಿತ್ಯಾರಾಧನರೂಪವಾದ ಮಹಾಧರ್ಮವನ್ನು ಅವನಿಗೆ ಉಪದೇಶಿಸಿದನು.

ಸಾಂಬ ಸಾಂಬ ಮಹಾಬಾಹೋ ಶೃಣು ಜಾಂಬವತೀ ಸುತ |
ಪೂರ್ವಾಚಲೇ ಚ ಪೂರ್ವಾಹ್ಣೇ ಉದ್ಯಂತಂತು ವಿಭಾವಸುಂ ॥ ೩೩ ॥

ನಮಸ್ಕುರು ಯಥಾನ್ಯಾಯಂ ವೇದೋಪನಿಷದಾದಿಭಿಃ |
ತ್ವಯೋದಿತಂ ರವಿಃ ಶ್ರುತ್ವಾ ತುಷ್ಟಿಂ ಯಾಸ್ಯತಿ ನಾನ್ಯಥಾ ॥ ೩೪ ॥

॥ ಸಾಂಬ ಉವಾಚ ॥

ಅಗಮ್ಯಾಗಮನಾತ್ಪಾಪಾದ್ವ್ಯಾಪ್ತೋ ಯಃ ಪುರುಷೋ ಭವೇತ್ |
ತಸ್ಯ ದೇವಃ ಕಥಂ ತುಷ್ಟೋ ಭವಿಷ್ಯತಿ ಸ ವೈ ಮುನೇ ॥ ೩೫ ॥

॥ ನಾರದ ಉವಾಚ ॥

ಭವಿಷ್ಯಾಖ್ಯಂಪುರಾಣಂಚ ತವ ವಾದಾದ್ಭವಿಷ್ಯತಿ |
ಬ್ರಹ್ಮಲೋಕೇ ಪಠಿಷ್ಯಾಮಿ ಬ್ರಹ್ಮಣೋಽಗ್ರೇ ತ್ವಹಂ ಸದಾ ॥ ೩೬ ॥

ಸುಮಂತುರ್ಮರ್ತ್ಯಲೋಕೇ ಚ ಮನೋಃ ಪ್ರಕಥಯಿಷ್ಯತಿ ॥ ೩೭ ॥

೩೩–೩೪. ಸಾಂಬ, ಸಾಂಬ, ಮಹಾಬಾಹೂ ಕೇಳು. ಜಾಂಬವತೀ ಸುತಾ, ಪೂರ್ವಾದ್ರಿಗೆ ಹೋಗಿ ಅಲ್ಲಿ ಉದಿಸುವ ಸೂರ್ಯನನ್ನು ಪೂರ್ವಾಹ್ಣದಲ್ಲಿ ವೇದೋಪನಿಷದಾದಿ ಮಂತ್ರಗಳಿಂದ ವಿಧಿಪೂರ್ವಕನಾಗಿ ನಮಸ್ಕರಿಸು. ನೀನು ಹೇಳುವುದನ್ನು ಕೇಳಿ, ಸೂರ್ಯನು ನಿಜವಾಗಿಯೂ ತೃಪ್ತನಾಗುವನು.

೩೫. ಸಾಂಬ—ಮುನಿಯೇ, ಅಗಮ್ಯಾಗಮನಪಾಪದಿಂದ ಕೂಡಿದ ಮನುಷ್ಯನಿಗೆ ಆ ಸೂರ್ಯದೇವನು ತೃಪ್ತನಾಗಿ ಹೇಗೆ ಒಲಿಯುವನೆಂಬುದನ್ನು ಹೇಳು.

೩೬–೩೭. ನಾರದ—ನಿನ್ನ ವಾದದಿಂದ ಭವಿಷ್ಯತ್ಪುರಾಣವೆಂಬುದಾಗುವುದು. ಅದನ್ನು ನಾನು ಬ್ರಹ್ಮಲೋಕದಲ್ಲಿ ಬ್ರಹ್ಮನೆದುರಿಗೆ ಯಾವಾಗಲೂ ಹೇಳುವೆನು. ಸುಮಂತು ಮುನಿಯು ಭೂಲೋಕದಲ್ಲಿ ಅದನ್ನು ಮನುವಿಗೆ ಹೇಳುವನು.

|| ಸಾಂಬ ಉವಾಚ ||

ಕಥಂ ಪೂರ್ವಾಚಲೇ ಗತ್ವಾ ಮಾಂಸಪಿಂಡೋಪಮಃ ಪ್ರಭೋ ।
ತ್ವತ್ಪ್ರಸಾದಾನ್ಮಹದ್ದುಃಖಂ ಪ್ರಾಪ್ತಸ್ತ್ವಹಮಹಕಲ್ಮಷಃ || ೩೮ ||

|| ನಾರದ ಉವಾಚ ||

ಯಥೋದಯಾಚಲೇ ದೇವಮಾರಾಧ್ಯ ಲಭತೇ ಫಲಂ ।
ಮಥುರಾಯಾಂ ತಥಾ ಗತ್ವಾ ಷಟ್‌ಸೂರ್ಯೇ ಲಭತೇ ಫಲಂ || ೩೯ ||

ಪೂರ್ವಾಹ್ಣೇ ಚ ತಥಾ ದೇವಂ ಫಲಪ್ರಿಯಮಕಲ್ಮಷಂ ।
ಮಥುರಾಯಾಂಚ ಮಧ್ಯಾಹ್ನೇ ಮಧ್ಯಂದಿನರವೌ ತಥಾ ।
ಅಸ್ತಂಗತೇ ತಥಾ ದೇವಂ ಸದ್ಯೋ ರಾಜ್ಯಫಲಂ ಭವೇತ್ || ೪೦ ||

ಮಥುರಾಯಾಂ ತಥಾ ಪುಣ್ಯಮುದಯಾಸ್ತಂ ರವೇರ್ಜಪಂ ।
ಮಧ್ಯಾಹ್ನೇ ಪ್ರಯತೋ ವಾಗ್ಭಿಃ ಜಪನ್ಮುಚ್ಯೇತ ಪಾತಕಾತ್ || ೪೧ ||

---

೩೮. ಸಾಂಬ—ಪ್ರಭುವೇ, ನಿನ್ನ ಅನುಗ್ರಹದಿಂದ ಮಹಾದುಃಖವನ್ನು ಪಡೆದು, ಮಾಂಸದ ಉಂಡೆಯಂತೆ ಇರುವ ನಾನು ಹೇಗೆ ತಾನೇ ಪೂರ್ವಾಚಲಕ್ಕೆ ಹೋಗಿ ಪಾಪರಹಿತನಾಗುವೆನು ?!

೩೯. ನಾರದ—ಉದಯಾಚಲದಲ್ಲಿ ಸೂರ್ಯದೇವನನ್ನು ಆರಾಧಿಸಿ, ಫಲವನ್ನು ಪಡೆಯುವಂತೆಯೇ ಮಥುರೆಗೆ ಹೋಗಿ ಷಟ್‌ಸೂರ್ಯಾರಾಧನೆಯನ್ನು ಮಾಡುವುದರಿಂದಲೂ ಪಡೆಯುವನು.

೪೦. ಫಲಪ್ರಿಯನೂ ನಿರ್ದೋಷನೂ ಆದ ಸೂರ್ಯದೇವನನ್ನು ಮಧ್ಯಾಹ್ನದಲ್ಲೂ ಅಸ್ತನಾಗುತ್ತಿರುವಾಗಲೂ ಮಥುರೆಯಲ್ಲಿ ಪೂಜಿಸುವುದರಿಂದ ರಾಜ್ಯಫಲವನ್ನು ಪಡೆಯಬಹುದು.

೪೧. ಹೀಗೆ ಮಥುರೆಯಲ್ಲಿ ಸೂರ್ಯೋದಯದಿಂದ ಅಸ್ತಮಯದವರೆಗೂ ಸೂರ್ಯಜಪವನ್ನು ಮಾಡಬೇಕು. ಮಧ್ಯಾಹ್ನದಲ್ಲಿ ಪರಿಶುದ್ಧನಾಗಿ ಮಂತ್ರಗಳನ್ನು ಹೇಳಿ, ಜಪಿಸುವುದರಿಂದ ಪಾಪ ವಿಮುಕ್ತನಾಗುವನು.

ಕೃಷ್ಣಗಂಗೋದ್ಭವೇ ಸ್ನಾತ್ವಾ ಸೂರ್ಯಮಾರಾಧ್ಯ ಯತ್ನತಃ ।
ಸರ್ವಪಾಪವಿನಿರ್ಮುಕ್ತಃ ಕುಷ್ಠಾದಿಭ್ಯೋ ವಿಮುಚ್ಯತೇ ॥ ೪೨ ॥

॥ ಶ್ರೀವರಾಹ ಉವಾಚ ॥

ತತಃ ಸಾಂಬೋ ಮಹಾಬಾಹುಃ ಕೃಷ್ಣಾಜ್ಞಪ್ತೋ ಯಯೌ ಪುರೀಂ ।
ಮಥುರಾಂ ಮುಕ್ತಿ ಫಲದಾಂ ರವೇರಾರಾಧನೋತ್ಸುಕಃ ॥ ೪೩ ॥

ನಾರದೋಕ್ತೇನ ವಿಧಿನಾ ಸಾಂಬೋ ಜಾಂಬವತೀ ಸುತಃ ।
ಷಟ್‌ಸೂರ್ಯಾನ್ ಪೂಜಯಾಮಾಸ ಉದಯಂತಂ ದಿವಾಕರಂ ॥ ೪೪ ॥

ಕೃತ್ವಾ ಯೋಗೇನ ಚಾತ್ಮಾನಂ ಸಾಂಬಸ್ಯಾಗ್ರೇ ರವಿಸ್ತದಾ ।
ವರಂ ವೃಣೀಷ್ವ ಭದ್ರಂತೇ ಮದ್ವ್ರತಖ್ಯಾಪನಾಯ ಚ ॥ ೪೫ ॥

---

೪೨. ಕೃಷ್ಣಗಂಗೋದ್ಭವದಲ್ಲಿ ಸ್ನಾನಮಾಡಿ, ಪ್ರಯತ್ನಪೂರ್ವಕವಾಗಿ ಸೂರ್ಯನನ್ನು ಆರಾಧಿಸುವುದರಿಂದ ಸರ್ವಪಾಪಗಳನ್ನೂ ಕುಷ್ಠಾದಿ ರೋಗಗಳನ್ನೂ ಕಳೆದುಕೊಳ್ಳುವನು.

೪೩. ಶ್ರೀವರಾಹ—ಬಳಿಕ ಮಹಾಬಾಹುವಾದ ಸಾಂಬನು ಕೃಷ್ಣನಿಂದ ಅಪ್ಪಣೆಯನ್ನು ಪಡೆದು, ಸೂರ್ಯಾರಾಧನೆ ಮಾಡುವುದರಲ್ಲಿ ಕುತೂಹಲವುಳ್ಳವನಾಗಿ ಮುಕ್ತಿಫಲಪ್ರದವಾದ ಮಥುರೆಗೆ ಹೊರಟುಹೋದನು.

೪೪. ಅಲ್ಲಿ ಜಾಂಬವತೀ ಪುತ್ರನಾದ ಆ ಸಾಂಬನು ನಾರದನು ಹೇಳಿದ ವಿಧಿಯಿಂದ, ಉದಯಿಸುತ್ತಿರುವ ಸೂರ್ಯನನ್ನು ಮೊದಲುಗೊಂಡು ಷಟ್ ಸೂರ್ಯರನ್ನು ಪೂಜಿಸಿದನು.

೪೫. ಆಗ ಸೂರ್ಯದೇವನು ಯೋಗದೇಹವನ್ನು ಧರಿಸಿ, ಸಾಂಬನೆದುರಿಗೆ ಬಂದುನಿಂತು ‘ನಿನಗೆ ಮಂಗಳವಾಗಲಿ, ನಿನ್ನ ಇಷ್ಟಸಿದ್ಧಿಗೂ ನನ್ನ ವ್ರತವನ್ನು ಪ್ರಸಿದ್ಧಿಪಡಿಸುವುದಕ್ಕಾಗಿಯೂ ನೀನು ವರವನ್ನು ಬೇಡು.

ಯಸ್ತ್ವೋಽಷಿತೋ ನಾರದೇನ ತದ್ವದಸ್ವ ಮಮಾಗ್ರತಃ ।
ಸಾಂಬ ಪಂಚಾಶಕೈಃ ಶ್ಲೋಕೈರ್ವೇದಗೃಹ್ಯಪದಾಕ್ಷರೈಃ ॥ ೪೬ ॥

ಯಃ ಸ್ತುತೋಽಹಂ ತ್ವಯಾ ವೀರ ತೇನ ತುಷ್ಟೋಽಸ್ಮಿ ತೇ ಸದಾ ॥ ೪೭ ॥

ಸ್ಪೃಷ್ಟೋ ದೇವೇನ ಸರ್ವಾಂಗೇ ತತ್ ಕ್ಷಣಾದ್ದೀಪ್ತಸಚ್ಛವಿಃ ।
ವ್ಯಕ್ತಾಂಗಾವಯವಃ ಸಾಕ್ಷಾದ್ವಿತೀಯೋಽಭೂದ್ರವಿರ್ಯಥಾ ॥ ೪೮ ॥

ಮಧ್ಯಾಹ್ನೇ ಯಾಜ್ಞವಲ್ಕ್ಯಸ್ಯ ಯಜ್ಞಂ ಮಾಂಧ್ಯಂದಿನೀಯಕಂ ।
ಅಧ್ಯಾಪಯತ್ಸಾಂಬಯುತೋ ರವಿರ್ಮಧ್ಯಂದಿನೋಽಭವತ್ ॥ ೪೯ ॥

ವೈಕುಂಠಪಶ್ಚಿಮೇ ಪಾರ್ಶ್ವೇ ತೀರ್ಥಂ ಮಾಧ್ಯಂದಿನೀಯಕಂ ।
ಸ್ನಾತ್ವಾ ಮಧ್ಯಂದಿನಂ ದೃಷ್ಟ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೫೦ ॥

೪೬–೪೮. ನಾರದನು ಹೇಳಿದುದರಿಂದ ವರವು ನನ್ನಿಂದ ಲಭಿಸುವುದೆಂದು ಸಂತೋಷಗೊಂಡ ನೀನು ಈಗ ಅದನ್ನು ನನ್ನೆದುರಿಗೆ ಹೇಳು. ಸಾಂಬನೇ, ವೀರಾ, ನೀನು ಹೇಳಿದ ವೇದದಂತೆ ಗ್ರಹಿಸಬೇಕಾದ ಪದಾಕ್ಷರಗಳಿಂದ ಕೂಡಿದ ಐವತ್ತು ಶ್ಲೋಕಗಳಿಂದ ಸ್ತುತನಾದ ನಾನು ನಿನ್ನ ವಿಷಯದಲ್ಲಿ ಯಾವಾಗಲೂ ಸಂತುಷ್ಟನಾಗಿದ್ದೇನೆ' ಎಂದು ಹೇಳಿ ಆ ಸೂರ್ಯದೇವನು ಸಾಂಬನ ಸರ್ವಾಂಗವನ್ನೂ ಮುಟ್ಟಲಾಗಿ ಆ ಕ್ಷಣವೇ ಸಾಂಬನು ಹೊಳೆಯುವ ಕಾಂತಿಯುಳ್ಳವನೂ ಪರಿಪೂರ್ಣವಾಗಿ ಕಾಣುವ ಅಂಗೋಪಾಂಗಗಳುಳ್ಳವನೂ ಆಗಿ, ಪ್ರತ್ಯಕ್ಷನಾದ ಎರಡನೆಯ ಸೂರ್ಯನಂತಾದನು.

೪೯. ಬಳಿಕ ಸೂರ್ಯದೇವನು ಯಾಜ್ಞವಲ್ಕ್ಯನ ಮಾಧ್ಯಂದಿನಯಜ್ಞವನ್ನು ಸಾಂಬನೊಡನೆ ಹೇಳಿಸುತ್ತ ಮಧ್ಯಂದಿನ ರವಿಯೆನಿಸಿಕೊಂಡನು.

೫೦. ವೈಕುಂಠತೀರ್ಥದ ಪಶ್ಚಿಮಪಾರ್ಶ್ವದಲ್ಲಿ ಮಧ್ಯಾಹ್ನತೀರ್ಥದಲ್ಲಿ ಸ್ನಾನವನ್ನು ಮಾಡಿ ಮಧ್ಯಂದಿನಸೂರ್ಯಸಂದರ್ಶನವನ್ನು ಮಾಡುವುದರಿಂದ ಮನುಷ್ಯನು ಎಲ್ಲಾ ಪಾಪಗಳನ್ನೂ ಕಳೆದುಕೊಳ್ಳುವನು.

ಉದಯೋಸ್ತೇ ತತೋ ದೇವಃ ಸಾಂಬೇನ ಸಹಿತೋ ವಿರಾಟ್ ।
ಸಾಯಾಹ್ನೇ ಕೃಷ್ಣಗಂಗಾಯಾ ದಕ್ಷಿಣೇ ಸಂಸ್ಥಿತಸ್ತದಾ ॥ ೫೧ ॥

ತತ್ರ ದೃಷ್ಟ್ವಾ ತು ಸಾಯಾಹ್ನೇ ರವಿಮಸ್ತೋದಯಂ ಪ್ರಭುಂ ।
ಸರ್ವಪಾಪವಿಶುದ್ಧಾತ್ಮಾ ಪರಂ ಬ್ರಹ್ಮಾಧಿಗಚ್ಛತಿ ॥ ೫೨ ॥

॥ ಶ್ರೀವರಾಹ ಉವಾಚ ॥

ಏವಂ ಸಾಂಬಸ್ಯ ತುಷ್ಟೇನ ಮಧ್ಯಾಹ್ನೇ ತು ನಭಸ್ತಲಾತ್ ।
ದ್ವಿಧಾಕೃತಾತ್ಮಯೋಗೇನ ಸಾಂಬಕುಷ್ಠಮಪೋಹಿತಂ ॥ ೫೩ ॥

ಸಾಂಬಃ ಪ್ರಖ್ಯಾತತೀರ್ಥೇ ತು ತತ್ರೈವಾಂತರಧೀಯತ ।
ಸಾಂಬಸ್ತು ಸಹ ಸೂರ್ಯೇಣ ರಥಸ್ಥೇನ ದಿವಾನಿಶಂ ॥
ರವಿಂ ಪಪ್ರಚ್ಛ ಧರ್ಮಾತ್ಮಾ ಪುರಾಣಂ ಸೂರ್ಯಭಾಷಿತಂ ॥ ೫೪ ॥

ಭವಿಷ್ಯಮಿತಿ ವಿಖ್ಯಾತಂ ಖ್ಯಾತಂ ಕೃತ್ವಾ ಪುನರ್ನವಂ ।
ಸಾಂಬಃ ಸೂರ್ಯಪ್ರತಿಷ್ಠಾಂ ಚ ಕಾರಯಾಮಾಸ ತತ್ತ್ವವಿತ್ ॥ ೫೫ ॥

೫೧–೫೨. ಪ್ರಭುವಾದ ಆ ಸೂರ್ಯದೇವನು ಬೆಳಗ್ಗೆಯೂ ಸಾಯಂಕಾಲವೂ ಆ ಸಾಂಬನೊಡನೆಯೇ ಇದ್ದು ಸಾಯಾಹ್ನದಲ್ಲಿ ಕೃಷ್ಣಗಂಗಾತೀರ್ಥದ ದಕ್ಷಿಣಭಾಗದಲ್ಲಿ ನಿಂತನು. ಆದುದರಿಂದ ಅಲ್ಲಿದ್ದು ಸಾಯಂಕಾಲ ಅಸ್ತನಾಗುವ ಸೂರ್ಯನನ್ನು ಸಂದರ್ಶಿಸುವವನು ಸರ್ವಪಾಪವಿಮುಕ್ತನಾಗಿ ಪರಬ್ರಹ್ಮನನ್ನು ಸೇರುವನು.

೫೩. ಶ್ರೀವರಾಹ–ಹೀಗೆ ಸಾಂಬನಿಗೆ ತೃಪ್ತನಾಗಿ ಒಲಿದ ಸೂರ್ಯದೇವನು ಮಧ್ಯಾಹ್ನಕಾಲದಲ್ಲಿ ಯೋಗಶಕ್ತಿಯಿಂದ ತಾನು ಎರಡು ರೂಪವುಳ್ಳವನಾಗಿ ಎರಡನೆಯ ರೂಪದಲ್ಲಿ ಆಕಾಶದಿಂದ ಬಂದು, ಸಾಂಬನ ಕುಷ್ಠವನ್ನು ಪರಿಹರಿಸಿದನು.

೫೪–೫೫. ಧರ್ಮಾತ್ಮನಾದ ಸಾಂಬನು ಪ್ರಖ್ಯಾತವಾದ ಆ ಕೃಷ್ಣಗಂಗಾತೀರ್ಥದಲ್ಲೇ ಅಂತರ್ಧಾನನಾಗಿ ರಥದಲ್ಲಿರುವ ಸೂರ್ಯನೊಡನೆ ಹಗಲೂ ರಾತ್ರಿಯೂ ಇದ್ದುಕೊಂಡು, ಆ ಸೂರ್ಯದೇವನನ್ನು ಪುರಾಣವನ್ನು ಹೇಳಬೇಕೆಂದು ಕೇಳಿದನು. ಸೂರ್ಯನು ಹೇಳಿದ ಭವಿಷ್ಯಪುರಾಣವೆಂದು ಪ್ರಸಿದ್ಧವಾಗಿದ್ದುದನ್ನು ಮತ್ತೆ ಹೊಸದಾಗಿ ಪ್ರಸಿದ್ಧಿಗೊಳಿಸಿದುದಲ್ಲದೆ ತತ್ವಜ್ಞನಾದ ಆತನು ಸೂರ್ಯದೇವ ಪ್ರತಿಷ್ಠೆಯನ್ನು ಮಾಡಿಸಿದನು.

ಉದಯಾಚಲಮಾಶ್ರಿತ್ಯ ಯಮುನಾಯಾಶ್ಚ ದಕ್ಷಿಣೇ ।
ಮಧ್ಯೇ ಕಾಲಪ್ರಿಯಂ ದೇವಂ ಮಧ್ಯಾಹ್ನೇ ಸ್ಥಾಪ್ಯ ಚೋತ್ತಮಂ ॥ ೫೬ ॥

ಮೂಲಸ್ಥಾನಂ ತತಃ ಪಶ್ಚಾದಸ್ತಮಾನಾಚಲೇ ರವಿಂ ।
ಸ್ಥಾಪ್ಯ ತ್ರಿಮೂರ್ತಿಂ ಸಾಂಬಸ್ತು ಪ್ರಾತರ್ಮಧ್ಯಾಪರಾಹ್ಣಿಕಂ ॥ ೫೭ ॥

ಮಧುರಾಯಾಂ ತಥಾ ಚೈಕಂ ಸ್ಥಾಪ್ಯ ಸಾಂಬೋ ವಸುಂಧರೇ ।
ಸ್ವನಾಮ್ನಾ ಸ್ಥಾಪಯಾಮಾಸ ಪುರಾಣವಿಧಿನಾ ಸ್ವಯಂ ॥
ಏವಂ ಸಾಂಬಪುರಂ ನಾಮ ಮಧುರಾಯಾಂ ಕುಲೇಶ್ವರಂ ॥ ೫೮ ॥

ರಥಯಾತ್ರಾಂ ತಥಾ ಕೃತ್ವಾ ರವಿಣಾ ಕಥಿತಾ ಯದಾ ॥ ೫೯ ॥

ಮಾಘಮಾಸಸ್ಯ ಸಪ್ತಮ್ಯಾಂ ದಿವ್ಯಂ ಸಾಂಬಪುರಂ ನರಾಃ ॥ ೬೦ ॥

ರಥಯಾತ್ರಾಂ ಪ್ರಕುರ್ವಂತಿ ಸರ್ವದ್ವಂದ್ವವಿವರ್ಜಿತಾಃ ।
ಗಚ್ಛಂತಿ ತತ್ಪದಂ ಶಾಂತಂ ಸೂರ್ಯಮಂಡಲಭೇದಕಂ ॥ ೬೧ ॥

೫೬-೫೭. ಸಾಂಬನು ಮೂಲಸ್ಥಾನವಾದ ಉದಯಾಚಲಕ್ಕೆ ಹೋಗಿ ಅಲ್ಲಿ ಸೂರ್ಯದೇವನನ್ನು ಸ್ಥಾಪಿಸಿ ಯಮುನಾನದಿಯ ದಕ್ಷಿಣದಲ್ಲಿ ಮಧ್ಯದಲ್ಲಿ ಕಾಲಪ್ರಿಯ ನೆಂಬ ಉತ್ತಮಸೂರ್ಯದೇವನನ್ನು ಮಧ್ಯಾಹ್ನದಲ್ಲಿ ಪ್ರತಿಷ್ಠೆಮಾಡಿ, ಆಮೇಲೆ ಅಸ್ತಾಚಲದಲ್ಲಿ ಒಬ್ಬ ಸೂರ್ಯನನ್ನು ಪ್ರತಿಷ್ಠೆಮಾಡಿ, ಹೀಗೆ ಪ್ರಾತಃಕಾಲದ ಮಧ್ಯಾಹ್ನದ ಮತ್ತು ಸಾಯಂಕಾಲದ ಮೂರುಸೂರ್ಯಮೂರ್ತಿಗಳನ್ನು ಸ್ಥಾಪಿಸಿದನು.

೫೮. ವಸುಂಧರೇ, ಸಾಂಬನು ತಾನೇ ಮಧುರೆಯಲ್ಲಿ ತನ್ನ ಹೆಸರಿನಿಂದ ಸಾಂಬಪುರವೆಂಬ ಒಂದು ಭಾಗವನ್ನು ಏರ್ಪಡಿಸಿ, ಅದರಲ್ಲಿ ಪುರಾಣವಿಧಿಯಿಂದ ಕುಲೇಶ್ವರನನ್ನು ಪ್ರತಿಷ್ಠೆಮಾಡಿಸಿದನು.

೫೯-೬೧. ಸೂರ್ಯದೇವನು ಆ ಸಾಂಬಪುರದಲ್ಲಿ ರಥದಿಂದ ಸಂಚರಿಸುತ್ತಾ ಹೇಳಿರುವಂತೆ ಮಾಘಮಾಸದ ಶುಕ್ಲಪಕ್ಷದ ರಥಸಪ್ತಮಿಯದಿನ ದಿವ್ಯವಾದ ಸಾಂಬಪುರಕ್ಕೆ ರಥೋತ್ಸವಕ್ಕೆ ಹೋಗುವವರು ಸರ್ವವಿಧವಾದ ಸುಖದುಃಖ ಗಳನ್ನೂ ತಪ್ಪಿಸಿಕೊಂಡು ಸೂರ್ಯಮಂಡಲ ಭೇದಕವೂ ಶಾಂತವೂ ಆದ ಪರಬ್ರಹ್ಮಪದವನ್ನು ಪಡೆಯುವರು.

ಏತತ್ತೇ ಕಥಿತಂ ದೇವಿ ಸಾಂಬಶಾಪ ಸಮುದ್ಭವಂ ।
ಶಾಪಪ್ರಶಮನಾಖ್ಯಾನಂ ಮಹಾಪಾತಕನಾಶನಂ ॥ ೬೨ ॥

ಇತಿ ಶ್ರೀವರಾಹಪುರಾಣೇ ಸಾಂಬವಚನತ್ರಯಸೂರ್ಯಪ್ರತಿಷ್ಠಾನಂ ನಾಮ ಸಪ್ತಸಪ್ತತ್ಯಧಿಕ ಶತತಮೋಽಧ್ಯಾಯಃ

---

೬೨. ದೇವೀ, ಸಾಂಬನಿಗೆ ಶಾಪವು ಸಂಭವಿಸಿ ಪರಿಹಾರವಾದ, ಮಹಾ ಪಾಪಗಳನ್ನೂ ನಾಶಮಾಡುವ ಈ ಚರಿತ್ರೆಯನ್ನು ನಿನಗೆ ಹೇಳಿದುದಾಯಿತು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ, ದ್ವಾರಕಿಯಲ್ಲಿ ವಾಸಿಸುತ್ತಿದ್ದ ಶ್ರೀಕೃಷ್ಣನು ತನ್ನ ಮಗನಾದ ಸಾಂಬನಿಗೆ ಕ್ರೂರವಾದ ಶಾಪವನ್ನು ಕೊಟ್ಟುದನ್ನೂ, ಆ ಶಾಪವು ಮಧುರೆಯಲ್ಲಿ ಪರಿಹಾರವಾದುದನ್ನೂ ತಿಳಿಸುವನು. ಶ್ರೀಕೃಷ್ಣನಿಗೆ ಜಾಂಬವತಿಯಲ್ಲಿ ಜನಿಸಿದ ಸಾಂಬನೆಂಬ ಪುತ್ರನು ಅತಿಶಯ ಸೌಂದರ್ಯ ವುಳ್ಳವನೂ ಯುವಕನೂ, ವೀರನೂ ಆಗಿದ್ದನು. ಕೃಷ್ಣನ ಹದಿನಾರುಸಾವಿರ ಜನ ಪತ್ನಿಯರಲ್ಲಿ ಹಲವರಿಗೆ ಸಾಂಬನಲ್ಲಿ ಕಾಮಪ್ರೇಮವು ಅಂಕುರಿಸಿತು. ಅದನ್ನು ನಾರದಋಷಿಯು ಕೃಷ್ಣನಿಗೆ ತಿಳಿಸಿ, ಸಾಂಬನನ್ನು ದೂಷಿಸಿ, ಅವನಮೇಲೆ ಕೃಷ್ಣನಿಗೆ ಆಗ್ರಹವುಂಟಾಗುವಂತೆ ಮಾಡಿದನು. ಕೋಪಗೊಂಡ ಕೃಷ್ಣನು ಸಾಂಬನಿಗೆ ವಿರೂಪವುಂಟಾಗುವಂತೆ ಶಪಿಸಿದನು. ಕೂಡಲೇ ಕುಷ್ಠರೋಗದಿಂದ ಅಂಗವಿಕಾರವನ್ನು ಪಡೆದ ಸಾಂಬನು ನಾರದಮುನಿಯೇ ಹೇಳಿದಂತೆ ಮಧುರೆಯಲ್ಲಿ ಸೂರ್ಯೋಪಾಸನೆಯನ್ನು ಮಾಡಿ, ಅವನ ಅನುಗ್ರಹದಿಂದ ಕುಷ್ಠರೋಗವನ್ನು ಕಳೆದುಕೊಂಡು ಸೂರ್ಯನಂತೆ ತೇಜಸ್ವಿಯಾದನು. ಅಲ್ಲದೆ ಸಾಂಬನು ಸೂರ್ಯನಿಂದ ಭವಿಷ್ಯಪುರಾಣವನ್ನು ಕೇಳಿದನು. ಸೂರ್ಯ ದೇವಾಲಯಗಳನ್ನು ಸ್ಥಾಪಿಸಿದನು. ಅಲ್ಲದೆ ಮಧುರೆಯಲ್ಲಿ ಸಾಂಬಪುರವೆಂಬ ಒಂದು ಭಾಗವನ್ನು ಏರ್ಪಡಿಸಿ ಅದರಲ್ಲಿ ಪುರಾಣವಿಧಿಯಿಂದ ಕುಲೇಶ್ವರನನ್ನು ಪ್ರತಿಷ್ಠೆಮಾಡಿಸಿದನು. ಎಂದು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತೇಳನೆಯ ಅಧ್ಯಾಯ.

॥ ಶ್ರೀಃ ॥

ಅಷ್ಟಸಪ್ತತ್ಯಧಿಕಶತತಮೋಽಧ್ಯಾಯಃ

॥ ಶ್ರೀವರಾಹ ಉವಾಚ ॥

ಶತ್ರುಘ್ನೇನ ಪುರಾ ಘೋರೋ ಲವಣಃ ಸೂದಿತೋ ಯಥಾ ।
ದ್ವಿಜಾನುಗ್ರಹಕಾಮಾರ್ಥಮನ್ನಮುಗ್ರ ಸ್ವರೂಪಿಣಂ ॥ ೧ ॥

ದ್ವಾದಶ್ಯಾಂ ಮಾರ್ಗಶೀರ್ಷಸ್ಯ ಉಪೋಷ್ಯ ನಿಯತಃ ಶುಚಿಃ ।
ಯಃ ಕರೋತಿ ವರಾರೋಹೇ ಶತ್ರುಘ್ನ ಚರಿತಂ ಯಥಾ ॥ ೨ ॥

ದ್ವಿಜಾನಾಂ ಪ್ರೀಣನಂ ಕೃತ್ವಾ ಸ್ವಧಾನ್ನಪಟುಭೋಜನೈಃ ॥ ೩ ॥

ನೂರ ಎಪ್ಪತ್ತೆಂಟನೆಯ ಅಧ್ಯಾಯ

೧-೩. ವರಾರೋಹೇ, ಪೂರ್ವದಲ್ಲಿ ಶತ್ರುಘ್ನನು ಲವಣಾಸುರನನ್ನು ಕೊಂದು, ಬ್ರಾಹ್ಮಣರ ಅನುಗ್ರಹವನ್ನು ಪಡೆಯುವುದಕ್ಕಾಗಿ ನಿಯಮವುಳ್ಳವನೂ ಪರಿಶುದ್ಧನೂ ಆಗಿ, ಮಾರ್ಗಶಿರ ಮಾಸದ ಶುಕ್ಲಪಕ್ಷದ ಏಕಾದಶಿಯ ದಿನ ಉಪವಾಸವನ್ನು ಮಾಡಿ, ದ್ವಾದಶಿಯ ದಿನ ಪಿತೃಗಳಿಗೂ ಬ್ರಾಹ್ಮಣರಿಗೂ, ಅತಿಶಯವಾಗಿ ಮೃಷ್ಟಾನ್ನ ಭೋಜನವನ್ನು ಮಾಡಿಸಿ, ಅವರಿಗೆ ಸಂತೋಷವನ್ನುಂಟುಮಾಡಿದಂತೆ ಯಾರು ತಾನೇ ಮಾಡುವರು !

ಲವಣಸ್ಯ ವಧಾದೇವ ಶತ್ರುಘ್ನಸ್ಯ ಶರೀರಕೇ ।
ಹರ್ಷಸ್ತು ಸುಮಹಾನ್ ಜಾತೋ ರಾಮಸ್ಯಾಕ್ಲಿಷ್ಟಕರ್ಮಣಃ ॥ ೪ ॥

ಅಯೋಧ್ಯಾಯಾಃ ಸಮಾಯಾತೋ ರಾಮಃ ಸ ಬಲವಾಹನಃ ।
ಮಹೋತ್ಸವಂಚ ಕರ್ತುಂ ಸ ಶತ್ರುಘ್ನಸ್ಯ ಮಹಾತ್ಮನಃ ॥ ೫ ॥

ಸಿತಾಮಾಗ್ರಹಣೀಂ ಪ್ರಾಪ್ಯ ಮಧುರಾಂ ಲವಣಾಂತಕಃ ।
ಏಕಾದಶ್ಯಾಂ ಸೋಪವಾಸಃ ಸ್ನಾತ್ವಾ ವಿಶ್ರಾಂತಿಸಂಜ್ಞಕೇ ॥ ೬ ॥

ಕೃತ್ವಾ ಮಹೋತ್ಸವಂ ತತ್ರ ಕುಟುಂಬಸಹಿತಃ ಪುರಾ ।
ತಸ್ಮಿನ್ನುಕ್ತ್ವಾ ಯಥಾಕಾಮಂ ಬ್ರಾಹ್ಮಣಾನ್ ವೈ ಪ್ರತರ್ಪ್ಯ ಚ ॥ ೭ ॥

---

೪. ಉತ್ತಮಕಾರ್ಯವನ್ನು ಮಾಡುವ ಶ್ರೀರಾಮನಿಗೆ ಲವಣಾಸುರನನ್ನು ಕೊಂದುದರಿಂದಲೇ ಶತ್ರುಘ್ನನ ವಿಷಯದಲ್ಲಿ ತುಂಬಾ ಸಂತೋಷ ವುಂಟಾಯಿತು.

೫. ಮಹಾತ್ಮನಾದ ಶತ್ರುಘ್ನನಿಗೆ ಹೆಚ್ಚಾದ ಸಂತೋಷವನ್ನುಂಟು ಮಾಡುವುದಕ್ಕಾಗಿ ರಾಮನು ಸೇನಾವಾಹನಗಳೊಡನೆ ಅಯೋಧ್ಯೆಯಿಂದ ಮಧುರೆಗೆ ಬಂದನು.

೬-೭. ಲವಣಾಂತಕನಾದ ಶತ್ರುಘ್ನನು ಕುಟುಂಬ ಸಹಿತನಾಗಿ ಹಿಂದೆ ಮಾರ್ಗಶಿರ ಮಾಸದ ಶುಕ್ಲಪಕ್ಷದ ಏಕಾದಶಿಯ ದಿನ ಮಧುರೆಯನ್ನು ಸೇರಿ ಆದಿನ ವಿಶ್ರಾಂತಿ ತೀರ್ಥದಲ್ಲಿ ಸ್ನಾನಮಾಡಿ, ಉಪವಾಸವಿದ್ದು, ಅಲ್ಲಿ ಮಹೋತ್ಸವವನ್ನು ಮಾಡಿ, ದ್ವಾದಶಿಯ ದಿನ ಬ್ರಾಹ್ಮಣರನ್ನು ಅವರ ಇಷ್ಟಾನುಸಾರವಾಗಿ ತೃಪ್ತಿಪಡಿಸಿ ಸುಖದಿಂದಿದ್ದನು.

ತಸ್ಮಿನ್ನಹನಿ ತತ್ರೈವ ಯಃ ಕುರ್ಯಾತ್ಸ ಮಹೋತ್ಸವಂ ।
ಸರ್ವಪಾಪವಿನಿರ್ಮುಕ್ತಃ ಪಿತೃಭಿಃ ಸಹ ಮೋದತೇ ।
ಸ್ವರ್ಗಲೋಕೇ ಚಿರಂಕಾಲಂ ಯಾವತ್ಸ್ಥಿತ್ಯಂತಜನ್ಮನಃ ॥ ೮ ॥

ಇತಿ ಶ್ರೀವರಾಹಪುರಾಣೇ ಮಧುರಾಮಾಹಾತ್ಮ್ಯೇ ಶತ್ರುಘ್ನಲಾವಣೇ ರಾಮತೀರ್ಥಯಾತ್ರಾಯಾಂ ಅಷ್ಟಸಪ್ತತ್ಯಧಿಕಶತತಮೋಧ್ಯಾಯಃ

---

೮. ಶತ್ರುಘ್ನನು ಮಾಡಿದಂತೆ ಆದಿನ ಎಂದರೆ ಮಾರ್ಗಶಿರಶುಕ್ಲ ಏಕಾದಶಿ ಮತ್ತು ದ್ವಾದಶಿಯ ದಿನ ಮಹೋತ್ಸವವನ್ನು ಮಾಡುವವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಪಿತೃಗಳೊಡನೆ ಸ್ವರ್ಗಲೋಕದಲ್ಲಿ ಈಶ್ವರನಿರುವವರೆಗೂ ಇದ್ದು ಸಂತೋಷಪಡುವನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮಧುರೆಯ ಮಹಿಮೆಯನ್ನು ತಿಳಿಸುತ್ತಾ ಶತ್ರುಘ್ನನು ಮಧುರೆಯಲ್ಲಿ ಮಾರ್ಗಶಿರ ಶುದ್ಧ ಏಕಾದಶಿಯ ಮತ್ತು ದ್ವಾದಶಿಯ ದಿನ ಮಾಡಿದ ವ್ರತದಾನಾದಿಗಳನ್ನು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತೆಂಟನೆಯ ಅಧ್ಯಾಯ.

|| ಶ್ರೀಃ ||

ಊನಾಶೀತ್ಯಧಿಕಶತತಮೋಧ್ಯಾಯಃ

|| ಧರಣ್ಯುವಾಚ ||

ತವಾಪರಾಧಾ ದೇವೇಶ ವರ್ಜ್ಯಾ ಯೇ ವೈಷ್ಣವೇನ ಚ ।
ವಿನಾಪರಾಧಂ ಮನುಜಃ ಸಾಪರಾಧಶ್ಚ ಜಾಯತೇ || ೧ ||

ಕರ್ಮಣಾಚರಣೇನೈವಾಕರಣೇನ ಜುಗುಪ್ಸಿತಃ ।
ತಚ್ಚ ಪೂಜಾಫಲಂ ಸರ್ವಂ ಜ್ಞಾಯತೇ ತದ್ವದಸ್ವ ಮೇ || ೨ ||

|| ವರಾಹ ಉವಾಚ ||

ಕರ್ಮಣಾ ಮನಸಾ ವಾಚಾ ಯೇ ಪಾಪರುಚಯೋ ಜನಾಃ ।
ಭಕ್ಷಣಂ ದಂತಕಾಷ್ಠಸ್ಯ ರಾಜಾನ್ನಸ್ಯ ತು ಭೋಜನಂ || ೩ ||

ನೂರ ಎಪ್ಪತ್ತೊಂಭತ್ತನೆಯ ಅಧ್ಯಾಯ

೧. ಭೂದೇವಿ–ದೇವೇಶ, ವೈಷ್ಣವನು ಬಿಡಬೇಕಾದ ನಿನ್ನ ಅಪರಾಧಗಳು ಯಾವುವು ? ನಿರಪರಾಧನಾದವನು ಹೇಗೆ ಸಾಪರಾಧನಾಗುವನು ?

೨. ಯಾವಕರ್ಮಗಳನ್ನು ಮಾಡುವುದರಿಂದಲೂ ಯಾವುದನ್ನು ಮಾಡದೆ ಇರುವುದರಿಂದಲೂ ಜುಗುಪ್ಸೆಯಾಗುವುದೆಂದು ತಿಳಿಯುವುದೋ ಅದನ್ನೆಲ್ಲ ವನ್ನೂ, ನಿನ್ನ ಪೂಜೆಯ ಫಲವನ್ನೂ ನನಗೆ ಹೇಳು.

೩. ಶ್ರೀ ವರಾಹ—ಕಾರ್ಯದಿಂದಲೂ, ಮನಸ್ಸಿನಿಂದಲೂ ಮಾತಿನಿಂದಲೂ ಮನುಷ್ಯರು ಪಾಪಾಸಕ್ತರಾಗುವರು. ಹಲ್ಲುಜ್ಜುವ ಕಡ್ಡಿಯನ್ನು ತಿನ್ನುವುದೂ ರಾಜಾನ್ನ ಭೋಜನವನ್ನು ಮಾಡುವುದೂ ಅಪರಾಧ.

ಮೈಥುನಂ ಶವಸಂಸ್ಪರ್ಶಂ ಪುರೀಷೋತ್ಸರ್ಗಮೇವ ಚ ।
ಸೂತಕ್ಯುದಕ್ಯಾಪ್ರೇಕ್ಷಾ ಚ ಸ್ಪರ್ಶನಂ ಮೋಹನಂ ತಥಾ ॥ ೪ ॥

ಅಭಾಷ್ಯ ಭಾಷಣಂ ಚೈವ ಪಿಣ್ಯಾಕಸ್ಯ ಚ ಭಕ್ಷಣಂ ।
ರಕ್ತಪಾರಕ್ಯ ಮಲಿನವಸ್ತ್ರಧಾರಿತ್ವನೀಲಿಜಂ ॥ ೫ ॥

ಗುರೋಶ್ಚಾಲೀಕನಿರ್ಬಂಧಃ ಪತಿತಾನ್ನಸ್ಯ ಭಕ್ಷಣಂ ।
ಅಭಕ್ಷ್ಯ ಭಕ್ಷಣಂ ಚೈವ ತಂಡುಲೀಯ ವಿಭೀತಕಂ ॥ ೬ ॥

ಅದಾನಂತು ವರಾನ್ನಸ್ಯ ಜಾಲಪಾದವರಾಹಯೋಃ ।
ಭಕ್ಷಣಂ ದೇವತಾಗಾರೇ ಸೋಪಾಸತ್ಕೋಪಸರ್ಪಣಂ ॥ ೭ ॥

---

೪. ಸ್ತ್ರೀಸಂಗಮಾಡಿಯೂ, ಶವಸ್ಪರ್ಶಮಾಡಿಯೂ, ಮಲವಿಸರ್ಜನೆ ಮಾಡಿಯೂ, ಹೆತ್ತು ಸೂತಿಕಾಗೃಹದಲ್ಲಿರುವವಳನ್ನೂ ಋತುವಾಗಿರುವವಳನ್ನೂ ನೋಡಿ ಅಥವಾ ಮುಟ್ಟಿಯೂ, ಮೂತ್ರವಿಸರ್ಜನೆಮಾಡಿಯೂ, ಸ್ನಾನಾದಿಗಳಿಂದ ಸರಿಯಾಗಿ ಶುದ್ಧನಾಗದೆ ದೇವರ ಸನ್ನಿಧಿಗೆ ಹೋಗುವುದೂ, ಪೂಜಿಸುವುದೂ ಪಾಪವನ್ನುಂಟುಮಾಡುವ ಅಪರಾಧ.

೫. ದೇವರ ಪೂಜೆಯನ್ನು ಮಾಡುವಾಗ ಅಭಾಷ್ಯಭಾಷಣಮಾಡುವುದು, ಹಿಂಡಿಯನ್ನು ತಿನ್ನುವುದು, ಕೆಂಪಾದ, ಕೊಳೆಯಾದ ಅಥವಾ ಮತ್ತೊಬ್ಬರ, ಅಥವಾ ನೀಲಿಯಬಣ್ಣದ ವಸ್ತ್ರವನ್ನು ಧರಿಸಿ, ದೇವರನ್ನು ಪೂಜಿಸುವುದು ಇವು ಪಾಪಕರವಾದ ಅಪರಾಧಗಳು.

೬-೭. ಗುರುವಿಗೆ ಅಪ್ರಿಯವಾಗುವಂತೆ ಬಲಾತ್ಕರಿಸುವುದು, ಜಾತಿಭ್ರಷ್ಟರ ಅನ್ನವನ್ನೂಟಮಾಡುವುದು, ತಿನ್ನಬಾರದುದನ್ನು ತಿನ್ನುವುದು, ಧಾನ್ಯಗಳು ಹೊಸದಾಗಿ ಬಂದಾಗ ಉತ್ತಮವಾದ ಅನ್ನವನ್ನು ದಾನಮಾಡದಿರುವುದು, ಜಾಲಪಾದದ ಪ್ರಾಣಿಯನ್ನಾಗಲಿ, ಹಂದಿಯನ್ನಾಗಲಿ ತಿನ್ನುವುದು, ದೇವಾಲಯಕ್ಕೆ ಪಾದರಕ್ಷೆಯನ್ನು ಹಾಕಿಕೊಂಡು ಹೋಗುವುದು ಇವೆಲ್ಲವೂ ಪಾಪಕರವಾದ ಅಪರಾಧಗಳು.

ತಥೈವ ದೇವಪೂಜಾಯಾಂ ನಿಷಿದ್ಧಕುಸುಮಾರ್ಚನಂ ।
ಅನುತ್ಸಾರ್ಯ ಚ ನಿರ್ಮಾಲ್ಯಂ ಪೂಜಾ ಕ್ಷೀಣಾಂಧಕಾರಯೋಃ ॥ ೮ ॥

ಪಾನಂ ಸುರಾಯಾಃ ದೇವಸ್ಯ ಅಂಧಕಾರೇ ಪ್ರಬೋಧನಂ ।
ತಾವತ್ಕರ್ಮಾರ್ಚನೇ ವಿಷ್ಣೋರನಮಸ್ಕರಣಂ ತಥಾ ॥ ೯ ॥

ಅಪರಾಧಾಸ್ತ್ರಯಸ್ತ್ರಿಂಶತ್ಸಮಾಖ್ಯಾತಾ ಮಯಾ ಧರೇ ।
ಏಭಿರ್ಯುಕ್ತಸ್ತು ಪುರುಷೋ ವಿಷ್ಣುಂ ನೈವ ಪ್ರಪಶ್ಯತಿ ॥ ೧೦ ॥

ದೂರಸ್ಥೋ ನ ನಮಸ್ಕಾರಂ ಕುರ್ಯಾತ್ಪೂಜಾತು ರಾಕ್ಷಸೀ ।
ಏಕರಾತ್ರಂ ದ್ವಿರಾತ್ರಂ ವಾ ತ್ರಿರಾತ್ರಂ ಸ್ನಾನಮೇವ ಚ ॥ ೧೧ ॥

---

೮. ಅಲ್ಲದೆ ದೇವರನ್ನು ಶಾಸ್ತ್ರವಿರುದ್ಧವಾದ ಹೂಗಳಿಂದ ಪೂಜಿಸುವುದು, ಹಿಂದೆ ಪೂಜಿಸಿರುವ ಹೂ ಮೊದಲಾದ ನಿರ್ಮಾಲ್ಯಗಳನ್ನು ತೆಗೆಯದೆಯೂ ಕತ್ತಲೆಯಲ್ಲಿ ಅಥವಾ ಬಹಳ ಕಡಿಮೆಯಾದ ಬೆಳಕಿನಲ್ಲಿ ಪೂಜಿಸುವುದು ಇವೂ ಪಾಪವನ್ನುಂಟುಮಾಡುವ ತಪ್ಪುಗಳು.

೯–೧೦. ಧರೇ, ಮದ್ಯಪಾನಮಾಡುವುದು, ದೇವರನ್ನು ಕತ್ತಲೆಯಲ್ಲಿ ಸಂಬೋಧಿಸುವುದು, ಕರ್ಮದಲ್ಲೂ ಅರ್ಚನೆಯಲ್ಲೂ ವಿಷ್ಣುವನ್ನು ವಂದಿಸ ದಿರುವುದು, ಇವೇ ಮೊದಲಾದ ಮುವ್ವತ್ತೆರಡು ಅಪರಾಧಗಳನ್ನು ನಾನು ಹೇಳಿ ರುವೆನು. ಈ ತಪ್ಪುಗಳಿಂದ ಕೂಡಿದ ಮನುಷ್ಯನು ವಿಷ್ಣುವನ್ನು ನೋಡಲೇ ಆರನು.

೧೧–೧೨. ದೇವರಿಗೆ ದೂರದಲ್ಲಿ ನಿಂತು ನಮಸ್ಕಾರಮಾಡಕೂಡದು ಹಾಗೆ ಪೂಜೆಮಾಡುವುದು ರಾಕ್ಷಸಪೂಜೆಯೆನಿಸುವುದು. ಹಾಗೆ ಮಾಡಿದವನು ಒಂದುರಾತ್ರೆ ಎರಡುರಾತ್ರೆ ಅಥವಾ ಮೂರುರಾತ್ರೆ ಕಳೆಯುವವರೆಗೆ ಉಟ್ಟ

ಸವಾಸಾಃ ಪಂಚಗವ್ಯಾಶೀ ಮಲಸಂವಸ್ತ್ರಕಂ ಕ್ರಮಾತ್ ।
ನೀಲೀರಕ್ತಾಪನೋದಾರ್ಥಂ ಗೋಮಯೇನ ಪ್ರಘರ್ಷಣಂ ।
ಪ್ರಾಜಾಪತ್ಯೇನ ಶುದ್ಧಿಃ ಸ್ಯಾನ್ನೀಲವಸ್ತ್ರಸ್ಯ ಧಾರಣಾತ್ ॥ ೧೨ ॥

ಚಾಂದ್ರಾಯಣದ್ವಯಂ ಕುರ್ಯಾದ್ಗುರೋಃ ಕ್ಷಯಿತಮುತ್ತಮಂ ।
ಚಾಂದ್ರಾಯಣಂ ಪರಾಕಂಚ ಪತಿತಾನ್ನಸ್ಯ ಭಕ್ಷಣಾತ್ ॥ ೧೩ ॥

ಚಾಂದ್ರಾಯಣಂ ಪರಾಕಂಚ ಪ್ರಾಜಾಪತ್ಯಂ ತಥೈವ ಚ ।
ಗೋಪ್ರದಾನಂಚ ಭೋಜ್ಯಂಚ ಅಭಕ್ಷ್ಯಸ್ಯ ಚ ಭಕ್ಷಣೇ ॥ ೧೪ ॥

ಉಪವಾಸಸ್ತು ಪಂಚಾಹಂ ಪಂಚಗವ್ಯೇನ ಶುದ್ಧ್ಯತಿ ।
ಸೋಪಾನತ್ಕಶ್ಚರೇತ್ಪಾದಂ ಕೃಚ್ಛ್ರಸ್ಯ ದ್ವಿರಭೋಜನಂ ॥ ೧೫ ॥

ಬಟ್ಟೆಯೊಡನೆ ಸ್ನಾನಮಾಡಿ ಪಂಚಗವ್ಯವನ್ನು ಸೇವಿಸಬೇಕು. ಕೊಳೆಯಾದ ಬಟ್ಟೆಯನ್ನುಟ್ಟ ಪಾಪವನ್ನು ಕಳೆದುಕೊಳ್ಳುವುದಕ್ಕೆ ಹಸುವಿನ ಸಗಣಿಯಿಂದ ಮೈಯನ್ನುಜ್ಜಿಕೊಂಡು ಸ್ನಾನಮಾಡಬೇಕು. ನೀಲಿಯಬಟ್ಟೆಯನ್ನುಟ್ಟಪಾಪಕ್ಕೆ ಪ್ರಾಜಾಪತ್ಯ ಕೃಚ್ಛ್ರವನ್ನಾಚರಿಸಬೇಕು.

೧೩. ಗುರುವಿಗೆ ಮಾಡಿದ ಅಪರಾಧವನ್ನು ಕಳೆದುಕೊಳ್ಳಲು ಎರಡುಸಾರಿ ಚಾಂದ್ರಾಯಣವ್ರತವನ್ನು ಆಚರಿಸಬೇಕು. ಪತಿತರ ಅನ್ನವನ್ನೂಟ ಮಾಡಿದುದಕ್ಕೆ ಚಾಂದ್ರಾಯಣ ವ್ರತವನ್ನೂ ಪರಾಕವ್ರತವನ್ನೂ ಮಾಡಬೇಕು.

೧೪–೧೫ ಅಭಕ್ಷ್ಯ ಭಕ್ಷಣಪಾಪವನ್ನು ಕಳೆದುಕೊಳ್ಳಲು ಚಾಂದ್ರಾಯಣ. ಪಾರಾಕ ಮತ್ತು ಪ್ರಾಜಾಪತ್ಯವ್ರತಗಳನ್ನೂ ಗೋದಾನವನ್ನೂ ಮಾಡಬೇಕು. ಐದುದಿನ ಉಪವಾಸಮಾಡಿ, ಬಳಿಕ ಪಂಚಗವ್ಯವನ್ನು ಸೇವಿಸುವುದರಿಂದ ಶುದ್ಧನಾಗುವನು. ಪಾದರಕ್ಷೆಗಳನ್ನು ಹಾಕಿಕೊಂಡು ದೇವಾಲಯಕ್ಕೆ ಹೋದ ಪಾಪವನ್ನು ಕಳೆದುಕೊಳ್ಳಲು ಎರಡುಹೊತ್ತು ಊಟಮಾಡದಿರಬೇಕು.

ಪುಷ್ಪಾಭಾವೇರ್ಚನಂ ಸ್ನಾನಂ ದೇವಸ್ಪರ್ಶಂಚ ಕಾರಯೇತ್ ।
ಅನಿರ್ಮಾಲ್ಯ ನಮಸ್ಕಾರಂ ಸ್ನಾನಂ ಪಂಚಾಮೃತೇನ ತು ॥ ೧೬ ॥

ಸುರಾಪಾನೇ ದ್ವಿಜಾತೀನಾಂ ಚಾಂದ್ರಾಯಣ ಚತುಷ್ಟಯಂ ।
ತಥೈವ ದ್ವಾದಶಾಬ್ದಂತು ಪ್ರಾಜಪತ್ಯತ್ರಯಂಚರೇತ್ ॥ ೧೭ ॥

ಬ್ರಹ್ಮಕೂರ್ಚೇನ ಶುದ್ಧಿಃ ಸ್ಯಾದ್ಗೋಪ್ರದಾನತ್ರಯೇಣ ಚ ।
ತ್ರಯಾಣಾಮೇಕರಾತ್ರೇಣ ಪಂಚಾಮೃತನಿಷೇವಣಾತ್ ॥ ೧೮ ॥

ಮುಚ್ಯತೇ ತ್ವಪರಾಧೈಸ್ತು ತಥಾ ವಿಷ್ಣೋಃ ಸ್ತವಂ ಪಠೇ ॥ ೧೯ ॥

ಏತತ್ತೇ ಕಥಿತಂ ಗುಹ್ಯಂ ಕಿಮನ್ಯಚ್ಛ್ರೋತುಮಿಚ್ಛಸಿ ।
ಪುನಃ ಪುನರುವಾಚೇದಂ ದೇವದೇವೋ ಜನಾರ್ದನಃ ॥ ೨೦ ॥

---

೧೬. ದೇವರಿಗೆ ಸ್ನಾನಮಾಡಿಸಿ ಮುಟ್ಟಿ ಹೂವಿಲ್ಲದೆ ಪೂಜಿಸಿದ ಅಪರಾಧವನ್ನು ಕಳೆದುಕೊಳ್ಳಲು ನಿರ್ಮಾಲ್ಯವಿಲ್ಲದಿರುವಾಗ ದೇವರಿಗೆ ನಮಸ್ಕಾರಮಾಡಿ, ಪಂಚಾಮೃತದಿಂದ ಅಭಿಷೇಕವನ್ನು ಮಾಡಬೇಕು.

೧೭–೧೯. ಬ್ರಾಹ್ಮಣರೂ ಕ್ಷತ್ರಿಯರೂ, ವೈಶ್ಯರೂ ಸುರಾಪಾನಮಾಡಿದಲ್ಲಿ ಅದಕ್ಕೆ ವಿಷ್ಣುವನ್ನು ಸ್ತುತಿಸುತ್ತ ನಾಲ್ಕು ಸಾರಿ ಚಾಂದ್ರಾಯಣವ್ರತವನ್ನೂ, ಹನ್ನೆರಡುವರ್ಷಕಾಲ ಮೂರುಸಾರಿ ಪ್ರಾಜಾಪತ್ಯಕೃಚ್ಛ್ರವನ್ನೂ ಮಾಡಿ ಬ್ರಹ್ಮಕೂರ್ಚ ಪಂಚಗವ್ಯವನ್ನು ಸೇವಿಸಿ, ಮೂರು ಗೋವುಗಳನ್ನು ದಾನಮಾಡಬೇಕು. ಮೂರುದಿನಗಳಿಗೊಂದುಸಾರಿ ಪಂಚಾಮೃತವನ್ನು ಸೇವಿಸುತ್ತಿರಬೇಕು. ಹೀಗೆ ಮಾಡುವುದರಿಂದ ಸರ್ವಾಪರಾಧಗಳನ್ನೂ ಕಳೆದುಕೊಳ್ಳುವನು.

೨೦, ದೇವೀ, ನಿನಗೆ ಈ ರಹಸ್ಯವನ್ನು ಹೇಳಿದುದಾಯಿತು. ಬೇರೆ ಯಾವುದನ್ನು ಕೇಳಲು ಬಯಸುವೆ ? ಎಂದು ದೇವ ದೇವನಾದ ಜನಾರ್ದನನು ಭೂದೇವಿಯನ್ನು ಮತ್ತೆ ಮತ್ತೆ ಕೇಳಿದನು.

ಮೋಹಂಗತಾ ತು ಶೃಣುತೇ ನಷ್ಟಸಂಜ್ಞೇವ ಲಕ್ಷ್ಯತೇ ।
ಮುಹೂರ್ತಮಾತ್ರೇ ಸಾ ದೇವೀ ಸಂಜ್ಞಾಂ ಪ್ರಾಪ್ಯೇದಮಬ್ರವೀತ್ ॥೨೦॥

ಅಪರಾಧೇ ಕೃತೇ ದೇವ ಸೂತಕೀ ಹಿ ಪ್ರಜಾಯತೇ ।
ಪ್ರಾಯಶ್ಚಿತ್ತಾನಿ ಭೂರೀಣಿ ಕೃತಾನಿ ತು ನರೈಃ ಸದಾ ।
ತೇನ ಮೇ ಮನಸೋ ಮೋಹೋ ದುಃಖದೋ ಯಃ ಸಮುತ್ಥಯಾತ್
॥೨೨॥

ಅಸ್ತಿ ಕಶ್ಚಿದುಪಾಯೋಽತ್ರ ಯೇನ ತ್ವಂ ನೃಷು ತುಷ್ಯಸಿ ।
ಪೂಜಿತಃ ಸಫಲಶ್ಚಾಸಿ ಅಪರಾಧ ವಿಶೋಧನಂ ॥ ೨೩ ॥

॥ ಶ್ರೀವರಾಹ ಉವಾಚ ॥

ಸಂವತ್ಸರಸ್ಯ ಮಧ್ಯೇ ತು ತೀರ್ಥೇ ಸೌಕರವೇ ಮಮ ।
ಕೃತೋಪವಾಸಃ ಸ್ನಾನೇನ ಗಂಗಾಯಾಂ ಶುದ್ಧಿಮಾಪ್ನುಯಾತ್॥ ೨೪ ॥

---

೨೦. ಭೂದೇವಿ ಮೋಹಗೊಂಡವಳಾಗಿ ಶ್ರೀವರಾಹನು ಹೇಳಿ ದ್ದನ್ನು ಕೇಳುತ್ತಾ ಸುಮ್ಮನೆಯೇ ಇದ್ದು ಬಳಿಕ ಮೂರ್ಛೆಗೊಂಡವಳಂತೆ ಕಾಣಿಸಿದಳು. ಸ್ವಲ್ಪಹೊತ್ತಿನಮೇಲೆ ಆ ದೇವಿ ಮತ್ತೆ ಚೇತರಿಸಿಕೊಂಡು ಜ್ಞಾನವನ್ನು ಪಡೆದು, ಈ ಮಾತನ್ನು ಹೇಳಿದಳು.

೨೨. "ದೇವಾ ಮನುಷ್ಯನು ಅಪರಾಧವನ್ನು ಮಾಡಿದರೆ ಪಾಪಿ ಯಾಗುವನು. ಮನುಷ್ಯರು ಯಾವಾಗಲೂ ಬಹಳವಾಗಿ ಪ್ರಾಯಶ್ಚಿತ್ತಗಳನ್ನು ಮಾಡುತ್ತಲೇ ಇರಬೇಕಾಗುವುದು. ಆದುದರಿಂದ ನನ್ನ ಮನುಸ್ಸಿಗೆ ಉಂಟಾದ ಮೋಹವು ದುಃಖಕರವಾಗಿದೆ.

೨೩. ಯಾವುದರಿಂದ ನೀನು ನಿನ್ನನ್ನು ಪೂಜೆಮಾಡುವ ಮನುಷ್ಯರ ವಿಷಯದಲ್ಲಿ ಸಂತೋಷಪಟ್ಟು ಅವರಿಗೆ ಫಲವನ್ನು ಕೊಡುವೆಯೋ, ಅವರ ಅಪರಾಧ ಪರಿಹಾರವೂ ಆಗುವುದೋ ಆ ಉಪಾಯವಾವುದಾದರೂ ಇದೆಯೊ?"

೨೪. ಶ್ರೀವರಾಹ—ಭೂದೇವಿ, ವರ್ಷದ ಮಧ್ಯದಲ್ಲಿ ಮನುಷ್ಯನು ನನ್ನ ಸೌಕರವಕ್ಷೇತ್ರದಲ್ಲಿ ಉಪವಾಸಮಾಡಿ, ಗಂಗೆಯಲ್ಲಿ ಸ್ನಾನ ಮಾಡುವುದರಿಂದ ಅಪರಾಧವನ್ನು ಕಳೆದುಕೊಂಡು ಶುದ್ಧನಾಗುವನು.

ಮಥುರಾಯಾಂ ತಥಾಪ್ಯೇವಂ ಸಾಪರಾಧಃ ಶುಚಿರ್ಭವೇತ್ ।
ಅನಯೋಸ್ತೀರ್ಥಯೋರೇವಂ ಯಃ ಸೇವೇತ ಸಕೃನ್ನರಃ ॥ ೨೫ ॥

ಸಹಸ್ರಜನ್ಮಸು ಕೃತಾನಪರಾಧಾನ್ ಜಹಾತಿ ಸಃ ॥ ೨೬ ॥

ಸ್ನಾನಾತ್ಪಾನಾತ್ತಥಾ ಧ್ಯಾನಾತ್ಕೀರ್ತನಾದ್ಧಾರಣಾತ್ತಥಾ ।
ಶ್ರವಣಾನ್ಮನನಾಚ್ಚೈವ ದರ್ಶನಾದ್ಯಾತಿ ಪಾತಕಂ ॥ ೨೭ ॥

॥ ಪೃಥಿವ್ಯುವಾಚ ॥

ಮಥುರಾ ಸೂಕರಂಚೈವ ದ್ವಾವೇತೌ ತವ ವಲ್ಲಭೌ ।
ವಿಶಿಷ್ಟಮನಯೋಃ ಕಿಂಚ ಸತ್ಯಂ ಬ್ರೂಹಿ ಸುರೇಶ್ವರ ॥ ೨೮ ॥

೨೫—೨೬. ಅಲ್ಲದೆ ಅಪರಾಧವನ್ನು ಮಾಡಿದವನು ಮಥುರೆಯ ತೀರ್ಥದಲ್ಲೂ ಹೀಗೆಯೇ ಶುದ್ಧನಾಗುವನು. ಈ ಎರಡು ತೀರ್ಥಗಳಲ್ಲಾವುದಾದರೂ ಒಂದನ್ನಾದರೂ ಒಂದುಸಾರಿ ಸೇವಿಸುವ ಮನುಷ್ಯನು ಸಹಸ್ರಜನ್ಮಗಳಲ್ಲಿ ಮಾಡಿದ ಅಪರಾಧಗಳನ್ನೂ ಕಳೆದುಕೊಳ್ಳುವನು.

೨೭. ಈ ಎರಡು ತೀರ್ಥಗಳ ಸ್ನಾನದಿಂದಲೂ, ಪಾನದಿಂದಲೂ, ಧ್ಯಾನದಿಂದಲೂ ಕೀರ್ತನದಿಂದಲೂ, (ಶಿರಸ್ಸಿನಲ್ಲಿ) ಧಾರಣದಿಂದಲೂ, ಶ್ರವಣದಿಂದಲೂ, ದರ್ಶನದಿಂದಲೂ ಪಾಪವು ನಾಶವಾಗುವುದು.

೨೮. ಭೂದೇವಿ—ಸುರೇಶ್ವರನೇ, ಮಥುರೆ ಸೂಕರಕ್ಷೇತ್ರ ಇವೆರಡೂ ನಿನಗೆ ಅತಿಪ್ರಿಯವಾದುವು. ಹಾಗಾಗಲು ಇವುಗಳಲ್ಲಿ ವಿಶೇಷವೇನೆಂಬುದನ್ನು ನಿಜವಾಗಿ ಹೇಳು.

|| ಶ್ರೀವರಾಹ ಉವಾಚ ||

ಪೃಥಿವ್ಯಾಂ ಯಾನಿ ತೀರ್ಥಾನಿ ಆಸಮುದ್ರಸರಾಂಸಿ ಚ ।
ಕುಬ್ಜಾಮ್ರಕಂ ಪ್ರಶಂಸಂತಿ ಸದಾ ಮದ್ಭಾವಭಾವಿತಾಃ ।
ತಸ್ಮಾತ್ಕೋಟಿಗುಣಂ ಗುಹ್ಯಂ ಸೌಕರಂ ತೀರ್ಥಮುತ್ತಮಂ || ೨೯ ||

ಏಕಾಹಂ ಮಾರ್ಗಶೀರ್ಷ್ಯಾಂಚ ದ್ವಾದಶ್ಯಾಂ ಸಿತವೈಷ್ಣವಂ ।
ಗಂಗಾಸಾಗರಿಕಂ ನಾನು ಪುರಾಣೇಷು ಚ ಪಠ್ಯತೇ || ೩೦ ||

ಗುಹ್ಯಾದ್ಗುಹ್ಯತರಂ ಪುಣ್ಯಂ ಮಾಥುರಂ ಮಮ ಮಂಡಲಂ ।
ಫಲಂ ಪರಾರ್ಧಗುಣಿತಂ ಸಿತತೀರ್ಥಾನ್ನ ಸಂಶಯಃ || ೩೧ ||

ಅಟಿತ್ವಾ ಸರ್ವತೀರ್ಥಾನಿ ಕುಬ್ಜಾಮ್ರಾದೀನಿ ನಿತ್ಯಶಃ ।
ಅಘಂ ವಿನಶ್ಯತೇ ಕ್ಷಿಪ್ರಂ ಮಥುರಾಮಾಗತಸ್ಯ ಚ || ೩೨ ||

---

೨೯. ಶ್ರೀವರಾಹ—ಸಮುದ್ರಸರೋವರಗಳು ಮೊದಲುಗೊಂಡು ಭೂಮಿಯಲ್ಲಿ ಯಾವ ಯಾವ ತೀರ್ಥಗಳಿವೆಯೋ, ಅವುಗಳಲ್ಲೆಲ್ಲ ಕುಬ್ಜಾಮ್ರಕ ತೀರ್ಥವನ್ನು ಯಾವಾಗಲೂ ನನ್ನ ಧ್ಯಾನಾಸಕ್ತರಾಗಿ ನನಗೆ ಇಷ್ಟರಾಗಿರುವವರು ಹೊಗಳುವರು. ಆದರೆ ರಹಸ್ಯವಾದ ಸೌಕರವತೀರ್ಥವು ಕುಬ್ಜಾಮ್ರಕ ತೀರ್ಥಕ್ಕಿಂತಲೂ ಕೋಟಿಪಾಲು ಮೇಲಾದುದು.

೩೦–೩೧. ಮಾರ್ಗಶಿರ ಮಾಸದ ಏಕಾದಶಿಯ ದಿನ ಗಂಗಾಸಾಗರ ಸಂಗಮದಲ್ಲಿ ಸಿತವೈಷ್ಣವ ತೀರ್ಥವು ಸ್ನಾನಕ್ಕೆ ಬಹು ಶ್ರೇಷ್ಠವೆಂದು ಪುರಾಣಗಳಲ್ಲಿ ಹೇಳಿದೆ ಆದರೆ ರಹಸ್ಯವಾದವುಗಳಲ್ಲಿ ಪರಮ ರಹಸ್ಯವಾದ ನನ್ನ ಮಥುರಾ ಮಂಡಲವು ಸಿತವೈಷ್ಣವತೀರ್ಥಕ್ಕೆ ಪರಾರ್ಧ ಸಂಖ್ಯೆಯಷ್ಟು ಅಧಿಕ ಫಲದಾಯಕವಾದುದೆಂಬುದರಲ್ಲಿ ಸಂಶಯವಿಲ್ಲ.

೩೨. ಕುಬ್ಜಾಮ್ರಕಾದಿ ಸರ್ವತೀರ್ಥಗಳಿಗೆ ನಿತ್ಯವೂ ಯಾತ್ರೆಹೋಗುವುದಕ್ಕಿಂತ ಮಥುರೆಗೆ ಬಂದು ಬಿಟ್ಟರೆ ಬಂದವನ ಪಾಪವು ಬೇಗನೆ ನಾಶವಾಗುವುದು.

ವಿಶ್ರಮಣಾಚ್ಚ ವಿಶ್ರಾಂತಿಸ್ತೇನ ಸಂಜ್ಞಾ ವರಾ ಮಮ ।
ಸಾರಾತ್ಸಾರತರಂ ಸ್ಥಾನಂ ಗುಹ್ಯಾನಾಂ ಗುಹ್ಯಮುತ್ತಮಂ ॥ ೩೩ ॥

ಗತಿರನ್ವೇಷಣೀಯಾನಾಂ ಮಥುರಾ ಪರಮಾ ಗತಿಃ ।
ಕುಬ್ಜಾಮ್ರಕೇ ಸೌಕರೇ ಚ ಮಥುರಾಯಾಂ ವಿಶೇಷತಃ ।
ವಿನಾ ಸಾಂಖ್ಯೇನ ಯೋಗೇನ ಮುಚ್ಯತೇ ನಾತ್ರಸಂಶಯಃ ॥ ೩೪ ॥

ಯಾ ಗತಿರ್ಯೋಗಯುಕ್ತಸ್ಯ ಬ್ರಾಹ್ಮಣಸ್ಯ ಮನೀಷಿಣಃ ।
ಸಾ ಗತಿಸ್ತ್ಯಜತಃ ಪ್ರಾಣಾನ್ಮಥುರಾಯಾಂ ನ ಸಂಶಯಃ ॥ ೩೫ ॥

---

೩೩. ಪಾಪವು ತೊಲಗಿಹೋಗಿ ಮನುಷ್ಯನಿಗೆ ವಿಶ್ರಾಂತಿ ದೊರೆಯುವುದರಿಂದಲೂ, ನಾನು ಅಲ್ಲಿ ವಿಶ್ರಮಿಸಿಕೊಂಡುದರಿಂದಲೂ ಆ ತೀರ್ಥಕ್ಕೆ ವಿಶ್ರಾಂತಿಯೆಂಬ ಹೆಸರು ಉತ್ತಮವಾದುದಾಗಿದೆ. ಅಲ್ಲಿಯ ಸ್ಥಾನವು ಸಾರವಾದುವುಗಳಲ್ಲಿ ಬಹುಸಾರವೂ ರಹಸ್ಯವಾದುವುಗಳಲ್ಲಿ ಅತಿ ರಹಸ್ಯವೂ ಆದುದು.

೩೪. ಗತಿಯನ್ನು ಹುಡುಕುವವರಿಗೆ ಮಥುರೆಯೇ ಪರಮಗತಿ. ಕುಬ್ಜಾಮ್ರಕಸೌಕರದಲ್ಲೂ ಮೇಲಾಗಿ ಮಥುರೆಯಲ್ಲೂ ಸಾಂಖ್ಯವಾಗಲಿ, ಯೋಗವಾಗಲಿ ಇಲ್ಲದೆಯೇ ಮುಕ್ತಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೩೫. ಯೋಗಸಿದ್ಧಿಯನ್ನು ಪಡೆದ ವಿದ್ವಾಂಸನಾದ ಬ್ರಾಹ್ಮಣನಿಗೆ ಯಾವ ಗತಿಯೋ, ಅದೇ ಗತಿಯು ಮಥುರೆಯಲ್ಲಿ ಪ್ರಾಣಬಿಡುವ ಸಾಮಾನ್ಯ ಮನುಷ್ಯನಿಗೆ ದೊರೆಯುವುದೆಂಬುದರಲ್ಲಿ ಸಂದೇಹವಿಲ್ಲ.

ಏತತ್ತೇ ಕಥಿತಂ ಸಾರಂ ಮಯಾ ಸತ್ಯೇನ ಸುವ್ರತೇ ।
ನ ತೀರ್ಥಂ ಮಥುರಾಯಾಹಿ ನ ದೇವಃ ಕೇಶವಾತ್ಪರಃ ॥ ೩೬ ॥

ಇತಿ ಶ್ರೀವರಾಹಪುರಾಣೇ ಮಥುರಾಮಾಹಾತ್ಮ್ಯೇ ಅಪರಾಧ ಪ್ರಾಯಶ್ಚಿತ್ತ ಮಾಹಾತ್ಮ್ಯಂ ನಾಮ ಊನಾಶೀತ್ಯಧಿಕಶತತಮೋಽಧ್ಯಾಯಃ

---

೩೬. ಸುವ್ರತೇ, ನಾನು ನಿನಗೆ ಸತ್ಯವಾದ ಈ ಸಾರವನ್ನು ಹೇಳಿದ್ದೇನೆ. ಮಥುರೆಗಿಂತ ಉತ್ತಮವಾದ ತೀರ್ಥವಿಲ್ಲ. ಕೇಶವನಿಗಿಂತ ಶ್ರೇಷ್ಠನಾದ ದೇವನಿಲ್ಲ

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ–ಮನುಷ್ಯನು ದೇವಪೂಜೆಯ ಕಾಲದಲ್ಲೂ ಬೇರೆಯ ಕಾಲದಲ್ಲೂ ಮಾಡುವ ಮೂವತ್ತೆರಡು ಅಪರಾಧಗಳನ್ನೂ, ಅವುಗಳ ಪರಿಹಾರಕ್ಕೆ ಮಾಡಬೇಕಾದ ಪ್ರಾಯಶ್ಚಿತ್ತಗಳನ್ನೂ ಹೇಳಿದನು. ಅವೆಲ್ಲವೂ ಬಹು ಕಷ್ಟಕರಗಳೆಂದು ಸಂಕಟಪಟ್ಟು ಬೇರೆ ಯಾವುದಾದರೂ ಸುಲಭೋಪಾಯ ವನ್ನು ತಿಳಿಸಲು ಬೇಡಿದ ಆಕೆಗೆ ಮಥುರೆಯ ತೀರ್ಥಯಾತ್ರೆಯೇ ಸರ್ವಪಾಪ ಪರಿಹಾರಕವಾದ ಪ್ರಾಯಶ್ಚಿತ್ತವೂ, ಮೋಕ್ಷೋಪಾಯವೂ ಆದುದೆಂದು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಪ್ಪತ್ತೊಂಭತ್ತನೆಯ ಅಧ್ಯಾಯ

॥ ಶ್ರೀಃ ॥

ಅಶೀತ್ಯಧಿಕಶತತಮೋಽಧ್ಯಾಯಃ

॥ ಶ್ರೀವರಾಹ ಉವಾಚ ॥

ಪುನರನ್ಯತ್ಪ್ರವಕ್ಷ್ಯಾಮಿ ಪಿತೄಣಾಂ ತೃಪ್ತಿಕಾರಕಂ ।
ಧ್ರುವತೀರ್ಥೇ ಪುರಾ ವೃತ್ತಂ ತಚ್ಛೃಣುಷ್ವ ವಸುಂಧರೇ ॥ ೧ ॥

ಅಸ್ಯಾಂ ಪುರ್ಯಾಂತು ರಾಜಾಸೀದ್ಧಾರ್ಮಿಕಃ ಸತ್ಯವಿಕ್ರಮಃ ।
ಚಂದ್ರಸೇನೇತಿ ನಾಮ್ನಾ ಚ ಯಜ್ವಾ ದಾನಹಿತೇ ರತಃ ।
ತಸ್ಯ ನಾರ್ಯಃ ಶತೇ ದ್ವೇ ತು ಕುಲಶೀಲವಯೋಽಯುತೇ ॥ ೨ ॥

ನೂರ ಎಂಭತ್ತನೆಯ ಅಧ್ಯಾಯ

೧. ಶ್ರೀವರಾಹ—ಭೂದೇವಿ, ಧ್ರುವತೀರ್ಥದಲ್ಲಿ ಹಿಂದೆ ನಡೆದ, ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವ ಬೇರೊಂದು ವಿಚಾರವನ್ನು ಹೇಳುತ್ತೇನೆ. ಅದನ್ನು ಕೇಳು.

೨. ಈ ಮಧುರಾಪುರದಲ್ಲಿ ಧಾರ್ಮಿಕನೂ ಸತ್ಯಪರಾಕ್ರಮನೂ, ವಿಧಿಪೂರ್ವಕವಾಗಿ ಯಜ್ಞಗಳನ್ನು ಮಾಡಿದವನೂ, ದಾನ ಮಾಡುವುದರಲ್ಲೂ ಪರಹಿತದಲ್ಲೂ ಆಸಕ್ತನೂ ಆದ ಚಂದ್ರಸೇನನೆಂಬ ದೊರೆಯಿದ್ದನು.

ತಾಸಾಂ ಮಧ್ಯೇಽಧಿಕಾ ಚೈಕಾ ಯತಿವ್ರತಪರಾಯಣಾ ।
ನಾಮ್ನಾ ಚಂದ್ರಪ್ರಭಾಚೈವ ವೀರಸೂರ್ವೀರಪುತ್ರಿಕಾ ॥ ೩ ॥

ತಸ್ಯಾ ದಾಸೀ ಶತಸ್ಯೈಕಾ ದಾಸೀ ನಾಮ್ನಾ ಪ್ರಭಾವತೀ ।
ತಸ್ಯಾಃ ಪರಿಗ್ರಹಾಸ್ತ್ವೇಕೋದ್ದಿಷ್ಟಾಚಾರವಿಹೀನಕಾ ॥ ೪ ॥

ತಸ್ಯಾಃ ಪಿತೃಗಣಾಃ ಸರ್ವೇ ಅತೀತಾಃ ಶತಸಂಖ್ಯಯಾ ॥ ೫ ॥

ಸ್ವದೋಷೈಃ ಪತಿತಾಃ ಸರ್ವೇ ನರಕಂ ಪ್ರತಿ ಭಾಮಿನಿ ।
ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಹಿ ॥ ೬ ॥

ಕದಾಚಿದಪಿ ತಸ್ಯಾಥೋ ಭ್ರಷ್ಟಃ ಪ್ರಾಣಿಜನೋ ಮಹಾನ್ ।
ಸೂಕ್ಷ್ಮಃ ಪ್ರಾಣಿಸಮೂಹೋಹಿ ಧ್ರುವತೀರ್ಥೇ ತದಾಪತತ್ ॥ ೭ ॥

---

೩. ಆತನಿಗೆ ಕುಲೀನೆಯರೂ, ಸುಶೀಲೆಯರೂ, ಯುವತಿಯರೂ ಆದ ಇನ್ನೂರು ಜನ ಹೆಂಡತಿಯರಿದ್ದರು. ಅವರೆಲ್ಲರಲ್ಲೂ ಮೇಲಾದವಳೂ, ವೀರ ಪುತ್ರಿಯೂ, ವೀರಪುತ್ರರನ್ನು ಪಡೆದವಳೂ ಆದ ಚಂದ್ರಪ್ರಭೆಯೆಂಬೊಬ್ಬಳು ಸನ್ಯಾಸವ್ರತಾಸಕ್ತಳಾಗಿದ್ದಳು.

೪. ಆ ಚಂದ್ರಪ್ರಭೆಯ ನೂರಾರುಜನ ದಾಸಿಯರಲ್ಲಿ ಪ್ರಭಾವತಿಯೆಂಬು ವಳು ಒಬ್ಬಳು. ಆ ಪ್ರಭಾವತಿಯ ಸೇವಕರಲ್ಲಿ ಒಬ್ಬಳಾದ ವಿರೂಪಕನಿಧಿಯೆಂಬು ವಳು ಸದಾಚಾರಗಳನ್ನು ಬಿಟ್ಟವಳಾಗಿದ್ದಳು.

೫–೬. ಸುಂದರೀ, ಆ ವಿರೂಪಕನಿಧಿಯ ತಂದೆಯೇ ಮೊದಲಾದ ಪಿತೃ ವರ್ಗದವರು ನೂರಾರುಜನ ಮೃತರಾಗಿ ಹೋಗಿದ್ದರು. ಅವರೆಲ್ಲರೂ ತಮ್ಮ ಮತ್ತು ಆಕೆಯ ಪಾಪದೋಷದಿಂದ ನರಕದಲ್ಲಿ ಬಿದ್ದುಹೋಗಿದ್ದರು. ಕುಲ ನಾಶಕರು ಮಾಡುವ ಜಾತಿಕರ್ಮಾದಿಸಂಕರವು ನಿಜವಾಗಿ ಆ ವಂಶದವರಿಗೇ ನರಕಕಾರಣವಾಗುವುದು.

೭. ಹೀಗಿರಲು ಒಂದಾನೊಂದು ಕಾಲದಲ್ಲಿ ನರಕದಿಂದ ತಪ್ಪಿಸಿಕೊಂಡ ಆ ವಿರೂಪಕನಿಧಿಯ ವಂಶೀಯರು ಸೂಕ್ಷ್ಮವಾದ ಪ್ರಾಣಿಗಳಾಗಿ ಗುಂಪಾಗಿ ಮಥುರೆಯ ಧ್ರುವತೀರ್ಥದಲ್ಲಿ ಬೀಳುತ್ತಿದ್ದರು.

ಕೃಷ್ಣರೂಪಾಂಶ್ಚಂಕ್ರಮಂತೋ ಮಶಕಾಕಾರಸನ್ನಿಭಾಃ ।
ದೃಷ್ಟಾಸ್ತೇ ಋಷಿಣಾತತ್ರ ತ್ರಿಕಾಲಜ್ಞೇನ ಭಾಮಿನಿ ॥ ೮ ॥

ಷಷ್ಠಾನ್ನ ಕಾಲಭೋಕ್ತ್ರಾ ಪಯೋವ್ರತೇನ ಮಹಾತ್ಮನಾ ।
ಮೌನವ್ರತೇನ ಸಾ ದೇವಿ ಸೂರ್ಯಗತ್ಯಾ ಸ್ಥಿತೇನ ಚ ॥ ೯ ॥

ತಸ್ಮಿನ್‌ಕ್ಷಣೇ ನ ಚ ಕೃತಂ ವ್ರತಂ ಜಪ್ಯಂ ವಿಮೋಹನಾತ್ ।
ಕೃಪಯಾ ಪರಿಭೂತಸ್ಯ ಕೌತುಕೇನ ನಿರೀಕ್ಷತಾ ॥ ೧೦ ॥

ಚತುರ್ಥಾಂಶಾವಶೇಷಶ್ಚ ದಿವಸಃ ಪರ್ಯವರ್ತತ ।
ಏಕೇ ತತ್ರ ತಮಾಯಾಂತಿ ಪಿತರೋ ನಭಸೋsವನಿಂ ॥ ೧೧ ॥

---

೮. ಭಾಮಿನೀ, ಆ ಧ್ರುವತೀರ್ಥದಲ್ಲಿದ್ದ ತ್ರಿಕಾಲಜ್ಞನಾದ ಋಷಿಯೊಬ್ಬನು ಕಪ್ಪಾದ ಸೊಳ್ಳೆಗಳಂತೆ ಸಂಚರಿಸುತ್ತಿದ್ದ ಆ ಪ್ರಾಣಿಗಳನ್ನು ನೋಡಿದನು.

೯. ಆ ಋಷಿ ಹಗಲಿನ ಆರನೆಯ ಭಾಗ ಎಂದರೆ ಮಧ್ಯಾಹ್ನ ಒಂದು ವರೆ ಗಂಟೆಯಮೇಲೆ ಹಾಲನ್ನು ಮಾತ್ರ ಸೇವಿಸುವವನಾಗಿಯೂ. ಮೌನವ್ರತಿಯಾಗಿಯೂ, ಸೂರ್ಯಗತಿಗನುಸಾರವಾಗಿ ಅವನ ಕಡೆಗೆ ಮುಖವನ್ನು ತಿರುಗಿಸಿಕೊಂಡು ತಪಸ್ಸುಮಾಡುವವನಾಗಿಯೂ ಇದ್ದನು.

೧೦. ಕಷ್ಟಪಡುತ್ತಿದ್ದ ಆ ಪ್ರಾಣಿಗಳನ್ನು ಕುತೂಹಲದಿಂದ ನೋಡುತ್ತಾ ಕೃಪಾಪರವಶನಾದ ಆ ಮುನಿ ವಿಮೋಹದಿಂದ ಆಗ ಜಪವ್ರತವನ್ನು ಮಾಡಲಿಲ್ಲ.

೧೧. ಹಗಲು ನಾಲ್ಕನೆಯ ಒಂದುಭಾಗ ಮಾತ್ರ ಉಳಿದಿದ್ದಿತು. ಕೆಲವರು ಪಿತೃಗಳು ಆಕಾಶದಿಂದ ಅಲ್ಲಿ ಭೂಮಿಗೆ ಇಳಿದುಬರುತ್ತಿದ್ದರು.

ಅನ್ಯೇ ಪೂರ್ವೋತ್ತರಾದ್ಧೇಶಾದ್ದಕ್ಷಿಣಾತ್ಪಶ್ಚಿಮಾತ್ತಥಾ ।
ಕೇಚಿತ್ಸ್ವಭಾವತೋ ಹೃಷ್ಟಾಃ ಕೇಚಿತ್ಪುತ್ರೈಃ ಸ್ವಧಾಕೃತಾಃ ॥ ೧೨ ॥

ಹೃಷ್ಟಾಃ ತುಷ್ಟಾಃ ಸುಪುಷ್ಟಾಂಗಾ ಗಚ್ಛಂತೋ ದಿವಿ ಸಂಘಶಃ ।
ತಪಸ್ವಿನಃ ಸ್ನಾನರತಾ ರೂಕ್ಷಾಃ ಕ್ಷಾಮಶರೀರಿಣಃ ॥ ೧೩ ॥

ವಸ್ತ್ರಾಲಂಕಾರಪುಷ್ಟಾಂಗಾ ಹೃಷ್ಟಾ ಗಚ್ಛಂತಿ ಸಂಘಶಃ ।
ತಥಾಽಪರೇ ನಗ್ನದೇಹಾಃ ಸುಪುಷ್ಟಾ ಯಾಂತಿ ತತ್ರ ವೈ ॥ ೧೪ ॥

ಅನ್ಯೇ ಯಥಾ ಗತಂ ಯಾಂತಿ ಆಯಾಂತಿ ಪುನರೇವ ಹಿ ।
ಯಾನೈರುಚ್ಚಾವಚೈಃ ಕೇಚಿನ್ನಾನಾರೂಪೈಃ ಖಗೈಸ್ತಥಾ ॥ ೧೫ ॥

---

೧೨. ಬೇರೆ ಹಲವರು ಪೂರ್ವದಿಂದಲೂ, ಉತ್ತರದಿಂದಲೂ, ದಕ್ಷಿಣದಿಂದಲೂ, ಪಶ್ಚಿಮದಿಂದಲೂ ಬರುತ್ತಿದ್ದರು. ಅವರಲ್ಲಿ ಕೆಲವರು ಸಹಜವಾಗಿಯೇ ಸಂತೋಷವುಳ್ಳವರಾಗಿದ್ದರು. ಇನ್ನು ಕೆಲವರು ಮಕ್ಕಳ ಸ್ವಧೆಯಿಂದ ತೃಪ್ತರಾಗಿ ಸಂತೋಷವುಳ್ಳವರಾಗಿದ್ದರು.

೧೩. ಬರುವಾಗ ಕೃಶರಾಗಿ ಸೂಕ್ಷ್ಮಶರೀರವುಳ್ಳವರಾಗಿದ್ದ ಕೆಲವರು ಮಕ್ಕಳು ಮಾಡುವ ತರ್ಪಣಾದಿಗಳಿಂದ ಸಂತುಷ್ಟರೂ ಪುಷ್ಟಾಂಗರೂ ಆಗಿ ಗುಂಪಾಗಿ ಸ್ವರ್ಗಕ್ಕೆ ಅಥವಾ ಆಕಾಶಕ್ಕೆ ಹೋಗುತ್ತಿದ್ದರು. ಕೆಲವರು ಸ್ನಾನಾಸಕ್ತರೂ, ತಪಸ್ವಿಗಳೂ ಆಗುತ್ತಿದ್ದರು.

೧೪. ಕೆಲವರು ಪುಷ್ಟವಾದ ದೇಹವುಳ್ಳವರಾಗಿ ವಸ್ತ್ರಾಲಂಕಾರಭೂಷಿತರಾಗಿ ಸಂತೋಷದಿಂದ ಹೋಗುತ್ತಿದ್ದರು. ಕೆಲವರು ಪುಷ್ಟರಾಗಿದ್ದರೂ ನಗ್ನರಾಗಿ ಹೋಗುತ್ತಿದ್ದರು.

೧೫-೧೬. ಕೆಲವರು ಅಲ್ಲಿಗೆ ಬಂದ ಸ್ಥಿತಿಯಲ್ಲೇ ಹಿಂತಿರುಗಿ ಹೋಗಿ ಮತ್ತೆ ಮತ್ತೆ ಬರುತ್ತಿದ್ದರು. ಕೆಲವರು ಅಲ್ಲಿಗೆ ಅನೇಕ ಬಗೆಯ ವಾಹನಗಳಲ್ಲೂ ಕೆಲವರು ವಿವಿಧ ವಿಮಾನಗಳಲ್ಲೂ ಬರುತ್ತಾ, ಸಂತೋಷದಿಂದ ಆಶೀರ್ವಾದವಚನ

ಸಮಾಗಚ್ಛಂತಿ ಗಚ್ಛಂತಿ ಈರಯನ್ನಾಶಿಷೋಃ ಮುದಾ ।
ಕೇಚಿದ್ಯಥಾಗತಾ ಯಾಂತಿ ಕ್ರುದ್ಧಾಃ ಶಾಪಪ್ರದಾಯಿನಃ ॥ ೧೬ ॥

ನಿರ್ಗತೋದರಸೂಕ್ಷ್ಮಾಶ್ಚ ಗಚ್ಛಂತಿ ಸುವಿಮಾನಿತಾಃ ।
ಸಮ್ಮಾನಿತಾಸ್ತಥಾನ್ಯೇ ಸು ಪಿತರಃ ಶ್ರಾದ್ಧಪೂಜಿತಾಃ ॥ ೧೭ ॥

ಮಹೋತ್ಸವಮಿವಾಲಕ್ಷ್ಯ ವಿಸ್ಮಿತೋ ಮುನಿರುತ್ಥಿತಃ ।
ಗತೇ ಪಿತೃಗಣೇ ಪುತ್ರಾಃ ಸಕಲತ್ರಾ ಗೃಹಾನ್ಯಯುಃ ॥ ೧೮ ॥

ನಿರ್ಜನಂ ಧ್ರುವತೀರ್ಥಂತು ವೃತವೇಲಮಿವಾಭವತ್ ।
ತತ್ರೈಕಾಂತೇ ಕೃಶಾಂಗೋಽಥ ಕ್ಷುತ್‌ಕ್ಷಾಮೋ ಗತಿವಿಹ್ವಲಃ ॥ ೧೯ ॥

ಗಳನ್ನು ಹೇಳುತ್ತ ಹೋಗುತ್ತಲೂ ಇರುವರು. ಕೆಲವರು ಅಲ್ಲಿಗೆ ಬಂದು ಏನನ್ನೂ ಪಡೆಯದೆ ಕೋಪದಿಂದ ತಮ್ಮ ವಂಶದವರಿಗೆ ಶಾಪವನ್ನು ಕೊಡುತ್ತಾ ಬಂದಂತೆಯೇ ಹೋಗುತ್ತಿದ್ದರು.

೧೭. ಅಲ್ಲಿಗೆ ಬಂದ ಕೆಲವರು ಬತ್ತಿದ ಹೊಟ್ಟೆಯುಳ್ಳವರಾಗಿ ಕೃಶರಾಗಿ ಅವಮಾನಗೊಂಡವರಾಗಿ ಹೋಗುತ್ತಿದ್ದರು. ಮತ್ತೆ ಕೆಲವರು ಪಿತೃಗಳು ಶ್ರಾದ್ಧದಿಂದ ಪೂಜಿತರಾಗಿ ಗೌರವವನ್ನು ಪಡೆದು ಹೋಗುತ್ತಿದ್ದರು.

೧೮. ಹೀಗೆ ನಡೆಯುತ್ತಿರುವುದನ್ನು ಮಹೋತ್ಸವದಂತೆ ನೋಡಿದ ಆ ಋಷಿಯು ಆಶ್ಚರ್ಯಗೊಂಡು ಎದ್ದನು. ಅಲ್ಲಿಗೆ ಬಂದ ಪಿತೃಗಳ ಗುಂಪು ಹೊರಟುಹೋಗಲಾಗಿ, ಕುಟುಂಬ ಸಹಿತರಾದ ಪುತ್ರರು ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು.

೧೯–೨೦. ಬಳಿಕ ಧ್ರುವತೀರ್ಥವು ಜನರಿಲ್ಲದುದಾಗಿ ಸಮುದ್ರದ ದಡದಿಂದ ಸುತ್ತುವರಿದಂತಾಯಿತು. ಅದರೆ ಅಲ್ಲಿ ಮರೆಯಲ್ಲಿ ಅತಿ ಕೃಶಾಂಗನೂ ಹಸಿವಿನಿಂದ ಬತ್ತಿದವನೂ ನಡೆಯಲಾರದೆ ಚಿಂತೆಯುಳ್ಳವನೂ, ನಡುಗುತ್ತಿರು

ವೇಪಥುಃ ಕೋಟರಾಕ್ಷಶ್ಚ ಪೃಷ್ಠಲಗ್ನ ಲಘೂದರಃ ।
ಊರುಚರ್ಮಾಸ್ಥಿರುಕ್ತ್ರಸ್ತೋ ಜೃಂಭಮಾಣೋ ಭೃಶಂ ಕೃಶಃ ॥ ೨೦ ॥

ನ ವಾಕ್ಚ ಶ್ರೂಯತೇ ತಸ್ಯ ಕ್ಷುದ್ರಪಕ್ಷಿ ರವೋಯಥಾ ।
ಕೋ ಭವಾನ್ವಿಕೃತಾಕಾರೋ ವೇಷ್ಟಿತೋ ಮಶಕೈರ್ಬಹು ॥ ೨೧ ॥

ನ ಗಚ್ಛಸಿ ಯಥಾಸ್ಥಾನಮಾಗತಸ್ತು ನಿರುದ್ಯಮಃ ।
ಯಥಾವತ್ಪೃಚ್ಛತೇ ಮಹ್ಯಂಕಥಯಾತ್ಮ ವಿಚೇಷ್ಟಿತಂ ॥ ೨೨ ॥

ಮಮಾದ್ಯ ನೈತ್ಯಕಂ ಕರ್ಮ ತೀರ್ಥೇಽಸ್ಮಿನ್ನಶ್ಯತೇಽನಿಶಂ ।
ಇಮಾನುಚ್ಚಾವಚಾರ್ಜಂತೂನ್ದೃಷ್ಟ್ವಾ ಮಾಂ ಮೋಹ ಆವಿಶತ್॥ ೨೩ ॥

ವವನೂ, ಪೊಟರೆಯಂತೆ ಗುಳಿಬಿದ್ದಿರುವ ಕಣ್ಣುಳ್ಳವನೂ, ಬತ್ತಿ ಬೆನ್ನಿಗೆ ಸೇರಿ ಹೋಗಿರುವ ಹೊಟ್ಟೆಯುಳ್ಳವನೂ, ಚರ್ಮಾಸ್ಥಿಗಳಿಂದ ಕೂಡಿದ ತೊಡೆಯುಳ್ಳವನಾಗಿ ರೋಗಿಯಾಗಿ ಹೆದರಿರುವವನೂ, ಆಕಳಿಸುತ್ತಿರುವವನೂ ಆದ ಒಬ್ಬನು ಮಾತ್ರ ಉಳಿದಿದ್ದನು.

೨೧–೨೨, ಚಿಕ್ಕ ಹಕ್ಕಿಯ ಧ್ವನಿಯಂತೆ ಅವನ ಧ್ವನಿಯೂ ಕೇಳಿಸುತ್ತಲೇ ಇರಲಿಲ್ಲ. ಮುನಿ ಅವನನ್ನು "ವಿಕಾರರೂಪನೂ, ಹೆಚ್ಚು ಸೊಳ್ಳೆಗಳು ಸುತ್ತಿಕೊಂಡಿರುವನೂ ಆದ ನೀರು ಯಾರು? ಯಾವ ಕೆಲಸವೂ ಇಲ್ಲದೆ ಸುಮ್ಮನೆ ಇಲ್ಲಿಗೆ ಬಂದಿರುವ ನೀನು ಮತ್ತೆ ನಿನ್ನೆಡೆಗೇಕೆ ಹೋಗುವುದಿಲ್ಲ? ಕೇಳುತ್ತಿರುವ ನನಗೆ ನಿನ್ನ ವಿಚಾರವನ್ನು ನಿಜವಾಗಿ ಹೇಳು,

೨೩. ಈ ತೀರ್ಥದಲ್ಲಿ ಯಾವಾಗಲೂ ನಡೆಯುತ್ತಿದ್ದ ನನ್ನ ನಿತ್ಯಕರ್ಮವು ಈಗ ಹಾಳಾಗುತ್ತಿದೆ. ನಿನ್ನ ಸುತ್ತಲೂ ಇರುವ ಈ ಹಲವುಬಗೆಯ ಪ್ರಾಣಿಗಳನ್ನು ನೋಡಿ ನನಗೆ ಅಜ್ಞಾನವುಂಟಾಗಿದೆ.

ತ್ವಾಂ ದೃಷ್ಟ್ವೇದೃಕ್ಸ್ವರೂಪಂಚ ಕ್ರಿಯಾ ಮೇ ಸಾ ಗತಾ ತ್ವಯಿ ।
ವಿಸ್ರಬ್ಧಃ ಕಥಯಾಸ್ಮಾಕಂ ಕರೋಮಿ ಚ ಹಿತಂ ತವ ॥ ೨೪ ॥

॥ ಜಂತುರುವಾಚ ॥

ಬೃಹನ್ನಿಮಿತ್ತಮುದ್ದಿಶ್ಯೈವ ಪಿತೃಣಾಂ ತೃಪ್ತಿಕಾರಕಂ ।
ಧ್ರುವತೀರ್ಥೇ ಚ ಯಃ ಶ್ರಾದ್ಧಂ ಪುನಃ ಕುರ್ಯಾತ್ತಿಲೋದಕಂ ॥ ೨೫ ॥

ತಿಲತೃಪ್ತಾ ದಿವಂ ಯಾಂತಿ ಪಿತರಸ್ತೇನ ಪುತ್ರಿಣಃ ।
ಸೋಽಹಂ ಸ್ವಾಂತರಿಕಾದತ್ತಸ್ತ್ವತ್ಯರ್ಥಸ್ತು ಬಭುಕ್ಷಿತಃ ॥ ೨೬ ॥

ಯೋನಿ ಸಂಕರದೋಷೇಣ ನರಕಂ ಸಮುಪಾಶ್ರಿತಃ ।
ಆಶಾಪಾಶಶತೈರ್ಬದ್ಧಃ ಶತವರ್ಷೈರಿಹಾಗತಃ ॥ ೨೭ ॥

---

೨೪. ಈ ರೀತಿಯಾಗಿರುವ ನಿನ್ನನ್ನು ನೋಡಿ ನನ್ನ ಆ ಕಾರ್ಯವೆಲ್ಲವೂ ನಿನ್ನಲ್ಲಿ ನಿಂತಿರುವುದಾಗಿದೆ. ನಂಬಿಕೆಯಿಟ್ಟು ಧಾರಾಳವಾಗಿ ವಿಚಾರವನ್ನು ನಮಗೆ ಹೇಳು. ನಿನಗೆ ಹಿತವನ್ನು ಮಾಡುತ್ತೇನೆ " ಎಂದನು.

೨೫–೨೬. ಜಂತು–" ನನ್ನ ಕಾರಣವು ದೊಡ್ಡದು. ಯಾರು ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವ ಶ್ರಾದ್ಧವನ್ನೋ ತಿಲತರ್ಪಣವನ್ನೋ ಈ ದಿನ ಈ ಧ್ರುವತೀರ್ಥದಲ್ಲಿ ಮಾಡಿದರೋ ಅವರನ್ನು ಪುತ್ರರನ್ನಾಗಿ ಪಡೆದಿರುವ ಪಿತೃಗಳು ತಮ್ಮ ಮಕ್ಕಳು ಕೊಟ್ಟ ತಿಲದಿಂದ ತೃಪ್ತರಾಗಿ ಸ್ವರ್ಗಕ್ಕೆ ಹೋದರು. ನಾನಾದರೋ ನನ್ನವರು ನನ್ನ ತೃಪ್ತಿಗಾಗಿ ಏನನ್ನೂ ಕೊಡದಿರುವುದರಿಂದ ಹಸಿವುಳ್ಳವನಾಗಿರುವೆನು.

೨೭. ಯೋನಿಸಂಕರದೋಷದಿಂದ ನರಕಕ್ಕೆ ಹೋದ ನಾನು ನೂರಾರು ಆಸೆಗಳೆಂಬ ಹಗ್ಗಗಳ ಕಟ್ಟಿಗೊಳಗಾಗಿ ನೂರು ವರ್ಷಗಳ ಮೇಲೆ ಇಲ್ಲಿಗೆ ಬಂದೆನು.

ಅಗತಿರ್ಗಮನೇ ಮೇ ಸ್ಯಾತ್ತ್ರೇ ತ್ರಿಕಾಪ್ಯೈಃ ಸಮಾಗತೈಃ ।
ಸಂತಾನೈಃ ಪುಷ್ಟವಪುಷೋ ದತ್ತಶ್ರಾದ್ಧೈಃ ಕೃತೋದಕೈಃ ।
ಬಲಯುಕ್ತಾ ಯಯುಃ ಸ್ವರ್ಗಂ ನಿರ್ಬಲಸ್ಯ ಕುತೋ ಗತಿಃ ॥ ೨೮ ॥

ಯೇಷಾಂ ಸಂತತಿರಕ್ಷಯ್ಯಾ ತಿಷ್ಠತ್ಯೇವಂ ಪ್ರಜಾವತೀ ।
ತೇ ಸ್ವಧಾಪೂಜಿತಾಃ ಪುತ್ರೈರ್ಗಚ್ಛಂತಿ ಪರಮಾಂ ಗತಿಂ ॥ ೨೯ ॥

ಅದ್ಯ ರಾಜ್ಞಸ್ತು ಪಿತರಶ್ಚಂದ್ರಸೇನಸ್ಯ ಪೂಜಿತಾಃ ।
ದೃಷ್ಟಾಸ್ತ್ವಯಾ ತ್ರಿಕಾಲಜ್ಞ ದಿವ್ಯದೃಷ್ಟ್ಯಾ ದಿವಂ ಗತಾಃ ॥ ೩೦ ॥

ಬ್ರಾಹ್ಮಣಾನಾಂಚ ವೈಶ್ಯಾನಾಂ ಶೂದ್ರಾಣಾಂ ಪಿತರಸ್ತಥಾ ।
ಪ್ರತಿಲೋಮಾನುಲೋಮಾನಾಂ ಶೂದ್ರಾಣಾಂ ಶ್ರಾದ್ಧಕರ್ಮಿಣಾಂ ॥೩೧॥

ಸರ್ವೇಷಾಂಚ ತ್ವಯಾ ದೃಷ್ಟಂ ಯೇಷಾಂ ಸಂತತಿರವ್ಯಯಾ ॥ ೩೨ ॥

---

೨೮. ತಾಪತ್ರಯದಿಂದ ಕೂಡಿ ಬಂದಿರುವ ನನಗೆ ಹೋಗಲು ಗತಿಯಿಲ್ಲವಾಗಿದೆ ತಮ್ಮ ಸಂತಾನದವರು ಮಾಡಿದ ಶ್ರಾದ್ಧತರ್ಪಣಗಳಿಂದ ಪುಷ್ಟಿಗೊಂಡ ದೇಹವುಳ್ಳವರಾಗಿ ಬಲಶಾಲಿಗಳಾದವರು ಸ್ವರ್ಗಕ್ಕೆ ಹೋದರು. ನಿರ್ಬಲನಾದವನು ಹೋಗುವುದೆಲ್ಲಿ !

೨೯. ಯಾರ ಸಂತತಿಯು ನಾಶವಿಲ್ಲದುದಾಗಿ ಹೀಗೆ ಪುತ್ರರುಳ್ಳುದಾಗಿರುವುದೋ ಅವರು ಮಕ್ಕಳು ಮಾಡುವ ಶ್ರಾದ್ಧಪೂಜೆಗಳಿಂದ ಪರಮ ಗತಿಯನ್ನು ಪಡೆಯುವರು.

೩೦. ತ್ರಿಕಾಲಜ್ಞನೇ, ಈ ದಿನ ಚಂದ್ರಸೇನ ರಾಜನ ಪಿತೃಗಳು ಪೂಜಿತರಾಗಿ ಸ್ವರ್ಗಕ್ಕೆ ಹೋದುದನ್ನು ದಿವ್ಯದೃಷ್ಟಿಯಿಂದ ನೀನು ನೋಡಿರುವೆ.

೩೧–೩೨. ಅಲ್ಲದೆ ಶ್ರಾದ್ಧವನ್ನು ಮಾಡಿದ ಅಕ್ಷಯವಾದ ಸಂತತಿಯುಳ್ಳ ಬ್ರಾಹ್ಮಣ ವೈಶ್ಯ ಶೂದ್ರ ಪಿತೃಗಳೂ, ಅನುಲೋಮ ವಿಲೋಮರಾದ ಶೂದ್ರ ಪಿತೃಗಳೂ ಸ್ವರ್ಗಕ್ಕೆ ಹೋದುದನ್ನೂ ನೀನು ನೋಡಿರುವೆ " ಎಂದನು.

ಏವಂ ಪೃಷ್ಟಃ ಸ ವಿಪ್ರೇಣ ಕಥಯಾಮಾಸ ಕಾರಣಂ |
ಪುನಃ ಪಪ್ರಚ್ಛ ತಂ ಜಂತುಂ ಕೌತೂಹಲಸಮನ್ವಿತಃ || ೩೩ ||

ತವಾಪಿ ಸಂತತಿಸ್ತ್ವಾತ ನಾಸ್ತಿ ದೈವಾದ್ಯಥೋಚಿತಾ |
ಯದಿ ಕಶ್ಚಿದುಪಾಯೋಽತ್ರ ಮಹ್ಯಂ ತವ ಹಿತೈಷಿಣೇ || ೩೪ ||

ವದ ಸರ್ವಂ ಕರಿಷ್ಯಾಮಿ ಯದಿ ಸತ್ಯಂ ವಚೋ ಮಮ || ೩೫ ||

ತತಃ ಸ ಕಥಯಾಮಾಸ ದುಃಸ್ಥಃ ಪಿತೃಗಣೈರ್ವೃತಃ |
ಇಮೇ ಯೇ ಮಮ ದೇಹೇ ತು ಭವಂತಿ ಮಶಕಾಃ ಕೃಶಾಃ |
ಸಂತಾನಪ್ರಕ್ಷಯಾದೇತೇ ಮಮ ದೇಹಂ ಸಮಾಶ್ರಿತಾಃ || ೩೬ ||

ತಂತುಮಾತ್ರಮಹಂ ತೇಷಾಂ ಮಮ ತಂತುಮಯೀ ಸಕೃತ್ |
ಅಸ್ತೇ ನಗರ್ಯಾ ಮಧ್ಯೇ ತು ಚಂದ್ರಸೇನಸ್ಯ ವೇಶ್ಮನಿ || ೩೭ ||

---

೩೩. ಬ್ರಾಹ್ಮಣನು ಕೇಳಲು ಹೀಗೆ ಕಾರಣವನ್ನು ಹೇಳಿದ ಆ ಪ್ರಾಣಿಯನ್ನು ಕುತೂಹಲದಿಂದ ಆತನು ಮತ್ತೆ ಕೇಳಿದನು.

೩೪-೩೫. 'ಅಪ್ಪಾ, ನಿನಗೂ ದೈವವಶದಿಂದ ತಕ್ಕುದಾದ ಸಂತಾನವು ಇಲ್ಲವೆ ? ಇದಕ್ಕೆ ಎಂದರೆ ನಿನಗೆ ಒಳ್ಳೆಯ ಗತಿಯಾಗಲು ಯಾವುದಾದರೂ ಉಪಾಯವಿದ್ದರೆ ನಿನ್ನ ಹಿತೈಷಿಯಾದ ನನಗೆ ಹೇಳು. ನನಗೆ ಸಾಧ್ಯವಾದರೆ ನೀನು ಹೇಳುವುದೆಲ್ಲವನ್ನೂ ಮಾಡುತ್ತೇನೆ.'

೩೬. ಬಳಿಕ ತನ್ನ ಪಿತೃಗಣದಿಂದ ಕೂಡಿದ ಆ ದುಃಖಿತವ್ಯಕ್ತಿಯು ಹೀಗೆ ಹೇಳಿದನು. " ನನ್ನ ಮೈಯ್ಯ ಸುತ್ತಲೂ ಚಿಕ್ಕ ಸೊಳ್ಳೆಗಳಾಗಿರುವವರು ತಮ್ಮ ಸಂತತಿ ನಾಶವಾಗಿರುವುದರಿಂದ ನನ್ನನ್ನು ಆಶ್ರಯಿಸಿರುವರು.

೩೭-೩೮. ನಾನು ಅವರಿಗೆ ತಂತು (ಅಲ್ಪ) ಮಾತ್ರ ಸಂಬಂಧವುಳ್ಳವನಾಗಿರುವೆನು. ನನಗೆ ಸ್ವಲ್ಪ ಸಂಬಂಧವುಳ್ಳವಳೊಬ್ಬಳಿರುವಳು. ಹೇಳುತ್ತೇನೆ. ಈ ನಗರದ ಮಧ್ಯದಲ್ಲಿ ಚಂದ್ರಸೇನರಾಜನ ಅರಮನೆಯಲ್ಲಿ ರಾಣಿಯ ದಾಸಿಯಾದ

ಮಹಿಷ್ಯಾಃ ಪ್ರೇಷಣೇ ನಿತ್ಯಂ ದಾಸೀ ನಾಮ್ನಾ ಪ್ರಭಾವತೀ ।
ತಸ್ಯಾ ದಾಸೀ ಕರ್ಮಕರೀ ವಿರೂಪನಿಧಿನಾಮತಃ ॥ ೩೮ ॥

ಅಸ್ಮಾಕಂ ಸಂತತೇಸ್ತಂತುಸ್ತಸ್ಯ ಶ್ರಾದ್ಧಕೃತೇ ವಯಂ ।
ಆಶಯಾ ಬದ್ಧಹೃದಯಾಃ ಶ್ರಾದ್ಧತರ್ಪಣಹೇತವಃ ॥ ೩೯ ॥

ಸ್ಥಿತಾ ಏತಾವದೇವಂತು ಕಾಲಂ ಯಾಸ್ಯಾಮಹೇಽಂಬುಧೌ ।
ನರಕೇ ತ್ವಪ್ರತಿಷ್ಠೇತು ನಿರಾಶಾಃ ಸ್ವೇನ ಕರ್ಮಣಾ ॥ ೪೦ ॥

ಶ್ರುತ್ವೈತತ್ಸ ತ್ರಿಕಾಲಜ್ಞೋ ಮೋಹಾವಿಷ್ಟೋಽಬ್ರವೀದಿದಂ ।
ಕಥಂ ನಿಕೃಷ್ಟಯೋನ್ಯಾ ಯದ್ದತ್ತಂಚಾಪದ್ಯತೇ ಹವಿಃ ॥ ೪೧ ॥

ವಿಧಿರತ್ರ ಕಥಂ ತಸ್ಯಾ ಯೇನ ಯೂಯಂ ಸಪುತ್ರಿಣಃ ।
ಪ್ರೋವಾಚ ಸ ತ್ರಿಕಾಲಜ್ಞಂ ಜ್ಞಾನಕ್ಲಿಷ್ಟಂ ಕೃಪಾನ್ವಿತಂ ॥ ೪೨ ॥

ಪ್ರಭಾವತಿಯೆಂಬುವಳಿರುವಳು. ಆ ಪ್ರಭಾವತಿಯ ಕೆಲಸಗಳನ್ನು ಮಾಡುವ ವಿರೂಪಕನಿಧಿಯೆಂಬುವಳೊಬ್ಬಳಿರುವಳು.

೩೯–೪೦. ನಮ್ಮ ಸಂತಾನಕ್ಕೆ ಸೇರಿದ ಅವಳು ಮಾಡುವ ಶ್ರಾದ್ಧತರ್ಪಣಗಳ ಆಶೆಗೆ ಕಟ್ಟುಬಿದ್ದ ಮನಸ್ಸುಳ್ಳವರಾಗಿ ಇದುವರಿಗೂ ಕಾಯುತ್ತ ಇದ್ದೆವು. ಇನ್ನು ಹೊರಡುತ್ತೇವೆ. ನರಕವಿಲ್ಲದಿದ್ದರೂ ನಿರಾಶರಾದ ನಾವು ನಮ್ಮ ಕರ್ಮವಶದಿಂದ ಸಮುದ್ರದಲ್ಲಿ ಹೋಗಿ ಬೀಳುತ್ತೇವೆ."

೪೧. ಆ ತ್ರಿಕಾಲಜ್ಞನು ಅವನ ಮಾತನ್ನು ಕೇಳಿ ಮೋಹಿತನಾಗಿ 'ಹೀನಯೋನಿಯುವಳು ಕೊಡುವುದು ಹೇಗೆ ಶ್ರಾದ್ಧಾರ್ಹವಾದ ಹವಿಸ್ಸಾಗುವುದು? ಹೇಗೆ ಅವಳು ನಿಮಗೆ ಪುತ್ರಿಯಾಗುವಳು? ಅವಳು ನಿಮಗೆ ಶ್ರಾದ್ಧವನ್ನು ಮಾಡುವುದಕ್ಕೆ ವಿಧಿಯೇನು?' ಎಂದನು.

೪೨. ಆ ದುಃಖಿ ದಯಾಪರನೂ, ತ್ರಿಕಾಲಜ್ಞನೂ, ಕಷ್ಟವನ್ನರಿತುದರಿಂದ (ಜ್ಞಾನ) ಕ್ಲೇಶವುಳ್ಳವನೂ ಆದ ಆ ಮುನಿಗೆ ಮುಂದಿನ ಮಾತನ್ನು ಹೇಳಿದನು.

ಪೂರ್ವಕರ್ಮವಿಪಾಕೇನ ಯಾಂ ಯಾಂ ಗತಿಮಧೋಮುಖೀಂ ।
ಊರ್ಧ್ವಾಂ ಯಾಂ ಚಾಪಿ ಪಿತರಃ ಪುತ್ರಿಣಃ ಪುತ್ರನಿಹತೇ ॥ ೪೩ ॥

ಶ್ರಾದ್ಧಂ ಪಿಂಡೋದಕಂ ದಾನಂ ನಿತ್ಯಂ ನೈಮಿತ್ತಿಕಂ ತಥಾ ।
ನಾನ್ಯಾ ಗತಿಃ ಪಿತೄಣಾಂ ಸ್ಯಾತ್ಪಿತರಸ್ತೇನ ಪುತ್ರಿಣಃ ॥ ೪೪ ॥

ಅಪಿ ಸ್ಯಾತ್ಸಕುಲೇಽಸ್ಮಾಕಂ ಯೋ ನೋ ದದ್ಯಾಜ್ಜಲಾಂಜಲಿಂ ।
ನದೀಷು ಬಹುತೋಯಾಸು ಶೀತಲಾಸು ವಿಶೇಷತಃ ॥ ೪೫ ॥

ವಿಶೇಷಾತ್ತೀರ್ಥಮಧ್ಯೇ ತು ತಿಲಮಿಶ್ರಂ ಜಲಾಂಜಲಿಂ ।
ರೌಪ್ಯಜುಷ್ಟಜಲೇನಾಥ ನಾಭಿದಘ್ನೇ ಜಲೇ ಸ್ಥಿತಃ ॥ ೪೬ ॥

ದರ್ಭಪಾಣಿಸ್ತ್ರಿ ಸ್ತ್ರಿಗೋತ್ರೇ ಪಿತೃನಾಮ ಸಮುಚ್ಚರನ್ ।
ತೃಪ್ಯತ್ವೇವಂ ನಾಮ ಶರ್ಮ ಸ್ವಧಾಕಾರಮುದಾಹರನ್ ॥ ೪೭ ॥

೪೩–೪೪. "ತಮ್ಮ ಪೂರ್ವಕರ್ಮ ಪರಿಪಾಕದಿಂದ ಊರ್ಧ್ವ (ಉತ್ತಮ) ಗತಿಯನ್ನಾಗಲಿ, ಅಧೋಗತಿಯನ್ನಾಗಲಿ ಪಡೆದಿರುವ ಪಿತೃಗಳು ಮಕ್ಕಳುಳ್ಳವರಾಗಿದ್ದರೆ ತಮ್ಮ ಆ ಮಕ್ಕಳಿಂದ ನಿತ್ಯನೈಮಿತ್ತಿಕಗಳಾದ ಶ್ರಾದ್ಧಪಿಂಡೋದಕ ದಾನಗಳನ್ನು ಅಪೇಕ್ಷಿಸುವರು. ಪಿತೃಗಳಿಗೆ ಅದನ್ನು ಬಿಟ್ಟರೆ ಬೇರೆಯ ಗತಿಯಿಲ್ಲ. ಆದುದರಿಂದ ಶ್ರಾದ್ಧಾದಿಗಳನ್ನು ಮಾಡುವ ಮಕ್ಕಳಿಂದಲೇ ಪಿತೃಗಳು ಪುತ್ರವಂತರೆನಿಸುವರು ಎಂದು ಶ್ರುತಿಯಿದೆ.

೪೫. ಪಿತೃಗಳು ಹೆಚ್ಚುನೀರುಳ್ಳ ಅದರಲ್ಲೂ ಮುಖ್ಯವಾಗಿ ತಣ್ಣಗಿರುವ ನೀರುಳ್ಳ ನದಿಗಳಲ್ಲಿ ನಮಗೆ ಜಲಾಂಜಲಿಯನ್ನು ಕೊಡುವವನು ನಮ್ಮ ವಂಶದಲ್ಲಿ ಜನಿಸಿಯಾನೆ ? ಎಂದು ಬಯಸುತ್ತಿರುವರು.

೪೬–೪೭. ವಿಶೇಷವಾಗಿ ತೀರ್ಥಮಧ್ಯದಲ್ಲಿ, ಹೊಕ್ಕುಳವರೆಗೆ ನೀರು ಬರುವಷ್ಟು ಆಳದಲ್ಲಿ ಪವಿತ್ರವನ್ನು ಧರಿಸಿ ನಿಂತು, ಬೆಳ್ಳಿಯಿಂದಲೂ, ಎಳ್ಳನಿಂದಲೂ ಕೂಡಿದ ಬೊಗಸೆಯ ನೀರನ್ನು (ಜಲಾಂಜಲಿಯನ್ನು) ಮೂರು ಮೂರುಸಾರಿ ಪಿತೃಗಳ ಹೆಸರನ್ನೂ ಗೋತ್ರವನ್ನೂ ಹೇಳಿ, ಈ ಹೆಸರಿನವರು ತೃಪ್ತರಾಗಲಿ. ಎಂದು ಸ್ವಧಾಕಾರಪೂರ್ವಕವಾಗಿ ಅರ್ಪಿಸಬೇಕು.

ಆದಾವೇಕಾಂಜಲಿರ್ದೇವೇ ತು ತಿಸ್ರೋನ್ಯೇ ತರ್ಪಣೇ ಸ್ಮೃತಾಃ ।
ದೇವರ್ಷಿಪಿತೃಸಂಘಾನಾಂ ಕ್ರಮಾದ್ಜ್ಞೇಯಂ ವಿಚಕ್ಷಣೈಃ ॥ ೪೮ ॥

ತೃಪ್ಯಧ್ವಮಿತಿ ಚಾಂತೇ ವೈ ಮತ್ರಂ ಮಂತ್ರಪ್ರತಿಕ್ರಿಯಾಃ ।
ಉದೀರತಾಮಂಗಿರಸ ಆಯಂತು ನ ಇತೀರಯೇತ್ ॥ ೪೯ ॥

ಪಿತ್ರೇ ಪ್ರಥಮತೋ ದದ್ಯಾನ್ಮಾತ್ರೇ ದದ್ಯಾತ್ತಥಾಚರಣ ।
ಗೋತ್ರಂ ಮಾತಾ ನಾಮ ದೇವೀ ತೃಪ್ಯತ್ವೇವಂ ಸ್ವಧೋಚ್ಚರಣ ॥ ೫೦ ॥

ಏವಂ ಮಾತಾಮಹಃ ಶರ್ಮಾ ಗೋತ್ರೇ ಪಿತಾಮಹಸ್ತಥಾ ।
ಊರ್ಧ್ವಂ ಪಿತೃಭ್ಯೋ ಯೇ ಚೇಹ ತೇ ಪಿತರ ಇಹೋಚ್ಯತೇ ॥ ೫೧ ॥

---

೪೮. ವಿದ್ವಾಂಸರಾದವರು ದೇವ ತರ್ಪಣದಲ್ಲಿ ಒಂದು ಸಾರಿಯೂ, ಋಷಿತರ್ಪಣದಲ್ಲಿ ಎರಡುಸಾರಿಯೂ, ಪಿತೃತರ್ಪಣದಲ್ಲಿ ಮೂರುಸಾರಿಯೂ ಜಲಾಂಜಲಿಯನ್ನು ಅರ್ಪಿಸಬೇಕೆಂಬುದನ್ನು ಅರಿಯಬೇಕು.

೪೯ ತರ್ಪಣದಲ್ಲಿ ತಂದೆಗೆ ಮೊದಲನೆಯ ಜಲಾಂಜಲಿಯನ್ನರ್ಪಿಸುವಾಗ ಉದೀರತಾಂ 'ಇತ್ಯಾದಿ ಮಂತ್ರವನ್ನೂ ಎರಡನೆ ಜಲಾಂಜಲಿಯನ್ನರ್ಪಿಸುವಾಗ ಅಂಗಿರಸೋನಃ ಎಂಬ ಮಂತ್ರವನ್ನೂ ಹೇಳಬೇಕು. ಕೊನೆಯಲ್ಲಿ ತೃಪ್ಯಧ್ವಂ (ತೃಪ್ತರಾಗಿರಿ.) ಎನ್ನಬೇಕು.

೫೦–೫೨ ಮುಂದಿನ ಪಿತೃಗಳಿಗೆ ಎಂದರೆ ಪಿತಾಮಹರಿಗೆ ಯೇಚೇಹ ಪಿತರೋ ಎಂಬ ಮಂತ್ರವನ್ನೂ ಪ್ರಪಿತಾಮಹರಿಗೆ ಮಧುವಾತಾ ಋತಾಯತೇ ಎಂಬ ಮಂತ್ರವನ್ನೂ ಪೂರ್ವದಂತೆ ಜಲಾಂಜಲಿಯನ್ನರ್ಪಿಸುವಾಗ ಹೇಳಬೇಕು. ಮೊದಲು ಪಿತೃಗಳಿಗೂ ಆಮೇಲೆ ಮಾತೃಪಿತಾಮಹಿ, ಪ್ರಪಿತಾಮಹಿಯರಿಗೂ ಇಂತಹ ಗೋತ್ರದ ಈ ಹೆಸರಿನ ತಾಯಿ ತೃಪ್ತಳಾಗಲಿ ಸ್ವಧೆ. ಎಂದು ತರ್ಪಣವನ್ನು ಮಾಡಬೇಕು. ಬಳಿಕ ಹಾಗೆಯೇ ಗೋತ್ರದಲ್ಲಿ ಮಾತಾಮಹ

ಪಿತಾಮಹೀಂ ಪ್ರಪಿತಾಮಹೀಂ ಪತ್ನ್ಯಾ ಮಾತೃವತ್ಸಹ ।
ಏವಂ ಮಾತಾಮಹಾನಾಂಚ ಪೂರ್ವವತ್ಕ್ರಮಶೋ ಬುಧಃ ॥ ೫೨ ॥

ನಮೋ ವ ಇತಿ ಮಂತ್ರೇಣ ಪ್ರತ್ಯೇಕಂ ತ್ರಿಯಂತ್ರಿಷು ॥ ೫೩ ॥

ಗೋತ್ರಾಚ್ಚಾರಂ ಪ್ರಕುರ್ವೀತ ಅಸೂರ್ಯಾನ್ನಾಶಯಾಮಹೇ ।
ಗೋತ್ರಾಯ ಪಿತ್ರೇ ಮಹಾಯ ಶರ್ಮಣೇ ಚೇದಮಾಸನಂ ॥ ೫೪ ॥

ಗೋತ್ರಾಯೈ ಮಾತ್ರೇ ಮಹ್ಯೈತು ದೇವ್ಯೈ ಚಾಸನಕರ್ಮಣಿ ।
ಗೋತ್ರಃ ಪಿತಾಮಹಃ ಶರ್ಮಾ ಗೋತ್ರಾ ಮಾತಾಮಹೀ ಮಹೀ ॥ ೫೫ ॥

ಅರ್ಘ್ಯಪಾತ್ರಸಂಕಲ್ಪೇ ತು ಪಿಂಡದಾನೇಽವನೇಜನೇ ।
ಗೋತ್ರಸ್ಯ ಪಿತುರ್ಮಹಸ್ಯ ಶರ್ಮಣೋಕ್ತಸ್ಯ ಕರ್ಮಣಿ ॥ ೫೬ ॥

(ತಾಯಿಯತಂದೆ), ಮಾತುಃಪಿತಾಮಹ (ತಾಯಿಯ ಅಜ್ಜ) ಮೊದಲಾದವರಿಗೂ ಪಂಡಿತನಾದವನು ಈ ಶರ್ಮನಿಗೆ ಎಂದು ಕ್ರಮವಾಗಿ ಪೂರ್ವದಂತೆ ತರ್ಪಣ ಮಾಡಬೇಕು.

೫೩. ನಮೋವಃಪಿತರಃ ಇತ್ಯಾದಿ ಮಂತ್ರದಿಂದ ಪ್ರತ್ಯೇಕವಾಗಿ ಪಿತ್ರಾದಿಗಳಿಗೆ ಮೂರುಸಾರಿ ವಂದನೋಕ್ತಿ.

೫೪. ಅಸೂರ್ಯಾನ್ನಾಶಯಾಮಹೇ ಎಂಬ ಮಂತ್ರದಿಂದ ಗೋತ್ರವನ್ನು ಹೇಳಿ, ಈ ಗೋತ್ರದ ಶರ್ಮನಾದ ಪಿತೃವಿಗೆ, ಪಿತಾಮಹನಿಗೆ, ಪ್ರಪಿತಾಮಹನಿಗೆ ಇದು ಆಸನ. ಎಂದು ಪೀಠವನ್ನರ್ಪಿಸಬೇಕು.

೫೫-೫೬. ಇಂತಹ ಗೋತ್ರದ ಹೆಸರಿನ ತಾಯಿಗೆ, ಅಜ್ಜಿ (ತಂದೆಯ ತಾಯಿ)ಗೆ, ತಂದೆಯ ಅಜ್ಜಿಗೆ ಎಂದು ಆಸನವನ್ನು ಕೊಡಬೇಕು. ಶ್ರಾದ್ಧಕರ್ಮದಲ್ಲೂ ಸಂಕಲ್ಪದಲ್ಲೂ ಅರ್ಘ್ಯಪಾದ್ಯದಲ್ಲೂ ಪಿಂಡದಾನದಲ್ಲೂ ಗೋತ್ರದ ಹೆಸರಿನ ಪಿತೃವಿಗೆ ಗೋತ್ರದ ಹೆಸರಿನ ಪಿತಾಮಹನಿಗೆ, ಪ್ರಪಿತಾಮಹನಿಗೆ, ಗೋತ್ರದ ಹೆಸರಿನ ತಾಯಿಗೆ, ಅಜ್ಜಿಗೆ ಮುತ್ತಜ್ಜಿಗೆ ಎಂದು ಹೇಳಬೇಕು.

ಗೋತ್ರಾಯೈ ಮಾತುರ್ಮಹಾಯೈ ದೇವ್ಯಾಶ್ಚಾಕ್ಷಯ ಕರ್ಮಣಿ ॥ ೫೭ ॥

ಆವಾಹನೇ ದ್ವಿತೀಯಾ ಚ ಚತುರ್ಥೀ ಪೂಜ್ಯಕರ್ಮಣಿ ।
ಪ್ರಥಮಾ ಚಾಶಿಷಿ ಪ್ರೋಕ್ತಾ ದತ್ತಸ್ಯಾಕ್ಷಯಕಾರಿಕಾ ।
ಶ್ರಾದ್ಧಪಕ್ಷೇ ತಥಾ ಷಷ್ಠೀ ಅಕ್ಷಯ್ಯಾಸನಯೋಃ ಸ್ಮೃತಾ ॥ ೫೮ ॥

ಪಿತುರಕ್ಷಯಕಾಲೇ ತು ಪಿತೄಣಾಂ ದತ್ತಮಕ್ಷಯಂ ।
ಏವಮೇತ್ತತ್ತು ಪುತ್ರೇಣ ಭಕ್ತಿಪೂರ್ವಂ ದ್ವಿಜೇನ ತು ॥ ೫೯ ॥

ನಾರ್ಯಪಿ ಶ್ರದ್ಧಯಾ ದತ್ತಂ ತದಾನಂತ್ಯಾಯ ಕಲ್ಪತೇ ।
ಶ್ರದ್ಧಯಾ ಬ್ರಾಹ್ಮಣೇನ್ನೈವ ಯಥಾ ಶ್ರಾದ್ಧವಿಧಿಕ್ರಿಯಾ ।
ಕೃತ್ವಾ ಶ್ರಾದ್ಧಂ ತು ಪಿತರೋ ಹೃಷ್ಟಾ ಮುಮುದಿರೇ ಸದಾ ॥ ೬೦ ॥

೫೭-೫೮. ಶ್ರಾದ್ಧದಲ್ಲಿ ಪಿತ್ರಾದಿಗಳನ್ನು ಆವಾಹಿಸುವಾಗ ಇಂತಹವರನ್ನು ಕರೆಯುತ್ತೇನೆ. ಎಂದು ದ್ವಿತೀಯಾವಿಭಕ್ತ್ಯಂತಪದವನ್ನೂ ಪೂಜಿಸುವಾಗ ಇಂತಹವರಿಗೆ ಎಂದು ಚತುರ್ಥೀವಿಭಕ್ತ್ಯಂತಪದವನ್ನೂ ಆಸನವನ್ನರ್ಪಿಸುವಾಗ ಷಷ್ಠೀವಿಭಕ್ತ್ಯಂತಪದವನ್ನೂ ಉಚ್ಚರಿಸಬೇಕು. ಹೀಗೆ ಮಾಡುವುದರಿಂದ ಶ್ರಾದ್ಧವು ಅಕ್ಷಯಫಲದಾಯಕವಾಗುವುದು. ಪಿತ್ರಾದಿಸ್ಥಾನದಲ್ಲಿರುವ ಬ್ರಾಹ್ಮಣರು ಕರ್ತೃವನ್ನು ಅಥವಾ ಕರ್ತೃಗಳನ್ನು ಆಶೀರ್ವದಿಸುವಾಗ ನೀನು ಇಂತಹವನಾಗು ಎಂದಾಗಲಿ ಇಂತಹವರು ಹೀಗೆ ಏಳ್ಗೆವಡೆಯಲಿ. ಎಂದಾಗಲಿ ಪ್ರಥಮಾವಿಭಕ್ತ್ಯಂತವಾದ ಪದವನ್ನೂ ಉಪಯೋಗಿಸಬೇಕು.

೫೯-೬೧. ತ್ರಿಕಾಲಜ್ಞನೇ, ತಂದೆಗೆ ಶ್ರಾದ್ಧಮಾಡುವುದರಿಂದ ಆತನಿಗೆ ಅಕ್ಷಯ ಸುಖವುಂಟಾಗುವಂತೆ ಅದೇ ಕಾಲದಲ್ಲಿ ಪಿತಾಮಹ ಪ್ರಪಿತಾಮಹಾದಿಗಳಿಗೂ ದ್ವಿಜನಾದ ಪುತ್ರನು ಭಕ್ತಿಪೂರ್ವಕವಾಗಿ ಶ್ರಾದ್ಧಮಾಡುವುದರಿಂದ ಅಕ್ಷಯಸುಖವುಂಟಾಗುವುದು. ಶ್ರಾದ್ಧವಿಧಿಯಲ್ಲಿ ಹೇಳಿರುವಂತೆ ಶ್ರದ್ಧೆಯಿಂದ ಪಿತ್ರಾದಿಗಳಿಗೆ ಅರ್ಪಿಸುವ ನೀರು ಕೂಡ ಅನಂತ ಸುಖಕರವಾಗುವುದು. ಆದುದರಿಂದ ಈ ತೀರ್ಥದಲ್ಲಿ ಶ್ರಾದ್ಧವನ್ನು ಪಡೆದ ಪಿತೃಗಳು ಸುಖವನ್ನು

ಜೋಷವಾಸ್ಯ ತ್ರಿಕಾಲಜ್ಞ ಗಚ್ಛಾವೋ ನರಕಾಯ ವೈ |
ಪೂರ್ವಕರ್ಮವಿಪಾಕೇನ ಚಿರಂತು ವಸಿತುಂ ಮುನೇ ॥ ೬೧ ॥

॥ ತ್ರಿಕಾಲಜ್ಞ ಉವಾಚ ॥

ಯೇ ಮಯಾಽಽಗತಾ ದೃಷ್ಟಾಸ್ತೀರ್ಥೇಽಸ್ಮಿನ್ಪಿತರೋಽಥ ವೈ |
ಬಹವಃ ಸ್ವಸ್ಥಮನಸೋ ಬಹವೋ ದುಃಸ್ಥಮಾನಸಾಃ ॥ ೬೨ ॥

ಪುತ್ರದತ್ತಂ ತಥಾ ಶ್ರಾದ್ಧಂ ಜಗ್ರಾಸೋದ್ವಿಗ್ನರೂಪಿಣಃ |
ಮೌನೇನ ಗಚ್ಛತಾಂ ತೇಷಾಂಕಿಮೇತದ್ವದ ನಿಶ್ಚಯಂ ॥ ೬೩ ॥

॥ ಅಗಸ್ತಿರುವಾಚ ॥

ಅತ್ರ ಯನ್ನಿಶ್ಚಯಂ ಶ್ರಾದ್ಧೇ ಪುತ್ರಸ್ಯ ವಿಫಲಂ ಭವೇತ್ |
ನರಸ್ಯ ಕರಣಂಕಿಂಚಿತ್ತನ್ಮೇ ನಿಗದತಃ ಶೃಣು ॥ ೬೪ ॥

ಪಡೆದು, ಸದಾಸಂತೋಷವುಳ್ಳವರಾದರು. ಮುನಿಯೇ, ಸುಮ್ಮನಿರು. ನಮಗೆ ಅಂತಹ ಶ್ರಾದ್ಧವಿಲ್ಲದಿರುವುದರಿಂದ, ನಾವು ಪೂರ್ವಕರ್ಮಪರಿಪಾಕದಂತೆ ನರಕದಲ್ಲಿ ಚಿರಕಾಲವಾಸಮಾಡಲು ಹೋಗುತ್ತೇವೆ. "

೬೨-೬೩. ತ್ರಿಕಾಲಜ್ಞ—ಈ ತೀರ್ಥಕ್ಕೆ ಬಂದ ಪಿತೃಗಳಲ್ಲಿ ಹಲವರು ಸಂತೋಷಗೊಂಡ ಮನಸ್ಸುಳ್ಳವರಾಗಿಯೂ, ಹಲವರು ಅಸಮಾಧಾನದುಃಖಗಳಿಂದ ಕೂಡಿದ ಮನಸ್ಸುಳ್ಳವರಾಗಿಯೂ, ಮಕ್ಕಳು ಶ್ರಾದ್ಧದಲ್ಲಿ ಕೊಟ್ಟುದನ್ನು ಪರಿಗ್ರಹಿಸಿ, ಮೌನದಿಂದ ಹೊರಟು ಹೋದುದನ್ನು ನೋಡಿದೆನು. ಹಾಗೆ ವ್ಯತ್ಯಾಸವಾಗಲು ನಿಜವಾದ ಕಾರಣವೇನೆಂಬುದನ್ನು ಹೇಳು.

೬೪. ದುಃಖಿಯಾದ ಅಗಸ್ತಿ—ಈ ವಿಚಾರದಲ್ಲಿ ಮಗನು ಶ್ರಾದ್ಧದಲ್ಲಿ ಮಾಡುವ ಯಾವ ಕಾರ್ಯವು ನಿಜವಾಗಿ ವ್ಯರ್ಥವಾಗುವುದೆಂಬುದನ್ನು ಸ್ವಲ್ಪ ಹೇಳುತ್ತೇನೆ. ಕೇಳು.

ಅದೇಶಕಾಲೇ ಯದ್ದತ್ತಂ ವಿಧಿಹೀನಮದಕ್ಷಿಣಂ ।
ಅಪಾತ್ರೇ ಮಲಿನಂ ದ್ರವ್ಯಂ ಮಹತ್ಪಾಪಾಯ ಜಾಯತೇ ॥ ೬೫ ॥

ಅಶ್ರದ್ಧೇಯಮಪಾತ್ರೇಯಂ ದುಷ್ಟಪ್ರೇಕ್ಷಿತವೀಕ್ಷಿತಂ ।
ತಿಲಮಂತ್ರಕುಶೈರ್ಹೀನಮಾಸುರಂ ತದ್ಭವೇದಿತಿ ॥ ೬೬ ॥

ವೈರೋಚನಾಯ ದೇವೇನ ವಾಮನೇನ ವಿಭೂತಯೇ ।
ಸಚ್ಛೂದ್ರಸ್ಯ ಚ ಶ್ರಾದ್ಧಸ್ಯ ಫಲಂ ದತ್ತಂ ಪುರಾ ಕಿಲ ॥ ೬೭ ॥

ತಥಾ ದಾಶರಥೀ ರಾಮೋ ಹತ್ವಾ ರಾಕ್ಷಸಮೀಶ್ವರಂ ।
ರಾವಣಂ ಸಗಣಂಘೋರಂ ತುಷ್ಟೇನ ಸಹ ಸೀತಯಾ ॥ ೬೮ ॥

---

೬೫. ಅದೇಶ (ಸರಿಯಲ್ಲದ ಸ್ಥಳ) ದಲ್ಲಾಗಲಿ ಅಕಾಲದಲ್ಲಾಗಲಿ, ವಿಧಿಯನ್ನನುಸರಿಸದೆಯಾಗಲಿ, ಅಶುದ್ಧವಾಗಿಯಾಗಲಿ ಶ್ರಾದ್ಧಮಾಡುವುದೂ ಕೊಡುವುದೂ ಮಹಾಪಾಪಕ್ಕೆ ಕಾರಣವಾಗುವುದು.

೬೬. ಶ್ರದ್ಧೆ (ಆಸಕ್ತಿ) ಇಲ್ಲದ ಅಥವಾ ಅಪಾಙ್ಕ್ತೇಯರನ್ನು ಕರೆದು ಮಾಡುವ ಅಥವಾ ದುಷ್ಟರು ನೋಡುವಂತೆ ಮಾಡುವ ಅಥವಾ ಎಳ್ಳು, ದರ್ಭೆ, ಮಂತ್ರ ಇವುಗಳಲ್ಲಾವುದಾದರೂ ಇಲ್ಲದೆ ಮಾಡುವ ಶ್ರಾದ್ಧವು ಅಸುರ (ರಾಕ್ಷಸ) ಶ್ರಾದ್ಧವಾಗುವುದು.

೬೭. ಪೂರ್ವದಲ್ಲಿ ವಾಮನದೇವನು ವಿರೋಚನ ಪುತ್ರನೂ, ಸಚ್ಛೂದ್ರನೂ ಆದ ಬಲಿಚಕ್ರವರ್ತಿಗೆ ಐಶ್ವರ್ಯಕ್ಕಾಗಿ ಅಸುರ ಶ್ರಾದ್ಧದ ಫಲವನ್ನು ಕೊಟ್ಟನಲ್ಲವೆ !

೬೮. ಅಲ್ಲದೆ ದಶರಥಪುತ್ರನಾದ ಶ್ರೀರಾಮನು ಘೋರನೂ, ರಾಕ್ಷಸೇಶ್ವರನೂ, ಸಪರಿವಾರನೂ ಆದ ರಾವಣನನ್ನು ಕೊಂದು, ಸೀತೆಯೊಡಗೂಡಿ ಸಂತೋಷವುಳ್ಳವನಾದನು.

ಶ್ರುತ್ವಾ ಭಕ್ತಿಂ ಚ ರಾಕ್ಷಸ್ಯಾಸ್ತ್ರಿಜಟಾಯಾಸ್ತ್ರಿಲೋಕಕೃತ್ ।
ಸೀತಾ ವಾಕ್ಯಪ್ರತುಷ್ಟೇನ ತಸ್ಯೈ ಪ್ರಾದಾದ್ವರಂ ವಿಭುಃ ॥ ೬೯ ॥

ಅಶುಚೀನಿ ಗೃಹಾಣ್ಯೇವ ತಥಾ ಶ್ರಾದ್ಧಹವೀಂಷಿ ಚ ।
ಕ್ರೋಧಾವಿಷ್ಟಾನಿ ದಾನಾನಿ ವಿಧಿಪಾತ್ರಯುತಾನಿ ಚ ॥ ೭೦ ॥

ಪಾದಶೌಚ ಮನಭ್ಯಂಗ ಪ್ರತಿಶ್ರಯಮಭೋಜನಂ ।
ತ್ರಿಜಟೇ ತ್ವತ್ಪ್ರಯಚ್ಛಾಮಿ ಯಚ್ಚ ಶ್ರಾದ್ಧಮದಕ್ಷಿಣಂ ॥ ೭೧ ॥

ತಥೈವ ಶಂಭುನಾ ದತ್ತಂ ನಾಗರಾಜಾಯ ಭಕ್ತಿತಃ ।
ತುಷ್ಟೇನ ವೈ ವಾಸುಕಯೇ ತನ್ಮೇ ನಿಗದತಃ ಶೃಣು ॥ ೭೨ ॥

ಅನುಜ್ಞಾಪ್ಯ ವ್ರತಂ ಜಂತುರ್ವಾರ್ಷಿಕೀ ಸಕಲಾ ಕ್ರಿಯಾ ।
ಯಜ್ಞಸ್ಯ ಯೋಚಿತಾ ದೇಯಾ ದಕ್ಷಿಣಾ ನಾದದಾದ್ದ್ವಿಜಃ ॥ ೭೩ ॥

---

೬೯. ಬಳಿಕ ರಾಕ್ಷಸಿಯಾದ ತ್ರಿಜಟೆಗೆ ತಮ್ಮಲ್ಲಿರುವ ಭಕ್ತಿಯನ್ನು ಸೀತೆಯಿಂದ ಕೇಳಿ, ಅತಿ ಸಂತೋಷಗೊಂಡ ತ್ರಿಲೋಕಕರ್ತೃವಾದ ಆ ವಿಭುವು ಆಕೆಗೆ ಈ ವರಗಳನ್ನು ಕೊಟ್ಟನು.

೭೦–೭೧. "ತ್ರಿಜಟೇ, ಅಶುಚಿಯಾದ ಮನೆಗಳನ್ನೂ, ಶ್ರಾದ್ಧಹವಿಸ್ಸುಗಳನ್ನೂ, ವಿಧಿಯಂತೆ ಸತ್ಪಾತ್ರದಲ್ಲಿ ಕೊಟ್ಟರೂ ಕೋಪವುಳ್ಳವರಾಗಿ ಕೊಡುವ ದಾನಗಳನ್ನೂ, ಕಾಲುಗಳನ್ನು ತೊಳೆದುಕೊಳ್ಳದೆಯೂ ಸ್ನಾನವಿಲ್ಲದೆಯೂ ಅನುಚಿತವಾದ ಸ್ಥಳದಲ್ಲೂ ಮಾಡುವ ಭೋಜನವನ್ನೂ, ದಕ್ಷಿಣೆಯಿಲ್ಲದ ಶ್ರಾದ್ಧವನ್ನೂ ನಿನಗೆ ಕೊಡುತ್ತೇನೆ" ಎಂದನು.

೭೨. ಹಾಗೆಯೇ ನಾಗರಾಜನಾದ ವಾಸುಕಿಗೆ ಅವನ ಭಕ್ತಿಯಿಂದ ಸಂತುಷ್ಟನಾದ ಶಂಭುವು ಕೊಟ್ಟ ವರವನ್ನೂ ಹೇಳುತ್ತೇನೆ. ಕೇಳು.

೭೩–೭೪. 'ವ್ರತವನ್ನು ಮಾಡುವುದಾಗಿ ಉದ್ದೇಶಿಸಿ ದೊಡ್ಡವರ ಸಮ್ಮತಿಯನ್ನು ಪಡೆದು, ಅದನ್ನು ಮಾಡದೆ ಬಿಡುವವನು ವರ್ಷವೂ ಮಾಡುವ

ವೃಥಾಶಪಥಕಾರೀ ಯೋ ದೇವಬ್ರಾಹ್ಮಣಸನ್ನಿಧೌ ।
ಅಶ್ರೋತ್ರಿಯಾಣಿ ಶ್ರಾದ್ಧಾನಿ ಕ್ರಿಯಾಮಂತ್ರೈರ್ವಿನಾಪಿ ಚ ॥ ೭೪ ॥

ರಾತ್ರೌ ಸವಾಸಸಾ ಸ್ನಾನಂ ಯಥಾಸತ್ವಸ್ವರೂಪತಃ ॥ ೭೫ ॥

ಯಃ ಶಿಷ್ಯೋ ನ ನಮದ್ಭಕ್ತ್ಯಾ ಗುರುಂ ಜ್ಞಾನಪ್ರದಾಯಕಂ ।
ತಸ್ಯೈವ ಪ್ರಾಕೃತಂ ಧರ್ಮಮಗ್ರೇ ಗೇಯಂ ಕರಿಷ್ಯತಃ ॥ ೭೬ ॥

ಸರ್ವಂ ತುಭ್ಯಂ ಮಯಾ ದತ್ತಂ ನಾಗರಾಜಾಯ ವಾರ್ಷಿಕಂ ।
ಇತ್ಯೇತದ್ವೈ ಪುರಾಣೇಷು ಸೇತಿಹಾಸೇಷು ಪಠ್ಯತೇ ॥ ೭೭ ॥

ತದ್ವದಲೀಕಕರಣಂ ಶ್ರಾದ್ಧಂ ದಾನಂ ವ್ರತಂ ತಥಾ ।
ನೋಪತಿಷ್ಠತಿ ತೇಷಾಂ ವೈ ತೇನ ನಗ್ನಾದಯಸ್ತ್ವಿಮಾ ॥ ೭೮ ॥

ಮುಷಿತಾಚ್ಛಿದ್ರಕರಣೈಸ್ತದ್ದಾನಫಲ ಭೋಕ್ತೃಭಿಃ ॥ ೭೯ ॥

ಸಕಲಕರ್ಮಗಳು, ಯಜ್ಞಕ್ಕೆ ತಕ್ಕಂತೆ ದಕ್ಷಿಣೆಯನ್ನು ಕೊಡದೆ ಬ್ರಾಹ್ಮಣನು ಉಳಿಸಿಕೊಂಡ ಹಣ, ದೇವಬ್ರಾಹ್ಮಣ ಸನ್ನಿಧಿಯಲ್ಲಿ ವ್ಯರ್ಥವಾದ ಶಪಥಗಳನ್ನು ಮಾಡುವ ಮನುಷ್ಯ, ಶ್ರೋತ್ರಿಯರಿಲ್ಲದ ಮತ್ತು ಮಂತ್ರತಂತ್ರಗಳಿಲ್ಲದ ಶ್ರಾದ್ಧಗಳು, ರಾತ್ರಿಯವೇಳೆ ಸಾಮಾನ್ಯಪ್ರಾಣಿಗಳು ಮಾಡುವಂತೆ ಉಟ್ಟ ಬಟ್ಟೆಯೊಂದಿಗೆ ಮಾಡುವ ಸ್ನಾನ, ಜ್ಞಾನಪ್ರದಾಯಕನಾದ ಗುರುವನ್ನು ಭಕ್ತಿಯಿಂದ ವಂದಿಸದ ಶಿಷ್ಯ, ಗುರುವಿನ ಪ್ರತ್ಯಕ್ಷದಲ್ಲಿ ನಿಂದ್ಯವಾದ ಕರ್ಮಮಾಡುವ ಶಿಷ್ಯ, ಇವೆಲ್ಲವನ್ನೂ ನಾನು ನಾಗರಾಜನಾದ ನಿನಗೆ ಕೊಟ್ಟಿದ್ದೇನೆ.' ಎಂದು ಶಂಕರನು ಹೇಳಿದನೆಂದು ಇತಿಹಾಸ ಸಹಿತಗಳಾದ ಪುರಾಣಗಳಲ್ಲಿ ಹೇಳಿದೆ.

೭೮–೭೯. ಹಾಗೆಯೇ ಅಪ್ರಿಯವಾಗಿ ಅಥವಾ ಸುಳ್ಳಾಗಿ ಮಾಡುವ ಶ್ರಾದ್ಧವೂ ದಾನವೂ, ವ್ರತವೂ ಯಾರಿಗೆ ಉದ್ದೇಶವೋ ಅವರಿಗೆ ಸೇರುವುದಿಲ್ಲ. ಆದುದರಿಂದ ಮುನಿಯೇ, ನೀನು ಹೇಳಿದ ನಗ್ನರೇ ಮೊದಲಾದ ಇಲ್ಲಿಗೆ ಬಂದು ಹೋದವರು ರಂಧ್ರಾನ್ವೇಷಿಗಳೂ, ಆ ದಾನಫಲವನ್ನು ಅನುಭವಿಸುವವರೂ ಅದ ರಾಕ್ಷಸಾದಿಗಳಿಂದ ವಂಚಿಸಲ್ಪಟ್ಟರು.

ಯಥಾ ಗತಾಸ್ತಥಾ ತೇ ತು ಶ್ರಾದ್ಧೇ ಹೂತಾಸ್ತು ನಿಷ್ಫಲಾಃ ।
ಮೌನವ್ರತಧರಾ ಯಾಂತಿ ಪುನಃ ಪ್ರಾಪ್ಯಾರ್ಥಹೇತವೇ ।
ಏವಮೇತನ್ಮಹಾಪ್ರಾಜ್ಞ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೮೦ ॥

॥ ತ್ರಿಕಾಲಜ್ಞ ಉವಾಚ ॥

ಷಟ್ಕಾಲೇ ಭೋಜನಂ ತ್ವದ್ಯ ನಾಹಂ ಭೋಕ್ತುಮಿಹೋತ್ಸಹೇ ।
ಯಾವತ್ತೃಪ್ತಿರ್ನ ತೇ ಭೂಯಾದ್ದೃಷ್ಟ್ವಾ ಹಂತ ಸ್ಥಿರೋ ಭವ ॥ ೮೧ ॥

ತಾವತ್ಕಾಲಂ ಪ್ರತೀಕ್ಷಸ್ವ ಯಾವದಾಗಮನಂ ಮಮ ।
ಅಸ್ಮಿಂಸ್ತೀರ್ಥೇ ಸದೈವಾಹಂ ದಿವಾರಾತ್ರಮತಂದ್ರಿತಃ ॥ ೮೨ ॥

ಸೋಹಮದ್ಯ ವ್ರತಂ ತ್ಯಕ್ತ್ವಾ ತವ ಕಾರುಣ್ಯಪೂರಿತಃ ।
ಗತ್ವಾಹಮಾನಯಿಷ್ಯಾಮಿ ತ್ವಯೋಕ್ತಾಂ ತಾಂ ವರಾಂ ಸ್ತ್ರಿಯಂ ॥ ೮೩ ॥

---

೮೦. ಆದುದರಿಂದ ಶ್ರಾದ್ಧಕ್ಕೆ ಆವಾಹಿತರಾಗಿ ಬಂದ ಅವರು ನಿಷ್ಫಲರಾಗಿ ಮತ್ತೆ ತಾವು ಪಡೆಯಬೇಕಾದುದನ್ನು ಪಡೆಯುವುದಕ್ಕಾಗಿ ಮೌನವ್ರತವನ್ನು ಧರಿಸಿ, ಹೇಗೆ ಬಂದರೋ ಹಾಗೆಯೇ ಹೊರಟು ಹೋದರು. ಮಹಾಪ್ರಾಜ್ಞನೇ, ನೀನು ನನ್ನನ್ನು ಕೇಳಿದ ವಿಚಾರವು ಹೀಗಿದೆ.

೮೧. ತ್ರಿಕಾಲಜ್ಞ—ಅಯ್ಯೋ! ನಿನಗೆ ತೃಪ್ತಿಯಾಗುವವರೆಗೂ ನಾನು ಈ ದಿನ ಆರನೆಯಕಾಲದ (ಅಪರಾಹ್ಣದ) ಭೋಜನವನ್ನೂ ಮಾಡಲು ಇಷ್ಟ ಪಡುವುದಿಲ್ಲ. ನೋಡುತ್ತ ನಂಬಿಕೆಯಿಂದ ಇಲ್ಲೇ ಇರು.

೮೨–೮೩. ನಾನು ಹೋಗಿಬರುವವರೆಗೂ ನಿರೀಕ್ಷಿಸು. ನಾನು ಈ ತೀರ್ಥದಲ್ಲಿ ಹಗಲೂ ರಾತ್ರಿಯೂ ಯಾವಾಗಲೂ ಜಾಗರೂಕನಾಗಿ ಜಪತಪಗಳಲ್ಲಿದ್ದೆನು. ಅಂತಹ ನಾನು ನಿನ್ನಲ್ಲಿ ಕರುಣೆಯಿಂದ ತುಂಬಿದವನಾಗಿ ಈಗ ವ್ರತವನ್ನು ಬಿಟ್ಟು ಹೋಗಿ, ನೀನು ಹೇಳಿದ ನಿನ್ನ ಸಂತತಿಯ ಆ ಉತ್ತಮ ಸ್ತ್ರೀಯನ್ನು ಕರೆದುಕೊಂಡು ಬರುವೆನು.

ಅನಯಾ ಕಾರಯಿಷ್ಯಾಮಿ ಶ್ರಾದ್ಧಂತು ವಿಧಿನಾ ಸಹ ।
ಏವಮುಕ್ತ್ವಾ ಸ ಷಷ್ಠಾಶೀ ಮೌನವಾಕ್ಸಂಯಯೌ ದ್ರುತಂ ॥ ೮೪ ॥

ರಾಜಾ ಸಮೀಪಗಂ ದೃಷ್ಟ್ವಾ ಅಕಸ್ಮಾದಾಗತಂ ಋಷಿಂ ।
ಕ್ಷಿತ್ಯಾಸ್ತಲೇ ವಿಲುಲಿತಃ ಪಾದೌ ಕೃತ್ವಾತು ಮೂರ್ಧನಿ ।
ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯದ್ಭವಾನ್ಗೃಹಮಾಗತಃ ॥ ೮೫ ॥

ಸದಾ ಯಜ್ಞಂ ಕರಿಷ್ಯಾಮಿ ಗೃಮಾಗಮನೇ ತವ ।
ಅದ್ಯಮೇ ಸಫಲಂ ಜನ್ಮ ಯದ್ಭವಾಸ್ತ್ವಮಿಹಾಗತಃ ॥ ೮೬ ॥

ಇದಂ ಪಾದ್ಯಮಿದಂಚಾರ್ಘ್ಯಂ ಮಧುಪರ್ಕಮಿಮಾಂಚ ಗಾಂ ।
ಗೃಹಾಣ ಮುನಿಶಾರ್ದೂಲ ಯೇನಾಹಂ ಶಾಂತಿಮಾಪ್ನುಯಾಂ ॥ ೮೭ ॥

---

೮೪. ಆಕೆಯಿಂದ ವಿಧ್ಯುಕ್ತವಾಗಿ ಶ್ರಾದ್ಧವನ್ನು ಮಾಡಿಸುವೆನು. ಎಂದು ಹೇಳಿ, ಅಪರಾಹ್ಣಭೋಜಿಯೂ, ಮೌನವ್ರತಿಯೂ ಆದ ಆ ಮುನಿ ಬೇಗನೆ ದೊರೆಯ ಹತ್ತಿರಕ್ಕೆ ಹೋದನು.

೮೫. ಅಕಸ್ಮಾತ್ತಾಗಿ ತನ್ನ ಸಮೀಪಕ್ಕೆ ಬಂದ ಮುನಿಯನ್ನು ನೋಡಿ ಆ ದೊರೆ ನೆಲದಮೇಲೆ ಪ್ರಣಾಮಮಾಡಿ, ಆತನ ಪಾದಗಳಮೇಲೆ ತಲೆಯನ್ನಿಟ್ಟು ' ಪೂಜ್ಯನಾದ ನೀನು ನಮ್ಮ ಮನೆಗೆ ಬಂದುದರಿಂದ ನಾನು ಸುಕೃತಿಯಾದೆನು. ನಿನ್ನ ಅನುಗ್ರಹವನ್ನು ಪಡೆದೆನು.

೮೬. ನೀನು ಮನೆಗೆ ಬರಲೆಂದು ನಾನು ಯಾವಾಗಲೂ ಯಜ್ಞವನ್ನು ಮಾಡುವೆನು. ನೀನು ಈ ದಿನ ಇಲ್ಲಿಗೆ ಬಂದುದರಿಂದ ನನ್ನ ಜನ್ಮವು ಸಫಲವಾಯಿತು.

೮೭. ಮುನಿವರ್ಯನೇ, ಈ ಪಾದ್ಯವನ್ನೂ, ಈ ಅರ್ಘ್ಯವನ್ನೂ, ಈ ಮಧುಪರ್ಕವನ್ನೂ ಈ ಹಸುವನ್ನೂ ಪರಿಗ್ರಹಿಸು. ಇದರಿಂದ ನನಗೆ ಸಮಾಧಾನವಾಗುವುದು

ತಸ್ಯ ತತ್ಪ್ರತಿಗೃಹ್ಯಾಶು ಸ ಮುನಿಸ್ತ್ವರಿತೋಽಬ್ರವೀತ್ ।
ಮದಿಯಾಗಮನೇ ರಾಜನ್ ಶೃಣು ತ್ವಂ ಕಾರಣಂ ಮಹತ್ ॥ ೮೮ ॥

ತಚ್ಛ್ರುತ್ವಾ ಕುರು ತತ್ಸರ್ವಂ ಯೇನಾಹಂ ತೋಷಿತೋಽಭವಂ ॥ ೮೯ ॥

ಏವಮುಕ್ತಸ್ತು ರಾಜರ್ಷಿರಬ್ರವೀತ್ತಂ ತಪೋಧನಂ ।
ಕಿಂ ತದ್ವದ ಯಥಾಕಾರ್ಯಂ ಯೇನ ಸಿದ್ಧಂ ಭವೇದಿದಂ ॥ ೯೦ ॥

॥ ತ್ರಿಕಾಲಜ್ಞ ಉವಾಚ ॥

ಯಾ ಸಾ ತೇ ರಾಜಮಹಿಷೀ ತಾಮಾನಯ ವರಾನನಾಂ ।
ತಸ್ಯಾ ದಾಸೀ ವರಾರೋಹಾ ಪ್ರಭಾವತ್ಯಪಿ ವಿಶ್ರುತಾ ।
ಸಾಪಿ ದೇವ್ಯಾತು ಸಹಿತಾ ಆಯಾತು ಮಮ ಸನ್ನಿಧೌ ॥ ೯೧ ॥

ತತಶ್ಚಾಂತಃ ಪುರಾದ್ದೇವೀ ಸದಾಸೀ ತತ್ರ ಚಾಗತಾ ।
ಕ್ಷಿತೌ ವಿಲುಲಿತಾ ಸಾಧ್ವೀ ಪ್ರಣಾಮಮಕರೋದೃಷೇಃ ॥ ೯೨ ॥

೮೮–೮೯. ಆ ಮುನಿ ಆ ದೊರೆಯು ಕೊಟ್ಟುದನ್ನು ಬೇಗನೆ ಪರಿಗ್ರಹಿಸಿ, "ರಾಜನೇ ನಾನು ಬಂದ ಮಹಾಕಾರಣವನ್ನು ನೀನು ಕೇಳು. ಅದನ್ನು ಕೇಳಿ, ಯಾವುದರಿಂದ ನಾನು ಸಂತೋಷಗೊಳ್ಳುವೆನೊ ಅದನ್ನು ಮಾಡು." ಎಂದು ತ್ವರೆಯಿಂದ ಹೇಳಿದನು.

೯೦. ಋಷಿ ಹೀಗೆನಲು ಆ ರಾಜರ್ಷಿ "ಅದೇನು ? ಇರುವ ಕಾರ್ಯವನ್ನು ಹೇಳು. ಅದು ಸಿದ್ಧವಾಗುವುದು." ಎಂದು ಆ ತಪೋಧನನಿಗೆ ಹೇಳಿದನು.

೯೧. ತ್ರಿಕಾಲಜ್ಞ—ವರಾನನೆಯೂ, ನಿನ್ನ ರಾಣಿಯೂ ಆದ ಚಂದ್ರಪ್ರಭಾದೇವಿಯನ್ನು ಇಲ್ಲಿಗೆ ಕರೆಯಿಸು. ಆ ರಾಣಿಯ ದಾಸಿಯಾದ ಪ್ರಭಾವತಿಯೆಂಬುವಳೂ ದೇವಿಯೊಡನೆ ನನ್ನ ಸಮೀಪಕ್ಕೆ ಬರಲಿ.

೯೨. ಬಳಿಕ ಅಂತಃಪುರದಿಂದ ದಾಸಿಯೊಡನೆ ಬಂದ ಪತಿವ್ರತೆಯಾದ ರಾಣಿ ನೆಲದಮೇಲೆ ಬಾಗಿ ಋಷಿಗೆ ಪ್ರಣಾಮಮಾಡಿದಳು.

ಸಮಾಸೀನಾಂಚ ವಿಪ್ರೇಂದ್ರಃ ಪ್ರೋವಾಚ ವಿನತಾನನಾಂ ।
ಧ್ರುವತೀರ್ಥೇ ಮಯಾಶ್ಚರ್ಯಂ ಯದ್ದೃಷ್ಟಂಕಥಯಾಮಿ ವಃ ॥ ೯೩ ॥

ಯೇ ಕೇಚಿತ್ಪಿತರೋ ಲೋಕೇ ಲೋಕಾನಾಂ ಸರ್ವತಃ ಸ್ಥಿತಾಃ ।
ಯೇ ಪೂಜಿತಾಃ ಶ್ರಾದ್ಧಕೃದ್ಭಿಃ ಪುತ್ರೈಃ ಪ್ರೀತಾ ದಿವಂ ಯಯುಃ ॥ ೯೪ ॥

ಏಕೋ ವೃದ್ಧೋ ನರಸ್ತತ್ರ ಸೂಕ್ಷ್ಮಪ್ರಾಣಿಭಿರಾವೃತಃ ।
ಕ್ಷುತ್ಕ್ಷಾಮದೇಹಃ ಶುಷ್ಕಾಸ್ಯೋ ನಿರ್ಗತೋದರಸೂಕ್ಷ್ಮದೃಕ್ ॥ ೯೫ ॥

ನಿರಾಶೋ ಗಂತು ಕಾಮಶ್ಚ ಪುನಃ ಸ ನಿರಯೇಽಶುಚೌ ।
ಕಾರುಣ್ಯಾತ್ಸ ಮಯಾ ಪೃಷ್ಟಃ ಕಸ್ತ್ವಂ ಬ್ರೂಹಿ ಕಿಮಿಚ್ಛಸಿ ॥ ೯೬ ॥

---

೯೩. ಆಮೇಲೆ ರಾಣಿ ತಲೆಬಾಗಿ ಕುಳಿತುಕೊಂಡಿರಲು ಆ ಬ್ರಾಹ್ಮಣೋತ್ತಮನು "ಧ್ರುವತೀರ್ಥದಲ್ಲಿ ನಾನು ನೋಡಿದ ಆಶ್ಚರ್ಯವನ್ನು ನಿಮಗೆ ಹೇಳುತ್ತೇನೆ.

೯೪. ಲೋಕದಲೆಲ್ಲಾ ಇರುವ ಹಲವರ ಪಿತೃಗಳು ತಮ್ಮ ಮಕ್ಕಳು ಶ್ರಾದ್ಧವನ್ನು ಮಾಡಿ ಪೂಜಿಸಲಾಗಿ, ಸಂತುಷ್ಟರಾಗಿ ಸ್ವರ್ಗಕ್ಕೆ ಹೋದರು

೯೫. ಅಲ್ಲಿ ಒಬ್ಬ ಮುದುಕನು ಮಾತ್ರ ಸೂಕ್ಷ್ಮಪ್ರಾಣಿಗಳಿಂದಾವೃತನಾಗಿ ಹಸಿವಿನಿಂದ ಕೃಶವಾದ ಮೈಯ್ಯುಳ್ಳವನೂ, ಒಣಗಿದ ಮುಖವುಳ್ಳವನೂ, ಬತ್ತಿದ ಉದರವುಳ್ಳವನೂ, ಚಿಕ್ಕದಾದ ಕಣ್ಣುಳ್ಳವನೂ ಆಗಿರುವನು.

೯೬. ನಿರಾಶನಾಗಿ ಮತ್ತೆ ಅಶುಚಿಯಾದ ನರಕಕ್ಕೆ ಹೋಗಲು ಸಿದ್ಧನಾಗಿದ್ದ ಅವನನ್ನು ನಾನು ಕರುಣೆಯಿಂದ 'ನೀನು ಯಾರು? ನಿನಗೇನು ಬೇಕು? ಹೇಳು' ಎಂದು ಕೇಳಿದೆನು.

ತೇನಾತ್ಮಕರ್ಮಜನಿತಂ ಮಮ ಕರ್ಮ ನಿವೇದಿತಂ ।
ತತಸ್ತತ್ರೈವ ತಚ್ಛ್ರುತ್ವಾ ತಸ್ಯ ಕಾರುಣ್ಯ ಯಂತ್ರಿತಃ ॥ ೯೭ ॥

ತವ ದಾಸ್ಯಾಶ್ಚ ಯಾ ದಾಸೀ ತಸ್ಯಾಸ್ತಂತುಃ ಕಿಲೋಚ್ಯತೇ ।
ನಾಮ್ನಾ ವಿರೂಪಕನಿಧಿಸ್ತಾಮಾನಯ ವರಾನನೇ ॥ ೯೮ ॥

ಇತಿ ಶ್ರುತ್ವಾನವದ್ಯಾಂಗೀ ತಸ್ಯಾ ಆನಯನೇಽತ್ವರತ್ ।
ಪ್ರೇಷಯಾಮಾಸ ಸರ್ವತ್ರ ತಸ್ಯಾ ಆನಯನೇ ಬಹೂನ್ ॥ ೯೯ ॥

ಸಾ ಚೈಕಾಂತೇ ಚ ದಿವಸೇ ಪಾನಮಾಂಸರತಾ ಸದಾ ।
ಪುರುಷೇಣ ಸಹಾಸೀನಾ ಶಯ್ಯಾಯಾಂ ಮದವಿಹ್ವಲಾ ॥ ೧೦೦ ॥

---

೯೭. ಅವನು ತನ್ನ ಪೂರ್ವಕರ್ಮದಿಂದುಂಟಾದ ಕಷ್ಟವನ್ನು ನನಗೆ ತಿಳಿಸಿದನು. ಅದನ್ನು ಕೇಳಿದಮೇಲೆ ಅಲ್ಲೇ ಅವನಮೇಲುಂಟಾದ ಕರುಣೆಯಿಂದ ಬದ್ಧನಾದೆನು.

೯೮. ರಾಣೀ, ನಿನ್ನ ದಾಸಿಯಾದ ಪ್ರಭಾವತಿಗೆ ದಾಸಿಯಾದ ವಿರೂಪಕನಿಧಿಯೆಂಬುವಳು ಆ ಮುದುಕನ ಸಂತತಿಯವಳಂತೆ. ಅವಳನ್ನು ಇಲ್ಲಿ ಕರೆಯಿಸು" ಎಂದನು

೯೯. ಶೋಭನಾಂಗಿಯಾದ ಆ ರಾಣಿ ಆ ಮಾತನ್ನು ಕೇಳಿ, ಆ ದಾಸಿಯನ್ನು ಕರೆಯಿಸಲು ತ್ವರೆಮಾಡಿದಳು. ಅವಳನ್ನು ಕರೆದುಕೊಂಡು ಬರಲು ಹಲವರನ್ನು ಎಲ್ಲಾ ಕಡೆಗೂ ಕಳುಹಿಸಿದಳು.

೧೦೦. ಆ ವಿರೂಪಕನಿಧಿ ಗುಟ್ಟಾದೆಡೆಯಲ್ಲಿ ಹಗಲಿನಲ್ಲೇ ಯಾವಾಗಲೂ ಮದ್ಯಮಾಂಸಾಸಕ್ತಳಾಗಿ ಮದಿಸಿ ಪುರುಷನೊಡನೆ ಹಾಸಿಗೆಯಮೇಲೆ ಕುಳಿತಿರುತ್ತಿದ್ದಳು.

ಸೇವಕೈಃ ಸಾ ಕರೇ ಗೃಹ್ಯ ಆನೀತಾ ಮುನಿಸನ್ನಿಧೌ ।
ತಾಂ ದೃಷ್ಟ್ವಾ ಮದಿರಾಮತ್ತಾಂ ಸ ಮುನಿಃ ಪ್ರಾಹ ಧರ್ಮವಿತ್ ॥ ೧೦೧ ॥

ಪ್ರತ್ಯಯಾರ್ಥಂತು ತಸ್ಯಾ ವೈ ಮುನಿಃ ಪ್ರಾಹ ಕ್ರಿಯಾಂಪ್ರತಿ ।
ಪಿತೄಣಾಂಚ ಕೃತೇ ದತ್ತಂ ದಾನಂ ವಾರಿ ನ ವಾ ಸ್ವಧಾ ।
ತರ್ಪಣಂ ಚಾಪಿ ನೋ ದತ್ತಂ ಪಿತೄಣಾಂಚಾತಿ ಮುಕ್ತಿದಂ ॥ ೧೦೨ ॥

ಸಾ ನೈವಮಿತ್ಯುವಾಚೇದಂ ತಂ ಮುನಿಂ ಸಂಶಿತವ್ರತಂ ।
ನ ಜಾನಾಮಿ ಪಿತೄನ್‌ಸ್ತಾನ್ವೈ ಕ್ರಿಯಾಂ ಕಾರ್ಯಂಚ ವೈ ವಿಭೋ॥೧೦೩

ಇತಿ ಬ್ರುವಣಾಂ ತಾಂ ದಾಸೀಂ ತ್ರಿಕಾಲಜ್ಞೋಽಭ್ಯುವಾಚಹ ।
ಪತ್ನೀ ಚ ಮಧುರೇಶಸ್ಯ ನೃಪಃ ಸಪುರಸಜ್ಜನಃ ॥ ೧೦೪ ॥

---

೧೦೧. ರಾಜಸೇವಕರು ಅವಳನ್ನು ಮುನಿಯ ಸಮೀಪಕ್ಕೆ ಕೈಹಿಡಿದೆಳೆದು ಕರೆದುಕೊಂಡು ಬಂದರು. ಮದ್ಯಪಾನದಿಂದ ಮತ್ತಳಾದ ಅವಳನ್ನು ನೋಡಿ ಧರ್ಮಜ್ಞನಾದ ಆ ಮುನಿ, ಕರ್ಮದ ವಿಷಯದಲ್ಲಿ ಅವಳಿಗೆ ನಂಬಿಕೆ ಯುಂಟಾಗುವುದಕ್ಕಾಗಿ ಹೀಗೆ ಹೇಳಿದನು.

೧೦೨. "ನೀನು ಪಿತೃಗಳಿಗಾಗಿ ದಾನವನ್ನಾಗಲಿ, ನೀರನ್ನಾಗಲಿ, ಸ್ವಧೆಯನ್ನಾಗಲಿ ಕೊಟ್ಟಿಲ್ಲ. ಪಿತೃಗಳಿಗೆ ಉತ್ತಮವಾದ ಮುಕ್ತಿಯನ್ನುಂಟು ಮಾಡುವ ತರ್ಪಣವನ್ನೂ ಕೊಟ್ಟಿಲ್ಲ"

೧೦೩. ಅವಳು, "ವಿಭುವೇ, ನಾನು ಮಾಡಿಯೇ ಇಲ್ಲ. ನಮ್ಮ ಪಿತೃಗಳನ್ನಾಗಲಿ, ಕರ್ಮಕ್ರಿಯೆಗಳನ್ನಾಗಲಿ ನಾನು ಅರಿಯೆನು." ಎಂದು ತೀಕ್ಷ್ಣವ್ರತಿಯಾದ ಆ ಮುನಿಗೆ ಹೇಳಿದಳು.

೧೦೪-೧೦೫. ಹಾಗೆ ಹೇಳಿದ ಆ ದಾಸಿಗೆ ತ್ರಿಕಾಲಜ್ಞನಾದ ಆ ಮುನಿ 'ಮಧುರೇಶ್ವರನ ರಾಣಿಯೂ, ಪಟ್ಟಣದ ಸಜ್ಜನರೊಡಗೂಡಿದ ರಾಜನೂ, ನೀನೂ ಕೂತೂಹಲವುಳ್ಳ ಮಹಾಭಾಗ್ಯರೂ ಎಲ್ಲರೂ ಪಿತೃಗಳಿಗೆ ಸಂತತಿ

ಸರ್ವೇ ದ್ರಕ್ಷ್ಯಥ ಮಾಹಾತ್ಮ್ಯಂ ಪಿತೄಣಾಂ ಸಂತತೇಃ ಫಲಂ ॥ ೧೦೫ ॥

ಸಕೌತುಕಾ ಮಹಾಭಾಗಾಃ ಶ್ರಾದ್ಧದಾನಂಚ ಚೈವ ಹ ।
ನಗರಸ್ಥಾಶ್ಚ ತೇ ಸರ್ವೇ ಬ್ರಾಹ್ಮಣಾ ಭಾವಪೂಜಿತಾಃ ॥ ೧೦೬ ॥

ರಾಜ್ಞಾನೀತಾಸ್ತತ್ರ ತೀರ್ಥೇ ಶ್ರಾದ್ಧಾರ್ಥಂ ಮುನಿನಾ ಸಹ ।
ಲೋಕೈಃ ಪರಿವೃತೋ ರಾಜಾ ಧ್ರುವತೀರ್ಥಂ ಗತಃ ಪ್ರಭುಃ ॥ ೧೦೭ ॥

ತತ್ರ ದೃಷ್ಟಃ ಸ ವೈ ಜಂತುರ್ನಷ್ಟತಂತುರ್ವಿಚೇತನಃ ।
ಮಶಕೈರ್ವೇಷ್ಟಿತಃ ಕ್ಷುದ್ರೈಃ ಕ್ಷುಧಯಾ ಚಾತಿಪೀಡಿತಃ ॥ ೧೦೮ ॥

ಉವಾಚ ತಂ ತದಾ ವಿಪ್ರೋಽಭವತ್ಸಂತಾನಜಾಃ ಸ್ತ್ರಿಯಃ ।
ಅನೀತಾಸ್ತವ ಪುಷ್ಟ್ಯರ್ಥಂ ಯಥೇಚ್ಛಸಿ ತಥಾ ಕುರು ॥ ೧೦೯ ॥

ಯಿಂದಾಗುವ ಮಹಿಮೆಯನ್ನೂ ಫಲವನ್ನೂ ಶ್ರಾದ್ಧದಾನವನ್ನೂ ನೋಡುತ್ತೀರಿ" ಎಂದನು.

೧೦೬–೧೦೭. ದೊರೆ ಮಧುರಾನಗರದಲ್ಲಿದ್ದ ಭಾವಪೂಜಿತರಾದ ಎಲ್ಲಾ ಬ್ರಾಹ್ಮಣರನ್ನೂ ಪದಾರ್ಥಗಳನ್ನೂ ಶ್ರಾದ್ಧಕ್ಕಾಗಿ ಮುನಿಯೊಡನೆ ಕಳುಹಿಸಿ, ಜನರೊಡಗೂಡಿ ತಾನೂ ಆ ಧ್ರುವತೀರ್ಥಕ್ಕೆ ಹೋದನು.

೧೦೮. ಅಲ್ಲಿ ಸಂತತಿಯನ್ನು ಕಳೆದುಕೊಂಡು ಬಹಳ ಹಸಿವಿನಿಂದ ಪೀಡಿತನಾಗಿ ಸಣ್ಣ ಸೊಳ್ಳೆಗಳಿಂದ ಸುತ್ತಿದವನಾಗಿ ವಿಚೇತನನಾಗಿದ್ದ ಆ ಪ್ರಾಣಿಯನ್ನು ಎಲ್ಲರೂ ನೋಡಿದರು.

೧೦೯. ಆಗ ತ್ರಿಕಾಲಜ್ಞ ಬ್ರಾಹ್ಮಣನು ಆ ವೃದ್ಧನನ್ನು ಕುರಿತು, "ನಿನ್ನ ಸಂತತಿಯಲ್ಲಿ ಹುಟ್ಟಿದ ಸ್ತ್ರೀಯರಿದ್ದರು. ನಿನ್ನ ತೃಪ್ತಿಗಾಗಿ ಅವರನ್ನು ಕರೆದುಕೊಂಡು ಬಂದುದಾಗಿದೆ. ನಿನಗೆ ಹೇಗೆ ಇಷ್ಟವೋ ಹಾಗೆ ಮಾಡು" ಎಂದು ಹೇಳಿದನು.

॥ ಅಗಸ್ತ್ಯ ಉವಾಚ ॥

ಸ್ನಾತ್ವೈಷಾ ಧ್ರುವತೀರ್ಥೇ ತು ಬ್ರಾಹ್ಮಣೋಕ್ತ ಕ್ರಮೇಣ ಚ ।
ಕರೋತು ತರ್ಪಣಂಚಾಸ್ಮಿನ್ಪೂರ್ವೋಕ್ತವಿಧಿನಾ ಕ್ರಿಯಂ ॥ ೧೧೦ ॥

ತತಃ ಶ್ರಾದ್ಧಂ ಸರೌಪ್ಯಂಚ ಸವಸ್ತ್ರಂ ಸವಿಲೇಪನಂ ।
ಅರ್ಚಿತ್ವಾ ಪಿಂಡದಾನೇನ ಕರೋತ್ವೇಷಾ ಚ ಭಕ್ತಿತಃ ॥ ೧೧೧ ॥

ಅತ್ರೈವ ಸರ್ವೇ ಸ್ಥಿತ್ವಾನ್ಯೈ ಮಾಮೀಕ್ಷಥ ಸುಖಾನ್ವಿತಂ ।
ಕಾರಯಿತ್ವಾ ಯಥಾಸರ್ವಂ ಶ್ರಾದ್ಧದಾನಂ ಹಿ ತಂತುನಾ ॥ ೧೧೨ ॥

ತಸ್ಯ ತದ್ವಚನಂ ಶ್ರುತ್ವಾ ರಾಜಪತ್ನೀ ಯಶಸ್ವಿನೀ ।
ಕಾರಯಾಮಾಸ ದಾಸ್ಯಾನ್ಯೈ ಶ್ರಾದ್ಧಂ ಸುಬಹುದಕ್ಷಿಣಂ ॥ ೧೧೩ ॥

ಪಟ್ಟವಸ್ತ್ರಂ ತಥಾ ಧೂಪಂ ಕರ್ಪೂರಾಗುರುಚಂದನಂ ।
ತಿಲೋತ್ತರಂ ತಥಾನ್ನಂಚ ಬಹುರೂಪಂ ಸಪಿಂಡಕಂ ॥ ೧೧೪ ॥

---

೧೧೦ ಅಗಸ್ತ್ಯನೆಂಬ ಆವೃದ್ಧ—ಇವಳು (ವಿರೂಪಕನಿಧಿ) ಧ್ರುವತೀರ್ಥದಲ್ಲಿ ಸ್ನಾನಮಾಡಿ, ಬ್ರಾಹ್ಮಣರು ಹೇಳಿದ ಕ್ರಮದಿಂದ, ಮೊದಲು ಹೇಳಿದ ವಿಧಾನದಿಂದ ಈ ತೀರ್ಥದಲ್ಲೇ ತರ್ಪಣವನ್ನು ಮಾಡಲಿ.

೧೧೧. ಬಳಿಕ ಭಕ್ತಿಯಿಂದ ರಜತ (ಬೆಳ್ಳಿ) ವಸ್ತ್ರಗಂಧಾದಿಗಳಿಂದ ಪೂಜಿಸಿ, ಪಿಂಡದಾನ ಪೂರ್ವಕವಾಗಿ ಶ್ರಾದ್ಧಪನ್ನು (ಇವಳು) ಮಾಡಲಿ.

೧೧೨. ಎಲ್ಲರೂ ಇಲ್ಲೇ ಇದ್ದು ಸಂತತಿಯುವಳಾದ (ಕರ್ತೃವಾದ) ಇವಳಿಂದ ಶ್ರಾದ್ಧದಾನವೆಲ್ಲವನ್ನೂ ಹೇಗೆ ಮಾಡಬೇಕೋ ಹಾಗೆ ಮಾಡಿಸಿ, ಅದರಿಂದ ಸುಖಿಯಾಗುವ ನನ್ನನ್ನು ನೋಡಿರಿ. ಎಂದನು.

೧೧೩. ಅವನ ಆ ಮಾತನ್ನು ಕೇಳಿ, ಕೀರ್ತಿವಂತೆಯಾದ ಆ ರಾಣಿ ಆ ದಾಸಿಯಿಂದ ಹೆಚ್ಚಾದ ಒಳ್ಳೆಯ ದಕ್ಷಿಣೆಯುಳ್ಳ ಶ್ರಾದ್ಧವನ್ನು ಮಾಡಿಸಿದಳು.

೧೧೪-೧೧೫ ಪಟ್ಟೆಯ ವಸ್ತ್ರ, ಧೂಪ, ಕರ್ಪೂರ, ಅಗುರುಚಂದನ, ಶ್ರೇಷ್ಠವಾದ (ಎಳ್ಳು) ತಿಲ, ಬಗೆಬಗೆಯ ಅನ್ನ, ಅನ್ನಗಳ ಪಿಂಡಗಳು ಇವುಗಳಿಂದ

ಕೃತೇ ಶ್ರಾದ್ಧೇ ಪಿಂಡದಾನೇ ಸ ಜಂತುಃ ಸುಕೃತೀ ಯಥಾ ।
ದಿವ್ಯಕಾಂತಿರದೀನಾತ್ಮಾ ತಥಾ ಭೂತೈಃ ಪೃಥಕ್ ಪೃಥಕ್ ।
ವೇಷ್ಟಿತಃ ಶುಶುಭೇಽತೀವ ದೀಕ್ಷಿತೋಽವಭೃಥೇ ಯಥಾ ॥ ೧೧೫ ॥

ಸ್ವರ್ಗಾಗತೈರ್ವಿಮಾನೈಶ್ಚ ಛಾದಿತಂ ತತ್ರ ವೈ ನಭಃ ॥ ೧೧೬ ॥

ತೇಷಾಂ ಮಶಕಗಾತ್ರಾಣಾಂ ಸುಗಾತ್ರಾಣಾಂ ಸುರೂಪಿಣಾಂ ।
ತತಸ್ತುಷ್ಟಮನಾ ಜಂತುರ್ವಿಮಾನಂ ಪ್ರೇಕ್ಷ್ಯ ಚಾಗತಂ ॥ ೧೧೭ ॥

ಗಂತುಂ ಸ್ವರ್ಗಮುವಾಚೇದಂ ತ್ರಿಕಾಲಜ್ಞಂ ಮುನಿಂ ನೃಪಂ ॥ ೧೧೮ ॥

ಶೃಣ್ವಂತು ವಚನಂ ಸರ್ವೇ ಮದೀಯಂ ಪಿತೃತುಷ್ಟಿದಂ ।
ತೀರ್ಥಾನಿ ಸರಿತಃ ಶ್ರೇಷ್ಠಾಃ ಪರ್ವತಾಶ್ಚ ಸರಾಂಸಿ ಚ ॥ ೧೧೯ ॥

ಶ್ರಾದ್ಧವನ್ನು ಮಾಡಿ ಪಿಂಡಪ್ರದಾನವನ್ನೂ ಮಾಡಲಾಗಿ ಆ ವೃದ್ಧಜಂತು ಪುಣ್ಯಶಾಲಿಯಂತೆ ದಿವ್ಯಕಾಂತಿಯುಳ್ಳವನೂ, ಅದೀನಾತ್ಮನೂ, ತನ್ನಂತೆಯೇ ಬೇರೆಯಾದ ಆ ಪ್ರಾಣಿಗಳಿಂದ ಸುತ್ತಿದವನೂ ಆಗಿ ಯಜ್ಞದ ಅವಭೃತದಲ್ಲಿರುವ ದೀಕ್ಷಿತನಂತೆ ಹೊಳೆಯುತ್ತಿದ್ದನು.

೧೧೬–೧೧೮. ಸ್ವರ್ಗದಿಂದ ಬಂದ ವಿಮಾನಗಳಿಂದ ಅಲ್ಲಿಯ ಆಕಾಶವು ತುಂಬಿಹೋಯಿತು. ಮೊದಲು ಸೊಳ್ಳೆಗಳಾಗಿದ್ದು, ಶ್ರಾದ್ಧವಾದ ಬಳಿಕ ಸುಂದರಾಂಗರೂ ಸುರೂಪರೂ ಆಗಿ, ತನ್ನನ್ನು ಸುತ್ತಿದ್ದವರಿಗೂ ತನಗೂ ಬಂದ ವಿಮಾನಗಳನ್ನು ನೋಡಿ, ಸಂತೋಷಗೊಂಡ ಮನವುಳ್ಳವನಾದ ಆ ವೃದ್ಧನು ಸ್ವರ್ಗಕ್ಕೆ ಹೋಗಲು ಬಯಸಿ, ತ್ರಿಕಾಲಜ್ಞನಾದ ಆ ಮುನಿಗೂ ರಾಜನಿಗೂ ಹೀಗೆ ಹೇಳಿದನು.

೧೧೯–೧೨೦. "ಎಲ್ಲರೂ ಪಿತೃಗಳಿಗೆ ತೃಪ್ತಿಕರವಾದ ನನ್ನ ಮಾತನ್ನು ಕೇಳಿರಿ. ತೀರ್ಥಗಳೂ, ಶ್ರೇಷ್ಠವಾದ ನದಿಗಳೂ, ಪರ್ವತಗಳೂ, ಸರೋವರಗಳೂ,

ಕುರುಕ್ಷೇತ್ರಂ ಗಯಾ ಚೈವ ಸ್ಥಾನಾನ್ಯಾಯತನಾನಿ ಚ ।
ಪಿತೄಣಾಂ ಮುಕ್ತಿದಂ ಚಾನ್ಯನ್ನ ಭೂತಂ ನ ಭವಿಷ್ಯತಿ ॥ ೧೨೦ ॥

ಆಷಾಢ್ಯಾಃ ಪಂಚಮೇ ಪಕ್ಷೇ ಪ್ರತಿಪತ್ಪ್ರಭೃತಿಸ್ತಥಾ ।
ಶುಕ್ಲಪ್ರತಿಪದಂತಂಚ ತೀರ್ಥಂಪ್ರಾಪ್ಯ ಸಸತ್ವರಾಃ ॥ ೧೨೧ ॥

ಪಿತರಃ ಶ್ರಾದ್ಧಪಿಂಡಾದಾ ಆಶ್ವಿನೇ ಧ್ರುವಮಾಸ್ಥಿತಾಃ ।
ಕೃತ್ವಾ ಪ್ರೇತಪುರೀಂ ಶೂನ್ಯಾಂ ಸ್ವರ್ಗಂ ಪಾತಾಲಮೇವ ಚ ।
ಈಹಮಾನಾಃ ಸ್ವಕಂ ಪುತ್ರಂ ಗೋತ್ರತಂತುಮಥಾನುಜಂ ॥ ೧೨೨ ॥

ಕನ್ಯಾಂ ಗತೇ ಸವಿತರಿ ಯಃ ಶ್ರಾದ್ಧಂ ಸಂಪ್ರದಾಸ್ಯತಿ ।
ತರ್ಪಣಂ ಧ್ರುವತೀರ್ಥೇ ತೇ ಪಿತೄಣಾಂ ಷೋಡಶಾಂತರೇ ॥ ೧೨೩ ॥

ಸುತೃಪ್ತಾಃ ಸ್ಮೋ ವಯಂ ಶಶ್ವದ್ಯಾಸ್ಯಾಮಃ ಪರಮಾಂಗತಿಂ ।
ಏಷ ಏವ ಪ್ರಭಾವೋಽತ್ರ ಧ್ರುವಸ್ಯ ಕಥಿತೋ ಮಯಾ ॥ ೧೨೪ ॥

ಕುರುಕ್ಷೇತ್ರವೂ, ಗಯೆಯೂ ಪಿತೃಗಳಿಗೆ ಮುಕ್ತಿಯನ್ನು ಉಂಟುಮಾಡುವ ಸ್ಥಳಗಳೂ ಗೃಹಗಳೂ ಆಗಿವೆ. ಬೇರಾವುದೂ ಆಗಿಲ್ಲ. ಆಗುವುದೂ ಇಲ್ಲ.

೧೨೧–೧೨೩. ಆಷಾಢ ಶುಕ್ಲ ಪೌರ್ಣಿಮೆಯಿಂದ ಐದನೆಯ ಪಕ್ಷದಲ್ಲಿ ಎಂದರೆ ಭಾದ್ರಪದಮಾಸದ ಕೃಷ್ಣಪಕ್ಷದಲ್ಲಿ ಪಾಡ್ಯದಿಂದ ಮೊದಲುಗೊಂಡು ಆಶ್ವಯುಜ ಶುಕ್ಲ ಪಾಡ್ಯದವರೆಗೂ ಶ್ರಾದ್ಧಪಿಂಡವನ್ನು ಭುಜಿಸುವ ಪಿತೃಗಳು ಪ್ರೇತಪುರಿಯನ್ನೂ ಸ್ವರ್ಗವನ್ನೂ ಪಾತಾಳವನ್ನೂ ಬರಿದಾಗುವಂತೆ ಬಿಟ್ಟು, ಸೂರ್ಯನು ಕನ್ಯಾರಾಶಿಗೆ ಹೋಗಲಾಗಿ ಯಾರು ಧ್ರುವತೀರ್ಥದಲ್ಲಿ ಪಿತೃಗಳಿಗೆ ಶ್ರಾದ್ಧವನ್ನು ಅಥವಾ ತರ್ಪಣವನ್ನು ಮಾಡುವನೋ ಅಂತಹ ತಮ್ಮ ಪುತ್ರನನ್ನಾಗಲಿ ತಮ್ಮನನ್ನಾಗಲಿ ಹದಿನಾರು ತಲೆಯೊಳಗಿರುವ ಗೋತ್ರಜನನ್ನಾಗಲಿ ಬಯಸಿ, ನಿರೀಕ್ಷಿಸುತ್ತ ಧ್ರುವತೀರ್ಥಕ್ಕೆ ತ್ವರೆಯಿಂದ ಬಂದು ನೆಲಸಿರುವರು.

೧೨೪. ನಾವು ಈಗ ಸುತೃಪ್ತರಾಗಿದ್ದೇವೆ. ಪರಮಗತಿಯನ್ನು ಪಡೆಯುತ್ತೇವೆ. ಇಲ್ಲಿ ಧ್ರುವತೀರ್ಥದ ಈ ಪ್ರಭಾವವನ್ನು ನಾನು ಹೇಳಿದ್ದೇನೆ.

ದೃಷ್ಟೋ ಭವದ್ಭಿಃ ಸರ್ವಂ ಯದಸ್ಮಾಕಂ ಸುದುರತ್ಯಯಂ ।
ದುಸ್ತರಂ ತಾರಿತಂ ಪಾಪಂ ತ್ವತ್ಪ್ರಸಾದಾನ್ಮಹಾಮುನೇ ॥ ೧೨೫ ॥

ಇತಿ ವಿಶ್ರಾವ್ಯ ವಚನಂ ರಾಜಾನಂ ಸ ಋಷಿಂ ಜನಾನ್ ।
ರಾಜಪುತ್ರೀಂ ತಥಾ ದಾಸೀಂ ಸ್ವಾಂ ಸುತಾಂ ಶಿವಮಸ್ತು ವಃ ।
ಆರುಹ್ಯ ವರಯಾನಂತೇ ಗತಾಃ ಸ್ವರ್ಗಂ ವೃತಾಃ ಸುರೈಃ ॥ ೧೨೬ ॥

॥ ಶ್ರೀವರಾಹ ಉವಾಚ ॥

ತತಃ ಸ ರಾಜಶಾರ್ದೂಲಃ ಸಗಣಃ ಪರಿವಾರಕೈಃ ।
ದೃಷ್ಟ್ವಾ ತೀರ್ಥಸ್ಯ ಮಾಹಾತ್ಮ್ಯಂ ಪ್ರಣಮ್ಯ ಋಷಿಸತ್ತಮಂ ॥ ೧೨೭ ॥

ಪ್ರವಿಷ್ಟೋ ನಗರೀಂ ರಮ್ಯಾಂ ಸಂಸ್ಮರನ್ನಿತ್ಯಮಚ್ಯುತಂ ॥ ೧೨೮ ॥

---

೧೨೫. ಮಹಾಮುನಿಯೇ, ನಮಗೆ ನಾಶಪಡಿಸಲೂ ದಾಟಲೂ ಬಹು ಕಷ್ಟವಾಗಿದ್ದ ಪಾಪಸಾಗರವನ್ನು, ನಿನ್ನ ಪ್ರಸಾದದಿಂದ ನಾವು ದಾಟಿದೆವು. ಎಲ್ಲವನ್ನೂ ನೀವೆಲ್ಲರೂ ನೋಡಿರುವಿರಿ" ಎಂದನು.

೧೨೬. ಹೀಗೆ ರಾಜನಿಗೂ, ಋಷಿಗೂ, ಜನರಿಗೂ, ರಾಣಿಗೂ, ದಾಸಿಗೂ, ತನ್ನ ಮಗಳಿಗೂ ಕೇಳುವಂತೆ ಮಾತನಾಡಿ ತಿಳಿಸಿ, 'ನಿಮಗೆ ಮಂಗಳವಾಗಲಿ' ಎಂದನು. ಬಳಿಕ ಅವರೆಲ್ಲರೂ ಉತ್ತಮವಾದ ವಿಮಾನಗಳನ್ನೇರಿ ದೇವತೆಗಳಿಂದ ಸುತ್ತಲ್ಪಟ್ಟವರಾಗಿ ಸ್ವರ್ಗಕ್ಕೆ ಹೊರಟುಹೋದರು.

೧೨೭-೧೨೮. ಶ್ರೀ ವರಾಹ—ಪತ್ನೀಬಂಧುಪರಿವಾರದೊಡಗೂಡಿದ ಆ ನೃಪೋತ್ತಮನು ಆ ತೀರ್ಥದ ಮಹಿಮೆಯನ್ನು ನೋಡಿ, ಮುನಿವರ್ಯನಿಗೆ ಪ್ರಣಾಮಮಾಡಿ, ನಿತ್ಯನಾದ ವಿಷ್ಣುವನ್ನು ಸ್ಮರಿಸುತ್ತ ಮನೋಹರವಾದ ಮಥುರಾಪುರವನ್ನು ಸೇರಿದನು.

ಏತತ್ತೇ ಕಥಿತಂ ಭದ್ರೇ ಮಾಹಾತ್ಮ್ಯಂ ಮಧುರಾಭವಂ ।
ಸ್ಮರಣಾದ್ಯಸ್ಯ ಪಾಪಾನಿ ನಶ್ಯಂತೇ ಪೂರ್ವಜನ್ಮನಿ ॥ ೧೨೯ ॥

ಪಠತಿ ಶ್ರದ್ಧಯಾಯುಕ್ತೋ ಬ್ರಾಹ್ಮಣಾನಾಂಚ ಸನ್ನಿಧೌ ।
ಸ ಪಿತೄಂಸ್ತರ್ಪಯೇತ್ಸರ್ವಾನಭಿಗಮ್ಯ ಗಯಾಶಿರೇ ॥ ೧೩೦ ॥

ಏತತ್ತ್ವಯಾನಾವ್ರತಿನೇ ನ ಚಾಶುಶ್ರೂಷವೇ ತಥಾ ।
ಕಥನೀಯಂ ಮಹಾಭಾಗೇ ಯಶ್ಚ ನಾರ್ಚಯತೇ ಹರಿಂ ॥ ೧೩೧ ॥

ತೀರ್ಥಾನಾಂ ಪರಮಂ ತೀರ್ಥಂ ಧರ್ಮಾಣಾಂ ಧರ್ಮಮುತ್ತಮಂ ।
ಜ್ಞಾನಾನಾಂ ಪರಮಂ ಜ್ಞಾನಂ ಲಾಭಾನಾಂ ಲಾಭಉತ್ತಮಃ ॥ ೧೩೨ ॥

ಕಥನೀಯಂ ಮಹಾಭಾಗೇ ಪುಣ್ಯಾನ್ಭಾಗವತಾನ್ಸದಾ ॥ ೧೩೩ ॥

---

೧೨೯. ಮಂಗಳೇ, ಸ್ಮರಿಸುವುದರಿಂದಲೇ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಗಳೆನ್ನೂ ನಾಶಮಾಡುವ ಮಧುರೆಯ ಈ ಮಹಿಮೆಯನ್ನು ನಿನಗೆ ಹೇಳಿದುದಾಯಿತು.

೧೩೦. ಆಸಕ್ತಿಯುಳ್ಳವರಾಗಿ ಇದನ್ನು ಬ್ರಾಹ್ಮಣರ ಸನ್ನಿಧಿಯಲ್ಲಿ ಯಾರು ಹೇಳುವರೋ ಅವರು ಗಯೆಯ ಶಿರದಲ್ಲಿ ಹೋಗಿ ಪಿತೃಗಳನ್ನೆಲ್ಲ ತೃಪ್ತಿಪಡಿಸಿದವರಾಗುವರು.

೧೩೧. ಮಹಾಭಾಗೇ, ನೀನು ಇದನ್ನು ನಿಯಮವಿಲ್ಲದವನಿಗೂ, ಶುಶ್ರೂಷೆ ಮಾಡದಿರುವವನಿಗೂ, ಹರಿಯನ್ನು ಪೂಜಿಸದಿರುವವನಿಗೂ ಹೇಳಬಾರದು.

೧೩೨–೧೩೩. ಪೂಜ್ಯೇ, ತೀರ್ಥಗಳಲ್ಲಿ ಪರಮತೀರ್ಥವೂ, ಧರ್ಮಗಳಲ್ಲಿ ಉತ್ತಮಧರ್ಮವೂ, ಜ್ಞಾನಗಳಲ್ಲಿ ಪರಮಜ್ಞಾನವೂ, ಲಾಭಗಳಲ್ಲಿ ಉತ್ತಮ ಲಾಭವೂ ಆದ ಇದನ್ನು ಪುಣ್ಯಶಾಲಿಗಳಾದ ಭಗವದ್ಭಕ್ತರಿಗೆ ಯಾವಾಗಲೂ ಹೇಳಬೇಕು.

ನೂರ ಎಂಭತ್ತನೆಯ ಅಧ್ಯಾಯ

॥ ಸೂತ ಉವಾಚ ॥

ಏತಚ್ಛ್ರುತ್ವಾ ಪ್ರಭೋರ್ವಾಕ್ಯಂ ಧರಣೀ ವಿಸ್ಮಯಾನ್ವಿತಾ ।
ಪಪ್ರಚ್ಛ ಮುದಿತಾ ದೇವೀ ಪ್ರತಿಮಾಸ್ಥಾಪನಂ ಪ್ರತಿ ॥ ೧೩೪ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಮಥುರಾವರ್ಣನಂ
ನಾಮಾಶೀತ್ಯಧಿಕಶತತಮೋಽಧ್ಯಾಯಃ

---

೧೩೪. ಸೂತಮುನಿ–ವರಾಹ ಪ್ರಭುವಿನ ಈ ಮಾತನ್ನು ಕೇಳಿ, ಆಶ್ಚರ್ಯಗೊಂಡ ಭೂದೇವಿ ಸಂತೋಷದಿಂದ ಆತನಲ್ಲಿ ದೇವಪ್ರತಿಮೆಗಳ ಸ್ಥಾಪನೆಯ ವಿಚಾರವನ್ನು ಪ್ರಶ್ನಿಸಿದಳು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ– ಮಥುರೆಯಲ್ಲಿರುವ ಧ್ರುವತೀರ್ಥದ ಮಹಿಮೆಯನ್ನು ಆತೀರ್ಥದಲ್ಲಿ ತಪಸ್ಸನ್ನು ಮಾಡುತ್ತಿದ್ದ ತ್ರಿಕಾಲಜ್ಞನಾದ ಮುನಿ, ವಿರೂಪಕನಿಧಿಯೆಂಬ ದಾಸಿಯಿಂದ ಧ್ರುವತೀರ್ಥದಲ್ಲಿ ಶ್ರಾದ್ಧವನ್ನು ಮಾಡಿಸಲಾಗಿ ಮೊದಲು ಸಂಕಟಪಡುತ್ತಿದ್ದ ಆವಳ ವಂಶದ ನೂರಾರು ಜನ ನಾರಕಿಗಳು ತೃಪ್ತರಾಗಿ, ಸ್ವರ್ಗದಿಂದ ಬಂದ ದಿವ್ಯ ವಿಮಾನಗಳನ್ನೇರಿ ಇಂದ್ರ ಲೋಕವನ್ನು ಸೇರಿದ ಕಥೆಯ ಮೂಲಕ ವಿವರಿಸಿ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಂಭತ್ತನೆಯ ಅಧ್ಯಾಯ

॥ ಮಥುರಾ ಮಾಹಾತ್ಮ್ಯಂ ಸಂಪೂರ್ಣಂ ॥

॥ ಮಥುರೆಯ ಮಹಿಮೆ ಪೂರ್ಣವಾದುದು ॥